ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

ಭಾಗ – ೪ಎ Part – IVA	ಬೆಂಗಳೂರು, ಸೋಮವಾರ,೨೧,ಡಿಸೆಂಬರ್, ೨೦೨೦(ಮಾರ್ಗಶಿರ, ೩೦, ಶಕವರ್ಷ ೧೯೪೨) Bengaluru, MONDAY,21,DECEMBER,2020(MARGASHIRA,30, ShakaVarsha 1942)	ನಂ. ೭೧೩ No. 713

ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಂವ್ಯಶಾಇ 20 ಶಾಸನ 2020, ಬೆಂಗಳೂರು, ದಿನಾಂಕ:21.12.2020.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಿಧೇಯಕ, 2020 - ಇದಕ್ಕೆ 2020 ರ ಡಿಸೆಂಬರ್ ತಿಂಗಳ 19ನೇ ದಿನಾಂಕದಂದು ರಾಜ್ಯಪಾಲರ ಒಪ್ಪಿಗೆ ದೊರೆತಿದ್ದು, ಸಾಮಾನ್ಯ ತಿಳುವಳಿಕೆಗಾಗಿ ಇದನ್ನು 2020 ರ ಕರ್ನಾಟಕ ಅಧಿನಿಯಮ ಸಂಖ್ಯೆ: 53 ಎಂಬುದಾಗಿ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಬೇಕೆಂದು ಆದೇಶಿಸಲಾಗಿದೆ,-

2020 ರ ಕರ್ನಾಟಕ ಅಧಿನಿಯಮ ಸಂಖ್ಯೆ: 53

(2020 ರ ಡಿಸೆಂಬರ್ ತಿಂಗಳ 21ನೇ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಧಿನಿಯಮ, 2020

(2020 ರ ಡಿಸೆಂಬರ್ ತಿಂಗಳ 19ನೇ ದಿನಾಂಕದಂದು ರಾಜ್ಯಪಾಲರಿಂದ ಅನುಮತಿಯನ್ನು ಪಡೆಯಲಾಗಿದೆ)

ವಿಕೇಂದ್ರೀಕರಣವನ್ನು ಸುಧಾರಿಸಲು, ಪಾಲಿಕೆ ಆಡಳಿತದ ವಿವಿಧ ಹಂತಗಳಲ್ಲಿ ಸಾರ್ವಜನಿಕ ಭಾಗವಹಿಸುವಿಕೆಯನ್ನು ಏಕೀಕರಿಸಲು ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸೂಕ್ತ ನಿರ್ಧಾರ ತೆಗೆದುಕೊಳ್ಳುವುದನ್ನು ಖಚಿತಪಡಿಸಿಕೊಳ್ಳುವ ಉದ್ದೇಶಗಳಿಗಾಗಿ ಸ್ವತಂತ್ರ ಶಾಸನಕ್ಕಾಗಿ ಉಪಬಂಧ ಕಲ್ಪಿಸಲು ಒಂದು ಅಧಿನಿಯಮ.

ಬೆಂಗಳೂರು ನಗರವು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರ ವ್ಯಾಪ್ತಿಯಡಿಯಲ್ಲಿನ ಏಳುನೂರಾ ಹದಿನಾಲ್ಕು ಚದರ ಕಿ.ಮೀಗಳ ಪ್ರದೇಶದೊಂದಿಗೆ ಅತೀದೊಡ್ಡ ಮತ್ತು ಬೆಳೆಯುತ್ತಿರುವ ಜನಸಂಖ್ಯೆಯೊಡನೆ ಹಣಕಾಸು ಚಟುವಟಿಕೆಗಳ ಪ್ರಮುಖ ಕೇಂದ್ರವಾಗಿರುವುದರಿಂದ;

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನು ಕರ್ನಾಟಕ ನಗರಪಾಲಿಕೆಗಳ ಅಧಿನಿಯಮ, 1976ರ (1977ರ ಕರ್ನಾಟಕ ಅಧಿನಿಯಮ 14) ಉಪಬಂಧಗಳ ಅಡಿಯಲ್ಲಿ ಸ್ಥಾಪಿಸಿದ್ದು, ಮತ್ತು ಆಡಳಿತ ನಿರ್ವಹಿಸುತ್ತಿರುವುದರಿಂದ;

ಕರ್ನಾಟಕ ನಗರ ಪಾಲಿಕೆಗಳ ಅಧಿನಿಯಮ, 1976 (1977ರ ಕರ್ನಾಟಕ ಅಧಿನಿಯಮ 14) ಸೀಮಿತ ಹೊಂದಾಣಿಕೆಯ ಮತ್ತು ಕರ್ನಾಟಕ ರಾಜ್ಯದಲ್ಲಿನ ಒಂಬತ್ತು ಸಣ್ಣ ನಗರ ಪಾಲಿಕೆಗಳನ್ನು ನಿರ್ವಹಿಸುವ ಸಾಮಾನ್ಯ ಶಾಸನವಾಗಿದ್ದು, ಆಡಳಿತಾತ್ಮಕ ಮತ್ತು ರಚನಾತ್ಮಕ ವಿಷಯಗಳಲ್ಲಿ ಬೆಂಗಳೂರಿನ ಆಡಳಿತ ನಿರ್ವಹಿಸಲು ಸಾಕಾಗುವುದಿಲ್ಲವಾದ್ದರಿಂದ,

ಇದು ಭಾರತ ಗಣರಾಜ್ಯದ ಎಪ್ಪತ್ತೊಂದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:-

ಅಧ್ಯಾಯ-1
ಪ್ರಾರಂಭಿಕ

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.- (1) ಈ ಅಧಿನಿಯಮವನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಧಿನಿಯಮ, 2020 ಎಂದು ಕರೆಯತಕ್ಕದ್ದು.

(2) ಈ ಅಧಿನಿಯಮದ ಉಪಬಂಧಗಳು ರಾಜ್ಯಸರ್ಕಾರವು ಅಧಿಸೂಚನೆಯ ಮೂಲಕ ಈ ಕುರಿತು ಗೊತ್ತುಪಡಿಸಬಹುದಾದ ಅಂಥ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

2. ಪರಿಭಾಷೆಗಳು.- ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(1) "ವಾರ್ಷಿಕ ಹಣಕಾಸು ತಃಖ್ತೆ" ಎಂದರೆ 208ನೇ ಪ್ರಕರಣದ ಅಡಿಯಲ್ಲಿ ಪಾಲಿಕೆಯು ಪ್ರಕಟಿಸುವ ತಃಖ್ತೆ;

(2) "ಪ್ರದೇಶ ಸಭಾ'' ಎಂದರೆ ಒಂದು ಪ್ರದೇಶಕ್ಕೆ ಸಂಬಂಧಿಸಿದಂತೆ ಆ ಪ್ರದೇಶದ ಯಾವುದೇ ಮತಗಟ್ಟೆಗೆ ಸೇರಿದ ಮತದಾರರಪಟ್ಟಿಯಲ್ಲಿ ನೊಂದಾಯಿಸಿದ ಮತದಾರರಾದ ಎಲ್ಲಾ ವ್ಯಕ್ತಿಗಳ ಒಂದು ನಿಕಾಯ;

(3) "ಪ್ರದೇಶ" ಎಂದರೆ 4 ಮತ್ತು 89ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ವಿಧಾನದಲ್ಲಿ ನಿರ್ಧರಿಸಿದ ಒಂದು ಪ್ರದೇಶ;

(4) "ಸಂಘ" ಎಂದರೆ ಕರ್ನಾಟಕ ಸೊಸೈಟಿಗಳ ನೊಂದಣಿ ಅಧಿನಿಯಮ, 1960ರ (1960 ರ ಕರ್ನಾಟಕ ಅಧಿನಿಯಮ, 17) ಅಡಿಯಲ್ಲಿ ನೋಂದಾಯಿಸಿದ ಅಥವಾ ನೋಂದಾಯಿಸಿಲ್ಲದ ವ್ಯಕ್ತಿಗಳ ನಿಕಾಯ, ನ್ಯಾಸ, ಸೊಸೈಟಿ, ಸಂಘ ಅಥವಾ ಸಂಸ್ಥೆ;

(5) "ಹಿಂದುಳಿದ ವರ್ಗಗಳು" ಎಂದರೆ ಸೀಟುಗಳ ಮೀಸಲಾತಿಯ ಉದ್ದೇಶಗಳಿಗಾಗಿ ಸರ್ಕಾರವು ಕಾಲಕಾಲಕ್ಕೆ ವಿಂಗಡಿಸಿ ಮತ್ತು ಅಧಿಸೂಚಿಸಬಹುದಾದ ನಾಗರೀಕರ ಅಂಥ ವರ್ಗ ಅಥವಾ ವರ್ಗಗಳು;

(6) "ಜೈವಿಕ ವೈದ್ಯಕೀಯ ತ್ಯಾಜ್ಯ" ಎಂದರೆ ಮನುಷ್ಯರ ಅಥವಾ ಪ್ರಾಣಿಗಳ ರೋಗಪತ್ತೆ, ಚಿಕಿತ್ಸೆ, ಸೋಂಕು ತಡೆಯುವ ವ್ಯವಸ್ಥೆ ಅಥವಾ ಯಾವುದೇ ಆರೋಗ್ಯ ಸೇವೆಗಳು ಅಥವಾ ಅದಕ್ಕೆ ಸಂಬಂಧಿಸಿದ ಪರಿಶೀಲನಾ ಚಟುವಟಿಕೆಗಳ ಸಂದರ್ಭದಲ್ಲಿ ಉಂಟಾದ ಯಾವುದೇ ತ್ಯಾಜ್ಯ;

*(7) "*ಕಟ್ಟಡ"ವು,-

(ಎ) ಮನೆ, ಹೊರಮನೆ, ಕುದುರೆಲಾಯ, ಪಾಯಿಖಾನೆ, ಷೆಡ್, ಗುಡಿಸಲು, ಗೋಡೆ, ಪಡಸಾಲೆ, ಸ್ಥಿರವಾದ ಜಗುಲಿ, ಪ್ಲಿಂತ್, ಬಾಗಿಲು ಮೆಟ್ಟಿಲು ಮತ್ತು ದೂರಸಂಪರ್ಕ ಗೋಪುರ ಅಥವಾ ಗಾರೆ, ಇಟ್ಟಿಗೆಗಳು, ಮರ, ಮಣ್ಣು, ಲೋಹ ಅಥವಾ ಯಾವುದೇ ಇತರ ಎಂತಹವುದೇ ವಸ್ತುವಿನ ಯಾವುದೇ ಹೆಸರಿನಿಂದ ಕರೆಯಲಾಗುವ ಜಾಹೀರಾತು ರಚನೆಯನ್ನು ಒಳಗೊಂಡ ಯಾವುದೇ ಇತರ ರಚನೆ;

(ಬಿ) ಅಡಿಪಾಯಗಳಿಲ್ಲದೆ ನೆಲದಲ್ಲಿ ಸುಮ್ಮನೆ ನಿಂತಿರುವ ಗಾಲಿಗಳ ಮೇಲಿನ ರಚನೆ;

(ಸಿ) ಹಡಗು, ನೌಕೆ, ದೋಣಿ, ಟೆಂಟು ಮತ್ತು ಮಾನವ ವಾಸಕ್ಕಾಗಿ ಬಳಸುವ ಅಥವಾ ಯಾವುದೇ ವಸ್ತು ಅಥವಾ ಸರಕನ್ನು ಇಡಲು ಅಥವಾ ದಾಸ್ತಾನು ಮಾಡಲು ಬಳಸಲು ಯಾವುದೇ ಇತರೆ ರಚನೆ;

-ಇವುಗಳನ್ನು ಒಳಗೊಳ್ಳುತ್ತದೆ.

(8) "ಉಪವಿಧಿ" ಎಂದರೆ ಈ ಅಧಿನಿಯಮದ ಅಡಿಯಲ್ಲಿ ಪಾಲಿಕೆಯು ರಚಿಸಿದ ಉಪವಿಧಿ;

(9) "ಆಕಸ್ಮಿಕ ಸಾಂದರ್ಭಿಕ ಖಾಲಿ ಹುದ್ದೆ" ಎಂದರೆ ಪಾಲಿಕೆ ಸದಸ್ಯರ ಪದದಲ್ಲಿ (ಹುದ್ದೆಯಲ್ಲಿ) ಅಥವಾ ಇತರ ಯಾವುದೇ ಚುನಾಯಿತ ಪದದಲ್ಲಿ ಅವಧಿ ಮುಕ್ತಾಯವಾಗಿ ತೆರವಾಗುವುದಕ್ಕಿಂತ ಬೇರೆಯಾದ ರೀತಿಯಲ್ಲಿ ಉಂಟಾಗುವ ಖಾಲಿ ಸ್ಥಾನ ಮತ್ತು "ಆಕಸ್ಮಿಕ ಚುನಾವಣೆ" ಎಂದರೆ ಆಕಸ್ಮಿಕ ಸ್ಥಾನಗಳನ್ನು ಭರ್ತಿಮಾಡಲು ನಡೆಸಲಾಗುವ ಚುನಾವಣೆ.

(10) "ಅಧ್ಯಕ್ಷ" ಎಂದರೆ ಸಮಿತಿ ಅಥವಾ ಆಯೋಗ ಅಥವಾ ಈ ಅಧಿನಿಯಮದ ಅಡಿಯಲ್ಲಿ ಉಪಬಂಧಿಸಿದ ಯಾವುದೇ ಇತರ ನಿಕಾಯಗಳ ಮುಖ್ಯಸ್ಥನಾದ ಅಂಥ ವ್ಯಕ್ತಿ;

(11) "ಮುಖ್ಯ ಆಯುಕ್ತ" ಎಂದರೆ 63ನೇ ಪ್ರಕರಣದ ಅಡಿಯಲ್ಲಿ ನೇಮಕವಾದ ಮುಖ್ಯ ಆಯುಕ್ತ ಮತ್ತು 71ನೇ ಪ್ರಕರಣದ ಅಡಿಯಲ್ಲಿ ಮುಖ್ಯ ಆಯುಕ್ತನಾಗಿ ಕರ್ತವ್ಯನಿರ್ವಹಿಸಲು ನೇಮಕವಾದ ವ್ಯಕ್ತಿ;

(12) "ನಾಗರೀಕ ಸಮಾಜ'' ಎಂದರೆ ಯಾವುದೇ ವ್ಯಕ್ತಿ, ವ್ಯಕ್ತಿಗಳ ಸಂಘ, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಅಡಿಯಲ್ಲಿ ಸ್ಥಾಪಿಸಿದ, ರಚಿಸಿದ ಅಥವಾ ನೋಂದಾಯಿಸಿದ ಹಾಗೂ

ಸಮಾಜಕಲ್ಯಾಣಕ್ಕಾಗಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರೇತರ ಸಂಸ್ಥೆ ಮತ್ತು ಸಮುದಾಯ ಆಧಾರಿತ ಸಂಸ್ಥೆ, ವೃತ್ತಿಪರ ಸಂಸ್ಥೆ, ನಾಗರೀಕ ಆರೋಗ್ಯ, ಶೈಕ್ಷಣಿಕ ಅಥವಾ ಸಾಂಸ್ಕೃತಿಕ ನಿಕಾಯ ಹಾಗೂ ಪಾಲಿಕೆಯು ನಿರ್ಧರಿಸಬಹುದಾದ ಅಂಥ ಇತರ ಸಂಘ ಅಥವಾ ನಿಕಾಯವನ್ನು ಒಳಗೊಳ್ಳುವುದು;

(13) "ಪೂರ್ಣಗೊಳಿಸಿದ ಪ್ರಮಾಣ ಪತ್ರ" ಎಂದರೆ ಈ ಅಧಿನಿಯಮದ ಅನುಸಾರವಾಗಿ ಕಟ್ಟಡದ ನಿರ್ಮಾಣವನ್ನು ಪೂರ್ಣಗೊಳಿಸಿದ ಮೇರೆಗೆ ಪಾಲಿಕೆಯು ನೀಡಿದ ಪ್ರಮಾಣ ಪತ್ರ;

(14) "ಪೂರಕ ಸಂಪರ್ಕ" ಎಂದರೆ ಕೇಬಲ್ ದೂರದರ್ಶನ ಅಥವಾ ಗೃಹನೇರ ಸೇವೆಗೆ (dth) ಉಚಿತವಾಗಿ ಅಥವಾ ಯಾವುದೇ ಹಣಪಾವತಿಯಲ್ಲಿ ಅಥವಾ ಕಡಿಮೆ ದರದಲ್ಲಿ ನೀಡಿದ ಸಂಪರ್ಕವನ್ನು ಒಳಗೊಳ್ಳುವುದು;

(15) "ಪೂರಕ ಚೀಟಿ" ಎಂದರೆ ಉಚಿತವಾಗಿ ಅಥವಾ ಯಾವುದೇ ಹಣಪಾವತಿಯಲ್ಲಿ ಅಥವಾ ಕಡಿಮೆದರದಲ್ಲಿ ಚೀಟಿ ಆಧಾರಿತ ಮನರಂಜನೆಗೆ ಪ್ರವೇಶವನ್ನು ಒದಗಿಸುವ ಯಾವುದೇ ಚೀಟಿ;

(16) "ಸಮಗ್ರ ಋಣ ಮಿತಿ ನೀತಿ" ಎಂದರೆ ಋಣಗಳನ್ನು ತೆಗೆದುಕೊಳ್ಳುವಾಗ ಯಾವುದೇ ತೀರ್ಮಾನ ಕೈಗೊಳ್ಳಲು ಪಾಲಿಕೆಯು ರಚಿಸಿದ ನೀತಿ;

(17) "ಪಾಲಿಕೆ" ಎಂದರೆ ಈ ಅಧಿನಿಯಮದ ಉಪಬಂಧಗಳ ಅನುಸಾರವಾಗಿ ಸ್ಥಾಪಿತವಾದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ;

(18) "ಪಾಲಿಕೆ ಆಡಳಿತಗಾರ" ಎಂದರೆ ಈ ಅಧಿನಿಯಮದ ಮೂಲಕ ಅಥವಾ ಅದರಡಿಯಲ್ಲಿ ಪ್ರದತ್ತವಾದ ಅಥವಾ ಪಾಲಿಕೆಯ ಮೇಲೆ ವಿಧಿಸಿದ ಕರ್ತವ್ಯಗಳನ್ನು ನಿರ್ವಹಿಸಲು ಮತ್ತು ಅಧಿಕಾರಗಳನ್ನು ಚಲಾಯಿಸಲು ಹಾಗೂ ಪ್ರಕಾರ್ಯಗಳನ್ನು ನೆರವೇರಿಸಲು ರಾಜ್ಯ ಸರ್ಕಾರವು ನೇಮಿಸಿದ ಯಾವುದೇ ಅಧಿಕಾರಿ;

(19) "ಪಾಲಿಕೆಯ ನಿಧಿ" ಎಂದರೆ ಈ ಅಧಿನಿಯಮದ ಅಡಿಯಲ್ಲಿ ನಿರ್ಮಿಸಿದ ಅಂಥ ಪರತ್ತುಗಳ ಅನುಸಾರವಾಗಿ ಪಾಲಿಕೆಯ ನಿಯಂತ್ರಣಕ್ಕೆ ಒಳಪಟ್ಟ ಪಾಲಿಕೆಯ ಸಂಯೋಜಿತ ನಿಧಿ;

(20) "ಅಪಾಯಕಾರಿ ರೋಗಗಳು" ಎಂದರೆ ಈ ಅಧಿನಿಯಮದ ಅಡಿಯಲ್ಲಿ ಸರ್ಕಾರವು ಅಪಾಯಕಾರಿ ರೋಗ ಎಂಬುದಾಗಿ ಅಧಿಸೂಚಿಸಿದ ಯಾವುದೇ ಅಂಟು ಜಾಡ್ಯ, ಸ್ಥಳೀಯ ವ್ಯಾಧಿ ಅಥವಾ ಸಾಂಕ್ರಾಮಿಕ ರೋಗ;

(21) "ಚುನಾವಣೆ" ಎಂದರೆ ಖಾಲಿಯಿರುವ ಯಾವುದೇ ಕೌನ್ಸಿಲರ್ ಪದವನ್ನು ತುಂಬುವುದಕ್ಕಾಗಿ ನಡೆಸುವ ಚುನಾವಣೆ;

(22) "ಮನರಂಜನೆ" ಎಂದರೆ ಯಾವುದೇ ನಟನೆ, ಪ್ರದರ್ಶನ, ನಿರ್ಮಾಣ ಅಥವಾ ಯಾವುದೇ ಕೃತಿಯ ರಂಗಪ್ರದರ್ಶನವನ್ನು ಒಳಗೊಂಡಿರುವಂತಹ ಮತ್ತು ಅವುಗಳನ್ನು ವೀಕ್ಷಿಸುವುದಕ್ಕಾಗಿ ವ್ಯಕ್ತಿ ಅಥವಾ ವ್ಯಕ್ತಿಗಳ ಸಮೂಹವು ಅಂಥ ಕಾರ್ಯಕ್ರಮದ ವೀಕ್ಷಣೆಗೆ ಪ್ರವೇಶಿಸಲು ಟಿಕೇಟನ್ನು ಖರೀದಿಸುವ ಅಥವಾ ಅಂಥ ಸೇವೆಯ ವೀಕ್ಷಣೆಗೆ ಟಿಕೇಟನ್ನು ಖರೀದಿಸುವ ಅಗತ್ಯವಾಗಿರಬಹುದಾದ ಯಾವುದೇ ಮನರಂಜನಾ ಕಾರ್ಯಕ್ರಮ ಅಥವಾ ಸೇವೆಯ ಅವಕಾಶ ಎಂದರ್ಥ ಮತ್ತು ಅವುಗಳನ್ನು ಒಳಗೊಳ್ಳುವುದು;

(23) "ಅವಶ್ಯಕ ಸೇವೆಗಳು" ಎಂದರೆ ಪಾಲಿಕೆ ಮೂಲಕ ಅಥವಾ ಅದರ ಪರವಾಗಿ ನಿಯೋಜಿತನಾದ ಯಾರೇ *ಪಾಲಿಕೆ* ಅಧಿಕಾರಿ, ನೌಕರ ಅಥವಾ ಇತರ ವ್ಯಕ್ತಿಯ ಸೇವೆಗಳು ಮತ್ತು ನಿಯಮಗಳಲ್ಲಿ ನಿರ್ದಿಷ್ಟಪಡಿಸಿರುವಂತಹ ಸೇವೆಗಳು;

(24) "ಕಾರ್ಖಾನೆ" ಎಂದರೆ ವೃತ್ತಿಭದ್ರತೆ, ಆರೋಗ್ಯ ಮತ್ತು ಕೆಲಸ ಮಾಡುವ ಸ್ಥಿತಿಗತಿ ಸಂಹಿತೆ 2020 (2020ರ ಕೇಂದ್ರ ಅಧಿನಿಯಮ, 37) ರಲ್ಲಿ ಪರಿಭಾಷಿಸಿದಂತೆ ಕಾರ್ಖಾನೆ;

(25) "ಕೊಳಚೆ"ಯು ರೊಚ್ಚು, ಸಗಣಿ, ಕಸ, ಮುಸುರೆ, ನಾರುವ ಕಸ ಮತ್ತು ಕೊಳೆತು ನಾರುತ್ತಿರುವ ವಸ್ತುಗಳು ಹಾಗೂ ಎಲ್ಲ ದುರ್ವಾಸನೆಯ ವಸ್ತುಗಳು;

(26) "ಸರ್ಕಾರ" ಎಂದರೆ ಕರ್ನಾಟಕ ಸರ್ಕಾರ;

(27) "ಭೂಮಿ"ಯು ನಿರ್ಮಿಸುತ್ತಿರುವ ಅಥವಾ ನಿರ್ಮಿಸಲಾದ ಅಥವಾ ನೀರಿನಿಂದ ಆವೃತ್ತವಾಗಿರುವ ಭೂಮಿ, ಭೂಮಿಯಿಂದ ದೊರೆಯುವ ಪ್ರಯೋಜನಗಳು, ಭೂಮಿಗೆ ಲಗತ್ತಾಗಿರುವ ಅಥವಾ ಭೂಮಿಗೆ ಲಗತ್ತಾದ ಯಾವುದಕ್ಕಾದರೂ ಶಾಶ್ವತವಾಗಿ ಅಂಟಿಕೊಂಡಿರುವ ವಸ್ತುಗಳು ಮತ್ತು ಯಾವುದೇ ಬೀದಿಯ ಮೇಲೆ ಕಾನೂನಿನ ಮೂಲಕ ಸೃಜಿತವಾದ ಹಕ್ಕುಗಳನ್ನು ಒಳಗೊಳ್ಳುತ್ತದೆ;

(28) "ಬಡಾವಣೆ" ಎಂದರೆ ಒಬ್ಬ ವ್ಯಕ್ತಿ ಅಥವಾ ನಿಗಮಿತವಾಗಿರುವ ಅಥವಾ ನಿಗಮಿತವಾಗಿರದ ವ್ಯಕ್ತಿಗಳ ಕೂಟವು ರಚಿಸಿದ ಬಡಾವಣೆ;

(29) "ಸ್ಥಳೀಯ ಪ್ರಾಧಿಕಾರ" ಎಂದರೆ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಅಡಿಯಲ್ಲಿ ರಚಿತವಾದ ನಗರ ಪಾಲಿಕೆ, ನಗರ ಸಭೆ, ಪುರಸಭೆ, ಪಟ್ಟಣ ಪಂಚಾಯಿತಿ, ಅಭಿವೃದ್ಧಿ ಪ್ರಾಧಿಕಾರ, ನಗರ ಅಭಿವೃದ್ಧಿ ಮಂಡಳಿ, ಪಟ್ಟಣ ಅಭಿವೃದ್ಧಿ ಮಂಡಳಿ, ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಮತ್ತು ಗ್ರಾಮ ಪಂಚಾಯಿತಿ;

(30) ''ಮಾರುಕಟ್ಟೆ''ಯು ಮಾಂಸ, ಮೀನು, ಹಣ್ಣು, ತರಕಾರಿ, ಜಾನುವಾರು ಅಥವಾ ಕೊಳೆತುಹೋಗಬಹುದಾದ ಸ್ವರೂಪವುಳ್ಳ ಆಹಾರದ ಯಾವುದೇ ಇತರ ಅಥವಾ ಯಾವುದೇ ಇತರ ವಸ್ತುಗಳ ಮೂಲಕ್ಕಾಗಿ ವ್ಯಕ್ತಿಗಳು ಸೇರಿದಂತೆ ಅಂಗಡಿಗಳ ಸಮೂಹ ಅಥವಾ ಉಗ್ರಾಣಗಳು ಅಥವಾ ಮಳಿಗೆಗಳು ಇರುವ ಪಾಲಿಕೆಯು ಮಾರುಕಟ್ಟೆ ಎಂಬುದಾಗಿ ಘೋಷಿಸಿದ ಮತ್ತು ಪರವಾನಗಿ ನೀಡಿದ ಯಾವುದೇ ಹೆಸರಿನಿಂದ ಕರೆಯಲಾಗುವ ಯಾವುದೇ ಸ್ಥಳವನ್ನು ಒಳಗೊಳ್ಳುವುದು;

(31) "ಮಧ್ಯಂತರ ಕಾಲದ ಆರ್ಥಿಕ ಯೋಜನೆ" ಎಂದರೆ ಪಾಲಿಕೆಯು ಐದು ವರ್ಷಗಳ ಅವಧಿಗಾಗಿ ಸಿದ್ಧಪಡಿಸಿದ ಆರ್ಥಿಕ ಯೋಜನೆ;

(32) "ಚೀಟಿ ರಹಿತ ಆಧಾರದ ಮನರಂಜನೆ" ಎಂದರೆ ಚೀಟಿ ರಹಿತ ಆಧಾರದ ಮನರಂಜನೆಯ ಸ್ಥಳವನ್ನು ಪ್ರವೇಶಿಸಲು ಚೀಟಿ ಖರೀದಿಸುವ ಅಗತ್ಯವಿಲ್ಲದ ಯಾವುದೇ ಮನರಂಜನೆಯನ್ನು ಒಳಗೊಳ್ಳುವುದು;

(33) "ಉಪದ್ರವ" ಎಂದರೆ ದೃಷ್ಟಿ, ವಾಸನೆ ಅಥವಾ ಶ್ರವಣ ಇಂದ್ರಿಯಕ್ಕೆ ಗಾಯ ಅಥವಾ ಜೀವನಕ್ಕೆ ಕಿರುಕುಳ ಅಥವಾ ಅಪಚಾರ, ವಿಶ್ರಾಂತಿ ಅಥವಾ ನಿದ್ದೆಗೆ ತೊಂದರೆ ಅಥವಾ ಜೀವನಕ್ಕೆ ಅಪಾಯಕಾರಿಯಾಗಬಹುದಾದ ಅಥವಾ ಆರೋಗ್ಯ ಅಥವಾ ಆಸ್ತಿಗೆ ಘಾಸಿಯಾಗುವಂತೆ ಮಾಡುವ ಅಥವಾ ಮಾಡಬಹುದಾಗಿರಬಹುದಾದ ಯಾವುದೇ ಕೃತ್ಯ, ಲೋಪ, ಸ್ಥಳ ಅಥವಾ ವಸ್ತು ಇವುಗಳನ್ನು ಒಳಗೊಳ್ಳುವುದು;

(34) "ಅಧಿಭೋಗದಾರ" ಎಂದರೆ ಅಂಥ ಬಾಡಿಗೆಯನ್ನು ಪಾವತಿಸುವ ಅಥವಾ ಪಾವತಿಸಬಹುದಾದ ಸ್ಥಳ ಅಥವಾ ಕಟ್ಟಡದ ಸಂದರ್ಭದಲ್ಲಿ ಮಾಲೀಕನಿಗೆ ತತ್ಕಾಲದಲ್ಲಿ ಬಾಡಿಗೆ ಅಥವಾ ಬಾಡಿಗೆಯ ಭಾಗವನ್ನು ಪಾವತಿಸುವ ಅಥವಾ ಪಾವತಿಸಲು ಹೊಣೆಗಾರನಾಗಿರುವ ಅದಿಭೋಗದಾರನಾಗಿ ಮಾಲೀಕ ಅಥವಾ ಅನ್ಯಥಾ ಕಟ್ಟಡ ಅಥವಾ ಭೂಮಿಯನ್ನು ಬಳಸುವ ಯಾವುದೇ ಭೂಮಿ ಅಥವಾ ಕಟ್ಟಡದ ಸ್ವಾಧೀನದಲ್ಲಿರುವ ಬಾಡಿಗೆ ಮುಕ್ತ ಗೇಣಿದಾರ, ಪರವಾನಗಿದಾರ ಯಾವುದೇ ಭೂಮಿ ಅಥವಾ ಕಟ್ಟಡದ ಬಳಕೆ ಅಥವಾ ಸ್ವಾಧೀನಕ್ಕಾಗಿ ಮಾಲೀಕನಿಗೆ ಹಾನಿಗಳನ್ನು ತುಂಬಲು ಪಾವತಿಸುವುದಕ್ಕೆ ಹೊಣೆಗಾರನಾದ ಯಾವೊಬ್ಬ ವ್ಯಕ್ತಿ ಇವರನ್ನು ಒಳಗೊಳ್ಳುವುದು;

(35) "ಮಾಲೀಕ" ಎಂದರೆ ಯಾವುದೇ ಭೂಮಿ ಅಥವಾ ಕಟ್ಟಡದ ಭೋಗ್ಯ ಅಥವಾ ಬಾಡಿಗೆಯ ಮೊತ್ತವನ್ನು ಸ್ವೀಕರಿಸುವ ಅಥವಾ ಸ್ವೀಕರಿಸಲು ಅರ್ಹನಾದ, ಆತನ ಸಂತ ಖಾತೆಗೆ ಅಥವಾ ಯಾವೊಬ್ಬ ಇತರ ವ್ಯಕ್ತಿಗಾಗಿ ಮಧ್ಯವರ್ತಿ, ನ್ಯಾಸಧಾರಿ, ಪೋಷಕ ಅಥವಾ ಸ್ವೀಕೃತದಾರನಾಗಿ ಭೂಮಿ ಅಥವಾ ಕಟ್ಟಡ ಅಥವಾ ಅದರ ಭಾಗವನ್ನು ಭೋಗ್ಯದಾರ ಅಥವಾ ಗೇಣಿದಾರನಿಗೆ ಭೋಗ್ಯ ಅಥವಾ ಬಾಡಿಗೆಗೆ ನೀಡಿದಲ್ಲಿ ಭೋಗ್ಯ ಅಥವಾ ಬಾಡಿಗೆಯ ಮೊತ್ತವನ್ನು ಹಾಗೆ ಸ್ವೀಕರಿಸಿದ್ದು ಭೋಗ್ಯ ಅಥವಾ ಅದನ್ನು ಸ್ವೀಕರಿಸಲು ಅರ್ಹನಾದ ಯಾವೊಬ್ಬ ವ್ಯಕ್ತಿ;

(36) "ಜನಸಂಖ್ಯೆ" ಎಂದರೆ ಕಳೆದ ಹಿಂದಿನ ಜನಗಣತಿಯಲ್ಲಿ ಖಚಿತಪಡಿಸಿಕೊಂಡು ಅದರ ಸಂಬಂಧಿತ ಅಂಕಿಅಂಶಗಳನ್ನು ಪ್ರಕಟಿಸಲಾಗಿರುವ ಜನಸಂಖ್ಯೆ;

(37) "ರಾಜಕೀಯ ಪಕ್ಷ" ಎಂದರೆ ಪ್ರಜಾಪ್ರತಿ ನಿಧಿ ಅಧಿನಿಯಮ, 1951ರ (1951ರ ಕೇಂದ್ರ ಅಧಿನಿಯಮ 43) 29ಎ ಪ್ರಕರಣದ ಅಡಿಯಲ್ಲಿ ನೊಂದಾಯಿಸಿದ ಒಂದು ರಾಜಕೀಯಪಕ್ಷ;

(38) "ಮತಗಟ್ಟೆಗಳು" ಎಂದರೆ ಮತದಾರರ ಪಟ್ಟಿಯಲ್ಲಿ ಮತಹಾಕಲು ಸಾಧ್ಯವಾಗಿಸುವುದಕ್ಕೆ ರಾಜ್ಯ ಚುನಾವಣಾ ಆಯೋಗವು ರಚಿಸಿರುವ ಕೇಂದ್ರಗಳು;

(39) "ನಿಯಮಿಸಲಾದುದು" ಎಂದರೆ ಈ ಅಧಿನಿಯಮದ ಅಡಿಯಲ್ಲಿ ಸರ್ಕಾರವು ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು;

(40) "ಪ್ರಿಸೈಡಿಂಗ್ ಅಧಿಕಾರಿ" ಎಂದರೆ ಒಂದು ಅಥವಾ ಹೆಚ್ಚಿನ ಮತಗಟ್ಟೆಗಳ ಮೇಲೆ ಮೇಲುಸ್ತುವಾರಿ ಮಾಡಲು ರಾಜ್ಯ ಚುನಾವಣಾ ಆಯೋಗವು ನೇಮಿಸಿದ ಅಂಥ ಅಧಿಕಾರಿ;

(41) "ಸ್ವತ್ತು ತೆರಿಗೆ" ಎಂದರೆ ಕಟ್ಟಡಗಳು ಅಥವಾ ಖಾಲಿ ಜಾಗಗಳು ಅಥವಾ ಎರಡರ ಮೇಲೆ ಪಾಲಿಕೆಯು ವಿಧಿಸುವ ತೆರಿಗೆ;

(42)"ನಿವಾಸಿ ಕಲ್ಯಾಣ ಸಂಘ" ಎಂದರೆ ಜಾರಿಯಲ್ಲಿರುವ ಯಾವುದೇ ಕಾನೂನಿನ ಅಡಿಯಲ್ಲಿ ನೊಂದಾಯಿಸಿದ ನಿವಾಸಿಗಳ ಸ್ವಯಂ ಸಂಸ್ಥೆ;

(43) "ವಿನಿಯಮ" ಎಂದರೆ ಈ ಅಧಿನಿಯಮದ ಅಡಿಯಲ್ಲಿ ರೂಪಿಸಲಾದ ವಿನಿಯಮ.

(44) "ಕಸ" ಎಂದರೆ ಧೂಳು, ಬೂದಿ, ಒಡೆದ ಿಟ್ಟಿಗೆಗಳು, ಗಾರೆ, ಒಡೆದ ಗಾಜು, ಉದ್ಯಾನ ಅಥವಾ ಲಾಯದ ಕಸ ಅಥವಾ ದುರ್ವಾಸನೆ ವಸ್ತು ಅಥವಾ ರೊಚ್ಚು ಆಗಿರದ ಯಾವುದೇ ಬಗೆಯ ಕಸ;

(45) "ನಿಯಮಗಳು" ಎಂದರೆ ಈ ಅಧಿನಿಯಮದ ಅಡಿಯಲ್ಲಿ ಸರ್ಕಾರವು ರಚಿಸಿದ ನಿಯಮಗಳು;

(46) "ಅನುಸೂಚಿ" ಎಂದರೆ ಈ ಅಧಿನಿಯಮದೊಂದಿಗೆ ಲಗತ್ತಾದ ಅನುಸೂಚಿ;

(47) "ಬೀದಿ ಪಂಕ್ತೀಕರಣ" ಎಂದರೆ ಪಕ್ಕದ ಭೂಮಿಯಿಂದ ಬೀದಿಯನ್ನು ಒಳಗೊಂಡಿರುವ ಮತ್ತು ಬೀದಿಯ ಭಾಗವಾಗಿರುವ ಭೂಮಿಯನ್ನು ವಿಭಾಗಿಸುವ ಒಂದು ರೇಖೆ;

(48) "ಅನುಸೂಚಿತ ಜಾತಿ" ಎಂದರೆ ಭಾರತ ಸಂವಿಧಾನದ 341ನೇ ಅನುಸೂಚಿಯ ಅಡಿಯಲ್ಲಿ ಅಧಿಸೂಚಿಸಿದ ಆ ಜಾತಿಗಳು, ಬುಡಕಟ್ಟುಗಳು, ಕುಲಗಳು ಅಥವಾ ಕುಲಗಳೊಳಗಿನ ಭಾಗಗಳು ಅಥವಾ ಗುಂಪುಗಳು ಅಥವಾ ಬುಡಕಟ್ಟುಗಳು;

(49) "ಅನುಸೂಚಿತ ಬುಡಕಟ್ಟು" ಎಂದರೆ ಭಾರತ ಸಂವಿಧಾನ 342ನೇ ಅನುಚ್ಛೇದದ ಅಡಿಯಲ್ಲಿ ಅಧಿಸೂಚಿಸಿದ ಆ ಜಾತಿಗಳು, ಕುಲಗಳು ಅಥವಾ ಬುಡಕಟ್ಟುಗಳು ಅಥವಾ ಬುಡಕಟ್ಟು ಸಮುದಾಯದ ಅಥವಾ ಬುಡಕಟ್ಟುಗಳ ಒಳಗಿನ ಭಾಗಗಳು ಅಥವಾ ಕುಲಗಳೊಳಗಿನ ಬುಡಕಟ್ಟು ಸಮುದಾಯಗಳು ಅಥವಾ ಬುಡಕಟ್ಟುಗಳು;

(50) "ಸ್ವಸಹಾಯ ಗುಂಪು" ಎಂದರೆ ಅವರ ಸಾಮಾನ್ಯ ತೊಂದರೆಗಳನ್ನು ಹೇಳಿಕೊಳ್ಳಲು ಒಗ್ಗೂಡಿದ ಒಂದೇ ರೀತಿಯ ವರ್ಗದಿಂದ ಬಂದ ಇಪ್ಪತ್ತ ಅಥವಾ ಹೆಚ್ಚು ಜನರ ಗುಂಪು;

(51) ಸಾಲ ತೀರಿಕೆ ನಿಧಿ" ಎಂದರೆ ಋಣದ ಕ್ರಮಾನುಗತ ಮರುಪಾವತಿ ಅಥವಾ ಪಾಳುಬಿದ್ದ ಆಸ್ತಿಯ ಸ್ವಾಂತರಕ್ಕಾಗಿ ನಿಯತಕಾಲಿಕವಾಗಿ ಎತ್ತಲಾದ ಹಣದ ಮೂಲಕ ರಚಿಸಿದ ಒಂದು ನಿಧಿ;

(52) "ನಿರ್ದಿಷ್ಟಪಡಿಸಲಾದುದು" ಎಂದರೆ ಈ ಅಧಿನಿಯಮದ ಅಡಿಯಲ್ಲಿ ಪಾಲಿಕೆಯು ರಚಿಸಿದ ಉಪವಿಧಿಗಳು;

(53) "ಕೊಳಗೇರಿ ಹಂತದ ಒಕ್ಕೂಟ" ಎಂದರೆ ನಗರ ಕೊಳಗೇರಿ ಪ್ರದೇಶಗಳ ನಿವಾಸಿಗಳು ರಚಿಸಿದ ಇಪ್ಪತ್ತಕ್ಕೂ ಹೆಚ್ಚಿನ ಅಥವಾ ಹೆಚ್ಚು ಸ್ವಸಹಾಯ ಗುಂಪುಗಳ ಸಂಘ;

(54) "ಘನ ತ್ಯಾಜ್ಯ ನಿರ್ವಹಣೆ" ಎಂದರೆ ಪೌರ ಘನ ತ್ಯಾಜ್ಯದ ಸಂಗ್ರಹಣೆ, ಬೇರ್ಪಡಿಸುವಿಕೆ, ಸಂಗ್ರಹಣೆ, ಸಾಗಣೆ, ಸಂಸ್ಕರಣೆ ಮತ್ತು ವಿಲೇ ಎಂದರ್ಥ ಮತ್ತು ಇವುಗಳನ್ನು ಒಳಗೊಳ್ಳುತ್ತದೆ;

(55) ''ಸ್ಥಾಯೀ ಸಮಿತಿ'' ಎಂದರೆ 80ನೇ ಪ್ರಕರಣದಲ್ಲಿ ಉಲ್ಲೇಖಿಸಿದ ಸ್ಥಾಯೀ ಸಮಿತಿ;

(56) "ರಾಜ್ಯ ಚುನಾವಣಾ ಆಯೋಗ" ಎಂದರೆ ಭಾರತ ಸಂವಿಧಾನದ 243ಕೆ ಅನುಚ್ಛೇದದಲ್ಲಿ ಉಲ್ಲೇಖಿಸಿದ ರಾಜ್ಯ ಚುನಾವಣಾ ಆಯೋಗ;

(57) "ಬೀದಿ" ಎಂದರೆ ಸಾರ್ವಜನಿಕ ಬೀದಿ ಅಥವಾ ಖಾಸಗಿ ಬೀದಿ ಹಾಗೂ ಸಾರ್ವಜನಿಕರು ಹಾದಿ ಅಥವಾ ಪ್ರವೇಶಕ್ಕಾಗಿ ಹಕ್ಕನ್ನು ಹೊಂದಿರುವ ಅಥವಾ ಚಲಿಸಿದ ಮತ್ತು ಇಪ್ಪತ್ತು ವರ್ಷಗಳ ಅವಧಿಯವರೆಗೆ ಅಡೆತಡೆಯಿಲ್ಲದೆ ಪ್ರವೇಶಿಸಿ ಹೊಂದಿದ ಯಾವುದೇ ಹೆದ್ದಾರಿ ಮತ್ತು ಯಾವುದೇ ಕಿರುದಾರಿ, ಸೇತುವೆ, ರಸ್ತೆ, ನೇರದಾರಿ, ಕಾಲು ಹಾದಿ, ಒಳದಾರಿ ಅಥವಾ ಚಾಲನಾ ಪಥ ಅಥವಾ ಮಾರ್ಗ ಇವುಗಳನ್ನು ಒಳಗೊಳ್ಳುತ್ತದೆ ಹಾಗೂ ಯಾವುದೇ ಜೀವಿಯಲ್ಲಿನ ಕಾಲುದಾರಿ ಮತ್ತು ಸಾಗಣೆ ದಾರಿಗಳನ್ನು ಸದರಿ ಪರಿಭಾಷೆಯು ಒಳಗೊಳ್ಳುವುದು;

(58) "ಚೀಟಿ ಆಧಾರಿತ ಮನರಂಜನೆ" ಎಂದರೆ ಚೀಟಿ ಆಧಾರಿತ ಮನರಂಜನೆಯ ಸ್ಥಳಕ್ಕೆ ಪ್ರವೇಶಿಸಲು ಚೀಟಿಯನ್ನು ಖರೀದಿಸುವ ಅಗತ್ಯವಿರುವ ಯಾವುದೇ ಮನರಂಜನೆಯನ್ನು ಒಳಗೊಳ್ಳುವುದು;

(59) "ಉದ್ಯಮಗಳ ಕೊಳಚೆ ನೀರು" ಎಂದರೆ, ಉದ್ಯಮದ ಆವರಣದಲ್ಲಿ ಯಾವುದೇ ಉದ್ಯಮ ಅಥವಾ ಕೈಗಾರಿಕೆ ನಡೆಯುತ್ತಿರುವಾಗ ಸಂಪೂರ್ಣವಾಗಿ ಅಥವಾ ಭಾಗಶಃ ಉತ್ಪತ್ತಿಯಾದ, ತೇಲಾಡುತ್ತಿರುವ ವಸ್ತುವಿನ ಕಣಗಳಿಂದ ಕೂಡಿದ ಅಥವಾ ಕೂಡಿರದ ಯಾವುದೇ ದ್ರವ ಮತ್ತು ಯಾವುದೇ ಉದ್ಯಮದ ಆವರಣಕ್ಕೆ ಸಂಬಂಧಪಟ್ಟಂತೆ, ಆ ಆವರಣದಲ್ಲಿ ಯಾವುದೇ ಉದ್ಯಮ ಅಥವಾ ಕೈಗಾರಿಕೆ ನಡೆಯುತ್ತಿರುವಾಗ ಹಾಗೆ ಉತ್ಪತ್ತಿಯಾದ ಮೇಲೆ ಹೇಳಿದಂಥ ಯಾವುದೇ ದ್ರವ, ಆದರೆ ಅದರಲ್ಲಿ ಊರಿನ ರೊಚ್ಚು ಒಳಗೊಳ್ಳುವುದಿಲ್ಲ;

(60) "ವಾಣಿಜ್ಯ ಆವರಣಗಳು" ಎಂದರೆ ಯಾವುದೇ ವಾಣಿಜ್ಯ ಅಥವಾ ಕೈಗಾರಿಕೆಗಳನ್ನು ನಡೆಸಲು ಬಳಸಲಾದ ಅಥವಾ ಉದ್ದೇಶಿಸಿದ ಯಾವುದೇ ಆವರಣ;

(61) "ವಾಣಿಜ್ಯ ಕಸ" ಎಂದರೆ ಯಾವುದೇ ವಾಣಿಜ್ಯ ಅಥವಾ ಕೈಗಾರಿಕಾ ಕಸ;

(62) "ನ್ಯಾಯಮಂಡಳಿ" ಎಂದರೆ ಕರ್ನಾಟಕ ಮೇಲ್ಮನವಿ ನ್ಯಾಯಮಂಡಳಿ;

(63) "ಖಾಲಿ ಭೂಮಿ" ಎಂದರೆ ಕಟ್ಟಡವನ್ನು ನಿರ್ಮಿಸಿರದ ಭೂಮಿ ಮತ್ತು ಇದು ಕಟ್ಟಡಕ್ಕೆ ಸೇರಿರುವ ಭೂಮಿಯನ್ನು ಒಳಗೊಳ್ಳುವುದಿಲ್ಲ;

(64) "ವಾರ್ಡ್ ಸಮಿತಿ" ಎಂದರೆ 82ನೇ ಪ್ರಕರಣದ ಅಡಿಯಲ್ಲಿ ಸ್ಥಾಪಿಸಿದ ವಾರ್ಡ್ ಸಮಿತಿ;

(65) "ವಾರ್ಡ್ ಅಭಿವೃದ್ಧಿ ಯೋಜನೆ" ಎಂದರೆ ಪಾಲಿಕೆಯು ಅದಕ್ಕೆ ಅನುದಾನ ಹಂಚಿಕೆಗಾಗಿ ವಾರ್ಡ್ ಸಮಿತಿಯು ಸಿದ್ಧಪಡಿಸಿದ ಅಭಿವೃದ್ಧಿ ಯೋಜನೆ;

(66) "ವಾರ್ಡ್ ಸಭಾ" ಎಂದರೆ 86 ನೇ ಪ್ರಕರಣದ ಅಡಿಯಲ್ಲಿಉ ಉಲ್ಲೇಖಿಸಲಾದ ವಾರ್ಡ್ ಸಭಾ;

(67) "ವಾರ್ಡುಗಳು" ಎಂದರೆ 7ನೇ ಪ್ರಕರಣದ ಅಡಿಯಲ್ಲಿ ರಾಜ್ಯ ಸರ್ಕಾರವು ನಿರ್ದಿಷ್ಟಪಡಿಸಿದ ಪಾಲಿಕೆಯ ವಲಯಗಳೊಳಗಿನ ಅಂಥ ಪ್ರದೇಶಗಳು;

(68) "ವಲಯ ಆಯುಕ್ತ" ಎಂದರೆ 72ನೇ ಪ್ರಕರಣದ ಅಡಿಯಲ್ಲಿ ಉಲ್ಲೇಖಿಸಿದ ವಲಯ ಆಯುಕ್ತ;

(69) "ಪಾಲಿಕೆಯ ವಲಯಗಳು" ಎಂದರೆ 12ನೇ ಪ್ರಕರಣದ ಅಡಿಯಲ್ಲಿ ರಾಜ್ಯ ಸರ್ಕಾರವು ಗುರುತಿಸಿದ ಪಾಲಿಕೆಯೊಳಗಿನ ಅಂಥ ಪ್ರದೇಶಗಳು;

ಅಧ್ಯಾಯ-II

ಪಾಲಿಕೆಯ ಪ್ರಾಧಿಕಾರಗಳು

3. ಪಾಲಿಕೆಯ ಪ್ರಾಧಿಕಾರಗಳು.- (1) ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸಲು ಈ ಮುಂದಿನ ಪಾಲಿಕೆಯ ಪ್ರಾಧಿಕಾರಗಳು ಇರತಕ್ಕದ್ದು,-

(ಎ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ)

(ಬಿ) ಮೇಯರ್

(ಸಿ) ಮುಖ್ಯ ಆಯುಕ್ತ

(ಡಿ) ವಲಯ ಆಯುಕ್ತ

(ಇ) ವಲಯ ಸಮಿತಿಗಳು

(ಎಫ್) ಸ್ಥಾಯಿ ಸಮಿತಿಗಳು

(ಜಿ) ವಾರ್ಡ್ ಸಮಿತಿಗಳು

(ಹೆಚ್) ಪ್ರದೇಶ ಸಭಾಗಳು

ಅಧ್ಯಾಯ- III

ಪಾಲಿಕೆಯ ರಚನೆ

4. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸ್ಥಾಪನೆ.- (1) ಈ ಅಧಿನಿಯಮವು ಪ್ರಾರಂಭವಾದ ತರುವಾಯ ಆದಷ್ಟು ಬೇಗನೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಎಂಬ ಹೆಸರಿನ ಪಾಲಿಕೆಯು ಈ ಅಧಿನಿಯಮದ ಉದ್ದೇಶಗಳಿಗಾಗಿ ಸ್ಥಾಪಿತವಾಗತಕ್ಕದ್ದು.

(2) ರಾಜ್ಯಪಾಲರು ಈ ಮುಂದಿನವುಗಳ ಕುರಿತು ಆಡಳಿತ ನಿರ್ವಹಿಸಲು,-

(ಎ) ಬೆಂಗಳೂರಿನ ಸಮಂಜಸ ಸಾಮೀಪ್ಯದೊಳಗಿನ ಯಾವುದೇ ಪ್ರದೇಶದ ಜನ ಸಂಖ್ಯೆ;

(ಬಿ) ಅಂಥ ಪ್ರದೇಶದ ಜನಸಾಂದ್ರತೆ;

(ಸಿ) ಅಂಥ ಪ್ರದೇಶದ ಅಸ್ತಿತ್ವದಲ್ಲಿರುವ ಸ್ಥಳೀಯ ಆಡಳಿತ ಮೂಲಕ ಉತ್ಪತ್ತಿಯಾಗುವ ಕಂದಾಯ;

(ಡಿ) ಅಂಥ ಪ್ರದೇಶದಲ್ಲಿ ಕೃಷಿಯೇತರ ಚಟುವಟಿಕೆಗಳಲ್ಲಿನ ಉದ್ಯೋಗದ ಶೇಕಡವಾರು;

(ಇ) ಅಂಥ ಪ್ರದೇಶದ ಹಣಕಾಸು ಪ್ರಾಮುಖ್ಯತೆ;

(ಎಫ್) ವಿಶೇಷ ಅಭಿವೃದ್ಧಿ ಯೋಜನೆ, ವ್ಯಾಪಾರ, ಸಾರಿಗೆ; ಮತ್ತು

(ಜಿ) ಕಾಲಕಾಲಕ್ಕೆ ಪರಿಗಣಿಸಬೇಕಾದ ಅಥವಾ ನಿಯಮಿಸಬಹುದಾದ ಅಂಥ ಇತರ ಅಂಶಗಳು.

- ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಿ ವ್ಯಾಪ್ತಿಯೊಳಗೆ ಇರಬೇಕಾದ ಅಂಥ ಪ್ರದೇಶಗಳು ಅಥವಾ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರ ವ್ಯಾಪ್ತಿಯೊಳಗಿನಿಂದ ಹೊರಗಿಡಲಾದ ಅಂಥ ಪ್ರದೇಶಗಳನ್ನು ಒಳಗೊಳ್ಳುವುದು.

(3) ಅಂಥ ಅಧಿಸೂಚನೆಯನ್ನು:-

(ಎ) ಕರಡು ಪ್ರಕಟಣೆಯ ದಿನಾಂಕದಿಂದ ಒಂದು ತಿಂಗಳೊಳಗಾಗಿ ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಆಹ್ವಾನಿಸಿ, ಅದರಿಂದ ಭಾದಿತರಾಗಬಹುದಾದ ಎಲ್ಲಾ ವ್ಯಕ್ತಿಗಳ ಮಾಹಿತಿಗಾಗಿ ಸರ್ಕಾರಿ ರಾಜ್ಯಪತ್ರದಲ್ಲಿ ಅದರ ಕರಡನ್ನು ಪ್ರಕಟಿಸಿದ ಹೊರತು; ಹಾಗೂ

(ಬಿ) (ಎ) ಖಂಡದಲ್ಲಿ ನಿರ್ದಿಷ್ಟಪಡಿಸಿದ ಅವಧಿಯೊಳಗೆ ಅದರ ಅಭಿಪ್ರಾಯಗಳನ್ನು ವ್ಯಕ್ತ ಪಡಿಸಲು ಉಲ್ಲೇಖಿಸಿದ ಹೊರತು,

- ಅಂಥ ಅಧಿಸೂಚನೆಯನ್ನು ಹೊರಡಿಸತಕ್ಕದ್ದಲ್ಲ.

(4) ಈ ಅಧಿನಿಯಮದ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಉಪಬಂಧಿಸಿರುವುದನ್ನುಳಿದು ದೊಡ್ಡ ನಗರ ಪ್ರದೇಶದಿಂದ ಸ್ಥಳೀಯ ಪ್ರದೇಶವನ್ನು ಹೊರತುಪಡಿಸಿದಾಗ,-

(i) ಅಂಥ ಪ್ರದೇಶದ ಪಾಲಿಕೆ ಹಕ್ಕುಗಳು ಮತ್ತು ಹೊಣೆಗಾರಿಕೆಗಳು ಸರ್ಕಾರದಲ್ಲಿ ನಿಹಿತವಾಗತಕ್ಕದ್ದು; ಮತ್ತು

(ii) ಸರ್ಕಾರವು, ಪಾಲಿಕೆಯ ಜೊತೆ ಸಮಾಲೋಚಿಸಿದ ತರುವಾಯ, ಪಾಲಿಕೆ ನಿಧಿಯ ಮತ್ತು ಪಾಲಿಕೆಯ ಇತರ ಸ್ವತ್ತಿನ ಎಷ್ಟು ಭಾಗವು, ಅಂಥ ಸ್ಥಳೀಯ ಪ್ರದೇಶದ ನಿವಾಸಿಗಳ ಪ್ರಯೋಜನಕ್ಕಾಗಿ ಸರ್ಕಾರದಲ್ಲಿ

ನಿಹಿತಗೊಳ್ಳಬೇಕು ಮತ್ತು ಪಾಲಿಕೆಯ ಹೊಣೆಗಾರಿಕೆಯನ್ನು ಪಾಲಿಕೆ ಮತ್ತು ಸರ್ಕಾರದ ನಡುವೆ ಹೇಗೆ ವಿಭಜಿಸಬೇಕು ಎಂಬುದನ್ನು ನಿರ್ಧರಿಸತಕ್ಕದ್ದು.

(5) ಸ್ಥಳೀಯ ಪ್ರದೇಶವನ್ನು ದೊಡ್ಡ ನಗರ ಪ್ರದೇಶದೊಳಗೆ ಸೇರಿಸಿದಾಗ, ಈ ಅಧಿನಿಯಮದ ಉಪಬಂಧಗಳು ಮತ್ತು ಈ ಅಧಿನಿಯಮ ಅಥವಾ ದೊಡ್ಡ ನಗರ ಪ್ರದೇಶಕ್ಕೆ ಅನ್ವಯವಾಗುವ ಯಾವುದೇ ಇತರ ಕಾನೂನಿನ ಅಡಿಯಲ್ಲಿ ವಿಧಿಸಲಾದ, ಹೊರಡಿಸಲಾದ, ಮಾಡಲಾದ ಅಥವಾ ಪ್ರದತ್ತವಾದ ಎಲ್ಲ ತೆರಿಗೆಗಳು, ಅಧಿಸೂಚನೆಗಳು, ನಿಯಮಗಳು, ಉಪ-ನಿಯಮಗಳು, ಆದೇಶಗಳು, ನಿರ್ದೇಶನಗಳು ಮತ್ತು ಅಧಿಕಾರಗಳು, ದೊಡ್ಡ ನಗರ ಪ್ರದೇಶದೊಳಗೆ ಅಂಥ ಪ್ರದೇಶವನ್ನು ಸೇರಿಸಿದ ದಿನಾಂಕದಿಂದ ಸದರಿ ಪ್ರದೇಶಕ್ಕೆ ಅನ್ವಯವಾಗತಕ್ಕದ್ದು.

(6) ಪಾಲಿಕೆಯ ಶಾಶ್ವತ ಉತ್ತರಾಧಿಕಾರ ಮತು ಸಾಮಾನ್ಯ ಮೊಹರನ್ನು ಹೊಂದಿರುವ ಈ ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟ ಆಸ್ತಿಯನ್ನು ಆರ್ಜಿಸುವ, ದಾನ ಮಾಡುವ ಮತ್ತು ವಿಲೆ ಮಾಡುವ ಅಧಿಕಾರ ಹೊಂದುವ ಮೇಲೆ ಹೇಳಿದ ಹೆಸರಿನ ಒಂದು ನಿಗದಿತ ನಿಕಾಯವಾಗಿರತಕ್ಕದ್ದು ಮತ್ತು ಸದರಿ ಹೆಸರಿನಿಂದ ದಾವೆ ಹೂಡತಕ್ಕದ್ದು ಮತ್ತು ದಾವೆಗೆ ಗುರಿಯಾಗತಕ್ಕದ್ದು.

5. ಗಡಿ ಗುರುತು ಕಲ್ಲುಗಳನ್ನು ನಿಲ್ಲಿಸುವುದು ಮತ್ತು ಅವುಗಳ ನಿರ್ವಹಣೆ.- ತನ್ನ ಅಧಿಕಾರಕ್ಕೆ ಒಳಪಟ್ಟಿರುವ ಸಂದರ್ಭಾನುಸಾರ ನಗರದ ಪರಿಮಿತಿಗಳನ್ನು ಅಥವಾ ಸಂದರ್ಭಾನುಸಾರ ವ್ಯತ್ಯಾಸ ಮಾಡಿದ ಪರಿಮಿತಿಗಳನ್ನು ವಿವರಿಸಿ, ರೆವಿನ್ಯೂ ಜಿಲ್ಲೆಯ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಜಿಲ್ಲಾಧಿಕಾರಿಯು ಅನುಮೋದಿಸತಕಂಥ ವರ್ಣನೆಯ ದೃಢವಾದ ಗಡಿ ಗುರುತು ಕಲ್ಲುಗಳನ್ನು ಮತ್ತು ಅಂಥ ರೀತಿಯಲ್ಲಿ ತನ್ನ ಸಂ್ವತ ಖರ್ಚಿನಲ್ಲಿ ನಿಲ್ಲಿಸುವಂತೆ ಅಥವಾ ನೆಲೆಗೊಳಿಸುವಂತೆ ಮಾಡುವುದು ಮತ್ತು ಆ ತರುವಾಯ ಅವುಗಳನ್ನು ತನ್ನ ಸಂ್ವತ ಖರ್ಚಿನಲ್ಲಿ ನಿರ್ವಹಿಸುವುದು ಪಾಲಿಕೆಯ ಕರ್ತವ್ಯವಾಗಿರತಕ್ಕದ್ದು.

6. ಪಾಲಿಕೆಯ ಕಾಲಾವಧಿ.-ಮುಂಚಿತವಾಗಿ ವಿಸರ್ಜಿಸದ ಹೊರತು ಪಾಲಿಕೆಯಾಗಿ ಅದರ ಮೂಲ ಸಭೆಯು ನೇಮಿಸಿದ ದಿನಾಂಕದಿಂದ ಐದು ವರ್ಷದವರೆಗೆ ಮುಂದುವರೆಯತಕ್ಕದ್ದು.

7. ವಾರ್ಡುಗಳ ಗಡಿ ಗುರುತಿಸುವಿಕೆ.- (1) ಕೌನ್ಸಿಲರ್‌ಗಳ ಚುನಾವಣೆ ಉದ್ದೇಶಗಳಿಗಾಗಿ ಪ್ರತಿಯೊಂದು ವಾರ್ಡುಗಳ ಜನಸಂಖ್ಯೆಯು ಪ್ರಾಯೋಗಿಕವಾಗುವುಷ್ಟರ ಮಟ್ಟಿಗೆ ಬೆಂಗಳೂರಿನಲ್ಲಿ ಎಲ್ಲಾ ಕಡೆಯು ಸಮಾನವಾಗಿರುವಂತೆ ಅಂಥ ವಿಧಾನದಲ್ಲಿ ಬೆಂಗಳೂರನ್ನು ವಾರ್ಡುಗಳಿಗಾಗಿ ವಿಂಗಡಿಸತಕ್ಕದ್ದು.

(ಎ) ಪ್ರತಿಯೊಂದು ವಾರ್ಡನ ಜನಸಂಖ್ಯೆಯು ಕಾರ್ಯಸಾಧ್ಯವಾದಷ್ಟು ಮಟ್ಟಿಗೆ ಬೆಂಗಳೂರಿನುದ್ದಕ್ಕೂ ಒಂದೇ ಆಗಿರತಕ್ಕದ್ದು;

(ಬಿ) ವಿಧಾನಸಭೆಯ ಸದಸ್ಯರ ಚುನಾವಣಾ ಕ್ಷೇತ್ರದ ವ್ಯಾಪ್ತಿಯೊಳಗೇ ವಾರ್ಡ್‌ಗಳನ್ನು ವಿಭಾಗಿಸತಕ್ಕದ್ದು ಮತ್ತು ಯಾವುದೇ ವಾರ್ಡ್‌ಗಳು ಇತರ ಚುನಾವಣಾ ಕ್ಷೇತ್ರಗಳಿಗೆ ವಿಸ್ತರಿಸತಕ್ಕದ್ದಲ್ಲ.

ವಿವರಣೆ:- ಈ ಪ್ರಕರಣದ ಉದ್ದೇಶಕ್ಕಾಗಿ ನಗರದ ಜನಸಂಖ್ಯೆ ಎಂದರೆ, ಪ್ರಕಟಿಸಿದ ಹಿಂದಿನ ಜನಗಣತಿಯ ಮೂಲಕ ಪ್ರಕಟಿಸಿದ ಸಮಂಜಸ ಅಂಕಿಅಂಶ.

(2)ಸರ್ಕಾರವು ವಾರ್ಡ್‌ಗಳ ಕ್ಷೇತ್ರ ವಿಂಗಡನೆ ವಿಧಾನ ಕುರಿತು ಸರ್ಕಾರಕ್ಕೆ ಶಿಫಾರಸ್ಸು ಮಾಡಲು ನಿಯಮಿಸಬಹುದಾದಂಥ ವ್ಯಕ್ತಿಗಳನ್ನೊಳಗೊಂಡ ಗಡಿ ಗುರುತಿಸುವಿಕೆ ಆಯೋಗವನ್ನು ರಚಿಸತಕ್ಕದ್ದು:

(3) ರಾಜ್ಯ ಸರ್ಕಾರವು ಆದೇಶದ ಮೂಲಕ,-

(ಎ)ಚುನಾವಣೆಗಳ ಉದ್ದೇಶಕ್ಕಾಗಿ ಪಾಲಿಕೆಯ ವಾರ್ಡುಗಳನ್ನು ಎರಡು ನೂರಾ ಇಪ್ಪತ್ತೈದಕ್ಕಿಂತ ಕಡಿಮೆಯಿರದಂತೆ ಆದರೆ ಎರಡು ನೂರಾ ಐವತ್ತು ವಾರ್ಡ್‌ಗಳಿಗಿಂತ ಹೆಚ್ಚಿರದಂತೆ ವಿಭಾಗಿಸಲಾಗಿದೆಯೇ ಎನ್ನುವುದನ್ನು;

(ಬಿ) ಪ್ರತಿಯೊಂದು ವಾರ್ಡಿನ ವ್ಯಾಪ್ತಿಯನ್ನು;

(ಸಿ) ಮತ್ತು ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಪಂಗಡದವರಿಗಾಗಿ ಹಾಗೆ ಮೀಸಲಿರಿಸಿದ ಸ್ಥಾನಗಳ ಸಂಖ್ಯೆಯು, ಪಾಲಿಕೆಯಲ್ಲಿ ನೇರ ಚುನಾವಣೆ ಮೂಲಕ ತುಂಬಬೇಕಾದ ಸ್ಥಾನಗಳ ಒಟ್ಟು ಸಂಖ್ಯೆಯಲ್ಲಿ ನಗರದ ಒಟ್ಟು ಜನಸಂಖ್ಯೆಗೆ ಹೋಲಿಸಿದರೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನಸಂಖ್ಯೆಯು ಇರುವ ಪ್ರಮಾಣಕ್ಕೆ ಅನುಸಾರವಾಗಿ ಸಾಧ್ಯವಾದಷ್ಟು ಮಟ್ಟಿಗೆ ನಿಗದಿಪಡಿಸಲಾಗಿದೆ ಎಂಬುದನ್ನು,

- ನಿರ್ಧರಿಸತಕ್ಕದ್ದು.

ಪರಂತು, ಈ ಉಪ-ಪ್ರಕರಣದ ಅಡಿಯಲ್ಲಿ ಹಿಂದುಳಿದ ವರ್ಗಗಳಿಗಾಗಿ ಹಾಗೆ ಮೀಸಲಿರಿಸಿದ ಸ್ಥಾನಗಳ ಸಂಖ್ಯೆಯನ್ನು, (2)ನೇ ಉಪ-ಪ್ರಕರಣದ ಅಡಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗಾಗಿ ಮತ್ತು ಈ ಉಪ-ಪ್ರಕರಣದಡಿಯಲ್ಲಿ ಹಿಂದುಳಿದ ವರ್ಗದವರಿಗಾಗಿ ಮೀಸಲಿರಿಸಿದ ಒಟ್ಟು ಸ್ಥಾನಗಳ ಸಂಖ್ಯೆಯು ಪಾಲಿಕೆಯಲ್ಲಿನ ಒಟ್ಟು ಸ್ಥಾನಗಳ ಸಂಖ್ಯೆಯ ಮೂರನೇ ಒಂದರಷ್ಟನ್ನು ಮೀರದಂತೆ ನಿರ್ಧರಿಸತಕ್ಕದ್ದು.

(4) ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳು ಹಾಗೂ ಹಿಂದುಳಿದ ವರ್ಗಗಳಿಗೆ ಸೇರಿದ ವ್ಯಕ್ತಿಗಳ ಪ್ರತಿಯೊಂದು ಪ್ರವರ್ಗಕ್ಕಾಗಿ ಮೀಸಲಿರಿಸಿದ ಸೀಟುಗಳ ಮತ್ತು ಪಾಲಿಕೆಯಲ್ಲಿ ನೇರವಾಗಿ ಚುನಾವಣೆಯ

ಮೂಲಕ ಭರ್ತಿಮಾಡಬೇಕಾದ ಮೀಸಲಿರಿಸಿದ ಸೀಟುಗಳ ಪೈಕಿ ಶೇಕಡಾ 50ರಷ್ಟನ್ನು ಮೀರದ ಸೀಟುಗಳನ್ನು ಮಹಿಳೆಯರಿಗೆ ಮೀಸಲಿರಿಸತಕ್ಕದ್ದು:

ಪರಂತು, (3) ಮತ್ತು (4)ನೇ ಉಪ-ಪ್ರಕರಣಗಳಲ್ಲಿ ಮೀಸಲಿರಿಸಿದ ಸೀಟುಗಳನ್ನು ನಗರದ ಬೇರೆ ಬೇರೆ ವಾರ್ಡ್ ಗಳಿಗೆ ಸರದಿಯ ಮೂಲಕ ಹಂಚಿಕೆ ಮಾಡತಕ್ಕದ್ದು.

(5) ಆ ಪಾಲಿಕೆಯ ಸಾರ್ವತ್ರಿಕ ಚುನಾವಣೆಯ ಉದ್ದೇಶಕ್ಕಾಗಿ ಹೊರತು ಪಾಲಿಕೆಯ ಸ್ಥಾಪನೆಯ ತರುವಾಯ ಮೀಸಲಾತಿಯ ಉದ್ದೇಶಕ್ಕಾಗಿ ವಾರ್ಡುಗಳ ಗಡಿ ಗುರುತಿಸುವಿಕೆ ಅಥವಾ ವಾರ್ಡುಗಳ ಬದಲಾವಣೆಯನ್ನು ಮಾಡುವಂತಿಲ್ಲ ಹಾಗೂ ಅಂಥ ವಾರ್ಡುಗಳ ಗಡಿ ಗುರುತಿಸುವಿಕೆ ಅಥವಾ ವಾರ್ಡುಗಳ ಬದಲಾವಣೆಯು ಅಸ್ತಿತ್ವದಲ್ಲಿರುವ ಪಾಲಿಕೆಗೆ ಯಾವುದೇ ರೀತಿಯಲ್ಲಿ ಪರಿಣಾಮವನ್ನುಂಟು ಮಾಡತಕ್ಕದ್ದಲ್ಲ.

8. ಪಾಲಿಕೆಯ ರಚನೆ.- (1) ಪಾಲಿಕೆಯು ಈ ಮುಂದಿನವರನ್ನು ಒಳಗೊಳ್ಳತಕ್ಕದ್ದು,-

(ಎ) 7ನೇ ಪ್ರಕರಣದ (3)ನೇ ಉಪಪ್ರಕರಣದ ಅಡಿಯಲ್ಲಿ ಸರ್ಕಾರವು ನಿರ್ಧರಿಸಬಹುದಾದ ಅಂಥ ಸಂಖ್ಯೆಯ ಚುನಾಯಿತ ಸದಸ್ಯರನ್ನು ಪಾಲಿಕೆಯು ಹೊಂದಿರತಕ್ಕದ್ದು.

(ಬಿ) ಸರ್ಕಾರವು, ನಗರದ ನಿವಾಸಿಗಳಿಂದ ಅಂಥ ಸದಸ್ಯರುಗಳನ್ನು ನಾಮ ನಿರ್ದೇಶಿಸತಕ್ಕದ್ದು ಹಾಗೂ ನಾಮ ನಿರ್ದೇಶಿತ ಸದಸ್ಯರು ಕೌನ್ಸಿಲರುಗಳ ಶೇಕಡಾ ಹತ್ತರಷ್ಟನ್ನು ಮೀರತಕ್ಕದ್ದಲ್ಲ.-

(i) ಪೌರಾಡಳಿತ ಅಥವಾ ಆರೋಗ್ಯ, ಪಟ್ಟಣ ಯೋಜನೆ ಅಥವಾ ಶಿಕ್ಷಣಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ವಿಶೇಷ ಜ್ಞಾನ ಮತ್ತು ಅನುಭವವನ್ನು ಹೊಂದಿರುವ ವ್ಯಕ್ತಿಗಳು; ಅಥವಾ

(ii) ಸಮಾಜ ಸೇವಕರು:

ಪರಂತು, (ಬಿ) ಖಂಡದಲ್ಲಿ ಉಲ್ಲೇಖಿಸಿದ ವ್ಯಕ್ತಿಗಳು ಪಾಲಿಕೆಯ ಸಭೆಗಳಲ್ಲಿ ಮತದಾನದ ಹಕ್ಕನ್ನು ಹೊಂದಿತಕ್ಕದ್ದಲ್ಲ.

(ಸಿ) ಪಾಲಿಕೆಯ ಪ್ರದೇಶದೊಳಗಿನ ಚುನಾವಣಾ ಕ್ಷೇತ್ರಗಳ ಸಂಸದರಾದ ಸದಸ್ಯರು ಮತ್ತು ಪಾಲಿಕೆಯಲ್ಲಿ ಮತದಾರರಾಗಿ ನೊಂದಣಿಯಾದ ರಾಜ್ಯಗಳ ಪರಿಷತ್ತಿನ ಸದಸ್ಯರು.

(ಡಿ) ಪಾಲಿಕೆಯ ಪ್ರದೇಶದೊಳಗಿನ ಕ್ಷೇತ್ರಗಳ ರಾಜ್ಯ ವಿಧಾನಸಭೆ ಸದಸ್ಯರನ್ನು ಮತ್ತು ಪಾಲಿಕೆಯ ಮತದಾರರಾಗಿ ನೋಂದಾಯಿಸಿದ ವಿಧಾನಪರಿಷತ್ತಿನ ಸದಸ್ಯರನ್ನು ಒಳಗೊಂಡಿರತಕ್ಕದ್ದು:

(2) ಪಾಲಿಕೆಯ ಸೀಟುಗಳನ್ನು-

(ಎ) ಅನುಸೂಚಿತ ಜಾತಿಗಳಿಗೆ; ಮತ್ತು

(ಬಿ) ಅನುಸೂಚಿತ ಪಂಗಡಗಳಿಗೆ,

-ಮೀಸಲಿರಿಸತಕ್ಕದ್ದು.

ಮತ್ತು ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡದವರಿಗಾಗಿ ಹಾಗೆ ಮೀಸಲಿರಿಸಿದ ಸ್ಥಾನಗಳ ಸಂಖ್ಯೆಯು, ಪಾಲಿಕೆಯಲ್ಲಿ ನೇರ ಚುನಾವಣೆ ಮೂಲಕ ತುಂಬಬೇಕಾದ ಸ್ಥಾನಗಳ ಒಟ್ಟು ಸಂಖ್ಯೆಯಲ್ಲಿ ನಗರದ ಒಟ್ಟು ಜನಸಂಖ್ಯೆಗೆ ಹೋಲಿಸಿದರೆ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಜನಸಂಖ್ಯೆಯು ಇರುವ ಪ್ರಮಾಣಕ್ಕೆ ಅನುಸಾರವಾಗಿ ಸಾಧ್ಯವಾದಷ್ಟು ಮಟ್ಟಿಗೆ ನಿಗದಿಪಡಿಸತಕ್ಕದ್ದು.

(3) ನೇರ ಚುನಾವಣೆಯ ಮೂಲಕ ತುಂಬಬೇಕಾದ ಪಾಲಿಕೆಯ ಸೀಟುಗಳ ಒಟ್ಟು ಸಂಖ್ಯೆಯ ಹತ್ತಿರತ್ತಿರ ಮೂರನೇ ಒಂದರಷ್ಟನ್ನು ಅಂಥ ಸಂಖ್ಯೆಯ ಸದಸ್ಯರನ್ನು ಹಿಂದುಳಿದ ವರ್ಗಗಳಿಗೆ ಸೇರಿದ ವ್ಯಕ್ತಿಗಳಿಗಾಗಿ ಮೀಸಲಿರಿಸತಕ್ಕದ್ದು:

ಪರಂತು ಈ ಉಪ ಪ್ರಕರಣದ ಅಡಿಯಲ್ಲಿ ಹಿಂದುಳಿದ ವರ್ಗಗಳಿಗೆ ಹಾಗೆ ಮೀಸಲಿರಿಸಿದ ಸೀಟುಗಳ ಸಂಖ್ಯೆಯು, (3)ನೇ ಉಪ ಪ್ರಕರಣದ ಅಡಿಯಲ್ಲಿ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳಿಗೆ ಮೀಸಲಿರಿಸಿದಂತೆ ಇರತಕ್ಕದ್ದು ಹಾಗೂ ಈ ಉಪ ಪ್ರಕರಣದ ಅಡಿಯಲ್ಲಿ ಹಿಂದುಳಿಗೆ ವರ್ಗಗಳು ಪಾಲಿಕೆಯ ಸೀಟುಗಳ ಒಟ್ಟು ಸಂಖ್ಯೆಯ ಮೂರನೇ ಒಂದರಷ್ಟನ್ನು ಮೀರತಕ್ಕದ್ದಲ್ಲ.

ಮತ್ತು ಪರಂತು, ಈ ಪ್ರಕರಣದಡಿಯಲ್ಲಿ ಮೀಸಲಿರಿಸಿದ ಸೀಟುಗಳಲ್ಲಿ, ಅಂತಹ ಸೀಟುಗಳ ಒಟ್ಟು ಸಂಖ್ಯೆಯ ಶೇಕಡಾ 80 ನ್ನು 'ಎ' ಪ್ರವರ್ಗದಡಿಯಲ್ಲಿ ಬರುವ ವ್ಯಕ್ತಿಗಳಿಗೆ ಮೀಸಲಿರಿಸತಕ್ಕದ್ದು ಮತ್ತು ಉಳಿದ ಸೀಟುಗಳ ಶೇಕಡಾ 20ರಷ್ಟನ್ನು 'ಬಿ' ಪ್ರವರ್ಗದಡಿಯಲ್ಲಿ ಮೀಸಲಿರಿಸತಕ್ಕದ್ದು.

ಅಲ್ಲದೆ ಪರಂತು, 'ಎ' ಪ್ರವರ್ಗದಡಿಯಲ್ಲಿ ಬರುವ ಯಾವೊಬ್ಬ ವ್ಯಕ್ತಿಯು ಲಭ್ಯವಾಗದಿದ್ದಲ್ಲಿ, ಆ ಪ್ರವರ್ಗಕ್ಕೆ ಮೀಸಲಿರಿಸಿದ ಸೀಟುಗಳನ್ನು ಕೂಡ 'ಬಿ' ಪ್ರವರ್ಗದಡಿಯಲ್ಲಿ ಬರುವ ವ್ಯಕ್ತಿಗಳಿಂದ ಭರ್ತಿಮಾಡತಕ್ಕದ್ದು. ಹಾಗೆಯೇ ಇದು ವಿಪರ್ಯಯವಾಗತಕ್ಕದ್ದು.

(4) ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳಿಗೆ ಸೇರಿದ ವ್ಯಕ್ತಿಗಳ ಪ್ರತಿಯೊಂದು ವರ್ಗಕ್ಕಾಗಿ ಮೀಸಲಿರಿಸಿದ ಸೀಟುಗಳ ಶೇಕಡಾ ಐವತ್ತರಷ್ಟನ್ನು ಮೀರದಿರುವಂತಿಲ್ಲ ಹಾಗೂ ಪಾಲಿಕೆಯಲ್ಲಿ ನೇರ

ಚುನಾವಣೆಯ ಮೂಲಕ ತುಂಬಬೇಕಾದ ಮೀಸಲಿಲ್ಲದಿರುವ ಸೀಟುಗಳನ್ನು ಮಹಿಳೆಯರಿಗಾಗಿ ಮೀಸಲಿರಿಸತಕ್ಕದ್ದು.

ಪರಂತು, ಈ ಉಪ-ಪ್ರಕರಣದಲ್ಲಿ ಮೀಸಲಿರಿಸಿದ ಸೀಟುಗಳನ್ನು ನಗರದ ಬೇರೆಬೇರೆ ವಾರ್ಡ್ ಗಳಿಗೆ ಸರದಿಯ ಮೂಲಕ ಹಂಚಿಕೆ ಮಾಡತಕ್ಕದ್ದು.

(5) (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಕೌನ್ಸಿಲರುಗಳನ್ನು ಈ ಅಧಿನಿಯಮದಲ್ಲಿ ಉಪಬಂಧಿಸಿದ ರೀತಿಯಲ್ಲಿ ಚುನಾಯಿಸತಕ್ಕದ್ದು.

(6) (2), (3) ಮತ್ತು (4)ನೇ ಉಪ ಪ್ರಕರಣಗಳಲ್ಲಿ ಇರುವುದಾವುದೂ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು, ಹಿಂದುಳಿದ ವರ್ಗಗಳು ಅಥವಾ ಮಹಿಳಾ ಸದಸ್ಯರು ಮೀಸಲಿಲ್ಲದ ಸೀಟುಗಳಿಗೆ ಚುನಾವಣೆಯಲ್ಲಿ ಸ್ಪರ್ಧಿಸುವುದರಿಂದ ನಿರ್ಬಂಧಿಸತಕ್ಕದ್ದಲ್ಲ.

(7) ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ, ಒಟ್ಟಾರೆ ಮೂರನೇ ಎರಡರಷ್ಟು ಸಂಖ್ಯೆಯ ಕೌನ್ಸಿಲರುಗಳನ್ನು ಚುನಾಯಿಸಬೇಕಾದ ಅಗತ್ಯವಿರುವಾಗ ಚುನಾಯಿತರಾಗಿದ್ದಲ್ಲಿ ಪಾಲಿಕೆಯು ಅಧನಿಯಮದ ಅಡಿಯಲ್ಲಿ ಯುಕ್ತವಾಗಿ ರಚನೆಯಾಗಿರುವುದಾಗಿ ಭಾವಿಸತಕ್ಕದ್ದು.

9. ಕೌನ್ಸಿಲರ್ಸಳು ಸ್ವೀಕರಿಸಬೇಕಾಗಿರುವ ನಿಷ್ಠೆಯ ಪ್ರಮಾಣವಚನ.- (1) 1969ರ ಪ್ರಮಾಣ ವಚನ ಅಧಿನಿಯಮ (1969ರ ಕೇಂದ್ರ ಅಧಿನಿಯಮ 44)ರಲ್ಲಿ ಏನೇ ಒಳಗೊಂಡಿದ್ದರೂ, ಕೌನ್ಸಿಲರ್ನಾಗಿ ಚುನಾಯಿತನಾಗಿರುವ ಪ್ರತಿಯೊಬ್ಬ ವ್ಯಕ್ತಿಯು, ತನ್ನ ಸ್ಥಾನದಲ್ಲಿ ಆಸೀನನಾಗುವುದಕ್ಕೆ ಮೊದಲು ಪಾಲಿಕೆಯ ಸಭೆಯಲ್ಲಿ ಸಂವಿಧಾನಕ್ಕೆ ತನ್ನ ನಿಷ್ಠೆಯ ಪ್ರಮಾಣವಚನವನ್ನು ಅಥವಾ ಪ್ರತಿಜ್ಞಾ ವಚನವನ್ನು ಈ ಕೆಳಕಂಡ ನಮೂನೆಯಲ್ಲಿ ಸ್ವೀಕರಿಸತಕ್ಕದ್ದು, ಎಂದರೆ-

"I.ಎ.ಬಿ., ಎಂಬ ಹೆಸರಿನ ನಾನು ಈ ಪಾಲಿಕೆಯ ಕೌನ್ಸಿಲರ್ನಾಗಿ ಚುನಾಯಿತನಾಗಿದ್ದು, ಭಾರತ ಸಂವಿಧಾನಕ್ಕೆ ನಿಜವಾದ ಶ್ರದ್ಧೆ ಮತ್ತು ನಿಷ್ಠೆಯನ್ನು ಹೊಂದಿರುತ್ತೇನೆಂದು ಮತ್ತು ನಾನು ಈಗ ಕೈಗೊಳ್ಳಲಿರುವ ಕರ್ತವ್ಯವನ್ನು ನಿಷ್ಠಾಪೂರ್ವಕವಾಗಿ ನಿರ್ವಹಿಸುತ್ತೇನೆಂದು ಭಗವಂತನ ಹೆಸರಿನಲ್ಲಿ ಪ್ರಮಾಣ ಮಾಡುತ್ತೇನೆ / ಶ್ರದ್ಧಾಪೂರ್ವಕವಾಗಿ ಪ್ರತಿಜ್ಞೆ ಮಾಡುತ್ತೇನೆ".

(2) ಕೌನ್ಸಿಲರ್ನಾಗಿ ಚುನಾಯಿತನಾದ, ಯಾರೇ ವ್ಯಕ್ತಿಯು ತನ್ನ ಪದಾವಧಿಯು ಪ್ರಾರಂಭವಾದ ದಿನಾಂಕದಿಂದ ಮೂರು ತಿಂಗಳುಗಳ ಒಳಗೆ ಅಥವಾ ಸದರಿ ದಿನಾಂಕದ ತರುವಾಯ ನಡೆಯುವ ಮೊದಲ ಮೂರು ಸಭೆಗಳ ಪೈಕಿ ಒಂದರಲ್ಲಿ, ಇವುಗಳಲ್ಲಿ ಯಾವುದು ತರುವಾಯದ್ದೋ ಅದರಲ್ಲಿ (1)ನೇ ಉಪಪ್ರಕರಣದಲ್ಲಿ ಹೇಳಲಾದ ಪ್ರಮಾಣವಚನವನ್ನು ಅಥವಾ ಪ್ರತಿಜ್ಞಾ ವಚನವನ್ನು ಸ್ವೀಕರಿಸಲು ತಪ್ಪಿದರೆ, ಅವನು ತನ್ನ ಪದವನ್ನು ಧಾರಣ ಮಾಡುವುದು ನಿಂತುಹೋಗತಕ್ಕದ್ದು ಮತ್ತು ಆತನ ಸ್ಥಾನವು ತೆರವಾಗಿರುವುದಾಗಿ ಭಾವಿಸತಕ್ಕದ್ದು.

(3) ಕೌನ್ಸಿಲರ್ನಾಗಿ ಚುನಾಯಿತನಾದ ಯಾರೇ ವ್ಯಕ್ತಿಯು (1)ನೇ ಉಪಪ್ರಕರಣದಲ್ಲಿ ಹೇಳಲಾದ ಪ್ರಮಾಣವಚನವನ್ನು ಅಥವಾ ಪ್ರತಿಜ್ಞಾ ವಚನವನ್ನು ಸ್ವೀಕರಿಸಿದ ಹೊರತು, ಪಾಲಿಕೆಯ ಸಭೆಯಲ್ಲಿ ತನ್ನ ಸ್ಥಾನದಲ್ಲಿ ಆಸೀನನಾಗತಕ್ಕದ್ದಲ್ಲ ಅಥವಾ ಕೌನ್ಸಿಲರ್ನಾಗಿ ಯಾವುದೇ ಕಾರ್ಯವನ್ನು ಮಾಡತಕ್ಕದ್ದಲ್ಲ.

(4) (3)ನೇ ಉಪಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಕೌನ್ಸಿಲರ್ನಾಗಿ ಪ್ರಮಾಣವಚನವನ್ನು ಅಥವಾ ಪ್ರತಿಜ್ಞಾ ವಚನವನ್ನು ಸ್ವೀಕರಿಸದೇ ಇರುವ ಮೇಯರ್ ಅಥವಾ ಉಪಮೇಯರ್ ಅಥವಾ ಸ್ಥಾಯೀ ಸಮಿತಿಯ ಅಧ್ಯಕ್ಷ ಅಥವಾ ಸದಸ್ಯರು, ಮೇಯರ್ ಆಗಿ, ಉಪಮೇಯರ್ ಆಗಿ, ಅಧ್ಯಕ್ಷರಾಗಿ ಅಥವಾ ಸದಸ್ಯರಾಗಿ ಕಾರ್ಯ ನಿರ್ವಹಿಸಲು ಹಕ್ಕುಳ್ಳವರಾಗಿರಕ್ಕದ್ದಲ್ಲ.

10. ಆಸ್ತಿಗಳ ಘೋಷಣೆ, ಇತ್ಯಾದಿ.- (1) 8ನೇ ಪ್ರಕರಣದ (1)ನೇ ಉಪ ಪ್ರಕರಣದ (ಎ) ಖಂಡದಲ್ಲಿ ಉಲ್ಲೇಖಿಸಿದ ಪ್ರತಿಯೊಬ್ಬ ಕೌನ್ಸಿಲರನು, ತನ್ನ ಪದಾವಧಿಯು ಪ್ರಾರಂಭವಾದ ತರುವಾಯ ಒಂದು ತಿಂಗಳಿಗೆ ಮೀರದಂತೆ ಮತ್ತು ತರುವಾಯದ ಪ್ರತಿ ವರ್ಷದ ಅದೇ ತಿಂಗಳಲ್ಲಿ, ತಾನು ಮತ್ತು ತನ್ನ ಕುಟುಂಬದ ಯಾರೇ ಸದಸ್ಯನು ಒಡೆತನ ಹೊಂದಿರುವ ಎಲ್ಲಾ ಆಸ್ತಿಗಳ ಘೋಷಣೆಯನ್ನು ಮೇಯರ್ ಅವರಲ್ಲಿ ದಾಖಲು ಮಾಡತಕ್ಕದ್ದು. ಅಂಥ ಘೋಷಣೆಯು ಪಾಲಿಕೆಯ ದಾಖಲೆಗಳ ಭಾಗವಾಗಿರತಕ್ಕದ್ದು.

11. ಕೌನ್ಸಿಲರುಗಳ ಪದಾವಧಿ.- (1) ಈ ಅಧಿನಿಯಮದಡಿಯಲ್ಲಿ ಉಪಬಂಧಿಸಿದುದನ್ನುಳಿದು, ಕೌನ್ಸಿಲರುಗಳ ಪದಾವಧಿಯು ಐದು ವರ್ಷಗಳಾಗಿರತಕ್ಕದ್ದು.

(i) ಸಾಮಾನ್ಯ ಚುನಾವಣೆಯಲ್ಲಿ ನೇರವಾಗಿ ಚುನಾಯಿತರಾದವರಿಗೆ ಐದು ವರ್ಷಗಳಾಗಿರತಕ್ಕದ್ದು;

(ii) 8ನೇ ಪ್ರಕರಣದ (1)ನೇ ಉಪ-ಪ್ರಕರಣದ (ಬಿ) ಖಂಡದ ಅಡಿಯಲ್ಲಿ ಸರ್ಕಾರದಿಂದ ನಾಮನಿರ್ದೇಶನಗೊಂಡವರಿಗೆ ಸರ್ಕಾರದ ಇಚ್ಛೆಗೊಳಪಟ್ಟು ಐದು ವರ್ಷಗಳಾಗಿರತಕ್ಕದ್ದು.

(2) ಕೌನ್ಸಿಲರುಗಳ ಪದಾವಧಿಯು, ಪಾಲಿಕೆಯ ಮೊದಲ ಸಭೆಯು ನಿಗಧಿಪಡಿಸಿದ ದಿನಾಂಕದಿಂದ ಪ್ರಾರಂಭವಾಗತಕ್ಕದ್ದು.

(3) ಯಾವುದೇ ಆಕಸ್ಮಿಕ ಸಾಂದರ್ಭಿಕ ಖಾಲಿ ಸ್ಥಾನವು ಉಂಟಾದಲ್ಲಿ ಸಾಧ್ಯವಾದಷ್ಟು ಬೇಗನೆ ಅದಕ್ಕೆ ವ್ಯಕ್ತಿಯನ್ನು ಚುನಾಯಿಸುವ ಮೂಲಕ ಅದನ್ನು ಭರ್ತಿಮಾಡತಕ್ಕದ್ದು. ಹಾಗೆ ಚುನಾಯಿತನಾದ ವ್ಯಕ್ತಿಯು ಆತನು ಚುನಾಯಿತನಾಗಿದ್ದರೆ ಖಾಲಿಸ್ಥಾನವು ಉಂಟಾಗದಿರುವವರೆಗೆ ಆ ಹುದ್ದೆಯನ್ನು ಹೊಂದತಕ್ಕದ್ದು.

ಪರಂತು, ಕೌನ್ಸಿಲರ್‌ಗಳ ಪದಾವಧಿಯು ಮುಕ್ತಾಯವಾಗುವುದಕ್ಕೆ ನಾಲ್ಕು ತಿಂಗಳೊಳಗೆ ಖಾಲಿ ಸ್ಥಾನವು ಉಂಟಾದಲ್ಲಿ ಖಾಲಿಸ್ಥಾನವನ್ನು ಭರ್ತಿಮಾಡಲು ಚುನಾವಣೆ ನಡೆಸತಕ್ಕದ್ದಲ್ಲ.

12. ಪಾಲಿಕೆಯನ್ನು ವಲಯಗಳಾಗಿ ವಿಂಗಡಣೆ.- (1) ಸರ್ಕಾರವು ಪಾಲಿಕೆಯೊಂದಿಗೆ ಸಮಾಲೋಚಿಸಿ ಅದರ ಪ್ರದೇಶವನ್ನು ಹಲವು ವಲಯಗಳಾಗಿ ವಿಂಗಡಿಸಿ ಅಧಿಸೂಚನೆಯನ್ನು ಹೊರಡಿಸತಕ್ಕದ್ದು.

(2) ಪಾಲಿಕೆಯ ಮನವಿಯ ಮೇರೆಗೆ ರಾಜ್ಯ ಸರ್ಕಾರವು "ವಲಯ ಗಡಿಗುರುತು ಆಯೋಗ" ಸ್ಥಾಪಿಸತಕ್ಕದ್ದು, ಸರ್ಕಾರ ಮತ್ತು ಅಂಥ ಸಾರ್ವಜನಿಕರ ಶ್ರೇಷ್ಟ ಸದಸ್ಯರು ಅಂಥ ಉಲ್ಲೇಖಾಂಶಗಳ ಅನುಸಾರವಾಗಿ ವಲಯಗಳ ಗಡಿಗುರುತಿಸುವಿಕೆ ಮತ್ತು ಅದರ ಆಧಾರಗಳನ್ನು ಸರ್ಕಾರಕ್ಕೆ ಶಿಫಾರಸ್ಸು ಮಾಡುವುದು.

(3) ಈ ಪ್ರಕರಣದ ಅಡಿಯಲ್ಲಿ ಸರ್ಕಾರಿ ರಾಜ್ಯ ಪತ್ರದಲ್ಲಿ ಯಾವುದೇ ಅಧಿಸೂಚನೆಯನ್ನು ಪ್ರಕಟಿಸುವುದಕ್ಕೂ ಮೊದಲು, ಪಾಲಿಕೆಯು ಅಂಥ ಅಧಿಸೂಚನೆಯ ಕರಡು ಪ್ರತಿಯನ್ನು ಪ್ರಕಟಿಸತಕ್ಕದ್ದು, ಅಂಥ ಅಧಿಸೂಚನೆಯ ದಿನಾಂಕದಿಂದ ಮೂವತ್ತು ದಿನಗಳ ಅವಧಿಯೊಳಗಾಗಿ ಸಾರ್ವಜನಿಕರ ಅಭಿಪ್ರಾಯವನ್ನು ಪಡೆಯತಕ್ಕದ್ದು.

(4) ಪಾಲಿಕೆಯು ಸೃಜಿಸಿದ ವಲಯಗಳ ಸಂಖ್ಯೆಯು ಹದಿನೈದನ್ನು ಮೀರತಕ್ಕದ್ದಲ್ಲ.

ಅಧ್ಯಾಯ IV

ಚುನಾವಣೆಗಳು

13. ಪಾಲಿಕೆಗೆ ಚುನಾವಣೆ.- (1) ಅಸ್ತಿತ್ವದಲ್ಲಿರುವ ಪಾಲಿಕೆಯ ಅವಧಿಯು ಮುಕ್ತಾಯಗೊಳಿಸುವುದಕ್ಕೆ ಮೊದಲು ಅಥವಾ ವಿಸರ್ಜನೆಗೊಂಡ ಮೇರೆಗೆ ಹೊಸ ಪಾಲಿಕೆಯನ್ನು ಸ್ಥಾಪಿಸುವ ಉದ್ದೇಶಕ್ಕಾಗಿ ಸಾರ್ವತ್ರಿಕ ಚುನಾವಣೆಯನ್ನು ನಡೆಸತಕ್ಕದ್ದು.

(2) ಕೌನ್ಸಿಲರುಗಳ ಚುನಾವಣೆಯ ಮೇಲುಸ್ತುವಾರಿ ಮತ್ತು ನಡೆಸುವುದು ರಾಜ್ಯ ಚುನಾವಣಾ ಆಯೋಗದಲ್ಲಿ ನಿಹಿತವಾಗಿರತಕ್ಕದ್ದು.

(3) ರಾಜ್ಯ ಚುನಾವಣಾ ಆಯೋಗವು ನೇಮಿಸಿದ ಅಧಿಕಾರಿಯು ಅಂಥ ಪಾಲಿಕೆ ಪ್ರದೇಶದ ಪ್ರತಿಯೊಂದು ವಾರ್ಡಿನ ಮತದಾರರ ಪಟ್ಟಿಯನ್ನು ನಿರ್ವಹಿಸತಕ್ಕದ್ದು.

(4) ರಾಜ್ಯ ಚುನಾವಣಾ ಆಯೋಗವು ಸರ್ಕಾರದೊಂದಿಗೆ ಸಮಾಲೋಚಿಸಿ ಅಂಥ ಚುನಾವಣೆಯ ದಿನಾಂಕವನ್ನು ನಿಗದಿಪಡಿಸತಕ್ಕದ್ದು.

14. ಮತದಾರ ಪಟ್ಟಿಗಳು.- (1) ಈ ಅಧಿನಿಯಮದ ಉಪಬಂಧಗಳ ಅನುಸಾರವಾಗಿ ಮತ್ತು ರಾಜ್ಯ ಚುನಾವಣಾ ಆಯೋಗದ ಮೇಲುಸ್ತುವಾರಿ, ನಿರ್ದೇಶನ ಮತ್ತು ನಿಯಂತ್ರಣದ ಅಡಿಯಲ್ಲಿ ಪ್ರತಿಯೊಂದು ವಾರ್ಡಿಗಾಗಿ ಮತದಾರರ ಪಟ್ಟಿಯನ್ನು ಸಿದ್ಧಪಡಿಸತಕ್ಕದ್ದು, ಪರಿಷ್ಕರಿಸತಕ್ಕದ್ದು, ಮಾರ್ಪಡಿಸತಕ್ಕದ್ದು, ಇಂದೀಕರಿಸತಕ್ಕದ್ದು ಹಾಗೂ ಪ್ರಕಟಿಸತಕ್ಕದ್ದು.

(2) ಪ್ರತಿಯೊಂದು ವಾರ್ಡಿಗೆ ಒಬ್ಬನೇ ಕೌನ್ಸಿಲರ್ ನನ್ನು ಚುನಾಯಿಸತಕ್ಕದ್ದು ಮತ್ತು ಚುನಾವಣೆಯು ರಹಸ್ಯ ಮತದಾನದ್ದಾಗಿರತಕ್ಕದ್ದು.

(3) ರಾಜ್ಯ ಚುನಾವಣಾ ಆಯೋಗವು ಸಿದ್ಧಪಡಿಸಿರುವಂತೆ ವಾರ್ಡ್ ನ ಮತದಾರರ ಪಟ್ಟಿಯಲ್ಲಿ ಹೆಸರನ್ನು ಸೇರಿಸಲಾಗಿರುವ ಯಾರೇ ವ್ಯಕ್ತಿಯು ಆ ವಾರ್ಡ್ ನ ಚುನಾವಣೆಯಲ್ಲಿ ಮತದಾನದ ಹಕ್ಕುಳ್ಳವನಾಗಿರತಕ್ಕದ್ದು.

15. ಮತದಾರ ನೋಂದಣಿ ಅಧಿಕಾರಿ.- (1) ಮತದಾರ ನೊಂದಣಿ ಅಧಿಕಾರಿಯು ಪಾಲಿಕೆಯ ಪ್ರತಿಯೊಂದು ವಾರ್ಡುಗಳ ಸಂಬಂಧದಲ್ಲಿ, ನಿಯಮಿಸಬಹುದಾದ ಅಂಥ ವಿಧಾನದಲ್ಲಿ ಮತದಾರರ ಪಟ್ಟಿಯನ್ನು ಸಿದ್ಧಪಡಿಸತಕ್ಕದ್ದು ಮತ್ತು ನವೀಕರಿಸತಕ್ಕದ್ದು ಹಾಗೂ ಆತನು ರಾಜ್ಯ ಚುನಾವಣಾ ಆಯೋಗವು ಸರ್ಕಾರದೊಂದಿಗೆ ಸಮಾಲೋಚಿಸಿ ಹೆಸರಿಸಿದ ಅಥವಾ ನಾಮ ನಿರ್ದೇಶಿಸಿದ ಸರ್ಕಾರದ ಅಥವಾ ಸ್ಥಳೀಯ ಪ್ರಾಧಿಕಾರದ ಅಧಿಕಾರಿಯಾಗಿರತಕ್ಕದ್ದು.

(2) ಚುನಾವಣಾ ನೋಂದಣಿ ಅಧಿಕಾರಿಯು ನಿಯಮಿಸಬಹುದಾದ ಅಂಥ ನಿರ್ಬಂಧಕ್ಕೆ ಒಳಪಟ್ಟು ವಾರ್ಡ್‌ಗಳ ಮತದಾರರ ಪಟ್ಟಿಯನ್ನು ಸಿದ್ಧಪಡಿಸಲು ಮತ್ತು ಪರಿಷ್ಕರಿಸಲು ಅನುದಾನಿತ ಶಾಲೆಗಳ ಶಿಕ್ಷಕರು ಅಥವಾ ಸರ್ಕಾರಿ ಉದ್ಯೋಗಿಗಳು ಅಥವಾ ಸ್ಥಳೀಯ ಪ್ರಾಧಿಕಾರದ ಉದ್ಯೋಗಿಗಳು ಸೇರಿದಂತೆ ಸಕ್ಷಮ ಶಿಕ್ಷಕರನ್ನು ನಿಯೋಜಿಸತಕ್ಕದ್ದು.

(3) ರಾಜ್ಯ ಚುನಾವಣಾ ಆಯೋಗವು, ಚುನಾವಣಾ ನೊಂದಣಿ ಅಧಿಕಾರಿಗೆ ತನ್ನ ಪ್ರಕಾರ್ಯಗಳನ್ನು ನೆರವೇರಿಸಲು ನೆರವು ನೀಡಲು ಒಬ್ಬರು ಅಥವಾ ಹೆಚ್ಚಿನ ವ್ಯಕ್ತಿಗಳನ್ನು ಸಹಾಯಕಿ ಚುನಾವಣಾ ನೊಂದಣಿ ಅಧಿಕಾರಿಗಳಾಗಿ ಗೊತ್ತುಪಡಿಸಬಹುದು.

(4) ಪ್ರತಿಯೊಬ್ಬ ಸಹಾಯಕ ಚುನಾವಣಾ ನೊಂದಣಿ ಅಧಿಕಾರಿಯು, ಚುನಾವಣಾ ನೊಂದಣಿ ಅಧಿಕಾರಿಯ ನಿಯಂತ್ರಣಕ್ಕೊಳಪಟ್ಟು, ಚುನಾವಣಾ ನೊಂದಣಿ ಅಧಿಕಾರಿಯ ಎಲ್ಲಾ ಅಥವಾ ಯಾವುದೇ ಪ್ರಕಾರ್ಯಗಳನ್ನು ನೆರವೇರಿಸಲು ಸಕ್ಷಮನಾಗಿರತಕ್ಕದ್ದು.

16. ಮತಗಟ್ಟೆಗಳನ್ನು ಒದಗಿಸುವುದು.- ಜಿಲ್ಲಾ ಚುನಾವಣಾ ಅಧಿಕಾರಿಯು, ರಾಜ್ಯ ಚುನಾವಣಾ ಆಯೋಗದ ಪೂರ್ವಾನುಮೋದನೆಯೊಂದಿಗೆ, ತನ್ನ ಅಧಿಕಾರ ವ್ಯಾಪ್ತಿಯ ಪ್ರದೇಶದೊಳಗಿನ ಪ್ರತಿಯೊಂದು ವಾರ್ಡಗೆ ಸಾಕಷ್ಟು ಸಂಖ್ಯೆಯ ಮತಗಟ್ಟೆಗಳನ್ನು ಒದಗಿಸತಕ್ಕದ್ದು, ಮತ್ತು ರಾಜ್ಯ ಚುನಾವಣಾ ಆಯೋಗವು ನಿರ್ದೇಶಿಸಬಹುದಾದ ಅಂಥ ವಿಧಾನದಲ್ಲಿ, ಹಾಗೆ ಒದಗಿಸಲಾದ ಮತಗಟ್ಟೆಗಳನ್ನು ಮತ್ತು ಅನುಕ್ರಮವಾಗಿ ಅವರಿಗೆ ಒದಗಿಸಿರುವ ಮತಗಟ್ಟೆ ಪ್ರದೇಶಗಳು ಅಥವಾ ಮತದಾರರ ಗುಂಪನ್ನು ತೋರಿಸುವ ಒಂದು ಪಟ್ಟಿಯನ್ನು ಪ್ರಕಟಿಸತಕ್ಕದ್ದು.

17. ಮತಗಟ್ಟೆಗಳಿಗೆ ಮತಗಟ್ಟೆ ಅಧಿಕಾರಿಗಳನ್ನು ನೇಮಿಸುವುದು.- (1) ರಾಜ್ಯ ಚುನಾವಣಾ ಆಯೋಗವು ಪ್ರತಿಯೊಂದು ಮತಗಟ್ಟೆಗೆ ಒಬ್ಬರು ಮತಗಟ್ಟೆ ಅಧಿಕಾರಿಯನ್ನು ಮತ್ತು ತಾನು ಅವಶ್ಯವೆಂದು ಭಾವಿಸುವ ಅಂಥ ಮತದಾನ ಅಧಿಕಾರಿ ಅಥವಾ ಅಧಿಕಾರಿಗಳನ್ನು ನೇಮಿಸತಕ್ಕದ್ದು:

ಪರಂತು, ಮತ ಗಟ್ಟೆಯಿಂದ ಮತದಾನ ಅಧಿಕಾರಿಯು ಗೈರುಹಾಜರಾದಲ್ಲಿ, ಮತಗಟ್ಟೆ ಅಧಿಕಾರಿಯು, ಚುನಾವಣೆಯ ಮೂಲಕ ಅಥವಾ ಅದರ ಪರವಾಗಿ, ಅಥವಾ ಚುನಾವಣೆಯಲ್ಲಿ ಅಥವಾ ಚುನಾವಣೆಗೆ ಸಂಬಂಧಿಸಿದಂತೆ ಅಭ್ಯರ್ಥಿಗಾಗಿ ನಿಯೋಜನೆಗೊಂಡ ಅಥವಾ ಅನ್ಯಥಾ ಕಾರ್ಯನಿರ್ವಹಿಸುತ್ತಿರುವ ವ್ಯಕ್ತಿಯನ್ನು ಹೊರತುಪಡಿಸಿ, ಮತಗಟ್ಟೆಯಲ್ಲಿ ಹಾಜರಿರುವ ಯಾವೊಬ್ಬ ವ್ಯಕ್ತಿಯನ್ನು, ಹಿಂದಿನ ಅಧಿಕಾರಿಯ ಗೈರುಹಾಜರಿಯಲ್ಲಿ, ಮತದಾನ ಅಧಿಕಾರಿಯಾಗಿ ನೇಮಿಸಬಹುದು, ಮತ್ತು ಅದಕ್ಕನುಸಾರವಾಗಿ ಚುನಾವಣಾ ಆಯೋಗಕ್ಕೆ ತಿಳಿಸಬಹುದು.

(2) ಮತದಾನ ಅಧಿಕಾರಿಯು, ಮತಗಟ್ಟೆ ಅಧಿಕಾರಿಯ ಮೂಲಕ ಹಾಗೆ ನಿರ್ದೇಶಿತನಾದಲ್ಲಿ, ಈ ಅಧಿನಿಯಮ ಅಥವಾ ಅದರಡಿಯಲ್ಲಿ ಮಾಡಲಾದ ಯಾವುದೇ ನಿಯಮಗಳು ಅಥವಾ ಆದೇಶಗಳ ಅಡಿಯಲ್ಲಿ ಮತಗಟ್ಟೆ ಅಧಿಕಾರಿಯ ಎಲ್ಲಾ ಅಥವಾ ಯಾವುದೇ ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು.

18. ಕೌನ್ಸಿಲರ್ ಆಗಲು ಅರ್ಹತೆಗಳು.- ಪಾಲಿಕೆಯ ಪ್ರದೇಶದಲ್ಲಿ ಯಾವುದೇ ವಾರ್ಡಗಳಿಗಾಗಿನ ಮತದಾರರ ಪಟ್ಟಿಯಲ್ಲಿ ಹೆಸರುಳ್ಳ ಯಾವೊಬ್ಬ ವ್ಯಕ್ತಿಯು, ಈ ಅಧಿನಿಯಮ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಅಡಿಯಲ್ಲಿ ಅನರ್ಹತೆಗೊಂಡಿದ್ದ ಹೊರತು, ಪಾಲಿಕೆಯ ಪ್ರದೇಶದ ಆ ವಾರ್ಡನಲ್ಲಿ ಅಥವಾ ಯಾವುದೇ ಇತರ ವಾರ್ಡನಲ್ಲಿನ ಚುನಾವಣೆಗೆ ಚುನಾಯಿತನಾಗಲು ಅರ್ಹನಾಗತಕ್ಕದ್ದು ಮತ್ತು ಅಂಥ ಪಟ್ಟಿಯಲ್ಲಿ ಹೆಸರು ಇಲ್ಲದ ಪ್ರತಿಯೊಬ್ಬ ವ್ಯಕ್ತಿಯು ಪಾಲಿಕೆಯ ಪ್ರದೇಶದ ಯಾವುದೇ ವಾರ್ಡಗಾಗಿನ ಚುನಾವಣೆಯಲ್ಲಿ ಚುನಾಯಿತನಾಗಲು ಅರ್ಹನಾಗತಕ್ಕದ್ದಲ್ಲ.

19. ಕೌನ್ಸಿಲರ್ ಆಗಲು ಅನರ್ಹತೆಗಳು.- (1) ಕೌನ್ಸಿಲರ್ ಆಗಿ ಆಯ್ಕೆಯಾಗಲು ಒಬ್ಬ ವ್ಯಕ್ತಿಯು ಈ ಮುಂದಿನ ಸನ್ನಿವೇಶಗಳಲ್ಲಿಅನರ್ಹನಾಗತಕ್ಕದ್ದುಎಂದರೆ, ಆತನು,-

(ಎ) ಆತನು, ಎರಡು ವರ್ಷಗಳಿಗೆ ಕಡಿಮೆಯಿಲ್ಲದ ಅವಧಿಗಾಗಿ ಕಾರಾವಾಸದೊಂದಿಗೆ ದಂಡನೀಯವಾದ ಅಪರಾಧಕ್ಕಾಗಿ ಕ್ರಿಮಿನಲ್ ನ್ಯಾಯಾಲಯದ ಮೂಲಕ ಕಾರಾವಾಸದ ಶಿಕ್ಷೆಗೆ ಗುರಿಯಾಗಿದ್ದಲ್ಲಿ:

ಪರಂತು,

ಅಪರಾಧವು ನೈತಿಕ ಅಧಃಪತನವನ್ನು ಒಳಗೊಂಡಿದ್ದಲ್ಲಿ; ಮತ್ತು ಅಂಥ ಅಪರಾಧವನ್ನು ವಿಪರ್ಯಯಗೊಳಿಸಿರದಿದ್ದಲ್ಲಿ ಅಥವಾ ರದ್ದುಗೊಳಿಸಿರದಿದ್ದಲ್ಲಿ ಅಥವಾಅಪರಾಧವನ್ನು ಕ್ಷಮಿಸದಿದ್ದಲ್ಲಿ; ಅಥವಾ

(ಬಿ) ಸಂವಿಧಾನದ ಯಾವುದೇ ಉಪಬಂಧದ ಅಡಿಯಲ್ಲಿ ಅಥವಾ ರಾಜ್ಯ ವಿಧಾನಸಭೆಗೆ ಚುನಾವಣೆಗಳಿಗೆ ಸಂಬಂಧಿಸಿದ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೂಲಕ ಅಥವಾ ಅದರಡಿಯಲ್ಲಿ ಹಾಗೆ ಅನರ್ಹಗೊಂಡಿದ್ದಲ್ಲಿ; ಅಥವಾ

(ಸಿ) ಭಾರತ ಸರ್ಕಾರದ ಅಥವಾ ಭಾರತ ಸಂವಿಧಾನದ ಮೊದಲನೇ ಅನುಸೂಚಿಯಲ್ಲಿ ನಿರ್ದಿಷ್ಟ ಪಡಿಸಿದ ಯಾವುದೇ ಸರ್ಕಾರದ ಅಡಿಯಲ್ಲಿ ಅಥವಾ ಈ ಅಧಿನಿಯಮದ ಅಡಿಯಲ್ಲಿ ಮಾಡಲಾದ ನಿಯಮಗಳ ಮೂಲಕ ಪದಧಾರನು (Holder) ಅನರ್ಹನೆಂದು ಘೋಪಿಸಿರುವ ಕಛೇರಿಗಳನ್ನು ಹೊರತು ಪಡಿಸಿ ಸದರಿ ಯಾವುದೇ ಸರ್ಕಾರಗಳ ನಿಯಂತ್ರಣಕ್ಕೊಳಪಟ್ಟ ಯಾವುದೇ ಸ್ಥಳೀಯ ಅಥವಾ ಇತರ ಪ್ರಾಧಿಕಾರದ ಅಡಿಯಲ್ಲಿ ಆತನು ಯಾವುದೇ ಲಾಭದಾಯಕ ಹುದ್ದೆಯನ್ನು ಹೊಂದಿದ್ದಲ್ಲಿ; ಅಥವಾ

(ಡಿ) ಸ್ಥಳೀಯ ಪ್ರಾಧಿಕಾರದ ಅಡಿಯಲ್ಲಿನ ಸೇವೆಯಿಂದ ಅಥವಾ ಸರ್ಕಾರಿ ಸೇವೆಯಿಂದ ಆತನು ವಜಾಗೊಂಡಿದ್ದಲ್ಲಿ; ಅಥವಾ

(ಇ) ನ್ಯಾಯವಾದಿಯಾಗಿದ್ದು, ಸಕ್ಷಮ ಪ್ರಾಧಿಕಾರದ ಆದೇಶದ ಮೂಲಕ ವೃತ್ತಿಯನ್ನು ನಡೆಸುವುದರಿಂದ ಆತನು ವಜಾಗೊಂಡಿದ್ದು ಅಥವಾ ಅಮಾನತ್ತುಗೊಂಡಿದ್ದು, ಅಂಥ ಅಮಾನತ್ತಿನ ಅವಧಿಗಾಗಿ ತರುವಾಯದ ಪ್ರಕರಣದಲ್ಲಿ ಅನರ್ಹತೆಯು ಕಾರ್ಯಾಚರಣೆಯಲ್ಲಿದ್ದಲ್ಲಿ; ಅಥವಾ

(ಎಫ್) ಆತನು ಅಸ್ವಸ್ಥ ಚಿತ್ತದವನಾಗಿದ್ದು ಸಕ್ಷಮನ್ಯಾಯಾಲಯದ ಮೂಲಕ ಹಾಗೆ ಘೋಷಿತನಾಗಿದ್ದಲ್ಲಿ; ಅಥವಾ

(ಜಿ) ಆತನು ಅವಿಮುಕ್ತ ದಿವಾಳಿಯಾಗಿದ್ದಲ್ಲಿ; ಅಥವಾ

(ಎಚ್) ಆತನು ಭಾರತದ ನಾಗರೀಕನಾಗಿರದಿದ್ದಲ್ಲಿ ಅಥವಾ ವಿದೇಶದ ರಾಜ್ಯದ ಪೌರತ್ವವನ್ನು ಸ್ವಇಚ್ಛೆಯಿಂದ ಪಡೆದಿದ್ದಲ್ಲಿ; ಅಥವಾ

(ಐ) ಆತನು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೂಲಕ ವಿಧಾನಮಂಡಲದ ಚುನಾವಣೆಯ ಉದ್ದೇಶಗಳಿಗಾಗಿ ಅನರ್ಹಗೊಂಡಿದ್ದಲ್ಲಿ;

ಪರಂತು, ಯಾವೊಬ್ಬ ವ್ಯಕ್ತಿಯನ್ನು ಆತನಿಗೆ ಇಪ್ಪತ್ತೊಂದು ವರ್ಷಗಳ ವಯಸ್ಸಾಗಿದ್ದಲ್ಲಿ ಆತನನ್ನು ಇಪ್ಪತ್ತೈದುವರ್ಷಗಳಿಗೆ ಕಡಿಮೆಯಿದೆ ಎಂಬ ಆಧಾರದ ಮೇಳೆ ಅನರ್ಹಗೊಳಿಸತಕ್ಕದ್ದಲ್ಲ.

(ಜೆ) ಆತನು, ಪಾಲಿಕೆಯ ಆದೇಶದ ಮೂಲಕ ಮಾಡಲಾದ ಯಾವುದೇ ಕಾರ್ಯದಲ್ಲಿ, ಪಾಲಿಕೆಯೊಂದಿಗೆ ಅಥವಾ ಅದರಡಿಯಲ್ಲಿ ಅಥವಾ ಪಾಲಿಕೆಯ ಮೂಲಕ ಅಥವಾ ಅದರ ಪರವಾಗಿ, ಯಾವುದೇ ಕರಾರಿನಲ್ಲಿಅಥವಾ ಉದ್ಯೋಗದಲ್ಲಿ ನೇರವಾಗಿ ಅಥವಾ ಪರೋಕ್ಷವಾಗಿ, ತಾನಾಗಿಯೋ ಅಥವಾ ತನ್ನ ಪಾಲುದಾರನ ಮೂಲಕ ಯಾವುದೇ ಷೇರು ಅಥವಾ ಹಿತಾಸಕ್ತಿಯನ್ನು ಹೊಂದಿದ್ದಲ್ಲಿ; ಅಥವಾ

(ಕೆ) ಚುನಾವಣೆಯ ಸಿಂಧುತ್ವ ಅಥವಾ ಕ್ರಮಬದ್ಧತೆಯನ್ನು ಪ್ರಶ್ನಿಸುವ ವ್ಯವಹರಣೆಗಳಲ್ಲಿ,

i) ಯಾವುದೇ ಭ್ರಷ್ಟಾಚರಣೆಯ; ಅಥವಾ

ii) ಭಾರತೀಯ ದಂಡ ಸಂಹಿತೆ, 1860ರ 171 ಇ ಅಥವಾ 171 ಎಫ್ ಪ್ರಕರಣದ ಅಡಿಯಲ್ಲಿ ದಂಡನೀಯವಾದ ಯಾವುದೇ ಅಪರಾಧದಲ್ಲಿ ಅಥವಾ ಚುನಾವಣೆಗೆ ಸಂಬಂಧಿಸಿದ ಯಾವುದೇ ಅಪರಾಧದಲ್ಲಿ ತಪ್ಪಿತಸ್ಥನೆಂದು ಕಂಡುಬಂದಲ್ಲಿ ತೀರ್ಪಿನ ದಿನಾಂಕದಿಂದ 6 ವರ್ಷಗಳ ಅವಧಿ ಅಥವಾ ಸರ್ಕಾರದ ಆದೇಶದ ಮೂಲಕ ಅನರ್ಹತೆಯನ್ನು ತೆಗೆದುಹಾಕಿದ್ದ ಹೊರತು:

(ಎಲ್) ಸರಿಯಾದ ಸಮಯದಲ್ಲಿ ಚುನಾವಣಾ ವೆಚ್ಚಗಳ ಲೆಕ್ಕ ಪತ್ರಗಳನ್ನು ದಾಖಲು ಮಾಡಲು ಆತನು ವಿಫಲನಾದಲ್ಲಿ.

(2) ಯಾವೊಬ್ಬ ಕೌನ್ಸಿಲರನು, ತಾನು ಚುನಾಯಿತನಾದ ಅವಧಿಯಲ್ಲಿ,-

(ಎ) (1) ನೇ ಉಪ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಅನರ್ಹತೆಗೆ ಒಳಪಟ್ಟಲ್ಲಿ; ಅಥವಾ

(ಬಿ) ಆತನು,-

(i) ಆಸಕ್ತಿಯಲ್ಲಿ ಭಿನ್ನಾಭಿಪ್ರಾಯ ಹೊಂದಿರುವ; ಅಥವಾ

(ii) ಪಾಲಿಕೆಯ ವಿರುದ್ಧದ ಯಾವುದೇ ವ್ಯವಹರಣೆಯ ಸಮಯದಲ್ಲಿ ತಾನು ತೊಡಗಿಕೊಂಡಿದ್ದೆ, ಯಾವುದೇ ವಿಷಯದ ಚರ್ಚೆಗಳಲ್ಲಿ ಕೌನ್ಸಿಲರ್ ಆಗಿ ಮತಚಲಾಯಿಸಿದ್ದಲ್ಲಿ ಅಥವಾ ಭಾಗವಹಿಸಿದ್ದಲ್ಲಿ; ಅಥವಾ

(ಸಿ) ಪಾಲಿಕೆಯ ಅನುಮತಿಯ ಹೊರತಾಗಿ ಮೂರು ಕ್ರಮಾನುಗತ ತಿಂಗಳುಗಳ ಅವಧಿಯಲ್ಲಿ ಪಾಲಿಕೆಯ ಸಭೆಗಳಿಗೆ ತಾನಾಗಿಯೇ ಗೈರುಹಾಜರಾಗಿದ್ದಲ್ಲಿ;

ಪರಂತು, ಪಾಲಿಕೆಯ ಸಭೆಗಳಿಂದ ಗೈರು ಹಾಜರಾಗುವ ಪ್ರಕರಣದಲ್ಲಿ ಆರು ಕ್ರಮಾನುಗತ ತಿಂಗಳುಗಳ ಮೀರಿದ ಅವಧಿಗೆ ಅನುಮತಿಯನ್ನು ನೀಡತಕ್ಕದ್ದಲ್ಲ;

ಮತ್ತು ಪರಂತು, ಕೌನ್ಸಿಲರನು ತನ್ನ ಮೂಲಕ ತಾನು ಗೈರುಹಾಜರಾಗಲು ಅನುಮತಿಗಾಗಿ ಪಾಲಿಕೆಗೆ ಅರ್ಜಿಯನ್ನು ಸಲ್ಲಿಸಿದ್ದು ಮತ್ತು ಅರ್ಜಿಯ ದಿನಾಂಕ ದಿಂದ ಏಳು ದಿನಗಳ ಅವಧಿಯೊಳಗೆ ಅರ್ಜಿಯ ಮೇಲಿನ ತನ್ನ ನಿರ್ಧಾರವನ್ನು ಅರ್ಜಿದಾರನಿಗೆ ತಿಳಿಸಲು ಪಾಲಿಕೆಯು ತಪ್ಪಿದಲ್ಲಿ, ಸಲ್ಲಿಸಿದ ರಜೆ ಅರ್ಜಿಯು ಪಾಲಿಕೆಯ ಮೂಲಕ ಮಂಜೂರಾಗಿದೆಯೆಂದು ಭಾವಿಸತಕ್ಕದ್ದು. ಮುಖ್ಯ ಆಯುಕ್ತನು, ತಾನಾಗಿಯೇ ಆಗಲೀ ಅಥವಾ ತನಗೆ ಮಾಡಲಾದ ವರದಿಯ ಮೇಲಾಗಲೀ, ತಾನು ಸೂಕ್ತವೆಂದು ಭಾವಿಸುವ ಅಂಥ ವಿಚಾರಣೆಯ ತರುವಾಯ, ಆದೇಶದ ಮೂಲಕ, ಸಂಬಂಧ ಪಟ್ಟ ವ್ಯಕ್ತಿಯ ಸ್ಥಾನವು ಖಾಲಿಯಾಗಿದೆಯೇ ಅಥವಾ ಇಲ್ಲವೇ ಎಂಬುದನ್ನು ನಿರ್ಧರಿಸಬಹುದು. ಸಾಧ್ಯವಾದಷ್ಟು, ವರದಿಯ ಸ್ವೀಕೃತಿಯ ದಿನಾಂಕ ದಿಂದ ಏಳು ದಿನಗಳೊಳಗಾಗಿ ಅಥವಾ ತಾನಾಗಿಯೇ ಕ್ರಮ ಕೈಗೊಂಡಿದ್ದಲ್ಲಿ, ಅದರ ತಿಳುವಳಿಕೆಯಿಂದ ಮೂವತ್ತು ದಿನಗಳೊಳಗಾಗಿ ಅಂಥ ಆದೇಶವನ್ನು ಮಾಡತಕ್ಕದ್ದು.

(3) (2) ನೇ ಉಪಪ್ರಕರಣದ ಅಡಿಯಲ್ಲಿ ಮುಖ್ಯ ಆಯುಕ್ತನ ನಿರ್ಧಾರದಿಂದ ಮೂವತ್ತು ದಿನಗಳೊಳಗಾಗಿ, ಸರ್ಕಾರಕ್ಕೆ ಅಪೀಲು ಸಲ್ಲಿಸಬಹುದು ಮತ್ತು ಅಂಥ ಅಪೀಲಿನ ಮೇಲೆ ಸರ್ಕಾರವು ಹೊರಡಿಸಿದ ಆದೇಶಗಳು ಅಂತಿಮವಾಗಿರತಕ್ಕದ್ದು.

ಪರಂತು, ಯಾವೊಬ್ಬ ಕೌನ್ಸಿಲರನ ವಿರುದ್ಧ, ಆತನಿಗೆ ತನ್ನ ಅಹವಾಲನ್ನು ಹೇಳಿಕೊಳ್ಳಲು ಯುಕ್ತವಾದ ಅವಕಾಶವನ್ನು ನೀಡದಹೊರತು (2) ಮತ್ತು (3)ನೇ ಉಪಪ್ರಕರಣಗಳ ಅಡಿಯಲ್ಲಿ ಯಾವುದೇ ಆದೇಶವನ್ನು ಹೊರಡಿಸತಕ್ಕದ್ದಲ್ಲ.

20. ಸಮಾನ ಮತಗಳು.- ಇಬ್ಬರು ಅಥವಾ ಹೆಚ್ಚಿನ ಅಭ್ಯರ್ಥಿಗಳ ನಡುವೆ ಸಮಾನ ಮತಗಳಿದ್ದಲ್ಲಿ, ರಾಜ್ಯ ಚುನಾವಣಾ ಆಯೋಗದ ಪರವಾಗಿ ನೇಮಕವಾದ ಅಧಿಕಾರಿಯು, ಲಾಟ್ ಗಳನ್ನು ಡ್ರಾ ಮಾಡುವ ಮೂಲಕ ಯಾವ ಅಭ್ಯರ್ಥಿಯು ಚುನಾಯಿತನಾಗಿದ್ದಾನೆಂದು ಭಾವಿಸತಕ್ಕದ್ದು.

21. ಫಲಿತಾಂಶಗಳ ಪ್ರಕಟಣೆ.- ಪಾಲಿಕೆಯ ಕೌನ್ಸಿಲರ್‌ಗಳು, ಮೇಯರ್ ಅಥವಾ ಉಪಮೇಯರ್ ಆಗಿ ಚುನಾಯಿತರಾದ ಮತ್ತು ನಾಮನಿರ್ದೇಶಿತರಾದ ವ್ಯಕ್ತಿಗಳ ಹೆಸರನ್ನು ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸತಕ್ಕದ್ದು.

22. ಚುನಾವಣಾ ಪಿಟಿಷನ್.- (1) 21ನೇ ಪ್ರಕರಣದ ಅಡಿಯಲ್ಲಿ ಚುನಾವಣೆಯ ಫಲಿತಾಂಶದ ಪ್ರಕಟಣೆಯ ದಿನಾಂಕ ದಿಂದ ಮೂವತ್ತು ದಿನಗಳೊಳಗೆ, ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಜಿಲ್ಲಾ ನ್ಯಾಯಾಲಯವು ನ್ಯಾಯನಿರ್ಣಯಕ್ಕಾಗಿ ಹಾಜರುಪಡಿಸಿದ ಚುನಾವಣಾ ಪಿಟಿಷನ್ ಮೂಲಕವಾಗಿ ಹೊರತು ಕೌನ್ಸಿಲರ್‌ನ ಯಾವುದೇ ಚುನಾವಣೆಯು ಪ್ರಶ್ನಿತವಾಗತಕ್ಕದ್ದಲ್ಲ.

(2) ಚುನಾವಣಾ ಪಿಟಿಷನ್ ಅನ್ನು 23ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಒಂದು ಅಥವಾ ಹೆಚ್ಚಿನ ಆಧಾರದ ಮೇರೆಗೆ ಹಾಜರು ಪಡಿಸಬಹುದು.

(ಎ) ಅಂಥ ಚುನಾವಣೆಯಲ್ಲಿನ ಯಾವೊಬ್ಬ ಅಭ್ಯರ್ಥಿಯ ಮೂಲಕ, ಅಥವಾ

(ಬಿ) ಸಂಬಂಧಪಟ್ಟ ವಾರ್ಡಿನ ಯಾವೊಬ್ಬ ಮತದಾರನ ಮೂಲಕ.

(3) ಪ್ರತಿಯೊಂದು ಚುನಾವಣಾ ಪಿಟಿಷನ್ ಅನ್ನು ಸಾಧ್ಯವಾದಷ್ಟು ಶೀಘ್ರದಲ್ಲಿ ಅಧಿವಿಚಾರಣೆ ಮಾಡತಕ್ಕದ್ದು ಮತ್ತು (1)ನೇ ಉಪಪ್ರಕರಣದ ಅಡಿಯಲ್ಲಿ ಚುನಾವಣಾ ಪಿಟಿಷನ್ ಅನ್ನು ಹಾಜರು ಪಡಿಸಿದ ದಿನಾಂಕ ದಿಂದ ಆರು ತಿಂಗಳುಗಳ ಒಳಗೆ ಅಧಿವಿಚಾರಣೆಯನ್ನು ಮುಕ್ತಾಯಗೊಳಿಸಲು ಪ್ರಯತ್ನಿಸತಕ್ಕದ್ದು:

ಪರಂತು, ಪಿಟಿಷನರನು ಯಾವುದೇ ಭ್ರಷ್ಟಪದ್ಧತಿಯ ಆರೋಪಯಾಗಿದ್ದಲ್ಲಿ, ಅಂಥ ಭ್ರಷ್ಟಪದ್ಧತಿಯ ಆರೋಪವನ್ನು ಮತ್ತು ಅದರ ವಿವರಗಳನ್ನು ಬೆಂಬಲಿಸುವಲ್ಲಿ ನಿಯಮಿಸಲಾದ ನಮೂನೆಯಲ್ಲಿನ ಒಂದು ಶಪಥ ಪತ್ರವೂಕೂಡಾ ಪಿಟಿಷನ್‌ನ ಜೊತೆಯಿರತಕ್ಕದು,

23. ಚುನಾವಣೆಗಳು ಶೂನ್ಯವೆಂದು (void) ಘೋಷಿಸಲು ಆಧಾರಗಳು.- (1) ನ್ಯಾಯಾಲಯವು, ಚುನಾಯಿತ ಅಭ್ಯರ್ಥಿಯ ಚುನಾವಣೆಯು ಶೂನ್ಯವೆಂದು ಘೋಷಿಸತಕ್ಕದ್ದು,-

(ಎ) ಚುನಾವಣಾ ಅಭ್ಯರ್ಥಿಯ ಚುನಾವಣೆಯ ದಿನಾಂಕದಂದು ಆತನು ಈ ಅಧಿನಿಯಮದ ಅಡಿಯಲ್ಲಿ ಕೌನ್ಸಿಲರ್ ಆಗಿ ಆಯ್ಕೆಯಾಗಲು ಅರ್ಹನಾಗಿರಲಿಲ್ಲವೆಂದು ಅಥವಾ ಅನರ್ಹನಾಗಿದ್ದಾನೆಂದು;

(ಬಿ) ಚುನಾಯಿತ ಅಭ್ಯರ್ಥಿ ಅಥವಾ ಆತನ ಚುನಾವಣಾ ಏಜೆಂಟ್‌ನ ಮೂಲಕ ಅಥವಾ ಚುನಾಯಿತ ಅಭ್ಯರ್ಥಿ ಅಥವಾ ಆತನ ಚುನಾವಣಾ ಏಜೆಂಟ್‌ನ ಸಮ್ಮತಿಯೊಂದಿಗೆ ಇತರ ಯಾವೊಬ್ಬ ವ್ಯಕ್ತಿಯ ಮೂಲಕ ಯಾವುದೇ ಭ್ರಷ್ಟ ಆಚಾರವನ್ನು ಎಸಗಲಾಗಿದೆಯೆಂದು ; ಅಥವಾ

(ಸಿ) ಯಾವುದೇ ನಾಮನಿರ್ದೇಶನವನ್ನು ಅನುಚಿತವಾಗಿ ತಿರಸ್ಕರಿಸಲಾಗಿದೆಯೆಂದು;

(ಡಿ) ಚುನಾಯಿತ ಅಭ್ಯರ್ಥಿಗೆ ಸಂಬಂಧಿಸಿರುವಷ್ಟರ ಮಟ್ಟಿಗೆ ಚುನಾವಣಾ ಫಲಿತಾಂಶವು,-

(i) ಯಾವುದೇ ನಾಮನಿರ್ದೇಶನದ ಅನುಚಿತ ಅಂಗೀಕಾರದ ಮೂಲಕ; ಅಥವಾ

(ii) ಚುನಾಯಿತ ಅಭ್ಯರ್ಥಿಯ ಚುನಾವಣಾ ಏಜೆಂಟ್‌ನ ಹೊರತಾಗಿನ ಏಜೆಂಟ್‌ನ ಮೂಲಕ ಆತನ ಹಿತಾಸಕ್ತಿಗಳಿಗಾಗಿ ಯಾವುದೇ ಭ್ರಷ್ಟಆಚಾರವನ್ನು ಎಸಗುವುದರ ಮೂಲ; ಅಥವಾ

(iii) ಯಾವುದೇ ಮತದ ಅನುಚಿತ ಸ್ವೀಕೃತಿ, ನಿರಾಕರಣೆ ಅಥವಾ ಶೂನ್ಯವಾದ ಯಾವುದೇ ಮತದ ಸ್ವೀಕೃತಿಯ ಮೂಲಕ; ಅಥವಾ

(iv) ಈ ಅಧಿನಿಯಮ ಅಥವಾ ಅದರಡಿಯಲ್ಲಿ ಮಾಡಲಾದ ಯಾವುದೇ ಅನನುಪಾಲನೆಯ (non-compliance) ಮೂಲಕವಾಗಿ, ವಾಸ್ತವವಾಗಿ ಬಾಧಿತವಾಗಿದೆಯೆಂದು ನ್ಯಾಯಾಲಯವು ಅಭಿಪ್ರಾಯಪಟ್ಟರೆ ಅದು ಚುನಾಯಿತ ಅಭ್ಯರ್ಥಿಯ ಚುನಾವಣೆಯು ಶೂನ್ಯವೆಂದು ಘೋಷಿಸತಕ್ಕದ್ದು.

(2) ಚುನಾಯಿತ ಅಭ್ಯರ್ಥಿಯ ಚುನಾವಣಾ ಏಜೆಂಟ್ ಅನ್ನು ಹೊರತುಪಡಿಸಿ ಒಬ್ಬ ವ್ಯಕ್ತಿಯ ಮೂಲಕ ಚುನಾಯಿತ ಅಭ್ಯರ್ಥಿಯು ತಪ್ಪಿತಸ್ಥನೆಂದು ನ್ಯಾಯಾಲಯವು ಅಭಿಪ್ರಾಯಪಟ್ಟಲ್ಲಿ, ಆದರೆ ನ್ಯಾಯಾಲಯವು,

(ಎ) ಅಭ್ಯರ್ಥಿ ಅಥವಾ ಆತನ ಚುನಾವಣಾ ಏಜೆಂಟನ ಮೂಲಕ ಚುನಾವಣೆಯಲ್ಲಿ ಅಂಥ ಭ್ರಷ್ಟ ಆಚಾರವು ನಡೆದಿಲ್ಲವೆಂದು ಮತ್ತು ಪ್ರತಿಯೊಂದು ಅಂಥ ಭ್ರಷ್ಟ ಆಚಾರವು ಆದೇಶಗಳ ವಿರುದ್ಧವಾಗಿ ಮತ್ತು ಅಭ್ಯರ್ಥಿಯ ಅಥವಾ ಆತನ ಚುನಾವಣಾ ಏಜೆಂಟ್‌ನ ಸಮ್ಮತಿಯಿಲ್ಲದೆ ಅದನ್ನು ಎಸಗಲಾಗಿದೆಯೆಂದು;

(ಬಿ) ಅಭ್ಯರ್ಥಿ ಮತ್ತು ಚುನಾವಣಾ ಏಜೆಂಟನು ಚುನಾವಣೆಯಲ್ಲಿ ಭ್ರಷ್ಟ ಆಚಾರವನ್ನು ಎಸಗುವುದನ್ನು ತಡೆಗಟ್ಟಲು ಎಲ್ಲಾ ಯುಕ್ತ ಮಾರ್ಗಗಳನ್ನು ತೆಗೆದುಕೊಂಡಿದ್ದಾರೆಂದು;

(ಸಿ) ಚುನಾವಣೆಯು ಎಲ್ಲಾ ಇತರೆ ಅಂಶಗಳಲ್ಲಿ ಅಭ್ಯರ್ಥಿ ಅಥವಾ ಆತನ ಯಾವೊಬ್ಬ ಏಜೆಂಟ್ ಪರವಾಗಿನ ಯಾವುದೇ ಭ್ರಷ್ಟಆಚಾರದಿಂದ ಮುಕ್ತವಾಗಿದೆಯೆಂದು,

-ಮನಗಂಡರೆ, ಆಗ ನ್ಯಾಯಾಲಯವು ಚುನಾಯಿತ ಅಭ್ಯರ್ಥಿಯ ಚುನಾವಣೆಯು ಶೂನ್ಯವಲ್ಲವೆಂದು ನಿರ್ಧರಿಸಬಹುದು.

24. ನ್ಯಾಯಾಲಯವು ಅನುಸರಿಸಬೇಕಾದ ಪ್ರಕ್ರಿಯೆ.- ದಾವೆಗಳಿಗೆ ಸಂಬಂಧಿಸಿದಂತೆ, 1908ರ ಸಿವಿಲ್ ಪ್ರಕ್ರಿಯಾ ಸಂಹಿತೆಯಲ್ಲಿ ಉಪಬಂಧಿಸಿರುವ ಪ್ರಕ್ರಿಯೆಯನ್ನು ಈ ಅಧಿನಿಯಮದ ಮೇರೆಗಿನ ಚುನಾವಣಾ ತಕರಾರು ಅರ್ಜಿಯ ಅಧಿವಿಚಾರಣೆಯಲ್ಲಿ ಮತ್ತು ವಿಲೇಯಲ್ಲಿ ಆ ಪ್ರಕ್ರಿಯೆಯನ್ನು ಅನ್ವಯ ಮಾಡಬಹುದಾದಷ್ಟರಮಟ್ಟಿಗೆ ನ್ಯಾಯಾಲಯವು ಅನುಸರಿಸತಕ್ಕದ್ದು.

25. ನ್ಯಾಯಾಲಯದ ತೀರ್ಮಾನ.- (1) ಚುನಾವಣಾ ಪಿಟಿಷನ್‌ನ ಅಧಿವಿಚಾರಣೆಯ ಮುಕ್ತಾಯದಲ್ಲಿ, ನ್ಯಾಯಾಲಯವು ಈ ಮುಂದಿನಂತೆ ಆದೇಶಿಸತಕ್ಕದ್ದು, ಎಂದರೆ:-

(ಎ) ಚುನಾವಣಾ ಪಿಟಿಷನ್ ಅನ್ನು ವಜಾಗೊಳಿಸುವುದು; ಅಥವಾ

(ಬಿ) ಎಲ್ಲಾ ಅಥವಾ ಯಾವೊಬ್ಬ ಚುನಾಯಿತ ಅಭ್ಯರ್ಥಿಯ ಚುನಾವಣೆಯನ್ನು ಶೂನ್ಯವೆಂದು ಘೋಷಿಸುವುದು; ಅಥವಾ

(ಸಿ) ಎಲ್ಲಾ ಅಥವಾ ಯಾವೊಬ್ಬ ಚುನಾಯಿತ ಅಭ್ಯರ್ಥಿಯ ಚುನಾವಣೆಯನ್ನು ಶೂನ್ಯವೆಂದು ಮತ್ತು ಪಿಟಿಷನ್‌ದಾರ ಅಥವಾ ಯಾವೊಬ್ಬ ಇತರ ಅಭ್ಯರ್ಥಿಯು ಯುಕ್ತನಾಗಿ ಚುನಾಯಿತನಾಗಿದ್ದಾನೆಂದು ಘೋಷಿಸುವುದು.

(2) ಯಾವೊಬ್ಬ ವ್ಯಕ್ತಿಯು ಚುನಾವಣಾ ಪಿಟಿಷನ್ ಅನ್ನು ದಾಖಲ್ಮಾಡಿ ಚುನಾಯಿತ ಅಭ್ಯರ್ಥಿಯ ಪ್ರಶ್ನಿತ ಚುನಾವಣಿಗೆ ಹೆಚ್ಚುವರಿಯಾಗಿ, ತಾನೇ ಅಥವಾ ಯಾವೊಬ್ಬ ಇತರ ಅಭ್ಯರ್ಥಿಯು ಯುಕ್ತವಾಗಿ ಚುನಾಯಿತನಾಗಿದ್ದಾನೆಂಬ ಘೋಷಣೆಯನ್ನು ಕೇ್ಲಮು ಮಾಡಿದ್ದಲ್ಲಿ ಮತ್ತು ನ್ಯಾಯಾಲಯವು,-

(ಎ) ಪಿಟಿಷನ್‌ದಾರ ಅಥವಾ ಅಂಥ ಇತರ ಅಭ್ಯರ್ಥಿಯು ಸಿಂಧುವಾದ ಬಹುಮತಗಳನ್ನು ವಾಸ್ತವವಾಗಿ ಪಡೆದಿದ್ದಾನೆಂದು; ಅಥವಾ

(ಬಿ) ಚುನಾಯಿತ ಅಭ್ಯರ್ಥಿಯು ಭ್ರಷ್ಟ ಆಚಾರಗಳ ಮೂಲಕ ಪಡೆದ ಮತಗಳ ಹೊರತಾಗಿ ಪಿಟಿಷನರ್ ಅಥವಾ ಅಂಥ ಇತರ ಅಭ್ಯರ್ಥಿಯು ಸಿಂಧುವಾದ ಬಹುಮತಗಳನ್ನು ಪಡೆಯಬಹುದಿತ್ತೆಂದು,

- ಅಭಿಪ್ರಾಯ ಪಟ್ಟರೆ, ನ್ಯಾಯಾಲಯವು, ಚುನಾಯಿತ ಅಭ್ಯರ್ಥಿಯ ಚುನಾವಣೆಯು ಶೂನ್ಯವೆಂದು ಘೋಷಿಸಿದ ತರುವಾಯ, ಪಿಟಿಷನ್‌ದಾರ ಅಥವಾ ಸಂದರ್ಭಾನುಸಾರವಾಗಿ ಅಂಥ ಇತರ ಅಭ್ಯರ್ಥಿಯು ಯುಕ್ತವಾಗಿ ಚುನಾಯಿತನಾಗಿದ್ದಾನೆಂದು ಘೋಷಿಸತಕ್ಕದ್ದು.

(3) ಚುನಾವಣಾ ಪಿಟಿಷನ್‌ನ ಅಧಿವಿಚಾರಣೆಯಲ್ಲಿ ಚುನಾವಣೆಯಲ್ಲಿ ಯಾವುದೇ ಅಭ್ಯರ್ಥಿಗಳ ನಡುವೆ ಸಮಾನ ಮತಗಳು ಇವೆ ಎಂದು ಮತ್ತು ಒಂದು ಮತವನ್ನು ಸೇರಿಸಿದರೆ ಆ ಯಾವುದೇ ಅಭ್ಯರ್ಥಿಗಳು ಚುನಾಯಿತರೆಂದು ಘೋಷಿತರಾಗಲು ಹಕ್ಕುಳ್ಳವರಾಗುತ್ತಾರೆಂದು, ಕಂಡು ಬಂದರೆ ಆಗ, ನ್ಯಾಯಾಲಯವು ಲಾಟ್ ಮೂಲಕ ಅವರ ನಡುವೆ ತೀರ್ಮಾನಿಸತಕ್ಕದ್ದು ಮತ್ತು ಲಾಟ್ ಯಾರ ಪರವಾಗಿ ಬಿದ್ದಿದೆಯೋ ಆತನು ಹೆಚ್ಚಿನ ಒಂದು ಮತವನ್ನು ಪಡೆದಿದ್ದಾನೆಯೋ ಎಂಬಂತೆ ಮುಂದುವರೆಯತಕ್ಕದ್ದು.

26 ಅಪೀಲು.- ಆದೇಶದ ಪ್ರತಿಯನ್ನು ಪಡೆದುಕೊಳ್ಳಲು ಅಗತ್ಯವಾದ ಸಮಯವನ್ನು ಹೊರತುಪಡಿಸಿ ನ್ಯಾಯಾಲಯದ ಆದೇಶದ ದಿನಾಂಕದಿಂದ ಮೂವತ್ತು ದಿನಗಳ ಅವಧಿಯೊಳಗೆ 25ನೇ ಪ್ರಕರಣದ ಅಡಿಯಲ್ಲಿ ಜಿಲ್ಲಾ ನ್ಯಾಯಾಲಯದ ಆದೇಶದಿಂದ ಉಚ್ಚನ್ಯಾಯಾಲಯಕ್ಕೆ ಅಪೀಲು ಹೋಗತಕ್ಕದ್ದು:

ಪರಂತು, ಸದರಿ ಅವಧಿಯೊಳಗೆ ಅಪೀಲನ್ನು ಸಲ್ಲಿಸದಿರಲು ಅಪೀಲುದಾರನಿಗೆ ಸಾಕಷ್ಟು ಕಾರಣಗಳಿತ್ತೆಂದು ನ್ಯಾಯಾಲಯವು ಮನಗಂಡರೆ ಸದರಿ ಮೂವತ್ತು ದಿನಗಳ ಅವಧಿಯು ಮುಕ್ತಾಯವಾದ ತರುವಾಯವೂ ಉಚ್ಚನ್ಯಾಯಾಲಯವು ಅಪೀಲನ್ನು ಪುರಸ್ಕರಿಸಬಹುದು.

27. ಭ್ರಷ್ಟ ಆಚಾರಗಳು.- ಈ ಅಧಿನಿಯಮದ ಉದ್ದೇಶಗಳಿಗಾಗಿ ಈ ಮುಂದಿನವುಗಳನ್ನು ಭ್ರಷ್ಟ ಆಚಾರಗಳೆಂದು ಭಾವಿಸತಕ್ಕದ್ದು, ಎಂದರೆ:-

(1) ತತ್ಕಾಲದಲ್ಲಿ ಜಾರಿಯಲ್ಲಿ ಜನಪ್ರತಿನಿಧಿಗಳ ಅಧಿನಿಯಮ, 1951ರ (1951ರ ಕೇಂದ್ರ ಅಧಿನಿಯಮ 43) 123ನೇ ಪ್ರಕರಣದ (1)ನೇ ಖಂಡದಲ್ಲಿ ಪರಿಭಾಷಿಸಿದಂತೆ 'ಲಂಚಗುಳಿತನ';

(2) ತತ್ಕಾಲದಲ್ಲಿ ಜಾರಿಯಲ್ಲಿರುವ ಸದರಿ ಪ್ರಕರಣದ (2)ನೇ ಖಂಡದಲ್ಲಿ ಪರಿಭಾಷಿಸಿದಂತೆ 'ಪ್ರಭಾವಕ್ಕೊಳಗಾಗುವುದು';

(3) ಯಾವೊಬ್ಬ ವ್ಯಕ್ತಿಗೆ ಆತನ ಧರ್ಮ, ಜನಾಂಗ, ಜಾತಿ, ಸಮುದಾಯ ಅಥವಾ ಭಾಷೆಯ ಆಧಾರದ ಮೇಲೆ, ಅಥವಾ ಧಾರ್ಮಿಕ ಚಿಹ್ನೆಗಳ ಬಳಕೆ ಅಥವಾ ಅಪೀಲು ಮಾಡುವ ಅಥವಾ ಆ ಅಭ್ಯರ್ಥಿಯ ಚುನಾವಣೆಯ ಪ್ರತೀಕ್ಷೆಗಳ ಮುಂದುವರಿಕೆಗಾಗಿ ಅಥವಾ ಯಾವುದೇ ಅಭ್ಯರ್ಥಿಯ ಚುನಾವಣೆಯಲ್ಲಿ ಪ್ರತಿಕೂಲವಾಗಿ ಪರಿಣಾಮವುಂಟು ಮಾಡಲು ರಾಷ್ಟ್ರಧ್ವಜ ಅಥವಾ ಲಾಂಛನದಂಥ ರಾಷ್ಟ್ರೀಯ ಚಿಹ್ನೆಗಳ ಬಳಕೆ ಅಥವಾ ಅಪೀಲು ಮಾಡುವ ಯಾವೊಬ್ಬ ವ್ಯಕ್ತಿಗೆ ಮತ ಹಾಕುವುದು ಅಥವಾ ಅಪೀಲು ಮಾಡುವ ಯಾವೊಬ್ಬ ವ್ಯಕ್ತಿಗೆ ಮತ ಹಾಕುವುದು ಅಥವಾ ಮತಹಾಕದಿರುವಂತೆ ಅಭ್ಯರ್ಥಿಯ ಅಥವಾ ಆತನ ಏಜೆಂಟ್ ಅಥವಾ ಅಭ್ಯರ್ಥಿಯ ಅಥವಾ ಆತನ ಚುನಾವಣಾ ಏಜೆಂಟನ ಸಮ್ಮತಿಯೊಂದಿಗೆ ಯಾವೊಬ್ಬ ಇತರ ವ್ಯಕ್ತಿಯ ಮೂಲಕ ಅಪೀಲು;

(4) ಅಭ್ಯರ್ಥಿ ಅಥವಾ ಆತನ ಏಜೆಂಟ್ ಅಥವಾ ಅಭ್ಯರ್ಥಿ ಅಥವಾ ಆತನ ಚುನಾವಣಾ ಏಜೆಂಟ್‌ನ ಸಮ್ಮತಿಯೊಂದಿಗೆ ಯಾವೊಬ್ಬ ಇತರ ವ್ಯಕ್ತಿಯ ಮೂಲಕ, ಆ ಅಭ್ಯರ್ಥಿಯ ಚುನಾವಣೆಯ ಪ್ರತೀಕ್ಷೆಗಳ ಮುಂದುವರಿಕೆಗಾಗಿ ಅಥವಾ ಯಾವುದೇ ಅಭ್ಯರ್ಥಿಯ ಚುನಾವಣೆಗೆ ಪ್ರತಿಕೂಲವಾದ ಪರಿಣಾಮವುಂಟು ಮಾಡುವುದಕ್ಕಾಗಿ ಧರ್ಮ, ಜನಾಂಗ, ಜಾತಿ, ಸಮುದಾಯ ಅಥವಾ ಭಾಷೆಯ ಆಧಾರದ ಮೇಲೆ ಭಾರತದ ನಾಗರೀಕರ ವಿವಿಧ ವರ್ಗಗಳ ನಡುವೆ ವೈರತ್ವ ಅಥವಾ ದ್ವೇಷದ ಭಾವನೆಗಳನ್ನು ಪ್ರೋತ್ಸಾಹಿಸುವುದು ಅಥವಾ ಪ್ರೋತ್ಸಾಹಿಸಲು ಪ್ರಯತ್ನಿಸುವುದು;

(5) ಅಭ್ಯರ್ಥಿ ಅಥವಾ ಆತನ ಏಜೆಂಟ್ ಅಥವಾ ಅಭ್ಯರ್ಥಿಯ ಅಥವಾ ಆತನ ಚುನಾವಣಾ ಏಜೆಂಟ್‌ನ ಸಮ್ಮತಿಯೊಂದಿಗೆ ಯಾವೊಬ್ಬ ಇತರ ವ್ಯಕ್ತಿಯ ಮೂಲಕ, ತಪ್ಪಾಗಿರುವ ವಾಸ್ತವಾಂಶದ ಯಾವುದೇ ಹೇಳಿಕೆ ಯಾವೊಬ್ಬ ಅಭ್ಯರ್ಥಿಯ ವೈಯಕ್ತಿಕ ಚಾರಿತ್ರ್ಯ ಅಥವಾ ನಡತೆಯ ಸಂಬಂಧದಲ್ಲಿ ಅಥವಾ ಉಮೇದುವಾರಿಕೆಯ ಸಂಬಂಧದಲ್ಲಿ ಆತನು ಅದು ತಪ್ಪೆಂದು ನಂಬುವುದಾಗಲೀ ಅಥವಾ ಸರಿಯೆಂದು ನಂಬದಿರುವ ಮತ್ತು ಅಥವಾ ಆ ಅಭ್ಯರ್ಥಿಯ ಚುನಾವಣೆಯ ಪ್ರತೀಕ್ಷೆಗಳ ಪ್ರತಿಕೂಲಕ್ಕೆ ಯುಕ್ತವಾಗಿ ಗಣನೆಗೆ ತೆಗೆದುಕೊಂಡ ಹೇಳಿಕೆಯನ್ನು ಪ್ರಕಟಿಸುವುದು;

(6) ಅಭ್ಯರ್ಥಿಯು ಅಥವಾ ಅವನ ಏಜೆಂಟನು ಅಥವಾ ಅಭ್ಯರ್ಥಿಯ ಅಥವಾ ಅವನ ಚುನಾವಣಾ ಏಜೆಂಟನ ಸಮ್ಮತಿಯೊಂದಿಗೆ ಇತರ ಯಾರೇ ವ್ಯಕ್ತಿಯು ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳಿಗೆ ಅನುಸಾರವಾಗಿ (ಸ್ವತಃ ಅಭ್ಯರ್ಥಿ ಮತ್ತು ಅವನ ಕುಟುಂಬದ ಸದಸ್ಯರು ಅಥವಾ ಅವನ ಏಜೆಂಟ್ ಇವರನ್ನು ಹೊರತುಪಡಿಸಿ) ಯಾರೇ ಮತದಾರನನ್ನು ಯಾವುದೇ ಮತದಾನ ಕೇಂದ್ರಕ್ಕೆ ಕರೆತರುವುದಕ್ಕಾಗಿ ಅಥವಾ ಆ ಮತದಾನ ಕೇಂದ್ರದಿಂದ ಕರೆದೊಯ್ಯುವುದಕ್ಕಾಗಿ ಹಣ ಸಂದಾಯದ ಮೇಲೆ ಅಥವಾ ಅನ್ಯಥಾ ಯಾವುದೇ ವಾಹನವನ್ನು ಬಾಡಿಗೆಗೆ ಪಡೆಯುವುದು ಅಥವಾ ಒದಗಿಸುವುದು:

ಪರಂತು, ಯಾವುದೇ ಅಂಥ ಮತದಾನ ಕೇಂದ್ರಕ್ಕೆ ಹೋಗುವ ಅಥವಾ ಅಲ್ಲಿಂದ ಬರುವ ಉದ್ದೇಶಕ್ಕಾಗಿ ಮತದಾರನು ತನ್ನ ಖರ್ಚಿನಲ್ಲಿ ಅಥವಾ ಅನೇಕ ಮತದಾರರು ತಮ್ಮ ಜಂಟಿ ಖರ್ಚಿನಲ್ಲಿ ವಾಹನವನ್ನು ಬಾಡಿಗೆಗೆ ಪಡೆಯುವುದು, ಹಾಗೆ ಬಾಡಿಗೆಗೆ ಪಡೆದುಕೊಂಡ ವಾಹನವು ಯಂತ್ರ ಚಾಲಿತ ವಾಹನವಾಗಿರದಿದ್ದರೆ, ಈ ಖಂಡದ ಮೇರೆಗೆ ಅದನ್ನು ಭ್ರಷ್ಟಾಚಾರ ಎಂದು ಭಾವಿಸತಕ್ಕದ್ದಲ್ಲ:

ಮತ್ತೂ ಪರಂತು, ಅಂಥ ಯಾವುದೇ ಮತದಾನ ಕೇಂದ್ರಕ್ಕೆ ಹೋಗುವ ಅಥವಾ ಅಲ್ಲಿಂದ ಬರುವ ಉದ್ದೇಶಕ್ಕಾಗಿ ಯಾರೇ ಮತದಾರನು ತನ್ನ ಸಂತ ಖರ್ಚಿನಲ್ಲಿ ಯಾವುದೇ ಸಾರ್ವಜನಿಕ ಸಾರಿಗೆ ವಾಹನವನ್ನು ಅಥವಾ ಯಾವುದೇ ರೈಲ್ವೆ ಬೋಗಿಯನ್ನು ಉಪಯೋಗಿಸುವುದನ್ನು ಈ ಖಂಡದ ಮೇರೆಗೆ ಭ್ರಷ್ಟಾಚಾರ ಎಂದು ಭಾವಿಸತಕ್ಕದ್ದಲ್ಲ;

ವಿವರಣೆ.- ಈ ಖಂಡದಲ್ಲಿ `ವಾಹನ' ಎಂಬ ಪದಕ್ಕೆ ರಸ್ತೆ ಸಾರಿಗೆ ಉದ್ದೇಶಕ್ಕಾಗಿ ಉಪಯೋಗಿಸುವ ಅಥವಾ ಉಪಯೋಗಿಸಲು ಸಮರ್ಥವಾಗಿರುವ ಯಾವುದೇ ವಾಹನ ಎಂದು ಅರ್ಥ, ಅದು ಯಂತ್ರ ಚಾಲಿತವಾದುದಾಗಿರಬಹುದು ಅಥವಾ ಬೇರೆ ರೀತಿಯದ್ದಾಗಿರಬಹುದು ಮತ್ತು ಅದು ಬೇರೆ ವಾಹನವನ್ನು ಎಳೆಯಲು ಉಪಯೋಗಿಸುವಂಥದ್ದಾಗಿರಬಹುದು ಅಥವಾ ಬೇರೆ ರೀತಿಯದ್ದಾಗಿರಬಹುದು;

(7) ಅಭ್ಯರ್ಥಿ ಅಥವಾ ಆತನ ಏಜೆಂಟ್ ಅಥವಾ ಅಭ್ಯರ್ಥಿ ಅಥವಾ ಆತನ ಚುನಾವಣಾ ಏಜೆಂಟ್ ಸಮ್ಮತಿಯೊಂದಿಗೆ ಯಾವೊಬ್ಬ ಇತರ ವ್ಯಕ್ತಿಯ ಮೂಲಕ, ಆ ಅಭ್ಯರ್ಥಿಯ ಚುನಾವಣೆಯ ಪ್ರತೀಕ್ಷೆಗಳ ಮುಂದುವರಿಕೆಗಾಗಿ ಸರ್ಕಾರದ ಸೇವೆಯಲ್ಲಿರುವ ಅಥವಾ ಪಾಲಿಕೆಯ ಸೇವೆಯಲ್ಲಿರುವ ಯಾವೊಬ್ಬ ವ್ಯಕ್ತಿಯಿಂದ ಯಾವುದೇ ನೆರವನ್ನು (ಮತ ನೀಡುವುದನ್ನು ಹೊರತುಪಡಿಸಿ) ಅಭ್ಯರ್ಥಿಯು ಪಡೆಯುವುದು ಅಥವಾ ದೊರಕಿಸಿಕೊಳ್ಳುವುದು ಅಥವಾ ದುಷ್ಪ್ರೇರಿಸುವುದು ಅಥವಾ ಪಡೆಯಲು ಅಥವಾ ದೊರಕಿಸಿಕೊಳ್ಳಲು ಪ್ರಯತ್ನಿಸುವುದು;

(8) ಭ್ರಷ್ಟ ಆಚಾರವೆಂದು ನಿಯಮಗಳ ಮೂಲಕ ಸರ್ಕಾರವು ನಿರ್ದಿಷ್ಟಪಡಿಸಬಹುದಾದ ಯಾವುದೇ ಇತರ ಪದ್ಧತಿ.

28. ಚುನಾವಣೆಯ ಸಂಬಂಧದಲ್ಲಿ ವರ್ಗಗಳ ನಡುವೆ ವೈರತ್ವವನ್ನು ಪ್ರೋತ್ಸಾಹಿಸುವುದು.- ಈ ಅಧಿನಿಯಮದ ಅಡಿಯಲ್ಲಿ ಚುನಾವಣೆಗೆ ಸಂಬಂಧಿಸಿದಂತೆ ಯಾವೊಬ್ಬ ವ್ಯಕ್ತಿಯು, ಭಾರತದ ನಾಗರಿಕರ ವಿವಿಧ ವರ್ಗಗಳ ನಡುವೆ ಧರ್ಮ, ಜನಾಂಗ, ಜಾತಿ, ಸಮುದಾಯ ಅಥವಾ ಭಾಷೆಯ ಆಧಾರದ ಮೇಲೆ ವೈರತ್ವ ಅಥವಾ ದ್ವೇಷದ ಭಾವನೆಗಳನ್ನು ಪ್ರೋತ್ಸಾಹಿಸುವ ಅಥವಾ ಪ್ರೋತ್ಸಾಹಿಸಲು ಪ್ರಯತ್ನಿಸುವ ಯಾವೊಬ್ಬ ವ್ಯಕ್ತಿಯು, ಅಪರಾಧ ನಿರ್ಣಯವಾದ ಮೇಲೆ, ಮೂರು ವರ್ಷಗಳಿಗೆ ವಿಸ್ತರಿಸಬಹುದಾದ ಕಾರಾವಾಸದೊಂದಿಗೆ ಅಥವಾ ಜುಲ್ಮಾನೆಯೊಂದಿಗೆ ಅಥವಾ ಅವರೆಡರಿಂದಲೂ ದಂಡಿತನಾಗತಕ್ಕದ್ದು.

29. ಚುನಾವಣೆ ಹಿಂದಿನ ಮೊದಲು ಎರಡು ದಿನಗಳು ಹಾಗೂ ಚುನಾವಣೆಯ ದಿನದಂದು ಸಾರ್ವಜನಿಕ ಸಭೆಗಳ ನಿಷೇಧ.- (1) ಯಾವೊಬ್ಬ ವ್ಯಕ್ತಿಯು, ಮತದಾನ ಪ್ರಾರಂಭದ ದಿನಾಂಕದ ಅಥವಾ ಆ ವಾರ್ಡ್‌ನಲ್ಲಿ ಚುನಾವಣೆಗಾಗಿ ಮತದಾನವನ್ನು ಕೈಗೊಂಡ ದಿನ ಅಥವಾ ದಿನಗಳ ಮೊದಲು ನಲವತ್ತೆಂಟು ಗಂಟೆಗಳ ಒಳಗೆ ಯಾವುದೇ ವಾರ್ಡ್‌ನೊಳಗೆ ಯಾವುದೇ ಸಾರ್ವಜನಿಕ ಸಭೆಯನ್ನು ಕರೆಯತಕ್ಕದಲ್ಲ, ಇಡತಕ್ಕದ್ದಲ್ಲ ಅಥವಾ ಹಾಜರಾಗತಕ್ಕದ್ದಲ್ಲ.

(2) (1)ನೇ ಉಪಪ್ರಕರಣದ ಉಪಬಂಧಗಳನ್ನು ಉಲಂಘಿಸುವ ಯಾವೊಬ್ಬ ವ್ಯಕ್ತಿಯು, ಅಪರಾಧ ನಿರ್ಣಯವಾದ ಮೇಲೆ, ಒಂದು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

30. ಚುನಾವಣಾ ಸಭೆಗಳಲ್ಲಿ ಗಲಭೆಗಳು.- (1) ಯಾವೊಬ್ಬ ವ್ಯಕ್ತಿಯು, ಈ ಪ್ರಕರಣಕ್ಕೆ ಅನ್ವಯವಾಗುವ ಸಾರ್ವಜನಿಕ ಸಭೆಯಲ್ಲಿ, ಯಾವ ಕಾರ್ಯಕಲಾಪಗಳ ವ್ಯವಹಾರಕ್ಕಾಗಿ ಸಭೆಯನ್ನು ಕರೆಯಲಾದೆಯೋ ಅದನ್ನು ತಡೆಗಟುವ ಉದ್ದೇಶಕ್ಕಾಗಿ ಅವ್ಯವಸ್ಥಿತವಾದ ವಿಧಾನದಲ್ಲಿ ವರ್ತಿಸುವನೋ, ಅಥವಾ ಇತರರಿಗೆ ಹಾಗೆ ವರ್ತಿಸಲು ಪ್ರಚೋದಿಸುವನೋ, ಆತನು, ಅಪರಾಧ ನಿರ್ಣಯವಾದ ಮೇಲೆ, ಒಂದು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

(2) ಈ ಪ್ರಕರಣವು, ಕೌನ್ಸಿಲರ್ ಅಥವಾ ಕೌನ್ಸಿಲರುಗಳನ್ನು ಚುನಾಯಿಸಲು ಮತದಾನದ ದಿನಾಂಕವನ್ನು ನಿಗದಿಪಡಿಸಿ ಅಧಿಸೂಚನೆಯನ್ನು ಹೊರಡಿಸಿದ ದಿನ ಮತ್ತು ಚುನಾವಣೆಯು ನಡೆಯುವ ದಿನದ ನಡುವೆ ಯಾವುದೇ ವಾರ್ಡ್‌ನಲ್ಲಿ ನಡೆಸುವ ಪಾಲಿಕೆಯ ಚುನಾವಣೆಗಳಿಗೆ ಸಂಬಂಧಿಸಿದ ಯಾವುದೇ ಸಾರ್ಜಜನಿಕ ಸಭೆಗೆ ಅನ್ವಯಿಸುತ್ತದೆ.

(3) ಯಾವೊಬ್ಬ ಪೊಲೀಸ್ ಅಧಿಕಾರಿಯು, (1)ನೇ ಉಪಪ್ರಕಣದ ಅಡಿಯಲ್ಲಿನ ಅಪರಾಧವನ್ನು ಎಸಗಿದ್ದಾನೆಂದು ಯಾವೊಬ್ಬ ವ್ಯಕ್ತಿಯನ್ನು ಯುಕ್ತವಾಗಿ ಸಂದೇಹಿಸಿದಲ್ಲಿ, ಆತನು, ಸಭೆಯ ಅಧ್ಯಕ್ಷನು ಹಾಗೆ ಮಾಡಬೇಕೆಂದು ಕೋರಿದಲ್ಲಿ, ಆ ವ್ಯಕ್ತಿಯನ್ನು ಆತನ ಹೆಸರು ಮತ್ತು ವಿಳಾಸವನ್ನು ತನಗೆ ತಕ್ಷಣವೇ ಘೋಷಿಸಬೇಕೆಂದು ಅಗತ್ಯಪಡಿಸಬಹುದು, ಆ ವ್ಯಕ್ತಿಯು ತನ್ನ ಹೆಸರು ಮತ್ತು ವಿಳಾಸವನ್ನು ಘೋಷಿಸಲು ನಿರಾಕರಿಸಿದರೆ ಅಥವಾ ತಪ್ಪಿದರೆ, ಅಥವಾ ಪೊಲೀಸ್ ಅಧಿಕಾರಿಯು ತಪ್ಪು ಹೆಸರು ಅಥವಾ ವಿಳಾಸವನ್ನು ನೀಡಿದ್ದಾನೆಂದು ಆತನನ್ನು ಯುಕ್ತವಾಗಿ ಸಂದೇಹಿಸಿದರೆ, ಪೊಲೀಸ್ ಅಧಿಕಾರಿಯು ಆತನನ್ನು ವಾರಂಟು ಇಲ್ಲದೆ ದಸ್ತಗಿರಿ ಮಾಡಬಹುದು.

31. ಕರಪತ್ರಗಳು, ಪೋಸ್ಟರುಗಳು ಮತ್ತು ಇತರೆಗಳನ್ನು ಮುದ್ರಿಸುವುದರ ಮೇಲೆ ನಿರ್ಬಂಧ.- (1) ಯಾವೊಬ್ಬ ವ್ಯಕ್ತಿಯು ಮುದ್ರಕ ಮತ್ತು ಪ್ರಕಾಶನದ ಹೆಸರುಗಳು ಮತ್ತು ವಿಳಾಸಗಳನ್ನು ತನ್ನ ಮುಖಪುಟದ ಮೇಲೆ ಹೊಂದಿಲ್ಲದ ಯಾವುದೇ ಚುನಾವಣಾ ಕರಪತ್ರ ಅಥವಾ ಪೋಸ್ಟರ್ ಅನ್ನು ಮುದ್ರಿಸತಕ್ಕದ್ದಲ್ಲ ಅಥವಾ ಪ್ರಕಟಿಸತಕ್ಕದ್ದಲ್ಲ ಅಥವಾ ಮುದ್ರಿಸುವಂತೆ ಅಥವಾ ಪ್ರಕಟಿಸುವಂತೆ ಮಾಡತಕ್ಕದ್ದಲ್ಲ.

(2) ಯಾವೊಬ್ಬ ವ್ಯಕ್ತಿಯು, ತಾನು ಸಹಿಮಾಡಿದ ಮತ್ತು ತನ್ನನ್ನು ವೈಯಕ್ತಿಕವಾಗಿ ಬಲ್ಲ ಇಬ್ಬರು ವ್ಯಕ್ತಿಗಳ ದೃಢೀಕರಣಗೊಳಿಸಿದ ಅದರ ಪ್ರಕಾಶಕನ ಗುರುತಿಸುವ ಘೋಷಣೆಯನ್ನು ಮುದ್ರಕನಿಗೆ ದ್ವಿಪ್ರತಿಯಲ್ಲಿ ನೀಡಿದ ಹೊರತಾಗಿ, ಯಾವುದೇ ಚುನಾವಣಾ ಕರಪತ್ರ ಅಥವಾ ಪೋಸ್ಟರ್ ಅನ್ನು ಮುದ್ರಿಸತಕ್ಕದ್ದಲ್ಲ ಅಥವಾ ಮುದ್ರಿಸುವಂತೆ ಮಾಡತಕ್ಕದ್ದಲ್ಲ.

(3) (1)ನೇ ಉಪಪ್ರಕರಣ ಅಥವಾ (2)ನೇ ಉಪಪ್ರಕರಣದ ಯಾವುದೇ ಉಪಬಂಧಗಳನ್ನು ಉಲಂಘಿಸುವ ಯಾವೊಬ್ಬ ವ್ಯಕ್ತಿಯು, ಅಪರಾಧ ನಿರ್ಣಯವಾದ ಮೇಲೆ, ಆರು ತಿಂಗಳುಗಳಿಗೆ ವಿಸ್ತರಿಸಬಹುದಾದ ಅವಧಿಗಾಗಿನ ಕಾರವಾಸದೊಂದಿಗೆ ಅಥವಾ ಒಂದು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯೊಂದಿಗೆ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

32. ರಹಸ್ಯ ಮತದಾನದ ನಿರ್ವಹಣೆ.- (1) ಈ ಅಧಿನಿಯಮದ ಅಡಿಯಲ್ಲಿ ಚುನಾವಣೆಯಲ್ಲಿ ಮತಗಳನ್ನು ದಾಖಲಿಸುವುದು ಅಥವಾ ಎಣಿಕೆ ಮಾಡುವುದರ ಸಂಬಂಧದಲ್ಲಿ ಯಾವುದೇ ಕರ್ತವ್ಯವನ್ನು ನಿರ್ವಹಿಸುವ ಯಾವೊಬ್ಬ ಅಧಿಕಾರಿ, ನೌಕರ, ಏಜೆಂಟ್ ಅಥವಾ ಇತರ ವ್ಯಕ್ತಿಯು ರಹಸ್ಯ ಮತದಾನವನ್ನು ನಿರ್ವಹಿಸತಕ್ಕದ್ದು ಮತ್ತು ನಿರ್ವಹಿಸುವಲ್ಲಿ ನೆರವು ನೀಡತಕ್ಕದ್ದು ಮತ್ತು ಯಾವುದೇ ಕಾನೂನಿನ ಮೂಲಕ

ಅಥವಾ ಅದರಡಿಯಲ್ಲಿ ಅಧಿಕೃತಗೊಂಡ ಕೆಲವು ಉದ್ದೇಶಕ್ಕಾಗಿ ಯಾವುದೇ ಮಾಹಿತಿಯನ್ನು ಯಾವುದೇ ವ್ಯಕ್ತಿಗೆ ತಿಳಿಸುವುದನ್ನು ಹೊರತುಪಡಿಸಿ, ಅಂಥ ರಹಸ್ಯವನ್ನು ಬಹಿರಂಗಪಡಿಸತಕ್ಕದ್ದಲ್ಲ.

(2) (1)ನೇ ಉಪಪ್ರಕರಣದ ಉಪಬಂಧಗಳನ್ನು ಉಲಂಘಿಸುವ ಯಾವೊಬ್ಬ ವ್ಯಕ್ತಿಯು, ಅಪರಾಧ ನಿರ್ಣಯವಾದ ಮೇಲೆ, ಮೂರು ತಿಂಗಳುಗಳಿಗೆ ವಿಸ್ತರಿಸಬಹುದಾದ ಅವಧಿಗಾಗಿ ಕಾರಾವಾಸದೊಂದಿಗೆ ಅಥವಾ ಜುಲ್ಮಾನೆಯೊಂದಿಗೆ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

33. ಮತಗಟ್ಟೆಗಳಲ್ಲಿ ಅಥವಾ ಅವುಗಳ ಹತ್ತಿರ ಪ್ರಚಾರಮಾಡುವುದರ ಮೇಲೆ ನಿಷೇಧ.- (1) ಯಾವೊಬ್ಬ ವ್ಯಕ್ತಿಯು, ಯಾವುದೇ ಮತಗಟ್ಟೆಯಲ್ಲಿ ಮತದಾನವು ನಡೆಸುವ ದಿನ ಅಥವಾ ದಿನಗಳಂದು, ಮತಗಟ್ಟೆಯಲ್ಲಿ ಅಥವಾ ಮತಗಟ್ಟೆಯ ಒಂದು ನೂರು ಮೀಟರುಗಳ ಅಂತರದೊಳಗಿನ ಯಾವುದೇ ಸಾರ್ವಜನಿಕ ಅಥವಾ ಖಾಸಗಿ ಸ್ಥಳದಲ್ಲಿ ಈ ಮುಂದಿನ ಯಾವುದೇ ಕೃತ್ಯಗಳನ್ನು ಎಸಗತಕ್ಕದ್ದಲ್ಲ, ಎಂದರೆ:-

(ಎ) ಮತಗಳಿಗಾಗಿ ಪ್ರಚಾರಮಾಡುವುದು; ಅಥವಾ

(ಬಿ) ಯಾವೊಬ್ಬ ಮತದಾರನ ಮತವನ್ನು ಕೋರುವುದು, ಅಥವಾ

(ಸಿ) ಯಾವೊಬ್ಬ ನಿರ್ದಿಷ್ಟ ಅಭ್ಯರ್ಥಿಗೆ ಮತಹಾಕದಂತೆ ಯಾವೊಬ್ಬ ಮತದಾರನನ್ನು ಹಿಂಬಾಲಿಸುವುದು; ಅಥವಾ

(ಡಿ) ಚುನಾವಣೆಯಲ್ಲಿ ಮತಹಾಕದಿರುವಂತೆ ಯಾವೊಬ್ಬ ಮತದಾರನನ್ನು ಹಿಂಬಾಲಿಸುವುದು; ಅಥವಾ

(ಇ) ಚುನಾವಣೆಗೆ ಸಂಬಂಧಿಸಿದ (ಸರ್ಕಾರಿ ನೋಟೀಸನ್ನು ಹೊರತುಪಡಿಸಿ) ಯಾವುದೇ ನೋಟೀಸು ಅಥವಾ ಸಂಕೇತವನ್ನು ಪ್ರದರ್ಶಿಸುವುದು.

(2) (1)ನೇ ಉಪಪ್ರಕರಣದ ಉಪಬಂಧಗಳನ್ನು ಉಲಂಘಿಸುವ ಯಾವೊಬ್ಬ ವ್ಯಕ್ತಿಯು ಅಪರಾಧ ನಿರ್ಣಯವಾದಾಗ ಒಂದು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯೊಂದಿಗೆ ದಂಡಿತನಾಗತಕ್ಕದ್ದು.

(3) ಈ ಪ್ರಕರಣದ ಅಡಿಯಲ್ಲಿ ದಂಡನೀಯವಾದ ಅಪರಾಧ ಸಂಜ್ಞೇಯವಾಗಿರತಕ್ಕದ್ದು.

34. ಮತಗಟ್ಟೆಗಳಲ್ಲಿ ಅಥವಾ ಅದರ ಹತ್ತಿರ ಅನುಚಿತ ನಡತೆಗಾಗಿ ದಂಡ.- (1) ಯಾವೊಬ್ಬ ವ್ಯಕ್ತಿಯು, ಯಾವುದೇ ಮತಗಟ್ಟೆಯಲ್ಲಿ ಮತದಾನವು ನಡೆಯುವ ದಿನ ಅಥವಾ ದಿನಗಳಂದು.-

(ಎ) ಮತಗಟ್ಟೆಯೊಳಗೆ ಅಥವಾ ಪ್ರವೇಶಿಸುವಲ್ಲಿ ಅಥವಾ ಅದರ ನೆರೆಹೊರೆಯಲ್ಲಿನ ಯಾವುದೇ ಸಾರ್ವಜನಿಕ ಅಥವಾ ಖಾಸಗಿ ಸ್ಥಳದಲ್ಲಿ, ಮೆಗಾಫೋನ್ ಅಥವಾ ಧ್ವನಿವರ್ಧಕಗಳಂದ ಮಾನವ ಧ್ವನಿಯನ್ನು ಹೆಚ್ಚಿಸುವ ಅಥವಾ ಮತ್ತೆ ಕೇಳಿಸುವಂಥ ಯಾವುದೇ ಸಲಕರಣೆಯನ್ನು ಬಳಸತಕ್ಕದ್ದಲ್ಲ ಅಥವಾ ಕಾರ್ಯಾಚರಣೆ (operate) ಮಾಡತಕ್ಕದ್ದಲ್ಲ; ಅಥವಾ

(ಬಿ) ಮತಗಟ್ಟೆಯೊಳಗೆ ಅಥವಾ ಮತಗಟ್ಟೆಯ ಪ್ರವೇಶದಲ್ಲಿ ಅಥವಾ ಅದರ ನೆರೆಹೊರೆಯಲ್ಲಿನ ಯಾವುದೇ ಸಾರ್ವಜನಿಕ ಅಥವಾ ಖಾಸಗಿ ಸ್ಥಳದಲ್ಲಿ, ಮತನೀಡಲು ಮತಗಟ್ಟೆಗೆ ಬರುವ ಯಾವೊಬ್ಬ ವ್ಯಕ್ತಿಗೆ ತೊಂದರೆ ಉಂಟುಮಾಡುವಂತೆ ಅಥವಾ ಮತಗಟ್ಟೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿಗಳು ಮತ್ತು ಇತರ ವ್ಯಕ್ತಿಯ ಕೆಲಸದಲ್ಲಿ ಹಸ್ತಕ್ಷೇಪಮಾಡುವಂತೆ, ಅರಚುವುದು ಅಥವಾ ಅನ್ಯಥಾ ಅನುಚಿತ ರೀತಿಯಲ್ಲಿ ವರ್ತಿಸತಕ್ಕದ್ದಲ್ಲ;

(2) (1)ನೇ ಉಪಪ್ರಕರಣದ ಉಪಬಂಧಗಳನ್ನು ಉಲಂಘನೆ ಮಾಡುವ ಅಥವಾ ಉದ್ದೇಶಪೂರ್ವಕವಾಗಿ ಉಲಂಘನೆಗೆ ನೆರವಾಗುವ ಅಥವಾ ದುಷ್ಪ್ರೇರಿಸುವ ಯಾವೊಬ್ಬ ವ್ಯಕ್ತಿಯು, ಅಪರಾಧ ನಿರ್ಣಯವಾದಾಗ, ಮೂರು ತಿಂಗಳವರೆಗೆ ವಿಸ್ತರಿಸಬಹುದಾದ ಕಾರಾವಾಸದೊಂದಿಗೆ ಅಥವಾ ಜುಲ್ಮಾನೆಯೊಂದಿಗೆ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು;

(3) ಮತಗಟ್ಟೆಯ ಮತಗಟ್ಟೆ ಅಧಿಕಾರಿಗೆ ಈ ಪ್ರಕರಣದ ಅಡಿಯಲ್ಲಿ ದಂಡನೀಯವಾದ ಅಪರಾಧವನ್ನು ಯಾವೊಬ್ಬ ವ್ಯಕ್ತಿಯು ಎಸಗುತ್ತಿದ್ದಾನೆ ಅಥವಾ ಎಸಗಿದ್ದಾನೆ ಎಂದು ನಂಬಲು ಕಾರಣವಿದ್ದಲ್ಲಿ, ಆತನು ಪೊಲೀಸ್ ಅಧಿಕಾರಿಗೆ ಅಂಥ ವ್ಯಕ್ತಿಯನ್ನು ದಸ್ತಗಿರಿ ಮಾಡುವಂತೆ ನಿರ್ದೇಶಿಸಬಹುದು ಮತ್ತು ಅದರ ಮೇಲೆ ಪೊಲೀಸ್ ಅಧಿಕಾರಿಯು ಆತನನ್ನು ದಸ್ತಿಗಿರಿ ಮಾಡತಕ್ಕದ್ದು. ಯಾವೊಬ್ಬ ಪೊಲೀಸ್ ಅಧಿಕಾರಿಯು, (1)ನೇ ಉಪಪ್ರಕರಣದ ಉಪಬಂಧಗಳ ಯಾವುದೇ ಉಲಂಘನೆಯನ್ನು ತಡೆಗಟುವುದಕ್ಕಾಗಿ ಯುಕ್ತವಾದ ಅವಶ್ಯಕವಾಗಬಹುದಾದ ಯಾವುದೇ ಅಂಥ ಕ್ರಮಗಳನ್ನು ತೆಗೆದುಕೊಳ್ಳಬಹುದು ಮತ್ತು ಅಂಥ ಬಲವನ್ನು (Force) ಬಳಸಬಹುದು ಮತ್ತು ಅಂಥ ಉಲಂಘನೆಗಾಗಿ ಬಳಸಲಾದ ಸಲಕರಣೆಗಳನ್ನು ವಶಪಡಿಸಿಕೊಳ್ಳಬಹುದು.

35. ಚುನಾವಣೆಗಳಲ್ಲಿ ವಾಹನಗಳನ್ನು ಕಾನೂನುಬಾಹಿರವಾಗಿ ಬಾಡಿಗೆಗೆ ಪಡೆಯುವುದಕ್ಕೆ, ಅಥವಾ ಪಡೆದು ಒದಗಿಸುವುದಕ್ಕೆ ದಂಡನೆ.- ಚುನಾವಣೆಯಲ್ಲಿ ಅಥವಾ ಚುನಾವಣೆಗೆ ಸಂಬಂಧಪಟಂತೆ 27ನೇ ಪ್ರಕರಣದ (6)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದಂಥ ಯಾವುದೇ ಭ್ರಷ್ಟಾಚಾರದ ತಪ್ಪಿತಸ್ಥನಾದ ಯಾರೇ ವ್ಯಕ್ತಿಯು ಅಪರಾಧ ನಿರ್ಣಯವಾದ ಮೇಲೆ, ಎರಡುನೂರ ಐವತ್ತು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

36. ಚುನಾವಣೆಗಳಿಗೆ ಸಂಬಂಧಿಸಿದ ಸರ್ಕಾರೀ ಕರ್ತವ್ಯದ ಉಲಂಘನೆಗಳು.- (1) ಈ ಪ್ರಕರಣವು ಅನ್ವಯವಾಗುವ ಯಾರೇ ವ್ಯಕ್ತಿಯು, ಯುಕ್ತ ಕಾರಣವಿಲ್ಲದೆ ತನ್ನ ಸರ್ಕಾರಿ ಕರ್ತವ್ಯವನ್ನು ಉಲಂಘಿಸಿ ಯಾವುದೇ ಕಾರ್ಯದ ಅಥವಾ ಲೋಪದ ತಪ್ಪಿತಸ್ಥನಾಗಿದ್ದರೆ ಅಪರಾಧ ನಿರ್ಣಯವಾದ ಮೇಲೆ ಅವನು ಐದುನೂರು ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

(2) ಮೇಲೆ ಹೇಳಿರುವ ಯಾವುದೇ ಅಂಥ ಕಾರ್ಯಕ್ಕೆ ಅಥವಾ ಲೋಪಕ್ಕೆ ಸಂಬಂಧಿಸಿದಂತೆ ಹಾನಿಪರಿಹಾರಕ್ಕಾಗಿ ಅಂಥ ಯಾರೇ ವ್ಯಕ್ತಿಯ ವಿರುದ್ಧ ಯಾವುದೇ ದಾವೆಯನ್ನು ಅಥವಾ ಇತರ ಕಾನೂನು ವ್ಯವಹರಣೆಯನ್ನು ಹೂಡತಕ್ಕದ್ದಲ್ಲ.

(3) ಈ ಪ್ರಕರಣವು ಅನ್ವಯವಾಗುವ ವ್ಯಕ್ತಿಗಳು ಯಾರೆಂದರೆ, ರಿಟರ್ನಿಂಗ್ ಆಫೀಸರ್, ಅಸಿಸ್ಟೆಂಟ್ ರಿಟರ್ನಿಂಗ್ ಆಫೀಸರ್, ಪ್ರಿಸೈಂಡಿಂಗ್ ಆಫೀಸರ್, ಪೋಲಿಂಗ್ ಆಫೀಸರುಗಳು ಮತ್ತು ಚುನಾವಣೆಯಲ್ಲಿ ಅಭ್ಯರ್ಥಿಯ ನಾಮಪತ್ರಗಳನ್ನು ಸ್ವೀಕರಿಸುವುದಕ್ಕೆ ಅಥವಾ ಉಮೇದುವಾರಿಕೆಯನ್ನು ಹಿಂತೆಗೆದುಕೊಳ್ಳುವುದಕ್ಕೆ ಅಥವಾ ಮತಗಳನ್ನು ದಾಖಲು ಮಾಡುವುದಕ್ಕೆ ಅಥವಾ ಎಣಿಸುವುದಕ್ಕೆ ಸಂಬಂಧಪಟಂತೆ ಯಾವುದೇ ಕರ್ತವ್ಯವನ್ನು ನೆರವೇರಿಸಲು ನೇಮಕಗೊಂಡ ಯಾರೇ ಇತರ ವ್ಯಕ್ತಿ; ಮತ್ತು ಈ ಪ್ರಕರಣದ ಉದ್ದೇಶಗಳಿಗಾಗಿ "ಸರ್ಕಾರೀ ಕರ್ತವ್ಯ" ಎಂಬ ಪದಾವಳಿಯನ್ನು ತದನುಸಾರವಾಗಿ ಅರ್ಥೈಸತಕ್ಕದ್ದು, ಆದರೆ ಅದು ಅಂಥ ಚುನಾವಣೆಗೆ ಸಂಬಂಧಪಟಂತೆ ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ಅಲ್ಲದೆ ಅನ್ಯಥಾ ವಿಧಿಸಿದ ಕರ್ತವ್ಯಗಳನ್ನು ಒಳಗೊಳ್ಳತಕ್ಕದ್ದಲ್ಲ.

37. ರಿಟರ್ನಿಂಗ್ ಆಫೀಸರ್, ಪ್ರಿಸೈಡಿಂಗ್ ಆಫೀಸರ್, ಮುಂತಾದವರು ರಾಜ್ಯ ಚುನಾವಣಾ ಆಯೋಗಕ್ಕೆ ಪ್ರತಿನಿಯೋಜಿತರಾಗಿರುವುದಾಗಿ ಭಾವಿಸತಕ್ಕದ್ದು.- ಈ ಅಧಿನಿಯಮದಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ಈ ಅಧಿನಿಯಮದ ಮೇರೆಗೆ ಕೌನ್ಸಿಲರುಗಳ ಯಾವುದೇ ಚುನಾವಣೆಯನ್ನು ನಡೆಸುವುದಕ್ಕೆ ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ನೇಮಕಗೊಂಡ ರಿಟರ್ನಿಂಗ್ ಆಫೀಸರ್, ಅಸಿಸ್ಟೆಂಟ್ ರಿಟರ್ನಿಂಗ್ ಆಫೀಸರ್, ಪ್ರಿಸೈಡಿಂಗ್ ಆಫೀಸರ್, ಪೋಲಿಂಗ್ ಆಫೀಸರ್ ಮತ್ತು ಇತರ ಯಾರೇ ಅಧಿಕಾರಿಯು ಮತ್ತು ಸರ್ಕಾರವು ತತ್ಕಾಲಕ್ಕೆ ನೇಮಿಸಿದ ಯಾರೇ ಪೊಲೀಸು ಅಧಿಕಾರಿಯು ಅಂಥ ಚುನಾವಣೆಯನ್ನು ನಡೆಸುವುದಕ್ಕೆ ಕರೆ ನೀಡುವ ಅಧಿಸೂಚನೆಯ ದಿನಾಂಕದಂದು ಮತ್ತು ದಿನಾಂಕದಿಂದ ಪ್ರಾರಂಭವಾಗುವ ಮತ್ತು ಅಂಥ ಚುನಾವಣೆಯ ಫಲಿತಾಂಶಗಳನ್ನು ಘೋಷಿಸಿದ ದಿನಾಂಕದೊಂದಿಗೆ ಮುಕ್ತಾಯವಾಗುವ ಅವಧಿಗೆ ರಾಜ್ಯ ಚುನಾವಣಾ ಆಯೋಗಕ್ಕೆ ಪ್ರತಿನಿಯೋಜಿತರಾಗಿರುವುದಾಗಿ ಭಾವಿಸತಕ್ಕದ್ದು ಮತ್ತು ತದನುಸಾರವಾಗಿ ಅಂಥ ಅಧಿಕಾರಿಯು ಆ ಅವಧಿಯಲ್ಲಿ ರಾಜ್ಯ ಚುನಾವಣಾ ಆಯೋಗದ ನಿಯಂತ್ರಣಕ್ಕೆ, ಅಧೀಕ್ಷಣೆಗೆ ಮತ್ತು ಶಿಸ್ತಿಗೆ ಒಳಪಟ್ಟಿರತಕ್ಕದ್ದು.

38. ಚುನಾವಣಾ ಏಜೆಂಟನಾಗಿ, ಪೋಲಿಂಗ್ ಏಜೆಂಟನಾಗಿ ಅಥವಾ ಎಣಿಕೆ ಏಜೆಂಟನಾಗಿ ಕಾರ್ಯ ನಿರ್ವಹಿಸಿದ್ದಕ್ಕಾಗಿ ಸರ್ಕಾರಿ ನೌಕರನಿಗೆ ದಂಡನೆ.- ಸರ್ಕಾರಿ ಸೇವೆಯಲ್ಲಿರುವ ಯಾರೇ ವ್ಯಕ್ತಿಯು ಚುನಾವಣೆಯಲ್ಲಿ ಅಭ್ಯರ್ಥಿಯ ಚುನಾವಣಾ ಏಜೆಂಟ್‌ನಾಗಿ, ಪೋಲಿಂಗ್ ಏಜೆಂಟ್‌ನಾಗಿ ಅಥವಾ ಎಣಿಕೆ ಏಜೆಂಟ್‌ನಾಗಿ ಕಾರ್ಯನಿರ್ವಹಿಸಿದರೆ, ಅವನು ಮೂರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

39. ಮತಗಟ್ಟೆಯಿಂದ ವಿದ್ಯುನ್ಮಾನ ಮತಯಂತ್ರವನ್ನು ತೆಗೆದುಕೊಂಡು ಹೋಗುವುದು ಅಪರಾಧ.- (1) ಯಾರೇ ವ್ಯಕ್ತಿಯು, ಯಾವುದೇ ಚುನಾವಣೆಯಲ್ಲಿ ಮತಗಟ್ಟೆಯಿಂದ ಹೊರಕ್ಕೆ ವಿದ್ಯುನ್ಮಾನ ಮತಯಂತ್ರವನ್ನು ಮೋಸದಿಂದ ತೆಗೆದುಕೊಂಡು ಹೋದರೆ ಅಥವಾ ತೆಗೆದುಕೊಂಡು ಹೋಗಲು ಪ್ರಯತ್ನಿಸಿದರೆ ಅಥವಾ ಅಂಥ ಯಾವುದೇ ಕಾರ್ಯವನ್ನು ಮಾಡುವುದಕ್ಕೆ ಉದ್ದೇಶಪೂರ್ವಕವಾಗಿ ನೆರವಾದರೆ ಅಥವಾ ದುಷ್ಪ್ರೇರಿಸಿದರೆ, ಅವನು, ಅಪರಾಧ ನಿರ್ಣಯವಾದ ಮೇಲೆ ಒಂದು ವರ್ಷದವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಐದುನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

(2) (1)ನೇ ಉಪಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧವನ್ನು ಯಾರೇ ವ್ಯಕ್ತಿಯು ಮಾಡುತ್ತಿದ್ದಾನೆಂದು ಅಥವಾ ಮಾಡಿದ್ದಾನೆಂದು ಮತಗಟ್ಟೆಯ ಪ್ರಿಸೈಡಿಂಗ್ ಆಫೀಸರ್‌ಗೆ ನಂಬಲು ಕಾರಣವಿದ್ದರೆ, ಅಂಥ ಅಧಿಕಾರಿಯು, ಅಂಥ ವ್ಯಕ್ತಿಯು ಮತಗಟ್ಟೆಯನ್ನು ಬಿಡುವುದಕ್ಕೆ ಮುಂಚೆ ಅವನನ್ನು ದಸ್ತಗಿರಿ ಮಾಡಬಹುದು ಅಥವಾ ದಸ್ತಗಿರಿ ಮಾಡುವಂತೆ ಪೊಲೀಸ್ ಅಧಿಕಾರಿಗೆ ನಿರ್ದೇಶಿಸಬಹುದು ಮತ್ತು ಅಂಥ ವ್ಯಕ್ತಿಯ ಶೋಧನೆಯನ್ನು ಮಾಡಬಹುದು ಅಥವಾ ಪೊಲೀಸ್ ಅಧಿಕಾರಿಯಿಂದ ಅಂಥ ವ್ಯಕ್ತಿಯ ಶೋಧನೆ ಮಾಡಿಸಬಹುದು:

ಪರಂತು, ಮಹಿಳೆಯನ್ನು ಶೋಧನೆ ಮಾಡಿಸುವುದು ಅವಶ್ಯವಿರುವಾಗ, ಆ ಶೋಧನೆಯನ್ನು, ಸಭ್ಯತೆಗೆ ಕಟ್ಟುನಿಟ್ಟಾಗಿ ಗಮನ ನೀಡಿ ಮತ್ತೊಬ್ಬ ಮಹಿಳೆಯಿಂದ ಮಾಡಿಸತಕ್ಕದ್ದು.

(3) ದಸ್ತಗಿರಿಯಾದ ವ್ಯಕ್ತಿಯ ಬಳಿ ಶೋಧನೆ ಮಾಡಿದಾಗ ಕಂಡುಬಂದ ಯಾವುದೇ ವಿದ್ಯುನ್ಮಾನ ಮತಯಂತ್ರವನ್ನು ಪ್ರಿಸೈಡಿಂಗ್ ಆಫೀಸರ್ ಪೊಲೀಸ್ ಅಧಿಕಾರಿಗೆ ಸುರಕ್ಷಿತ ಅಭಿರಕ್ಷೆಗಾಗಿ ಒಪ್ಪಿಸತಕ್ಕದ್ದು ಅಥವಾ

ಪೊಲೀಸ್ ಅಧಿಕಾರಿಯು ಶೋಧನೆಯನ್ನು ಮಾಡಿದಾಗ ಅದನ್ನು ಆ ಅಧಿಕಾರಿಯು ಸುರಕ್ಷಿತ ಅಭಿರಕ್ಷೆಯಲ್ಲಿ ಇಟ್ಟುಕೊಳ್ಳತಕ್ಕದ್ದು.

(4) (1)ನೇ ಉಪಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧವು ಸಂಜ್ಞೇಯವಾದುದಾಗಿರತಕ್ಕದ್ದು.

ವಿವರಣೆ: ಈ ಅಧ್ಯಾಯದಲ್ಲಿ ವಿದ್ಯುನ್ಮಾನ ಮತದಾನ ಯಂತ್ರಕ್ಕೆ ಮಾಡಿದ ಉಲ್ಲೇಖವನ್ನು ರಾಜ್ಯ ಚುನಾವಣಾ ಆಯೋಗವು ಮತಪತ್ರದ ಮೂಲಕ ಎಲ್ಲಿ ಚುನಾವಣೆಗಳನ್ನು ನಡೆಸುವುದೋ ಅಲ್ಲೆಲ್ಲಾ ಮತಪತ್ರಕ್ಕೆ ಅಥವಾ ಮತಪೆಟ್ಟಿಗೆಗೆ ಎಂದೂ ಸಹ ಅರ್ಥೈಸಿಕೊಳ್ಳತಕ್ಕದ್ದು.

40. ಇತರ ಅಪರಾಧಗಳು ಮತ್ತು ಅವುಗಳಿಗೆ ದಂಡನೆಗಳು.- (1) ಯಾರೇ ವ್ಯಕ್ತಿಯು ಯಾವುದೇ ಚುನಾವಣೆಯಲ್ಲಿ,-

(ಎ) ಯಾವುದೇ ನಾಮಪತ್ರವನ್ನು ಮೋಸದಿಂದ ವಿರೂಪಗೊಳಿಸಿದರೆ ಅಥವಾ ಮೋಸದಿಂದ ನಾಶಪಡಿಸಿದರೆ; ಅಥವಾ

(ಬಿ) ರಿಟರ್ನಿಂಗ್ ಆಫೀಸರ್‌ರ ಅಧಿಕಾರದ ಮೂಲಕ ಅಥವಾ ಮೇರೆಗೆ ಅಂಟಿಸಲಾದ ಯಾವುದೇ ಪಟ್ಟಿಯನ್ನು ನೋಟೀಸನ್ನು ಅಥವಾ ಇತರ ದಸ್ತಾವೇಜನ್ನು ಮೋಸದಿಂದ ವಿರೂಪಗೊಳಿಸಿದರೆ, ನಾಶಪಡಿಸಿದರೆ ಅಥವಾ ತೆಗೆದುಹಾಕಿದರೆ; ಅಥವಾ

(ಸಿ) ಯಾವುದೇ ಮತಪತ್ರವನ್ನು ಅಥವಾ ಮತಯಂತ್ರವನ್ನು ಅಥವಾ ಯಾವುದೇ ಮತಪತ್ರದ ಅಥವಾ ಮತಯಂತ್ರದ ಮೇಲಿನ ಅಧಿಕೃತ ಗುರುತನ್ನು ಮೋಸದಿಂದ ವಿರೂಪಗೊಳಿಸಿದರೆ ಅಥವಾ ಮೋಸದಿಂದ ನಾಶಪಡಿಸಿದರೆ; ಅಥವಾ

(ಡಿ) ಯುಕ್ತ ಅಧಿಕಾರವಿಲ್ಲದೆ ಯಾರೇ ವ್ಯಕ್ತಿಗೆ ಯಾವುದೇ ಮತಪತ್ರವನ್ನು ಅಥವಾ ಮತಯಂತ್ರ ವನ್ನು ಒದಗಿಸಿದರೆ ಅಥವಾ ಯಾರೇ ವ್ಯಕ್ತಿಯಿಂದ ಯಾವುದೇ ಮತಪತ್ರವನ್ನ ಅಥವಾ ಮತಯಂತ್ರವನ್ನು ಸ್ವೀಕರಿಸಿದರೆ ಅಥವಾ ಯಾವುದೇ ಮತಪತ್ರವನ್ನು ಅಥವಾ ಮತಯಂತ್ರವನ್ನು ಸ್ವಾಧೀನದಲ್ಲಿ ಇಟ್ಟುಕೊಂಡಿದ್ದರೆ; ಅಥವಾ

(ಇ) ಆತನಿಗೆ ಕಾನೂನಿನ ಮೂಲಕ ಮತಹಾಕಲು ಅಧಿಕೃತಗೊಳಿಸಿದ ಕಂಟ್ರೋಲ್ ಯೂನಿಟ್, ಬ್ಯಾಲೆಟ್ ಯೂನಿಟ್ ಮತ್ತು ವಿ.ವಿ ಪ್ಯಾಟ್‌ಗಳನ್ನು ಹೊರತುಪಡಿಸಿದ ಏನನ್ನಾದರೂ ಯಾವುದೇ ವಿದ್ಯುನ್ಮಾನ ಮತಯಂತ್ರದೊಳಗೆ ಮೋಸದಿಂದ ಹಾಕಿದರೆ; ಅಥವಾ

(ಎಫ್) ಸೂಕ್ತ ಅಧಿಕಾರವಿಲ್ಲದೆ ಚುನಾವಣಾ ಉದ್ದೇಶಗಳಿಗಾಗಿ ಆಗ ಬಳಕೆಯಲ್ಲಿದ್ದ ಯಾವುದೇ ಮತಪೆಟ್ಟಿಗೆಯನ್ನು ಅಥವಾ ಮತಪತ್ರಗಳನ್ನು ಅಥವಾ ಮತಯಂತ್ರವನ್ನು ನಾಶಪಡಿಸಿದರೆ, ತೆಗೆದುಕೊಂಡು ಹೋದರೆ, ತೆರೆದರೆ ಅಥವಾ ಅನ್ಯಥಾ ಅವುಗಳಲ್ಲಿ ಹಸ್ತಕ್ಷೇಪ ಮಾಡಿದರೆ; ಅಥವಾ

(ಜಿ) ಸಂದರ್ಭಾನುಸಾರ ಮೋಸದಿಂದ ಅಥವಾ ಸೂಕ್ತ ಅಧಿಕಾರವಿಲ್ಲದೆ, ಮೇಲೆ ಹೇಳಿದ ಕಾರ್ಯಗಳಲ್ಲಿ ಯಾವುದನ್ನಾದರೂ ಮಾಡಲು ಪ್ರಯತ್ನಿಸಿದರೆ ಅಥವಾ ಅಂಥ ಯಾವುದೇ ಕಾರ್ಯಗಳನ್ನು ಮಾಡಲು ಉದ್ದೇಶಪೂರ್ವಕವಾಗಿ ನೆರವು ನೀಡಿದರೆ ಅಥವಾ ದುಷ್ಪ್ರೇರಣೆ ಮಾಡಿದರೆ

- ಅವನು ಚುನಾವಣಾ ಅಪರಾಧದ ತಪ್ಪಿತಸ್ಥನಾಗತಕ್ಕದ್ದು.

(2) ಈ ಪ್ರಕರಣದ ಮೇರೆಗೆ ಚುನಾವಣಾ ಅಪರಾಧದ ತಪ್ಪಿತಸ್ಥನಾಗಿರುವ ಯಾರೇ ವ್ಯಕ್ತಿಯು,-

(ಎ) ಅವನು ಮತಗಟ್ಟೆಯಲ್ಲಿ ರಿಟರ್ನಿಂಗ್ ಆಫೀಸರ್ ಆಗಿದ್ದರೆ ಅಥವಾ ಅಸ್ಸಿಸ್ಟಂಟ್ ರಿಟರ್ನಿಂಗ್ ಆಫೀಸರ್ ಆಗಿದ್ದರೆ ಅಥವಾ ಪ್ರಿಸೈಡಿಂಗ್ ಆಫೀಸರ್ ಆಗಿದ್ದರೆ ಅಥವಾ ಚುನಾವಣೆಗೆ ಸಂಬಂಧಪಟಂತೆ ಸರ್ಕಾರಿ ಕರ್ತವ್ಯದ ಮೇಲೆ ನಿಯೋಜಿತನಾದ ಯಾರೇ ಅಧಿಕಾರಿ ಅಥವಾ ಬೇರೆ ವ್ಯಕ್ತಿಯಾಗಿದ್ದರೆ, ಅವನು, ಅಪರಾಧ ನಿರ್ಣಯವಾದ ಮೇಲೆ ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು;

(ಬಿ) ಅವನು ಇತರ ಯಾರೇ ವ್ಯಕ್ತಿಯಾಗಿದ್ದರೆ, ಅಪರಾಧ ನಿರ್ಣಯವಾದ ಮೇಲೆ ಅವನು, ಆರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

(3) ಈ ಪ್ರಕರಣದ ಉದ್ದೇಶಕ್ಕಾಗಿ ವ್ಯಕ್ತಿಯು ಮತಗಳ ಎಣಿಕೆಯೂ ಒಳಗೊಂಡಂತೆ ಚುನಾವಣೆಯನ್ನು ನಡೆಸುವುದರಲ್ಲಿ ಅಥವಾ ಚುನಾವಣೆಯ ಒಂದು ಭಾಗವನ್ನು ನಡೆಸುವುದರಲ್ಲಿ ಪಾಲ್ಗೊಳ್ಳುವುದು ಅವನ ಕರ್ತವ್ಯವಾಗಿದ್ದರೆ ಅಥವಾ ಅಂಥ ಚುನಾವಣೆಗೆ ಸಂಬಂಧಪಟಂತೆ ಉಪಯೋಗಿಸಲಾದ ಮತಪತ್ರಗಳಿಗೆ ಮತ್ತು ಇತರ ದಸ್ತಾವೇಜುಗಳಿಗೆ ಚುನಾವಣೆಯ ತರುವಾಯವೂ ಜವಾಬ್ದಾರನಾಗಿರುವುದು ಅವನ ಕರ್ತವ್ಯವಾಗಿದ್ದರೆ, ಅವನು ಸರ್ಕಾರಿ ಕರ್ತವ್ಯದ ಮೇಲಿರುವನೆಂದು ಭಾವಿಸತಕ್ಕದ್ದು, ಆದರೆ "ಸರ್ಕಾರೀ ಕರ್ತವ್ಯ" ಎಂಬ ಪದಾವಳಿಯು ಅಂಥ ಚುನಾವಣೆಗೆ ಸಂಬಂಧಪಟಂತೆ ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ಅಲ್ಲದೆ ಅನ್ಯಥಾ ವಿಧಿಸಲಾದ ಯಾವುದೇ ಕರ್ತವ್ಯವನ್ನು ಒಳಗೊಳ್ಳತಕ್ಕದ್ದಲ್ಲ.

(4) (2)ನೇ ಉಪಪ್ರಕರಣದ (ಬಿ) ಖಂಡದ ಮೇರೆಗೆ ದಂಡನೀಯವಾದ ಅಪರಾಧವು ಸಂಜ್ಞೇಯವಾದುದಾಗಿರತಕ್ಕದ್ದು.

41. ಕೆಲವು ಅಪರಾಧಗಳಿಗೆ ಸಂಬಂಧಿಸಿದಂತೆ ಪ್ರಾಸಿಕ್ಯೂಷನ್.- ನಿಯಮಿಸಬಹುದಾದಂಥ ಅಧಿಕಾರಿಯ ಆದೇಶದ ಮೂಲಕ ಅಥವಾ ಅಂಥ ಅಧಿಕಾರಿಯಿಂದ ಪಡೆದ ಅಧಿಕಾರದ ಮೇರೆಗೆ ಮಾಡಿದ್ದ ಫಿರ್ಯಾದು ಇದ್ದ ಹೊರತು, 36ನೇ ಪ್ರಕರಣದ ಮೇರೆಗಿನ ಅಥವಾ 40ನೇ ಪ್ರಕರಣದ (2)ನೇ ಉಪಪ್ರಕರಣದ (ಎ) ಖಂಡದ ಮೇರೆಗಿನ ಯಾವುದೇ ಅಪರಾಧವನ್ನು ಯಾವುದೇ ನ್ಯಾಯಾಲಯವು ಸಂಜ್ಞೇಯಕ್ಕೆ ತೆಗೆದುಕೊಳ್ಳತಕ್ಕದ್ದಲ್ಲ.

42.ಮತದಾನದ ಹಕ್ಕು.- ಮತದಾರರ ಪಟ್ಟಿಯಲ್ಲಿ ಯಾರ ಹೆಸರು ಇರುವುದೋ ಆ ಪ್ರತಿಯೊಬ್ಬ ವ್ಯಕ್ತಿಯು, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ಅನರ್ಹಗೊಂಡಿದ್ದ ಹೊರತು, ಯಾವ ವಿಭಾಗಕ್ಕೆ ಅಂಥ ಪಟ್ಟಿಯು ಸಂಬಂಧಪಟ್ಟಿರುತ್ತದೋ, ಆ ವಿಭಾಗಕ್ಕೆ ನಡೆಯುವ ಕೌನ್ಸಿಲರ್ನ ಚುನಾವಣೆಯಲ್ಲಿ ಮತದಾನ ಮಾಡಲು ಅರ್ಹನಾಗಿರತಕ್ಕದ್ದು:

43. ಚುನಾವಣಾ ವೆಚ್ಚಗಳ ಲೆಕ್ಕ ಮತ್ತು ಅದರ ಗರಿಷ್ಠಮಿತಿ.- (1) ಈ ಅಧಿನಿಯಮದ ಮೇರೆಗೆ, ಚುನಾವಣಾ ಕಣದಲ್ಲಿರುವ ಪ್ರತಿಯೊಬ್ಬ ಅಭ್ಯರ್ಥಿಯು, ಅವನು ಚುನಾವಣಾ ಅಭ್ಯರ್ಥಿಯಾಗಿ ನಾಮನಿರ್ದೇಶಿತನಾದ ದಿನಾಂಕ ಮತ್ತು ಚುನಾವಣಾ ಫಲಿತಾಂಶದ ಘೋಷಣೆಯ ದಿನಾಂಕ ಎರಡೂ ದಿನಗಳು ಸೇರಿ, ಇವುಗಳ ನಡುವಣ ಅವಧಿಯಲ್ಲಿ, ಅವನು ಅಥವಾ ಅವನ ಚುನಾವಣಾ ಏಜೆಂಟನು ವಹಿಸಿದ ಅಥವಾ ಅಧಿಕೃತಗೊಳಿಸಿದ, ಚುನಾವಣೆಗೆ ಸಂಬಂಧಿಸಿದ ಎಲ್ಲ ವೆಚ್ಚಗಳ ಬಗ್ಗೆ ಪ್ರತ್ಯೇಕವಾದ ಮತ್ತು ಸರಿಯಾದ ಲೆಕ್ಕವನ್ನು ಸ್ವತ: ತಾನಾಗಲೀ ಅಥವಾ ತನ್ನ ಚುನಾವಣಾ ಏಜೆಂಟನಾಗಲೀ ಇಡತಕ್ಕದ್ದು.

(2) ಈ ಅಧಿನಿಯಮದ ಮೇರೆಗೆ, ಅಭ್ಯರ್ಥಿಯ ಚುನಾವಣೆಗೆ ಸಂಬಂಧಿಸಿದಂತೆ ಒಂದು ರಾಜಕೀಯ ಪಕ್ಷವು ಅಥವಾ ಇತರ ಯಾವುದೇ ಸಂಘವು ಅಥವಾ ನಿಕಾಯವು ಅಥವಾ ವ್ಯಕ್ತಿಗಳು ಅಥವಾ ಯಾರೇ ವ್ಯಕ್ತಿಯು (ಅಭ್ಯರ್ಥಿಯನ್ನು ಅಥವಾ ಅವನ ಚುನಾವಣಾ ಏಜೆಂಟನನ್ನು ಹೊರತುಪಡಿಸಿ) ವಹಿಸಿದ ಅಥವಾ ಅಧಿಕೃತಗೊಳಿಸಿದ ಯಾವುದೇ ವೆಚ್ಚವನ್ನು (1)ನೇ ಉಪಪ್ರಕರಣದ ಉದ್ದೇಶಕ್ಕಾಗಿ, ಅಭ್ಯರ್ಥಿಯು ಅಥವಾ ಅವನ ಚುನಾವಣಾ ಏಜೆಂಟನು, ಚುನಾವಣೆಗೆ ಸಂಬಂಧಿಸಿದಂತೆ ವಹಿಸಿದ ಅಥವಾ ಅಧಿಕೃತಗೊಳಿಸಿದ ವೆಚ್ಚವೆಂದು ಭಾವಿಸತಕ್ಕದ್ದಲ್ಲ.

ವಿವರಣೆ 1.- ಈ ಉಪಪ್ರಕರಣದ ಉದ್ದೇಶಕ್ಕಾಗಿ ``ರಾಜಕೀಯ ಪಕ್ಷ" ಎಂಬುದಕ್ಕೆ ತತ್ಕಾಲದಲ್ಲಿ ಜಾರಿಯಲ್ಲಿರುವ ಚುನಾವಣಾ ಚಿನ್ಹೆಗಳ (ಮೀಸಲಾತಿ ಮತ್ತು ಹಂಚಿಕೆ) ಆದೇಶ, 1968 ರಲ್ಲಿ ಇರುವ ಅರ್ಥವೇ ಇರತಕ್ಕದ್ದು.

ವಿವರಣೆ 2.- ಸಂದೇಹಗಳ ನಿವಾರಣೆಗಾಗಿ, ಯಾರೇ ಅಭ್ಯರ್ಥಿಗಾಗಿ ಅಥವಾ ಅವನ ಚುನಾವಣಾ ಏಜೆಂಟನಿಗಾಗಿ ಅಥವಾ ಅಭ್ಯರ್ಥಿಯ ಅಥವಾ ಅವನ ಚುನಾವಣಾ ಏಜೆಂಟನ ಒಪ್ಪಿಗೆ ಪಡೆದು ಕಾರ್ಯನಿರ್ವಹಿಸುತ್ತಿರುವ ಯಾರೇ ಇತರ ವ್ಯಕ್ತಿಗಾಗಿ (ಅಭ್ಯರ್ಥಿಯು ಧಾರಣ ಮಾಡಿದ ಪದದ ಕಾರಣದಿಂದಾಗಿ ಆಗಲಿ ಅಥವಾ ಯಾವುದೇ ಇತರ ಕಾರಣದಿಂದಾಗಿ ಆಗಲಿ) ಅಥವಾ ಅವನಿಗೆ ಅಥವಾ ಅವನ ಸಲುವಾಗಿ ಸರ್ಕಾರದ ಸೇವೆಯಲ್ಲಿರುವ ಅಥವಾ ಪಾಲಿಕೆ ಸೇವೆಯಲ್ಲಿರುವ ಯಾರೇ ವ್ಯಕ್ತಿಯು ತನ್ನ ಅಧಿಕೃತ ಕರ್ತವ್ಯದ ನಿರ್ವಹಣೆಯಲ್ಲಿ ಅಥವಾ ಕರ್ತವ್ಯ ನಿರ್ವಹಣೆಯಲ್ಲಿರುವನೆಂದು ತಾತ್ಪರ್ಯವಾಗುವಲ್ಲಿ ಅವನು ಮಾಡಿದ ಯಾವುದೇ ಏರ್ಪಾಡಿಗೆ, ಒದಗಿಸಿದ ಸೌಲಭ್ಯಗಳಿಗೆ ಅಥವಾ ಮಾಡಿದ ಇತರ ಯಾವುದೇ ಕೃತ್ಯಕ್ಕೆ ಅಥವಾ ಕಾರ್ಯಕ್ಕೆ ಸಂಬಂಧಿಸಿದಂತೆ ವಹಿಸಿದ ಯಾವುದೇ ವೆಚ್ಚವನ್ನು ಈ ಪ್ರಕರಣದ ಉದ್ದೇಶಕ್ಕಾಗಿ, ಅಭ್ಯರ್ಥಿಯು ಅಥವಾ ಅವನ ಚುನಾವಣಾ ಏಜೆಂಟನು ವಹಿಸಿದ ಅಥವಾ ಅಧಿಕೃತಗೊಳಿಸಿದ ಚುನಾವಣೆಗೆ ಸಂಬಂಧಿಸಿದ ವೆಚ್ಚವೆಂಬುದಾಗಿ ಭಾವಿಸತಕ್ಕದ್ದಲ್ಲ ಎಂದು ಈ ಮೂಲಕ ಘೋಷಿಸಲಾಗಿದೆ.

(3) ಲೆಕ್ಕಗಳು ನಿಯಮಿಸಬಹುದಾದಂಥ ವಿವರಗಳನ್ನು ಒಳಗೊಂಡಿರತಕ್ಕದ್ದು.

(4) ಸದರಿ ವೆಚ್ಚದ ಒಟ್ಟು ಮೊತ್ತವು, ನಿಯಮಿಸಬಹುದಾದಂಥ ಮೊಬಲಗನ್ನು ಮೀರತಕ್ಕದ್ದಲ್ಲ.

44. ಚುನಾವಣಾ ಅಧಿಕಾರಿಗೆ ಲೆಕ್ಕವನ್ನು ಸಲ್ಲಿಸುವುದು.- ಈ ಅಧಿನಿಯಮದ ಮೇರೆಗೆ ಚುನಾವಣೆಯಲ್ಲಿ ಸ್ಪರ್ಧಿಸಿರುವ ಪ್ರತಿಯೊಬ್ಬ ಅಭ್ಯರ್ಥಿಯು, ಗೆದ್ದ ಅಭ್ಯರ್ಥಿಯ ಚುನಾವಣೆಯ ದಿನಾಂಕದಿಂದ ಮೂವತ್ತು ದಿನಗಳೊಳಗೆ ಅಥವಾ ಚುನಾವಣೆಯಲ್ಲಿ ಒಬ್ಬರಿಗಿಂತ ಹೆಚ್ಚು ಗೆದ್ದ ಅಭ್ಯರ್ಥಿಗಳಿದ್ದರೆ ಮತ್ತು ಚುನಾವಣೆಯ ದಿನಾಂಕಗಳು ಬೇರೆ ಬೇರೆಯಾಗಿದ್ದರೆ, ಆ ಎರಡು ದಿನಾಂಕಗಳ ಪೈಕಿ, ತರುವಾಯದ ದಿನಾಂಕದಿಂದ, ಮೂವತ್ತು ದಿನಗಳೊಳಗೆ ತಾನು ಅಥವಾ ತನ್ನ ಚುನಾವಣಾ ಏಜೆಂಟನು ಇಟ್ಟಿರುವ ಲೆಕ್ಕದ ಒಂದು ಯಥಾ ಪ್ರತಿಯಾಗಿರುವ ತನ್ನ ಚುನಾವಣೆಯ ವೆಚ್ಚದ ಲೆಕ್ಕವನ್ನು ಈ ಅಧಿನಿಯಮದ ಮೇರೆಗೆ ಚುನಾವಣೆಗೆ ನೇಮಕಗೊಂಡ ಚುನಾವಣಾ ಅಧಿಕಾರಿಗೆ ಸಲ್ಲಿಸತಕ್ಕದ್ದು.

45. ಚುನಾವಣಾ ವೆಚ್ಚಗಳ ಲೆಕ್ಕವನ್ನು ಸಲ್ಲಿಸಲು ವಿಫಲವಾಗುವುದು.- ಯಾರೇ ವ್ಯಕ್ತಿಯು,-

(ಎ) ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ, ಅಗತ್ಯಪಡಿಸಿದ ಕಾಲದೊಳಗೆ ಮತ್ತು ರೀತಿಯಲ್ಲಿ, ಚುನಾವಣಾ ವೆಚ್ಚಗಳ ಲೆಕ್ಕವನ್ನು ಸಲ್ಲಿಸಲು ವಿಫಲನಾಗಿರುವನೆಂದು; ಮತ್ತು

(ಬಿ) ಹಾಗೆ ಸಲ್ಲಿಸಲು ವಿಫಲನಾದುದಕ್ಕೆ ಯಾವುದೇ ಯುಕ್ತ ಕಾರಣ ಅಥವಾ ಸಮರ್ಥನೆ ಇಲ್ಲವೆಂದು

- ರಾಜ್ಯ ಚುನಾವಣಾ ಆಯೋಗಕ್ಕೆ ಮನದಟ್ಟಾದರೆ, ರಾಜ್ಯ ಚುನಾವಣಾ ಆಯೋಗವು ಸರ್ಕಾರಿ ರಾಜ್ಯಪತ್ರದಲ್ಲಿ ಆದೇಶವನ್ನು ಪ್ರಕಟಿಸುವ ಮೂಲಕ, ಅವನನ್ನು ಅನರ್ಹನೆಂದು ಘೋಷಿಸತಕ್ಕದ್ದು ಮತ್ತು ಅಂಥ ಯಾರೇ ವ್ಯಕ್ತಿಯು, ಆದೇಶವನ್ನು ಹೊರಡಿಸಿದ ದಿನಾಂಕದಿಂದ ಮೂರು ವರ್ಷಗಳ ಅವಧಿಯವರೆಗೆ ಅನರ್ಹನಾಗಿರತಕ್ಕದ್ದು.

46. ಚುನಾವಣೆಗಳಲ್ಲಿ ಮತಯಂತ್ರಗಳು.- ಈ ಅಧಿನಿಯಮದಲ್ಲಿ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳಲ್ಲಿ ಏನೇ ಒಳಗೊಂಡಿದ್ದರೂ, ಮತಯಂತ್ರಗಳ ಮೂಲಕ ಮತಗಳನ್ನು ನೀಡುವುದನ್ನು ಅಥವಾ ದಾಖಲಿಸುವುದನ್ನು, ಪ್ರತಿಯೊಂದು ಪ್ರಕರಣದ ಸನ್ನಿವೇಶಗಳನ್ನು ಗಮನದಲ್ಲಿಟ್ಟುಕೊಂಡು ರಾಜ್ಯ ಚುನಾವಣಾ ಆಯೋಗವು ನಿರ್ದಿಷ್ಟಪಡಿಸಬಹುದಾದಂಥ ಚುನಾವಣಾ ಕ್ಷೇತ್ರದಲ್ಲಿ ಅಥವಾ ಚುನಾವಣಾ ಕ್ಷೇತ್ರಗಳಲ್ಲಿ ಅಳವಡಿಸಿಕೊಳ್ಳಬಹುದು.

ವಿವರಣೆ.- ಈ ಪ್ರಕರಣದ ಉದ್ದೇಶಕ್ಕಾಗಿ 'ಮತಯಂತ್ರ' ಎಂದರೆ, ಮತಗಳನ್ನು ನೀಡುವುದಕ್ಕಾಗಿ ಅಥವಾ ದಾಖಲಿಸುವುದಕ್ಕಾಗಿ ಬಳಸುವ, ವಿದ್ಯುನ್ಮಾನದ ಮೂಲಕವಾಗಲಿ ಅಥವಾ ಬೇರೆ ರೀತಿಯಲ್ಲಾಗಲೀ ನಿರ್ವಹಿಸಲಾಗುವ, ಯಾವುದೇ ಯಂತ್ರ ಅಥವಾ ಉಪಕರಣ ಮತ್ತು ಈ ಅಧಿನಿಯಮದಲ್ಲಿ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳಲ್ಲಿ ಮತಪೆಟ್ಟಿಗೆಗೆ ಅಥವಾ ಮತಪತ್ರಕ್ಕೆ ಮಾಡಿದ ಯಾವುದೇ ಉಲ್ಲೇಖವು, ಅನ್ಯಥಾ ಉಪಬಂಧಿಸಿರುವುದನ್ನುಳಿದು, ಯಾವುದೇ ಚುನಾವಣೆಯಲ್ಲಿ ಅಂಥ ಮತಯಂತ್ರವನ್ನು ಬಳಸುವಲ್ಲೆಲ್ಲಾ ಅಂಥ ಮತಯಂತ್ರಕ್ಕೆ ಮಾಡಲಾದ ಉಲ್ಲೇಖವನ್ನು ಒಳಗೊಳ್ಳುವುದಾಗಿ ಅರ್ಥೈಸತಕ್ಕದ್ದು.

47. ಚುನಾವಣಾ ಉದ್ದೇಶಗಳಿಗಾಗಿ ನಿಯಮಗಳನ್ನು ರಚಿಸುವ ಸರ್ಕಾರದ ಅಧಿಕಾರ:- ಕೌನ್ಸಿಲರ್ ಗಳು, ಮೇಯರ್, ಉಪ-ಮೇಯರ್ ಮತ್ತು ಸ್ಥಾಯೀ ಸಮಿತಿಯ ಅಧ್ಯಕ್ಷರ ಚುನಾವಣೆಗಳನ್ನು ನಡೆಸುವ ಉದ್ದೇಶಕ್ಕಾಗಿ ಎಲ್ಲಾ ಅಥವಾ ಯಾವುದೇ ವಿಷಯಗಳನ್ನು ನಿಯಂತ್ರಿಸಲು ಅಂಥ ನಿಯಮಗಳು ಅಥವಾ ವಿನಿಯಮಗಳನ್ನು ಸರ್ಕಾರವು ನಿಯಮಿಸಬಹುದು.

48. ಏಕಕಾಲಿಕ ಸದಸ್ಯತ್ವದ ನಿಷೇಧ.- (1) ಒಬ್ಬ ವ್ಯಕ್ತಿಯು ಒಂದಕ್ಕಿಂತ ಹೆಚ್ಚಿನ ವಿಭಾಗಗಳಿಗೆ ಚುನಾಯಿತನಾಗಿದ್ದರೆ, ಅಂಥ ಚುನಾವಣೆಗಳ ಪೈಕಿ ಕೊನೆಯ ಚುನಾವಣೆಯ ದಿನಾಂಕದಿಂದ ಮೂರು ದಿನಗಳೊಳಗಾಗಿ ತಾನು ಸಹಿ ಮಾಡಿರುವ ಲಿಖಿತ ನೋಟೀಸನ್ನು ಆಯುಕ್ತರಿಗೆ ತಲುಪಿಸುವ ಮೂಲಕ ಅವನು ಯಾವ ವಿಭಾಗದಿಂದ ಸೇವೆ ಸಲ್ಲಿಸಲು ಆಯ್ಕೆ ಮಾಡಿಕೊಳ್ಳುವನೋ ಆ ವಿಭಾಗವನ್ನು ತಿಳಿಸತಕ್ಕದ್ದು ಮತ್ತು ಆ ಆಯ್ಕೆಯು ಅಂತಿಮವಾದುದಾಗಿರತಕ್ಕದ್ದು.

(2) (1)ನೇ ಉಪಪ್ರಕರಣದಲ್ಲಿ ತಿಳಿಸಿರುವಂತೆ ಅಭ್ಯರ್ಥಿಯು ಆಯ್ಕೆಯನ್ನು ಮಾಡಿಕೊಳ್ಳದಿದ್ದರೆ, ಅಂಥ ಅಭ್ಯರ್ಥಿಯು ಯಾವ ವಿಭಾಗದಿಂದ ಸೇವೆ ಸಲ್ಲಿಸತಕ್ಕದ್ದೆಂಬುದನ್ನು ಆಯುಕ್ತರು ಚೀಟಿ ಎತ್ತುವ ಮೂಲಕ ನಿರ್ಧರಿಸತಕ್ಕದ್ದು ಮತ್ತು ಅದನ್ನು ಅಧಿಸೂಚಿಸತಕ್ಕದ್ದು.

(3) ಸದರಿ ವ್ಯಕ್ತಿಯು ಹಾಗೆ ಆಯ್ಕೆ ಮಾಡಿಕೊಂಡ ಅಥವಾ ಸಂದರ್ಭಾನುಸಾರ ಅಧಿಸೂಚಿಸಿದ ವಿಭಾಗದ ಸ್ಥಾನಕ್ಕಾಗಿ ಮಾತ್ರವೇ ಚುನಾಯಿತನಾಗಿರುವನೆಂದು ಭಾವಿಸತಕ್ಕದ್ದು ಮತ್ತು ಅದರಿಂದ ತೆರವಾಗುವ ಇತರ ಸ್ಥಾನ ಅಥವಾ ಸ್ಥಾನಗಳನ್ನು ಹೊಸದಾಗಿ ಚುನಾವಣೆ ನಡೆಸುವ ಮೂಲಕ ಭರ್ತಿ ಮಾಡತಕ್ಕದ್ದು.

(4) ವಾರ್ಡ್ ನ ಕೌನ್ಸಿಲರ್ ಆಗಿ ಆಯ್ಕೆಯಾದ ವ್ಯಕ್ತಿಯು ಸಂಸತ್ತಿನ ಯಾವುದೇ ಸದನದ ಅಥವಾ ರಾಜ್ಯ ವಿಧಾನಮಂಡಲದ ಯಾವುದೇ ಸದನದ ಸದಸ್ಯನಾದಲ್ಲಿ ಅಥವಾ ಆಗಿದ್ದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನು ಹೊರತುಪಡಿಸಿ ಪಾಲಿಕೆಯ ಕೌನ್ಸಿಲರ್ ಅಥವಾ ಮುನ್ಸಿಪಲ್ ಕೌನ್ಸಿಲರ್ ಅಥವಾ ಪಟ್ಟಣ ಪಂಚಾಯಿತಿಯ ಕೌನ್ಸಿಲರ್ ಅಥವಾ ಜಿಲ್ಲಾ ಪಂಚಾಯಿತಿ ಅಥವಾ ಗ್ರಾಮ ಪಂಚಾಯಿತಿಯ ಸದಸ್ಯ ಆದಲ್ಲಿ ಅಥವಾ ಆಗಿದ್ದಲ್ಲಿ, ಆಗ 21ನೇ ಪ್ರಕರಣದ ಅಡಿಯಲ್ಲಿ ಸದಸ್ಯರ ಹೆಸರಿನ ಅಧಿಸೂಚನೆಯ ದಿನಾಂಕದಿಂದ 15 ದಿನಗಳ ಅವಧಿಯು ಮುಕ್ತಾಯವಾದಾಗ ಅಥವಾ ಸಂದರ್ಭಾನುಸಾರವಾಗಿ ಸಂಸತ್ತಿನ ಯಾವುದೇ ಸದನದ, ರಾಜ್ಯ ವಿಧಾನಮಂಡಲದ ಯಾವುದೇ ಸದನದ ಅಥವಾ ಸದಸ್ಯನ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನು ಹೊರತುಪಡಿಸಿ ಪಾಲಿಕೆಯ ಮುನ್ಸಿಪಲ್ ಕೌನ್ಸಿಲರ್ ಅಥವಾ ಕೌನ್ಸಿಲರನ ಅಥವಾ ಪಟ್ಟಣ ಪಂಚಾಯಿತಿಯ ಕೌನ್ಸಿಲರ್ ಅಥವಾ ಜಿಲ್ಲಾ ಪಂಚಾಯಿತಿ ಅಥವಾ ಗ್ರಾಮ ಪಂಚಾಯಿತಿಯ ಸದಸ್ಯನ ಪದಾವಧಿಯು ಪ್ರಾರಂಭದ ದಿನಾಂಕದಿಂದ 15 ದಿನಗಳೊಳಗಾಗಿ, ಸಂಸತ್ತಿನ ಯಾವುದೇ ಸದನದ, ರಾಜ್ಯ ವಿಧಾನಮಂಡಲದ ಯಾವುದೇ ಸದನದ, ಮುನ್ಸಿಪಲ್ ಕೌನ್ಸಿಲ್, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನು ಹೊರತುಪಡಿಸಿದ ಪಾಲಿಕೆಯ, ಪಟ್ಟಣ ಪಂಚಾಯಿತಿಯ, ಜಿಲ್ಲಾ ಪಂಚಾಯಿತಿಯ ಅಥವಾ ಸಂದರ್ಭಾನುಸಾರ ತನ್ನ ಸೀಟಿಗೆ ಅಥವಾ ತನ್ನ ಸ್ಥಾನಕ್ಕೆ ಈ ಹಿಂದೆಯೇ ರಾಜೀನಾಮೆ ನೀಡಿದ್ದ ಹೊರತು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿನ ಆತನ ಸೀಟು ಖಾಲಿಯಾಗತಕ್ಕದ್ದಲ್ಲ.

49. ಚುನಾವಣಾ ಉದ್ದೇಶಗಳಿಗಾಗಿ ಆವರಣಗಳು, ವಾಹನಗಳು, ಇತ್ಯಾದಿಗಳನ್ನು ಕಡ್ಡಾಯವಾಗಿ ಕೋರುವುದು.- (1) ಈ ಅಧಿನಿಯಮದ ಮೇರೆಗೆ ಪಾಲಿಕೆಗೆ ಚುನಾವಣೆಗಳನ್ನು ನಡೆಸುವುದಕ್ಕಾಗಿ ರಾಜ್ಯ ಚುನಾವಣಾ ಆಯೋಗವು ಅಧಿಕೃತಗೊಳಿಸಿದ ಅಧಿಕಾರಿಗೆ (ಇದರಲ್ಲಿ ಇನ್ನು ಮುಂದೆ "ಕಡ್ಡಾಯವಾಗಿ ಕೋರುವ ಪ್ರಾಧಿಕಾರಿ" ಎಂದು ಉಲ್ಲೇಖಿಸಿದೆ) ಈ ಅಧಿನಿಯಮದ ಮೇರೆಗೆ ಚುನಾವಣೆಗೆ ಸಂಬಂಧಿಸಿದಂತೆ,-

(ಎ) ಯಾವುದೇ ಆವರಣವು, ಮತಗಟ್ಟೆಯಾಗಿ ಬಳಸುವ ಉದ್ದೇಶಕ್ಕಾಗಿ ಅಥವಾ ಮತದಾನ ನಡೆದ ತರುವಾಯ ಮತ ಪೆಟ್ಟಿಗೆಗಳನ್ನು ದಾಸ್ತಾನು ಮಾಡುವುದಕ್ಕಾಗಿ ಬೇಕಾಗಿದೆಯೆಂದು ಅಥವಾ ಬೇಕಾಗುವ ಸಂಭವವಿದೆಯೆಂದು ಕಂಡುಬಂದರೆ; ಅಥವಾ

(ಬಿ) ಯಾವುದೇ ವಾಹನವು, ನೌಕೆಯು ಅಥವಾ ಪ್ರಾಣಿಯು ಯಾವುದೇ ಮತಗಟ್ಟೆಗೆ ಅಥವಾ ಯಾವುದೇ ಮತಗಟ್ಟೆಯಿಂದ ಮತ ಪೆಟ್ಟಿಗೆಗಳನ್ನು ಸಾಗಿಸುವ ಅಥವಾ ಅಂಥ ಚುನಾವಣೆಯನ್ನು ನಡೆಸುವಾಗ ಸುವ್ಯವಸ್ಥೆಯನ್ನು ಕಾಪಾಡಲು ಪೊಲೀಸರನ್ನು ಸಾಗಿಸುವ ಅಥವಾ ಅಂಥ ಚುನಾವಣೆಗೆ ಸಂಬಂಧಿಸಿದ ಯಾವುದೇ ಕರ್ತವ್ಯವನ್ನು ನೆರವೇರಿಸುವುದಕ್ಕಾಗಿ ಯಾರೇ ಅಧಿಕಾರಿಯನ್ನು ಅಥವಾ ಇತರ ವ್ಯಕ್ತಿಯನ್ನು ಸಾಗಿಸುವ ಉದ್ದೇಶಕ್ಕಾಗಿ ಬೇಕಾಗಿದೆ ಎಂದು ಅಥವಾ ಬೇಕಾಗುವ ಸಂಭವವಿದೆಯೆಂದು ಕಂಡುಬಂದರೆ

- ಕಡ್ಡಾಯವಾಗಿ ಕೋರುವ ಪ್ರಾಧಿಕಾರಿಯು ಲಿಖಿತ ಆದೇಶದ ಮೂಲಕ ಅಂಥ ಆವರಣವನ್ನು ಅಥವಾ ಸಂದರ್ಭಾನುಸಾರ, ಅಂಥ ವಾಹನವನ್ನು, ನೌಕೆಯನ್ನು ಅಥವಾ ಪ್ರಾಣಿಯನ್ನು ಒದಗಿಸುವಂತೆ ಕಡ್ಡಾಯವಾಗಿ ಕೋರಬಹುದು ಮತ್ತು ಆ ಕಡ್ಡಾಯ ಕೋರಿಕೆಯ ಸಂಬಂಧದಲ್ಲಿ ತನಗೆ ಅಗತ್ಯವೆಂದು ಅಥವಾ ವಿಹಿತವೆಂದು ಕಂಡುಬರಬಹುದಾದಂಥ ಹೆಚ್ಚಿನ ಆದೇಶಗಳನ್ನು ಮಾಡಬಹುದು:

ಪರಂತು, ಯಾರೇ ಅಭ್ಯರ್ಥಿಯ ಚುನಾವಣೆಗೆ ಸಂಬಂಧಿಸಿದ ಯಾವುದೇ ಉದ್ದೇಶಕ್ಕಾಗಿ ಅಂಥ ಅಭ್ಯರ್ಥಿ ಅಥವಾ ಅವನ ಏಜೆಂಟನು ಕಾನೂನುಬದ್ಧವಾಗಿ ಉಪಯೋಗಿಸುತ್ತಿರುವಂಥ ಯಾವುದೇ ವಾಹನವನ್ನು, ನೌಕೆಯನ್ನು ಅಥವಾ ಪ್ರಾಣಿಯನ್ನು ಅಂಥ ಚುನಾವಣೆಗಳ ಮತದಾನವು ಮುಕ್ತಾಯವಾಗುವವರೆಗೆ ಈ ಉಪ-ಪ್ರಕರಣದ ಮೇರೆಗೆ ಕಡ್ಡಾಯವಾಗಿ ಕೋರತಕ್ಕದ್ದಲ್ಲ.

(2) ಕಡ್ಡಾಯವಾಗಿ ಕೋರುವ ಪ್ರಾಧಿಕಾರಿಯು, ಸ್ವತ್ತಿನ ಮಾಲೀಕನಾಗಿರುವುದಾಗಿ ಅಥವಾ ಅದರ ಸ್ವಾಧೀನ ಹೊಂದಿರುವ ವ್ಯಕ್ತಿಯಾಗಿರುವುದಾಗಿ ಭಾವಿಸಲಾದ ವ್ಯಕ್ತಿಯ ಹೆಸರಿಗೆ ಹೊರಡಿಸಿದ ಲಿಖಿತ ಆದೇಶದ ಮೂಲಕ ಕಡ್ಡಾಯ ಕೋರಿಕೆಯನ್ನು ಮಾಡಿಕೊಳ್ಳತಕ್ಕದ್ದು ಮತ್ತು ಅಂಥ ಆದೇಶವನ್ನು, ಅದನ್ನು ಯಾರ ಹೆಸರಿಗೆ ಹೊರಡಿಸಲಾಗಿದೆಯೋ ಆ ವ್ಯಕ್ತಿಗೆ ನಿಯಮಿಸಿದ ರೀತಿಯಲ್ಲಿ ಜಾರಿ ಮಾಡತಕ್ಕದ್ದು.

(3) ಉಪಪ್ರಕರಣ (1)ರ ಮೇರೆಗೆ ಯಾವುದೇ ಸ್ವತ್ತನ್ನು ಕಡ್ಡಾಯವಾಗಿ ಕೋರಿದಾಗಲೆಲ್ಲಾ, ಅಂಥ ಕಡ್ಡಾಯ ಕೋರಿಕೆಯ ಅವಧಿಯನ್ನು, ಆ ಉಪಪ್ರಕರಣದಲ್ಲಿ ತಿಳಿಸಿದ ಯಾವುದೇ ಉದ್ದೇಶಕ್ಕಾಗಿ ಅಂಥ ಸ್ವತ್ತು ಯಾವ ಅವಧಿಗೆ ಬೇಕಾಗಿದೆಯೋ ಆ ಅವಧಿಯನ್ನು ಮೀರಿ ವಿಸ್ತರಿಸತಕ್ಕದ್ದಲ್ಲ.

(4) ಈ ಪ್ರಕರಣದಲ್ಲಿ,-

(ಎ) "ಆವರಣ" ಎಂದರೆ ಯಾವುದೇ ಭೂಮಿ, ಕಟ್ಟಡ ಅಥವಾ ಕಟ್ಟಡದ ಭಾಗ ಮತ್ತು ಅದು ಗುಡಿಸಲು, ಷೆಡ್ಡು ಅಥವಾ ಇತರ ರಚನೆ ಅಥವಾ ಅದರ ಯಾವುದೇ ಭಾಗವನ್ನು ಒಳಗೊಳ್ಳುತ್ತದೆ;

(ಬಿ) "ವಾಹನ" ಎಂದರೆ ಯಾಂತ್ರಿಕ ಶಕ್ತಿಯಿಂದ ಅಥವಾ ಅನ್ಯಥಾ ಚಾಲಿತವಾಗುವ ರಸ್ತೆ ಸಾರಿಗೆ ಉದ್ದೇಶಕ್ಕಾಗಿ ಬಳಸಲಾಗುವ ಅಥವಾ ಬಳಸಲು ಯೋಗ್ಯವಾದ ಯಾವುದೇ ವಾಹನ.

50. ಪರಿಹಾರ ಸಂದಾಯ.- (1) 49ನೇ ಪ್ರಕರಣದ ಅನುಸಾರವಾಗಿ ಕಡ್ಡಾಯವಾಗಿ ಕೋರುವ ಪ್ರಾಧಿಕಾರಿಯು ಯಾವುದೇ ಆವರಣವನ್ನು ಕಡ್ಡಾಯವಾಗಿ ಕೋರಿದಾಗಲೆಲ್ಲಾ, ಸಂಬಂಧಪಟ್ಟ ಪಾಲಿಕೆಯು, ಹಿತಾಸಕ್ತಿಯುಳ್ಳ ವ್ಯಕ್ತಿಗಳಿಗೆ ಪರಿಹಾರವನ್ನು ಸಂದಾಯ ಮಾಡತಕ್ಕದ್ದು. ಪರಿಹಾರದ ಮೊಬಲಗನ್ನು ಕಡ್ಡಾಯವಾಗಿ ಕೋರುವ ಪ್ರಾಧಿಕಾರಿಯು, ಈ ಕೆಳಕಂಡ ಅಂಶಗಳನ್ನು ಪರ್ಯಾಲೋಚಿಸಿ ನಿರ್ಧರಿಸತಕ್ಕದ್ದು, ಎಂದರೆ:-

(i) ಆವರಣಕ್ಕೆ ಸಂಬಂಧಿಸಿದಂತೆ ಸಂದಾಯ ಮಾಡಬೇಕಾದ ಬಾಡಿಗೆ ಅಥವಾ ಯಾವುದೇ ಬಾಡಿಗೆಯನ್ನು ಹಾಗೆ ಸಂದಾಯ ಮಾಡಬೇಕಾಗದೇ ಇರುವಾಗ, ಆ ಸ್ಥಳದಲ್ಲಿ ಅಂಥದೇ ಆವರಣಕ್ಕೆ ಸಂದಾಯ ಮಾಡಬೇಕಾದ ಬಾಡಿಗೆ;

(ii) ಆವರಣಗಳನ್ನು ಕಡ್ಡಾಯವಾಗಿ ಕೋರಿದ ಪರಿಣಾಮವಾಗಿ ಹಿತಾಸಕ್ತಿಯುಳ್ಳ ವ್ಯಕ್ತಿಯು ಅವನ ವಾಸಸ್ಥಳವನ್ನು ಅಥವಾ ವ್ಯವಹಾರದ ಸ್ಥಳವನ್ನು ಬಲವಂತವಾಗಿ ಬದಲಾಯಿಸಬೇಕಾಗಿ ಬಂದರೆ, ಅಂಥ ಬದಲಾವಣೆಗೆ ಪ್ರಾಸಂಗಿಕವಾದ ಯುಕ್ತ ವೆಚ್ಚಗಳು, ಯಾವುದಾದರೂ ಇದ್ದರೆ, ಅವುಗಳು:

ಪರಂತು, ಹಾಗೆ ನಿರ್ಧರಿಸಿದ ಪರಿಹಾರದ ಮೊಬಲಗಿನಿಂದ ಬಾಧಿತನಾದ ಹಿತಾಸಕ್ತಿಯುಳ್ಳ ಯಾರೇ ವ್ಯಕ್ತಿಯು (1)ನೇ ಉಪ-ಪ್ರಕರಣದ ಮೇರೆಗಿನ ಆದೇಶದ ದಿನಾಂಕದಿಂದ ಮೂವತ್ತು ದಿನಗಳೊಳಗೆ ಕಡ್ಡಾಯವಾಗಿ ಕೋರುವ ಪ್ರಾಧಿಕಾರಿಗೆ ಅರ್ಜಿಯನ್ನು ಸಲ್ಲಿಸಿದಾಗ, ಕಡ್ಡಾಯವಾಗಿ ಕೋರುವ ಪ್ರಾಧಿಕಾರಿಯು ಆ ವಿಷಯವನ್ನು ನಿರ್ಧರಣೆಗಾಗಿ ಆ ಸ್ಥಳದ ಮೇಲೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಸಿವಿಲ್ ನ್ಯಾಯಾಧೀಶರಿಗೆ ಒಪ್ಪಿಸತಕ್ಕದ್ದು ಮತ್ತು ಸಂದಾಯ ಮಾಡಬೇಕಾದ ಪರಿಹಾರದ ಮೊಬಲಗು ಆ ಸಿವಿಲ್ ನ್ಯಾಯಾಧೀಶರು ನಿರ್ಧರಿಸಬಹುದಾದಂಥದ್ದಾಗಿರತಕ್ಕದ್ದು.

ವಿವರಣೆ.- ಈ ಉಪ-ಪ್ರಕರಣದಲ್ಲಿ "ಹಿತಾಸಕ್ತಿಯುಳ್ಳ ವ್ಯಕ್ತಿ" ಎಂದರೆ, ಕಡ್ಡಾಯ ಕೋರಿಕೆಯ ನಿಕಟಪೂರ್ವದಲ್ಲಿ ಕಡ್ಡಾಯವಾಗಿ ಕೋರಿದ ಆವರಣದ ವಾಸ್ತವಿಕ ಸ್ವಾಧೀನತೆಯನ್ನು ಹೊಂದಿದ್ದ ವ್ಯಕ್ತಿ

ಅಥವಾ ಯಾರೇ ವ್ಯಕ್ತಿಯು ಅಂಥ ವಾಸ್ತವಿಕ ಸ್ವಾಧೀನತೆಯನ್ನು ಹೊಂದಿಲ್ಲದಿರುವಲ್ಲಿ ಅಂಥ ಆವರಣದ ಮಾಲೀಕ.

(2) 49ನೇ ಪ್ರಕರಣದ ಅನುಸಾರವಾಗಿ ಕಡ್ಡಾಯವಾಗಿ ಕೋರುವ ಪ್ರಾಧಿಕಾರಿಯು ಯಾವುದೇ ವಾಹನವನ್ನು, ನೌಕೆಯನ್ನು ಅಥವಾ ಪ್ರಾಣಿಯನ್ನು ಕಡ್ಡಾಯವಾಗಿ ಕೋರಿದಾಗಲೆಲ್ಲಾ ಪಾಲಿಕೆಯು ಅದರ ಮಾಲೀಕನಿಗೆ ಪರಿಹಾರವನ್ನು ಸಂದಾಯ ಮಾಡತಕ್ಕದ್ದು, ಕಡ್ಡಾಯವಾಗಿ ಕೋರುವ ಪ್ರಾಧಿಕಾರಿಯು ಪರಿಹಾರದ ಮೊಬಲಗನ್ನು ಅಂಥ ವಾಹನದ, ನೌಕೆಯ ಅಥವಾ ಪ್ರಾಣಿಯ ಬಾಡಿಗೆಗಾಗಿ ಆ ಸ್ಥಳದಲ್ಲಿ ಚಾಲ್ತಿಯಲ್ಲಿರುವ ಬೆಲೆಗಳು ಅಥವಾ ದರಗಳ ಆಧಾರಗಳ ಮೇಲೆ ನಿರ್ಧರಿಸತಕ್ಕದ್ದು:

ಪರಂತು, ಹಾಗೆ ನಿರ್ಧರಿಸಿದ ಪರಿಹಾರ ಮೊಬಲಗಿನಿಂದ ಬಾಧಿತನಾದ, ಅಂಥ ವಾಹನದ, ನೌಕೆಯ ಅಥವಾ ಪ್ರಾಣಿಯ ಮಾಲೀಕನು ಕಡ್ಡಾಯವಾಗಿ ಕೋರುವ ಪ್ರಾಧಿಕಾರಿಗೆ ಮೂವತ್ತು ದಿನಗಳೊಳಗೆ ಅರ್ಜಿಯನ್ನು ಸಲ್ಲಿಸಿದಲ್ಲಿ, ಆ ಸ್ಥಳದ ಮೇಲೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಸಿವಿಲ್ ನ್ಯಾಯಾಧೀಶರಿಗೆ ಆ ವಿಷಯವನ್ನು ಒಪ್ಪಿಸತಕ್ಕದ್ದು ಮತ್ತು ಸಂದಾಯ ಮಾಡಬೇಕಾದ ಪರಿಹಾರದ ಮೊಬಲಗು ಆ ಸಿವಿಲ್ ನ್ಯಾಯಾಧೀಶರು ನಿರ್ಧರಿಸಬಹುದಾದಂಥದ್ದು ಆಗಿರತಕ್ಕದ್ದು:

ಮತ್ತೂ ಪರಂತು, ಕಡ್ಡಾಯ ಕೋರಿಕೆಯ ನಿಕಟಪೂರ್ವದಲ್ಲಿ ವಾಹನವು ಅಥವಾ ನೌಕೆಯು ಕಂತು ಖರೀದಿ ಒಪಂ್ದದ ಕಾರಣದಿಂದಾಗಿ ಅದರ ಮಾಲೀಕನಲ್ಲದ ವ್ಯಕ್ತಿಯ ಸ್ವಾಧೀನದಲ್ಲಿ ಇದ್ದಾಗ, ಈ ಉಪಪ್ರಕರಣದ ಮೇರೆಗೆ ಒಟ್ಟು ಪರಿಹಾರವಾಗಿ ನಿರ್ಧರಿಸಿದ ಮೊಬಲಗನ್ನು ಆ ವ್ಯಕ್ತಿಯ ಮತ್ತು ಮಾಲೀಕನ ನಡುವೆ, ಅವರು ಒಪ್ಪಬಹುದಾದಂಥ ರೀತಿಯಲ್ಲಿ ಮತ್ತು ಅವರು ಒಪ್ಪದಿದ್ದರೆ, ಆ ಬಗ್ಗೆ ಕಡ್ಡಾಯವಾಗಿ ಕೋರುವ ಪ್ರಾಧಿಕಾರಿಯು ನೇಮಕ ಮಾಡಿದ ಮಧ್ಯಸ್ಥಗಾರನು ತೀರ್ಮಾನಿಸಬಹುದಾದಂಥ ರೀತಿಯಲ್ಲಿ ಹಂಚತಕ್ಕದ್ದು.

51. ಮಾಹಿತಿಯನ್ನು ಪಡೆಯಲು ಅಧಿಕಾರ.- ಕಡ್ಡಾಯವಾಗಿ ಕೋರುವ ಪ್ರಾಧಿಕಾರಿಯು 49ನೇ ಪ್ರಕರಣದ ಮೇರೆಗೆ ಯಾವುದೇ ಸ್ವತ್ತನ್ನು ಕಡ್ಡಾಯವಾಗಿ ಕೋರುವ ಅಥವಾ 50ನೇ ಪ್ರಕರಣದ ಮೇರೆಗೆ ಸಂದಾಯ ಮಾಡಬೇಕಾದ ಯಾವುದೇ ಪರಿಹಾರವನ್ನು ನಿರ್ಧರಿಸುವ ದೃಷ್ಟಿಯಿಂದ, ಆದೇಶದ ಮೂಲಕ, ಆ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಪ್ರಾಧಿಕಾರಿಗೆ, ಹಾಗೆ ನಿರ್ದಿಷ್ಟಪಡಿಸಬಹುದಾದಂಥ ಸ್ವತ್ತಿಗೆ ಸಂಬಂಧಪಟಂ್ತೆ ಅವನಲ್ಲಿರುವಂಥ ಮಾಹಿತಿಯನ್ನು ಒದಗಿಸುವಂತೆ ಯಾರೇ ವ್ಯಕ್ತಿಯನ್ನು ಅಗತ್ಯಪಡಿಸಬಹುದು.

52. ಆವರಣಗಳು ಇತ್ಯಾದಿಗಳಿಗೆ ಪ್ರವೇಶಿಸುವ ಮತ್ತು ಅವುಗಳನ್ನು ಪರಿಶೀಲಿಸುವ ಅಧಿಕಾರ.-(1) ಕಡ್ಡಾಯವಾಗಿ ಕೋರುವ ಪ್ರಾಧಿಕಾರಿಯು ಈ ಬಗ್ಗೆ ಅಧಿಕೃತಗೊಳಿಸಿರುವ ಯಾರೇ ವ್ಯಕ್ತಿಯು 49ನೇ ಪ್ರಕರಣದ ಮೇರೆಗೆ ಯಾವುದೇ ಆವರಣಗಳು, ವಾಹನ, ನೌಕೆ ಅಥವಾ ಪ್ರಾಣಿಗೆ ಸಂಬಂಧಪಟಂ್ತೆ ಆದೇಶವನ್ನು ಮಾಡಬೇಕೇ ಮತ್ತು ಹಾಗೆ ಮಾಡಬೇಕಾದರೆ ಯಾವ ರೀತಿಯಲ್ಲಿ ಮಾಡಬೇಕು ಎಂಬುದನ್ನು ನಿರ್ಧರಿಸುವ ಉದ್ದೇಶಕ್ಕಾಗಿ ಅಥವಾ ಆ ಪ್ರಕರಣದ ಮೇರೆಗೆ ಮಾಡಿದ ಯಾವುದೇ ಆದೇಶದ ಪಾಲನೆಯನ್ನು ಸುನಿಶ್ಚಿತಗೊಳಿಸುವ ದೃಷ್ಟಿಯಿಂದ ಅಂಥ ಯಾವುದೇ ಆವರಣಗಳೊಳಕ್ಕೆ ಪ್ರವೇಶಿಸಬಹುದು ಮತ್ತು ಅಂಥ ಆವರಣಗಳನ್ನು ಮತ್ತು ಅದರಲ್ಲಿರುವ ಯಾವುದೇ ವಾಹನ, ನೌಕೆ ಅಥವಾ ಪ್ರಾಣಿಯನ್ನು ಪರಿಶೀಲಿಸಬಹುದು.

(2) ಈ ಪ್ರಕರಣದಲ್ಲಿ "ಆವರಣಗಳು" ಮತ್ತು "ವಾಹನ" ಎಂಬ ಪದಗಳು 49ನೇ ಪ್ರಕರಣದಲ್ಲಿ ಅವುಗಳಿಗೆ ಕೊಟ್ಟಿರುವ ಅರ್ಥವನ್ನೇ ಹೊಂದಿರುತ್ತವೆ.

53. ಕಡ್ಡಾಯವಾಗಿ ಕೋರಿರುವ ಆವರಣಗಳಿಂದ ಹೊರಹಾಕುವುದು.- (1) 49ನೇ ಪ್ರಕರಣದ ಮೇರೆಗೆ ಮಾಡಿದ ಯಾವುದೇ ಆದೇಶವನ್ನು ಉಲಂ್ಲಘಿಸಿ, ಕಡ್ಡಾಯವಾಗಿ ಕೋರಿದ ಯಾವುದೇ ಆವರಣದ ಸ್ವಾಧೀನತೆಯನ್ನು ಉಳಿಸಿಕೊಂಡಿರುವ ಯಾರೇ ವ್ಯಕ್ತಿಯನ್ನು, ಈ ಬಗ್ಗೆ ಕಡ್ಡಾಯವಾಗಿ ಕೋರುವ ಪ್ರಾಧಿಕಾರಿಯಿಂದ ಅಧಿಕಾರ ಪಡೆದಿರುವ ಯಾರೇ ಅಧಿಕಾರಿಯು ಆ ಆವರಣದಿಂದ ಕ್ಷಿಪ್ರವಾಗಿ ಹೊರಹಾಕಬಹುದು.

(2) ಹಾಗೆ ಅಧಿಕಾರ ಪಡೆದಿರುವ ಯಾರೇ ಅಧಿಕಾರಿಯು ಸಾರ್ವಜನಿಕವಾಗಿ ಕಾಣಿಸಿಕೊಳ್ಳದ ಯಾರೇ ಮಹಿಳೆಗೆ ಆವರಣವನ್ನು ಬಿಟ್ಟುಹೋಗಲು ಸೂಕ್ತ ಎಚ್ಚರಿಕೆಯನ್ನು ಮತ್ತು ಸೌಲಭ್ಯವನ್ನು ಕೊಟ್ಟ ತರುವಾಯ, ಯಾವುದೇ ಕಟ್ಟಡದ ಯಾವುದೇ ಬೀಗವನ್ನು ಅಥವಾ ಚಿಲಕವನ್ನು ಕಿತ್ತುಹಾಕಬಹುದು ಅಥವಾ ತೆರೆಯಬಹುದು ಅಥವಾ ಅದರ ಯಾವುದೇ ಬಾಗಿಲನ್ನು ಒಡೆಯಬಹುದು ಅಥವಾ ಹಾಗೆ ಹೊರಹಾಕುವುದಕ್ಕಾಗಿ ಅವಶ್ಯವಾದ ಯಾವುದೇ ಇತರ ಕಾರ್ಯವನ್ನು ಮಾಡಬಹುದು.

54. ಕಡ್ಡಾಯ ಕೋರಿಕೆಯಿಂದ ಆವರಣಗಳ ಬಿಡುಗಡೆ.- (1) 49ನೇ ಪ್ರಕರಣದ ಮೇರೆಗೆ ಕಡ್ಡಾಯವಾಗಿ ಕೋರಲಾದ ಯಾವುದೇ ಅವರಣವನ್ನು ಕಡ್ಡಾಯ ಕೋರಿಕೆಯಿಂದ ಬಿಡುಗಡೆ ಮಾಡಬೇಕಾದಾಗ, ಅದರ ಸ್ವಾಧೀನತೆಯನ್ನು, ಆವರಣವನ್ನು ಕಡ್ಡಾಯವಾಗಿ ಕೋರಿದ ಕಾಲದಲ್ಲಿ ಯಾರಿಂದ ಅದನ್ನು ಸ್ವಾಧೀನತೆ ಪಡೆಯಲಾಯಿತೋ ಆ ವ್ಯಕ್ತಿಗೆ ಅಥವಾ ಅಂಥ ಯಾರೇ ವ್ಯಕ್ತಿಯು ಇಲ್ಲದಿದ್ದರೆ ಅಂಥ ಆವರಣದ ಮಾಲೀಕನೆಂದು ಕಡ್ಡಾಯವಾಗಿ ಕೋರುವ ಪ್ರಾಧಿಕಾರಿಯು ಭಾವಿಸಿದ ವ್ಯಕ್ತಿಗೆ ವಾಪಸು ಮಾಡತಕ್ಕದ್ದು ಮತ್ತು ಹಾಗೆ ಸ್ವಾಧೀನತೆಯನ್ನು ವಾಪಸು ಮಾಡುವುದು, ಹಾಗೆ ವಾಪಸು ಮಾಡುವುದಕ್ಕೆ ಸಂಬಂಧಿಸಿದಂತೆ ಎಲ್ಲ ಹೊಣೆಗಾರಿಕೆಗಳಿಂದ ಕಡ್ಡಾಯವಾಗಿ ಕೋರುವ ಪ್ರಾಧಿಕಾರಿಯನ್ನು ಪೂರ್ಣವಾಗಿ ವಿಮೋಚನೆ

ಗೊಳಿಸಿದಂಥಾಗತಕ್ಕದ್ದು. ಆದರೆ, ಆ ಆವರಣಗಳ ಸ್ವಾಧೀನತೆಯನ್ನು ಯಾರಿಗೆ ಹಾಗೆ ವಾಪಸು ಮಾಡಲಾಯಿತೋ ಆ ವ್ಯಕ್ತಿಯ ವಿರುದ್ಧ, ಆವರಣಗಳಿಗೆ ಸಂಬಂಧಿಸಿದ ಯಾವ ಹಕ್ಕುಗಳನ್ನು ಯಾರೇ ಇತರ ವ್ಯಕ್ತಿಯು, ಕಾನೂನಿನ ಯುಕ್ತ ಕ್ರಮದ ಮೂಲಕ ಜಾರಿಗೊಳಿಸಲು ಹಕ್ಕುಳ್ಳವನಾಗಿರಬಹುದೋ ಆ ಯಾವುದೇ ಹಕ್ಕುಗಳಿಗೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

(2) 49ನೇ ಪ್ರಕರಣದ ಮೇರೆಗೆ ಕಡ್ಡಾಯವಾಗಿ ಕೋರಲಾದ ಯಾವುದೇ ಆವರಣದ ಸ್ವಾಧೀನತೆಯನ್ನು (1)ನೇ ಉಪಪ್ರಕರಣದ ಮೇರೆಗೆ ಯಾವ ವ್ಯಕ್ತಿಗೆ ನೀಡಬೇಕಾಗಿದೆಯೋ ಆ ವ್ಯಕ್ತಿಯು ಸಿಗದಿರುವಲ್ಲಿ ಅಥವಾ ತಕ್ಷಣಕ್ಕೆ ಅವನ ಬಗ್ಗೆ ಖಚಿತಪಡಿಸಿಕೊಳ್ಳಲು ಆಗದಿರುವಲ್ಲಿ ಅಥವಾ ಅವನ ಪರವಾಗಿ ವಾಪಸು ಕೊಡುವುದನ್ನು ಸ್ವೀಕರಿಸಲು ಅಧಿಕಾರ ಪಡೆದ ಯಾರೇ ಏಜೆಂಟ್‌ನು ಅಥವಾ ಯಾರೇ ಇತರ ವ್ಯಕ್ತಿಯು ಇಲ್ಲದಿರುವಲ್ಲಿ, ಕಡ್ಡಾಯವಾಗಿ ಕೋರುವ ಪ್ರಾಧಿಕಾರಿಯು, ಅಂಥ ಆವರಣವನ್ನು ಕಡ್ಡಾಯ ಕೋರಿಕೆಯಿಂದ ಬಿಡುಗಡೆ ಮಾಡಲಾಗಿದೆ ಎಂದು ನೋಟೀಸನ್ನು ಅಂಥ ಆವರಣದ ಎದ್ದು ಕಾಣುವ ಭಾಗದಲ್ಲಿ ಮತ್ತು ಪಾಲಿಕೆಯ ಕಚೇರಿಯ ಸೂಚನಾ ಫಲಕದಲ್ಲಿ ಅಂಟಿಸುವಂತೆ ಮಾಡತಕ್ಕದ್ದು.

(3) (2)ನೇ ಉಪಪ್ರಕರಣದಲ್ಲಿ ಉಪಬಂಧಿಸಿದಂತೆ, ನೋಟೀಸನ್ನು ಸೂಚನಾ ಫಲಕದ ಮೇಲೆ ಅಂಟಿಸಿದಾಗ, ಅಂಥ ನೋಟಿಸಿನಲ್ಲಿ, ನಿರ್ದಿಷ್ಟಪಡಿಸಿದ ಆವರಣಗಳು, ಆ ನೋಟೀಸನ್ನು ಹಾಗೆ ಅಂಟಿಸಿದ ದಿನಾಂಕದಂದು ಮತ್ತು ಅಂದಿನಿಂದ ಕಡ್ಡಾಯ ಕೋರಿಕೆಗೆ ಒಳಪಟ್ಟಿರುವುದು ನಿಂತುಹೋಗತಕ್ಕದ್ದು ಮತ್ತು ಅದರ ಸ್ವಾಧೀನತೆಯನ್ನು ಹೊಂದಲು ಹಕ್ಕುಳ್ಳ ವ್ಯಕ್ತಿಗೆ ಅದನ್ನು ವಾಪಸ್ಸು ಮಾಡಿರುವುದಾಗಿ ಭಾವಿಸತಕ್ಕದ್ದು ಮತ್ತು ಸದರಿ ದಿನಾಂಕದ ತರುವಾಯದ ಯಾವುದೇ ಅವಧಿಗೆ ಅಂಥ ಆವರಣಕ್ಕೆ ಸಂಬಂಧಿಸಿದಂತೆ ಯಾವುದೇ ಪರಿಹಾರಕ್ಕೆ ಅಥವಾ ಇತರ ಕ್ಲೇಮಿಗಾಗಿ ಕಡ್ಡಾಯವಾಗಿ ಕೋರುವ ಪ್ರಾಧಿಕಾರಿಯು ಅಥವಾ ಪಾಲಿಕೆಯು ಹೊಣೆಯಾಗಿರತಕ್ಕದ್ದಲ್ಲ.

55. ಕಡ್ಡಾಯ ಕೋರಿಕೆಗೆ ಸಂಬಂಧಿಸಿದ ಯಾವುದೇ ಆದೇಶದ ಉಲಂಘನೆಗೆ ದಂಡನೆ.- ಯಾರೇ ವ್ಯಕ್ತಿಯು, 49ನೇ ಪ್ರಕರಣದ ಅಥವಾ 51ನೇ ಪ್ರಕರಣದ ಮೇರೆಗೆ ಮಾಡಿದ ಯಾವುದೇ ಆದೇಶವನ್ನು ಉಲಂಘಿಸಿದರೆ, ಅವನು ಅಪರಾಧ ನಿರ್ಣಯವಾದ ಮೇಲೆ ಒಂದು ವರ್ಷದವರೆಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

ಅಧ್ಯಾಯ-V

ಮೇಯರ್, ಉಪಮೇಯರ್, ಮುಖ್ಯ ಆಯುಕ್ತ, ವಲಯ ಆಯುಕ್ತ, ವಲಯ ಸಮಿತಿ, ಸ್ಥಾಯೀ ಸಮಿತಿ, ವಾರ್ಡ್ ಸಮಿತಿ, ಪ್ರದೇಶ ಸಭಾ

56. ಮೇಯರ್ ಮತ್ತು ಉಪಮೇಯರ್.- (1) ಪಾಲಿಕೆಯ ಚುನಾಯಿತ ಪ್ರತಿನಿಧಿಗಳು ಪಾಲಿಕೆಯ ಮೊದಲ ಸಭೆಯಲ್ಲಿ ತನ್ನ ಸದಸ್ಯರುಗಳಲ್ಲಿ ಒಬ್ಬರನ್ನು ಮೇಯರ್ ಆಗಿ ಮತ್ತು ಇನ್ನೊಬ್ಬರನ್ನು ಉಪಮೇಯರ್ ಆಗಿ ಚುನಾಯಿಸತಕ್ಕದ್ದು. ಮೇಯರ್ ಅಥವಾ ಉಪಮೇಯರ್ ಕಚೇರಿಯಲ್ಲಾಗಲೀ ಖಾಲಿಸ್ಥಾನವು ಇದ್ದ ಸಂದರ್ಭದಲ್ಲಿ ಪಾಲಿಕೆಯು ಅಂಥ ಖಾಲಿ ಸ್ಥಾನವು ಉಂಟಾದ ಒಂದು ತಿಂಗಳೊಳಗೆ ಈ ಸ್ಥಾನಗಳನ್ನು ಭರ್ತಿ ಮಾಡತಕ್ಕದ್ದು.

57. ಮೇಯರ್ ಮತ್ತು ಉಪಮೇಯರ್‌ನ ಪದಾವಧಿ.- ಮೇಯರ್ ಅಥವಾ ಉಪಮೇಯರ್‌ನು ತನ್ನ ಚುನಾವಣೆಯ ಸಮಯದಿಂದ ಮೂವತ್ತು ತಿಂಗಳುಗಳ ಅವಧಿಗಾಗಿ ಹುದ್ದೆಯನ್ನು ಹೊಂದಿರತಕ್ಕದ್ದು ಮತ್ತು ತನ್ನ ಉತ್ತರಾಧಿಕಾರಿಯ ಚುನಾವಣೆಯವರೆಗೂ ಹುದ್ದೆಯಲ್ಲಿ ಮುಂದುವರಿಯತಕ್ಕದ್ದು.

58. ಮೇಯರ್ ಮತ್ತು ಉಪ-ಮೇಯರ್ ಪದದ ಮೀಸಲಾತಿ:- ಖಾಲಿ ಸ್ಥಾನವು ಉದ್ಭವವಾದಾಗ ಸರದಿಯ ಮೇಲೆ ಅನುಸೂಚಿತ ಜಾತಿಗಳು, ಅನುಸೂಚಿತ ಪಂಗಡಗಳಿಗೆ ಸೇರಿದ ವ್ಯಕ್ತಿಗಳಿಗೆ ಮತ್ತು ಮಹಿಳೆಯರಿಗೆ ಮೇಯರ್ ಮತ್ತು ಉಪ-ಮೇಯರ್ ಅಥವಾ ಸಂದರ್ಭಾನುಸಾರ ಪಾಲಿಕೆಯ ಹುದ್ದೆಯನ್ನು ನಿಯಮಿಸಲಾದ ವಿಧಾನದಲ್ಲಿ ಸರ್ಕಾರವು ಮೀಸಲಿರಿಸತಕ್ಕದ್ದು.

59. ಮೇಯರ್‌ನ ಅಧಿಕಾರಗಳು ಮತ್ತು ಪ್ರಕಾರ್ಯಗಳು.- (1) ಮೇಯರ್‌ನು, ಈ ಅಧಿನಿಯಮದ ಮೂಲಕ ತನಗೆ ವಹಿಸಲಾದ ಎಲ್ಲಾ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.

(2) ಮೇಯರ್‌ನ ಹುದ್ದೆಯು ಖಾಲಿಯಾದಾಗ, ಉಪಮೇಯರ್ ಮೇಯರ್ ಆಗಿ ಕರ್ತವ್ಯನಿರ್ವಹಿಸತಕ್ಕದ್ದು ಮತ್ತು ಮೇಯರ್-ಅನ್ನು ನೇಮಕ ಮಾಡುವ ಅಂಥ ಸಮಯದವರೆಗೆ ತನಗೆ ಗೊತ್ತುಪಡಿಸಿದ ಅಂಥ ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು.

(3) ಮೇಯರನು ಪಾಲಿಕೆಯ ಪ್ರತಿ ಸಭೆಯ ಅಧ್ಯಕ್ಷತೆಯನ್ನು ವಹಿಸತಕ್ಕದ್ದು.

(4) ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, ಮೇಯರ್‌ರವರು ಪರಿವೀಕ್ಷಣೆಯ ಸಾಮಾನ್ಯ ಅಧಿಕಾರಗಳನ್ನು ಹೊಂದಿರತಕ್ಕದ್ದು ಮತ್ತು ಪಾಲಿಕೆಯ ಯಾವುದೇ ಕಡ್ಡಾಯ ಮತ್ತು ವಿವೇಚನಾತ್ಮಕ ಪ್ರಕಾರ್ಯಗಳನ್ನು ನಿರ್ವಹಿಸುವಾಗ ಪಾಲಿಕೆಯ ಅಥವಾ ಸ್ಥಾಯೀ ಸಮಿತಿಯ ಯಾವುದೇ ನಿರ್ಣಯವನ್ನು ಜಾರಿಗೆ ತರುವುದಕ್ಕೆ ಸಂಬಂಧಿಸಿದಂತೆ ಆಯುಕ್ತರಿಗೆ ನಿರ್ದೇಶನವನ್ನು ಕೊಡಬಹುದು ಮತ್ತು ಮುಖ್ಯ ಆಯುಕ್ತರು ಅಂಥ ನಿರ್ದೇಶನಗಳನ್ನು ಪಾಲಿಸತಕ್ಕದ್ದು. ಮೇಯರ್‌ರವರು ಪಾಲಿಕೆಯ ಯಾವುದೇ ದಾಖಲೆಯನ್ನು ಮುಖ್ಯ

ಆಯುಕ್ತರಿಂದ ತರಿಸಿಕೊಳ್ಳಬಹುದು ಮತ್ತು ತಮಗೆ ಒದಗಿಸಿದ ದಾಖಲೆಗಳನ್ನು, ಅವುಗಳನ್ನು ತಮಗೆ ಒದಗಿಸಿದ ದಿನಾಂಕದಿಂದ ಹದಿನೈದು ದಿನಗಳೊಳಗಾಗಿ ಮೇಯರ್‌ರವರು ಹಿಂದಿರುಗಿಸತಕ್ಕದ್ದು.

(5) ಮೇಯರ್‌ರವರು ಲಿಖಿತ ಆದೇಶದ ಮೂಲಕ ತಮ್ಮ ಯಾವುದೇ ಪ್ರಕಾರ್ಯಗಳನ್ನು ಉಪ ಮೇಯರ್‌ರವರಿಗೆ ವಹಿಸಿಕೊಡಬಹುದು.

(6) ಮೇಯರ್‌ರವರು ಯಾವುದೇ ಸ್ಥಾಯೀ ಸಮಿತಿಯ ಅಧ್ಯಕ್ಷರಾಗಿ ಚುನಾಯಿತರಾಗಲು ಅರ್ಹರಾಗಿರತಕ್ಕದ್ದಲ್ಲ.

(7) ಮೇಯರ್‌ರವರು ತಾವು ಮೇಯರ್ ಆಗಿ ಚುನಾಯಿತರಾಗುವ ಕಾಲದಲ್ಲಿ ಸ್ಥಾಯೀ ಸಮಿತಿಯ ಅಧ್ಯಕ್ಷರಾಗಿದ್ದರೆ ಅಥವಾ ಚುನಾಯಿತ ಸದಸ್ಯರಾಗಿದ್ದರೆ, ಅವರು ಅಂಥ ಸಮಿತಿಯ ಅಧ್ಯಕ್ಷರಾಗಿ ಅಥವಾ ಸದಸ್ಯರಾಗಿ ಪದಧಾರಣ ಮಾಡಿರುವುದು ನಿಂತುಹೋಗತಕ್ಕದ್ದು.

(8) ಯಾವುದೇ ಸ್ಥಾಯೀ ಸಮಿತಿಯ ಅಧ್ಯಕ್ಷರ ಪದದಲ್ಲಿ ಯಾವುದೇ ಖಾಲೀ ಸ್ಥಾನ ಉಂಟಾದರೆ ಬೇರೊಬ್ಬ ಅಧ್ಯಕ್ಷರನ್ನು ಚುನಾಯಿಸುವುದಕ್ಕಾಗಿ ಮೇಯರ್ ಅವರು ಅಂಥ ಸಮಿತಿಯ ಸಭೆಯನ್ನು ಕರೆಯತಕ್ಕದ್ದು.

60. ಉಪಮೇಯರ್‌ರವರ ಪ್ರಕಾರ್ಯಗಳು.- (1) ಮೇಯರ್ ಹುದ್ದೆಯು ಖಾಲಿ ಇರುವಾಗ ಮತ್ತೊಬ್ಬ ಹೊಸ ಮೇಯರ್‌ರವರನ್ನು ಚುನಾಯಿಸುವವರೆಗೆ ಅವರ ಪ್ರಕಾರ್ಯಗಳು ಉಪ ಮೇಯರ್‌ರವರಿಗೆ ಪ್ರಾಪ್ತವಾಗತಕ್ಕದ್ದು.

(2) ಮೇಯರ್‌ರವರು ಸತತವಾಗಿ ಎಂಟು ದಿನಗಳಿಗಿಂತಲೂ ಹೆಚ್ಚು ಕಾಲ ನಗರದಲ್ಲಿರದಿದ್ದರೆ ಅಥವಾ ಎಂಟು ದಿನಗಳಿಗಿಂತಲೂ ಹೆಚ್ಚು ಕಾಲ ತಮ್ಮ ಪ್ರಕಾರ್ಯಗಳನ್ನು ನಿರ್ವಹಿಸಲು ಅಸಮರ್ಥರಾದರೆ ಮೇಯರ್‌ರವರು ನಗರಕ್ಕೆ ಹಿಂತಿರುಗುವವರೆಗೆ ಅಥವಾ ಸಂದರ್ಭಾನುಸಾರ, ಅವರು ಅಸಾಮರ್ಥ್ಯದಿಂದ ಚೇತರಿಸಿಕೊಳ್ಳುವವರೆಗೆ ಅವರ ಪ್ರಕಾರ್ಯಗಳು ಉಪಮೇಯರ್‌ರವರಿಗೆ ಪ್ರಾಪ್ತವಾಗತಕ್ಕದ್ದು.

(3) ಆಡಳಿತ ಮತ್ತು ಲೆಕ್ಕಪರಿಶೋಧನಾ ವರದಿಗಳನ್ನು ಸಕಾಲದಲ್ಲಿ ಸಿದ್ಧಪಡಿಸುವಂತೆ ಆಯುಕ್ತರಿಗೆ ನಿರ್ದೇಶಿಸುವ ಅಧಿಕಾರ ಉಪಮೇಯರ್‌ರವರಿಗೆ ಇರತಕ್ಕದ್ದು.

(4) ಉಪಮೇಯರ್ ರವರು, ಮೇಯರ್ ರವರು ತಮಗೆ ವಹಿಸಿಕೊಡಬಹುದಾದಂಥ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.

61. ಮೇಯರ್ ಮತ್ತು ಉಪಮೇಯರ್‌ನ ರಾಜೀನಾಮೆ.- (1) ಮೇಯರ್‌ರವರು ಯಾವುದೇ ಸಮಯದಲ್ಲಿ ಉಪಮೇಯರ್‌ರವರಿಗೆ ಸಂಭೋದಿಸಿ ತಮ್ಮ ಸ್ವಹಸ್ತಾಕ್ಷರದಲ್ಲಿ ಲಿಖಿತವಾಗಿ ತಮ್ಮ ಹುದ್ದೆಗೆ ರಾಜೀನಾಮೆಯನ್ನು ನೀಡಬಹುದು ಮತ್ತು ಉಪಮೇಯರ್‌ರವರು ಯಾವುದೇ ಸಮಯದಲ್ಲಿ ಮೇಯರ್‌ರವರಿಗೆ ಸಂಭೋದಿಸಿ ತಮ್ಮ ಸ್ವಹಸ್ತಾಕ್ಷರದಲ್ಲಿ ಲಿಖಿತವಾಗಿ ತಮ್ಮ ಹುದ್ದೆಗೆ ರಾಜೀನಾಮೆಯನ್ನು ನೀಡಬಹುದು:

ಪರಂತು, ಮೇಯರ್ ಅಥವಾ ಉಪ-ಮೇಯರ್ ಪದವು ಖಾಲಿ ಇದ್ದ ಸಂದರ್ಭದಲ್ಲಿ ರಾಜೀನಾಮೆಯನ್ನು ಪ್ರಾದೇಶಿಕ ಆಯುಕ್ತರಿಗೆ ಸಂಬೋಧಿಸಿ ಸಲ್ಲಿಸತಕ್ಕದ್ದು.

(2) ಪ್ರಾದೇಶಿಕ ಆಯುಕ್ತರು ಅಂತಹ ಹುದ್ದೆಯು ಖಾಲಿಯಾದ ದಿನಾಂಕದಿಂದ ಒಂದು ತಿಂಗಳೊಳಗಾಗಿ ನಿಯಮಿಸಲಾದಂತಹ ಕಾರ್ಯವಿಧಾನಕ್ಕೆ ಅನುಸಾರವಾಗಿ ಮೇಯರ್ ಮತ್ತು ಉಪಮೇಯರ್ ಹುದ್ದೆಗೆ ಚುನಾವಣೆಗಳನ್ನು ನಡೆಸತಕ್ಕದ್ದು.

(3) ಮೇಯರ್ ಮತ್ತು ಉಪಮೇಯರ್ ಹುದ್ದೆಯು ಖಾಲಿಯಿದ್ದ ಸಂದರ್ಭದಲ್ಲಿ, ಪ್ರಾದೇಶಿಕ ಆಯುಕ್ತರು (2)ನೇ ಉಪ-ಪ್ರಕರಣದಡಿಯಲ್ಲಿ ಅಂತಹ ಚುನಾವಣೆಗಳನ್ನು ನಡೆಸುವವರೆಗೆ ಮೇಯರ್ ಹುದ್ದೆಯ ಪ್ರಕಾರ್ಯಗಳನ್ನು ಚಲಾಯಿಸತಕ್ಕದ್ದು.

(4) (1)ನೇ ಉಪ-ಪ್ರಕರಣದಡಿಯಲ್ಲಿ ನೀಡಲಾದ ಅಂತಹ ರಾಜೀನಾಮೆಯು, ಅದನ್ನು ಸ್ವೀಕರಿಸಿದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

62. ಗೌರವಧನ, ಫೀಜು ಅಥವಾ ಭತ್ಯೆಗಳು.- (1) ಮೇಯರ್‌ರವರಿಗೆ, ಉಪಮೇಯರ್‌ರವರಿಗೆ ಮತ್ತು ಕೌನ್ಸಿಲರುಗಳಿಗೆ ಸರ್ಕಾರವು ನಿರ್ಧರಿಸಬಹುದಾದಂಥ ಗೌರವಧನ, ಫೀಜು ಅಥವಾ ಭತ್ಯಗಳನ್ನು ಪಾಲಿಕೆ ನಿಧಿಯಿಂದ ಸಂದಾಯ ಮಾಡಬಹುದು.

(2) ಪಾಲಿಕೆಯು, ನಿಯಮಿಸಬಹುದಾದಂಥ ಮಿತಿಯನ್ನು ಮೀರದಷ್ಟು ಮೊತ್ತವನ್ನು ಆದರಾತಿಥ್ಯ ಭತ್ಯದ ರೂಪದಲ್ಲಿ ಪ್ರತಿವರ್ಷ ಮೇಯರ್‌ರವರ ವಶದಲ್ಲಿಡತಕ್ಕದ್ದು:

ಪರಂತು, ಮಿತಿಯನ್ನು ನಿಯಮಿಸತಕ್ಕದ್ದು.

(3) ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಹಿಂದೆ ಹೇಳಿದಂತೆ, ಯಾರೇ ವ್ಯಕ್ತಿಯು ಮೇಯರ್, ಉಪಮೇಯರ್ ಅಥವಾ ಕೌನ್ಸಿಲರ್ ಆಗಿ ಗೌರವಧನವನ್ನು, ಫೀಜನ್ನು ಅಥವಾ ಭತ್ಯವನ್ನು ಸ್ವೀಕರಿಸುವುದು, ಕೌನ್ಸಿಲರನಾಗಿ ಚುನಾಯಿತನಾಗಲು ಅಥವಾ ಕೌನ್ಸಿಲರನಾಗಿರಲು ಅವನನ್ನು ಅನರ್ಹಗೊಳಿಸತಕ್ಕದ್ದಲ್ಲ.

63. ಮುಖ್ಯ ಆಯುಕ್ತ.- (1) ಪಾಲಿಕೆಯ ಮೇಯರ್‌ನೊಂದಿಗೆ ಸಮಾಲೋಚಿಸಿ ಸರ್ಕಾರವು ಮುಖ್ಯ ಆಯುಕ್ತನನ್ನು ನೇಮಿಸತಕ್ಕದ್ದು ಮತ್ತು ಅವನು ಪಾಲಿಕೆಯ ಸದಸ್ಯನಾಗಿರತಕ್ಕದ್ದಲ್ಲ.

(2) ಮುಖ್ಯ ಆಯುಕ್ತನು ಸರ್ಕಾರದ ಪ್ರಧಾನ ಕಾರ್ಯದರ್ಶಿ ದರ್ಜೆಗೆ ಕಡಿಮೆಯಲ್ಲದ ದರ್ಜೆಯ ಅಧಿಕಾರಿಯಾಗಿರತಕ್ಕದ್ದು.

(3) ಮುಖ್ಯ ಆಯುಕ್ತನು, ಸರ್ಕಾರದ ಇಚ್ಛೆಗೊಳಪಟ್ಟು ಎರಡು ವರ್ಷಗಳ ಅವಧಿಗಾಗಿ ಹುದ್ದೆಯನ್ನು ಹೊಂದಿರತಕ್ಕದ್ದು ಮತ್ತು ಪಾಲಿಕೆಯ ಪರಿಣಾಮಕಾರಿ ಆಡಳಿತಕ್ಕೆ ಅಗತ್ಯವಾಗಬಹುದಾದಂತೆ, ಸರ್ಕಾರವು ವರ್ಗಾವಣೆ ಮಾಡಬಹುದು.

(4) (3)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದಂತೆ ಮುಖ್ಯ ಆಯುಕ್ತನ ವರ್ಗಾವಣೆಯು ಪಾಲಿಕೆಯ ಯುಕ್ತ ಸಮಾಲೋಚನೆಯ ತರುವಾಯ ಮಾತ್ರವೇ ಆಗತಕ್ಕದ್ದು ಮತ್ತು ಅಂಥ ವರ್ಗಾವಣೆಗೆ ಕಾರಣಗಳನ್ನು ದಾಖಲುಮಾಡತಕ್ಕದ್ದು.

(5) ಸರ್ಕಾರವು ಈ ಮುಂದಿನ ಆಧಾರಗಳ ಮೇಲೆ ಪಾಲಿಕೆಯ ಶಿಫಾರಸ್ಸುಗಳ ಮೇರೆಗೆ ಮುಖ್ಯ ಆಯುಕ್ತನನ್ನು ಹುದ್ದೆಯಿಂದ ವರ್ಗಾಯಿಸಬಹುದು, ಎಂದರೆ:-

(ಎ) ದುರ್ನಡತೆ ಮತ್ತು ನಿರ್ಲಕ್ಷ್ಯದ ತಪ್ಪಿತಸ್ಥನೆಂದು ರುಜುವಾತಾದರೆ;

(ಬಿ) ಆತನಿಗೆ ವಹಿಸಿದ ಕರ್ತವ್ಯಗಳನ್ನು ನಿರ್ವಹಿಸುವಲ್ಲಿ ಅಸಮರ್ಥನಾದರೆ.

64. ಮುಖ್ಯ ಆಯುಕ್ತನ ಅಧಿಕಾರಗಳು ಮತ್ತು ಪ್ರಕಾರ್ಯಗಳು.- ಮುಖ್ಯ ಆಯುಕ್ತನು ಈ ಮುಂದಿನ ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು, ಎಂದರೆ:-

(1) ಅಧಿನಿಯಮದ ಅಡಿಯಲ್ಲಿ ಅವಶ್ಯವೆನಿಸುವ ಅಂಥ ವಿಷಯಗಳ ಮೇಲೆ ವಲಯ ಆಯುಕ್ತನನ್ನು ಮೇಲ್ವಿಚಾರಣೆ ಮಾಡುವುದು ಮತ್ತು ನಿರ್ದೇಶಿಸುವುದು.

(2) ಅವಶ್ಯವಾದ ಎಲ್ಲಾ ವಿಷಯಗಳಿಗಾಗಿ ಮೇಯರ್, ಉಪಮೇಯರ್, ಕೌನ್ಸಿಲ್ ಮತ್ತು ವಲಯ ಸಮಿತಿಗಳ ನಡುವೆ ಸಮನ್ವಯ ಉಂಟುಮಾಡುವುದು.

(3) ವಲಯ ಆಯಕ್ತನು ತನಗೆ ಉಲ್ಲೇಖಿಸಿದ ಅಂತರ್ ವಲಯದ ಮೇಲೆ ತೀರ್ಮಾನಿಸುವುದು;

(4) ಈ ಅಧಿನಿಯಮದ ಅಥವಾ ಮೇಯರ್ ಅಥವಾ ಸರ್ಕಾರದ ನಿರ್ದೇಶನದ ಅಡಿಯಲ್ಲಿ ಹಾಗೆ ಮಾಡಬೇಕೆಂದು ಆತನನ್ನು ಅಗತ್ಯಪಡಿಸಬಹುದಾದ ಅಂಥ ಇತರ ಪ್ರಕಾರ್ಯಗಳನ್ನು ಕೈಗೊಳ್ಳತಕ್ಕದ್ದು.

(5) ಪಾಲಿಕೆಯ ಅಥವಾ ಸಂಬಂಧಪಟ್ಟ ಸ್ಥಾಯೀ ಸಮಿತಿಯ ಅನುಮೋದನೆಗೆ ಅಥವಾ ಮಂಜೂರಾತಿಗೆ ಒಳಪಟ್ಟು ಮತ್ತು ಈ ಅಧಿನಿಯಮದ ಮೂಲಕ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನ ಮೂಲಕ ವಿಧಿಸಿದ ಇತರ ಎಲ್ಲ ನಿರ್ಬಂಧಗಳು, ಪರಿಮಿತಿಗಳು ಮತ್ತು ಪರತ್ತುಗಳಿಗೆ ಸಹ ಒಳಪಟ್ಟು ಪಾಲಿಕೆಗೆ ಯಾವುದೇ ಕರ್ತವ್ಯವನ್ನು ವಿಧಿಸುವ ಅಥವಾ ಯಾವುದೇ ಅಧಿಕಾರವನ್ನು ಪ್ರದಾನ ಮಾಡುವ ಈ ಅಧಿನಿಯಮದ ಮತ್ತು ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನ ಉಪಬಂಧಗಳು ಇರದಿದ್ದರೆ ಅವುಗಳನ್ನು ನೆರವೇರಿಸುವ ಉದ್ದೇಶಕ್ಕಾಗಿ ಕಾರ್ಯಾಂಗ ಅಧಿಕಾರವನ್ನು ಮುಖ್ಯ ಆಯುಕ್ತರಲ್ಲಿ ನಿಹಿತಗೊಳಿಸತಕ್ಕದ್ದೆಂದು, ಈ ಅಧಿನಿಯಮದಲ್ಲಿ ಸ್ಪಷ್ಟವಾಗಿ ನಿರ್ದೇಶಿಸಿದಾಗಲೆಲ್ಲಾ ಆ ಕಾರ್ಯಾಂಗ ಅಧಿಕಾರವನ್ನು ಅವರಲ್ಲಿ ನಿಹಿತಗೊಳಿಸತಕ್ಕದ್ದು, ಅವರು,-

(ಎ) ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ಅಥವಾ ತಾತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನ ಮೂಲಕ ಅವರಿಗೆ ನಿರ್ದಿಷ್ಟವಾಗಿ ವಿಧಿಸಿದ ಎಲ್ಲ ಕರ್ತವ್ಯಗಳನ್ನು ಸಹ ನೆರವೇರಿಸತಕ್ಕದ್ದು ಮತ್ತು ಪ್ರದಾನ ಮಾಡಿದ ಎಲ್ಲ ಅಧಿಕಾರಗಳನ್ನು ಸಹ ಚಲಾಯಿಸತಕ್ಕದ್ದು;

(ಬಿ) ಯಾವುದೇ ತುರ್ತುಪರಿಸ್ಥಿತಿಯಲ್ಲಿ, ಸಾರ್ವಜನಿಕರ ಸೇವೆಗಾಗಿ ಅಥವಾ ಸುರಕ್ಷೆಗಾಗಿ ಅಥವಾ ಪಾಲಿಕೆಯ ಸ್ವತ್ತಿನ ರಕ್ಷಣೆಗಾಗಿ, ತಕ್ಷಣದ ಕ್ರಮವನ್ನು ಇನ್ನಾವುದೇ ಪಾಲಿಕೆ ಪ್ರಾಧಿಕಾರದಿಂದ ಅಥವಾ ಸರ್ಕಾರದಿಂದ ಮಂಜೂರಾತಿ, ಅನುಮೋದನೆ ಅಥವಾ ಅಧಿಕಾರವನ್ನು ಪಡೆಯದೆಯೇ ಈ ಅಧಿನಿಯಮದ ಮೇರೆಗೆ ಕೈಗೊಳ್ಳಲಾಗದಿದ್ದರೂ, ತುರ್ತುಪರಿಸ್ಥಿತಿಯಿಂದಾಗಿ ಅಂಥ ತಕ್ಷಣದ ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆಂದು ಅವರಿಗೆ ಕಂಡುಬಂದರೆ ಅಥವಾ ಅಂಥ ಕ್ರಮವನ್ನು ಕೈಗೊಳ್ಳುವುದಕ್ಕೆ ತುರ್ತುಪರಿಸ್ಥಿತಿಯು ಸಮರ್ಥನೆ ಒದಗಿಸಿದರೆ ಅಥವಾ ಅಗತ್ಯಪಡಿಸಿದರೆ ಅಂಥ ತಕ್ಷಣದ ಕ್ರಮವನ್ನು ತೆಗೆದುಕೊಳ್ಳತಕ್ಕದ್ದು:

ಪರಂತು, ಮುಖ್ಯ ಆಯುಕ್ತರು ತಾವು ತೆಗೆದುಕೊಂಡ ಕ್ರಮವನ್ನು ಮತ್ತು ಆ ಕ್ರಮವನ್ನು ತೆಗೆದುಕೊಂಡದ್ದಕ್ಕೆ ಕಾರಣಗಳನ್ನು ಮತ್ತು ಅಂಥ ಕ್ರಮದ ಪರಿಣಾಮವಾಗಿ ವಹಿಸಿದ ಅಥವಾ ವಹಿಸುವ ಸಂಭವವಿರುವ ಆದರೆ ಈ ಅಧಿನಿಯಮದ ಉಪಬಂಧಗಳ ಮೇರೆಗೆ ಪ್ರಸಕ್ತ ಬಜೆಟ್ ಅನುದಾನದಲ್ಲಿ ಒಳಗೊಂಡಿರದಂಥ ಖರ್ಚಿನ ಮೊಬಲಗು ಯಾವುದಾದರೂ ಇದ್ದರೆ, ಅದನ್ನು ತತ್‌ಕ್ಷಣ ಸಂಬಂಧಪಟ್ಟ ಸ್ಥಾಯೀ ಸಮಿತಿಗೆ ಮತ್ತು ಪಾಲಿಕೆಗೆ ವರದಿ ಮಾಡತಕ್ಕದ್ದು.

(6) ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನ ಮೂಲಕ ಪಾಲಿಕೆಗೆ ಪ್ರದಾನ ಮಾಡಿದ ಯಾವುವೇ ಅಧಿಕಾರಗಳನ್ನು ಅಥವಾ ವಿಧಿಸಿದ ಯಾವುವೇ ಕರ್ತವ್ಯಗಳನ್ನು ಮತ್ತು ನಿಹಿತವಾದ ಯಾವುವೇ ಪ್ರಕಾರ್ಯಗಳನ್ನು ಅಂಥ ಕಾನೂನಿನ ಉಪಬಂಧಗಳಿಗೊಳಪಟ್ಟು ಮುಖ್ಯ ಆಯುಕ್ತರು ಚಲಾಯಿಸತಕ್ಕದ್ದು, ನೆರವೇರಿಸತಕ್ಕದ್ದು ಅಥವಾ ನಿರ್ವಹಿಸತಕ್ಕದ್ದು.

(7) ಮುಖ್ಯ ಆಯುಕ್ತರು ಸಂಬಂಧಪಟ್ಟ ಸ್ಥಾಯೀ ಸಮಿತಿಯ ಅನುಮೋದನೆಯೊಂದಿಗೆ ಲಿಖಿತ ಆದೇಶದ ಮೂಲಕ ಯಾವುದೇ ಅಂಥ ಅಧಿಕಾರವನ್ನು ಚಲಾಯಿಸುವುದಕ್ಕೆ, ಕರ್ತವ್ಯವನ್ನು ನೆರವೇರಿಸುವುದಕ್ಕೆ ಅಥವಾ ಪ್ರಕಾರ್ಯವನ್ನು ನಿರ್ವಹಿಸುವುದಕ್ಕೆ ತಮ್ಮ ಪರಿಶೀಲನೆಗೆ ಹಾಗೂ ತಾವು ನಿರ್ದಿಷ್ಟಪಡಿಸುವುದು ಸೂಕ್ತವೆಂದು ಭಾವಿಸುವಂಥ ಷರತ್ತುಗಳು ಮತ್ತು ಪರಿಮಿತಿಗಳು ಯಾವುವಾದರೂ ಇದ್ದರೆ ಅವುಗಳಿಗೆ ಒಳಪಟ್ಟು, ತಮ್ಮ ನಿಯಂತ್ರಣದಲ್ಲಿರುವ ಪಾಲಿಕೆಯ ಯಾರೇ ಅಧಿಕಾರಿಗೆ ಅಧಿಕಾರ ನೀಡಬಹುದು.

65. ಮುಖ್ಯ ಆಯುಕ್ತರು ಪತ್ರವ್ಯವಹಾರವನ್ನು ಮಾಡುವುದು.- ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ಅಥವಾ ಇತರ ಯಾವುದೇ ಕಾನೂನಿನ ಮೇರೆಗೆ ಪಾಲಿಕೆಯ ಮತ್ತು ಸರ್ಕಾರದ ಅಥವಾ ಇತರೆ ಪ್ರಾಧಿಕಾರದ ನಡುವೆ ವ್ಯವಹರಿಸುವ ಯಾವುದೇ ವಿಷಯಕ್ಕೆ ಸಂಬಂಧಪಟಂತೆ ಎಲ್ಲಾ ಪತ್ರವ್ಯವಹಾರವನ್ನು ಮುಖ್ಯ ಆಯುಕ್ತರು ಮಾಡತಕ್ಕದ್ದು ಮತ್ತು ಮುಖ್ಯ ಆಯುಕ್ತರು ಅಂಥ ಪತ್ರವ್ಯವಹಾರ ಪ್ರತಿಗಳನ್ನು ಮೇಯರ್‌ರವರಿಗೆ ಕಳುಹಿಸತಕ್ಕದ್ದು.

66. ಮುಖ್ಯ ಆಯುಕ್ತರ ಸಾಮಾನ್ಯ ಅಧಿಕಾರವನ್ನು ವಹಿಸಿಕೊಡುವುದು.- ರಾಜ್ಯ ಸರ್ಕಾರವು ರಚಿಸಿದ ನಿಯಮಗಳಿಗೆ ಒಳಪಟ್ಟು ಮುಖ್ಯ ಆಯುಕ್ತರು, ನಿಯಮಿಸಬಹುದಾದ ಅಧಿಕಾರಗಳೂ ಒಳಗೊಂಡಂತೆ ತಮ್ಮ ಯಾವುದೇ ಸಾಮಾನ್ಯ ಅಧಿಕಾರಗಳಲ್ಲಿ, ಕರ್ತವ್ಯಗಳಲ್ಲಿ ಹಾಗೂ ಪ್ರಕಾರ್ಯಗಳಲ್ಲಿ ಯಾವುದನ್ನಾದರೂ ಪಾಲಿಕೆಯ ಯಾರೇ ತನ್ನ ಅಧೀನ ಅಧಿಕಾರಿಗೆ ವಹಿಸಿಕೊಡಬಹುದು.

67. ಮುಖ್ಯ ಆಯುಕ್ತರ ವಿಶೇಷ ಅಧಿಕಾರವನ್ನು ವಹಿಸಿಕೊಡುವುದು.- ಮುಖ್ಯ ಆಯುಕ್ತರು, 64ನೇ ಪ್ರಕರಣದ (5)ನೇ ಉಪಪ್ರಕರಣದ (ಬಿ) ಖಂಡದ ಮೂಲಕ ತಮಗೆ ಪ್ರದತ್ತವಾದ ವಿಶೇಷ ಅಧಿಕಾರಗಳನ್ನು ಚಲಾಯಿಸಲು, ಆರೋಗ್ಯಾಧಿಕಾರಿಗೆ, ಇಂಜಿನಿಯರ್‌ಗೆ, ರೆವಿನ್ಯೂ ಅಧಿಕಾರಿಗೆ ಅಥವಾ ತನ್ನ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ವಿಭಾಗದ ಮುಖ್ಯಸ್ಥರಾದ ಇತರ ಯಾರೇ ಅಧಿಕಾರಿಗೆ ಅಥವಾ ಹಿಂದೆ ಹೇಳಿದ ಅಧಿಕಾರಿಗಳಲ್ಲಿ ಯಾರೇ ಅಧಿಕಾರಿಯ ಕರ್ತವ್ಯಗಳ ತಾತ್ಕಾಲಿಕ ಪ್ರಭಾರದಲ್ಲಿರುವ ಯಾರೇ ವ್ಯಕ್ತಿಗೆ ತನ್ನ ಸಂಪ್ರತ ಜವಾಬ್ದಾರಿಯ ಮೇಲೆ ಮತ್ತು ಲಿಖಿತ ಆದೇಶದ ಮೂಲಕ ಅಧಿಕಾರ ನೀಡಬಹುದು.

68. ದಾಖಲೆಗಳ ಅಭಿರಕ್ಷೆ.- ಮುಖ್ಯ ಆಯುಕ್ತರು ಪಾಲಿಕೆಯ ಸ್ಥಾಯೀ ಸಮಿತಿಯ ಮತ್ತು ಇತರ ಸಮಿತಿಗಳ ವ್ಯವಹರಣೆಗಳಿಗೆ ಸಂಬಂಧಪಟ್ಟ ಎಲ್ಲ ಕಾಗದಪತ್ರಗಳು ಮತ್ತು ದಸ್ತಾವೇಜುಗಳು ಒಳಗೊಂಡಂತೆ ಪಾಲಿಕೆಯ ಎಲ್ಲ ದಾಖಲೆಗಳ ಅಭಿರಕ್ಷೆಗೆ ಜವಾಬ್ದಾರರಾಗಿರತಕ್ಕದ್ದು.

69. ಪಾಲಿಕೆಯ ಸಿಬ್ಬಂದಿಯ ಮೇಲೆ ನಿಯಂತ್ರಣ.- ಈ ಅಧಿನಿಯಮದ, ನಿಯಮಗಳ ಮತ್ತು ವಿನಿಮಯಗಳ ಉಪಬಂಧಗಳಿಗೆ ಒಳಪಟ್ಟು, ಮುಖ್ಯ ಆಯುಕ್ತರು ಪಾಲಿಕೆಯ ಸಿಬ್ಬಂದಿ ವರ್ಗಕ್ಕೆ ಸೇರಿದ ವ್ಯಕ್ತಿಗಳ ಕರ್ತವ್ಯಗಳನ್ನು ನಿರ್ದಿಷ್ಟಪಡಿಸತಕ್ಕದ್ದು ಮತ್ತು ಅವರ ಮೇಲೆ ಮೇಲ್ವಿಚಾರಣೆ ಮತ್ತು ನಿಯಂತ್ರಣಾಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅವರ ಸೇವಾ ಷರತ್ತುಗಳಿಗೆ ಸಂಬಂಧಪಟ್ಟ ಎಲ್ಲ ಪ್ರಶ್ನೆಗಳನ್ನು ತೀರ್ಮಾನಿಸತಕ್ಕದ್ದು.

70. ಮುಖ್ಯ ಆಯುಕ್ತನ ಸಂಬಳ ಮತ್ತು ಭತ್ಯೆಗಳು.- ಮುಖ್ಯ ಆಯಕ್ತನಿಗೆ ರಾಜ್ಯದ ಪಾಲಿಕೆ ನಿಧಿಯಿಂದ ರಾಜ್ಯ ಸರ್ಕಾರವು ಕಾಲಕಾಲಕ್ಕೆ ನಿಗದಿಪಡಿಸಬಹುದಾದ ಅಂಥ ತಿಂಗಳ ಸಂಬಳವನ್ನು ಮತ್ತು ಅಂಥ ತಿಂಗಳ ಭತ್ಯೆಗಳನ್ನು, ಯಾವುದಾದರೂ ಇದ್ದಲ್ಲಿ, ಪಾವತಿಸತಕ್ಕದ್ದು ಮತ್ತು ನಿವಾಸಿ ಸ್ವಳಾವಕಾಶ, ವಾಹನಭತ್ಯೆ ಮತ್ತು ಸರ್ಕಾರವು ನಿಗದಿಪಡಿಸಬಹುದಾದ ಅಂಥ ಇತರ ಸೌಲಭ್ಯಗಳನ್ನು ಕೂಡಾ ನೀಡತಕ್ಕದ್ದು.

71. ಮುಖ್ಯ ಆಯುಕ್ತನ ಮರಣ, ರಾಜೀನಾಮೆ ಅಥವಾ ತೆಗೆದುಹಾಕುವ ಸಂದರ್ಭದಲ್ಲಿ ಸ್ಥಾನಾಪನ್ನಾ (officiating) ಮುಖ್ಯ ಆಯುಕ್ತರನ್ನು ನೇಮಿಸುವುದು.- ಮರಣ, ರಾಜೀನಾಮೆ ಅಥವಾ ತೆಗೆದುಹಾಕುವ ಕಾರಣದಿಂದಾಗಿ ಮುಖ್ಯ ಆಯುಕ್ತರ ಹುದ್ದೆಯಲ್ಲಿ ಯಾವುದೇ ಖಾಲಿಸ್ಥಾನ ಉಂಟಾದಲ್ಲಿ, ಆಗ ರಾಜ್ಯ ಸರ್ಕಾರವು, ಹೊಸ ಮುಖ್ಯ ಆಯುಕ್ತನ ನೇಮಕಾತಿಯನ್ನು ಬಾಕಿಯಿರಿಸಿ, 6 ತಿಂಗಳುಗಳಿಗೆ ಮೀರದಿರುವ ಅವಧಿಗಾಗಿ ಅವರ ಸ್ಥಾನದಲ್ಲಿ ಹಂಗಾಮಿ ಆಯುಕ್ತರ ಪಾತ್ರವನ್ನು ನಿರ್ವಹಿಸಲು ಸರ್ಕಾರದ ಪ್ರಧಾನ ಕಾರ್ಯದರ್ಶಿ ದರ್ಜೆಗಿಂತ ಕಡಿಮೆಯಿರದ ಮತ್ತೊಬ್ಬ ಅಧಿಕಾರಿಯನ್ನು ನೇಮಕ ಮಾಡಬಹುದು.

72. ವಲಯ ಆಯುಕ್ತ.- ಸರ್ಕಾರವು, ತಾನು ಅಧಿಸೂಚಿಸಿದ ಪ್ರತಿಯೊಂದು ವಲಯಕ್ಕೆ ವಲಯ ಆಯುಕ್ತನನ್ನು ನೇಮಿಸತಕ್ಕದ್ದು ಮತ್ತು ಆತನು ಸರ್ಕಾರದ ಕಾರ್ಯದರ್ಶಿ ದರ್ಜೆಗೆ ಕಡಿಮೆಯಲ್ಲದ ದರ್ಜೆಯ ವ್ಯಕ್ತಿಯಾಗಿರತಕ್ಕದ್ದು.

73. ವಲಯ ಆಯುಕ್ತನ ಸಂಬಳ ಮತ್ತು ಷರತ್ತುಗಳು.- ವಲಯ ಆಯುಕ್ತನಿಗೆ, ರಾಜ್ಯ ಸರ್ಕಾರವು ಕಾಲಕಾಲಕ್ಕೆ ನಿಗದಿಪಡಿಸಬಹುದಾದ ಅಂಥ ತಿಂಗಳ ಸಂಬಳ ಮತ್ತು ತಿಂಗಳ ಭತ್ಯೆಗಳನ್ನು ಪಾಲಿಕೆಯ

ನಿಧಿಯಿಂದ ಪಾವತಿಸತಕ್ಕದ್ದು ಮತ್ತು ನಿವಾಸಿ ಸ್ಥಳಾವಕಾಶ, ಸಾರಿಗೆ ಭತ್ಯೆಗೆ ಸಂಬಂಧಿಸಿದ ಅಂಥ ಸೌಲಭ್ಯಗಳು ಮತ್ತು ಸರ್ಕಾರವು ನಿಗದಿಪಡಿಸಬಹುದಾದ ಅಂಥ ಇತರ ಸೌಲಭ್ಯಗಳನ್ನು ಕೂಡಾ ನೀಡತಕ್ಕದ್ದು.

74. ವಲಯ ಆಯುಕ್ತನ ಅಧಿಕಾರಗಳು ಮತ್ತು ಪ್ರಕಾರ್ಯಗಳು.- ವಲಯ ಆಯುಕ್ತನು ಈ ಮುಂದಿನ ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು, ಎಂದರೆ:-

(ಎ) ಅವನು ತನ್ನ ಅಧಿಕಾರವ್ಯಾಪ್ತಿಯ ಅಡಿಯಲ್ಲಿ ಈ ಅಧಿನಿಯಮದ ಅಡಿಯಲ್ಲಿ ನಿರ್ದಿಷ್ಟಪಡಿಸಿದ ವಿಷಯಗಳ ಮೇಲೆ ನಾಗರಿಕ ಆಡಳಿತವನ್ನು ಕೈಗೊಳ್ಳುವುದಕ್ಕಾಗಿ ನೋಡಲ್ ಪ್ರಾಧಿಕಾರಿಯಾಗಿರತಕ್ಕದ್ದು.

(ಬಿ) ಅವನು ಈ ಅಧಿನಿಯಮದ ಅಡಿಯಲ್ಲಿ ನಿರ್ದಿಷ್ಟಪಡಿಸಿದ ಅಂಥ ವಿಷಯಗಳ ಮೇಲೆ ವಾರ್ಡ್ ಸಮಿತಿಗಳು ಮತ್ತು ಪ್ರದೇಶ ಸಭಾದ ಮೇಲ್ವಿಚಾರಣೆ, ನಿರ್ದೇಶನ ಮತ್ತು ಸಮನ್ವಯ ಮಾಡತಕ್ಕದ್ದು.

(ಸಿ) ಅವನು ಕಾಲಕಾಲಕ್ಕೆ ಮುಖ್ಯ ಆಯುಕ್ತ ಅಥವಾ ಮೇಯರ್ ನಿರ್ದೇಶಿಸಿದಂತೆ ಪ್ರಕಾರ್ಯಗಳನ್ನು ಕೈಗೊಳ್ಳತಕ್ಕದ್ದು.

(ಡಿ) ರಾಜ್ಯ ಸರ್ಕಾರವು ಮಾಡಿದ ನಿಯಮಗಳಿಗೆ ಒಳಪಟ್ಟು, ಈ ಅಧಿನಿಯಮದ ಅಡಿಯಲ್ಲಿ ಉಪಬಂಧಿಸಲಾದ ತನ್ನ ಸಾಮಾನ್ಯ ಅಧಿಕಾರಗಳು, ಕರ್ತವ್ಯಗಳು ಮತ್ತು ಪ್ರಕಾರ್ಯಗಳನ್ನು ತನ್ನ ಯಾವುದೇ ಅಧೀನ ಪಾಲಿಕೆ ಅಧಿಕಾರಿಗೆ ವಲಯ ಆಯುಕ್ತರು ಪ್ರತ್ಯಾಯೋಜಿಸಬಹುದು.

75. ಕ್ಷೇತ್ರ ಸಮಾಲೋಚನಾ ಸಮಿತಿಯ ಸ್ಥಾಪನೆ.- (1) ಕ್ಷೇತ್ರ ಸಮಾಲೋಚನೆ ಸಮಿತಿ ಎಂಬ ಹೆಸರಿನ ಒಂದು ಸಮಿತಿ ಇರತಕ್ಕದ್ದು. ಈ ಸಮಿತಿಯನ್ನು ಪಾಲಿಕೆಯ ಪ್ರದೇಶದಲ್ಲಿನ ಪ್ರತಿಯೊಂದು ವಿಧಾನಸಭಾ ಕ್ಷೇತ್ರಕ್ಕೆ ಸರ್ಕಾರವು ಸ್ಥಾಪಿಸತಕ್ಕದ್ದು.

(2) ಕ್ಷೇತ್ರ ಸಮಾಲೋಚನಾ ಸಮಿತಿಯು ಈ ಕೆಳಕಂಡ ಸದಸ್ಯರುಗಳನ್ನು ಒಳಗೊಂಡಿರತಕ್ಕದ್ದು, ಎಂದರೆ:-

(ಎ) ಆ ವಿಧಾನಸಭಾ ಕ್ಷೇತ್ರದ ವಿಧಾನಸಭಾ ಸದಸ್ಯರು, ಇವರು ಸದರಿ ಸಮಿತಿಯ ಅಧ್ಯಕ್ಷರಾಗಿರತಕ್ಕದ್ದು;

(ಬಿ) ಆ ವಿಧಾನಸಭಾ ಕ್ಷೇತ್ರದಲ್ಲಿನ ಎಲ್ಲಾ ವಾರ್ಡ್ ಗಳ ಪಾಲಿಕೆ ಕೌನ್ಸಿಲರ್ ಗಳು;

(ಸಿ) ಸರ್ಕಾರದ ಅನುಮೋದನೆಯೊಂದಿಗೆ ಅಧ್ಯಕ್ಷರಿಂದ ನಾಮನಿರ್ದೇಶನ ಮಾಡಲ್ಪಟ್ಟ ವಿಧಾನಸಭಾ ಕ್ಷೇತ್ರದ ಐದು ಜನರಿಗಿಂತ ಹೆಚ್ಚಿರದ ನಿವಾಸಿ ಸಂಘದ ಪ್ರತಿನಿಧಿಗಳು.

(3) ನಾಮನಿರ್ದೇಶಿತ ಸದಸ್ಯರ ಅವಧಿಯು ಮೂವತ್ತು ತಿಂಗಳುಗಳಾಗಿರತಕ್ಕದ್ದು.

(4) ತತ್ಕಾಲದಲ್ಲಿ ಜಾರಿಯಲ್ಲಿರುವ ಅಧಿನಿಯಮದ ಉಪಬಂಧಗಳಡಿ ಯಾರೇ ವ್ಯಕ್ತಿಯು ಪಾಲಿಕೆಯ ಕೌನ್ಸಿಲರ್ ಆಗಿ ಚುನಾಯಿತನಾಗುವುದಕ್ಕೆ ಅನರ್ಹನಾಗಿದ್ದ ಪಕ್ಷದಲ್ಲಿ ಆತನು ಕ್ಷೇತ್ರ ಸಮಾಲೋಚನಾ ಸಮಿತಿಯ ಸದಸ್ಯನಾಗಿ ನಾಮನಿರ್ದೇಶನಗೊಳ್ಳುವುದಕ್ಕೆ ಅಥವಾ ಅಂತಹ ಸದಸ್ಯನಾಗಿ ಮುಂದುವರೆಯುವುದಕ್ಕೆ ಅನರ್ಹನಾಗಿರತಕ್ಕದ್ದು.

(5) ನಾಮನಿರ್ದೇಶಿತ ಸದಸ್ಯನು ಪಾಲಿಕೆಯ ವ್ಯವಹಾರಗಳಲ್ಲಿ ಯಾವುದೇ ವೈಯಕ್ತಿಕ ಹಿತಾಸಕ್ತಿಯನ್ನು ಹೊಂದಿರತಕ್ಕದ್ದಲ್ಲ.

76. ಕ್ಷೇತ್ರ ಸಮಾಲೋಚನಾ ಸಮಿತಿಯ ಪ್ರಕಾರ್ಯಗಳು.- ಕ್ಷೇತ್ರ ಸಮಾಲೋಚನಾ ಸಮಿತಿಯು:-

(ಎ) ವಲಯ ಸಮಿತಿಗಳ ಪ್ರಕಾರ್ಯಗಳ ನಿರ್ವಹಣೆಯಲ್ಲಿ ಅವುಗಳಿಗೆ ನೆರವು ಮತ್ತು ಸಲಹೆಯನ್ನು ನೀಡತಕ್ಕದ್ದು;

(ಬಿ) ವಲಯ ಸಮಿತಿಗಳ ಕಾರ್ಯನಿರ್ವಹಣೆಯನ್ನು ಪರಿಶೀಲಿಸಿ ಹಿಂದುಳಿದ ವಾರ್ಡ್ ನ ಸುಧಾರಣೆಗಾಗಿ ಸಲಹೆಗಳನ್ನು ನೀಡುವುದು;

(ಸಿ) ಕ್ಷೇತ್ರದಲ್ಲಿನ ಯಾವುದೇ ಯೋಜನೆಗಳ ಅನುಷ್ಠಾನಗಳ ಬಗ್ಗೆ ಮೇಲ್ವಿಚಾರಣೆ ಮಾಡುವುದು;

(ಡಿ) ಈ ಅಧಿನಿಯಮದಡಿ ಅಧಿಕಾರ ಪಡೆದ ಯಾವುದೇ ಪ್ರಕಾರ್ಯಗಳಿಗೆ ಸಂಬಂಧಿಸಿದಂತೆ ಜನಸಾಮಾನ್ಯರಿಂದ ಯಾವುದೇ ದೂರುಗಳನ್ನು ಸ್ವೀಕರಿಸುವುದು;

(ಇ) ಈ ಅಧಿನಿಯಮದಡಿ ವಾರ್ಡ್ ಸಮಿತಿಗಳ ಪ್ರಕಾರ್ಯಗಳ ನಿರ್ವಹಣೆಯಲ್ಲಿ ವಾರ್ಡ್ ಸಮಿತಿಗಳಿಗೆ ಸಲಹೆ ನೀಡುವುದು; ಮತ್ತು

(ಎಫ್) ಅಧ್ಯಕ್ಷರ ಪೂರ್ವಮಂಜೂರಾತಿಯ ಮೇರೆಗೆ ವಲಯ ಸಮಿತಿಗಳ ಕಾರ್ಯನಿರ್ವಹಣೆಯನ್ನು ಪುನರಾವಲೋಕಿಸಲು ಅಗತ್ಯವಾದ ಮಾಹಿತಿಯನ್ನು ಕೋರುವುದು ಮತ್ತು ಹಿಂದುಳಿದ ವಾರ್ಡ್ ನ ಸುಧಾರಣೆಗಾಗಿ ಸಲಹೆಗಳನ್ನು ನೀಡುವುದು.

77. ವಲಯ ಸಮಿತಿಗಳ ಸ್ಥಾಪನೆ.- (1) ಪಾಲಿಕೆಯ ಪ್ರತಿಯೊಂದು ವಲಯವು ಈ ಮುಂದಿನ ಸದಸ್ಯರನ್ನೊಳಗೊಂಡ ವಲಯ ಸಮಿತಿಯನ್ನು ಹೊಂದಿರತಕ್ಕದ್ದು, ಎಂದರೆ:-

(ಎ) ವಲಯ ಸಮಿತಿಯ ಅಧ್ಯಕ್ಷರು ವಲಯದೊಳಗಿನ ವಾರ್ಡ್ ಗಳ ಪೈಕಿ ಯಾವುದಾದರೊಂದು ವಾರ್ಡನ್ನು ಪ್ರತಿನಿಧಿಸುವ ಕೌನ್ಸಿಲರ್ ನಾಗಿರತಕ್ಕದ್ದು ಮತ್ತು ಇವರನ್ನು ನಿಯಮಿಸಬಹುದಾದಂತಹ ರೀತಿಯಲ್ಲಿ ವಲಯದ ಕೌನ್ಸಿಲರ್ ಗಳಿಂದಲೇ ಚುನಾಯಿಸತಕ್ಕದ್ದು.

(ಬಿ) ವಲಯದೊಳಗಿನ ವಾರ್ಡ್‌ಗಳಿಂದ ಚುನಾಯಿತರಾದ ಎಲ್ಲಾ ಕೌನ್ಸಿಲರ್‌ಗಳು;

(ಸಿ) ನಿರ್ದಿಷ್ಟ ವಲಯದ ಪ್ರಭಾರದಲ್ಲಿರುವ ಇಂಜಿನಿಯರ್- ಸದಸ್ಯ;

(ಡಿ) ತ್ಯಾಜ್ಯ ನಿರ್ವಹಣೆಯಲ್ಲಿ ಪರಿಣಿತಿ ಹೊಂದಿರುವ ಸರ್ಕಾರದಿಂದ ನಾಮನಿರ್ದೇಶಿಸಲ್ಪಟ್ಟ ಒಬ್ಬ ವ್ಯಕ್ತಿ;

(ಇ) ನಗರ ಆಡಳಿತದಲ್ಲಿ ಪರಿಣಿತಿ ಹೊಂದಿರುವಂತಹ ಸರ್ಕಾರದಿಂದ ನಾಮನಿರ್ದೇಶಿಸಲ್ಪಟ್ಟ ಒಬ್ಬ ವ್ಯಕ್ತಿ.

(2) ವಲಯ ಸಮಿತಿಯ ಸದಸ್ಯನ ಅಧಿಕಾರ ಅವಧಿಯು ಒಂದು ವರ್ಷವಾಗಿರತಕ್ಕದ್ದು.

(3) ವಲಯ ಸಮಿತಿಯ ಅಧ್ಯಕ್ಷನಾಗಿರುವ ಕೌನ್ಸಿಲರನು ಎರಡನೇ ಅವಧಿಗೆ ಅಧ್ಯಕ್ಷನಾಗಲು ಅರ್ಹನಾಗತಕ್ಕದ್ದಲ್ಲ.

(4) ಸಂಬಂಧಪಟ್ಟ ವಲಯದ ವ್ಯಾಪ್ತಿಯಲ್ಲಿ ಸೇವೆಗಳ ನಿರ್ವಹಣೆಯ ಜವಾಬ್ದಾರಿಯನ್ನು ಹೊಂದಿರುವ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಮತ್ತು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಅಧಿಕಾರಿಗಳು ವಲಯ ಸಮಿತಿಯ ಪದನಿಮಿತ್ತ ಸದಸ್ಯನಾಗಿರತಕ್ಕದ್ದು. ವಾರ್ಡ್ ನ ಸಂಚಾರದ ಪ್ರಭಾರವನ್ನು ಹೊಂದಿರುವ ಪೊಲೀಸ್ ಅಧಿಕಾರಿಗಳು, ವಲಯದ ಪ್ರಭಾರವನ್ನು ಹೊಂದಿರುವ ಬೆಸ್ಕಾಂ ಅಧಿಕಾರಿಗಳು ಅಗತ್ಯಪಡಿಸಬಹುದಾದಂತೆ ವಲಯ ಸಮಿತಿಗಳ ಸಭೆಗಳಲ್ಲಿ ಭಾಗವಹಿಸತಕ್ಕದ್ದು. ಆದರೆ ಅವರು ಮತ ಚಲಾಯಿಸುವ ಹಕ್ಕನ್ನು ಹೊಂದಿರುವುದಿಲ್ಲ.

(5) ವಲಯ ಆಯುಕ್ತರು ವಲಯ ಸಮಿತಿಯ ಸಮನ್ವಯ ಅಧಿಕಾರಿಯಾಗಿರತಕ್ಕದ್ದು.

(6) ರಾಜ್ಯ ಸರ್ಕಾರವು, ವಲಯ ಸಮಿತಿಯ ಪರಿಣಿತ ಸದಸ್ಯರ ಅರ್ಹತೆಗಳು, ನೇಮಕಾತಿ ಪ್ರಕ್ರಿಯೆ ಮತ್ತು ಗೌರವಧನವನ್ನು ರಾಜ್ಯ ಸರ್ಕಾರವು ನಿಯಮಗಳ ಮೂಲಕ ನಿರ್ದಿಷ್ಟಪಡಿಸಬಹುದು.

(7) ವಲಯ ಆಯುಕ್ತನು ಕನಿಷ್ಠ ತಿಂಗಳಿಗೊಮ್ಮೆ ವಲಯ ಸಮಿತಿಯ ಸಭೆಯನ್ನು ಕರೆಯತಕ್ಕದ್ದು ಮತ್ತು ಪ್ರತಿಯೊಂದು ವಲಯ ಸಮಿತಿಯ ನಡವಳಿಗಳನ್ನು (minutes) ದಾಖಲಿಸತಕ್ಕದ್ದು ಮತ್ತು ಮುಖ್ಯ ಆಯುಕ್ತನಿಗೆ ಸಲ್ಲಿಸತಕ್ಕದ್ದು ಮತ್ತು ಅಂಥ ಸಭೆಯ ದಿನಾಂಕದಿಂದ ಹದಿನೈದು ದಿನಗಳೊಳಗಾಗಿ ನಿರ್ದಿಷ್ಟಪಡಿಸಬಹುದಾದ ಅಂಥ ಮಾಧ್ಯಮಗಳಲ್ಲಿ ಪ್ರಕಟಿಸತಕ್ಕದ್ದು.

(8) ವಲಯ ಸಮಿತಿಯ ಕೋರಂ ನಾಲ್ಕನೇ ಒಂದು ಭಾಗ ಆಗಿರತಕ್ಕದ್ದು.

(9) ಪಾಲಿಕೆಯು ವಲಯ ಸಮಿತಿಯ ಕಾರ್ಯನಿರ್ವಹಣೆಗೆ ಅನುವಾಗುವಂತೆ ಕಚೇರಿ ಸ್ಥಳಾವಕಾಶ ಮತ್ತು ಲಿಪಿಕ ಸಿಬಂಬ್ಬಿಯನ್ನು ಪೂರೈಸತಕ್ಕದ್ದು.

78. ವಲಯ ಸಮಿತಿಯ ಅಧಿಕಾರಿಗಳು ಮತ್ತು ಪ್ರಕಾರ್ಯಗಳು.- (1) ವಲಯ ಸಮಿತಿಯು,-

(ಎ) ಅನೇಕ ವಾರ್ಡ್‌ಗಳ ಗಡಿಗಳನ್ನು ಅಡ್ಡವಾಗಿ ಸೀಳುವ ಆದರೆ ವಲಯದ ಗಡಿಗಳೊಳಗಿನ ಪಾಲಿಕೆಯ ಯಾವುದೇ ಪ್ರಾಜೆಕ್ಟ್ ಅಥವಾ ಸ್ಕೀಮ್‌ನ ಅನುಷ್ಠಾನದ ಮೇಲ್ವಿಚಾರಣೆ;

(ಬಿ) ಯಾವುದೇ ಸ್ಕೀಮ್ ಅಥವಾ ಪ್ರಾಜೆಕ್ಟ್‌ನ ಅನುಷ್ಠಾನಕ್ಕಾಗಿ ಪಾಲಿಕೆಯ ಸಂಬಂಧಿತ ವಾರ್ಡ್ ಇಂಜಿನಿಯರ್‌ಗೆ ಅಥವಾ ಇತರ ಅಂಥ ಅಧಿಕಾರಿಗೆ ನಿರ್ದೇಶನಗಳನ್ನು ನೀಡುವುದು;

(ಸಿ) ತ್ಯಾಜ್ಯ ನಿರ್ವಹಣೆ, ಸಾರ್ವಜನಿಕ ಬೀದಿಗಳ ಸುಧಾರಣೆ, ಉದ್ಯಾನವನಗಳು ಒಳಗೊಂಡಂತೆ ಸಾರ್ವಜನಿಕ ಸ್ಥಳಗಳ ಸುಧಾರಣೆ ಮತ್ತು ವಲಯದ ಸೌಂದರ್ಯದ ಸುಧಾರಣೆಯ ಕುರಿತು ನಿರ್ದಿಷ್ಟಪಡಿಸಿದ ಅಂಥ ಮೊತ್ತಗಳವರೆಗೆ ಹೊಸದಾದ ಮೂಲಸೌಲಭ್ಯಗಳ ಪ್ರಾಜೆಕ್ಟ್‌ಗಳನ್ನು ಅನುಮೋದಿಸುವುದು ಮತ್ತು ಆ ಮೊತ್ತಕ್ಕೆ ಮೀರಿದ ಅಂಥಾ ಪ್ರಾಜೆಕ್ಟ್‌ಗಳ ಕುರಿತು ಪಾಲಿಕೆಗೆ ಶಿಫಾರಸ್ಸು ಮಾಡುವುದು;

(ಡಿ) ಪಾಲಿಕೆಯ ಉಪವಿಧಿಗಳಿಗೆ ಯಾವುದೇ ತಿದ್ದುಪಡಿಗಳನ್ನು ಪಾಲಿಕೆಗೆ ಶಿಫಾರಸ್ಸು ಮಾಡುವುದು;

(ಇ) ವಾರ್ಡ್ ಸಮಿತಿಗಳು ಶಿಫಾರಸ್ಸು ಮಾಡಿದ ವಿಷಯಗಳ ಕುರಿತು ನಿರ್ಧಾರಗಳನ್ನು ಕೈಗೊಳ್ಳುವುದು ಮತ್ತು ಅಂಥ ಪ್ರಕ್ರಿಯೆಗಳನ್ನು ಕೈಗೊಳ್ಳಲು ವಾರ್ಡ್ ಸಮಿತಿಗಳಿಗೆ ನಿರ್ದೇಶನ ನೀಡುವುದು;

(ಎಫ್) ನಾಗರಿಕ ಅರಿವನ್ನು ಸುಧಾರಿಸಲು ಸಾರ್ವಜನಿಕ ನಿರತ ಚಟುವಟಿಕೆಗಳನ್ನು ಆಯೋಜಿಸುವುದು;

(ಜಿ) ಪಾಲಿಕೆಯ ಸಾಮಾನ್ಯ ಮೇಲ್ವಿಚಾರಣೆ ಮತ್ತು ನಿಯಂತ್ರಣಕ್ಕೊಳಪಟ್ಟು, ಪಾಲಿಕೆಯು ಕಾಲಕಾಲಕ್ಕೆ ವಿನಿಯಮಗಳು ನಿರ್ಧರಿಸಬಹುದಾದಂಥ ಪ್ರಕಾರ್ಯಗಳನ್ನು ನೇರವೇರಿಸತಕ್ಕದ್ದು.

(2) ವಲಯ ಸಮಿತಿಯು ಅನುಮೋದಿಸಿದ ಯಾವುದೇ ಯೋಜನೆಗೆ ಅಂಥ ಅನ್ವಯವಾಗುವ ಕಾನೂನು ಮತ್ತು ಪ್ರಕ್ರಿಯೆಯನ್ನು ಅನುಸರಿಸತಕ್ಕದ್ದು. ವಲಯ ಸಮಿತಿಯಲ್ಲಿನ ಎಲ್ಲ ತೀರ್ಮಾನಗಳನ್ನು ಸಾಧ್ಯವಾದಷ್ಟು

ಮಟ್ಟಿಗೆ ಒಮ್ಮತಾಭಿಪ್ರಾಯದ ಮೂಲಕ ಕೈಗೊಳ್ಳತಕ್ಕದ್ದು ಮತ್ತು ಒಮ್ಮತಾಭಿಪ್ರಾಯ ಸಾಧ್ಯವಾಗದಿದ್ದಲ್ಲಿ ತೀರ್ಮಾನವನ್ನು ಹಾಜರಿದ್ದು ಮತ ಚಲಾಯಿಸುವ ಹಕ್ಕುಳ್ಳ ಸದಸ್ಯರ ಬಹುಮತದ ಮೂಲಕ ಕೈಗೊಳ್ಳತಕ್ಕದ್ದು.

(3) ಮುಖ್ಯ ಆಯುಕ್ತರು, ಅಂಥ ತೀರ್ಮಾನಗಳು ಅಧಿನಿಯಮದ ಉಪಬಂಧಗಳು ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿಗೆ ವ್ಯತಿರಿಕ್ತವಾಗಿವೆ ಎಂಬುದಾಗಿ ಅಭಿಪ್ರಾಯಪಟ್ಟಲ್ಲಿ, ವಲಯ ಸಮಿತಿಯ ತೀರ್ಮಾನಗಳನ್ನು ಮರುಪರಿಶೀಲಿಸುವ ಮತ್ತು ಅನೂರ್ಜಿತಗೊಳಿಸುವ ಅಧಿಕಾರವನ್ನು ಹೊಂದಿರತಕ್ಕದ್ದು.

79. ನಿಧಿಗಳ ಹಂಚಿಕೆ.- (1) ವಲಯ ಸಮಿತಿಯು 78ನೇ ಪ್ರಕರಣದ ಅಡಿಯಲ್ಲಿ ನಮೂದಿಸಲಾದ ತನ್ನ ಪ್ರಕಾರ್ಯಗಳನ್ನು ಕೈಗೊಳ್ಳುವುದಕ್ಕಾಗಿ ವಾರ್ಡ್ ಸಮಿತಿಗಳಿಗೆ ನಿರ್ದಿಷ್ಟ ವಲಯಕ್ಕಾಗಿ ಮೀಸಲಿರಿಸಿದ ಆಯವ್ಯಯದ ಪೈಕಿ ಅಂಥ ಮೊತ್ತವನ್ನು ಹಂಚಿಕೆ ಮಾಡತಕ್ಕದ್ದು.

(2) ನಾಗರಿಕ ಸೇವೆಗಳ ನಿರ್ವಹಣೆಗಾಗಿ ವಾರ್ಡ್ ಸಮಿತಿಗಳಿಗೆ ಮತ್ತು ಅವುಗಳಿಂದ ನಿಧಿಗಳ ಹಂಚಿಕೆ ಮತ್ತು ಬಳಕೆಯು ಸರ್ಕಾರವು ನಿಯಮಿಸಬಹುದಾದ ರೀತಿಯಲ್ಲಿರತಕ್ಕದ್ದು ಹಾಗೂ ನಿಯಮಿಸಬಹುದಾದ ಅಂಥ ಸಮಯದಲ್ಲಿ ಮತ್ತು ಅಂಥ ನಮೂನೆಗಳಲ್ಲಿ, ವಲಯ ಸಮಿತಿಗೆ ಬಳಕೆ ಸಂಬಂಧಿ ವರದಿಯನ್ನು ಒದಗಿಸುವುದು ವಾರ್ಡ್ ಸಮಿತಿಗೆ ಅಗತ್ಯವಾಗಿರತಕ್ಕದ್ದು.

80. ಸ್ಥಾಯೀ ಸಮಿತಿಗಳ ಸ್ಥಾಪನೆ.- (1) ಪಾಲಿಕೆಗಾಗಿ ಈ ಕೆಳಗಿನ ಸ್ಥಾಯೀ ಸಮಿತಿಗಳು ಇರತಕ್ಕದ್ದು,

(ಎ) ತೆರಿಗೆ ವಿಧಿಸುವಿಕೆ ಮತ್ತು ಹಣಕಾಸು ಮತ್ತು ಅಪೀಲು ಸ್ಥಾಯೀ ಸಮಿತಿ;

(ಬಿ) ಸಾರ್ವಜನಿಕ ಆರೋಗ್ಯ, ಘನತ್ಯಾಜ್ಯ ಮತ್ತು ವಿಪತ್ತು ನಿರ್ವಹಣೆ ಸ್ಥಾಯೀ ಸಮಿತಿ;

(ಸಿ) ಸಿಬಂಬ್ಬಿ ಮತ್ತು ಆಡಳಿತ ಸುಧಾರಣೆ ಸ್ಥಾಯೀ ಸಮಿತಿ;

(ಡಿ) ಮಾರುಕಟ್ಟೆ ಸ್ಥಾಯೀ ಸಮಿತಿ;

(ಇ) ವಾರ್ಡ್ ಮಟ್ಟದ ಲೋಕೋಪಯೋಗಿ ಕಾಮಗಾರಿ, ನಗರ ಯೋಜನೆ ಹಾಗೂ ಮೂಲ ಸೌಕರ್ಯ ಸ್ಥಾಯೀ ಸಮಿತಿ;

(ಎಫ್) ಶಿಕ್ಷಣ ಮತ್ತು ಸಾಮಾಜಿಕ ನ್ಯಾಯ ಸ್ಥಾಯೀ ಸಮಿತಿ;

(ಜಿ) ತೋಟಗಾರಿಕೆ ಸ್ಥಾಯೀ ಸಮಿತಿಗಳು;

(ಎಚ್) ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಸ್ಥಾಯೀ ಸಮಿತಿ;

(2) ಪ್ರತಿಯೊಂದು ಸ್ಥಾಯೀ ಸಮಿತಿಯು ಕೌನ್ಸಿಲ್ ಮೂಲಕ ಚುನಾಯಿಸಲ್ಪಡುವ ಹದಿನೈದು ಕೌನ್ಸಿಲರ್ಗಳನ್ನು ಒಳಗೊಂಡಿರತಕ್ಕದ್ದು.

(3) ಪ್ರತಿಯೊಂದು ಸ್ಥಾಯೀ ಸಮಿತಿಯು ತನ್ನ ಮೊದಲ ಸಭೆಯಲ್ಲಿ ಅಂಥ ಸ್ಥಾಯೀ ಸಮಿತಿಯ ಸದಸ್ಯರ ಮೂಲಕ ಮತ್ತು ನಿಯಮಿಸಬಹುದಾಂತಹ ಏಕ ವರ್ಗಾವಣೀಯ ಮತದಾನದ ಮೂಲಕ ಪ್ರಮಾಣಾನುಸಾರ ಪ್ರಾತಿನಿಧ್ಯ ತತ್ವಕ್ಕೆ ಅನುಸಾರವಾಗಿ ಪ್ರತಿಯೊಂದು ನಂತರದ ವರ್ಷದ ಅದೇ ತಿಂಗಳ ಮೊದಲ ಸಭೆಯಲ್ಲಿ ನೇಮಕವಾಗತಕ್ಕ ಅಧ್ಯಕ್ಷರನ್ನು ಹೊಂದಿರತಕ್ಕದ್ದು.

(4) ಸ್ಥಾಯೀ ಸಮಿತಿಯ ಅವಧಿಯು ಒಂದು ವರ್ಷವಾಗಿರತಕ್ಕದ್ದು.

(5) ಮೇಯರ್ ಮತ್ತು ಉಪಮೇಯರ್ ಎಲ್ಲಾ ಸ್ಥಾಯೀ ಸಮಿತಿಗಳ ಪದನಿಮಿತ್ತ ಸದಸ್ಯರಾಗಿರತಕ್ಕದ್ದು.

(6) ಯಾರೇ ವ್ಯಕ್ತಿಯು, ಪಾಲಿಕೆ ಸದಸ್ಯನಾಗಿರುವುದು ಮುಕ್ತಾಯವಾದರೆ ಅಥವಾ ಆತನು ಸ್ಥಾಯೀ ಸಮಿತಿಯ ಮೂರು ಸಭೆಗಳಿಗೆ ಸತತವಾಗಿ ಸ್ಥಾಯೀ ಸಮಿತಿಯ ಅನುಮತಿಯಿಲ್ಲದೆ ಸ್ವತಃ ಗೈರುಹಾಜರಾದರೆ ಆತನು ಸ್ಥಾಯೀ ಸಮಿತಿಯ ಸದಸ್ಯನಾಗಿರುವುದು ಮುಕ್ತಾಯವಾಗತಕ್ಕದ್ದು.

(7) ಸ್ಥಾಯೀ ಸಮಿತಿಯ ಸದಸ್ಯತ್ವದಲ್ಲಿ ಆಕಸ್ಮಿಕ ಖಾಲೀ ಸ್ಥಾನ ಉಂಟಾದಲ್ಲಿ ಅದನ್ನು ಪಾಲಿಕೆಯು ಬೇರೊಬ್ಬ ಕೌನ್ಸಿಲರನನ್ನು ಚುನಾಯಿಸುವ ಮೂಲಕ ಭರ್ತಿಮಾಡತಕ್ಕದ್ದು. ಹಾಗೆ ಚುನಾಯಿತನಾದ ವ್ಯಕ್ತಿಯು, ಯಾವ ವ್ಯಕ್ತಿಯ ಸ್ಥಾನಕ್ಕೆ ಅವನು ಚುನಾಯಿತನಾದನೋ, ಆತನ ಸ್ಥಾನವು ಖಾಲಿಯಾಗಿರದಿದ್ದರೆ ಆ ವ್ಯಕ್ತಿಯು ಎಲ್ಲಿಯವರೆಗೆ ಪದಧಾರಣ ಮಾಡುತ್ತಿದ್ದನೋ ಅಲ್ಲಿಯವರೆಗೆ ಪದಧಾರಣ ಮಾಡತಕ್ಕದ್ದು.

(8) ಸ್ಥಾಯೀ ಸಮಿತಿಯ ಸದಸ್ಯನು, ಸ್ಥಾಯೀ ಸಮಿತಿಯ ಅಧ್ಯಕ್ಷರಿಗೆ ಸಂಬೋಧಿಸಿದ ಅಥವಾ ಅಧ್ಯಕ್ಷರು ಇಲ್ಲದಿದ್ದರೆ ಮೇಯರ್ ಅವರಿಗೆ ಸಂಭೋದಿಸಿ ಅಧ್ಯಕ್ಷರಿಗೆ ಅಥವಾ ಸಂದರ್ಭಾನುಸಾರ ಮೇಯರ್ರವರಿಗೆ ತಲುಪಿಸಿದ ಲಿಖಿತ ನೋಟೀಸಿನ ಮೂಲಕ ಯಾವುದೇ ಕಾಲದಲ್ಲಿ ತನ್ನ ಹುದ್ದೆಗೆ ರಾಜೀನಾಮೆ ಕೊಡಬಹುದು ಮತ್ತು ಅಂಥ ರಾಜೀನಾಮೆಯು ಅದನ್ನು ತಲುಪಿಸಿದ ದಿನಾಂಕದಿಂದ ಪರಿಣಾಮಕಾರಿಯಾಗಿರತಕ್ಕದ್ದು.

81. ಸ್ಥಾಯೀ ಸಮಿತಿಯ ಅಧಿಕಾರಗಳು ಮತ್ತು ಪ್ರಕಾರ್ಯಗಳು.-(1) ಅಧಿನಿಯಮ ಮತ್ತು ಅದರಡಿಯಲ್ಲಿ ಮಾಡಲಾದ ನಿಯಮಗಳ ಉಪಬಂಧಗಳಿಗೆ ಒಳಪಟ್ಟು ಸ್ಥಾಯೀ ಸಮಿತಿಯು ಈ ಮುಂದಿನ ಅಧಿಕಾರಗಳು ಮತ್ತು ಪ್ರಕಾರ್ಯಗಳನ್ನು ಹೊಂದಿರತಕ್ಕದ್ದು, ಎಂದರೆ :-

(ಎ) ತೆರಿಗೆ, ಹಣಕಾಸು ಮತ್ತು ಅಪೀಲುಗಳ ಸ್ಥಾಯೀ ಸಮಿತಿಯು ಹಣಕಾಸು, ತೆರಿಗೆ ಮತ್ತು ಅಪೀಲಿಗೆ ಮತ್ತು ಯಾವುದೇ ಇತರ ಸ್ಥಾಯೀ ಸಮಿತಿಗೆ ನಿರ್ದಿಷ್ಟವಾಗಿ ವಹಿಸಿಲ್ಲದ ಎಲ್ಲಾ ವಿಷಯಗಳಿಗೆ ಸಂಬಂಧಿಸಿದ ಎಲ್ಲಾ ವಿಷಯಗಳೊಂದಿಗೆ ವ್ಯವಹರಿಸತಕ್ಕದ್ದು.

(ಬಿ) ಸಾರ್ವಜನಿಕ ಆರೋಗ್ಯ, ಘನತ್ಯಾಜ್ಯ ಮತ್ತು ವಿಪತ್ತು ನಿರ್ವಹಣೆ ಸ್ಥಾಯೀ ಸಮಿತಿಯು ಸಾರ್ವಜನಿಕ ಆರೋಗ್ಯ, ಘನತ್ಯಾಜ್ಯ ಮತ್ತು ವಿಪತ್ತು ನಿರ್ವಹಣೆಗೆ ಸಂಬಂಧಿಸಿದ ವಿಷಯಗಳೊಂದಿಗೆ ವ್ಯವಹರಿಸತಕ್ಕದ್ದು.

(ಸಿ) ಮೂಲಸೌಲಭ್ಯ ಸ್ಥಾಯೀ ಸಮಿತಿಯು ಮೂಲ ಸೌಲಭ್ಯಕ್ಕೆ ಸಂಬಂಧಿಸಿದ ಎಲ್ಲಾ ವಿಷಯಗಳೊಂದಿಗೆ ವ್ಯವಹರಿಸತಕ್ಕದ್ದು.

(ಡಿ) ಅಪೀಲು ಸ್ಥಾಯೀ ಸಮಿತಿಯು ಈ ಅಧಿನಿಯಮದ ಅಡಿಯಲ್ಲಿ ಅಗತ್ಯಪಡಿಸಲಾದ ಎಲ್ಲಾ ಅಪೀಲುಗಳನ್ನು ಆಲಿಸುವುದು.

(ಇ) ಸಿಬಂಬ್ಬದಿ ಮತ್ತು ಆಡಳಿತ ಸುಧಾರಣಾ ಸ್ಥಾಯೀ ಸಮಿತಿಯು ಸಿಬಂಬ್ಬದಿ ಮತ್ತು ಆಡಳಿತ ಸುಧಾರಣೆಗೆ ಸಂಬಂಧಿಸಿದ ಎಲ್ಲಾ ವಿಷಯಗಳೊಂದಿಗೆ ವ್ಯವಹರಿಸತಕ್ಕದ್ದು;

(ಎಫ್) ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಸ್ಥಾಯೀ ಸಮಿತಿಯು ಲೆಕ್ಕಪತ್ರ ಮತ್ತು ಲೆಕ್ಕಪರಿಶೋಧನೆಗೆ ಸಂಬಂಧಿಸಿದ ಎಲ್ಲಾ ವಿಷಯಗಳ ಬಗ್ಗೆ ವ್ಯವಹರಿಸತಕ್ಕದ್ದು;

(ಜಿ) ಶಿಕ್ಷಣ ಸ್ಥಾಯೀ ಸಮಿತಿಯು ದೈಹಿಕ ಶಿಕ್ಷಣ ಮತ್ತು ಕ್ರೀಡೆಯು ಸೇರಿದಂತೆ ಪೂರ್ವ ಪ್ರಾಥಮಿಕ, ಪ್ರಾಥಮಿಕ, ಮಾಧ್ಯಮಿಕ ಹಾಗೂ ಪ್ರೌಢ ಶಿಕ್ಷಣಕ್ಕೆ ಸಂಬಂಧಿಸಿದ ಎಲ್ಲಾ ವಿಷಯಗಳೊಂದಿಗೆ ವ್ಯವಹರಿಸತಕ್ಕದ್ದು;

(ಹೆಚ್) ಸಾಮಾಜಿಕ ನ್ಯಾಯ ಸ್ಥಾಯೀ ಸಮಿತಿಯು ಅನುಸೂಚಿತ ಜಾತಿ, ಅನುಸೂಚಿತ ಪಂಗಡ ಮತ್ತು ಸಮಾಜದ ಇತರ ದುರ್ಬಲ ವರ್ಗಗಳಿಗೆ ಸೇರಿದ ವ್ಯಕ್ತಿಗಳಿಗೆ ಹಾಗೂ ಮಹಿಳೆಯರಿಗೆ ಸಾಮಾಜಿಕ ನ್ಯಾಯವನ್ನು ದೊರಕಿಸಿಕೊಡುವುದಕ್ಕೆ ಸಂಬಂಧಿಸಿದ ಎಲ್ಲಾ ವಿಷಯಗಳೊಂದಿಗೆ ವ್ಯವಹರಿಸತಕ್ಕದ್ದು;

(ಐ) ಮಾರುಕಟ್ಟೆ ಸ್ಥಾಯೀ ಸಮಿತಿಯು ಮಾರುಕಟ್ಟೆಗಳಿಗೆ ಸಂಬಂಧಿಸಿದ ಎಲ್ಲಾ ವಿಷಯಗಳೊಂದಿಗೆ ವ್ಯವಹರಿಸತಕ್ಕದ್ದು.

(ಜೆ) ತೋಟಗಾರಿಕೆ ಸ್ಥಾಯೀ ಸಮಿತಿಯು ಉದ್ಯಾನವನಗಳು ಮತ್ತು ಆಟದ ಮೈದಾನಗಳಿಗೆ ಸಂಬಂಧಿಸಿದ ಎಲ್ಲಾ ವಿಷಯಗಳೊಂದಿಗೆ ವ್ಯವಹರಿಸತಕ್ಕದ್ದು.

(2) ಸ್ಥಾಯೀ ಸಮಿತಿಗಳು-

(i) ದೈನಂದಿನ ವ್ಯವಹಾರದ ನಿರ್ವಹಣೆಗೆ ಅಗತ್ಯಪಡಿಸಲಾದಂತಹ ದಾಖಲೆಗಳನ್ನು ತರಿಸಿಕೊಳ್ಳುವ; ಮತ್ತು

(ii) ನಿಯಮಿಸಬಹುದಾದಂತಹ ಇತರ ಪ್ರಕಾರ್ಯಗಳನ್ನು ನಿರ್ವಹಿಸುವ

- ಅಧಿಕಾರವನ್ನು ಸಹ ಹೊಂದಿರತಕ್ಕದ್ದು.

82. ವಾರ್ಡ್ ಸಮಿತಿಯ ರಚನೆ.- ಪಾಲಿಕೆಯ ಪ್ರತಿಯೊಂದು ವಾರ್ಡ್‌ಗಾಗಿ ವಾರ್ಡ್ ಸಮಿತಿಯು ಇರತಕ್ಕದ್ದು.

83. ವಾರ್ಡ್ ಸಮಿತಿಯ ಸಂಯೋಜನೆ.- (1) ಪಾಲಿಕೆಯಲ್ಲಿನ ಪ್ರತಿ ವಾರ್ಡಿನಲ್ಲೂ ವಾರ್ಡ್ ಸಮಿತಿಯು ಇರತಕ್ಕದ್ದು.

(2) ಪ್ರತಿಯೊಂದು ವಾರ್ಡ್ ಸಮಿತಿಯು ಈ ಮುಂದಿನವರನ್ನು ಒಳಗೊಂಡಿರತಕ್ಕದ್ದು ಎಂದರೆ:-

(ಎ) ವಾರ್ಡ್ ಅನ್ನು ಪ್ರತಿನಿಧಿಸುವ ಪಾಲಿಕೆಯ ಕೌನ್ಸಿಲರ್ ವಾರ್ಡ್ ಸಮಿತಿಯ ಅಧ್ಯಕ್ಷನಾಗಿರತಕ್ಕದ್ದು.

(ಬಿ) ಪಾಲಿಕೆಯು ನಾಮನಿರ್ದೇಶಿಸಬೇಕಾದ ಹತ್ತು ಇತರ ಸದಸ್ಯರು, ಅದರಲ್ಲಿ ಎಂದರೆ:-

(i) ಅನುಸೂಚಿತ ಜಾತಿಗಳಿಗೆ ಹಾಗೂ ಅನುಸೂಚಿತ ಪಂಗಡಗಳಿಗೆ ಸೇರಿದ ಕನಿಷ್ಠ ಇಬ್ಬರು ಸದಸ್ಯರು;

(ii) ಕನಿಷ್ಠ ಮೂವರು ಮಹಿಳಾ ಸದಸ್ಯರು; ಮತ್ತು

(iii) ಈ ಕೆಳಗೆ ತಿಳಿಸಿದ ಎಲ್ಲ ಷರತ್ತುಗಳನ್ನು ಪಾಲಿಸುವ, ಯಾವುದೇ ಹೆಸರಿನಿಂದ ಕರೆಯಲಾಗುವ ನಿವಾಸಿಗಳ ಅಸೋಸಿಯೇಷನ್‌ಅನ್ನು ಪ್ರತಿನಿಧಿಸುವ ಕನಿಷ್ಠ ಇಬ್ಬರು ಸದಸ್ಯರು, ಎಂದರೆ:-

(ಎ) ಅದರ ನೋಂದಾಯಿತ ಕಚೇರಿಯು, ಆ ವಾರ್ಡ್‌ನ ಅಧಿಕಾರ ವ್ಯಾಪ್ತಿಯಲ್ಲಿರತಕ್ಕದ್ದು;

(ಬಿ) ಅದು ಬಹುಸಂಖ್ಯೆಯ ನಿವಾಸಿಗಳನ್ನು ಅಥವಾ ನಾಗರಿಕ ಸಮೂಹಗಳನ್ನು ಅಥವಾ ವಾಣಿಜ್ಯ ಸಮೂಹಗಳನ್ನು ಅಥವಾ ಕೈಗಾರಿಕಾ ಸಮೂಹಗಳನ್ನು ಪ್ರತಿನಿಧಿಸತಕ್ಕದ್ದು.

(ಸಿ) ಅದು ಮೂರು ವರ್ಷಗಳಿಗಿಂತ ಕಡಿಮೆಯಿರದಷ್ಟು ಅವಧಿಗೆ ತನ್ನ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ನಿರತವಾಗಿರತಕ್ಕದ್ದು.

(ಡಿ) ಅದು, ವಿಶ್ವಾಸಾರ್ಹತೆಯಿಂದ ಸೇವೆ ಸಲ್ಲಿಸುತ್ತಿರುವ ವ್ಯಕ್ತಿಗಳನ್ನು ಒಳಗೊಂಡ ಯಾವುದೇ ಹೆಸರಿನಿಂದ ಕರೆಯಲಾಗುವ ನೋಂದಾಯಿತ ಸಂಘ ಆಗಿರತಕ್ಕದ್ದು.

ಪರಂತು, ವಾರ್ಡ್ ಸಮಿತಿಗೆ ನಾಮನಿರ್ದೇಶನವಾಗಬೇಕಾದ ಅರ್ಧದಷ್ಟು ವ್ಯಕ್ತಿಗಳು ಮಹಿಳೆಯಾಗಿರತಕ್ಕದ್ದು ಮತ್ತು ವಾರ್ಡ್ ಸಮಿತಿಗೆ ನಾಮನಿರ್ದೇಶಿಲ್ಪಟ್ಟ ಸದಸ್ಯರ ಕನಿಷ್ಠ ನಾಲ್ಕನೇ ಒಂದು ಅನುಸೂಚಿತ ಜಾತಿ ಮತ್ತು/ಅಥವಾ ಅನುಸೂಚಿತ ಪಂಗಡಳಿಗೆ ಸೇರಿದವರಾಗಿರತಕ್ಕದ್ದು.

(3) ವಾರ್ಡ್‌ನ ಅಧಿಕಾರ ವ್ಯಾಪ್ತಿಯೊಳಗೆ ಬರುವ ಎಲ್ಲಾ ಪ್ರದೇಶ ಸಭಾದ ಪ್ರತಿನಿಧಿಗಳು ವಾರ್ಡ್ ಸಮಿತಿಯ ಸಭೆಗಳಿಗೆ ಆಹ್ವಾನಿಸಲಾಗಿರತಕ್ಕದ್ದು ಆದರೆ ಮತದಾನ ಹಕ್ಕನ್ನು ಹೊಂದಿರತಕ್ಕದ್ದಲ್ಲ.

(4) ವಾರ್ಡ್ ಸಮಿತಿಯ ಸದಸ್ಯನಾಗಿ ನಾಮನಿರ್ದೇಶನಗೊಳ್ಳಲು ಅಥವಾ ಅಂಥ ಸದಸ್ಯನಾಗಿ ಮುಂದುವರಿಯಲು ತತ್ಕಾಲದಲ್ಲಿ ಜಾರಿಯಲ್ಲಿರುವ ಈ ಅಧಿನಿಯಮದ ಉಪಬಂಧಗಳ ಅಡಿಯಲ್ಲಿ, ಪಾಲಿಕೆಯ ಕೌನ್ಸಿಲರ್ ಆಗಿ ಚುನಾಯಿತರಾಗಲು ಆಕೆಯು ಅರ್ಹತೆಯುಳ್ಳವಾಗಿದ್ದಾರೆ, ಆ ವ್ಯಕ್ತಿ ಅನರ್ಹರಾಗತಕ್ಕದ್ದು.

(5) ವಾರ್ಡ್ ಸಮಿತಿಯ ಪದಾವಧಿಯು, ಪಾಲಿಕೆಯ ಪದಾವಧಿಯ ಜೊತೆಗೆ ಕೊನೆಗೊಳ್ಳತಕ್ಕದ್ದು.

84. ವಾರ್ಡ್ ಸಮಿತಿಯ ಸದಸ್ಯನಾಗಿ ನಾಮನಿರ್ದೇಶನ ಹೊಂದಲು ಇರುವ ಕಾರ್ಯವಿಧಾನಗಳು. ಮುಖ್ಯ ಆಯುಕ್ತರು ಅಥವಾ ಮುಖ್ಯ ಆಯುಕ್ತರಿಂದ ಪ್ರಾಧಿಕೃತನಾದ ಅಧಿಕಾರಿಯು, ಪಾಲಿಕೆಯ ಚುನಾವಣೆಗಳು ಪೂರ್ಣಗೊಂಡ ಮೂವತ್ತು ದಿನಗಳ ಒಳಗಾಗಿ, ವಾರ್ಡ್ ಸಮಿತಿಗೆ ನಾಮನಿರ್ದೇಶನ ಮಾಡಕ್ಕದ್ದು.

85. ವಾರ್ಡ್ ಸಮಿತಿಯ ಸಭೆ.- (1) ವಾರ್ಡ್ ಸಮಿತಿಯು, ಕಾಲ ಕಾಲಕ್ಕೆ, ಅಧಿನಿಯಮದ ಅಡಿಯಲ್ಲಿ ಅದಕ್ಕೆ ವಹಿಸಿದ ಕರ್ತವ್ಯಗಳನ್ನು ನೆರವೇರಿಸಲು ಮತ್ತು ಪ್ರಕಾರ್ಯಗಳನ್ನು ನಿರ್ವಹಿಸಲು ಕನಿಷ್ಠಪಕ್ಷ ತಿಂಗಳಿಗೊಮ್ಮೆ ಸಭೆ ಸೇರತಕ್ಕದ್ದು.

(2) ಪ್ರತಿಯೊಂದು ವಾರ್ಡ್ ಸಮಿತಿಗೆ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಲು, ಸಂಬಂಧಪಟ್ಟ ವಲಯದ ವಲಯ ಆಯುಕ್ತರು ಸೂಕ್ತ ದರ್ಜೆಯ ಒಬ್ಬ ಅಧಿಕಾರಿಯನ್ನು ಗೊತ್ತುಪಡಿಸತಕ್ಕದ್ದು ಮತ್ತು ವಾರ್ಡ್ ಸಮಿತಿಗೆ ಆಡಳಿತಾತ್ಮಕ ನೆರವು ನೀಡಲು, ಆತನು ಅದರ ಸದಸ್ಯನು ಸಹ ಆಗಿರತಕ್ಕದ್ದು.

(3) ವಾರ್ಡ್ ಸಮಿತಿಯ ಸಭೆಯ ವ್ಯವಹರಣೆಗಳ ಎಲ್ಲಾ ನಡವಳಿಗಳನ್ನು ಕಾರ್ಯದರ್ಶಿಯು ದಾಖಲಿಸತಕ್ಕದ್ದು ಮತ್ತು ಅದರ ಪ್ರತಿಯನ್ನು ಪಾಲಿಕೆಗೆ ಕಳುಹಿಸತಕ್ಕದ್ದು.

(4) ವಾರ್ಡ್ ಸಮಿತಿಯ ಕಾರ್ಯದರ್ಶಿಯು, ಅದರ ಅಧ್ಯಕ್ಷರೊಂದಿಗೆ ಸಮಾಲೋಚಿಸಿ, ವಾರ್ಡ್ ಸಮಿತಿಯ ಸಭೆಯನ್ನು ಕರೆಯತಕ್ಕದ್ದು.

(5) ವಾರ್ಡ್ ಸಮಿತಿಯ ಯಾವುದೇ ಸಭೆಯನ್ನು ಸಾರ್ವಜನಿಕ ರಜಾ ದಿನದಂದು ಮತ್ತು ಪಾಲಿಕೆ ಸಭೆಯನ್ನು ನಡೆಸಲು ನಿಗದಿಪಡಿಸಿರುವ ದಿನದಂದು ನಡೆಸತಕ್ಕದ್ದಲ್ಲ.

(6) ಸಭೆಯನ್ನು ನಡೆಸಬೇಕೆಂದಿರುವ ದಿನದ ಮತ್ತು ಸಮಯದ ಹಾಗೂ ಕಾರ್ಯಸೂಚಿಯ ನೋಟೀಸನ್ನು ಅನ್ಯಥಾ ಸಭೆಯ ದಿನಾಂಕಕ್ಕೆ ಐದು ದಿನಗಳ ಮೊದಲು ನೀಡದೆ, ಯಾವುದೇ ಸಭೆಯನ್ನು ನಡೆಸತಕ್ಕದ್ದಲ್ಲ.

(7) ಸಭೆಯ ಕೋರಂ ಒಟ್ಟು ಸದಸ್ಯರ ಮೂರನೇ ಒಂದರಷ್ಟಾಗಿರತಕ್ಕದ್ದು.

(8) ವಾರ್ಡ್ ಸಮಿತಿ ಸಭೆಗಳ ನಿರ್ಣಯಗಳನ್ನು ಸಾಮಾನ್ಯವಾಗಿ ಸರಳ ಬಹುಮತದ ಆಧಾರದ ಮೇಲೆ ತೆಗೆದುಕೊಳ್ಳತಕ್ಕದ್ದು.

(9) ಈ ಅಧಿನಿಯಮದ ಅಡಿಯಲ್ಲಿ ವಾರ್ಡ್ ಸಮಿತಿಯು ಕೈಗೊಂಡ ಕಾರ್ಯ ಅಥವಾ ವ್ಯವಹರಣೆಗಳು, ಕೇವಲ ಅದರಲ್ಲಿನ ಯಾವುದೇ ಖಾಲಿ ಸ್ಥಾನದ ಕಾರಣದ ಮೇಲೆ ಅಸಿಂಧುಗೊಳ್ಳತಕ್ಕದ್ದಲ್ಲ.

(10) ವಲಯ ಆಯುಕ್ತರು ಅಥವಾ ಅವರ ನಾಮನಿರ್ದೇಶಿತರು, ವಾರ್ಡ್ ಸಮಿತಿಯ ಸಭೆಗಳಲ್ಲಿ ಮತ್ತು ಚರ್ಚೆಗಳಲ್ಲಿ ಭಾಗವಹಿಸಲು ಹಕ್ಕುಳ್ಳವರಾಗಿರತಕ್ಕದ್ದಾದರೂ, ಮತ ಚಲಾಯಿಸುವ ಹಕ್ಕನ್ನು ಹೊಂದಿರತಕ್ಕದ್ದಲ್ಲ.

(11) ವಾರ್ಡ್ ಸಮಿತಿಯ ಅಧ್ಯಕ್ಷರು, ಸಭೆಗಳಲ್ಲಿ ಭಾಗವಹಿಸಲು ವಿಶೇಷ ಆಹ್ವಾನಿತರನ್ನಾಗಿ ಪಾಲಿಕೆಯ ಸಂಬಂಧಪಟ್ಟ ಇಲಾಖೆಗಳ ಪ್ರತಿನಿಧಿಗಳನ್ನು ಕೋರಬಹುದು.

(12) ಅಧ್ಯಕ್ಷರು ಅಥವಾ ಅವರ ಅನುಪಸ್ಥಿತಿಯಲ್ಲಿ ಹಾಜರಿರುವ ಸದಸ್ಯರು ತಮ್ಮ ಪೈಕಿಯಿಂದ ಆಯ್ಕೆ ಮಾಡಿದ ಒಬ್ಬ ಸದಸ್ಯರು ಸಭೆಯ ಅಧ್ಯಕ್ಷತೆಯನ್ನು ವಹಿಸತಕ್ಕದ್ದು.

(13) ವಾರ್ಡ್ ಸಮಿತಿಯ ಸಭೆಗಳಲ್ಲಿನ ವ್ಯವಹಾರಗಳ ನಿರ್ವಹಣೆಯ ರೀತಿಯು ನಿಯಮಿಸಬಹುದಾದಂತಿರತಕ್ಕದ್ದು.

86. ವಾರ್ಡ್ ಸಮಿತಿಯ ಪ್ರಕಾರ್ಯಗಳು.- (1) ವಾರ್ಡ್ ಸಮಿತಿಯು ಈ ಮುಂದಿನ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು:-

(ಎ) ನಿಧಿಗಳ ಹಂಚಿಕೆಗಾಗಿ, ವಾರ್ಡ್ ಅಭಿವೃದ್ಧಿ ಯೋಜನೆಯನ್ನು ಸಿದ್ಧಪಡಿಸತಕ್ಕದ್ದು. ಇದನ್ನು ಪಾಲಿಕೆಗೆ ಸಲ್ಲಿಸತಕ್ಕದ್ದು;

(ಬಿ) ನಿಧಿಯ ಹಂಚಿಕೆಗಾಗಿ ಮುಂದಿನ ಹಣಕಾಸಿನ ವರ್ಷದಲ್ಲಿ ಅನುಷ್ಠಾನಗೊಳಿಸಬೇಕಾದ ಪ್ರಸ್ತಾವಿತ ಪ್ರಾಜೆಕ್ಟ್ ಗಳು ಮತ್ತು ಸ್ಕೀಮುಗಳನ್ನು ನಿದಿ□ಷ್ಟಪಡಿಸುವ ಆದ್ಯತಾಪಟ್ಟಿಯ ರೂಪದಲ್ಲಿ, ಬೆಂಗಳೂರು ಮಹಾನಗರ ಯೋಜನಾ ಸಮಿತಿ ಮತ್ತು ಪಾಲಿಕೆಯು ಸಿದ್ಧಪಡಿಸಿದ ಯೋಜನೆಗಳಿಗನುಸಾರವಾಗಿ ಬರೆದ ವಾಷಿ□ಕ ವಾರ್ಡ್ ಅಭಿವೃದ್ಧಿ ಯೋಜನೆಯನ್ನು ಸಿದ್ಧಪಡಿಸುವುದು ಮತ್ತು ಸಲ್ಲಿಸುವುದು ಮತ್ತು ವಾರ್ಡ್‌ನಲ್ಲಿ ವಾರ್ಡ್ ಅಭಿವೃದ್ಧಿ ಯೋಜನೆಯ ಅಡಿಯಲ್ಲಿ ಹಂಚಿಕೆಯಾದ ನಿಧಿಯ ಕ್ರಮಬದ್ಧ ಬಳಕೆಯನ್ನು ಖಚಿತಪಡಿಸಿಕೊಳ್ಳತಕ್ಕದ್ದು.

(ಸಿ) ವಾರ್ಡ್‌ನಲ್ಲಿ ಗರಿಷ್ಠ ಭಾಗವಹಿಸುವಿಕೆಯನ್ನು ಖಚಿತಪಡಿಸಿಕೊಂಡು ಅದಕ್ಕಾಗಿ ಯುಕ್ತ ಪ್ರಚಾರ ಮತ್ತು ನೋಟೀಸನ್ನು ಕೊಟ್ಟು, ವಾರ್ಷಿಕ ವಾರ್ಡ್ ಅಭಿವೃದ್ಧಿ ಯೋಜನೆಯನ್ನು ರೂಪಿಸಲು ವಿಷಯಗಳನ್ನು ಒದಗಿಸುವುದಕ್ಕಾಗಿ ವಾರ್ಡ್‌ನಲ್ಲಿ ಮತದಾರರಾಗಿ ನೋಂದಣಿಯಾಗಿರುವ ಎಲ್ಲಾ ವ್ಯಕ್ತಿಗಳನ್ನು ಒಳಗೊಂಡ ವಾರ್ಡ್ ಸಭೆಯ ವಾರ್ಷಿಕ ಸಾಮಾನ್ಯ ಸಭೆಯನ್ನು ಕರೆಯುವುದು.

(ಡಿ) ಜನಪ್ರಿಯ ಭಾಗವಹಿಸುವಿಕೆಯ ಮೂಲಕ ನಿಧಾ□ರವನ್ನು ಕೈಗೊಳ್ಳಲು ಅಗತ್ಯವಿರುವ ಯಾವುದೇ ವಿಷಯವನ್ನು ಚರ್ಚಿ□ಸಲು ಯಾವುದೇ ಸಾಮಾನ್ಯ ಸಭೆಯನ್ನು ಕರೆಯುವುದು.

(ಇ) ಫಲಾನುಭವಿಯ ಆಯ್ಕೆಗಾಗಿ ಅಜಿ□ಗಳನ್ನು ಆಹ್ವಾನಿಸುವುದು ಮತ್ತು ಈ ಬಗ್ಗೆ ಸ್ವೀಕರಿಸಿದ ಅಜಿ□ಗಳ ಮೇಲೆ ವಿಚಾರಣೆಯನ್ನು ನಡೆಸಿದ ತರುವಾಯ ಕರಡು ಜ್ಯೇಷ್ಠತಾ ಪಟ್ಟಿಯನ್ನು ಸಿದ್ಧಪಡಿಸುವುದು ಮತ್ತು ಅದನ್ನು ಸಂಬಂಧಪಟ್ಟ ಪ್ರದೇಶ ಸಭಾದ ಪರಿಗಣನೆಗೆ ಕಳುಹಿಸುವುದು ಮತ್ತು ವಲಯ ಸಮಿತಿಗೆ ಸಲ್ಲಿಸುವುದಕ್ಕಾಗಿ ಪ್ರದೇಶ ಸಭಾದ ಅಭಿಪ್ರಾಯಗಳ ಆಧಾರದ ಮೇಲೆ ಅಂತಿಮ ಪಟ್ಟಿಯನ್ನು ಸಿದ್ಧಪಡಿಸುವುದು.

(ಎಫ್) ವಾರ್ಡ್‌ನಲ್ಲಿ ವಾರ್ಡ್ ಅಭಿವೃದ್ಧಿ ಯೋಜನೆಯಡಿಯಲ್ಲಿ ನಿಧಿಯ ಕ್ರಮಬದ್ಧ ಬಳಕೆಯನ್ನು ಖಚಿತಪಡಿಸಿಕೊಳ್ಳುವುದು;

(ಜಿ) ಆ ವಾರ್ಡ್ ಕೆಳಗೆ ಬರುವ ಪ್ರದೇಶ ಸಭಾಗಳು ಸಲ್ಲಿಸಿರುವ ಕಾರ್ಪೊರೇಷನ್ ಸ್ಕೀಂ ಅಭಿಮುಖ ಫಲಾನುಭವಿಗಳಿಗಾಗಿ ಫಲಾನುಭವಗಳ ಪಟ್ಟಿಯನ್ನು ಅನುಮೋದಿಸುವುದು;

(ಹೆಚ್) ಪ್ರದೇಶ ಸಭಾಗಳು ಸಲ್ಲಿಸಿರುವ ಅನರ್ಹ ಫಲಾನುಭವಿಗಳ ಪಟ್ಟಿಯನ್ನು ಪರಿಶೀಲಿಸುವುದು ಮತ್ತು ಪಾಲಿಕೆಗೆ ಸಲ್ಲಿಸುವುದು;

(ಐ) ವಾರ್ಡಿನಲ್ಲಿ ಪಾಲಿಕೆ ಮೂಲಕ ಅನುಷ್ಠಾನಗೊಂಡಿರುವ ಎಲ್ಲಾ ಕಾರ್ಯಕ್ರಮಗಳು ಮತ್ತು ಸ್ಕೀಂಗಳನ್ನು ಮೇಲ್ವಿಚಾರಣೆ ಮಾಡುವುದು;

(ಜೆ) ಪಾಲಿಕೆಗೆ ಬಾಕಿಯಿರುವ ತೆರಿಗೆಗಳು, ಶುಲ್ಕಗಳು ಮತ್ತು ಇತರ ಮೊತ್ತಗಳ ಸಕಾಲಿಕ ಸಂಗ್ರಹವನ್ನು ಖಚಿತಪಡಿಸಿಕೊಳ್ಳುವುದು;

(ಕೆ) ವಾರ್ಡ್‌ನಲ್ಲಿ ನೀರು ಸರಬರಾಜು ನಿರ್ವಹಣೆಯನ್ನು ಖಚಿತಪಡಿಸಿಕೊಳ್ಳುವುದು ಮತ್ತು ಹೊಸ ಸಾರ್ವಜನಿಕ ಕೊಳಾಯಿಗಳು ಮತ್ತು ಸಾರ್ವಜನಿಕ ಬಾವಿಗಳ ಸ್ಥಳವನ್ನು ಅಂತಿಮಗೊಳಿಸುವುದು;

(ಎಲ್) ವಾರ್ಡ್‌ನಲ್ಲಿ ಒಳಚರಂಡಿ ವ್ಯವಸ್ಥೆಯ ನಿರ್ವಹಣೆಯನ್ನು ಖಚಿತಪಡಿಸಿಕೊಳ್ಳುವುದು;

(ಎಂ) ಕ್ರಮಬದ್ಧ ಘನತ್ಯಾಜ್ಯ ನಿರ್ವಹಣೆಯನ್ನು ಮತ್ತು ನೈರ್ಮಲ್ಯ ಕಾರ್ಯವನ್ನು ಖಚಿತಪಡಿಸಿಕೊಳ್ಳುವುದು ಮತ್ತು ಹೊಸ ಸಾರ್ವಜನಿಕ ನೈರ್ಮಲ್ಯ ಘಟಕಗಳ ಸ್ಥಳವನ್ನು ಅಂತಿಮಗೊಳಿಸುವುದು;

(ಎನ್) ವಾರ್ಡ್‌ನಲ್ಲಿ ಬೀದಿದೀಪಗಳ ನಿರ್ವಹಣೆಯನ್ನು ಖಚಿತಪಡಿಸಿಕೊಳ್ಳುವುದು ಮತ್ತು ಹೊಸ ಬೀದಿ ದೀಪಗಳ ಸ್ಥಳವನ್ನು ಅಂತಿಮಗೊಳಿಸುವುದು;

(ಒ) ಉದ್ಯಾನಗಳು, ಮುಕ್ತ ಪ್ರದೇಶಗಳು, ಪ್ರದೇಶದಲ್ಲಿ ಹಸಿರನ್ನು ನಿರ್ವಹಿಸುವುದದನ್ನು ಖಚಿತಪಡಿಸಿಕೊಳ್ಳುವುದು;

(ಪಿ) ವಾರ್ಡ್ ಅಭಿವೃದ್ಧಿ ಸ್ಕೀಂ ಮತ್ತು ಪಾಲಿಕೆಯ ವಿವಿಧ ಕಾರ್ಯಕ್ರಮಗಳು ಮತ್ತು ಸ್ಕೀಂಗಳ ಅನುಷ್ಠಾನಕ್ಕಾಗಿ ಸರಕುಗಳು ಅಥವಾ ಹಣದ ರೂಪದಲ್ಲಿ ಸ್ವಯಂ ದುಡಿಮೆ ಮತ್ತು ದೇಣಿಗೆಯನ್ನು ಸಜ್ಜುಗೊಳಿಸುವುದು;

(ಕ್ಯೂ) ಪಾಲಿಕೆಗೆ ಸೇರಿದ ಭೂಮಿಯ ಯಾವುದೇ ಒತ್ತುವರಿಯ ಬಗ್ಗೆ ಪಾಲಿಕೆಗೆ ಮಾಹಿತಿ ಒದಗಿಸುವುದು;

(ಆರ್) ಸಾರ್ವಜನಿಕ ಮಾಹಿತಿಗಾಗಿ ವಾರ್ಡ್ ಆಯವ್ಯಯ ಬಜೆಟ್ ಮತ್ತು ಪ್ರಚಲಿತ ಕೈಗೊಳ್ಳಲಾಗಿರುವ ಪ್ರಾಜೆಕ್ಟ್ ಗಳನ್ನು ಪ್ರದರ್ಶಿಸುವುದು;

(ಎಸ್) ಉಪವಿಧಿಗಳ ಅನ್ವಯ ಪಾಲಿಕೆಯು ವಹಿಸಬಹುದಾದ ಅಂಥ ಇತರ ಯಾವುದೇ ಪ್ರಕಾರ್ಯಗಳನ್ನು ನೆರವೇರಿಸುವುದು.

(2) ವಾರ್ಡ್ ಸಮಿತಿಯು ಅದರ ಕಾರ್ಯ ಕಲಾಪ ನಿರ್ವಹಣೆಯಲ್ಲಿ ಅಳವಡಿಸಿಕೊಳ್ಳಬೇಕಾದ ಕಾರ್ಯವಿಧಾನವು ನಿಯಮಗಳಲ್ಲಿ ನಿಯಮಿಸಬಹುದಾದಂತೆ ಇರತಕ್ಕದ್ದು.

(3) ಪಾಲಿಕೆಯು ವಾರ್ಡ್ ಸಮಿತಿಗೆ ಕಛೇರಿ ಸ್ಥಳ ಮತ್ತು ಆಡಳಿತಾತ್ಮಕ ಸಿಬಂಬ್ಬಿಯನ್ನು ಒದಗಿಸತಕ್ಕದ್ದು.

(4) ವಾರ್ಡ್ ಸಮಿತಿಯ ಶಿಫಾರಸ್ಸುಗಳು ಸಲಹಾ ಸ್ವರೂಪದಲ್ಲಿರತಕ್ಕದ್ದು.

87. ನಿಧಿಗಳ ಹಂಚಿಕೆ.- (1) ವಾರ್ಡ್‌ನಲ್ಲಿನ ಇತರ ಕಾರ್ಯಗಳ ಜೊತೆಗೆ ನೀರು ಸರಬರಾಜು, ನೈರ್ಮಲ್ಯ, ಒಳಚರಂಡಿ, ಬೀದಿ ದೀಪಗಳು, ಉದ್ಯಾನಗಳು ಮತ್ತು ಮಾರುಕಟ್ಟೆಗಳಂಥ ಸೇವೆಗಳ ನಿರ್ವಹಣೆಗಾಗಿ, ವಾರ್ಡ್ ಸಮಿತಿಗೆ, ನಿರ್ದಿಷ್ಟ ವಲಯಕ್ಕೆ ಸಂಬಂಧಿಸಿದಂತೆ ಮೀಸಲಿರಿಸಿದ ಆಯವ್ಯಯದಿಂದ ಅಂಥ ಮೊತ್ತಗಳನ್ನು ವಲಯ ಸಮಿತಿಯು ಹಂಚಿಕೆ ಮಾಡತಕ್ಕದ್ದು.

(2) ನಾಗರಿಕ ಸೇವೆಗಳ ನಿರ್ವಹಣೆಗಾಗಿ ವಾರ್ಡ್ ಸಮಿತಿಗಳಿಗೆ ಮತ್ತು ಅವುಗಳಿಂದ ನಿಧಿಗಳ ಹಂಚಿಕೆ ಮತ್ತು ಬಳಕೆಯು ಸರ್ಕಾರವು ನಿಯಮಿಸಬಹುದಾದ ರೀತಿಯಲ್ಲಿರತಕ್ಕದ್ದು ಹಾಗೂ ನಿಯಮಿಸಬಹುದಾದ ಅಂಥ ಸಮಯದಲ್ಲಿ ಮತ್ತು ಅಂಥ ನಮೂನೆಗಳಲ್ಲಿ, ವಲಯ ಸಮಿತಿಗೆ ಬಳಕೆ ಸಂಬಂಧಿ ವರದಿಯನ್ನು ಒದಗಿಸುವುದು ವಾರ್ಡ್ ಸಮಿತಿಗೆ ಅಗತ್ಯವಾಗಿರತಕ್ಕದ್ದು.

88. ಉಪ-ಸಮಿತಿಗಳ ನೇಮಕ.- ವಾರ್ಡ್ ಸಮಿತಿಯು, ಕಾಲಕಾಲಕ್ಕೆ, ಅದು ಸೂಕ್ತವೆಂದು ಭಾವಿಸಬಹುದಾದ ಉಪ-ಸಮಿತಿಗಳನ್ನು ನೇಮಕ ಮಾಡಬಹುದು ಮತ್ತು ವಾರ್ಡ್ ಸಮಿತಿಗೆ ವಹಿಸಿದ ಪ್ರಕಾರ್ಯಗಳಿಗೆ ಸಂಬಂಧಿಸಿದ ಯಾವುದೇ ವಿಷಯ ಕುರಿತು ಅಭಿಪ್ರಾಯ ಅಥವಾ ವಿಚಾರಣೆ ಕುರಿತು ಅಂಥ ಉಪ-ಸಮಿತಿಗಳಿಗೆ ಉಲ್ಲೇಖಿಸಬಹುದು.

89. ಪ್ರದೇಶಗಳನ್ನು ನಿರ್ಧರಿಸುವುದು.- ರಾಜ್ಯ ಸರ್ಕಾರವು, ಅದರ ಆದೇಶದ ಮೂಲಕ,-

(ಎ) ಪ್ರತಿಯೊಂದು ವಾರ್ಡ್‌ನ್ನು ವಿಭಜಿಸಬಹುದಾದ ಪ್ರದೇಶಗಳನ್ನು; ಮತ್ತು

(ಬಿ) ಕಾರ್ಯಸಾಧ್ಯವಿದ್ದಷ್ಟೂ, ಎರಡು ಅಥವಾ ಹೆಚ್ಚು, ಆದರೆ ಐದು ಸಂಖ್ಯೆಯನ್ನು ಮೀರದ ಮತಗಟ್ಟೆಗಳನ್ನು ಪ್ರತಿನಿಧಿಸುವ ಕ್ಷೇತ್ರಗಳನ್ನು ಒಂದು ಪ್ರದೇಶವೆಂದು ನಿರ್ಧರಿಸಬಹುದು.

90. ಪ್ರದೇಶ ಸಭೆಗಳ ರಚನೆ.- (1) ಪ್ರತಿಯೊಂದು ವಾರ್ಡ್‌ಅನ್ನು ಅಂಥ ಸಂಖ್ಯೆಯ ಪ್ರದೇಶಗಳನ್ನಾಗಿ ವಿಭಜಿಸತಕ್ಕದ್ದು ಮತ್ತು ಪ್ರದೇಶದ ವ್ಯಾಪ್ತಿಯಲ್ಲಿನ ಎಲ್ಲಾ ಮತದಾರರೊಂದಿಗೆ ಅಂಥ ಪ್ರತಿಯೊಂದು ಪ್ರದೇಶಕ್ಕಾಗಿ ಪ್ರದೇಶ ಸಭೆಗಳಿರತಕ್ಕದ್ದು.

(2) ಆ ಪ್ರದೇಶದಲ್ಲಿ ಮತದಾರರೆಂದು ನೊಂದಾಯಿಸಿರುವ ಎಲ್ಲಾ ವ್ಯಕ್ತಿಗಳು ಆ ಪ್ರದೇಶ ಸಭಾದ ಸದಸ್ಯರಾಗಿತಕ್ಕದ್ದು.

91. ಪ್ರದೇಶ ಸಭೆಗಳ ಪ್ರತಿನಿಧಿಗಳು.- (1) ನಿಯಮಿಸಬಹುದಾದಂಥ ರೀತಿಯಲ್ಲಿ ನಾಗರಿಕ ಸಮಾಜದ ಪ್ರತಿನಿಧಿಗಳ ಪೈಕಿಯಿಂದ ವಲಯ ಸಮಿತಿಗಳು ಪ್ರತಿಯೊಂದು ಪ್ರದೇಶಕ್ಕೆ ನಾಮನಿರ್ದೇಶಿಸಬೇಕಾದ ಪ್ರದೇಶ ಸಭೆಯ ಪ್ರತಿನಿಧಿಗಳಿರತಕ್ಕದ್ದು.

(2) ಅಧಿನಿಯಮದ ಸುಸಂಗತ ಉಪಬಂಧಗಳ ಅಡಿಯಲ್ಲಿ ಪಾಲಿಕೆಯ ಸದಸ್ಯರಾಗಿ ಚುನಾಯಿತರಾಗುವುದಕ್ಕೆ ಮತ್ತು ಪಾಲಿಕೆಯ ಸದಸ್ಯರಾಗಿ ಹುದ್ದೆಯನ್ನು ಹೊಂದುವುದಕ್ಕೆ ನಿಯಮಿಸಲಾದ ಅರ್ಹತೆಗಳು ಮತ್ತು ಅನರ್ಹತೆಗಳು, ಪ್ರದೇಶ ಸಭೆಯ ಪ್ರತಿನಿಧಿಗಳಿಗೆ ಸಹ ಯಥೋಚಿತ ವ್ಯತ್ಯಾಸಗಳೊಂದಿಗೆ ಅನ್ವಯವಾಗತಕ್ಕದ್ದು.

(3) ಪ್ರದೇಶ ಸಭೆಯ ಪ್ರತಿನಿಧಿಯು, ಆ ಪ್ರದೇಶ ಸಭೆಯ ಸದಸ್ಯನಾಗಿರತಕ್ಕದ್ದು.

(4) ಪ್ರದೇಶ ಸಭೆಯ ಪ್ರತಿನಿಧಿಗಳ ಪದಾವಧಿಯು, ಸಾಮಾನ್ಯವಾಗಿ ಸಂಬಂಧಪಟ್ಟ ಪಾಲಿಕೆಯ ಪದಾವಧಿಯೊಂದಿಗೆ ಕೊನೆಗೊಳ್ಳತಕ್ಕದ್ದು.

92. ಪ್ರದೇಶ ಸಭೆಯ ಸಭೆಗಳು.- (1) ಪ್ರದೇಶ ಸಭೆಯ ಸಭೆಯನ್ನು ಕನಿಷ್ಠಪಕ್ಷ ತಿಂಗಳಿಗೊಮ್ಮೆ ನಡೆಸತಕ್ಕದ್ದು.

(2) ಪ್ರದೇಶ ಸಭೆಯ ಪ್ರತಿನಿಧಿಯು, ಪ್ರದೇಶ ಸಭಾದ ಸಭೆಯ ಅಧ್ಯಕ್ಷತೆಯನ್ನು ವಹಿಸಿಕೊಳ್ಳತಕ್ಕದ್ದು.

(3) ಪ್ರತಿಯೊಂದು ಪ್ರದೇಶ ಸಭೆಯ ನೋಡಲ್ ಅಧಿಕಾರಿಯಾಗಿ ಕಾರ್ಯನಿರ್ವಹಿಸಲು ವಲಯ ಆಯುಕ್ತರು ಸೂಕ್ತ ದರ್ಜೆಯ ಒಬ್ಬ ಅಧಿಕಾರಿಯನ್ನು ಗೊತ್ತುಪಡಿಸತಕ್ಕದ್ದು ಹಾಗೂ ಪ್ರದೇಶ ಸಭಾದ ಸಭೆಗಳನ್ನು ನಡೆಸುವಲ್ಲಿ ಪ್ರದೇಶ ಸಭೆಯ ಪ್ರತಿನಿಧಿಗೆ ಎಲ್ಲಾ ಆಡಳಿತಾತ್ಮಕ ನೆರವು ಒದಗಿಸತಕ್ಕದ್ದು.

(4) ನೋಡಲ್ ಅಧಿಕಾರಿಯು, ಪ್ರದೇಶ ಸಭಾದ ಸಭೆಯ ಸಂಚಾಲಕನಾಗಿರತಕ್ಕದ್ದು ಮತ್ತು ಪ್ರದೇಶ ಸಭೆಯ ಪ್ರತಿನಿಧಿಯೊಂದಿಗೆ ಸಮಾಲೋಚಿಸಿ ಸಭೆಯನ್ನು ಕರೆಯತಕ್ಕದ್ದು.

(5) ಸಭೆಯ ವ್ಯವಹರಣೆಗಳ ಎಲ್ಲಾ ನಡವಳಿಗಳನ್ನು ನೋಡಲ್ ಅಧಿಕಾರಿಯು ದಾಖಲಿಸತಕ್ಕದ್ದು ಮತ್ತು ಅದರ ಪ್ರತಿಯನ್ನು, ಅವರು ವಾರ್ಡ್ ಸಮಿತಿಗೆ ಕಳುಹಿಸತಕ್ಕದ್ದು.

(6) ಕಾರ್ಯಸಾಧ್ಯವಿದ್ದಪೂಟ್ಟ, ಉಪಸ್ಥಿತರಿರುವ ಎಲ್ಲಾ ಸದಸ್ಯರು ಒಟ್ಟು ಅಭಿಪ್ರಾಯಕ್ಕೆ ಬರುವ ಮೂಲಕ, ಪ್ರದೇಶ ಸಭೆಯಲ್ಲಿನ ಎಲ್ಲಾ ನಿರ್ಣಯಗಳನ್ನು ಕೈಕೊಳ್ಳತಕ್ಕದ್ದು. ಒಟ್ಟು ಅಭಿಪ್ರಾಯಕ್ಕೆ ಬರಲಾಗಲು ಸಾಧ್ಯವಿಲ್ಲದಿದ್ದಲ್ಲಿ, ಉಪಸ್ಥಿತರಿರುವ ಸದಸ್ಯರ ಬಹುಮತದ ಮೂಲಕ ನಿರ್ಣಯವನ್ನು ಕೈಗೊಳ್ಳತಕ್ಕದ್ದು.

93. ಪ್ರದೇಶ ಸಭೆಯ ಪ್ರಕಾರ್ಯಗಳು.- ಪ್ರದೇಶ ಸಭೆಯು ಈ ಮುಂದಿನ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು ಮತ್ತು ಕರ್ತವ್ಯಗಳನ್ನು ನೆರವೇರಿಸತಕ್ಕದ್ದು, ಎಂದರೆ:-

(ಎ) ಪ್ರದೇಶ ಸಭೆಯಲ್ಲಿ ಅನುಷ್ಠಾನಗೊಳಿಸಬೇಕಾದ ಸ್ಕೀಮುಗಳ ಮತ್ತು ಅಭಿವೃದ್ಧಿ ಕಾರ್ಯಕ್ರಮಗಳ ಪ್ರಸ್ತಾವನೆಗಳನ್ನು ಸೃಜಿಸಿ, ಅವುಗಳ ಆದ್ಯತೆಯನ್ನು ನಿರ್ಧರಿಸುವುದು ಹಾಗೂ ವಾರ್ಡ್ ಸಮಿತಿಯ ಅಭಿವೃದ್ಧಿ ಯೋಜನೆಯಲ್ಲಿ ಸೇರಿಸಲು ಅದನ್ನು ವಾರ್ಡ್ ಸಮಿತಿಗೆ ಕಳುಹಿಸುವುದು;

(ಬಿ) ಸರ್ಕಾರವು ನಿಗದಿಪಡಿಸಿದ ಮಾನದಂಡದ ಆಧಾರದ ಮೇಲೆ, ಫಲಾನುಭವಿ-ಕೇಂದ್ರಿತ ಸ್ಕೀಮುಗಳಿಗಾಗಿ ಅತಂ್ಯತ ಅರ್ಹ ವ್ಯಕ್ತಿಗಳನ್ನು ಗುರುತಿಸುವುದು ಮತ್ತು ಆದ್ಯತೆಯ ಕ್ರಮದಲ್ಲಿ ಫಲಾನುಭವಿಗಳ ಪಟ್ಟಿಯನ್ನು ಸಿದ್ಧಪಡಿಸುವುದು ಹಾಗೂ ವಾರ್ಡ್ ಸಮಿತಿಯ ಅಭಿವೃದ್ಧಿ ಯೋಜನೆಯಲ್ಲಿ ಸೇರಿಸಲು ಅದನ್ನು ವಾರ್ಡ್ ಸಮಿತಿಗೆ ಕಳುಹಿಸುವುದು;

(ಸಿ) ನಿವೃತ್ತಿ ವೇತನ ಮತ್ತು ಸಹಾಯಧನಗಳಂಥ ಸರ್ಕಾರದಿಂದ ದೊರೆಯುವ ಕ್ಷೇಮಾಭಿವೃದ್ಧಿ ನೆರವಿನ ವಿಧಗಳನ್ನು ಪಡೆಯುವ ವ್ಯಕ್ತಿಗಳ ಅರ್ಹತೆಯನ್ನು ಪರಿಶೀಲಿಸುವುದು;

(ಡಿ) ವಾರ್ಡ್ ಸಮಿತಿಯ ಸಭೆಯ ನಂತರ, ಸಂಬಂಧಪಟ್ಟ ಅಧಿಕಾರಿಗಳಿಂದ, ಅವರು ಸಲ್ಲಿಸುವ ಸೇವೆಗಳ ಮತ್ತು ಮುಂಬರುವ ತ್ರೈಮಾಸಿಕ ಅವಧಿಯಲ್ಲಿ ಪ್ರದೇಶದಲ್ಲಿ ಅನುಷ್ಠಾನಗೊಳಿಸಬೇಕಾದ ಪ್ರಸ್ತಾವಿತ ಕಾಮಗಾರಿಗಳ ಮಾಹಿತಿಯನ್ನು ಪಡೆಯುವುದು;

(ಇ) ಸಂಬಂಧಪಟ್ಟ ಪ್ರದೇಶದ ವ್ಯಾಪ್ತಿಗೆ ಸಂಬಂಧಿಸಿದಂತೆ ತೆಗೆದುಕೊಂಡ ನಿರ್ಣಯಗಳ ಆಧಾರದ ಮೇಲೆ ಕೈಗೊಳ್ಳಬೇಕಾದ ಕ್ರಮದ ಅನುಸರಣೆಯ ಬಗ್ಗೆ ವಾರ್ಡ್ ಸಮಿತಿಯಿಂದ ಮಾಹಿತಿ ಕೋರುವುದು;

(ಎಫ್) ಪ್ರದೇಶ ಸಭಾದ ವ್ಯಾಪ್ತಿಯಲ್ಲಿನ ನೀರು ಸರಬರಾಜು, ಬೀದಿ ದೀಪ ಅಳವಡಿಕೆ ಮತ್ತು ನೈರ್ಮಲ್ಯ ಏರ್ಪಾಡುಗಳಲ್ಲಿನ ಕೊರತೆಗಳನ್ನು ಗುರುತಿಸಿ, ವಾರ್ಡ್ ಸಮಿತಿಗೆ ಪರಿಹಾರ ಕ್ರಮಗಳನ್ನು ಕುರಿತು ಸಲಹೆ ನೀಡುವುದು;

(ಜಿ) ವಾರ್ಡ್ ಸಮಿತಿಗೆ ಬೀದಿ ದೀಪಗಳ, ಸಾರ್ವಜನಿಕ ಕೊಳಾಯಿಗಳ, ಸಾರ್ವಜನಿಕ ಬಾವಿಗಳ, ಸಾರ್ವಜನಿಕ ಶೌಚಾಲಯಗಳ ಸ್ಥಳವನ್ನು ಕುರಿತು ಸಲಹೆ ನೀಡುವುದು;

(ಹೆಚ್) ಪ್ರದೇಶದಲ್ಲಿ ಸಾರ್ವಜನಿಕ ಆರೋಗ್ಯ ಕೇಂದ್ರಗಳ ಕಾರ್ಯಚಟುವಟಿಕೆಗಳಲ್ಲಿ ನೆರವು ನೀಡುವುದು; ಮತ್ತು ನಿಯಮಿಸಬಹುದಾದಂಥ ಇತರ ಪ್ರಕಾರ್ಯಗಳನ್ನು ನಿರ್ವಹಿಸುವುದು.

94. ಕೌನ್ಸಿಲರುಗಳ ಅಧಿಕಾರ.- (1) ಪಾಲಿಕೆಯ ಕಾರ್ಯದ ನಿರ್ವಹಣೆಯಲ್ಲಿನ ಯಾವುದೇ ನಿರ್ಲಕ್ಷ್ಯದ ಬಗ್ಗೆ ಪಾಲಿಕೆಯ ಸ್ವತ್ತಿನ ಯಾವುದೇ ಬಗೆಯ ಪೋಲು ಕುರಿತಂತೆ ಅಥವಾ ಯಾವುದೇ ಪ್ರದೇಶದ ಅಗತ್ಯತೆಗಳ ಬಗ್ಗೆ ಯಾರೇ ಕೌನ್ಸಿಲರನು ಸೂಕ್ತ ಪ್ರಾಧಿಕಾರಿಯ ಗಮನ ಸೆಳೆಯಬಹುದು ಮತ್ತು ತಾನು ಅಪೇಕ್ಷಣೀಯವೆಂದು ಪರಿಗಣಿಸುವಂಥ ಯಾವುದೇ ಸುಧಾರಣೆಗಳನ್ನು ಸೂಚಿಸಬಹುದು.

(2) ಪ್ರತಿಯೊಬ್ಬ ಕೌನ್ಸಿಲರನು, ಈ ಬಗ್ಗೆ ರಚಿಸಿದ ವಿನಿಯಮಗಳಿಗೆ ಒಳಪಟ್ಟು ಪಾಲಿಕೆಯ ಆಡಳಿತಕ್ಕೆ ಸಂಬಂಧಪಟ್ಟ ವಿಷಯಗಳ ಮೇಲೆ ಪ್ರಶ್ನೆ, ಪ್ರತಿ ಪ್ರಶ್ನೆ ಕೇಳಲು ಹಕ್ಕುಳ್ಳವನಾಗಿರತಕ್ಕದ್ದು.

(3) ಪಾಲಿಕೆಯ ಸದಸ್ಯನು, ಆತನು ಆಯ್ಕೆಯಾಗಿರುವ ಪಾಲಿಕೆಯ ವಾರ್ಡ್‌ನ ಹಿತಾಸಕ್ತಿಯ ಸಂಬಂಧದಲ್ಲಿ ಪ್ರತಿನಿಧಿಸುವುದಕ್ಕೆ ಮತ್ತು ಆತನು ಅಧ್ಯಕ್ಷನಾಗಿರುವ ವಾರ್ಡ್ ಸಮಿತಿಯಿಂದ ಮಾಡಲಾದ ಮನವಿಗಳು ಮತ್ತು ನಿರ್ಣಯಗಳ ಬಗ್ಗೆ ಮೇಯರ್ ಅವರ ಗಮನವನ್ನು ಸೆಳೆಯುವುದಕ್ಕೆ ಹಕ್ಕುಳ್ಳವನಾಗಿರತಕ್ಕದ್ದು.

95. ಪಾಲಿಕೆ ಸದಸ್ಯರಿಗಾಗಿ ಗೌರವಧನ.- (1) ಪಾಲಿಕೆ ಸದಸ್ಯರಿಗಾಗಿ ಸರ್ಕಾರವು ನಿರ್ಧರಿಸಬಹುದಾದಂಥ ಗೌರವಧನ, ಫೀಜು ಅಥವಾ ಭತ್ಯಗಳನ್ನು ಪಾಲಿಕೆ ನಿಧಿಯಿಂದ ಸಂದಾಯ ಮಾಡಬಹುದು.

(2) ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ ಈ ಹಿಂದೆ ಹೇಳಿದಂತೆ, ಪಾಲಿಕೆ ಸದಸ್ಯರಾಗಿ ಗೌರವಧನ, ಶುಲ್ಕ ಅಥವಾ ಭತ್ಯೆಯನ್ನು ಯಾರೇ ವ್ಯಕ್ತಿಯು ಪಡೆಯಲು ಅವನು ಚುನಾಯಿತರಾಗಿದ್ದಕ್ಕಾಗಿ ಅಥವಾ ಪಾಲಿಕೆ ಸದಸ್ಯರಾಗಿದ್ದಕ್ಕಾಗಿ ಅವನನ್ನು ಅನರ್ಹಗೊಳಿಸತಕ್ಕದ್ದಲ್ಲ.

96. ಮೇಯರ್, ಉಪಮೇಯರ್ ಮುಂತಾದವರ ಚುನಾವಣೆಗೆ ಅಪೀಲು.- (1)ಮೇಯರ್, ಉಪಮೇಯರ್, ಸ್ಥಾಯೀಸಮಿತಿಯ ಸದಸ್ಯರು ಮತ್ತು ಅಧ್ಯಕ್ಷರ ಹುದ್ದೆಯ ಚುನಾವಣೆಯ ಸಂಬಂಧದಲ್ಲಿ ಪ್ರಾದೇಶಿಕ ಆಯುಕ್ತರು ಅಥವಾ ಮುಖ್ಯ ಆಯುಕ್ತರ ನಿರ್ಧಾರದಿಂದ ಬಾಧಿತನಾದ ಯಾವೊಬ್ಬ ವ್ಯಕ್ತಿಯು ಅಂಥ ನಿರ್ಧಾರವು ತಲುಪಿದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಕರ್ನಾಟಕ ಅಪೀಲು ನ್ಯಾಯಮಂಡಳಿಗೆ ಅಂಥ ನಿರ್ಧಾರಗಳ ವಿರುದ್ಧವಾಗಿ ಅಪೀಲು ಹೋಗಬಹುದು.

(2) ಈ ಅಧಿನಿಯಮದ ಅಥವಾ ಈ ಅಧಿನಿಯಮದ ಅಡಿಯಲ್ಲಿ ಮಾಡಲಾದ ನಿಯಮಗಳ ಉಪಬಂಧಗಳ ಮೂಲಕ ಪ್ರಾಧಿಕೃತರಾದ ಅಂಥ ದಾವೆಯನ್ನು ಹೊರತುಪಡಿಸಿ, ಮೇಯರ್, ಉಪಮೇಯರ್ ಮತ್ತು ಸ್ಥಾಯೀ ಸಮಿತಿಯ ಅಧ್ಯಕ್ಷ ಮತ್ತು ಸದಸ್ಯರ ಚುನಾವಣೆಗೆ ನೇಮಕಾತಿ ಅಥವಾ ತೆಗೆದುಹಾಕುವಿಕೆಗೆ ಸಂಬಂಧಿಸಿದ ಯಾವುದೇ ವಿಷಯದ ಸಂಬಂಧದಲ್ಲಿ ಸಿವಿಲ್ ನ್ಯಾಯಾಲಯ ಯಾವುದೇ ದಾವೆಯನ್ನು ಪುರಸ್ಕರಿಸತಕ್ಕದ್ದಲ್ಲ.

ಅಧ್ಯಾಯ VI

ಪಾಲಿಕೆಯ ಅಧಿಕಾರಿಗಳು ಮತ್ತು ನೌಕರರು ಮತ್ತು ಅವರ ನೇಮಕಾತಿಗಳು ಮತ್ತು ಸೇವಾ ಷರತ್ತುಗಳು

97. ಪಾಲಿಕೆಯ ಅಧೀನದಲ್ಲಿರುವ ಕೆಲವು ಹುದ್ದೆಗಳಿಗೆ ಕರ್ನಾಟಕ ಪೌರಾಡಳಿತ ಸೇವೆಯಿಂದ ನೇಮಕ ಮಾಡುವುದು.- (1) ಈ ಅಧಿನಿಯಮದಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ಕರ್ನಾಟಕ ಪೌರಾಡಳಿತ ಸೇವೆಯಲ್ಲಿ ಸೇರಿಸಲಾಗಿರುವ ಪ್ರತಿಯೊಂದು ಪಾಲಿಕೆಯ ಅಧೀನದಲ್ಲಿರುವಂಥ ಹುದ್ದೆಗಳನ್ನು ಸರ್ಕಾರವು ಕರ್ನಾಟಕ ಪೌರಾಡಳಿತ ಸೇವೆಗೆ ಸೇರಿರುವ ಅಧಿಕಾರಿಗಳನ್ನು ನೇಮಕ ಮಾಡುವ ಮೂಲಕ ಭರ್ತಿಮಾಡತಕ್ಕದ್ದು.

(2) (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿರುವ ಕರ್ನಾಟಕ ಪೌರಾಡಳಿತ ಸೇವೆಯ ಅಧಿಕಾರಿಗಳಿಗೆ, ಅವರಿಗೆ ಅನ್ವಯವಾಗುವ ನೇಮಕಾತಿ ಮತ್ತು ಸೇವಾ ಷರತ್ತುಗಳಿಗೆ ಸಂಬಂಧಪಟ್ಟ ಉಪಬಂಧಗಳಿಗೆ ಒಳಪಟ್ಟು, ಪಾಲಿಕೆಯ ಅಧೀನದಲ್ಲಿನ ಅವರ ಸೇವಾ ಅವಧಿಯವರೆಗೆ ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ, ವಿನಿಯಮಗಳ ಅಥವಾ ಉಪವಿಧಿಗಳ ಉಪಬಂಧಗಳು ಅನ್ವಯವಾಗತಕ್ಕದ್ದು.

(3) ಸಂಬಳಗಳು, ಭತ್ಯೆಗಳು, ನಿವೃತ್ತಿ ವೇತನ, ಭವಿಷ್ಯನಿಧಿ, ಉಪದಾನಗಳಿಗೆ ಸಂಬಂಧಿಸಿದ ವೆಚ್ಚವನ್ನು ಭರಿಸಲು ಪ್ರತಿಯೊಂದು ಪಾಲಿಕೆಯು ತನ್ನ ರಾಜಸ್ವದಲ್ಲಿ ಸರ್ಕಾರವು ಆದೇಶದ ಮೂಲಕ ನಿರ್ಧರಿಸಬಹುದಾದಂಥ ಶೇಕಡಾ ಪ್ರಮಾಣವನ್ನು, ಅಂಥ ರೀತಿಯಲ್ಲಿ ಮತ್ತು ಅಂಥ ಕಾಲಗಳಲ್ಲಿ ವಂತಿಗೆ ನೀಡತಕ್ಕದ್ದು ಮತ್ತು ಪಾಲಿಕೆಯ ಅಧೀನದಲ್ಲಿ ಸೇವೆ ಸಲ್ಲಿಸುತ್ತಿರುವ 82ನೇ ಪ್ರಕರಣದಲ್ಲಿ ಉಲ್ಲೇಖಿಸಿರುವ ಕರ್ನಾಟಕ ಪೌರಾಡಳಿತ ಸೇವಾ ಅಧಿಕಾರಿಗಳಿಗೆ ಸಂದಾಯ ಮಾಡಬೇಕಾದ ಇತರ ಅವಶ್ಯಕ ವೆಚ್ಚಗಳನ್ನು ಮುಖ್ಯ ಆಯುಕ್ತರು ಭರಿಸತಕ್ಕದ್ದು.

(4) (3)ನೇ ಉಪಪ್ರಕರಣದ ಮೇರೆಗೆ ಸಂದಾಯ ಮಾಡಬೇಕಾದ ಮೊಬಲಗನ್ನು ಪಾಲಿಕೆಯು ಸಂದಾಯ ಮಾಡಲು ತಪ್ಪಿದರೆ, ಸರ್ಕಾರವು ಪಾಲಿಕೆಯ ನಿಧಿಯ ಅಭಿರಕ್ಷೆಯನ್ನು ಹೊಂದಿರುವ ಅಧಿಕಾರಿಗೆ, ಅಂಥ ಮೊಬಲಗನ್ನು ಸಂದಾಯ ಮಾಡುವಂತೆ ಅಥವಾ ಅವರ ವಶದಲ್ಲಿರುವ ಪಾಲಿಕೆಯ ನಿಧಿಯ ಶಿಲ್ಕಿನಿಂದ ಆ ಮೊಬಲಗಿನಲ್ಲಿ ಎಷ್ಟನ್ನು ಸಂದಾಯ ಮಾಡಲು ಸಾಧ್ಯವೋ ಅಷ್ಟು ಮೊಬಲಗನ್ನು ಸಂದಾಯ ಮಾಡುವಂತೆ ನಿರ್ದೇಶಿಸಬಹುದು.

98. ಇಂಜಿನಿಯರ್, **ಆರೋಗ್ಯಾಧಿಕಾರಿ**, **ಮೊದಲಾದವರ ನೇಮ**ಕ.- (1) ಪಾಲಿಕೆಯ ದಕ್ಷ ಕಾರ್ಯನಿರ್ವಹಣೆಗಾಗಿ ಸರ್ಕಾರವು, ಇಂಜಿನಿಯರ್, ಆರೋಗ್ಯಾಧಿಕಾರಿ, ರೆವಿನ್ಯೂ ಅಧಿಕಾರಿ, ಮುಖ್ಯ ಲೆಕ್ಕಾಧಿಕಾರಿ ಮತ್ತು ಕೌನ್ಸಿಲ್ ಕಾರ್ಯದರ್ಶಿಯಾಗಿರಲು ಸೂಕ್ತವೆಂದು ತಾನು ಪರಿಗಣಿಸುವಂಥ ರಾಜ್ಯದ ಸಿವಿಲ್ ಸೇವೆಗಳ ಅಧಿಕಾರಿಗಳನ್ನು ಪ್ರತಿಯೊಂದು ಪಾಲಿಕೆಗೆ ನೇಮಕಮಾಡತಕ್ಕದ್ದು ಮತ್ತು ಅಂಥ ಅಧಿಕಾರಿಗಳು ಪಾಲಿಕೆಯಲ್ಲಿ ಆಯಾಯ ವಿಭಾಗಗಳ ಮುಖ್ಯಸ್ಥರಾಗಿರತಕ್ಕದ್ದು ಮತ್ತು ಅವರು ಮುಖ್ಯ ಆಯುಕ್ತರಿಗೆ ಅಧೀನರಾಗಿರತಕ್ಕದ್ದು. ಸರ್ಕಾರವು ಒಬ್ಬರು ಅಥವಾ ಹೆಚ್ಚು ಉಪ ಆಯುಕ್ತರುಗಳನ್ನು ಮತ್ತು ಸಹಾಯಕ ಆಯುಕ್ತರುಗಳನ್ನು ನೇಮಕ ಮಾಡಬಹುದು. ಅವರು ನಿಯಮಗಳಲ್ಲಿ ನಿರ್ದಿಷ್ಟ ಪಡಿಸಬಹುದಾದಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು, ಅವರು ವಲಯ ಆಯುಕ್ತರಿಗೆ ಅಧೀನರಾಗಿರತಕ್ಕದ್ದು.

(2) ಸರ್ಕಾರವು ಮುಖ್ಯ ಆಯುಕ್ತನಿಗೆ ಅಧೀನನಾದ ನಗರ ಮತ್ತು ಗ್ರಾಮಾಂತರ ಯೋಜನೆಯ ನಿರ್ದೇಶಕರ ದರ್ಜೆಗೆ ಕಡಿಮೆಯಿಲ್ಲದ ದರ್ಜೆಯ ಮುಖ್ಯ ನಗರ ಯೋಜಕರನ್ನು ಮತ್ತು ವಲಯ ಕಚೇರಿಯಲ್ಲಿ ನಗರ ಮತ್ತು ಗ್ರಾಮಾಂತರ ಯೋಜನೆಯ ಉಪ ನಿರ್ದೇಶಕರ ದರ್ಜೆಗೆ ಕಡಿಮೆಯಿಲ್ಲದ ದರ್ಜೆಯ ವಲಯ ನಗರ ಯೋಜಕರನ್ನು ಮತ್ತು ನಗರ ಮತ್ತು ಗ್ರಾಮಾಂತರ ಯೋಜನೆಯಲ್ಲಿ ಅರ್ಹರಾಗಿರುವ ವಲಯ ಆಯುಕ್ತರಿಗೆ ಅಧೀನರಾದ ನಗರ ಮತ್ತು ಗ್ರಾಮಾಂತರ ಇಲಾಖೆಯಿಂದ ಅಂಥ ಇತರೆ ಅಧಿಕಾರಿಗಳನ್ನು, ನಗರ ಯೋಜನೆಗೆ ಸಂಬಂಧಿಸಿದ ವಿಷಯದಲ್ಲಿ ಪಾಲಿಕೆಗೆ ನೆರವಾಗಲು ನಿಯೋಜಿಸತಕ್ಕದ್ದು.

(3) ಸರ್ಕಾರವು, ಮೇಯರ್ ಅವರೊಡನೆ ಸಮಾಲೋಚಿಸಿ ಸಹಾಯಕ ಆಯುಕ್ತರ ದರ್ಜೆಗೆ ಕಡಿಮೆ ಅಲ್ಲದ ಅಧಿಕಾರಿಯನ್ನು ಕೌನ್ಸಿಲ್ ಕಾರ್ಯದರ್ಶಿಯಾಗಿ ನೇಮಕಮಾಡತಕ್ಕದ್ದು. ಹಾಗೆ ನೇಮಕಗೊಂಡ ಅಧಿಕಾರಿಯು ಸಾಮಾನ್ಯವಾಗಿ ಮೂರು ವರ್ಷಗಳ ಅವಧಿಗೆ ಪ್ರತಿನಿಯೋಜನೆಯ ಮೇಲೆ ಇರತಕ್ಕದ್ದು ಮತ್ತು ಪಾಲಿಕೆಯು ತನ್ನ ಮೂರನೇ ಎರಡರಷ್ಟು ಸದಸ್ಯರ ಬಹುಮತದಿಂದ ಅವರನ್ನು ಅದಕ್ಕು ಮುಂಚಿತವಾಗಿಯೇ ಹಿಂದಕ್ಕೆ ಪಡೆಯಬೇಕೆಂದು ಮತ್ತು ಬೇರೊಬ್ಬ ವ್ಯಕ್ತಿಯನ್ನು ನೇಮಕಮಾಡಬೇಕೆಂದು ಅಪೇಕ್ಷಿಸಿದರೆ ಹಾಗೆ ಮಾಡತಕ್ಕದ್ದು. ಪಾಲಿಕೆಯ ಮತ್ತು ಸ್ಥಾಯೀ ಸಮಿತಿಗಳ ಪ್ರತಿಯೊಂದು ಸಭೆಗೆ ಹಾಜರಾಗುವುದು ಕೌನ್ಸಿಲ್ ಕಾರ್ಯದರ್ಶಿಯ ಕರ್ತವ್ಯವಾಗಿರತಕ್ಕದ್ದು ಮತ್ತು ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ಅವರಿಗೆ ವಿಧಿಸಿದಂಥ ಇತರ ಕರ್ತವ್ಯಗಳನ್ನು ಅವರು ನೆರವೇರಿಸತಕ್ಕದ್ದು.

(4) (1)ನೇ ಉಪಪ್ರಕರಣದ ಮೇರೆಗೆ ನೇಮಕಗೊಂಡ ಅಧಿಕಾರಿಗಳು ಪಾಲಿಕೆಯ ಪೂರ್ಣಕಾಲಿಕ ಅಧಿಕಾರಿಗಳಾಗಿರತಕ್ಕದ್ದು ಮತ್ತು ಅದರ ಹುದ್ದೆಗಳಿಗೆ ಸಂಬಂಧಪಡದ ಯಾವುದೇ ಕೆಲಸವನ್ನು ಕೈಗೊಳ್ಳತಕ್ಕದ್ದಲ್ಲ.

99. ಕಾನೂನು ಕೋಶ.-(1) ನಿಯಮಿಸಬಹುದಾದಂಥ ಅರ್ಹತೆಗಳನ್ನು ಹೊಂದಿರುವ ಅಂಥ ಸಂಖ್ಯೆಯ ಅಧಿಕಾರಿಗಳನ್ನು ಒಳಗೊಂಡ ಕಾನೂನು ಕೋಶವು ಪಾಲಿಕೆಯಲ್ಲಿ ಇರತಕ್ಕದ್ದು.

(2) ಪಾಲಿಕೆಯು, ಈ ಅಧಿನಿಯಮದ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳ, ವಿನಿಯಮಗಳ ಮತ್ತು ಉಪವಿಧಿಗಳ ಉಪಬಂಧಗಳ ಅರ್ಥವಿವರಣೆಗೆ ಸಂಬಂಧಪಟ್ಟ ಎಲ್ಲ ವಿಷಯಗಳ ಬಗ್ಗೆ ಮತ್ತು ಪಾಲಿಕೆಯು ಪಕ್ಷಕಾರ ಆಗಿರುವ ದಾವೆಗಳನ್ನು ಮತ್ತು ಇತರ ಕಾನೂನು ವ್ಯವಹರಣೆಗಳನ್ನು ಹೂಡುವುದಕ್ಕೆ, ಅವುಗಳಲ್ಲಿ ಪ್ರತಿರಕ್ಷಿಸಿಕೊಳ್ಳುವುದಕ್ಕೆ, ಅವುಗಳನ್ನು ನಡೆಸುವುದಕ್ಕೆ ಸಂಬಂಧಪಟ್ಟ ವಿಷಯಗಳಲ್ಲಿ ಸಹ ಕಾನೂನು ಕೋಶದೊಂದಿಗೆ ಸಮಾಲೋಚಿಸತಕ್ಕದ್ದು.

(3) ಕಾನೂನು ಕೋಶದ ವೆಚ್ಚವನ್ನು ಪಾಲಿಕೆಯ ನಿಧಿಗಳಿಂದ ಭರಿಸತಕ್ಕದ್ದು.

100. ವಿಶೇಷ ನೇಮಕಗಳು.- ಪಾಲಿಕೆಯು,-

(ಎ) ನಗರದಲ್ಲಿ ಯಾವುದೇ ಅಸಾಮಾನ್ಯ ಮೃತ್ಯು ಸಂಭವಿಸಿರುವುದಕ್ಕೆ ಅಥವಾ ಯಾವುದೇ ಅಪಾಯಕಾರಿ ರೋಗವು ಹರಡಿರುವುದಕ್ಕೆ ಅಥವಾ ಹರಡಿರುವುದಾಗಿ ಶಂಕಿಸಿರುವುದಕ್ಕೆ ವಿಶೇಷವಾಗಿ ಗಮನ ನೀಡುವುದರೊಂದಿಗೆ ತನಿಖೆಗಳನ್ನು ನಡೆಸುವುದಕ್ಕೆ ಮತ್ತು ನಿವಾರಕ ಅಥವಾ ಪರಿಹಾರಕ ಕ್ರಮಗಳನ್ನು ಸೂಚಿಸುವ ಉದ್ದೇಶಕ್ಕಾಗಿ ವಿಶೇಷ ಆರೋಗ್ಯಾಧಿಕಾರಿಗಳನ್ನು;

(ಬಿ) ಪಾಲಿಕೆಯು ಕೈಗೊಂಡ ಯಾವುದೇ ಕಾಮಗಾರಿಯ ಯೋಜನೆಯನ್ನು ತಯಾರಿಸುವ, ಕಾರ್ಯಗತಗೊಳಿಸುವ ಅಥವಾ ಮೇಲ್ವಿಚಾರಣೆ ನಡೆಸುವ ಉದ್ದೇಶಕ್ಕಾಗಿ ಇಂಜಿನಿಯರುಗಳನ್ನು, ವಾಸ್ತುಶಿಲ್ಪಿಗಳನ್ನು ಅಥವಾ ನಗರ ಸುಧಾರಣೆ ಅಥವಾ ನಗರ ಯೋಜನಾ ತಜ್ಞರನ್ನು;

(ಸಿ) ಹೊಸ ತೆರಿಗೆಯನ್ನು ಜಾರಿಗೆ ತರುವ ಅಥವಾ ಪಾಲಿಕೆಯ ಆದಾಯ ನಿರ್ವಹಣೆಗೆ ಸಂಬಂಧಿಸಿದ ಯಾವುದೇ ಕರ್ತವ್ಯವನ್ನು ನಿರ್ವಹಿಸುವ ಉದ್ದೇಶಕ್ಕಾಗಿ ವಿಶೇಷ ರೆವಿನ್ಯೂ ಅಧಿಕಾರಿಗಳನ್ನು,

- ನೇಮಕಮಾಡಬಹುದು:

ಪರಂತು,-

(i) ಸರ್ಕಾರದ ಮಂಜೂರಾತಿ ಇಲ್ಲದೆ ಅಂಥ ಯಾವುದೇ ವಿಶೇಷ ಹುದ್ದೆಯನ್ನು ಸೃಜಿಸತಕ್ಕದ್ದಲ್ಲ.

(ii) ಅಂಥ ಯಾರೇ ಅಧಿಕಾರಿಯ ಹುದ್ದೆಯ ಅವಧಿ, ಸಂಬಳ, ಭತ್ಯೆಗಳು ಮತ್ತು ಆ ಹುದ್ದೆಗೆ ಅನ್ವಯಿಸುವ ಸೇವಾ ಷರತ್ತುಗಳನ್ನು, ಸರ್ಕಾರದ ಮಂಜೂರಾತಿಗೆ ಒಳಪಟ್ಟು ಪಾಲಿಕೆಯು ಗೊತ್ತುಪಡಿಸತಕ್ಕದ್ದು ಮತ್ತು ಅದೇ ರೀತಿಯ ಮಂಜೂರಾತಿ ಇಲ್ಲದೆ ಅವುಗಳನ್ನು ವ್ಯತ್ಯಸ್ತಗೊಳಿಸತಕ್ಕದ್ದಲ್ಲ.

101. ಸರ್ಕಾರಿ ನೌಕರರಿಗೆ ಸಂಬಂಧಿಸಿದಂತೆ ವಂತಿಗೆ.- (1) ಪಾಲಿಕೆಯ ಅಧೀನದಲ್ಲಿ ಸೇವೆ ಸಲ್ಲಿಸುತ್ತಿರುವ ಅಥವಾ ಸೇವೆ ಸಲ್ಲಿಸಿದ್ದ ಅಧಿಕಾರಿಯನ್ನು ಅಥವಾ ನೌಕರನನ್ನು ಸರ್ಕಾರದ ಸೇವೆಯಿಂದ ಅಥವಾ ಸರ್ಕಾರದ ಸೇವೆಗೆ ವರ್ಗಾಯಿಸಿದರೆ ಅಥವಾ ವರ್ಗಾಯಿಸಿದ್ದರೆ ಅಥವಾ ಅವನನ್ನು ಭಾಗಶಃ ಸರ್ಕಾರದ ಅಧೀನದಲ್ಲಿ ಮತ್ತು ಭಾಗಶಃ ಪಾಲಿಕೆಯಿಂದ ನಿಯೋಜಿಸಲಾಗಿದ್ದರೆ, ಅವನು ಸರ್ಕಾರಿ ಸೇವೆಯ ಯಾವ ಶಾಖೆಗೆ ಸೇರಿರುವನೋ ಆ ಶಾಖೆಯ ನಿಯಮಗಳು ಮತ್ತು ವಿನಿಯಮಗಳ ಮೇರೆಗೆ ಅವನು ಅಥವಾ ಅವನ ಪರವಾಗಿ ಸಂದಾಯ ಮಾಡಬೇಕಾದ ಅವನ ರಜೆ ಭತ್ಯೆಗಳು, ನಿವೃತ್ತಿವೇತನ ಮತ್ತು ಭವಿಷ್ಯನಿಧಿಯ ಬಾಬಿಗೆ ಪಾಲಿಕೆಯು ಅಂಥ ವಂತಿಗೆಯನ್ನು ನೀಡತಕ್ಕದ್ದು.

(2) ಪಾಲಿಕೆಯಿಂದ ನಿಯೋಜಿತನಾದ ಪ್ರತಿಯೊಬ್ಬ ಸರ್ಕಾರಿ ನೌಕರನು, ಅವನು ಸರ್ಕಾರಿ ಸೇವೆಯ ಯಾವ ಶಾಖೆಗೆ ಸೇರಿರುವನೋ ಆ ಶಾಖೆಯ ನಿಯಮಗಳಿಗೆ ಮತ್ತು ವಿನಿಯಮಗಳಿಗೆ ಅನುಸಾರವಾಗಿ ಸಂಬಳ, ರಜೆ ಮತ್ತು ಇತರ ಸವಲತ್ತುಗಳಿಗೆ ಹಕ್ಕುಳ್ಳವನಾಗಿರತಕ್ಕದ್ದು.

102. ಸಿಬ್ಬಂದಿ ಅನುಸೂಚಿ.- (1) ಯಾವ ಅಧಿಕಾರಿಗಳ ಮತ್ತು ನೌಕರರ ಪದನಾಮಗಳು ಮತ್ತು ದರ್ಜೆಗಳು ಪಾಲಿಕೆಯ ಸಿಬ್ಬಂದಿಯಾಗುವರೆಂದು ಮುಖ್ಯ ಆಯುಕ್ತರು ಅಭಿಪ್ರಾಯಪಡುವರೋ ಆ ಅಧಿಕಾರಿಗಳ

ಮತ್ತು ನೌಕರರ ಪದನಾಮಗಳನ್ನು ಮತ್ತು ದರ್ಜೆಗಳನ್ನು ವಿವರಿಸುವ, ಅವರಿಗೆ ಸಂದಾಯ ಮಾಡಬೇಕಾದ ಸಂಬಳಗಳಿಗೆ, ಫೀಜುಗಳಿಗೆ ಮತ್ತು ಭತ್ಯೆಗಳಿಗೆ ಸಂಬಂಧಿಸಿದಂತೆ ಮುಖ್ಯ ಆಯುಕ್ತರು ಪ್ರಸ್ತಾವಗಳನ್ನು ಒಳಗೊಂಡಿರುವ ಒಂದು ಅನುಸೂಚಿಯನ್ನು ತೆರಿಗೆ, ಹಣಕಾಸು ಮತ್ತು ಅಪೀಲುಗಳ ಅಥವಾ ಸಂದರ್ಭಾನುಸಾರ ಸಿಬಂ೦ದಿ ಮತ್ತು ಆಡಳಿತ ಸುಧಾರಣಾ ಸ್ಥಾಯೀ ಸಮಿತಿಯ ಮುಂದೆ ಮಂಡಿಸತಕ್ಕದ್ದು.

(2) ಸ್ಥಾಯೀ ಸಮಿತಿಯು, ಅಂಥ ಅನುಸೂಚಿಯನ್ನು ಅನುಮೋದಿಸಬಹುದು ಅಥವಾ ತಾನು ಸೂಕ್ತವೆಂದು ಆಲೋಚಿಸುವಂತೆ ಅದನ್ನು ತಿದ್ದುಪಡಿ ಮಾಡಬಹುದು ಮತ್ತು ಅದರ ಬಗ್ಗೆ ತನ್ನ ಪರಾಗಳು ಯಾವುದಾದರೂ ಇದ್ದರೆ, ಅವುಗಳೊಂದಿಗೆ ಪಾಲಿಕೆಯ ಮುಂದೆ ಅದನ್ನು ಇಡತಕ್ಕದ್ದು.

(3) ಪಾಲಿಕೆಯು ತಾನು ಸೂಕ್ತವೆಂದು ಆಲೋಚಿಸುವಂಥ ಮಾರ್ಪಾಟುಗಳೊಂದಿಗೆ ಅಥವಾ ಮಾರ್ಪಾಟುಗಳಿಲ್ಲದೆ ಅಂಥ ಅನುಸೂಚಿಗೆ ಮಂಜೂರಾತಿ ನೀಡತಕ್ಕದ್ದು ಮತ್ತು ಮುಖ್ಯ ಆಯುಕ್ತರ ಮತ್ತು ಸ್ಥಾಯೀ ಸಮಿತಿಯ ಕೋರಿಕೆಯ ಮೇಲೆ ಅದನ್ನು ಕಾಲಕಾಲಕ್ಕೆ ತಿದ್ದುಪಡಿ ಮಾಡಬಹುದು:

ಪರಂತು, ತಿಂಗಳ ಗರಿಷ್ಠ ಸಂಬಳವು, ಹತ್ತುಸಾವಿರ ರೂಪಾಯಿಗಳಿಗೆ ಮೀರಿದರೆ ಯಾವುದೇ ಹೊಸ ಹುದ್ದೆಯನ್ನು ಸರ್ಕಾರದ ಮಂಜೂರಾತಿ ಇಲ್ಲದೆ ಸೃಜಿಸತಕ್ಕದ್ದಲ್ಲ.

103. ನೇಮಕಕ್ಕೆ, ಹುದ್ದೆಗಳ ಮೀಸಲಾತಿ.- ನೇಮಕಗಳನ್ನು ಮಾಡುವಾಗ, ನೇಮಕ ಪ್ರಾಧಿಕಾರವು, ರಾಜ್ಯದ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳ ನೇಮಕಾತಿಗೆ ಅನ್ವಯವಾಗಬಹುದಾದಂಥದೇ ರೀತಿಯಲ್ಲಿ ಮತ್ತು ಅದೇ ಪ್ರಮಾಣದಲ್ಲಿ ಅನುಸೂಚಿತ ಜಾತಿಗಳಿಗೆ, ಅನುಸೂಚಿತ ಪಂಗಡಗಳಿಗೆ ಮತ್ತು ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದಿರುವ ವರ್ಗಗಳ ನಾಗರಿಕರಿಗೆ, ಸಾಕಷ್ಟು ಸಂಖ್ಯೆಯ ಹುದ್ದೆಗಳನ್ನು ಮೀಸಲಿಡತಕ್ಕದ್ದು.

104. ಪಾಲಿಕೆಯ ಅಧಿಕಾರಿಗಳಿಗೆ ಮತ್ತು ಇತರ ನೌಕರರಿಗೆ ದಂಡನೆ.- (1) ಪಾಲಿಕೆಯ ಪ್ರತಿಯೊಬ್ಬ ಅಧಿಕಾರಿಯು ಅಥವಾ ಪಾಲಿಕೆಯ ಇತರ ನೌಕರನು, ಇಲಾಖೆಯ ಯಾವುದೇ ನಿಯಮಗಳ ಅಥವಾ ವಿನಿಮಯಗಳ ಅಥವಾ ಶಿಸ್ತಿನ ಯಾವುದೇ ಉಲಂ೦ಘನೆಗಾಗಿ ಅಥವಾ ಅಜಾಗರೂಕತೆ, ಅನರ್ಹತೆ, ಕರ್ತವ್ಯ ನಿರ್ಲಕ್ಷ್ಯ ಅಥವಾ ಇತರ ದುರ್ವರ್ತನೆಗಾಗಿ ನಿಯಮಿಸಬಹುದಾದಂಥ ಪ್ರಾಧಿಕಾರದಿಂದ, ತನ್ನ ವೇತನ ಬಡ್ತಿಗಳನ್ನು ಅಥವಾ ಮುಂಬಡ್ತಿಯನ್ನು ತಡೆಹಿಡಿಯುವುದಕ್ಕೆ ಅಥವಾ ವಾಗಂ೦ಡನೆ ವಿಧಿಸುವುದಕ್ಕೆ, ದರ್ಜೆಯಲ್ಲಿ ಇಳಿಸುವುದಕ್ಕೆ, ಕಡ್ಡಾಯ ನಿವೃತ್ತಿ ಮಾಡುವುದಕ್ಕೆ, ಸೇವೆಯಿಂದ ತೆಗೆದುಹಾಕುವುದಕ್ಕೆ ಅಥವಾ ವಜಾ ಮಾಡುವುದಕ್ಕೆ ಗುರಿಯಾಗತಕ್ಕದ್ದು:

ಪರಂತು, ಮೇಲೆ ಹೇಳಿದಂಥ ಯಾರೇ ಅಧಿಕಾರಿಯನ್ನು ಅಥವಾ ಇತರ ನೌಕರನನ್ನು, ಅವನನ್ನು ನೇಮಕ ಮಾಡಿದಂಥ ಪ್ರಾಧಿಕಾರಕ್ಕೆ ಅಧೀನವಾದ ಯಾವುದೇ ಪ್ರಾಧಿಕಾರವು, ಅವನನ್ನು ದರ್ಜೆಯಿಂದ ಕೆಳಗೆ ಇಳಿಸತಕ್ಕದ್ದಲ್ಲ, ಕಡ್ಡಾಯವಾಗಿ ನಿವೃತ್ತಿಗೊಳಿಸತಕ್ಕದ್ದಲ್ಲ, ಸೇವೆಯಿಂದ ತೆಗೆದುಹಾಕತಕ್ಕದ್ದಲ್ಲ ಅಥವಾ ವಜಾ ಮಾಡತಕ್ಕದ್ದಲ್ಲ:

ಮತ್ತೂ ಪರಂತು, ನಿಯಮಗಳ ಮೂಲಕ ನಿಯಮಿಸಬಹುದಾದಂಥ ವರ್ಗಗಳಿಗೆ ಅಥವಾ ಪ್ರವರ್ಗಗಳಿಗೆ ಸೇರಿದ ಪಾಲಿಕೆಯ ನೌಕರರು ಆ ನಿಯಮಗಳಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಪ್ರಾಧಿಕಾರದಿಂದ ಜುಲ್ಮಾನೆ ವಿಧಿಸುವುದಕ್ಕೂ ಸಹ ಗುರಿಯಾಗತಕ್ಕದ್ದು.

(2) ಅಂಥ ಯಾರೇ ಅಧಿಕಾರಿಯನ್ನು ಅಥವಾ ನೌಕರನನ್ನು ಅವನ ಬಗ್ಗೆ ತೆಗೆದುಕೊಳ್ಳಲು ಉದ್ದೇಶಿಸಿದ ಕ್ರಮದ ವಿರುದ್ಧ ಕಾರಣ ತೋರಿಸಲು ಅವನಿಗೆ ಸೂಕ್ತ ಅವಕಾಶ ಕೊಟ್ಟ ಹೊರತು (1)ನೇ ಉಪಪ್ರಕರಣದ ಮೇರೆಗೆ ದಂಡನೆಗೆ ಗುರಿಪಡಿಸತಕ್ಕದ್ದಲ್ಲ:

ಪರಂತು,-

(ಎ) ಅಧಿಕಾರಿಯ ಅಥವಾ ಇತರ ನೌಕರನ ಯಾವ ವರ್ತನೆಯು ಕ್ರಿಮಿನಲ್ ಆರೋಪದ ಮೇಲೆ ಅವನು ಅಪರಾಧಿಯೆಂದು ನಿರ್ಣೀತನಾಗುವುದಕ್ಕೆ ಕಾರಣವಾಗಿದೆಯೋ, ಆ ವರ್ತನೆಯ ಕಾರಣದ ಮೇಲೆ ಅವನನ್ನು ಸೇವೆಯಿಂದ ತೆಗೆದು ಹಾಕಿರುವಲ್ಲಿ ಅಥವಾ ವಜಾ ಮಾಡಿರುವಲ್ಲಿ; ಅಥವಾ

(ಬಿ) ಅಂಥ ಅಧಿಕಾರಿಯನ್ನು ಅಥವಾ ಇತರ ನೌಕರನನ್ನು ಸೇವೆಯಿಂದ ತೆಗೆದುಹಾಕಲು ಅಥವಾ ವಜಾ ಮಾಡಲು ಅಧಿಕಾರ ಹೊಂದಿರುವ ಪ್ರಾಧಿಕಾರಕ್ಕೆ, ಆ ಪ್ರಾಧಿಕಾರವು ಲಿಖಿತದಲ್ಲಿ ದಾಖಲು ಮಾಡಬೇಕಾದ ಕಾರಣಗಳಿಗಾಗಿ ಆ ವ್ಯಕ್ತಿಗೆ ಕಾರಣ ತೋರಿಸಲು ಅವಕಾಶ ಕೊಡುವುದು ಕಾರ್ಯ ಸಾಧ್ಯವಲ್ಲ ಎಂದು ಮನದಟ್ಟಾದಲ್ಲಿ

- ಈ ಉಪಪ್ರಕರಣವು ಅನ್ವಯವಾಗತಕ್ಕದ್ದಲ್ಲ.

(3) ಯಾರೇ ಅಧಿಕಾರಿಗೆ ಅಥವಾ ಇತರ ನೌಕರನಿಗೆ (2)ನೇ ಉಪಪ್ರಕರಣದ ಮೇರೆಗೆ ಕಾರಣ ತೋರಿಸಲು ಅವಕಾಶ ನೀಡುವುದು ಕಾರ್ಯಸಾಧ್ಯವೇ ಎಂಬ ಪ್ರಶ್ನೆಯು ಉದ್ಭವಿಸಿದಾಗ, ಅದರ ಮೇಲೆ, ಅಂಥ ಅಧಿಕಾರಿಯನ್ನು ಅಥವಾ ಇತರ ನೌಕರನನ್ನು ಸೇವೆಯಿಂದ ತೆಗೆದುಹಾಕಲು ಅಥವಾ ವಜಾ ಮಾಡಲು ಅಧಿಕಾರ ಹೊಂದಿರುವ ಪ್ರಾಧಿಕಾರಿಯ ತೀರ್ಮಾನವು ಅಂತಿಮವಾದುದಾಗಿರತಕ್ಕದ್ದು.

(4) ಈ ಪ್ರಕರಣದ ಮೇರೆಗೆ ಯಾವ ಅಧಿಕಾರಿಗೆ ಅಥವಾ ಇತರ ನೌಕರನಿಗೆ ದಂಡನೆಯನ್ನು ವಿಧಿಸಲಾಗಿದೆಯೋ ಆ ಯಾರೇ ಅಧಿಕಾರಿಯು ಅಥವಾ ಇತರ ನೌಕರನು ನಿಯಮಿಸಬಹುದಾದಂಥ ಅಧಿಕಾರಿಗೆ ಅಥವಾ ಪ್ರಾಧಿಕಾರಕ್ಕೆ ಅಪೀಲು ಮಾಡಿಕೊಳ್ಳಬಹುದು.

105. ನೌಕರರಿಗೆ ಅನ್ವಯವಾಗುವ ಸೇವಾ ಷರತ್ತುಗಳ ಬಗ್ಗೆ ನಿಯಮಗಳನ್ನು ರಚಿಸಲು ಸರ್ಕಾರದ ಅಧಿಕಾರ.- (1) ಸರ್ಕಾರವು ಈ ಕೆಳಕಂಡ ವಿಷಯಗಳಿಗೆ ನಿಯಮಗಳ ಮೂಲಕ ಉಪಬಂಧ ಕಲ್ಪಿಸಬಹುದು, ಎಂದರೆ:-

(ಎ) ಈ ಅಧ್ಯಾಯದ ಮೇರೆಗೆ ನೇಮಕಗೊಂಡ ಅಧಿಕಾರಿಗಳ ಮತ್ತು ಇತರ ನೌಕರರ ಹುದ್ದೆಯ ಅವಧಿ, ಸಂಬಳಗಳು ಮತ್ತು ಭತ್ಯೆಗಳು, ಭವಿಷ್ಯನಿಧಿ, ನಿವೃತ್ತಿ ವೇತನ, ಉಪದಾನ, ಗೈರುಹಾಜರಿ ರಜೆ ಮತ್ತು ಇತರ ಸೇವಾ ಷರತ್ತುಗಳು;

(ಬಿ) 104ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಯಾವುದೇ ದಂಡನೆಯನ್ನು ವಿಧಿಸುವಾಗ ಅನುಸರಿಸಬೇಕಾದ ಪ್ರಕ್ರಿಯೆ, ಅಂಥ ದಂಡನೆಯನ್ನು ವಿಧಿಸುವುದಕ್ಕೆ ಮೊದಲು ಇಲಾಖಾ ವಿಚಾರಣೆಗಳನ್ನು ಬಾಕಿ ಇಟ್ಟು ಅಮಾನತುಗೊಳಿಸುವುದು ಮತ್ತು ಅಂಥ ಅಮಾನತುಗಳನ್ನು ಆದೇಶಿಸಬಹುದಾದ ಪ್ರಾಧಿಕಾರ; ಆ ಪ್ರಕರಣದ (4)ನೇ ಉಪಪ್ರಕಣದ ಮೇರೆಗೆ ಯಾವ ಅಧಿಕಾರಿಗೆ ಅಥವಾ ಪ್ರಾಧಿಕಾರಕ್ಕೆ ಅಪೀಲು ಸಲ್ಲಿಸಬಹುದೋ ಆ ಅಧಿಕಾರಿ ಅಥವಾ ಪ್ರಾಧಿಕಾರ;

(ಸಿ) ಪಾಲಿಕೆಯ ಅಧೀನದಲ್ಲಿರುವ ಸೇವೆಗಳಿಗೆ ಮತ್ತು ಹುದ್ದೆಗಳಿಗೆ ನೇಮಕಗೊಂಡ ವ್ಯಕ್ತಿಗಳ ನೇಮಕ ಮತ್ತು ಸೇವಾಷರತ್ತುಗಳನ್ನು ವಿನಿಯಮಿಸುವ ಉದ್ದೇಶಕ್ಕಾಗಿ ಪ್ರಾಸಂಗಿಕವಾದ ಅಥವಾ ಅವಶ್ಯವಾದ ಯಾವುದೇ ಇತರ ವಿಷಯ ಮತ್ತು ನಿಯಮಗಳ ಮೂಲಕ ಉಪಬಂಧಿಸಬೇಕೆಂದು ಸರ್ಕಾರವು ಅಭಿಪ್ರಾಯಪಡುವಂಥ ಯಾವುದೇ ಇತರ ವಿಷಯ.

ಅಧ್ಯಾಯ VII

ಪಾಲಿಕೆಯ ಅಧಿಕಾರಗಳು ಮತ್ತು ಪ್ರಕಾರ್ಯಗಳು

106. ಪಾಲಿಕೆಯ ಸಾಮಾನ್ಯ ಅಧಿಕಾರಗಳು.- (1) ಈ ಅಧಿನಿಯಮ ಹಾಗೂ ಅದರಡಿ ರಚಿತವಾದ ನಿಯಮಗಳು, ವಿನಿಯಮಗಳು ಮತ್ತು ಉಪ-ವಿಧಿಗಳ ಉಪಬಂಧಗಳಿಗೆ ಒಳಪಟ್ಟು, ಬೆಂಗಳೂರಿನ ಪೌರ ಆಡಳಿತವು ಪಾಲಿಕೆಯಲ್ಲಿ ನಿಹಿತವಾಗಿರತಕ್ಕದ್ದು.

(2) (1)ನೇ ಉಪ-ಪ್ರಕರಣದ ಉಪಬಂಧಗಳ ಸಾಮಾನ್ಯತೆಗೆ ಬಾಧಕವಾಗದಂತೆ, ಈ ಅಧಿನಿಯಮವು ಮತ್ತು ಅದರ ಅಡಿಯಲ್ಲಿ ನಿಯಮಿಸಬಹುದಾದ ಅಂಥ ಅಧಿಕಾರಗಳನ್ನು ಚಲಾಯಿಸುವುದು, ಅಂಥ ಪ್ರಕಾರ್ಯಗಳನ್ನು ನಿರ್ವಹಿಸುವುದು ಮತ್ತು ಅಂಥ ಕರ್ತವ್ಯಗಳನ್ನು ನೆರವೇರಿಸುವುದು ಪಾಲಿಕೆಯ ಕರ್ತವ್ಯವಾಗಿರತಕ್ಕದ್ದು.

107. ಪಾಲಿಕೆಯ ಅಧಿಕಾರಗಳು ಮತ್ತು ಪ್ರಕಾರ್ಯಗಳು.- (1) ಈ ಅಧಿನಿಯಮದ ಉಪಬಂಧಗಳಿಗೆ ಮತ್ತು ಇತರ ಅಧಿನಿಯಮಗಳ ಉಪಬಂಧಗಳಿಗೆ, ನಿಯಮಗಳಿಗೆ ಹಾಗೂ ಈ ಸಂಬಂಧದಲ್ಲಿ ನಿಯಮಿಸಬಹುದಾದಂಥ ಇತರ ಉಪಬಂಧಗಳಿಗೆ ಒಳಪಟ್ಟು, ಪಾಲಿಕೆಯು, ಮೊದಲನೇ ಅನುಸೂಚಿಯಲ್ಲಿ ನಿರೂಪಿಸಿರುವ ವಿಷಯಗಳ ಸಂಬಂಧದಲ್ಲಿನ ನಗರಾಭಿವೃದ್ಧಿ ಮತ್ತು ಸಾಮಾಜಿಕ ನ್ಯಾಯದ ಸ್ಕೀಮುಗಳನ್ನು ಸಿದ್ಧಪಡಿಸುವ ಮತ್ತು ಅನುಷ್ಠಾನಗೊಳಿಸುವ ಅಧಿಕಾರವನ್ನು ಮತ್ತು ಹೊಣೆಗಾರಿಕೆಯನ್ನು ಹೊಂದಿರತಕ್ಕದ್ದು:

ಪರಂತು, ಮೊದಲ ಅನುಸೂಚಿಯಲ್ಲಿ ಮುಖ್ಯ ಪ್ರಕಾರ್ಯಗಳಾಗಿ ನಿರೂಪಿಸಿದ ವಿಷಯಗಳ ಸಂಬಂಧದಲ್ಲಿ ಪಾಲಿಕೆಯ ಪ್ರದೇಶದ ನಿವಾಸಿಗಳಿಗೆ ಅವಶ್ಯಕ ಸೇವೆಗಳನ್ನು ಸಲ್ಲಿಸುವುದು ಪಾಲಿಕೆಯ ಕರ್ತವ್ಯವಾಗಿರತಕ್ಕದ್ದು;

(2) ಪಾಲಿಕೆಗೆ ವಹಿಸಿದ ವಿಷಯಗಳ ಸಂಬಂಧದಲ್ಲಿ ಸ್ವಯಂ-ಆಡಳಿತದ ಸಂಸ್ಥೆಯಾಗಿ ಪ್ರಕಾರ್ಯ ನಿರ್ವಹಿಸಲು ಅದನ್ನು ಶಕ್ತಗೊಳಿಸಲು, ನಿಯಮಿಸಬಹುದಾದ ಅಂಥ ಅಧಿಕಾರಗಳನ್ನು, ಪ್ರಾಧಿಕಾರಗಳನ್ನು ಮತ್ತು ಹೊಣೆಗಾರಿಕೆಗಳನ್ನು ಹೊಂದಿರತಕ್ಕದ್ದು.

(3) ಸರ್ಕಾರವು ಮೊದಲನೇ ಅನುಸೂಚಿಯಲ್ಲಿ ಉಪಬಂಧಿಸಿದ ವಿಷಯಗಳ ಸಂಬಂಧದಲ್ಲಿನ ವಾರ್ಷಿಕ ಆಯವ್ಯಯ ಹಂಚಿಕೆಯನ್ನು ಪಾಲಿಕೆಗೆ ಸಂಪೂರ್ಣವಾಗಿ ಹಂಚಿಕೆ ಮಾಡತಕ್ಕದ್ದು.

(4) ಸರ್ಕಾರದ ಮಾರ್ಗಸೂಚಿಗಳು ಮತ್ತು ತಾಂತ್ರಿಕ ನಿರ್ದೇಶನಗಳಿಗೆ ಒಳಪಟ್ಟು ಹಾಗೂ ರಾಜ್ಯ ಮತ್ತು ರಾಷ್ಟ್ರೀಯ ಕಾರ್ಯನೀತಿಗಳಿಗನುಸಾರವಾಗಿ ಪಾಲಿಕೆಗೆ ಹಂಚಿಕೆ ಮಾಡಿದ ಸಂಸ್ಥೆಗಳನ್ನು ಮತ್ತು ಸ್ಕೀಮುಗಳನ್ನು ನಿರ್ವಹಿಸತಕ್ಕದ್ದು.

(5) ಯಾವುದೇ ಅಭಿವೃದ್ಧಿ ಸ್ಕೀಮ್, ಪರಿಯೋಜನೆ ಅಥವಾ ಯೋಜನೆಯು ಫಲಾನುಭವಿಗಳ ಆಯ್ಕೆಯನ್ನು ಒಳಗೊಂಡಿದ್ದಲ್ಲಿ, ಅರ್ಹತೆಯ ಮಾನದಂಡಗಳು ಮತ್ತು ಅಂಥ ಆಯ್ಕೆಗೆ ಆದ್ಯತೆಯನ್ನು, ಅಂಥ ಸ್ಕೀಮ್, ಪರಿಯೋಜನೆ ಅಥವಾ ಯೋಜನೆಯ ನಿಬಂಧನೆಗಳು ಮತ್ತು ಷರತ್ತುಗಳಿಗೆ ಒಳಪಟ್ಟು ಪಾಲಿಕೆಯು ನಿರ್ಧರಿಸತಕ್ಕದ್ದು ಹಾಗೂ ಅಂಥ ಮಾನದಂಡವನ್ನು ನಿಯಮಿಸಬಹುದಾದಂಥ ರೀತಿಯಲ್ಲಿ ಪ್ರಕಟಿಸತಕ್ಕದ್ದು ಮತ್ತು ಸಂಬಂಧಪಟ್ಟ ವಾರ್ಡ್ ಸಮಿತಿಗೆ ಸೂಚಿಸತಕ್ಕದ್ದು.

108. ಸರ್ಕಾರವು ವಹಿಸಿದ ಹೆಚ್ಚುವರಿ ಪ್ರಕಾರ್ಯಗಳು.- (1) ಸಂದರ್ಭಾನುಸಾರ, ಕೇಂದ್ರ ಸರ್ಕಾರದ ಅಥವಾ ರಾಜ್ಯ ಸರ್ಕಾರದ ಅನುಮೋದನೆ ಮೂಲಕ ಮತ್ತು ಅವುಗಳ ಅನುಮೋದನೆಯ ಮೇರೆಗೆ, ವೆಚ್ಚಗಳ ಖಾತರಿ ನೀಡಿಕೆಗೆ ಒಳಪಟ್ಟು, ಸಂದರ್ಭಾನುಸಾರ ಕೇಂದ್ರ ಸರ್ಕಾರದ ಅಥವಾ ರಾಜ್ಯ ಸರ್ಕಾರದ ಪ್ರಕಾರ್ಯಗಳ ಕ್ಷೇತ್ರಕ್ಕೆ ಸೇರಿದ ಯಾವುದೇ ಪ್ರಕಾರ್ಯವನ್ನು ಪಾಲಿಕೆಯು ಕೈಗೊಳ್ಳಬಹುದು ಹಾಗೂ ಅಂಥ ಪ್ರಕಾರ್ಯಗಳು, ಪ್ರಾಥಮಿಕ ಶಿಕ್ಷಣ, ಗುಣಪಡಿಸಬಹುದಾದ ಆರೋಗ್ಯ, ನಗರ ಸಾರಿಗೆ, ಇಂಧನ ಸರಬರಾಜು, ಅಗ್ನಿ ತಡೆ ಮತ್ತು ಅಗ್ನಿ ಸುರಕ್ಷತೆ ಹಾಗೂ ನಗರ ಬಡತನ ನಿರ್ಮೂಲನೆಯನ್ನು ಒಳಗೊಳ್ಳಬಹುದಾದಂಥ ಪ್ರಕಾರ್ಯಗಳನ್ನು ಕೈಗೊಳ್ಳಬಹುದು.

(2) ರಾಜ್ಯ ಸರ್ಕಾರದ ಆದೇಶಗಳಿಗೆ ಒಳಪಟ್ಟು ಪಾಲಿಕೆಯು, ಈ ಮುಂದಿನ ವಿಷಯಗಳಿಗೆ ಸಂಬಂಧಿಸಿದ ಅಂಥ ಅಥವಾ ಎಲ್ಲಾ ಪ್ರಕಾರ್ಯಗಳನ್ನು ಕೈಗೊಳ್ಳಬಹುದು.-

(ಎ) ವಾಣಿಜ್ಯ ಮೂಲಸೌಕರ್ಯಗಳ ಅಭಿವೃದ್ಧಿಯನ್ನು ಒಳಗೊಂಡು ನಗರಾಭಿವೃದ್ಧಿ;

(ಬಿ) ಸಮುದಾಯ ಸಂಬಂಧಗಳಿಗೆ ಸೇರಿದ ಸಾರ್ವಜನಿಕ ಕ್ಷೇಮಾಭಿವೃದ್ಧಿ; ಮತ್ತು

(ಸಿ) ಗೊತ್ತುಪಡಿಸಬಹುದಾದ ಅಂಥ ಇತರ ಪ್ರಕಾರ್ಯಗಳು.

109. ಪಾಲಿಕೆಯ ನಿಧಿಯ ಮೇಲಿನ ಮೊದಲ ಚಾರ್ಜ್.- (1) ಪಾಲಿಕೆಯ ಮುಖ್ಯ ಪ್ರಕಾರ್ಯಗಳು, ಪಾಲಿಕೆಯ ನಿಧಿಯ ಮೊದಲ ಚಾರ್ಜ್‌ನ್ನು ಒಳಗೊಳ್ಳತಕ್ಕದ್ದು.

(2) ಮುಖ್ಯ ಪ್ರಕಾರ್ಯಗಳ ತೃಪ್ತಿದಾಯಕ ನೆರವೇರಿಕೆ ಮತ್ತು ಪಾಲಿಕೆಯ ನಿಧಿಗಳ ಲಭ್ಯತೆಯನ್ನು ಒಳಗೊಂಡು, ಮೊದಲನೇ ಅನುಸೂಚಿಯಲ್ಲಿ ಉಲ್ಲೇಖಿಸಿದ ಯಾವುವೇ ಸಾಮಾನ್ಯ ಪ್ರಕಾರ್ಯಗಳ ಅಥವಾ ವಲಯವಾರು ಪ್ರಕಾರ್ಯಗಳನ್ನು ಕೈಗೊಳ್ಳುವುದು ಅಥವಾ ನೆರವೇರಿಸುವುದು ಅಥವಾ ನೆರವೇರಿಸಲು ಉತ್ತೇಜಿಸುವುದು.

ಅಧ್ಯಾಯ VIII

ಪಾಲಿಕೆಯ ಮತ್ತು ಸಮಿತಿಗಳ ಕಾರ್ಯವಿಧಾನ

110. ಪಾಲಿಕೆಯ ಮತ್ತು ಸ್ಥಾಯೀ ಸಮಿತಿಗಳ ವ್ಯವಹರಣೆಗಳು.- (1) ಸಾರ್ವತ್ರಿಕ ಚುನಾವಣೆಯ ತರುವಾಯ ಪಾಲಿಕೆಯ ಮೊದಲ ಸಭೆಯನ್ನು ಅಂಥ ಚುನಾವಣೆಯ ಫಲಿತಾಂಶಗಳು ಪ್ರಕಟವಾದ ತರುವಾಯ ಆದಷ್ಟು ಬೇಗನೆ ನಡೆಸತಕ್ಕದ್ದು ಮತ್ತು ಮುಖ್ಯ ಆಯುಕ್ತರು ಆ ಸಭೆಯನ್ನು ಕರೆಯತಕ್ಕದ್ದು. ಅದರ ಅಧ್ಯಕ್ಷತೆಯನ್ನು ಅಧಿಕಾರ ವ್ಯಾಪ್ತಿಯುಳ್ಳ ರೆವಿನ್ಯೂ ಪ್ರದೇಶದ ಪ್ರಾದೇಶಿಕ ಆಯುಕ್ತರು ವಹಿಸತಕ್ಕದ್ದು.

(2) ಪಾಲಿಕೆಯ ಮತ್ತು ಸ್ಥಾಯೀ ಸಮಿತಿಗಳ ಸಭೆಗಳನ್ನು ಪಾಲಿಕೆಯ ಕಚೇರಿಯಲ್ಲಿ ನಡೆಸತಕ್ಕದ್ದು ಮತ್ತು ಆ ಸಭೆಗಳ ಮುಂದೆ ಇರುವ ಕಾರ್ಯಕಲಾಪಗಳನ್ನು ನಿಯಮಿಸಲಾದ ಕಾರ್ಯವಿಧಾನಕ್ಕೆ ಅನುಸಾರವಾಗಿ ವಿಲೇ ಮಾಡತಕ್ಕದ್ದು, ಅಂಥ ಸಭೆಗಳ ನೋಟೀಸುಗಳನ್ನು ಕೌನ್ಸಿಲ್‌ನ ಕಾರ್ಯದರ್ಶಿಯವರು ನೀಡತಕ್ಕದ್ದು, ಪಾಲಿಕೆಯ ಸಭೆಗಳ ಸಂದರ್ಭದಲ್ಲಿ ಅವರು ಮೇಯರ್‌ರವರೊಂದಿಗೆ ಮತ್ತು ಮುಖ್ಯ ಆಯುಕ್ತರೊಂದಿಗೆ ಸಮಾಲೋಚಿಸಿ ಮತ್ತು ಸ್ಥಾಯೀ ಸಮಿತಿಯ ಸಭೆಗಳ ಸಂದರ್ಭದಲ್ಲಿ, ಅಂಥ ಸಮಿತಿಯ ಅಧ್ಯಕ್ಷರೊಂದಿಗೆ ಮತ್ತು ಮುಖ್ಯ ಆಯುಕ್ತರೊಂದಿಗೆ ಸಮಾಲೋಚಿಸಿ ನೋಟೀಸುಗಳನ್ನು ನೀಡತಕ್ಕದ್ದು. ಪ್ರತಿಯೊಂದು ನೋಟೀಸಿನಲ್ಲಿ ಸಭೆಯ ಕಾರ್ಯಸೂಚಿಯನ್ನು ನಿರ್ದಿಷ್ಟಪಡಿಸತಕ್ಕದ್ದು. ಮೇಯರ್‌ರವರು ಅಥವಾ ಅಧ್ಯಕ್ಷರು ತುರ್ತು ವಿಷಯಗಳು ಎಂದು ಪರಿಗಣಿಸುವ ವಿಷಯಗಳನ್ನು ಹೊರತುಪಡಿಸಿ ಸಾಮಾನ್ಯವಾಗಿ ಕಾರ್ಯಸೂಚಿಯಲ್ಲಿ ಒಳಗೊಂಡಿರದ ಯಾವುದೇ ವಿಷಯವನ್ನು ಸಭೆಯಲ್ಲಿ ಕೈಗೆತ್ತಿಕೊಳ್ಳತಕ್ಕದ್ದಲ್ಲ. ಅಂಥ ತುರ್ತು ವಿಷಯಗಳನ್ನು, ಅವುಗಳಿಗೆ ಸಂಬಂಧಿಸಿದಂತೆ ಪೂರಕ ಕಾರ್ಯ ಸೂಚಿಯನ್ನು ಸಭೆಗೆ ಮುಂಚೆ ಕೌನ್ಸಿಲರುಗಳಿಗೆ ಅಥವಾ ಸದಸ್ಯರಿಗೆ ಕೊಟ್ಟಿದ್ದರೆ ಪರಿಗಣಿಸಬಹುದು.

(3) ಪಾಲಿಕೆಯು ತನ್ನ ಅಧಿಕಾರಿಗಳ ಪೈಕಿ ಯಾರೇ ಅಧಿಕಾರಿಯನ್ನು, ಅಂಥ ಅಧಿಕಾರಿಯು ತನ್ನ ಕರ್ತವ್ಯ ಪಾಲನೆಯಲ್ಲಿ ವ್ಯವಹರಿಸಿದ ಯಾವುದೇ ವಿಷಯವನ್ನು ಪಾಲಿಕೆಯ ಯಾವ ಸಭೆಯಲ್ಲಿ ಚರ್ಚಿಸಲಾಗುವುದೋ ಆ ಸಭೆಗೆ ಹಾಜರಾಗುವಂತೆ ಅಗತ್ಯಪಡಿಸಬಹುದು, ಹಾಗೆ ಯಾರೇ ಅಧಿಕಾರಿಯನ್ನು ಅಂಥ ಯಾವುದೇ ಸಭೆಗೆ ಹಾಜರಾಗುವಂತೆ ಅಗತ್ಯಪಡಿಸಿದಾಗ ಅವನು ವ್ಯವಹರಿಸಿದ ಯಾವುದೇ ವಿಷಯಕ್ಕೆ ಸಂಬಂಧಪಟ್ಟಂತೆ ಪಾಲಿಕೆಯು ಅಗತ್ಯಪಡಿಸಬಹುದಾದಂಥ ವಾಸ್ತವಾಂಶಗಳ ಹೇಳಿಕೆಯನ್ನು ನೀಡುವಂತೆ ಅಥವಾ ಆ ವಿಷಯಕ್ಕೆ ಸಂಬಂಧಿಸಿದಂತೆ ತನ್ನ ಬಳಿ ಇರುವಂಥ ಮಾಹಿತಿಯನ್ನು ಒದಗಿಸುವಂತೆ ಆತನಿಗೆ ಕೇಳಬಹುದು.

111. ಪಾಲಿಕೆಯ ನಿರ್ಣಯಗಳನ್ನು ಕಾರ್ಯಗತಗೊಳಿಸುವುದಕ್ಕೆ ಉಳಿದ ಪಾಲಿಕೆ ಪ್ರಾಧಿಕಾರಗಳ ಮೇಲೆ ಹೊರಿಸಿದ ಹೊಣೆಗಾರಿಕೆ.- ಈ ಅಧಿನಿಯಮದ ಮೇರೆಗೆ ರಚಿಸಲಾದ ಸಮಿತಿಗಳು ಮತ್ತು ಮುಖ್ಯ ಆಯುಕ್ತರು ಪಾಲಿಕೆಯ ಪ್ರತಿಯೊಂದು ನಿರ್ಣಯವನ್ನು, ಸರ್ಕಾರವು ಅಂಥ ನಿರ್ಣಯವನ್ನು ಪೂರ್ಣವಾಗಿ ಅಥವಾ ಭಾಗಶಃ ರದ್ದುಗೊಳಿಸಿದ ಹೊರತು, ಕಾರ್ಯಗತಗೊಳಿಸಲು ಬದ್ಧರಾಗಿರತಕ್ಕದ್ದು:

ಪರಂತು, ಈ ಅಧಿನಿಯಮದ ಮೇರೆಗೆ ರಚಿಸಿದ ಪಾಲಿಕೆಯ ಅಥವಾ ಸಮಿತಿಯ ಯಾವುದೇ ನಿರ್ಣಯವು ಈ ಅಧಿನಿಯಮದ ಅಥವಾ ಯಾವುದೇ ಇತರ ಕಾನೂನಿನ ಉಪಬಂಧವನ್ನು ಅಥವಾ ಈ ಅಧಿನಿಯಮದ

ಮೇರೆಗೆ ಅಥವಾ ಇತರ ಯಾವುದೇ ಕಾನೂನಿನ ಮೇರೆಗೆ ರಚಿಸಿದ ಅಥವಾ ಹೊರಡಿಸಿದ ಯಾವುದೇ ನಿಯಮ, ಅಧಿಸೂಚನೆ, ವಿನಿಯಮ ಅಥವಾ ಉಪವಿಧಿಯನ್ನು ಅಥವಾ ಸರ್ಕಾರವು ಹೊರಡಿಸಿದ ಯಾವುದೇ ಆದೇಶವನ್ನು ಉಲಂಘಿಸುತ್ತದೆಂದು ಅಥವಾ ಪಾಲಿಕೆಯ ಹಿತಾಸಕ್ತಿಗಳ ಮೇಲೆ ಪ್ರತಿಕೂಲ ಪರಿಣಾಮ ಉಂಟುಮಾಡುತ್ತದೆಂದು ಮುಖ್ಯ ಆಯುಕ್ತರು ಅಭಿಪ್ರಾಯಪಟ್ಟರೆ, ಅವರು ಆ ನಿರ್ಣಯವನ್ನು ಅಂಗೀಕರಿಸಿದ ಹದಿನೈದು ದಿನಗಳ ಒಳಗಾಗಿ, ಆದೇಶಗಳಿಗಾಗಿ ಸರ್ಕಾರಕ್ಕೆ ಆ ವಿಷಯವನ್ನು ಕಳುಹಿಸತಕ್ಕದ್ದು ಮತ್ತು ಸಂದರ್ಭಾನುಸಾರ ಪಾಲಿಕೆಗೆ ಅಥವಾ ಸಮಿತಿಗೆ ತಾನು ಕೈಕೊಂಡ ಕ್ರಮದ ಬಗ್ಗೆ ಅದರ ಮುಂದಿನ ಸಭೆಯಲ್ಲಿ ತಿಳಿಸತಕ್ಕದ್ದು ಮತ್ತು ಹಾಗೆ ಕಳುಹಿಸಿದ ವಿಷಯದ ಬಗ್ಗೆ ಸರ್ಕಾರದ ಆದೇಶವನ್ನು ಸ್ವೀಕರಿಸುವವರೆಗೆ ಮುಖ್ಯ ಆಯುಕ್ತರು ಆ ನಿರ್ಣಯವನ್ನು ಕಾರ್ಯಗತಗೊಳಿಸಲು ಬದ್ಧರಾಗಿರತಕ್ಕದ್ದಲ್ಲ.

112. ಪಾಲಿಕೆಯು, ವ್ಯವಹರಣೆಗಳು, ಮುಂತಾದವುಗಳ ಉದ್ಭವಿತ ಭಾಗಗಳನ್ನು ಸ್ಥಾಯೀ ಸಮಿತಿಯಿಂದ ತರಿಸಿಕೊಳ್ಳಬಹುದು, ಇತ್ಯಾದಿ.- ಪಾಲಿಕೆಯು ಈ ಅಧಿನಿಯಮದ ಮೇರೆಗೆ ರಚಿತವಾದ ಯಾವುದೇ ಸಮಿತಿಯ ಯಾವುವೇ ವ್ಯವಹರಣೆಗಳ ಉದ್ಭವಿತ ಭಾಗವನ್ನು ಮತ್ತು ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ಯಾವ ವಿಷಯದ ಬಗ್ಗೆ ವ್ಯವಹರಿಸಲು ಅಂಥ ಯಾವುದೇ ಸಮಿತಿಗೆ ಅಧಿಕಾರ ನೀಡಲಾಗಿದೆಯೋ ಆ ಯಾವುದೇ ವಿಷಯಕ್ಕೆ ಸಂಬಂಧಪಡುವ ಅಥವಾ ಸಂಬಂಧಿಸಿದ ಯಾವುದೇ ವಿವರಪಟ್ಟಿಕೆ, ವಿವರಣಾಪತ್ರ, ಲೆಕ್ಕಪತ್ರ ಅಥವಾ ವರದಿಯನ್ನು ಯಾವುದೇ ಕಾಲದಲ್ಲಿ ತರಿಸಿಕೊಳ್ಳಬಹುದು ಮತ್ತು ಅಂಥ ಪ್ರತಿಯೊಂದು ಕೋರಿಕೆಯನ್ನು ಅನುಚಿತ ವಿಳಂಬವಿಲ್ಲದೆ ಸಮಿತಿಯು ಪಾಲಿಸತಕ್ಕದ್ದು.

113. ಪಾಲಿಕೆಯ ವ್ಯವಹರಣೆಗಳು, ಮುಂತಾದವುಗಳು, ಅದರ ಸದಸ್ಯರ ಅನರ್ಹತೆ, ಇತ್ಯಾದಿಗಳಿಂದಾಗಿ ನಿರರ್ಥಕಗೊಳ್ಳತಕ್ಕದ್ದಲ್ಲ.- (1) ಈ ಅಧಿನಿಯಮದ ಮೇರೆಗೆ ಮಾಡಲಾದ ಯಾವುದೇ ಕಾರ್ಯವನ್ನು ಅಥವಾ ಕೈಗೊಳ್ಳಲಾದ ಯಾವುದೇ ವ್ಯವಹರಣೆಯನ್ನು,-

(ಎ) ಪಾಲಿಕೆಯಲ್ಲಿ ಅಥವಾ ಯಾವುದೇ ಸ್ಥಾಯಿ ಸಮಿತಿಯಲ್ಲಿ ಯಾವುದೇ ಖಾಲೀ ಸ್ಥಾನ ಇರುವ ಅಥವಾ ಅದರ ರಚನೆಯಲ್ಲಿ ಯಾವುದೇ ನ್ಯೂನತೆ ಇರುವ; ಅಥವಾ

(ಬಿ) ಪ್ರಕರಣದ ಗುಣಾವಗುಣಗಳಿಗೆ ಬಾಧಕವಾಗದಂಥ ಕಾರ್ಯ ಅಥವಾ ವ್ಯವಹರಣೆಯಲ್ಲಿ ಯಾವುದೇ ದೋಷ ಅಥವಾ ಅಕ್ರಮತೆ ಇರುವ

- ಕಾರಣ ಮಾತ್ರದಿಂದಲೇ ಪ್ರಶ್ನಿಸತಕ್ಕದ್ದಲ್ಲ.

(2) ಕೌನ್ಸಿಲರ್ ಆಗಿ, ಮೇಯರ್ ಆಗಿ ಅಥವಾ ಉಪಮೇಯರ್ ಆಗಿ ಅಥವಾ ಈ ಅಧಿನಿಯಮದ ಮೇರೆಗೆ ನೇಮಕಗೊಂಡ ಯಾವುದೇ ಸ್ಥಾಯೀ ಸಮಿತಿಯ ಅಧ್ಯಕ್ಷರಾಗಿ ಅಥವಾ ಸದಸ್ಯರಾಗಿ ಕಾರ್ಯ ನಿರ್ವಹಿಸುತ್ತಿರುವ ಯಾರೇ ವ್ಯಕ್ತಿಯ ಅನರ್ಹತೆಯು ಅಥವಾ ಅವರ ಚುನಾವಣೆಯಲ್ಲಿನ ಅಥವಾ ನೇಮಕದಲ್ಲಿನ ನ್ಯೂನತೆಯು ಅಂಥ ವ್ಯಕ್ತಿಯು ಪಾಲ್ಗೊಂಡಿದ್ದ ಪಾಲಿಕೆಯ ಅಥವಾ ಯಾವುದೇ ಸ್ಥಾಯೀ ಸಮಿತಿಯ ಯಾವುದೇ ಕಾರ್ಯವನ್ನು ಅಥವಾ ವ್ಯವಹರಣೆಯನ್ನು ನಿರರ್ಥಕಗೊಳಿಸುವುದೆಂದು ಭಾವಿಸತಕ್ಕದ್ದಲ್ಲ ಆದರೆ, ಅಂಥ ಕಾರ್ಯದ ಅಥವಾ ವ್ಯವಹರಣೆಗಳ ಪಕ್ಷಕಾರರಾಗಿರುವ ವ್ಯಕ್ತಿಗಳಲ್ಲಿ ಬಹುತೇಕರು ಆ ಕಾರ್ಯ ಮಾಡಲು ಹಕ್ಕುಳ್ಳವರು ಆಗಿದ್ದಿರಬೇಕು.

114. ವ್ಯವಹರಣೆಗಳನ್ನು ದಾಖಲಿಸುವುದು.- ಪಾಲಿಕೆಯ ಮತ್ತು ಸ್ಥಾಯೀ ಸಮಿತಿಗಳ ಸಭೆಗಳ ವ್ಯವಹರಣೆಯನ್ನು ಕೌನ್ಸಿಲ್ ಕಾರ್ಯದರ್ಶಿಯವರು ದಾಖಲು ಮಾಡತಕ್ಕದ್ದು ಮತ್ತು ಸ್ಥಿರೀಕರಣಕ್ಕಾಗಿ ಮುಂದಿನ ಸಭೆಯ ಮುಂದೆ ಇಡತಕ್ಕದ್ದು.

115. ಸಭೆಗಳ ವ್ಯವಹರಣೆಗಳು ತದ್ವಿರುದ್ಧವಾಗಿರುವುದು ರುಜುವಾತಾಗುವವರೆಗೆ ಸರಿಯಾದವುಗಳು ಮತ್ತು ಸಿಂಧುವಾದವುಗಳು ಆಗಿರತಕ್ಕದ್ದು.- ತದ್ವಿರುದ್ಧವಾಗಿರುವುದು ರುಜುವಾತಾಗುವವರೆಗೆ, ಈ ಅಧಿನಿಯಮದ ಅಥವಾ ನಿಯಮಗಳಿಗೆ ಅನುಸಾರವಾಗಿ ಯಾವ ಸಭೆಯ ವ್ಯವಹರಣೆಗಳಿಗೆ ಸಂಬಂಧಿಸಿದಂತೆ ನಡವಳಿಯನ್ನು ಮಾಡಲಾಗಿದೆಯೋ ಮತ್ತು ಅದಕ್ಕೆ ಸಹಿ ಮಾಡಲಾಗಿದೆಯೋ ಪಾಲಿಕೆಯ ಅಥವಾ ಸ್ಥಾಯೀ ಸಮಿತಿಯ ಅಂಥ ಪ್ರತಿಯೊಂದು ಸಭೆಯನ್ನು ಕ್ರಮಬದ್ಧವಾಗಿ ಕರೆಯಲಾಗಿದೆ ಮತ್ತು ನಡೆಸಲಾಗಿದೆ ಮತ್ತು ಅದು ಎಲ್ಲ ನ್ಯೂನತೆಗಳಿಂದ ಹಾಗೂ ಅಕ್ರಮತೆಗಳಿಂದ ಮುಕ್ತವಾಗಿದೆ ಎಂದು ಭಾವಿಸತಕ್ಕದ್ದು ಮತ್ತು ಆ ಸಭೆಯ ಎಲ್ಲ ಸದಸ್ಯರು ಕ್ರಮಬದ್ಧವಾಗಿ ಅರ್ಹರಾಗಿದ್ದಾರೆಂದು ಭಾವಿಸತಕ್ಕದ್ದು ಮತ್ತು ಆ ವ್ಯವಹರಣೆಗಳು ಸ್ಥಾಯೀ ಸಮಿತಿಯ ವ್ಯವಹರಣೆಗಳಾಗಿದ್ದಲ್ಲಿ ಅಂಥ ಸ್ಥಾಯೀ ಸಮಿತಿಯು ಕ್ರಮಬದ್ಧವಾಗಿ ರಚಿತವಾಗಿದೆ ಮತ್ತು ನಡವಳಿಯಲ್ಲಿ ಉಲ್ಲೇಖಿಸಲಾದ ವಿಷಯಗಳ ಬಗ್ಗೆ ವ್ಯವಹರಿಸಲು ಅದು ಅಧಿಕಾರ ಹೊಂದಿತ್ತು ಎಂದು ಭಾವಿಸತಕ್ಕದ್ದು.

116. ಚರ್ಚೆಯಲ್ಲಿ ಹಾಜರಿರಲು ಮತ್ತು ಭಾಗವಹಿಸಲು ಮುಖ್ಯ ಆಯುಕ್ತರಿಗಿರುವ ಹಕ್ಕು, ಆದರೆ ನಿರ್ಣಯವನ್ನು ಮಂಡಿಸಲು ಅಥವಾ ಮತ ನೀಡಲು ಹಕ್ಕು ಇರತಕ್ಕದ್ದಲ್ಲ.- (1) ಮುಖ್ಯ ಆಯುಕ್ತರು ಪಾಲಿಕೆಯ ಅಥವಾ ಯಾವುದೇ ಸ್ಥಾಯೀ ಸಮಿತಿಯ ಸಭೆಗಳಿಗೆ ಹಾಜರಾಗಲು ಮತ್ತು ಚರ್ಚೆಯಲ್ಲಿ ಭಾಗವಹಿಸಲು ಹಕ್ಕನ್ನು ಹೊಂದಿರತಕ್ಕದ್ದು ಆದರೆ ಯಾವುದೇ ನಿರ್ಣಯವನ್ನು ಮಂಡಿಸಲು ಅಥವಾ ಮತ ನೀಡಲು ಹಕ್ಕನ್ನು ಹೊಂದಿರತಕ್ಕದ್ದಲ್ಲ.

(2) ಪಾಲಿಕೆಯ ಅಥವಾ ಸ್ಥಾಯಿ ಸಮಿತಿಯ ಯಾವುದೇ ಸಭೆಗೆ ಹಾಜರಾಗುವಂತೆ ಮೇಯರ್‌ರವರು ಅಗತ್ಯಪಡಿಸಿದರೆ ಅವರು ಹಾಗೆ ಮಾಡಬಹುದು.

117. ಕೌನ್ಸಿಲರುಗಳು ಅವರು ಆರ್ಥಿಕ ಹಿತಾಸಕ್ತಿ ಹೊಂದಿರುವಂಥ ಪ್ರಶ್ನೆಗಳ ಮೇಲಿನ ಚರ್ಚೆಯಲ್ಲಿ ಭಾಗವಹಿಸದಿರುವುದು ಮತ್ತು ಮತ ನೀಡದಿರುವುದು.- (1) ಯಾರೇ ಕೌನ್ಸಿಲರ್‌ನು, ಪಾಲಿಕೆಯ ಅಥವಾ ಸ್ಥಾಯೀ ಸಮಿತಿಯ ಸಭೆಯಲ್ಲಿ ಪರಿಶೀಲನೆಗಾಗಿ ಬರುವ ಯಾವುದೇ ಪ್ರಶ್ನೆಯು, ಯಾವ ಪ್ರಶ್ನೆಯಲ್ಲಿ ಸಾರ್ವಜನಿಕರಿಗೆ ಸಾಮಾನ್ಯವಾಗಿ ಅದು ಅನ್ವಯವಾಗುವುದರ ಜೊತೆಗೆ ಸ್ವತಃ ತಾನು ಅಥವಾ ತನ್ನ ಪಾಲುದಾರನು ಯಾವುದೇ ಪ್ರತ್ಯಕ್ಷ ಅಥವಾ ಪರೋಕ್ಷ ಆರ್ಥಿಕ ಹಿತಾಸಕ್ತಿಯನ್ನು ಹೊಂದಿರುವನೋ ಅಂಥ ಪ್ರಶ್ನೆ ಆಗಿದ್ದರೆ ಆ ಪ್ರಶ್ನೆಯ ಮೇಲೆ ಮತ ನೀಡತಕ್ಕದ್ದಲ್ಲ ಅಥವಾ ಅದರ ಚರ್ಚೆಯಲ್ಲಿ ಭಾಗವಹಿಸತಕ್ಕದ್ದಲ್ಲ.

(2) ಮೇಯರ್ ಅಥವಾ ಅಧ್ಯಕ್ಷರು ಯಾರೇ ಕೌನ್ಸಿಲರ್‌ನು ಅಂಥ ಹಿತಾಸಕ್ತಿಯನ್ನು ಹೊಂದಿರುವನೆಂದು ನಂಬಲಾದ ಯಾವುದೇ ವಿಷಯದ ಮೇಲೆ ಮತ ನೀಡದಂತೆ ಅಥವಾ ಅದರ ಚರ್ಚೆಯಲ್ಲಿ ಭಾಗವಹಿಸದಂತೆ ಆ ಕೌನ್ಸಿಲರನನ್ನು ಪ್ರತಿಬಂಧಿಸಬಹುದು ಅಥವಾ ಅವರು ಆ ಚರ್ಚೆಯಾಗುವಾಗ ಗೈರುಹಾಜರಾಗುವಂತೆ ಆ ಕೌನ್ಸಿಲರ್‌ನನ್ನು ಅಗತ್ಯಪಡಿಸಬಹುದು.

(3) ಅಂಥ ಕೌನ್ಸಿಲರ್‌ನು ಮೇಯರ್‌ರವರ ಅಥವಾ ಅಧ್ಯಕ್ಷರ ತೀರ್ಮಾನವನ್ನು ಪ್ರಶ್ನಿಸಬಹುದು. ಆಮೇಲೆ ಮೇಯರ್ ಅಥವಾ ಅಧ್ಯಕ್ಷರು ಪ್ರಶ್ನೆಯನ್ನು ಮತಕ್ಕೆ ಹಾಕತಕ್ಕದ್ದು ಮತ್ತು ಸಭೆಯ ತೀರ್ಮಾನವು ಅಂತಿಮವಾದುದು ಆಗಿರತಕ್ಕದ್ದು.

(4) ಚರ್ಚೆ ನಡೆಯುತ್ತಿರುವ ಯಾವುದೇ ವಿಷಯದಲ್ಲಿ ಮೇಯರ್ ಅಥವಾ ಅಧ್ಯಕ್ಷರು ಅಂಥ ಹಿತಾಸಕ್ತಿಯನ್ನು ಹೊಂದಿರುವುದಾಗಿ ಸಭೆಯಲ್ಲಿ ಹಾಜರಿರುವ ಯಾರೇ ಕೌನ್ಸಿಲರ್‌ನು ಆರೋಪಿಸಿದರೆ ಅಂಥ ಕೌನ್ಸಿಲರ್‌ನು ತಂದ ನಿಲುವಳಿ ಸೂಚನೆಯು ಅಂಗೀಕೃತವಾದರೆ ಆ ಚರ್ಚೆಯು ಆಗುವಾಗ ಆ ಸಭೆಯಿಂದ ಸ್ವತಃ ಗೈರುಹಾಜರಾಗುವಂತೆ ಮೇಯರ್ ಅಥವಾ ಅಧ್ಯಕ್ಷರನ್ನು ಅಗತ್ಯಪಡಿಸಬಹುದು.

(5) (3)ನೇ ಉಪ-ಪ್ರಕರಣದಲ್ಲಿ ತಿಳಿಸಿದ ಪ್ರಶ್ನೆಯ ಮೇಲೆ ಸಂಬಂಧಿಸಿದ ಕೌನ್ಸಿಲರನು ಮತನೀಡಲು ಹಕ್ಕುಳ್ಳವನಾಗಿರತಕ್ಕದ್ದಲ್ಲ ಮತ್ತು (4)ನೇ ಉಪ ಪ್ರಕರಣದಲ್ಲಿ ತಿಳಿಸಿದ ನಿಲುವಳಿ ಸೂಚನೆಯ ಮೇಲೆ ಸಂಬಂಧಿಸಿದ ಮೇಯರ್ ಅಥವಾ ಅಧ್ಯಕ್ಷರು ಮತ ನೀಡಲು ಹಕ್ಕುಳ್ಳವರಾಗಿರತಕ್ಕದ್ದಲ್ಲ.

118. ಸರ್ಕಾರಕ್ಕೆ ಆಡಳಿತ ವರದಿಯನ್ನು ಸಲ್ಲಿಸುವುದು.- (1) ಪ್ರತಿವರ್ಷದ ಏಪ್ರಿಲ್ ತಿಂಗಳ ಮೊದಲ ದಿನದ ನಂತರ ಆದಷ್ಟು ಬೇಗನೆ ಮತ್ತು ಸರ್ಕಾರವು ಗೊತ್ತುಪಡಿಸಬಹುದಾದಂಥ ದಿನಾಂಕಕ್ಕೆ ತಡವಾಗದಂತೆ ಪಾಲಿಕೆಯು, ಸರ್ಕಾರವು ನಿರ್ದೇಶಿಸಬಹುದಾದಂಥ ನಮೂನೆಯಲ್ಲಿ ಹಿಂದಿನ ವರ್ಷದ ಸವಿವರವಾದ ಆಡಳಿತ ವರದಿಯನ್ನು ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

(2) ಅಂಥ ವರದಿಯನ್ನು ಮುಖ್ಯ ಆಯುಕ್ತರು ಸಿದ್ಧಪಡಿಸತಕ್ಕದ್ದು ಮತ್ತು ಆ ವರದಿಯನ್ನು ಪಾಲಿಕೆಯು ಪರಿಶೀಲಿಸಿ ಅದರ ಮೇಲೆ ತನ್ನ ನಿರ್ಣಯಗಳು ಯಾವುದಾದರೂ ಇದ್ದರೆ ಅವುಗಳೊಂದಿಗೆ ಸರ್ಕಾರಕ್ಕೆ ಕಳುಹಿಸಿ ಕೊಡತಕ್ಕದ್ದು.

(3) ಆಡಳಿತ ವರದಿಯ ಪ್ರತಿಗಳನ್ನು ಪಾಲಿಕೆಯ ಕಛೇರಿಯಲ್ಲಿ ಮಾರಾಟಕ್ಕೆ ಇಡತಕ್ಕದ್ದು.

ಅಧ್ಯಾಯ IX

ಅತ್ಯಾವಶ್ಯಕ ಸೇವೆಗಳು

119. ಅತ್ಯಾವಶ್ಯಕ ಸೇವೆಗಳು ಇತ್ಯಾದಿಗಳನ್ನು ಘೋಷಿಸುವುದು.- (1) ಪಾಲಿಕೆಯು ತನ್ನ ಸೇವೆಗಳಲ್ಲಿನ ಯಾವ ವರ್ಗಗಳನ್ನು ಅತ್ಯಾವಶ್ಯಕ ಸೇವೆಗಳೆಂದು ಪರಿಗಣಿಸುವುದು ಅವಶ್ಯಕವೆಂದು ಭಾವಿಸುವುದೋ ಅಂಥ ಸೇವಾ ವರ್ಗಗಳನ್ನು ಕಾಲಕಾಲಕ್ಕೆ ಘೋಷಿಸಬಹುದು.

(2) ಅತ್ಯಾವಶ್ಯಕ ಸೇವೆಯ ಯಾರೇ ಸದಸ್ಯನು,-

(ಎ) ತನ್ನ ಕರ್ತವ್ಯಗಳನ್ನು ನಿರ್ವಹಿಸಲು ತನ್ನನ್ನು ಅಸಮರ್ಥನನ್ನಾಗಿಸಿರುವ ಕಾಯಿಲೆಯ ಅಥವಾ ಅಪಘಾತಗಳ ಸಂದರ್ಭದಲ್ಲಿ ಅಥವಾ ಮುಖ್ಯ ಆಯುಕ್ತರು ಅಥವಾ ಅಂಥ ಅಧಿಕಾರಿಯು ಸಾಕಷ್ಟೆಂದು ಒಪ್ಪಿಕೊಂಡಿರುವ ಇತರ ಕಾರಣದ ಹೊರತು, ಆಯುಕ್ತರಿಗೆ ಕನಿಷ್ಠ ಎರಡು ತಿಂಗಳ ಲಿಖಿತ ನೋಟೀಸನ್ನು ಕೊಡದೆಯೆ ಮುಖ್ಯ ಆಯುಕ್ತರ ಅಥವಾ ಈ ಬಗ್ಗೆ ಅವರು ಅಧಿಕೃತಗೊಳಿಸಿದ ಯಾರೇ ಅಧಿಕಾರಿಯ ಲಿಖಿತ ಅನುಮತಿ ಇಲ್ಲದೆ ತನ್ನ ಹುದ್ದೆಗೆ ರಾಜೀನಾಮೆ ನೀಡತಕ್ಕದ್ದಲ್ಲ, ತನ್ನ ಕರ್ತವ್ಯಗಳಿಂದ ಹಿಂದೆ ಸರಿಯತಕ್ಕದ್ದಲ್ಲ ಅಥವಾ ಗೈರುಹಾಜರಾಗತಕ್ಕದ್ದಲ್ಲ; ಅಥವಾ

(ಬಿ) ತನ್ನ ಕರ್ತವ್ಯಗಳನ್ನು ನೆರವೇರಿಸಲು ನಿರ್ಲಕ್ಷಿಸತಕ್ಕದ್ದಲ್ಲ ಅಥವಾ ನಿರಾಕರಿಸತಕ್ಕದ್ದಲ್ಲ ಅಥವಾ ಅವುಗಳನ್ನು ನೆರವೇರಿಸುವ ರೀತಿಯು ಅಸಮರ್ಥವಾದುದೆಂದು ಮುಖ್ಯ ಆಯುಕ್ತರು ಅಥವಾ ಅಂತಹ ಅಧಿಕಾರಿಯು ಅಭಿಪ್ರಾಯಪಟ್ಟರೆ ಆ ರೀತಿಯಲ್ಲಿ ಉದ್ದೇಶಪೂರ್ವಕವಾಗಿ ಅವುಗಳನ್ನು ನೆರವೇರಿಸತಕ್ಕದ್ದಲ್ಲ.

120. ತುರ್ತುಪರಿಸ್ಥಿತಿಯನ್ನು ಘೋಷಿಸಲು ಸರ್ಕಾರದ ಅಧಿಕಾರ.- ಅತ್ಯಾವಶ್ಯಕ ಸೇವೆಗಳಲ್ಲಿ ಯಾವುದೇ ಆಗಲಿ ನೆರವೇರುವುದು, ನಿಂತುಹೋಗುವುದು ಅಥವಾ ಸಮಾಪ್ತಿಯಾಗುವುದು ಪಾಲಿಕೆಯಲ್ಲಿರುವ ಸಮುದಾಯದ ಸುರಕ್ಷತೆಗೆ ಅಥವಾ ಆರೋಗ್ಯಕ್ಕೆ ಅಥವಾ ಸಮುದಾಯದ ಬದುಕಿಗೆ ಅತ್ಯಾವಶ್ಯವಾದ ಸೇವೆಗಳ ನಿರ್ವಹಣೆಗೆ ಪ್ರತಿಕೂಲವಾಗುತ್ತದೆಂದು ಸರ್ಕಾರವು ಭಾವಿಸಿದರೆ, ಅದು ನಗರದಲ್ಲಿ ತುರ್ತುಪರಿಸ್ಥಿತಿ ಅಸ್ತಿತ್ವದಲ್ಲಿದೆ ಎಂದು ಅಧಿಸೂಚನೆಯ ಮೂಲಕ ಘೋಷಿಸಬಹುದು ಮತ್ತು ಆ ಕಾರಣದಿಂದಾಗಿ ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿದ ಅತ್ಯವಶ್ಯಕ ಸೇವೆಗಳ ಯಾರೇ ಸದಸ್ಯನು ಮತ್ತು ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಅವಧಿಗಾಗಿ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಅಥವಾ ಯಾವುದೇ ಒಪಂ್ಪದದಲ್ಲಿ ಏನೇ ಇದ್ದರೂ,-

(ಎ) ತನ್ನ ಕರ್ತವ್ಯಗಳನ್ನು ನಿರ್ವಹಿಸಲು ತನ್ನನ್ನು ಅನರ್ಹನನ್ನಾಗಿಸಿದ ಕಾಯಿಲೆಯ ಅಥವಾ ಅಪಘಾತದ ಸಂದರ್ಭದಲ್ಲಿ ಹೊರತು, ತನ್ನ ಕರ್ತವ್ಯಗಳಿಂದ ಹಿಂದೆ ಸರಿಯತಕ್ಕದ್ದಲ್ಲವೆಂದು ಅಥವಾ ಸ್ವತಃ ಗೈರುಹಾಜರಾಗತಕ್ಕದ್ದಲ್ಲವೆಂದು; ಅಥವಾ

(ಬಿ) ತನ್ನ ಕರ್ತವ್ಯಗಳನ್ನು ನೆರವೇರಿಸಲು ನಿರ್ಲಕ್ಷಿಸತಕ್ಕದ್ದಲ್ಲವೆಂದು ಅಥವಾ ನಿರಾಕರಿಸತಕ್ಕದ್ದಲ್ಲವೆಂದು ಅಥವಾ ಅವುಗಳನ್ನು ನೆರವೇರಿಸುವ ರೀತಿಯು ಅಸಮರ್ಥವಾದುದೆಂದು ಈ ಬಗ್ಗೆ ಸರ್ಕಾರವು ನಿರ್ದಿಷ್ಟಪಡಿಸಬಹುದಾದಂಥ ಅಧಿಕಾರಿಯು ಅಭಿಪ್ರಾಯಪಟ್ಟರೆ ಅವುಗಳನ್ನು ಉದ್ದೇಶಪೂರ್ವಕವಾಗಿ ಆ ರೀತಿಯಲ್ಲಿ ನೆರವೇರಿಸತಕ್ಕದ್ದಲ್ಲವೆಂದು

- ಸಹ ಘೋಷಿಸಬಹುದು.

ಅಧ್ಯಾಯ - X

ಸರ್ಕಾರದ ಅಧಿಕಾರ

121. ದಾಖಲೆಗಳನ್ನು ತರಿಸಿಕೊಳ್ಳಲು ಮತ್ತು ಪರಿಶೀಲನೆ ಮಾಡಿಸಲು ಸರ್ಕಾರದ ಅಧಿಕಾರ.- (1) **ಸರ್ಕಾರವು ಯಾವುದೇ ಕಾಲದಲ್ಲಿ**,-

(ಎ) ಯಾವುದೇ ದಾಖಲೆ, ವ್ಯವಹರಣೆ, ಪತ್ರವ್ಯವಹಾರ, ನಕ್ಷೆ ಅಥವಾ ಇತರ ದಸ್ತಾವೇಜನ್ನು ಹಾಜರುಪಡಿಸುವಂತೆ;

(ಬಿ) ಪಾಲಿಕೆಯ ಅಥವಾ ಪಾಲಿಕೆಯ ಯಾವುದೇ ಪ್ರಾಧಿಕಾರಗಳ ವ್ಯವಹರಣೆಗಳು, ಕರ್ತವ್ಯಗಳು ಅಥವಾ ಕಾಮಗಾರಿಗಳಿಗೆ ಸಂಬಂಧಪಟ್ಟ ಯಾವುದೇ ವಿವರಪಟ್ಟಿಕೆ, ನಕ್ಷೆ, ಅಂದಾಜು ಪತ್ರ, ವಿವರಣಾಪತ್ರ, ಲೆಕ್ಕಪತ್ರ ಅಥವಾ ಅಂಕಿಅಂಶಗಳನ್ನು ಒದಗಿಸುವಂತೆ;

(ಸಿ) ಯಾವುದೇ ವರದಿಯನ್ನು ಒದಗಿಸುವಂತೆ ಅಥವಾ ಪಡೆದು ಒದಗಿಸುವಂತೆ

- ಪಾಲಿಕೆಯನ್ನು ಅಥವಾ ಮುಖ್ಯ ಆಯುಕ್ತರನ್ನು ಅಗತ್ಯಪಡಿಸಬಹುದು.

(2) ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ, ಈ ಬಗ್ಗೆ ಸರ್ಕಾರದಿಂದ ಅಧಿಕೃತಗೊಂಡ ಸರ್ಕಾರದ ಯಾರೇ ಅಧಿಕಾರಿಯು,-

(ಎ) ಯಾವುದೇ ಪಾಲಿಕೆಯ ಅಥವಾ ಅದರ ನಿಯಂತ್ರಣದಲ್ಲಿರುವ ಅಥವಾ ವ್ಯವಸ್ಥಾಪನೆಯಲ್ಲಿರುವ ಯಾವುದೇ ಸಂಸ್ಥೆಯ ಅಧಿಭೋಗದಲ್ಲಿರುವ ಯಾವುದೇ ಸ್ಥಿರಸ್ವತ್ತನ್ನು ಅಥವಾ ಅದರ ಅಧೀನದಲ್ಲಿ ಅಥವಾ ನಿರ್ದೇಶನದಲ್ಲಿ ಪ್ರಗತಿಯಲ್ಲಿರುವ ಯಾವುದೇ ಕಾಮಗಾರಿಯನ್ನು, ಪ್ರವೇಶಿಸಲು ಮತ್ತು ಪರಿಶೀಲಿಸಲು ಅಥವಾ ಪ್ರವೇಶಿಸುವಂತೆ ಮತ್ತು ಪರಿಶೀಲಿಸುವಂತೆ ಮಾಡಲು;

(ಬಿ) ಯಾವುದೇ ಪಾಲಿಕೆಯ ಅಥವಾ ಯಾವುದೇ ಸಮಿತಿಯ ವ್ಯವಹರಣೆಯಿಂದ ಅಥವಾ ಪಾಲಿಕೆಯ ಸ್ವಾಧೀನದಲ್ಲಿರುವ ಅಥವಾ ನಿಯಂತ್ರಣದಲ್ಲಿರುವ ಯಾವುದೇ ಪುಸ್ತಕದಿಂದ ಅಥವಾ ದಸ್ತಾವೇಜಿನಿಂದ ಯಾವುದೇ ಉದ್ಧೃತ ಭಾಗವನ್ನು ತರಿಸಿಕೊಳ್ಳಲು;

(ಸಿ) ಒಂದು ಪಾಲಿಕೆಯು ಮಾಡಲಿರುವ ಅಥವಾ ಮಾಡುತ್ತಿರುವ ಯಾವುದೇ ಕಾರ್ಯದ ಸಂಬಂಧದಲ್ಲಿ ಯಾವುದೇ ಆಕ್ಷೇಪಣೆ ಇದೆಯೆಂದು ತನಗೆ ಕಂಡುಬಂದರೆ ಅಂಥ ಆಕ್ಷೇಪಣೆಯನ್ನು ಅಥವಾ ಆತ ಒದಗಿಸಲು ಸಾಧ್ಯವಿರುವ ಹಾಗೂ ಪಾಲಿಕೆಯು ಕೆಲವೊಂದು ಕೆಲಸವನ್ನು ಮಾಡುವುದನ್ನು ಅವಶ್ಯಗೊಳಿಸುತ್ತದೆ ಎಂದು ಆತನಿಗೆ ಕಂಡುಬರುವ ಯಾವುದೇ ಮಾಹಿತಿಯನ್ನು ಪರಿಗಣನೆಗೆ ತೆಗೆದುಕೊಳ್ಳಬೇಕೆಂದು ಮತ್ತು ಯುಕ್ತ ಕಾಲದೊಳಗೆ ಅಂಥ ಕಾರ್ಯವನ್ನು ಮಾಡುವುದರಿಂದ ವಿಮುಖವಾಗದೆ ಇರಲು ಮತ್ತು ಅಂಥ ಕಾರ್ಯವನ್ನು ಮಾಡದಿರಲು ಅದರ ಕಾರಣಗಳನ್ನು ತಿಳಿಸಿ ತನಗೆ ಲಿಖಿತ ಉತ್ತರ ನೀಡುವಂತೆ ಪಾಲಿಕೆಯನ್ನು ಅಗತ್ಯಪಡಿಸಲು,

- ಅಧಿಕಾರ ಹೊಂದಿರತಕ್ಕದ್ದು.

(3) (2)ನೇ ಉಪ-ಪ್ರಕರಣದ ಮೇರೆಗೆ ಅಧಿಕೃತನಾದ ಅಧಿಕಾರಿಗೆ ಎಲ್ಲಾ ಯುಕ್ತಕಾಲದಲ್ಲಿ ಪಾಲಿಕೆಯ ಆವರಣಗಳಿಗೆ ಮತ್ತು ಸ್ವತ್ತುಗಳಿಗೆ ಪ್ರವೇಶಾವಕಾಶ ನೀಡಲು ಮತ್ತು ತಮ್ಮ ಕರ್ತವ್ಯಗಳನ್ನು ನಿರ್ವಹಿಸಲು ಅವರಿಗೆ ಸಾಧ್ಯವಾಗಿಸಲು ಪರಿಶೀಲಿಸುವುದು ಅವಶ್ಯವೆಂದು ಅವರು ಪರಿಗಣಿಸಬಹುದಾದಂಥ ಎಲ್ಲಾ

ದಾಖಲೆಗಳು, ಲೆಕ್ಕಪತ್ರಗಳು ಮತ್ತು ಇತರ ದಸ್ತಾವೇಜುಗಳನ್ನು ಅವರಿಗೆ ಒದಗಿಸಲು ಪಾಲಿಕೆಯು ಮತ್ತು ಪ್ರತಿಯೊಂದು ಪಾಲಿಕೆ ಪ್ರಾಧಿಕಾರವು ಮತ್ತು ಪಾಲಿಕೆಯ ಎಲ್ಲ ಅಧಿಕಾರಿಗಳು ಮತ್ತು ಪಾಲಿಕೆಯ ಇತರ ನೌಕರರು ಬದ್ಧರಾಗಿರತಕ್ಕದ್ದು.

(4) (2)ನೇ ಉಪ-ಪ್ರಕರಣದ ಮೇರೆಗೆ ಅಧಿಕೃತಗೊಂಡ ಅಧಿಕಾರಿಯು, ಅಂಥ ಪರಿಶೀಲನೆಯ ತರುವಾಯ, ಸರ್ಕಾರಕ್ಕೆ ಒಂದು ವರದಿಯನ್ನು ಸಲ್ಲಿಸಬಹುದು.

122. ಪಾಲಿಕೆಯಲ್ಲಿ ವಿಲೇಯಾಗದೆ ಬಾಕಿ ಇರುವ ವಿಷಯಗಳಿಗೆ ಸಂಬಂಧಿಸಿದಂತೆ ಕ್ರಮಕ್ಕೆಗೊಳ್ಳಲು ಸರ್ಕಾರದ ಅಧಿಕಾರ.- (1) ಸರ್ಕಾರವು, ಪಾಲಿಕೆಯಲ್ಲಿ ಬಾಕಿ ಇರುವ ವ್ಯವಹಾರಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಯಾವುದೇ ಕಾಲದಲ್ಲಿ ಮುಖ್ಯ ಆಯುಕ್ತರಿಂದ ತರಿಸಿಕೊಳ್ಳಬಹುದು ಮತ್ತು ಅಂಥ ದಾಖಲೆಗಳನ್ನು ಸ್ವೀಕರಿಸಿದ ನಂತರ, ಅದು, ಅವುಗಳನ್ನು ಪರಿಶೀಲಿಸಬಹುದು.

(2) ಅಂತಹ ಪರೀಶೀಲನೆಯ ನಂತರ ಮತ್ತು ಅದು ಅವಶ್ಯವೆಂದು ಭಾವಿಸುವಂಥ ವಿಚಾರಣೆ ಮಾಡಿದ ತರುವಾಯ, ಯಾವುದೇ ವಿಷಯವನ್ನು ಪಾಲಿಕೆಯ ಮುಂದೆ ತಂದ ದಿನಾಂಕದಿಂದ ಮೂರು ತಿಂಗಳಿಗೂ ಹೆಚ್ಚು ಕಾಲ ಪಾಲಿಕೆಯಲ್ಲಿ ಅದು ಬಾಕಿ ಇದೆಯೋ ಅಥವಾ ಸ್ಥಾಯೀ ಸಮಿತಿಯ ಮುಂದೆ ಅದನ್ನು ಇಟ್ಟ ತರುವಾಯ ಅರವತ್ತು ದಿನಗಳಿಗೂ ಹೆಚ್ಚುಕಾಲ ಅದರ ಬಳಿ ಬಾಕಿ ಇದೆಯೋ ಆ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ಪಾಲಿಕೆಯ ಆಡಳಿತದ ಹಿತದೃಷ್ಟಿಯಿಂದ ಜರೂರಾಗಿ ತೀರ್ಮಾನ ತೆಗೆದುಕೊಳ್ಳುವುದು ಅವಶ್ಯವಾಗಿದೆ ಎಂದು ಕಂಡುಬಂದರೆ, ಆಗ, ಸರ್ಕಾರವು ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ,-

(i) ಹದಿನೈದು ದಿನಗಳಿಗೆ ಕಡಿಮೆ ಇಲ್ಲದ ನೋಟೀಸನ್ನು ಪಾಲಿಕೆಗೆ ಕೊಟ್ಟ ತರುವಾಯ ಅಂಥ ವಿಷಯಕ್ಕೆ ಸಂಬಂಧಿಸಿದಂತೆ ತಾನು ಅವಶ್ಯವೆಂದು ಪರಿಗಣಿಸುವಂಥ ಆದೇಶಗಳನ್ನು ಹೊರಡಿಸಬಹುದು; ಅಥವಾ

(ii) ಸ್ಥಾಯೀ ಸಮಿತಿಯ ಮುಂದೆ ಬಾಕಿ ಇರುವ ವಿಷಯವನ್ನು ಪಾಲಿಕೆಗೆ ಒಪ್ಪಿಸಿರುವುದಾಗಿ ಭಾವಿಸತಕ್ಕದ್ದು ಮತ್ತು ಆ ಆಧಾರದ ಮೇಲೆ ಅದನ್ನು ವಿಲೇಮಾಡತಕ್ಕದೆಂದು ನಿರ್ದೇಶಿಸಬಹುದು:

ಪರಂತು, ಪಾಲಿಕೆಯಲ್ಲಿ ಬಾಕಿ ಇರುವ ಸಾರ್ವಜನಿಕ ಮಹತ್ವದ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ಅಂಥ ಯಾವುದೇ ನೋಟೀಸು ಅಗತ್ಯವಾಗತಕ್ಕದ್ದಲ್ಲ ಮತ್ತು ಆ ವಿಷಯವು ಸಾರ್ವಜನಿಕ ಮಹತ್ವದ್ದೇ ಅಥವಾ ಅಲ್ಲವೇ ಎಂಬ ಬಗ್ಗೆ ಸರ್ಕಾರದ ತೀರ್ಮಾನವು ಅಂತಿಮವಾದುದಾಗಿರತಕ್ಕದ್ದು.

(3) ಈ ಪ್ರಕರಣದ ಮೇರೆಗೆ ಸರ್ಕಾರವು ಹೊರಡಿಸಿದ ಪ್ರತಿಯೊಂದು ಆದೇಶವನ್ನು ಮುಖ್ಯ ಆಯುಕ್ತರಿಗೆ ಕಳುಹಿಸಿಕೊಡತಕ್ಕದ್ದು. ಅವರು ಅಂಥ ಆದೇಶವು ಪಾಲಿಕೆಯ ನಿರ್ಣಯವಾಗಿದ್ದಿದ್ದರೆ ಹೇಗೋ ಹಾಗೆ ಅಂಥ ಆದೇಶವನ್ನು ಶೀಘ್ರವಾಗಿ ಜಾರಿಗೊಳಿಸತಕ್ಕದ್ದು.

123. ಕ್ರಮ ಕೈಗೊಳ್ಳುವಂತೆ ನಿರ್ದೇಶಿಸಲು ಸರ್ಕಾರದ ಅಧಿಕಾರ.- 121ನೇ ಮತ್ತು 122ನೇ ಪ್ರಕರಣಗಳ ಮೇರೆಗೆ ಪಡೆದುಕೊಂಡ ಯಾವುದೇ ಮಾಹಿತಿಯನ್ನು ಅಥವಾ ವರದಿಯನ್ನು ಸ್ವೀಕರಿಸಿದ ಮೇಲೆ ಅಥವಾ ಅನ್ಯಥಾ ಸರ್ಕಾರವು,-

(ಎ) ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ಯಾವುದೇ ಪಾಲಿಕೆಯ ಪ್ರಾಧಿಕಾರಿಯ ಮೇಲೆ ವಿಧಿಸಿದ ಯಾವುದೇ ಕರ್ತವ್ಯವನ್ನು ನೆರವೇರಿಸಿಲ್ಲವೆಂದು ಅಥವಾ ಅಪರಿಪೂರ್ಣ, ಅಸಮರ್ಥ ಅಥವಾ ಸೂಕ್ತವಲ್ಲದ ರೀತಿಯಲ್ಲಿ ನೆರವೇರಿಸಲಾಗಿದೆ ಎಂದು; ಅಥವಾ

(ಬಿ) ಅಂಥ ಯಾವುದೇ ಕರ್ತವ್ಯವನ್ನು ನೆರವೇರಿಸುವುದಕ್ಕಾಗಿ ಸಾಕಷ್ಟು ಹಣಕಾಸು ಏರ್ಪಾಟು ಮಾಡಿಲ್ಲವೆಂದು,

- ಅಭಿಪ್ರಾಯಪಟ್ಟರೆ, ಸರ್ಕಾರವು ಹದಿನೈದು ದಿನಗಳಿಗೆ ಕಡಿಮೆ ಇಲ್ಲದ ನೋಟೀಸನ್ನು ಕೊಟ್ಟ ತರುವಾಯ, ಆದೇಶದ ಮೂಲಕ, ಆ ಆದೇಶದಲ್ಲಿ ನಿರ್ದಿಷ್ಟಪಡಿಸಲಾಗುವ ಅವಧಿಯೊಳಗೆ, ಸಂದರ್ಭಾನುಸಾರ, ಆ ಕರ್ತವ್ಯವನ್ನು ಸರಿಯಾಗಿ ನೆರವೇರಿಸುವುದಕ್ಕಾಗಿ ತನಗೆ ತೃಪ್ತಿಕರವಾದ ವ್ಯವಸ್ಥೆಗಳನ್ನು ಮಾಡುವಂತೆ ಅಥವಾ ಕರ್ತವ್ಯವನ್ನು ನೆರವೇರಿಸುವುದಕ್ಕಾಗಿ ತನಗೆ ತೃಪ್ತಿಕರವಾದ ಹಣಕಾಸಿನ ಏರ್ಪಾಟು ಮಾಡುವಂತೆ ಪಾಲಿಕೆಗೆ ಅಥವಾ ಮುಖ್ಯ ಆಯುಕ್ತರಿಗೆ ನಿರ್ದೇಶಿಸಬಹುದು ಮತ್ತು ಮುಖ್ಯ ಪಾಲಿಕೆಯು ಅಥವಾ ಆಯುಕ್ತರು ಅಂತಹ ಆದೇಶಗಳನ್ನು ಪಾಲಿಸತಕ್ಕದ್ದು:

ಪರಂತು, ಜರೂರು ಸಂದರ್ಭಗಳಲ್ಲಿ ಯಾವುದೇ ನೋಟೀಸಿನ ಅವಶ್ಯಕತೆ ಇರತಕ್ಕದ್ದಲ್ಲ.

124. ಕರ್ತವ್ಯ ಲೋಪವಾದಾಗ ಕ್ರಮಕ್ಕೆಗೊಳ್ಳುವುದಕ್ಕಾಗಿ ಪಾಲಿಕೆಯ ವೆಚ್ಚದಲ್ಲಿ ಅಧಿಕಾರಿಯನ್ನು ನೇಮಕಮಾಡಲು ಸರ್ಕಾರದ ಅಧಿಕಾರ.- (1) 123ನೇ ಪ್ರಕರಣದ ಮೇರೆಗೆ ಹೊರಡಿಸಲಾದ ಆದೇಶದ ಮೂಲಕ ಗೊತ್ತುಪಡಿಸಿದ ಅವಧಿಯೊಳಗೆ, ಆ ಪ್ರಕರಣದ ಮೇರೆಗೆ ನಿರ್ದೇಶಿಸಿದ ಯಾವುದೇ ಕ್ರಮವನ್ನು ಕ್ರಮಬದ್ಧವಾಗಿ ಕೈಗೊಳ್ಳದಿದ್ದರೆ, ಸರ್ಕಾರವು ಆದೇಶದ ಮೂಲಕ,-

(ಎ) ಹಾಗೆ ನಿರ್ದೇಶಿಸಿದ ಕ್ರಮವನ್ನು ಕೈಗೊಳ್ಳಲು ಸರ್ಕಾರದ ಒಬ್ಬ ಅಧಿಕಾರಿಯನ್ನು ನೇಮಕಮಾಡಬಹುದು;

(ಬಿ) ಅವರಿಗೆ ಸಂದಾಯ ಮಾಡಬೇಕಾದ ಪರಿಶ್ರಮಧನವನ್ನು ಗೊತ್ತುಪಡಿಸಬಹುದು; ಮತ್ತು

(ಸಿ) ಅಂಥ ಪರಿಶ್ರಮಧನವನ್ನು ಮತ್ತು ಅಂಥ ಕ್ರಮವನ್ನು ಕೈಗೊಳ್ಳಲು ತಗಲುವ ಖರ್ಚನ್ನು ಪಾಲಿಕೆಯ ನಿಧಿಯಿಂದ ಭರಿಸತಕ್ಕದ್ದೆಂದು ಮತ್ತು ಅವಶ್ಯವಾದರೆ ಈ ಅಧಿನಿಯಮದ XIIIನೇ ಅಧ್ಯಾಯದ ಮೂಲಕ ಅಧಿಕೃತಗೊಳಿಸಿದ ಯಾವುದೇ ಒಂದು ಅಥವಾ ಹೆಚ್ಚು ತೆರಿಗೆಗಳನ್ನು ಈ ಅಧಿನಿಯಮದಲ್ಲಿ ಹೇಳಲಾದ ಯಾವುದೇ ಗರಿಷ್ಠ ಮಿತಿಯನ್ನು ಮೀರದ ಹಾಗೆ ವಿಧಿಸತಕ್ಕದ್ದೆಂದು ಅಥವಾ ಹೆಚ್ಚಿಸತಕ್ಕದ್ದೆಂದು ನಿರ್ದೇಶಿಸಬಹುದು.

(2) ಮೇಲೆ ಹೇಳಿದಂತೆ ನಿರ್ದೇಶಿಸಿದ ಕ್ರಮವನ್ನು ಕೈಗೊಳ್ಳುವ ಉದ್ದೇಶಕ್ಕಾಗಿ, (1)ನೇ ಉಪಪ್ರಕರಣದ ಮೇರೆಗೆ ನೇಮಕಗೊಂಡ ಅಧಿಕಾರಿಯು ಅವಶ್ಯವಾಗುವಂಥ ಕರಾರುಗಳನ್ನು ಮಾಡಿಕೊಳ್ಳಲು ಅಧಿಕಾರವನ್ನು ಹೊಂದಿರತಕ್ಕದ್ದು ಮತ್ತು ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ಯಾವುದೇ ಪಾಲಿಕೆ ಪ್ರಾಧಿಕಾರಕ್ಕೆ ಪ್ರದತ್ತವಾದ ಮತ್ತು (1)ನೇ ಉಪ-ಪ್ರಕರಣದ ಮೇರೆಗೆ ಹೊರಡಿಸಲಾದ ಆದೇಶದಲ್ಲಿ ಈ ಬಗ್ಗೆ ನಿರ್ದಿಷ್ಟಪಡಿಸಿದ ಯಾವುವೇ ಅಧಿಕಾರಗಳನ್ನು ಚಲಾಯಿಸಬಹುದು ಮತ್ತು ಅವರು ಪಾಲಿಕೆ ಪ್ರಾಧಿಕಾರಿಯಾಗಿದ್ದಿದ್ದರೆ ಹೇಗೋ ಹಾಗೆ ಈ ಅಧಿನಿಯಮದ ಮೇರೆಗೆ ರಕ್ಷಣೆಗೆ ಹಕ್ಕುಳ್ಳವರಾಗಿರತಕ್ಕದ್ದು.

(3) ಸರ್ಕಾರವು, ಸದರಿ ತೆರಿಗೆಗಳಲ್ಲಿ ಯಾವುದನ್ನಾದರೂ ವಿಧಿಸುವಂತೆ ಅಥವಾ ಹೆಚ್ಚಿಸುವಂತೆ ನಿರ್ದೇಶಿಸುವುದರ ಜೊತೆಗೆ ಅಥವಾ ಹಾಗೆ ನಿರ್ದೇಶಿಸುವುದಕ್ಕೆ ಬದಲಾಗಿ ಅಧಿಸೂಚನೆಯ ಮೂಲಕ ಅದರ ಆದೇಶಗಳನ್ನು ಜಾರಿಗೊಳಿಸಲು ಅಗತ್ಯವೆಂದು ತಾನು ಅಭಿಪ್ರಾಯಪಡುವಂಥ ಯಾವುದೇ ಮೊತ್ತವನ್ನು ಅಥವಾ ಹಣವನ್ನು `ಡಿಬೆಂಚರ್' ಮೂಲಕ ಹಾಗೂ ಸದರಿ ಎಲ್ಲ ಅಥವಾ ಯಾವುದೇ ತೆರಿಗೆಗಳ ಭದ್ರತೆಯ ಮೇಲೆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಬಡ್ಡಿಯ ದರದಲ್ಲಿ ಮತ್ತು ಮರುಸಂದಾಯದ ಕಾಲಕ್ಕೆ ಸಂಬಂಧಿಸಿದ ನಿಬಂಧನೆಗಳ ಮೇಲೆ ಮತ್ತು ಅನ್ಯಥಾ ಸಾಲವಾಗಿ ಪಡೆಯಬಹುದೆಂದು ನಿರ್ದೇಶಿಸಬಹುದು.

(4) 184 ರಿಂದ 189, 191, 192, 202 ರಿಂದ 205ರ ವರೆಗಿನ ಪ್ರಕರಣದ ಉಪಬಂಧಗಳು ಸಾಧ್ಯವಾಗಬಹುದಾದಷ್ಟು ಮಟ್ಟಿಗೆ ಈ ಪ್ರಕರಣಕ್ಕನುಸಾರವಾಗಿ ಎತ್ತಲಾದ ಯಾವುದೇ ಸಾಲಕ್ಕೆ ಅನ್ವಯವಾಗತಕ್ಕದ್ದು.

125. ನಿರ್ಣಯದ ಪ್ರತಿಗಳನ್ನು ಸರ್ಕಾರಕ್ಕೆ ಸಲ್ಲಿಸುವುದು ಮತ್ತು ನಿರ್ಣಯವನ್ನು ಹಾಗೂ ಆದೇಶಗಳನ್ನು ರದ್ದುಗೊಳಿಸಲು ಸರ್ಕಾರದ ಅಧಿಕಾರ.- (1) ಪಾಲಿಕೆಯ ಎಲ್ಲ ನಿರ್ಣಯಗಳ ಪ್ರತಿಗಳನ್ನು ಮುಖ್ಯ ಆಯುಕ್ತರು ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

(2) ಪಾಲಿಕೆಯ ಅಥವಾ ಯಾವುದೇ ಇತರ ಪ್ರಾಧಿಕಾರದ ಅಥವಾ ಅದಕ್ಕೆ ಅಧೀನರಾದ ಅಧಿಕಾರಿಯ ಯಾವುದೇ ನಿರ್ಣಯವನ್ನು ಅಥವಾ ಆದೇಶವನ್ನು ಜಾರಿಗೊಳಿಸುವುದು ಅಥವಾ ಪಾಲಿಕೆಯು ಅಥವಾ ಅದರ ಪರವಾಗಿ ಮಾಡಲಿರುವ ಅಥವಾ ಮಾಡಲಾಗುತ್ತಿರುವ ಯಾವುದೇ ಕಾರ್ಯವನ್ನು ಮಾಡುವುದು ಈ ಅಧಿನಿಯಮದ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಮೂಲಕ ಪ್ರದತ್ತವಾದ ಅಧಿಕಾರಗಳ ಉಲಂಘನೆಯಾಗುತ್ತದೆಂದು ಅಥವಾ ಅವುಗಳನ್ನು ಮೀರುತ್ತದೆ ಎಂದು ಅಥವಾ ಶಾಂತಿಭಂಗವನ್ನು ಉಂಟುಮಾಡುವ ಅಥವಾ ಸಾರ್ವಜನಿಕರಿಗೆ ಅಥವಾ ವ್ಯಕ್ತಿಗಳ ಯಾವುದೇ ವರ್ಗಕ್ಕೆ ಅಥವಾ ನಿಕಾಯಕ್ಕೆ ಕ್ಷತಿ ಅಥವಾ ಕಿರುಕುಳವನ್ನು ಉಂಟುಮಾಡುವ ಸಂಭವವಿದೆ ಎಂದು ಅಥವಾ ಪಾಲಿಕೆಯ ಹಿತಾಸಕ್ತಿಗೆ ಬಾಧಕವನ್ನುಂಟು ಮಾಡುತ್ತದೆ ಎಂದು ಸರ್ಕಾರವು ಅಭಿಪ್ರಾಯಪಟ್ಟರೆ, ಅದು,-

(ಎ) ನಿರ್ಣಯವನ್ನು ಅಥವಾ ಆದೇಶವನ್ನು ಪೂರ್ಣವಾಗಿ ಅಥವಾ ಭಾಗಶಃ ಏಕೆ ರದ್ದುಗೊಳಿಸಬಾರದು; ಅಥವಾ

(ಬಿ) ಸಂಬಂಧಪಟ್ಟ ಯಾವುದೇ ಉಪವಿಧಿಯನ್ನು ಅಥವಾ ವಿನಿಯಮವನ್ನು ಪೂರ್ಣವಾಗಿ ಅಥವಾ ಭಾಗಶಃ ಏಕೆ ನಿರಸನಗೊಳಿಸಬಾರದು

- ಎಂಬುದಕ್ಕೆ ಹದಿನೈದು ದಿನಗಳಿಗೆ ಕಡಿಮೆ ಇಲ್ಲದಂಥ ನಿರ್ದಿಷ್ಟಪಡಿಸಲಾಗುವ ದಿನಾಂಕದೊಳಗೆ ಕಾರಣ ತೋರಿಸಲು ಪಾಲಿಕೆಗೆ ನೋಟೀಸನ್ನು ಕೊಟ್ಟ ತರುವಾಯ, ಲಿಖಿತ ಆದೇಶದ ಮೂಲಕ ಅಂಥ ನಿರ್ಣಯದ ಅಥವಾ ಆದೇಶದ ಜಾರಿಯನ್ನು ಅಮಾನತಿನಲ್ಲಿಡಬಹುದು ಅಥವಾ ಯಾವುದೇ ಅಂಥ ಕಾರ್ಯ ಮಾಡುವುದನ್ನು ನಿಷೇಧಿಸಬಹುದು.

(3) ಪಾಲಿಕೆಯಿಂದ ಸ್ವೀಕರಿಸಿದ ಉತ್ತರ ಯಾವುದಾದರೂ ಇದ್ದರೆ, ಅದನ್ನು ಪರಿಗಣಿಸಿದ ಮೇಲೆ ಮತ್ತು ತಾನು ಸೂಕ್ತವೆಂದು ಭಾವಿಸುವಂಥ ವಿಚಾರಣೆಯನ್ನು ನಡೆಸಿದ ತರುವಾಯ, ಸರ್ಕಾರವು ನಿರ್ಣಯವನ್ನು ಅಥವಾ ಆದೇಶವನ್ನು ರದ್ದುಗೊಳಿಸುವ ಅಥವಾ ಉಪ-ವಿಧಿಯನ್ನು ಅಥವಾ ವಿನಿಯಮವನ್ನು ನಿರಸನಗೊಳಿಸುವ ಆದೇಶಗಳನ್ನು ಮಾಡಬಹುದು ಮತ್ತು ಅದನ್ನು ಪಾಲಿಕೆಗೆ ತಿಳಿಸಬಹುದು.

(4) ಸರ್ಕಾರವು, ಯಾವುದೇ ಕಾಲದಲ್ಲಿ ಪಾಲಿಕೆಯು ಮಾಡಿಕೊಂಡ ಮುಂದಿನ ನಿವೇದನೆಯ ಮೇಲೆ ಅಥವಾ ಅನ್ಯಥಾ (3)ನೇ ಉಪಪ್ರಕರಣದ ಮೇರೆಗೆ ಮಾಡಿದ ಆದೇಶವನ್ನು ಪರಿಷ್ಕರಿಸಬಹುದು, ಮಾರ್ಪಾಟು ಮಾಡಬಹುದು ಅಥವಾ ರದ್ದುಪಡಿಸಬಹುದು.

126. ಪಾಲಿಕೆಯನ್ನು ವಿಸರ್ಜಿಸಲು ಸರ್ಕಾರದ ಅಧಿಕಾರ.- (1) ಈ ಅಧಿನಿಯಮದ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಮೂಲಕ ಅಥವಾ ಅದರ ಮೇರೆಗೆ ಪಾಲಿಕೆಯ

ಮೇಲೆ ವಿಧಿಸಿದ ಅಥವಾ ಅದು ಕೈಗೊಂಡ ಯಾವುದೇ ಕರ್ತವ್ಯಗಳನ್ನು ನೆರವೇರಿಸಲು ಅದು ಸಕ್ಷಮವಾಗಿಲ್ಲ ಅಥವಾ ಅವುಗಳನ್ನು ನೆರವೇರಿಸುವುದರಲ್ಲಿ ತಪ್ಪಿದೆ ಅಥವಾ ಅದು ಅದರ ಅಧಿಕಾರಗಳನ್ನು ಮೀರುತ್ತದೆ ಅಥವಾ ದುರುಪಯೋಗಪಡಿಸಿಕೊಳ್ಳುತ್ತದೆ ಎಂದು ಅಥವಾ ಈ ಅಧಿನಿಯಮದ ಅಥವಾ ಯಾವುದೇ ಇತರ ಕಾನೂನಿನ ಮೇರೆಗೆ ಸರ್ಕಾರವು ಕೊಟ್ಟ ನಿರ್ದೇಶನಗಳನ್ನು ಅಥವಾ ಆದೇಶಗಳನ್ನು ಕಾರ್ಯಗತಗೊಳಿಸಲು ವಿಫಲವಾಗಿದೆ ಅಥವಾ ಪಾಲಿಕೆಯ ಹಿತಾಸಕ್ತಿಗಳಿಗೆ ಬಾಧಕವಾಗುವ ರೀತಿಯಲ್ಲಿ ಕೆಲಸ ಮಾಡುತ್ತಿದೆ ಎಂದು ಸರ್ಕಾರವು ಅಭಿಪ್ರಾಯಪಟ್ಟರೆ, ಸರ್ಕಾರವು, ಸರ್ಕಾರಿ ರಾಜ್ಯಪತ್ರದಲ್ಲಿ ಅದಕ್ಕಾಗಿಯ ಕಾರಣಗಳ ನಿರೂಪಣೆಯ ಜೊತೆಗೆ, ಆದೇಶವನ್ನು ಪ್ರಕಟಿಸುವ ಮೂಲಕ, ಸಂದರ್ಭಾನುಸಾರ ಪಾಲಿಕೆಯು ಸಕ್ಷಮವಾದುದಾಗಿಲ್ಲ ಎಂದು ಅಥವಾ ತಪ್ಪಿದೆ ಎಂದು ಅಥವಾ ಅದರ ಅಧಿಕಾರಗಳನ್ನು ಮೀರಿದೆ ಅಥವಾ ದುರುಪಯೋಗಪಡಿಸಿಕೊಂಡಿದೆ ಎಂದು ಅಥವಾ ಅದಕ್ಕೆ ಕೊಟ್ಟ ನಿರ್ದೇಶನಗಳನ್ನು ಕಾರ್ಯಗತಗೊಳಿಸುವಲ್ಲಿ ವಿಫಲವಾಗಿದೆ ಎಂದು ಅಥವಾ ಪಾಲಿಕೆಯ ಹಿತಾಸಕ್ತಿಗಳಿಗೆ ಬಾಧಕವಾಗುವಂಥ ರೀತಿಯಲ್ಲಿ ಕೆಲಸ ಮಾಡಿದೆ ಎಂದು ಘೋಷಿಸಬಹುದು ಮತ್ತು ಪಾಲಿಕೆಯನ್ನು ವಿಸರ್ಜನೆಗೊಳಿಸಬಹುದು:

ಪರಂತು, ಮೇಲೆ ಹೇಳಿದಂತೆ ವಿಸರ್ಜನೆಯ ಆದೇಶವನ್ನು ಮಾಡುವುದಕ್ಕೆ ಮೊದಲು ಅಂಥ ಆದೇಶವನ್ನು ಏಕೆ ಮಾಡಬಾರದು ಎಂಬುದಕ್ಕೆ ಕಾರಣ ತೋರಿಸಲು ಪಾಲಿಕೆಗೆ ಯುಕ್ತ ಅವಕಾಶವನ್ನು ಕೊಡತಕ್ಕದ್ದು.

(2) (1)ನೇ ಉಪ-ಪ್ರಕರಣದ ಮೇರೆಗಿನ ಆದೇಶದ ಮೂಲಕ ಪಾಲಿಕೆಯನ್ನು ವಿಸರ್ಜನೆ ಮಾಡಿದಾಗ ಈ ಕೆಳಕಂಡ ಪರಿಣಾಮಗಳು ಉಂಟಾಗತಕ್ಕದ್ದು,-

(ಎ) ಪಾಲಿಕೆಯ ಎಲ್ಲ ಕೌನ್ಸಿಲರುಗಳು, ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಂದು (8)ನೇ ಉಪಪ್ರಕರಣದ ಮೇರೆಗೆ ಚುನಾವಣೆಗೆ ಸ್ಪರ್ಧಿಸಲು ತಮ್ಮ ಅರ್ಹತೆಗೆ ಬಾಧಕವಾಗದಂತೆ ಅಂಥ ಕೌನ್ಸಿಲರುಗಳಾಗಿ ಪದಧಾರಣ ಮಾಡುವುದು ನಿಂತುಹೋಗತಕ್ಕದ್ದು;

(ಬಿ) ಪಾಲಿಕೆಯನ್ನು ವಿಸರ್ಜಿಸಿರುವ ಅವಧಿಯಲ್ಲಿ ಈ ಅಧಿನಿಯಮದ ಅಥವಾ ಯಾವುದೇ ಇತರ ಕಾನೂನಿನ ಮೂಲಕ ಅಥವಾ ಮೇರೆಗೆ ಪಾಲಿಕೆಗೆ ಮತ್ತು ಪಾಲಿಕೆಯ ಸ್ಥಾಯೀ ಸಮಿತಿಗಳಿಗೆ ಪ್ರದತ್ತವಾದ ಎಲ್ಲ ಅಧಿಕಾರಗಳನ್ನು ಮತ್ತು ವಿಧಿಸಿದ ಎಲ್ಲ ಕರ್ತವ್ಯಗಳನ್ನು ಈ ಬಗ್ಗೆ ಸರ್ಕಾರವು ನೇಮಕಮಾಡಿದ ಆಡಳಿತಾಧಿಕಾರಿಯು ಚಲಾಯಿಸತಕ್ಕದ್ದು ಮತ್ತು ನೆರವೇರಿಸತಕ್ಕದ್ದು;

(ಸಿ) ಪಾಲಿಕೆಯಲ್ಲಿ ನಿಹಿತವಾಗಿರುವ ಎಲ್ಲ ಸ್ವತ್ತು, ಅದನ್ನು ಪುನರ್‌ರಚಿಸುವವರೆಗೆ ಸರ್ಕಾರದಲ್ಲಿ ನಿಹಿತವಾಗಿರತಕ್ಕದ್ದು.

(3) ಆಡಳಿತಾಧಿಕಾರಿಯು ಪೂರ್ಣಕಾಲಿಕ ಅಧಿಕಾರಿಯಾಗಿರತಕ್ಕದ್ದು ಎಂದು ಸರ್ಕಾರವು ನಿರ್ದೇಶಿಸಬಹುದು ಮತ್ತು ಅಂಥ ನಿರ್ದೇಶನವನ್ನು ಕೊಟ್ಟಿರುವಾಗ, ಸರ್ಕಾರವು ಆದೇಶದ ಮೂಲಕ, ಕಾಲಕಾಲಕ್ಕೆ ನಿರ್ಧರಿಸಬಹುದಾದಂಥ ಮಾಸಿಕ ಸಂಬಳ ಮತ್ತು ಭತ್ಯಗಳನ್ನು ಪಾಲಿಕೆಯ ನಿಧಿಗಳಿಂದ ಅವರಿಗೆ ಸಂದಾಯ ಮಾಡತಕ್ಕದ್ದು ಮತ್ತು ಸರ್ಕಾರದ ಅಧೀನದಲ್ಲಿನ ಸೇವಾ ಪರತ್ತುಗಳ ಮೂಲಕ ಅಗತ್ಯಪಡಿಸಬಹುದಾದಂತೆ ಸಂದರ್ಭಾನುಸಾರ, ಅವರು ಅಥವಾ ಅವರ ಪರವಾಗಿ ಸಂದಾಯ ಮಾಡಬೇಕಾದ ಅಧಿಕಾರಿಯ ರಜೆ ಭತ್ಯೆಗಳು, ನಿವೃತ್ತಿ ವೇತನ ಮತ್ತು ಭವಿಷ್ಯನಿಧಿಗಳ ಬಾಬಿಗೆ ಅಂಥ ವಂತಿಗೆಯನ್ನು ಪಾಲಿಕೆಯು ನೀಡತಕ್ಕದ್ದು.

(4) ಪಾಲಿಕೆಯನ್ನು ವಿಸರ್ಜಿಸಿರುವ ಅವಧಿಯಲ್ಲಿ ಯಾವುದೇ ಅಧಿನಿಯಮಿತಿಯಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಕಾನೂನಿನಲ್ಲಿ ಪಾಲಿಕೆಯ ಮೇಯರ್‌ಗೆ ಮಾಡಿರುವ ಉಲ್ಲೇಖಗಳನ್ನು 127ನೇ ಪ್ರಕರಣದ ಮೇರೆಗೆ ನೇಮಕಗೊಂಡ ಆಡಳಿತಾಧಿಕಾರಿಗೆ ಮಾಡಿದ ಉಲ್ಲೇಖಗಳೆಂದು ಅರ್ಥೈಸತಕ್ಕದ್ದು.

(5) ಪಾಲಿಕೆಯನ್ನು ವಿಸರ್ಜಿಸಿರುವ ಅವಧಿಯಲ್ಲಿ ಆಡಳಿತಾಧಿಕಾರಿಯು ತಮ್ಮ ಪ್ರಕಾರ್ಯಗಳನ್ನು ನಿರ್ವಹಿಸುವಾಗ ಸಾರ್ವಜನಿಕ ಹಿತಾಸಕ್ತಿಯನ್ನು ಒಳಗೊಂಡಿರುವ ಕಾರ್ಯನೀತಿಯ ವಿಷಯದಲ್ಲಿ ಸರ್ಕಾರವು ಆದೇಶದ ಮೂಲಕ ನಿಗದಿಪಡಿಸಬಹುದಾದಂಥ ನಿರ್ದೇಶನಗಳಿಂದ ಮಾರ್ಗದರ್ಶನ ಪಡೆಯತಕ್ಕದ್ದು ಮತ್ತು ನಿರ್ದೇಶನವು ಸಾರ್ವಜನಿಕ ಹಿತಾಸಕ್ತಿಯನ್ನು ಒಳಗೊಂಡಿರುವ ಕಾರ್ಯನೀತಿಯ ವಿಷಯಕ್ಕೆ ಸಂಬಂಧಪಡುತ್ತದೆಯೇ ಎಂಬ ಯಾವುದೇ ಪ್ರಶ್ನೆಯು ಉದ್ಭವಿಸಿದರೆ, ಸರ್ಕಾರದ ತೀರ್ಮಾನವು ಅಂತಿಮವಾದುದಾಗಿರತಕ್ಕದ್ದು.

(6) ಸರ್ಕಾರವು ಅಧಿಸೂಚನೆ ಮೂಲಕ ಈ ಅಧಿನಿಯಮದ ಮೇರೆಗೆ ಕೌನ್ಸಿಲರುಗಳಾಗಲು ಅರ್ಹರಾಗಿರತಕ್ಕ ಹದಿನೈದಕ್ಕೆ ಕಡಿಮೆ ಇಲ್ಲದ ಮತ್ತು ಇಪ್ಪತ್ತೈದಕ್ಕೆ ಹೆಚ್ಚಿಲ್ಲದ ವ್ಯಕ್ತಿಗಳನ್ನೊಳಗೊಂಡ ಒಂದು ಸಲಹಾ ಸಮಿತಿಯನ್ನು ಆಡಳಿತಾಧಿಕಾರಿಗೆ ನೆರವಾಗಲು ನೇಮಕಮಾಡಬಹುದು.

(7) ಪಾಲಿಕೆಯನ್ನು ವಿಸರ್ಜಿಸಿದಾಗ, ಅಂಥ ವಿಸರ್ಜನೆಯ ದಿನಾಂಕದಿಂದ ಆರು ತಿಂಗಳುಗಳು ಮುಕ್ತಾಯವಾಗುವುದಕ್ಕೆ ಮೊದಲು ಈ ಅಧಿನಿಯಮದ ಮೇರೆಗೆ ಉಪಬಂಧಿಸಿದ ರೀತಿಯಲ್ಲಿ ಅದನ್ನು ಪುನರ್‌ರಚಿಸತಕ್ಕದ್ದು:

ಪರಂತು, ವಿಸರ್ಜಿತ ಪಾಲಿಕೆಯು ಯಾವ ಅವಧಿಗೆ ಮುಂದುವರಿಯಬಹುದಾಗಿತ್ತೋ ಆ ಉಳಿದ ಅವಧಿಯು ಆರು ತಿಂಗಳುಗಳಿಗಿಂತ ಕಡಿಮೆಯಾಗಿದ್ದರೆ, ಅಂಥ ಅವಧಿಗೆ ಪಾಲಿಕೆಯನ್ನು ರಚಿಸುವುದಕ್ಕೆ ಈ ಪ್ರಕರಣದ ಮೇರೆಗೆ ಚುನಾವಣೆ ನಡೆಸುವ ಅಗತ್ಯವಿರತಕ್ಕದ್ದಲ್ಲ.

(8) ಒಂದು ಪಾಲಿಕೆಯನ್ನು, ಅದರ ಅವಧಿಯು ಪೂರ್ಣಗೊಳ್ಳುವುದಕ್ಕೆ ಮುಂಚೆ ವಿಸರ್ಜಿಸಿದ ತರುವಾಯ ರಚಿಸಿದಲ್ಲಿ, ವಿಸರ್ಜಿತ ಪಾಲಿಕೆಯು ಅದನ್ನು ಹಾಗೆ ವಿಸರ್ಜಿಸಿರದಿದ್ದರೆ ಯಾವ ಅವಧಿಗೆ ಮುಂದುವರೆಯಬಹುದಾಗಿತ್ತೋ ಆ ಉಳಿದ ಅವಧಿಗೆ ಮಾತ್ರ ಮುಂದುವರೆಯತಕ್ಕದ್ದು.

(9) (1)ನೇ ಉಪಪ್ರಕರಣದ ಮೇರೆಗೆ ಪಾಲಿಕೆಯನ್ನು ವಿಸರ್ಜಿಸಿದ ಆದೇಶವನ್ನು ಅದಕ್ಕೆ ಕಾರಣಗಳ ನಿರೂಪಣೆಯ ಜೊತೆಗೆ, ಅದನ್ನು ಮಾಡಿದ ತರುವಾಯ ಸಾಧ್ಯವಾದಷ್ಟು ಬೇಗನೆ, ರಾಜ್ಯ ವಿಧಾನ ಮಂಡಲದ ಎರಡೂ ಸದನಗಳ ಮುಂದೆ ಇಡತಕ್ಕದ್ದು.

127. ಪಾಲಿಕೆ ಆಡಳಿತಾಧಿಕಾರಿಯ ನೇಮಕಾತಿ.- (1) ಪಾಲಿಕೆಯನ್ನು ರಚಿಸಲು ಚುನಾವಣೆಯನ್ನು, ಅದನ್ನು ವಿಸರ್ಜಿಸಿದ ದಿನಾಂಕದಿಂದ ಆರು ತಿಂಗಳ ಅವಧಿಯ ಮುಕ್ತಾಯಕ್ಕೆ ಮುಂಚೆ ಪೂರ್ಣಗೊಳಿಸತಕ್ಕದ್ದು.

(2) ಪಾಲಿಕೆಯನ್ನು ರದ್ದುಪಡಿಸಿದಾಗ, ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಅವಧಿಗಾಗಿ ಮತ್ತು ಸದರಿ ಅಧಿಸೂಚನೆ ಮೂಲಕ, ಅಂಥ ನೇಮಕಾತಿಯನ್ನು ಮೊಟಕುಗೊಳಿಸುವುದಾಗಲಿ ಅಥವಾ ಅಗತ್ಯಪಡಿಸಬಹುದಾದಂಥ ಅವಧಿಯನ್ನು ವಿಸ್ತರಿಸುವುದಕ್ಕಾಗಲಿ ಅಧಿಸೂಚನೆ ಮೂಲಕ ಆಡಳಿತಾಧಿಕಾರಿಯನ್ನು ನೇಮಕ ಮಾಡತಕ್ಕದ್ದು;

(3) ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ, ಈ ಪ್ರಕರಣದ ಮೇರೆಗೆ ಆಡಳಿತಾಧಿಕಾರಿಯನ್ನು ನೇಮಕ ಮಾಡಿದ ಮೇಲೆ, ಅಂಥ ನೇಮಕದ ಅವಧಿಯಲ್ಲಿ, ಈ ಅಧಿನಿಯಮದ ಅಥವಾ ಯಾವುದೇ ಇತರ ಕಾನೂನಿನ ಉಪಬಂಧಗಳನ್ನು ಕಾರ್ಯಗತಗೊಳಿಸುವ ಜವಾಬ್ದಾರಿ ಹೊತ್ತಿರುವ ಪಾಲಿಕೆಯು, ಪಾಲಿಕೆಯ ಸ್ಥಾಯೀ ಸಮಿತಿಗಳು ಮತ್ತು ಮೇಯರ್, ಉಪ ಮೇಯರ್ ಮತ್ತು ಆಯುಕ್ತರನ್ನು ಹೊರತುಪಡಿಸಿ ಇತರ ಪ್ರಾಧಿಕಾರಿಗಳು ಈ ಅಧಿನಿಯಮದ ಅಥವಾ ಯಾವುದೇ ಇತರ ಕಾನೂನಿನ ಮೂಲಕ ಅಥವಾ ಅದರ ಮೇರೆಗೆ ಅವರಿಗೆ ಪ್ರದತ್ತವಾದ ಯಾವುವೇ ಅಧಿಕಾರಗಳನ್ನು ಚಲಾಯಿಸುವುದು ಮತ್ತು ವಿಧಿಸಲಾದ ಯಾವುವೇ ಕರ್ತವ್ಯಗಳನ್ನು ಅಥವಾ ಪ್ರಕಾರ್ಯಗಳನ್ನು ನೆರವೇರಿಸುವುದು ಮತ್ತು ನಿರ್ವಹಿಸುವುದು ನಿಂತುಹೋಗತಕ್ಕದ್ದು ಮತ್ತು ಆಡಳಿತಾಧಿಕಾರಿಯು ಅಂಥ ಎಲ್ಲ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂಥ ಎಲ್ಲ ಕರ್ತವ್ಯಗಳನ್ನು ಮತ್ತು ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು.

(4) ಈ ಅಧಿನಿಯಮದ ಅಡಿಯಲ್ಲಿ ನೇಮಕವಾದ ಆಡಳಿತಾಧಿಕಾರಿಗೆ, ಸರ್ಕಾರ ಆದೇಶದ ಮೂಲಕ ಕಾಲಕಾಲಕ್ಕೆ ನಿರ್ಧರಿಸಬಹುದಾದಂತೆ ಮಾಸಿಕ ವೇತನ ಮತ್ತು ಭತ್ಯೆಗಳನ್ನು ಪಾಲಿಕೆ ನಿಧಿಯಿಂದ ಸಂದಾಯ ಮಾಡತಕ್ಕದ್ದು ಮತ್ತು ಪಾಲಿಕೆಯು, ಸಂದರ್ಭಾನುಸಾರ ಅವನಿಗಾಗಿ ಸಂದಾಯ ಮಾಡಲು ಸರ್ಕಾರದ ಅಧೀನದಲ್ಲಿ ಬರುವ ಸೇವಾ ಪರತ್ತುಗಳ ಮೂಲಕ ಅಗತ್ಯಪಡಿಸಬಹುದಾದಂಥ ಅಧಿಕಾರಿಗೆ ರಜಾ ಭತ್ಯೆಗಳು, ಪಿಂಚಣಿ ಮತ್ತು ಭವಿಷ್ಯನಿಧಿಯ ಸಲುವಾಗಿ ವಂತಿಗೆಯನ್ನು ನೀಡತಕ್ಕದ್ದು.

(5) ಪಾಲಿಕೆಯನ್ನು ವಿಸರ್ಜಿಸಿರುವ ಅವಧಿಯಲ್ಲಿ ಆಡಳಿತಾಧಿಕಾರಿಯು ತಮ್ಮ ಪ್ರಕಾರ್ಯಗಳನ್ನು ನಿರ್ವಹಿಸುವಾಗ ಸಾರ್ವಜನಿಕ ಹಿತಾಸಕ್ತಿಯನ್ನು ಒಳಗೊಂಡಿರುವ ಕಾರ್ಯನೀತಿಯ ವಿಷಯದಲ್ಲಿ ಸರ್ಕಾರವು ಆದೇಶದ ಮೂಲಕ ನಿಗದಿಪಡಿಸಬಹುದಾದಂಥ ನಿರ್ದೇಶನಗಳಿಂದ ಮಾರ್ಗದರ್ಶನ ಪಡೆಯತಕ್ಕದ್ದು ಮತ್ತು ನಿರ್ದೇಶನವು ಸಾರ್ವಜನಿಕ ಹಿತಾಸಕ್ತಿಯನ್ನು ಒಳಗೊಂಡಿರುವ ಕಾರ್ಯನೀತಿಯ ವಿಷಯಕ್ಕೆ ಸಂಬಂಧಪಡುತ್ತದೆಯೇ ಎಂಬ ಯಾವುದೇ ಪ್ರಶ್ನೆಯು ಉದ್ಭವಿಸಿದರೆ, ಸರ್ಕಾರದ ತೀರ್ಮಾನವು ಅಂತಿಮವಾದುದಾಗಿರತಕ್ಕದ್ದು.

128. ಕಾರ್ಯನಿರ್ವಹಣಾ ವ್ಯವಸ್ಥೆಯ ಸ್ಥಾಪನೆ.- (1) ಪಾಲಿಕೆಯು**,** ಅದರ ಅಧಿಕಾರಿಗಳನ್ನು ಪರಿಣಾಮಕಾರಿಯಾಗಿ ಸುಧಾರಣೆ ಮಾಡಲು ಕಾರ್ಯನಿರ್ವಹಣಾ ವ್ಯವಸ್ಥೆಯನ್ನು ಸ್ಥಾಪಿಸತಕ್ಕದ್ದು ಮತ್ತು ಇಡೀ ಪಾಲಿಕೆಯ ವ್ಯವಸ್ಥಾಪನೆಯನ್ನು ಸುಧಾರಣೆ ಮಾಡುವುದಕ್ಕಾಗಿ ಹಾಗೂ ಮೇಲ್ವಿಚಾರಣೆಗೆ ಆಡಳಿತ ಯಂತ್ರವನ್ನು ಸ್ಥಾಪಿಸತಕ್ಕದ್ದು ಮತ್ತು ಅದರ ನಿರ್ವಹಣೆಯನ್ನು ಪುನರ್ ಪರಿಶೀಲಿಸುವುದು.

(2) ಪಾಲಿಕೆಯ ಕಾರ್ಯನಿರ್ವಹಣಾ ವ್ಯವಸ್ಥೆಯ ಅಭಿವೃದ್ಧಿಯಲ್ಲಿ ಪಾಲಿಕೆಗೆ ಸರ್ಕಾರವು ಸಹಾಯ ಮಾಡಬಹುದು ಮತ್ತು ಅದನ್ನು ಅಳವಡಿಸಿಕೊಳ್ಳುವುದಕ್ಕಾಗಿ ಪಾಲಿಕೆಗೆ ಪ್ರಸ್ತಾವವನ್ನು ಸಲ್ಲಿಸುವುದು.

(3) ಪಾಲಿಕೆಯ ಕಾರ್ಯನಿರ್ವಹಣಾ ವ್ಯವಸ್ಥೆಯು:

(ಎ) ಪಾಲಿಕೆಯ ಅಭಿವೃದ್ಧಿ ಆದ್ಯತೆಗಳು ಮತ್ತು ಧ್ಯೇಯೋದ್ದೇಶಗಳಿಗೆ ಸಂಬಂಧಿಸಿದಂತೆ ಫಲಿತಾಂಶಗಳು ಮತ್ತು ಪ್ರಭಾವವನ್ನು ಒಳಗೊಂಡಂತೆ ಕಾರ್ಯಕ್ಷಮತೆಯನ್ನು ಅಳೆಯಲು ಸೂಕ್ತವಾದ ಪ್ರಮುಖ ಕಾರ್ಯಕ್ಷಮತೆ ಸೂಚಕ ಮಾನದಂಡಗಳನ್ನು ರೂಪಿಸುವುದು**;**

(ಬಿ) ಈ ಪ್ರತಿಯೊಂದು ಅಭಿವೃದ್ಧಿ ಆದ್ಯತೆಗಳು ಮತ್ತು ಧ್ಯೇಯೋದ್ದೇಶಗಳಿಗೆ ಸಂಬಂಧಿಸಿದಂತೆ ನಿರ್ವಹಣಾ ಗುರಿಗಳನ್ನು ಸಾಧಿಸುವುದು**;**

(ಸಿ) ಕಾರ್ಯಕ್ಷಮತಾ ಸೂಚಕಗಳು ಮತ್ತು ಗುರಿಗಳಿಗೆ ಸಂಬಂಧಿಸಿದಂತೆ ಕ್ರಮ ಕೈಗೊಳ್ಳಲು ವಾಸ್ತವಿಕ ಕಾರ್ಯನಿರ್ವಹಣೆಯನ್ನು ಸಾಧಿಸುವುದು ಮತ್ತು ಪುನರ್ ಪರಿಶೀಲಿಸುವುದು;

(ಡಿ) ಕಾರ್ಯನಿರ್ವಹಣಾ ಗುರಿಗಳನ್ನು ಸಾಧಿಸದೇ ಇರುವ ಸಂದರ್ಭದಲ್ಲಿ ಈ ಅಭಿವೃದ್ಧಿ ಆದ್ಯತೆಗಳು ಮತ್ತು ಧ್ಯೇಯೋದ್ದೇಶಗಳಿಗೆ ಸಂಬಂಧಿಸಿದಂತೆ ಕಾರ್ಯನಿರ್ವಹಣೆಯನ್ನು ಸುಧಾರಣೆ ಮಾಡಲು ಕ್ರಮ ಕೈಗೊಳ್ಳುವುದು; ಮತ್ತು

(ಇ) ಸಂದರ್ಭಾನುಸಾರ ಮೇಯರ್, ಮುಖ್ಯ ಆಯುಕ್ತರು, ಪ್ರಾದೇಶಿಕ ಆಯುಕ್ತರಿಗೆ ನಿಯತ ವರದಿಯ ಕಾರ್ಯವಿಧಾನವನ್ನು ರಚಿಸುವುದು.

(4) ಪಾಲಿಕೆಯು ಸಾರ್ವಜನಿಕ ಕ್ಷೇತ್ರದಲ್ಲಿ ಕಾರ್ಯಕ್ಷಮತೆ ಸೂಚಕಗಳನ್ನು ಪ್ರದರ್ಶಿಸತಕ್ಕದ್ದು ಮತ್ತು ಅದರ ಯಾರೇ ಅಧಿಕಾರಿಗಳನ್ನು ಉತ್ತೇಜಿಸುವ ಉದ್ದೇಶಕ್ಕಾಗಿ ಐಕ್ಯತೆಯನ್ನು ನಿಶ್ಚಿತಗೊಳಿಸುವುದು.

ಅಧ್ಯಾಯ XI

ಪಾಲಿಕೆಯ ಸ್ವತ್ತುಗಳು

129. ಪಾಲಿಕೆಯ ಸ್ವತ್ತುಗಳು.- (1) ಸರ್ಕಾರವು ಅನ್ಯಥಾ ನಿರ್ದಿಷ್ಟವಾಗಿ ಮಾಲೀಕತ್ವ ಹೊಂದಿದ ಮತ್ತು ನಿಯಂತ್ರಿಸಿದ ಹೊರತು, ಈ ಮುಂದಿನ ಸ್ವತ್ತುಗಳು ಪಾಲಿಕೆಗೆ ಸೇರಿರುತ್ತವೆ:-

(ಎ) ಎಲ್ಲಾ ಸಾರ್ವಜನಿಕ ಉದ್ಯಾನಗಳು, ಆಟದ ಮೈದಾನಗಳು ಮತ್ತು ವಾಯು ಸಂಚಾರಕ್ಕೆ ಮೀಸಲಿರಿಸಿದ ಬಹಿರಂಗ ಸ್ಥಳಗಳು;

(ಬಿ) ಎಲ್ಲಾ ಸಾರ್ವಜನಿಕ ದೀಪಗಳು, ಅದಕ್ಕೆ ಸಂಬಂಧಿಸಿರುವ ಅದಕ್ಕೆ ಲಗತ್ತಾದ ದೀಪದ ಕಂಬದ ಸಾಧನಗಳು, ಎಲ್ಲಾ ಗೇಟುಗಳು, ಮಾರುಕಟ್ಟೆಗಳು, ಕಸಾಯಿಖಾನೆಗಳು, ಗೊಬ್ಬರ ಮತ್ತು ಆಶ್ರಯ ಡಿಪೋಗಳು ಮತ್ತು ಪ್ರತಿಯೊಂದು ವಿಧದ ಸಾರ್ವಜನಿಕ ಕಟ್ಟಡಗಳು.

(2) ಈ ಪ್ರಕರಣದ ಅಡಿಯಲ್ಲಿ ನಿರ್ದಿಷ್ಟಪಡಿಸಿದ ಮತ್ತು ಪ್ರಕರಣದ ಅಡಿಯಲ್ಲಿ ಸರ್ಕಾರವು ನಿರ್ದಿಷ್ಟವಾಗಿ ಮಾಲೀಕತ್ವ ಹೊಂದಿರದ ಮತ್ತು ನಿಯಂತ್ರಿಸದ ಎಲ್ಲಾ ಸ್ವತ್ತುಗಳು ಪಾಲಿಕೆಗೆ ಸೇರತಕ್ಕದ್ದು ಹಾಗೂ ಪಾಲಿಕೆಯ ಅಂಥ ನಿರ್ದೇಶನ, ನಿರ್ವಹಣೆ ಮತ್ತು ನಿಯಂತ್ರಣಕ್ಕೆ ಒಳಪಟ್ಟಿರತಕ್ಕದ್ದು.

130. ಪಾಲಿಕೆಯಿಂದ ಸ್ವತ್ತುಗಳ ವಿಲೆ.- (1) ಈ ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು, ಮುಖ್ಯ ಆಯುಕ್ತರು, ಸರ್ಕಾರದ ಪೂರ್ವಾನುಮೋದನೆಯೊಂದಿಗೆ ಪಾಲಿಕೆಯ ಯಾವುದೇ ಸ್ಥಿರ ಸ್ವತ್ತನ್ನು ಮಾರಾಟ ಮಾಡುವ ಮೂಲಕ ವಿಲೆ ಮಾಡಬಹುದು ಅಥವಾ ಅಂಥ ಸ್ಥಿರ ಸ್ವತ್ತಿನಿಂದ ಉದ್ಭವಿಸುವ ಅಂಥ ಉತ್ಪನ್ನದ ಅಥವಾ ಪ್ರಯೋಜನದ ಮೇಲೆ ಯಾವುದೇ ಹಕ್ಕಿನ ಬಳಕೆಗೆ ಅಂಥ ಭೋಗ್ಯಕ್ಕೆ ಒಪ್ಪಂದ ಮಾಡಿಕೊಳ್ಳಬಹುದು.

(2) ರಾಜ್ಯ ಸರ್ಕಾರದ ಪೂರ್ವ ಮಂಜೂರಾತಿಯೊಂದಿಗೆ ಮುಖ್ಯ ಆಯುಕ್ತರು, ಪಾಲಿಕೆಯ ಯಾವುದೇ ಸ್ಥಿರ ಸ್ವತ್ತನ್ನು ಮಾರಾಟದ ಮೂಲಕ ವಿಲೆ ಮಾಡಬಹುದು.

(3) ಮುಖ್ಯ ಆಯುಕ್ತರು ಸ್ಥಿರ ಸ್ವತ್ತಿನ ಯಾವುದೇ ಮಾರಾಟವನ್ನು, ಬಹಿರಂಗ ಹರಾಜಿನ ಮೂಲಕ ಮಾಡತಕ್ಕದ್ದು ಮತ್ತು ಅದರ ಪ್ರಕ್ರಿಯೆಯನ್ನು ನಿಯಮಿಸತಕ್ಕದ್ದು.

(4) ಮುಖ್ಯ ಆಯುಕ್ತರು, ಸಂಬಂಧಪಟ್ಟ ಸ್ಥಾಯಿ ಸಮಿತಿಯ ಪೂರ್ವ ಮಂಜೂರಾತಿಯೊಂದಿಗೆ ಐದು ವರ್ಷಗಳನ್ನು ಮೀರದ ಅವಧಿಗಾಗಿ ಪಾಲಿಕೆಯ ಸ್ಥಿರ ಸ್ವತ್ತುಗಳನ್ನು ಭೋಗ್ಯಕ್ಕೆ ನೀಡಬಹುದು.

(5) ಮುಖ್ಯ ಆಯುಕ್ತರು ಕೌನ್ಸಿಲ್‌ನ ಪೂರ್ವ ಮಂಜೂರಾತಿಯೊಂದಿಗೆ ಐದರಿಂದ ಹದಿನೈದು ವರ್ಷಗಳವರೆಗಿನ ಅವಧಿಗಾಗಿ ಪಾಲಿಕೆಯ ಸ್ಥಿರ ಸ್ವತ್ತುಗಳನ್ನು ಭೋಗ್ಯಕ್ಕೆ ನೀಡಬಹುದು;

(6) ಪಾಲಿಕೆಯು ಮೇಲಿನ ಹದಿನೈದು ವರ್ಷಗಳ ಯಾವುದೇ ಭೋಗ್ಯದ ಅವಧಿಯಲ್ಲಿ ಕೋರಿರುವಾಗ, ಮುಖ್ಯ ಆಯುಕ್ತರು ಸರ್ಕಾರದ ಪೂರ್ವಾನುಮೋದನೆಯೊಂದಿಗೆ ಅಂತಹ ಭೋಗ್ಯದ ಒಪ್ಪಂದವನ್ನು ಮಾಡಿಕೊಳ್ಳಬಹುದು.

(7) ಸಂಬಂಧಪಟ್ಟ ವಲಯ ಸಮಿತಿಯ ಅಭಿಪ್ರಾಯವನ್ನು ಕೋರದೆ ಪಾಲಿಕೆಯು ಯಾವುದೇ ಮಾರಾಟ ಅಥವಾ ಭೋಗ್ಯವನ್ನು ಕೈಗೊಳ್ಳತಕ್ಕದ್ದಲ್ಲ.

(8) ಪ್ರಕರಣದ ಅಡಿಯಲ್ಲಿ ಸ್ಥಾಯಿ ಸಮಿತಿಯು ಅಥವಾ ಮೇಯರ್ ಅವರು ನೀಡಬಹುದಾದ ಯಾವುದೇ ಅನುಮೋದನೆಗೆ ಆಧಾರವಾಗಿರತಕ್ಕ ಅಂಥ ಪರತ್ತುಗಳನ್ನು ಪಾಲಿಕೆಯು ಮಾರಾಟಕ್ಕೆ ಅಥವಾ ಭೋಗ್ಯಕ್ಕೆ ನಿರ್ದಿಷ್ಟಪಡಿಸತಕ್ಕದ್ದು.

131. ಪಾಲಿಕೆಯಿಂದ ಸ್ವತ್ತುಗಳ ಆರ್ಜನೆ.- (1) ಪಾಲಿಕೆಯ ಪರವಾಗಿ ಮುಖ್ಯ ಆಯುಕ್ತರು, ಯಾವುದೇ ಸ್ಥಿರ ಸ್ವತ್ತನ್ನು ಆರ್ಜಿಸಲು ಕೋರಿದರೆ, ಮುಖ್ಯ ಆಯುಕ್ತರು ಹಾಗೆ ಮಾಡಬಹುದು; ಮಾಡಿದಲ್ಲಿ, ಮೇಯರ್ ಅವರು ಅಂಥ ಆರ್ಜನೆಯ ಉದ್ದೇಶವನ್ನು ಅನುಮೋದಿಸಬಹುದು.

(2) (1)ನೇ ಉಪ-ಪ್ರಕರಣದ ಪ್ರಕಾರ ಕೈಗೊಳ್ಳಬಹುದಾದಂಥ ಯಾವುದೇ ಆರ್ಜನೆಯು, ಭೂ ಆರ್ಜನೆ, ಪುನರ್ವಸತಿ ಮತ್ತು ಪುನರ್‌ಇತ್ಯರ್ಥದಲ್ಲಿ ನ್ಯಾಯಯುತ ಪರಿಹಾರ ಮತ್ತು ಪಾರದರ್ಶಕತೆ ಹಕ್ಕು ಅಧಿನಿಯಮ, 2013ಕ್ಕೆ (2013ರ ಕೇಂದ್ರ ಅಧಿನಿಯಮ 30) ಅನುಸಾರವಾಗಿರತಕ್ಕದ್ದು.

132. ಪಾಲಿಕೆಯು ನಿರ್ವಹಿಸುವ ಸರ್ಕಾರಿ ಸ್ವತ್ತುಗಳು.- (1) ಕಾಲ ಕಾಲಕ್ಕೆ ಸರ್ಕಾರವು ನಿರ್ಧರಿಸಬಹುದಾದಂಥ ನಿಬಂಧನೆಗಳು ಮತ್ತು ಷರತ್ತುಗಳ ಮೇರೆಗೆ, ಸರ್ಕಾರವು ಅದಕ್ಕೆ ಸೇರಿದ ಯಾವುದೇ ಭೂಮಿ ಅಥವಾ ಸ್ವತ್ತನ್ನು ನಿರ್ವಹಣೆಗಾಗಿ ಪಾಲಿಕೆಗೆ ವರ್ಗಾಯಿಸಬಹುದು.

(2) ಸರ್ಕಾರದ ಸ್ವತ್ತುಗಳನ್ನು ಪಾಲಿಕೆಯು ತೃಪ್ತಿಕರವಾಗಿ ನಿರ್ವಹಿಸುತ್ತಿಲ್ಲ ಅಥವಾ ನಿರ್ವಹಣೆಯ ಅಂಥ ನಿಯಮಿಸಿದ ನಿಬಂಧನೆಗಳು ಮತ್ತು ಷರತ್ತುಗಳನ್ನು ಅದು ಉಲ್ಲಂಘಿಸಿದೆ ಎಂದು ಅದು ಅಭಿಪ್ರಾಯಪಟ್ಟ ಸಂದರ್ಭದಲ್ಲಿ, ಸರ್ಕಾರವು ಅಂಥ ಸ್ವತ್ತುಗಳನ್ನು ತನಗೆ ವರ್ಗಾಯಿಸಿಕೊಳ್ಳಬಹುದು.

133. ಪಾಲಿಕೆಯ ಸ್ವತ್ತುಗಳನ್ನು ನಿರ್ವಹಿಸುವ ಸರ್ಕಾರದ ಅಧಿಕಾರ.- (1) ಪಾಲಿಕೆಗೆ ಸೇರಿದ ಯಾವುದೇ ಸ್ಥಿರ ಸ್ವತ್ತನ್ನು ನಿರ್ವಹಿಸಲು ಅದು ಅಸಮರ್ಥವಾದರೆ, ಮೇಯರ್ ಅವರ ಪೂರ್ವಾನುಮೋದನೆಯೊಂದಿಗೆ ಮುಖ್ಯ ಆಯುಕ್ತರು, ಅಂಥ ಸ್ವತ್ತುಗಳ ನಿರ್ವಹಣೆಗೆ ಸರ್ಕಾರವನ್ನು ಕೋರಬಹುದು.

(2) ಪಾಲಿಕೆಗೆ ಸೇರಿದ ಯಾವುದೇ ಸ್ವತ್ತನ್ನು ನಿರ್ವಹಿಸಲು ಅದು ವಿಫಲವಾಗಿದೆ ಎಂದು ಸರ್ಕಾರವು ಅಭಿಪ್ರಾಯಪಟ್ಟರೆ, ಅದು ಅಂಥ ಸ್ವತ್ತುಗಳನ್ನು ಸರ್ಕಾರಕ್ಕೆ ವರ್ಗಾಯಿಸಲು ಪಾಲಿಕೆಗೆ ನಿರ್ದೇಶನಗಳನ್ನು ನೀಡುವ ಅಧಿಕಾರವನ್ನು ಹೊಂದಿರತ್ಕದ್ದು.

(3) ಸರ್ಕಾರವು ಅಧಿಸೂಚನೆ ಮೂಲಕ ಪಾಲಿಕೆಯೊಂದಿಗೆ ಸಮಾಲೋಚಿಸಿದ ನಂತರ ಸಾವ□ಜನಿಕ ಉದ್ದೇಶಕ್ಕಾಗಿ, ಅದು ನಿರ್ಣಯಿಸಬಹುದಾದಂಥ ಸಾಧನೆಗಳ ಅನುಸಾರ ಪಾಲಿಕೆಗೆ ಸಂಬಂಧಿಸಿದರೆ ಅದರಲ್ಲಿ ನಿಹಿತವಾದ ಯಾವುದೇ ಭೂಮಿ ಅಥವಾ ಇತರೆ ಸ್ವತ್ತನ್ನು, ಸ್ಥಿರ ಅಥವಾ ಚರ ಸ್ವತ್ತನ್ನು ತನ್ನ ವಶಕ್ಕೆ ತೆಗೆದುಕೊಳ್ಳಬಹುದು.

134. ಪಾಲಿಕೆಯಿಂದ ಅಥವಾ ಅದರ ವಿರುದ್ಧದ ಸ್ವತ್ತುಗಳ ಬಗೆಗಿನ ಕ್ಲೇಮುಗಳ ನಿರ್ಧಾರ.- (1) ಪಾಲಿಕೆಯ ಅಥವಾ ಅದರ ಪರವಾಗಿ ಅಥವಾ ಅದರ ವಿರುದ್ಧವಾಗಿ ಯಾರೇ ವ್ಯಕ್ತಿಯು ಯಾವುದೇ ಸ್ವತ್ತಿನ ಬಗ್ಗೆ ಕ್ಲೇಮು ಮಾಡಿದರೆ, ಯುಕ್ತ ನೋಟೀಸನ್ನು ನೀಡಿ ವಿಚಾರಣೆಯನ್ನು ನಡೆಸಿದ ನಂತರ, ಕ್ಲೇಮುಗಳನ್ನು ನಿರ್ಧರಿಸುವ ಆದೇಶವನ್ನು ಹೊರಡಿಸುವುದು ಬೆಂಗಳೂರು ಪ್ರಾದೇಶಿಕ ಆಯುಕ್ತರಿಗೆ ಕಾನೂನುಬದ್ಧವಾಗಿತಕ್ಕದ್ದು.

(2) (1)ನೇ ಉಪಪ್ರಕರಣದ ಮೇರೆಗೆ ಮಾಡಿದ ಆದೇಶದಿಂದ ಬಾಧಿತನಾದ ಯಾರೇ ವ್ಯಕ್ತಿಯು, ಕರ್ನಾಟಕ ಅಪೀಲು ನ್ಯಾಯಾಧಿಕರಣಕ್ಕೆ ಅಪೀಲು ಸಲ್ಲಿಸಬಹುದು ಹಾಗೂ ನ್ಯಾಯಾಧಿಕರಣದ ತೀರ್ಮಾನವೇ ಅಂತಿಮವಾದುದಾಗಿರತಕ್ಕದ್ದು.

(3) ಯಾರೇ ವ್ಯಕ್ತಿಗೆ ನಿಯಮಿಸಲಾದ ನಮೂನೆಯಲ್ಲಿ ನೋಟಿಸನ್ನು ನೀಡಲಾಗಿದ್ದರೆ, ಈ ಪ್ರಕರಣದ ಮೇರೆಗೆ ವಿಚಾರಣೆಯ ಯುಕ್ತ ನೋಟಿಸನ್ನು ಅಥವಾ ಆದೇಶವನ್ನು ಆತನು ಪಡೆದಿದ್ದನೆಂದು ಭಾವಿಸತಕ್ಕದ್ದು.

135. ಖಾಸಗಿ ಸ್ವತ್ತುಗಳನ್ನು ನಿರ್ವಹಿಸುವ ಪಾಲಿಕೆಯ ಅಧಿಕಾರ.- ಅಂಥ ಖಾಸಗಿ ವ್ಯಕ್ತಿಗಳು, ಕಂಪನಿಗಳು, ನ್ಯಾಸಗಳು, ಮತ್ತು ಯಾವುದೇ ಇತರ ಸಂಘ-ಸಂಸ್ಥೆಗಳ ಮನವಿಯ ಮೇರೆಗೆ, ಪಾಲಿಕೆಯು ಕಾಲ ಕಾಲಕ್ಕೆ ನಿಯಮಿಸಬಹುದಾದಂಥ ಷರತ್ತುಗಳನುಸಾರ ಅವುಗಳಿಗೆ ಸೇರಿದ ಅಂಥ ಸ್ವತ್ತುಗಳನ್ನು ನಿರ್ವಹಿಸಬಹುದು.

136. ಸ್ವತ್ತು ರಿಜಿಸ್ಟರಿನ ನಿರ್ವಹಣೆ.- (1) ಪಾಲಿಕೆಯ ಮಾಲೀಕತ್ವ, ನಿಯಂತ್ರಣ ಮತ್ತು ನಿರ್ವಹಣೆಯಲ್ಲಿರುವ ಸ್ಥಿರ ಸ್ವತ್ತುಗಳ ಪಟ್ಟಿಯನ್ನು ಒಳಗೊಂಡಿರುವ ಪಾಲಿಕೆಯ ಸ್ವತ್ತು ರಿಜಿಸ್ಟರನ್ನು ಮುಖ್ಯ ಆಯುಕ್ತರು ನಿರ್ವಹಿಸತಕ್ಕದ್ದು.

(2) ವಲಯ ಆಯುಕ್ತರು, ಅಂಥ ಸ್ಥಿರ ಸ್ವತ್ತಿನ ವಿವರಗಳನ್ನು ಒಳಗೊಂಡ, ಸಂಬಂಧಪಟ್ಟ ವಲಯದ ಸ್ವತ್ತು ರಿಜಿಸ್ಟರನ್ನು ಪಾಲಿಕೆಯ ಸ್ವತ್ತು ರಿಜಿಸ್ಟರಿನಲ್ಲಿ ನಿರ್ವಹಿಸತಕ್ಕದ್ದು ಮತ್ತು ಅಂಥ ಪಟ್ಟಿಯನ್ನು ಕಾಲಿಕವಾಗಿ ನವೀಕರಿಸತಕ್ಕದ್ದು ಹಾಗೂ ಪಾಲಿಕೆಯ ಸ್ವತ್ತು ರಿಜಿಸ್ಟರಿನಲ್ಲಿ ಅಂಥ ನವೀಕರಣವನ್ನು ನಡೆಸಬಹುದೆಂದು ಮುಖ್ಯ ಆಯುಕ್ತರಿಗೆ ಮನವರಿಕೆ ಮಾಡಿಕೊಡತಕ್ಕದ್ದು.

(3) ಅನ್ವಯವಾಗಬಹುದಾದ ಅಂಥ ಕಾನೂನು ಅಥವಾ ನಿಯಮಗಳನುಸಾರ, ಪಾಲಿಕೆಯು, ಸ್ಥಿರ ಸ್ವತ್ತಿನ ಪರಿಣಾಮಕಾರಿ ನಿರ್ವಹಾಣೆಗಾಗಿ ಅಗತ್ಯವಿರುವ ದೈನಂದಿನ ಆಡಳಿತ, ನಿರ್ವಹಣೆ ಮತ್ತು ಹೊಣೆಗಾರಿಕೆಗಳನ್ನು ನಡೆಸಿಕೊಂಡು ಹೋಗಲು ಪ್ರತಿಯೊಂದು ವಲಯಕ್ಕೆ ಅಂಥ ಅಧಿಕಾರಿಗಳನ್ನು ನೇಮಕ ಮಾಡಬಹುದು.

(4) ಈ ಅಧಿನಿಯಮದ ಅಧಿಸೂಚನೆಯ ದಿನಾಂಕದಿಂದ ಪ್ರತಿ ಐದು ವರ್ಷಕ್ಕೊಮ್ಮೆ ಪಾಲಿಕೆಯ ಮಾಲೀಕತ್ವ, ನಿರ್ವಹಣೆ ಅಥವಾ ನಿಯಂತ್ರಣದ ಅಡಿಯಲ್ಲಿರುವ ಸ್ಥಿರ ಸ್ವತ್ತುಗಳ ಪಟ್ಟಿಯ ಸಮೀಕ್ಷೆಯನ್ನು

ಅದು ಕೈಗೊಳ್ಳತಕ್ಕದ್ದು ಮತ್ತು ನಿರ್ದಿಷ್ಟಪಡಿಸಬಹುದಾದ ರೀತಿಯಲ್ಲಿ ಅಂಥ ಸಮೀಕ್ಷೆಯನ್ನು ಅಧಿಕೃತ ಗೆಜೆಟ್‌ನಲ್ಲಿ ಮತ್ತು ಸಾರ್ವಜನಿಕ ಜಾಲತಾಣದಲ್ಲಿ (ಪಬ್ಲಿಕ್ ಡೊಮೈನ್) ಪ್ರಕಟಿಸತಕ್ಕದ್ದು.

137. ಈ ಅಧಿನಿಯಮದಲ್ಲಿ ಉಪಬಂಧಿಸಿಲ್ಲದ ಉದ್ದೇಶಗಳು.- ಸರ್ಕಾರವು ಪಾಲಿಕೆಯ ಸಮ್ಮತಿಯೊಂದಿಗೆ ಈ ಅಧಿನಿಯಮದ ಮೂಲಕ ಉಪಬಂಧಿಸಿಲ್ಲದ ಯಾವುದೇ ಸಂಸ್ಥೆಯ ಆಡಳಿತವನ್ನು ಅಥವಾ ಯಾವುದೇ ಕಾಮಗಾರಿಯ ಅನುಷ್ಠಾನವನ್ನು ಪಾಲಿಕೆಗೆ ವರ್ಗಾಯಿಸಬಹುದು ಮತ್ತು ಆ ತರುವಾಯ ಅಂಥ ಆಡಳಿತವನ್ನು ಅಥವಾ ಅನುಷ್ಠಾನ ಕಾರ್ಯವನ್ನು ವಹಿಸಿಕೊಳ್ಳುವುದು ಪಾಲಿಕೆಗೆ ಕಾನೂನುಬದ್ಧವಾಗಿರತಕ್ಕದ್ದು:

ಪರಂತು, ಅಂಥ ಪ್ರತಿಯೊಂದು ಸಂದರ್ಭದಲ್ಲಿ ಅಂಥ ಆಡಳಿತಕ್ಕೆ ಅಥವಾ ಅನುಷ್ಠಾನಕ್ಕೆ ಅವಶ್ಯವಾದ ನಿಧಿಗಳನ್ನು ಸರ್ಕಾರವು ಪಾಲಿಕೆಯ ವಶಕ್ಕೆ ನೀಡತಕ್ಕದ್ದು.

ಅಧ್ಯಾಯ XII

ಕರಾರುಗಳು

138. ಕರಾರುಗಳನ್ನು ಮಾಡಿಕೊಳ್ಳುವ ಪಾಲಿಕೆಯ ಅಧಿಕಾರ.- (1) ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೆ ತರುವ ಉದ್ದೇಶಗಳಿಗಾಗಿ, ಪಾಲಿಕೆಯು ಕರಾರನ್ನು ಮಾಡಿಕೊಳ್ಳಬಹುದು ಮತ್ತು ಕರಾರಿನ ಅಡಿಯಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಬಾಧ್ಯತೆಯನ್ನು ಈಡೇರಿಸಬಹುದು.

(2) ಈ ಸಂಬಂಧವಾಗಿ ರಚಿಸಿದ ನಿಯಮಗಳಿಗೆ ಒಳಪಟ್ಟು ಈ ಕೆಳಕಂಡ ಉಪಬಂಧ ಅಧಿನಿಯಮದ ಯಾವುದೇ ಉದ್ದೇಶಗಳಿಗಾಗಿ ಪಾಲಿಕೆಯೊಂದಿಗೆ ಮಾಡಿಕೊಂಡ ಪ್ರತಿಯೊಂದು ಕರಾರಿಗೆ ಅನ್ವಯವಾಗತಕ್ಕದ್ದು, ಎಂದರೆ:-

(ಎ) ನಿರ್ದಿಷ್ಟ ವಲಯದ ವ್ಯವಹಾರಗಳಿಗೆ ಸಂಬಂಧಿಸಿದ ಪ್ರತಿಯೊಂದು ಕರಾರನ್ನು, ಐದು ಕೋಟಿ ರೂಪಾಯಿಗಳನ್ನು ಮೀರದ ಮೊತ್ತಕ್ಕಾಗಿ ವಲಯ ಆಯುಕ್ತರು ಪಾಲಿಕೆಯ ಹೆಸರಿನಲ್ಲಿ ಮಾಡಿಕೊಳ್ಳತಕ್ಕದ್ದು;

(ಬಿ) ಎರಡು ಅಥವಾ ಹೆಚ್ಚು ವಲಯಗಳಿಗೆ ವ್ಯಾಪಿಸಿರುವ, ಐದು ಕೋಟಿ ರೂಪಾಯಿಗಳ ಮೊತ್ತವನ್ನು ಮೀರುವ ನಿರ್ದಿಷ್ಟ ವಲಯಕ್ಕೆ ಮತ್ತು ಅಂಥ ವ್ಯವಹಾರಗಳಿಗೆ ಸಂಬಂಧಪಟ್ಟಂತೆ, ಇಡೀ ಪಾಲಿಕೆಯ ವ್ಯವಹಾರಗಳಿಗೆ ಸಂಬಂಧಿಸಿದ ಪ್ರತಿಯೊಂದು ಕರಾರನ್ನು ಮುಖ್ಯ ಆಯುಕ್ತರು ಪಾಲಿಕೆಯ ಹೆಸರಿನಲ್ಲಿ ಮಾಡಿಕೊಳ್ಳತಕ್ಕದ್ದು

(ಸಿ) ಅಧಿಕಾರ ಹಂಚಿಕೆಯ ಷರತ್ತಿಗೊಳಪಟ್ಟು ವಲಯ ಸಮಿತಿಯ ಪೂರ್ವಾನುಮೋದನೆ ಇಲ್ಲದೆ ವಲಯ ಆಯುಕ್ತರು ಯಾವುದೇ ಕರಾರನ್ನು ಮಾಡಿಕೊಳ್ಳತಕ್ಕದ್ದಲ್ಲ.

(ಡಿ) ಮೇಯರ್ ಅವರ ಪೂರ್ವಾನುಮೋದನೆ ಇಲ್ಲದೆ ಮುಖ್ಯ ಆಯುಕ್ತರು ಯಾವುದೇ ಕರಾರನ್ನು ಮಾಡಿಕೊಳ್ಳತಕ್ಕದ್ದಲ್ಲ.

(ಇ) ಕರ್ನಾಟಕ ಸಾವ□ಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ, 1999ರ (2000ದ ಕರ್ನಾಟಕ ಅಧಿನಿಯಮ ಸಂಖ್ಯೆ 29) ಉಪಬಂಧಗಳ ಅನುಸಾರ ಅನ್ವಯವಾಗುವ ನಿಯಮಿಸಬಹುದಾದಂಥ ಪ್ರಕ್ರಿಯೆಯನ್ನು ಅನುಸರಿಸದೆ ಪಾಲಿಕೆಯು ಯಾವುದೇ ಕರಾರನ್ನು ಮಾಡಿಕೊಳ್ಳತಕ್ಕದ್ದಲ್ಲ.

(3) ಕರಾರಿನ ನಿಬಂಧನೆಗಳನ್ನು ತಿದ್ದುಪಡಿ ಮಾಡುವುದನ್ನು ಅಥವಾ ಅಂಥ ಕರಾರಿನ ದರವನ್ನು ಬದಲಾಯಿಸುವುದನ್ನು ಪಾಲಿಕೆಯು ಆಯ್ಕೆ ಮಾಡಿಕೊಂಡರೆ ಈ ಪ್ರಕರಣದ ಅಡಿಯಲ್ಲಿ ನಿಯಮಿಸಬಹುದಾದ ಪ್ರಕ್ರಿಯೆಯು ಅನ್ವಯವಾಗತಕ್ಕದ್ದು.

(4) ಪಾಲಿಕೆಯ ಪರವಾಗಿ ಮುಖ್ಯ ಆಯುಕ್ತರು ಅಥವಾ ವಲಯ ಆಯುಕ್ತರು ಮಾಡಿಕೊಂಡ ಪ್ರತಿಯೊಂದು ಕರಾರಿನ ಮೇಲೆ ಹಾಕುವ ಸಾಮಾನ್ಯ ಮೊಹರನ್ನು ಪಾಲಿಕೆಯು ಲಭ್ಯವಾಗಿಸತಕ್ಕದ್ದು.

(5) ಈ ಪ್ರಕರಣದ ಅಡಿಯಲ್ಲಿ ಉಪಬಂಧಿಸಿದುದನ್ನು ಹೊರತುಪಡಿಸಿ ಯಾವುದೇ ಕರಾರು ಪಾಲಿಕೆಗೆ ಬಂಧನಕಾರಿಯಾಗತಕ್ಕದ್ದಲ್ಲ.

139. ಟೆಂಡರ್‌ಗಳ ಆಹ್ವಾನ.- ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ, 1999ದ (2000ದ ಕರ್ನಾಟಕ ಅಧಿನಿಯಮ ಸಂಖ್ಯೆ 29) ನಿಯಮಿಸಬಹುದಾದ ಕಾರ್ಯವಿಧಾನಕ್ಕೆ ಅನುಸಾರವಾಗಿ ಪಾಲಿಕೆಯು ಸ್ವೀಕರಿಸಿದ ಎಲ್ಲಾ ಟೆಂಡರುಗಳನ್ನು ಪ್ರಕ್ರಿಯೆಗೊಳಿಸತಕ್ಕದ್ದು.

140. ಮಾದರಿ ಟೆಂಡರ್ ದಸ್ತಾವೇಜನ್ನು ಸಿದ್ಧಪಡಿಸುವುದು.- ಪ್ರತಿಯೊಂದು ಟೆಂಡರ್‌ನ ಮುಖ್ಯ ನಿಬಂಧನೆಗಳನ್ನು ಗುರುತಿಸತಕ್ಕ ಮಾದರಿ ಟೆಂಡರು ದಸ್ತಾವೇಜನ್ನು ಪಾಲಿಕೆಯು ಸಿದ್ಧಪಡಿಸತಕ್ಕದ್ದು ಮತ್ತು ಅಂಥ ಮಾದರಿ ಟೆಂಡರನ್ನು ಯಾವುದೇ ಕಾಮಗಾರಿಯನ್ನು ಪ್ರಾರಂಭಿಸುವ ಮೊದಲು ಎಲ್ಲಾ ಪಾಲಿಕೆ ಪ್ರಾಧಿಕಾರಗಳು ಅನುಸರಿಸತಕ್ಕದ್ದು.

141. ದತ್ತಾಂಶದ ನಿರ್ವಹಣೆ.- (1) ಮುಖ್ಯ ಆಯುಕ್ತರು ಮತ್ತು ವಲಯ ಆಯುಕ್ತರು, ನಿಯಮಿಸಬಹುದಾದಂಥ ನಮೂನೆಗಳಲ್ಲಿ ಪಾಲಿಕೆಯು ಮಾಡಿಕೊಳ್ಳುವ ಕರಾರುಗಳ ರಿಜಿಸ್ಟರನ್ನು ನಿರ್ವಹಿಸತಕ್ಕದ್ದು.

(2) (1)ನೇ ಉಪಪ್ರಕರಣದ ಅಡಿಯಲ್ಲಿ ನಿರ್ವಹಿಸಿದ ಕರಾರು ರಿಜಿಸ್ಟರನ್ನು, ಸಾರ್ವಜನಿಕ ಜಾಲತಾಣದಲ್ಲಿ, ನಿಯಮಿಸಲಾದಂಥ ನಮೂನೆಯಲ್ಲಿ ಲಭ್ಯವಾಗುವಂತೆ ಮಾಡತಕ್ಕದ್ದು ಮತ್ತು ಕಾಲ ಕಾಲಕ್ಕೆ ಇಂದೀಕರಿಸತಕ್ಕದ್ದು.

ಅಧ್ಯಾಯ- XIII

ತೆರಿಗೆಗಳು

142. ವಿಧಿಸಬಹುದಾದ ತೆರಿಗೆಗಳು.- (1) ಸರ್ಕಾರದ ಸಾಮಾನ್ಯ ಮತ್ತು ವಿಶೇಷ ಆದೇಶಗಳಿಗೆ ಒಳಪಟ್ಟು, ಪಾಲಿಕೆ, ಅಧಿನಿಯಮದಲ್ಲಿ ನಿರ್ದಿಷ್ಟಪಡಿಸಿದಂಥ ದರಗಳನ್ನು ಮೀರದಂತೆ ಈ ಮುಂದಿನ ತೆರಿಗೆಗಳನ್ನು ವಿಧಿಸಬಹುದು:

(ಎ) ಪಾಲಿಕೆಯ ವ್ಯಾಪ್ತಿಯಲ್ಲಿ ಇರುವ ಕಟ್ಟಡಗಳ ಅಥವಾ ಖಾಲಿ ಭೂಮಿ ಅಥವಾ ಎರಡರ ಮೇಲೆ ತೆರಿಗೆ;

(ಬಿ) ವೃತ್ತಿ, ವ್ಯಾಪಾರ, ಉದ್ಯೋಗಕ್ಕೆ ಕರೆಗಳು ಮತ್ತು ಉದ್ಯೋಗಗಳ ಮೇಲೆ ತೆರಿಗೆ;

(ಸಿ) ಮನರಂಜನಾ ಮತ್ತು ವಿನೋದ ಕಾರ್ಯಕ್ರಮಗಳ ಮೇಲೆ ತೆರಿಗೆ;

(ಡಿ) ಹೆಚ್ಚುವರಿ ಸ್ಟಾಂಪ್ ಸುಂಕದ ರೂಪದಲ್ಲಿ ಕೆಲವು ಸ್ವತ್ತುಗಳ ವರ್ಗಾವಣೆ ಮೇಲೆ ಸುಂಕ;

(ಇ) ಪಾಲಿಕೆಯು ತೆರಿಗೆ ನಿರ್ಧರಿಸಲು ಮತ್ತು ಸಂಗ್ರಹಿಸಲು ಕಾನೂನಿನ ಮೂಲಕ ಗೊತ್ತುಪಡಿಸಬಹುದಾಗಿರುವ ಯಾವುವೇ ಇತರ ತೆರಿಗೆಗಳು.

(2) ಕೌನ್ಸಿಲ್‌ನ ಸಾಮಾನ್ಯ ಸಭೆಯಲ್ಲಿ ಅಂಗೀಕರಿಸಿದ ಗೊತ್ತುವಳಿ ಮೂಲಕ, ಪಾಲಿಕೆಯ ತೆರಿಗೆಯನ್ನು ಮತ್ತು ಅಂಥ ತೆರಿಗೆ ದರವನ್ನು ನಿರ್ಧರಿಸುವ ವ್ಯಕ್ತಿಗಳ ಅಥವಾ ಸ್ವತ್ತುಗಳ ಅಥವಾ ಉದ್ಯಮಗಳ ವರ್ಗವನ್ನು ಕುರಿತು ನಿರ್ಣಯಿಸತಕ್ಕದ್ದು.

(3) ಸಮರ್ಪಕ ಕಾರಣಗಳಿಗಾಗಿ ಯಾವುದೇ ಸಮಯದಲ್ಲಿ ಪಾಲಿಕೆಯು, ಚಾಲ್ತಿಯಲ್ಲಿರುವ ಯಾವುದೇ ತೆರಿಗೆಯನ್ನು ಸ್ಥಗಿತಗೊಳಿಸಬಹುದು, ಮಾರ್ಪಾಡು ಮಾಡಬಹುದು ಅಥವಾ ರದ್ದುಗೊಳಿಸಬಹುದು.

ಪರಂತು, ಸರ್ಕಾರವು, ಅಧಿಸೂಚನೆಯ ಮೂಲಕ, ಸರ್ಕಾರವು ಸೂಕ್ತವೆಂದು ಪರಿಗಣಿಸಬಹುದಾದ ಅಂಥ ರೀತಿಯಲ್ಲಿ ಮತ್ತು ಅಂಥ ವ್ಯಾಪ್ತಿಯವರೆಗೆ ಈ ಪ್ರಕರಣದ ಮೇರೆಗೆ ವಿಧಿಸಬಹುದಾದಂತೆ, ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿದಂಥ ಯಾವುದೇ ತೆರಿಗೆಯನ್ನು ವಿಧಿಸಲು ಪಾಲಿಕೆಯನ್ನು ಅಗತ್ಯಪಡಿಸಬಹುದು.

(4) (2)ನೇ ಉಪಪ್ರಕರಣದ ಅಡಿಯಲ್ಲಿ ಕೌನ್ಸಿಲ್ ಅಂಗೀಕರಿಸಿದ ಪ್ರತಿಯೊಂದು ಗೊತ್ತುವಳಿಯನ್ನು, ಸಂಬಂಧಪಟ್ಟ ಎಲ್ಲರ ಗಮನಕ್ಕೆ ತರಲು ಸಾರ್ವಜನಿಕ ಜಾಲತಾಣದಲ್ಲಿ ಪ್ರಕಟಿಸತಕ್ಕದ್ದು.

143. ಸೆಸ್‌ಗಳನ್ನು ವಿಧಿಸುವುದು.- (1) ಪಾಲಿಕೆ, ಈ ಅಧಿನಿಯಮದ ಅಡಿಯಲ್ಲಿ ವಿಧಿಸುವ ತೆರಿಗೆಗೆ ಹೆಚ್ಚುವರಿಯಾಗಿ, ಈ ಮುಂದಿನ ಸೆಸ್‌ಗಳನ್ನು ವಿಧಿಬಹುದು ಮತ್ತು ಸಂಗ್ರಹಿಸಬಹುದು, ಎಂದರೆ:-

(ಎ) ಸರ್ಕಾರದಿಂದ ಅಧಿಸೂಚಿಸಲಾದಂತೆ, ಶೇಕಡಾ 10 ರಷ್ಟು ಮೀರದಂತೆ ಅಂಥ ದರದಲ್ಲಿ ಮೂಲ ಸೌಕರ್ಯಗಳ ಉಪಕರವನ್ನು, ನಗರದೊಳಗಿನ ರಸ್ತೆಗಳನ್ನು ಉಪಯೋಗಿಸುವುದಕ್ಕಾಗಿ ಪ್ರತಿಯೊಂದು ಸೂಕ್ತ ಮೋಟಾರು ವಾಹನಗಳ ಮೇಲೆ ನಿಯಮಿಸಬಹುದಾಗಿರುವ ಮತ್ತು ವಿವಿಧ ವರ್ಗಗಳ ಮೋಟಾರ್ ವಾಹನಗಳಿಗೆ ವಿವಿಧ ದರಗಳನ್ನು ನಿಗದಿಪಡಿಸಬಹುದು.

(ಬಿ) ಸರ್ಕಾರದಿಂದ ಅಧಿಸೂಚಿಸಲಾದಂತೆ , ಘನತ್ಯಾಜ್ಯದ ಸಂಗ್ರಹಣೆ ಮತ್ತು ವಿಲೇವಾರಿಯ ಉದ್ದೇಶಕ್ಕಾಗಿ ನಗರದಲ್ಲಿ ಪ್ರತಿಯೊಂದು ಭೂಮಿ ಅಥವಾ ಕಟ್ಟಡ ಅಥವಾ ಎರಡರ ಮಾಲೀಕ ಅಥವಾ ಅದಿಭೋಗದಾರರ ಮೇಲೆ ಶೇಕಡಾ ಹತ್ತರಷ್ಟನ್ನು ಮೀರದಂತಹ ದರದಲ್ಲಿ ಘನತ್ಯಾಜ್ಯ ನಿರ್ವಹಣೆಯ ಉಪಕರ ಮತ್ತು ಭೂಮಿಗಳು ಅಥವಾ ಕಟ್ಟಡಗಳು ಅಥವಾ ವಿವಿಧ ಪ್ರದೇಶಗಳಲ್ಲಿ ವಿವಿಧ ವರ್ಗಗಳಲ್ಲಿ ವಿವಿಧ ದರಗಳನ್ನು ನಿಗದಿಪಡಿಸಬಹುದು.

(ಸಿ) ಸಕಾ□ರದಿಂದ ಅಧಿಸೂಚಿಸಲಾದ ಅಂತಹ ದರದಲ್ಲಿ ವಿಧಿಸುವ ನಗರ ಸಾರಿಗೆ ಉಪಕರ.

(2) ಉಪಕರದ ರೂಪದಲ್ಲಿ ಸಂಗ್ರಹಿಸಿದ ಎಲ್ಲಾ ಹಣವನ್ನು ಒಂದು ಲೆಕ್ಕಶೀರ್ಷಿಕೆಗೆ ಠೇವಣಿ ಮಾಡತಕ್ಕದ್ದು ಮತ್ತು ಅದನ್ನು ಉಪಕರ ನಿಧಿ ಎಂದು ಕರೆಯತಕ್ಕದ್ದು.

(3) (1)ನೇ ಉಪ-ಪ್ರಕರಣದ ಅಡಿಯಲ್ಲಿ ವಿಧಿಸಲಾದ ಉಪಕರವನ್ನು ನಿಯಮಿಸಬಹುದಾದ ರೀತಿಯಲ್ಲಿ ಪಡೆಯತಕ್ಕದ್ದು ಮತ್ತು ಸಂಗ್ರಹಿಸತಕ್ಕದ್ದು ಮತ್ತು ವಸೂಲು ಮಾಡತಕ್ಕದ್ದು.

(4) ಈ ಪ್ರಕರಣದಲ್ಲಿ ಏನೇ ಒಳಗೊಂಡಿದ್ದಾಗ್ಯೂ ಈ ಪ್ರಕರಣದ ಅಡಿಯಲ್ಲಿ ವಿಧಿಸುವ ಮತ್ತು ಉಪಕರದ ನಿಧ□ರಣೆಯಿಂದಾಗಿ ಬಾಧಿತನಾದ ಯಾರೇ ವ್ಯಕ್ತಿ ನಿರ್ಧರಣೆಯ ಆದೇಶದ ಪ್ರತಿಯನ್ನು ಸ್ವೀಕರಿಸಿದ ಮೂವತ್ತು ದಿನಗಳೊಳಗಾಗಿ ನ್ಯಾಯಾಧೀಕರಣದ ಮುಂದೆ ಅಂತಹ ಆದೇಶದ ವಿರುದ್ಧ ಅಪೀಲನ್ನು ಹೂಡಬಹುದು.

144. ಕಟ್ಟಡಗಳು ಅಥವಾ ಭೂಮಿ ಅಥವಾ ಎರಡರ ಮೇಲಿನ ತೆರಿಗೆಯ ವಿವರಣೆ ಮತ್ತು ವರ್ಗ.- (1) ಕಟ್ಟಡಗಳು ಅಥವಾ ಭೂಮಿ ಅಥವಾ ಎರಡರ ಮೇಲಿನ ತೆರಿಗೆಯನ್ನು ಪಾಲಿಕೆಯ ಮೂಲಕ,-

(ಎ) ವಸತಿ ಕಟ್ಟಡಗಳಿಗಾಗಿ

(ಬಿ) ವ್ಯಾಪಾರ ಕಟ್ಟಡಗಳಿಗಾಗಿ

(ಸಿ) ಖಾಲಿ ಭೂಮಿಗಾಗಿ

- ನಿರ್ಣಯದ ರೂಪದಲ್ಲಿ ವಿಧಿಸಬಹುದಾದ ತೆರಿಗೆಯ ವಾರ್ಷಿಕ ಮೌಲ್ಯದ ಶೇಕಡಾ ಹತ್ತರಪ್ಪನ್ನು ಮೀರದಂತಹ ದರದಲ್ಲಿ ವಿಧಿಸತಕ್ಕದ್ದು.

(2) (1)ನೇ ಉಪಪ್ರಕರಣದ ಅಡಿಯಲ್ಲಿ ನಿರ್ಣಯದ ಅನುಸಾರವಾಗಿ ಪಾಲಿಕೆಯ ಮೂಲಕ ನಿರ್ಧರಿಸಲಾದ ಕಟ್ಟಡಗಳು ಅಥವಾ ಭೂಮಿ ಅಥವಾ ಎರಡರ ಮೇಲಿನ ತೆರಿಗೆಯ ದರವನ್ನು ಪ್ರತಿ ವರ್ಷವೂ ಶೇಕಡಾ ಐದರಷ್ಟು ಹೆಚ್ಚಿಸಬಹುದು.

(3) ಕಟ್ಟಡಗಳು ಅಥವಾ ಖಾಲಿ ಭೂಮಿಗಳು ಅಥವಾ ಎರಡರ ಮೇಲಿನ ತೆರಿಗೆಯನ್ನು ಅಂತಹ ಸ್ವತ್ತಿನ ಮಾಲೀಕರು ಪಾವತಿಸತಕ್ಕದ್ದು. ಕಟ್ಟಡಗಳು ಅಥವಾ ಖಾಲಿ ಭೂಮಿಗಳು ಅಥವಾ ಎರಡರ ಮೇಲಣ ತೆರಿಗೆ, ಭೂಕಂದಾಯವು, ಯಾವುದಾದರೂ ಇದ್ದಲ್ಲಿ, ಸದರಿ ಕಟ್ಟಡಗಳೂ ಅಥವಾ ಖಾಲಿ ಭೂಮಿಗಳು ಅಥವಾ ಎರಡರ ಮೇಲೆ ಮೊದಲ ಹೊಣೆಯಾಗಿ ಸರ್ಕಾರಕ್ಕೆ ಅದರ ತರುವಾಯದ ಬಾಕಿಯನ್ನು ಮತ್ತು ಚರಸ್ವತ್ತಿನ ಮೇಲೆ, ಪೂರ್ವ ಸಂದಾಯಕ್ಕೆ ಒಳಪಟ್ಟಿರತಕ್ಕದ್ದು. ಯಾವುದಾದರೂ ಇದ್ದಲ್ಲಿ, ಅಂತಹ ಕಟ್ಟಡಗಳು ಅಥವಾ ಭೂಮಿಗಳ ಮಿತಿಯಲ್ಲಿ ಅಥವಾ ಅದರ ಮೇಲೆ ಪಡೆಯತಕ್ಕದ್ದು ಮತ್ತು ಅಂತಹ ತೆರಿಗೆಗೆ ಹೊಣೆಯಾದ ವ್ಯಕ್ತಿಗೆ ಸೇರಿಸತಕ್ಕದ್ದು.

(4) ಈ ಅಧಿನಿಯಮದಲ್ಲಿ ತದ್ವಿರುದ್ಧವಾದುದು ಏನೇ ಇದ್ದರೂ, ಈ ಅಧಿನಿಯಮದ ಮೇರೆಗೆ ಉಪಬಂಧಿಸಿದ ವಿನಾಯಿತಿಗಳಿಗೆ ಮತ್ತು ನಿಯಮಿಸಬಹುದಾದಂಥ ನಿಯಮಗಳಿಗೆ ಒಳಪಟ್ಟು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಪ್ರದೇಶದ ನಗರದೊಳಗೆ ಇರುವ ಎಲ್ಲಾ ಕಟ್ಟಡಗಳಿಗೆ ಅಥವಾ ಖಾಲಿ ಭೂಮಿಗಳಿಗೆ ಅಥವಾ ಅವೆರಡಕ್ಕೂ ಪ್ರತಿವರ್ಷವೂ ಈ ಮುಂದಿನ ರೀತಿಯಲ್ಲಿ ಆಸ್ತಿ ತೆರಿಗೆಯನ್ನು ವಿಧಿಸತಕ್ಕದ್ದು.

(5) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು, ಅಂಗೀಕರಿಸಿದ ನಿರ್ಣಯದ ಮೂಲಕ, ಕಟ್ಟಡಕ್ಕೆ, ಖಾಲಿ ಭೂಮಿಗೆ ಅಥವಾ ಅವೆರಡಕ್ಕೂ ತೆರಿಗೆ ವಿಧಿಸಬಹುದಾದ ವಾರ್ಷಿಕ ಮೌಲ್ಯದ ಶೇಕಡ 10ಕ್ಕೆ ಹೆಚ್ಚಿಲ್ಲದಂತೆ ಸ್ವತ್ತು ತೆರಿಗೆಯನ್ನು ವಿಧಿಸತಕ್ಕದ್ದು . ಒಂದು ಕಟ್ಟಡಕ್ಕೆ, ಖಾಲಿ ಭೂಮಿಗೆ ಅಥವಾ ಅವೆರಡಕ್ಕೂ ತೆರಿಗೆ ವಿಧಿಸಬಹುದಾದ ವಾರ್ಷಿಕ ಮೌಲ್ಯವನ್ನು, ಕಟ್ಟಡದ, ಖಾಲಿ ಭೂಮಿಯ ಅಥವಾ ಅವೆರಡರ ಒಟ್ಟು ನಿರ್ಮಿತ ವಿಸ್ತೀರ್ಣದೊಂದಿಗೆ ಸಂವಾದಿ ``ಘಟಕ ಯೂನಿಟ್ ವಿಸ್ತೀರ್ಣ ಮೌಲ್ಯ" ವನ್ನು ಗುಣಿಸುವ ಮೂಲಕ ಬಂದ ಗುಣಲಬ್ಧವನ್ನು ಹತ್ತು ತಿಂಗಳುಗಳಿಗೆ, ಮತ್ತು ಕಟ್ಟಡವು ಎಷ್ಟು ಹಳೆಯದು ಎಂಬ ಆಧಾರದ ಮೇಲೆ ನಿಯಮಿಸಬಹುದಾದಂಥ ದರದಲ್ಲಿ ಸವಕಳಿಯನ್ನು ಕಳೆದು ಲೆಕ್ಕ ಹಾಕತಕ್ಕದ್ದು.

ವಿವರಣೆ.- ಈ ಪ್ರಕರಣದ ಉದ್ದೇಶಕ್ಕಾಗಿ, ``ಯೂನಿಟ್ ವಿಸ್ತೀರ್ಣ ಮೌಲ್ಯ" ಎಂದರೆ, ಸ್ಥಳ, ಕಟ್ಟಡ ನಿರ್ಮಾಣದ ಬಗೆ, ಖಾಲಿ ಭೂಮಿಯು ಅಥವಾ ಕಟ್ಟಡವು ಯಾವ ಬಳಕೆಗಾಗಿ ಇದೆಯೋ ಆ ಬಳಕೆಯ ಸ್ವರೂಪ, ಖಾಲಿ ಭೂಮಿಯ ವಿಸ್ತೀರ್ಣ, ಕಟ್ಟಡ ನಿರ್ಮಿತ ವಿಸ್ತೀರ್ಣ, ಕಟ್ಟಡ ಎಷ್ಟು ವರ್ಷ ಹಳೆಯದ್ದು, ವಸತಿಯೇತರ ಕಟ್ಟಡದಲ್ಲಿ ವಾಹನಗಳ ನಿಲುಗಡೆಗೆ ಶುಲ್ಕ ವಿಧಿಸಲಾಗುವುದೋ ಆ ವಾಹನ ನಿಲುಗಡೆ ವಿಸ್ತೀರ್ಣ ಮತ್ತು ನಿಯಮಿಸಬಹುದಾದಂಥ ಇತರ ಮಾನದಂಡಗಳನ್ನು ಗಮನದಲ್ಲಿಟ್ಟುಕೊಂಡು ಸಮೂಹ ಮೌಲ್ಯ ನಿರ್ಣಯ ವಿಧಾನ ಅಥವಾ ಸ್ಥಿರಾಸ್ತಿ ಮಾರುಕಟ್ಟೆ ಮಾಹಿತಿ ಅಥವಾ ಯಾವುದೇ ಈ ಎಲ್ಲಾ ಮೂಲಗಳಿಂದ ಅಥವಾ ಈ ಮೂಲಗಳ ಸಂಯೋಜನೆಯ ಮೂಲಕ, ತಾನು ಪರ್ಯಾಪ್ತ ಮತ್ತು ಸಮಂಜಸವೆಂದು ಪರಿಗಣಿಸಬಹುದಾದ ಅಥವಾ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಮುಖ್ಯ ಆಯುಕ್ತರು ನಿರ್ಧರಿಸಿದ ಸರಾಸರಿ ಮಾರುಕಟ್ಟೆ ದರದ ಆಧಾರದ ಮೇಲೆ ಪ್ರತಿ ತಿಂಗಳಿಗೆ ಪ್ರತಿ ಚದರಡಿಯಿಂದ ನಿರೀಕ್ಷಿಸಲಾದ ಆದಾಯದ ಸರಾಸರಿ ದರ. ವಲಯಗಳನ್ನಾಗಿ ವರ್ಗೀಕರಿಸಿದ ವಿವಿಧ ಪ್ರದೇಶಕ್ಕೆ ಅಥವಾ ಬೀದಿಗೆ, ಖಾಲಿ ಭೂಮಿಯು ಅಥವಾ ಕಟ್ಟಡವು ಯಾವ ಬಳಕೆಗಾಗಿ ಇದೆಯೋ ಆ ಬಳಕೆಯ ವಿವಿಧ ಸ್ವರೂಪಕ್ಕೆ ಕಟ್ಟಡಗಳ ಮತ್ತು ಖಾಲಿ ಭೂಮಿಗಳ ವಿವಿಧ ವರ್ಗಗಳಿಗೆ ಬೇರೆಬೇರೆ ದರಗಳನ್ನು ನಿಗದಿಪಡಿಸಬಹುದು:

ಪರಂತು, ``ಯೂನಿಟ್ ವಿಸ್ತೀರ್ಣ ಮೌಲ್ಯ" ದಿಂದ ಬಾಧಿತರಾಗಬಹುದಾದ ವ್ಯಕ್ತಿಗಳ ಮಾಹಿತಿಗಾಗಿ ಮತ್ತು ಈ ಬಗ್ಗೆ ಯಾವುದೇ ಮನವಿಯನ್ನು ಸಲ್ಲಿಸುವುದಕ್ಕೆ ಅಥವಾ ಸಲಹೆಗಳನ್ನು ನೀಡುವುದಕ್ಕೆ ಒಂದು ಅವಕಾಶವನ್ನು ನೀಡುವುದಕ್ಕಾಗಿ, ಅದನ್ನು ಈ ಹಿಂದೆಯೇ ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸಿದ್ದ ಹೊರತು, ಅಂಥ ಯಾವುದೇ ಯೂನಿಟ್ ವಿಸ್ತೀರ್ಣ ಮೌಲ್ಯವೂ ಜಾರಿಗೆ ಬರತಕ್ಕದ್ದಲ್ಲ:

ಮತ್ತೂ ಪರಂತು, ಒಂದು ಕಟ್ಟಡಕ್ಕೆ ಹೊಂದಿಕೊಂಡಿರುವ ಮತ್ತು ಅಂಥ ಕಟ್ಟಡವು ಆವರಿಸಿರುವ ವಿಸ್ತೀರ್ಣದ ಮೂರರಷ್ಟನ್ನು ಮೀರದ ವಿಸ್ತೀರ್ಣದ ಭೂಮಿಗೆ ಸ್ವತ್ತು ತೆರಿಗೆಯಿಂದ ವಿನಾಯಿತಿ ನೀಡತಕ್ಕದ್ದು:

ಅಲ್ಲದೆ ಪರಂತು, ಅಧಿಸೂಚಿಸಬಹುದಾದಂಥ ಪರತ್ತುಗಳಿಗೆ ಒಳಪಟ್ಟು ಮತ್ತು ಅಂಥ ಸನ್ನಿವೇಶಗಳಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಮುಖ್ಯ ಆಯುಕ್ತರು,-

(ಎ) ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿಯಿಂದ ಅಥವಾ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಮುಖ್ಯ ಆಯುಕ್ತರಿಂದ ಕೊಳಚೆ ಪ್ರದೇಶವೆಂದು ಘೋಷಿಸಲ್ಪಟ್ಟಿರುವ ಒಂದು ಪ್ರದೇಶದಲ್ಲಿರುವ 300 ಚದರಡಿಗಿಂತಲೂ ಕಡಿಮೆ ವಿಸ್ತೀರ್ಣದ ನಿರ್ಮಿತ ಪ್ರದೇಶದ; ಮತ್ತು

(ಬಿ) ನಿವಾಸೇತರ ಕಟ್ಟಡದಲ್ಲಿ ವಾಹನ ನಿಲುಗಡೆ ಸ್ಥಳವಾಗಿ ಬಳಸುತ್ತಿರುವ ಮತ್ತು ಅದರ ಮಾಲೀಕ ಅಥವಾ ಅಧಿಭೋಗದಾರನು ಅದನ್ನು ಬಳಸುತ್ತಿರುವುದಕ್ಕಾಗಿ ಶುಲ್ಕ ವಿಧಿಸಲಾಗುತ್ತಿರುವ ಸ್ಥಳದ;

(ಸಿ) ಅವರು ಸೂಕ್ತವೆಂದು ಭಾವಿಸಬಹುದಾದಂಥ ಕಟ್ಟಡ ಅಥವಾ ನಿರ್ಮಿತಿಯ ಯಾವುವೇ ಇತರ ವರ್ಗಗಳ- ಸಂಬಂಧದಲ್ಲಿ, ವಲಯ ವರ್ಗೀಕರಣವನ್ನು ಗಣನೆಗೆ ತೆಗೆದುಕೊಳ್ಳದೆ, (2)ನೇ ಉಪ ಪ್ರಕರಣದ ಮೇರೆಗಿನ ತೆರಿಗೆಗೆ ಬದಲಾಗಿ ಒಂದು ಇಡಿಗಂಟು ಮೊತ್ತವನ್ನು ವಾರ್ಷಿಕ ತೆರಿಗೆಯನ್ನಾಗಿ ನಿಗದಿಪಡಿಸಬಹುದು.

(6) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು, ಸರ್ಕಾರಿ ಭೂಮಿಯಲ್ಲಿ, ಯಾವುದೇ ಸ್ಥಳೀಯ ಸಂಸ್ಥೆಗೆ, ಯಾವುದೇ ಶಾಸನಬದ್ಧ ಸಂಸ್ಥೆಗೆ ಅಥವಾ ಸರ್ಕಾರದ ಒಡೆತನದಲ್ಲಿರುವ ಅಥವಾ ನಿಯಂತ್ರಣದಲ್ಲಿರುವ ಒಂದು ಸಂಘ ಸಂಸ್ಥೆಗೆ ಸೇರಿದ ಭೂಮಿಯಲ್ಲಿ, ಕಾನೂನು ಬಾಹಿರವಾಗಿ ನಿರ್ಮಿಸಿದ ಕಟ್ಟಡವನ್ನು ಹೊರತುಪಡಿಸಿ, ಕಟ್ಟಡ ಉಪ ವಿಧಿಗಳು ಉಪಬಂಧಗಳನ್ನು ಉಲಂಘಿಸಿ ಕಟ್ಟಿರುವ ಅಥವಾ ಅನಧಿಕೃತ ಲೇಔಟ್‌ನಲ್ಲಿ ಅಥವಾ ರೆವಿನ್ಯೂ ಭೂಮಿಯಲ್ಲಿ ಕಟ್ಟಿರುವ ಕಟ್ಟಡವು ಸೇರಿದಂತೆ ಪ್ರತಿಯೊಂದು ಕಟ್ಟಡಕ್ಕೆ, ಖಾಲಿ ಭೂಮಿಗೆ ಅಥವಾ ಅವೆರಡನ್ನೂ ಒಳಗೊಂಡು ಅಥವಾ ಅಧಿಭೋಗ ಪ್ರಮಾಣ ಪತ್ರ ಅಥವಾ ಕಟ್ಟಡ ನಿರ್ಮಾಣ ಮುಕ್ತಾಯ ಪ್ರಮಾಣಪತ್ರವನ್ನು ನೀಡದೆಯೇ ವಾಸಕ್ಕೆ ಬಳಸುತ್ತಿರುವ ಕಟ್ಟಡಕ್ಕೆ ಎರಡು ಪಟ್ಟು ಸ್ವತ್ತು ತೆರಿಗೆಯನ್ನು ವಿಧಿಸಬಹುದು ಮತ್ತು ಅದನ್ನು ವಸೂಲು ಮಾಡಬಹುದು. ಅಂಥ ಕಟ್ಟಡಗಳಿಂದ ವಸೂಲು ಮಾಡಿದ ಸ್ವತ್ತು ತೆರಿಗೆಯ ಲೆಕ್ಕವನ್ನು ಒಂದು ಪ್ರತ್ಯೇಕ ರಿಜಿಸ್ಟರಿನಲ್ಲಿ ಇಡತಕ್ಕದ್ದು:

ಪರಂತು, ಈ ಪ್ರಕರಣದ ಮೇರೆಗೆ ಅಂಥ ಕಟ್ಟಡಗಳಿಗೆ ಸ್ವತ್ತು ತೆರಿಗೆಯನ್ನು ವಿಧಿಸುವುದು ಮತ್ತು ಅದನ್ನು ವಸೂಲು ಮಾಡುವುದು, ಮಾಡಿದ ಯಾವುದೇ ಉಲಂಘನೆಯನ್ನು ಸಕ್ರಮಗೊಳಿಸಲು ಯಾವುದೇ ಹಕ್ಕನ್ನಾಗಲಿ ಅಥವಾ ಅಂಥ ಕಟ್ಟಡಕ್ಕೆ ಹಕ್ಕುಸ್ವಾಮ್ಯ, ಒಡೆತನ ಅಥವಾ ಕಾನೂನಿನ ಸ್ಥಾನಮಾನವನ್ನಾಗಲಿ ದೊರಕಿಸಿ ಕೊಡುವುದಿಲ್ಲ. ಅಂಥ ಕಟ್ಟಡಗಳು ಕಾನೂನಿನ ಉಲಂಘನೆಗಾಗಿ ಈ ಅಧಿನಿಯಮದ ಅಥವಾ ಯಾವುದೇ ಇತರ ಕಾನೂನಿನ ಉಪಬಂಧಗಳನ್ವಯ ಯಾವುದೇ ಕ್ರಮಕ್ಕೆ ಗುರಿಯಾಗಲು ಯಾವಾಗಲೂ ಬದ್ಧವಾಗಿರತಕ್ಕದ್ದು.

(7) ನಿವಾಸದ ಉದ್ದೇಶಕ್ಕಾಗಿ ಬಳಸುತ್ತಿರುವ ಸಂಪೂರ್ಣ ವಾಸದ ಕಟ್ಟಡದ ಸಂಬಂಧದಲ್ಲಿ ಮತ್ತು ಪಾಲಿಕೆಯ ಶಿಫಾರಸ್ಸಿನ ಮೇಲೆ ರಾಜ್ಯ ಸರ್ಕಾರವು ಅಧಿಸೂಚಿಸಬಹುದಾದಂಥ ನಿವಾಸೇತರ ಉದ್ದೇಶಕ್ಕಾಗಿ ಸಂಪೂರ್ಣತಕ್ಕೆ ಬಳಸುತ್ತಿರುವಂಥ ಕಟ್ಟಡದ ವರ್ಗದ ಸಂಬಂಧದಲ್ಲಿ ಸಂದಾಯ ಮಾಡತಕ್ಕ ಸ್ವತ್ತು ತೆರಿಗೆಯನ್ನು ಶೇಕಡಾ ಐವತ್ತರಷ್ಟು ಇಳಿಸತಕ್ಕದ್ದು.

(8) ಸ್ವತ್ತು ತೆರಿಗೆಯನ್ನು ಪಾವತಿ ಮಾಡಲು ಮೂಲತಃ ಹೊಣೆಗಾರನಾದ ವ್ಯಕ್ತಿಯು, ತೆರಿಗೆಯನ್ನು ಎರಡು ಸಮನಾದ ಕಂತುಗಳಲ್ಲಿ ಡಿಮಾಂಡ್ ಡ್ರಾಫ್ಟ್ ಮೂಲಕ ಅಥವಾ ಇ-ಪಾವತಿಯ ಮೂಲಕ ಪಾವತಿ ಮಾಡತಕ್ಕದ್ದು. ಮೊದಲನೆಯ ಕಂತನ್ನು ಪ್ರತಿ ಆರ್ಥಿಕ ವರ್ಷದ ಮೇ 30 ರೊಳಗೆ ಮತ್ತು ಎರಡನೇ ಕಂತನ್ನು ನವೆಂಬರ್ 29ರೊಳಗೆ ಪಾವತಿ ಮಾಡತಕ್ಕದ್ದು. ಆದಾಗ್ಯೂ ಸ್ವತ್ತು ತೆರಿಗೆಯನ್ನು ಪಾವತಿ ಮಾಡಲು ಮೂಲತಃ ಹೊಣೆಗಾರನಾದ ಮಾಲೀಕನು ಅಥವಾ ಅಧಿಭೋಗದಾರನು ಅಥವಾ ವ್ಯಕ್ತಿಯು ಒಂದೇ ಕಂತಿನಲ್ಲಿ ಸಂದಾಯ ಮಾಡುವುದನ್ನೂ ಆಯ್ಕೆ ಮಾಡಿಕೊಳ್ಳಬಹುದು:

ಪರಂತು, ತೆರಿಗೆಯನ್ನು ಪಾವತಿ ಮಾಡಲು ಹೊಣೆಗಾರನಾದ ಮಾಲೀಕನು ಅಥವಾ ಅಧಿಭೋಗದಾರನು ಪ್ರತಿ ವರ್ಷದ ಪ್ರಾರಂಭದ ದಿನಾಂಕದಿಂದ ಒಂದು ತಿಂಗಳೊಳಗೆ ವಿವರ ಪತ್ರವನ್ನು ಸಲ್ಲಿಸಿದರೆ ಮತ್ತು ಇಡೀ ವರ್ಷದ ಸ್ವತ್ತು ತೆರಿಗೆಯನ್ನು ಸಹ ಪಾವತಿ ಮಾಡಿದರೆ, ಆತನು ಸಂದಾಯ ಮಾಡತಕ್ಕ ತೆರಿಗೆಯ ಮೇಲೆ ಶೇಕಡಾ ಐದರಷ್ಟು ರಿಯಾಯತಿಯನ್ನು ಆತನಿಗೆ ನೀಡತಕ್ಕದ್ದು:

ಮತ್ತೂ ಪರಂತು, ಸರ್ಕಾರವು ಪಾಲಿಕೆಯ ಶಿಫಾರಸ್ಸಿನ ಮೇಲೆ, ಅಧಿಸೂಚನೆಯ ಮೂಲಕ ಯಾವುದೇ ಹಣಕಾಸು ವರ್ಷಗಳಿಗೆ ಸಂಬಂಧಿಸಿದಂತೆ ದಂಡವಿಲ್ಲದೆ ಸ್ವತ್ತು ತೆರಿಗೆಯನ್ನು ಪಾವತಿ ಮಾಡಲು ಮತ್ತು ಶೇಕಡ ಐದರಷ್ಟು ರಿಯಾಯಿತಿ ಸೌಲಭ್ಯವನ್ನು ಪಡೆಯಲು ಕಾಲಪರಿಮಿತಿಯನ್ನು ವಿಸ್ತರಿಸಬಹುದು:

ಅಲ್ಲದೆ ಪರಂತು ನಿಯಮಿಸಬಹುದಾದಂತೆ ಅನಿಶ್ಚಿತ ಪರಿಶೀಲನೆಗೆ (random scrutiny) ಒಳಪಟ್ಟು, ಮೊದಲ ಬಾರಿಗೆ ಅಥವಾ ಕರ್ನಾಟಕ ಸ್ವಾಂಪು ಅಧಿನಿಯಮ, 1957ರ (1957ರ ಕರ್ನಾಟಕ ಅಧಿನಿಯಮ 34) 45ಬಿ ಪ್ರಕರಣದ ಅಡಿಯಲ್ಲಿ ಸ್ವತ್ತಿನ ಮಾರ್ಗಸೂಚಿ ಮೌಲ್ಯವು ಪರಿಷ್ಕೃತಗೊಂಡ ವರ್ಷಕ್ಕಾಗಿ ದಾಖಲಿಸಿದ ತೆರಿಗೆ ವಿವರಪಟ್ಟಿಕೆಯು ಪ್ರತಿಯೊಂದು ಬ್ಲಾಕ್ ವರ್ಷಕ್ಕೆ ಅನ್ವಯವಾಗುವ ತೆರಿಗೆ ಪಾವತಿಗೆ ಆಧಾರ ವರ್ಷವಾಗತಕ್ಕದ್ದು.

(9) ಯಾರೇ ಮಾಲೀಕನು ಅಥವಾ ಅದಿಭೋಗದಾರನು (7)ನೇ ಉಪಪ್ರಕರಣದ ಮೇರೆಗೆ ಯಾವುದೇ ವಿವರ ಪತ್ರವನ್ನು ಸಲ್ಲಿಸುವ ಮೊದಲು ಲೆಕ್ಕ ಹಾಕಲಾದ ಅರ್ಧವಾರ್ಷಿಕ ತೆರಿಗೆಯನ್ನು ಮುಂಚಿತವಾಗಿಯೇ ಪಾವತಿ ಮಾಡತಕ್ಕದ್ದು ಅಥವಾ ಆತನು ಸತ್ಯವಾದುದು ಮತ್ತು ಪೂರ್ಣವಾದುದು ಎಂದು ಘೋಷಿಸಿ ಸಲ್ಲಿಸಿದ ವಿವರ

ಪತ್ರದ ಆಧಾರದ ಮೇಲೆ ವರ್ಷಕ್ಕೆ ಪಾವತಿ ಮಾಡಬೇಕಾದ ಸ್ವತ್ತು ತೆರಿಗೆಯ ಪೂರ್ಣ ಮೊಬಲಗನ್ನು ಪಾವತಿ ಮಾಡತಕ್ಕದ್ದು.

(10) ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ, ರಾಜ್ಯ ಸರ್ಕಾರವು ಈ ಪ್ರಕರಣದ ಮೇರೆಗೆ ಸ್ವತ್ತು ತೆರಿಗೆಯನ್ನು ಪಾವತಿ ಮಾಡಲು ಹೊಣೆಗಾರನಾದ ಪ್ರತಿಯೊಬ್ಬ ಮಾಲೀಕನು ಅಥವಾ ಅಧಿಭೋಗದಾರನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಮುಖ್ಯ ಆಯುಕ್ತರಿಗೆ ಅಥವಾ ಈ ಸಂಬಂಧದಲ್ಲಿ ಅವರು ಅಧಿಕೃತಗೊಳಿಸಿದ ಅಧಿಕಾರಿಗೆ ಅಥವಾ ಏಜನ್ಸಿಗೆ ಪ್ರತಿ ವರ್ಷವು ಸಲ್ಲಿಸತಕ್ಕ ವಿವರಪತ್ರದ ನಮೂನೆಯನ್ನು ಮತ್ತು ರೀತಿಯನ್ನು ನಿಯಮಿಸಬಹುದು.

(11) ಯಾವುದೇ ಕಟ್ಟಡದ ಅಥವಾ ಖಾಲಿ ಭೂಮಿಯ ಅಥವಾ ಎರಡರ ಮಾಲೀಕ ಅಥವಾ ಅಧಿಭೋಗದಾರನು ವಿವರಪಟ್ಟಿಕೆಗಳನ್ನು ಸಲ್ಲಿಸುವುದನ್ನು ಮತ್ತು ಈ ಪ್ರಕರಣದ ಅಡಿಯಲ್ಲಿ ತೆರಿಗೆ ನಿರ್ಧರಿಸುವುದನ್ನು ಸುಲಭಗೊಳಿಸುವ ಸಲುವಾಗಿ, ಮುಖ್ಯ ಆಯುಕ್ತರು ಯೂನಿಟ್ ವಿಸ್ತೀರ್ಣ ಮೌಲ್ಯ ಹಾಗೂ ಆನಂತರ ಪಾವತಿಸಬೇಕಾದ ಸ್ವತ್ತು ತೆರಿಗೆಯನ್ನು ನಿರ್ಧರಿಸುವುದಕ್ಕಾಗಿ ಮಾರ್ಗಸೂಚಿಗಳನ್ನು ಹೊರಡಿಸತಕ್ಕದ್ದು.

(12) ವಾಣಿಜ್ಯ ಕಟ್ಟಡವನ್ನು ಹೊರತುಪಡಿಸಿ ವಸತಿ ಕಟ್ಟಡದ ಮಾಲೀಕ ಅಥವಾ ಅದಿಭೋಗದಾರನು ತೆರಿಗೆ ನಿರ್ಧರಣೆಗಾಗಿ ಸಲ್ಲಿಸಿದ ಪ್ರತಿಯೊಂದು ವಿವರಪಟ್ಟಿಕೆಯು, ನಿಯಮಿಸಬಹುದಾದಂತಹ ರೀತಿಯಲ್ಲಿ ಸಲ್ಲಿಸಿದ ವಿವರಪಟ್ಟಿಕೆಗಳಿಗೆ, ಮುಖ್ಯ ಆಯುಕ್ತರು ಅಥವಾ ಆವರಿಂದ ಅಧಿಕೃತಗೊಳಿಸಿದ ಅಧಿಕಾರಿ ಅಥವಾ ಅಧಿಕೃತಗೊಳಿಸಿದ ಅಧೀನ ಅಧಿಕಾರಿಯು ಕೈಗೊಳ್ಳಬಹುದಾದ ಅನಿಶ್ಚಿತ ರೀತಿಯ ಪರಿಶೀಲನೆಯ ಶೇಕಡಾ 10ರಷ್ಟು ಪ್ರಕರಣಗಳನ್ನು ಹೊರತುಪಡಿಸಿದಂತೆ ಉಳಿದ ಪ್ರಕರಣಗಳಿಗೆ ತೆರಿಗೆಯನ್ನು ಸಂದಾಯ ಮಾಡುವುದಕ್ಕೆ ನಿರ್ಧರಿಸಲಾಗಿದೆ ಎಂದು ಭಾವಿಸತಕ್ಕದ್ದು.

ಪರಂತು, ಮುಖ್ಯ ಆಯುಕ್ತರು ಅಥವಾ ಆತನ ಅಧಿಕೃತಗೊಳಿಸಿದ ಅಧಿಕಾರಿಯ ಸ್ವಪ್ರೇರಣೆಯಿಂದ ಅಥವಾ ತೆರಿಗೆಯನ್ನು ಸಂದಾಯ ಮಾಡುವುದಕ್ಕೆ ಹೊಣೆಗಾರನಾಗಿರುವ ವ್ಯಕ್ತಿಯಿಂದ ತೆರಿಗೆಯನ್ನು ತಪ್ಪಿಸಲಾಗಿದೆ ಎಂಬ ಸಂದರ್ಭದಲ್ಲಿ ಅನ್ಯಥಾ ನಂಬಲು ಕಾರಣವಿದೆ ಎಂಬುದಾಗಿದೆ ಆತನು ಅಂತಹ ಕಟ್ಟಡಗಳು ಅಥವಾ ಖಾಲಿ ಜಾಗಗಳು ಮತ್ತು ತೆರಿಗೆ ನಿರ್ಧರಣೆಯ ಕಾರಣಗಳನ್ನು ತಪಾಸಣೆಯನ್ನು ಮಾಡಿಸಬಹುದು.

(13) ಸಲ್ಲಿಸಲಾದ ವಿವರ ಪಟ್ಟಿಕೆಗಳ ಅನಿಶ್ಚಿತ ರೀತಿಯ ಪರಿಶೀಲನೆಯ ಉದ್ದೇಶಕ್ಕಾಗಿ ಅಥವಾ ಯಾವುದೇ ಕಟ್ಟಡಗಳು ಅಥವಾ ಜಾಗಗಳು ಅಥವಾ ಎರಡರ ಸಂಬಂಧದಲ್ಲಿ (7)ನೇ ಉಪ ಪ್ರಕರಣದ ಅಡಿಯಲ್ಲಿ ಅಗತ್ಯಪಡಿಸಲಾದಂತೆ ವಿವರ ಪಟ್ಟಿಕೆಗಳನ್ನು ಸಲ್ಲಿಸದೆಯಿರುವ ಸಂದರ್ಭದಲ್ಲಿ, ಮುಖ್ಯ ಆಯುಕ್ತರು ಅಥವಾ ಇದರ ಪರವಾಗಿರುವಲ್ಲಿನ ಆತನಿಂದ ಅಧಿಕೃತಗೊಳಿಸಿದ ಯಾವುದೇ ವ್ಯಕ್ತಿಯು ಮಾಲೀಕರಿಗೆ ನೋಟೀಸ್ ನೀಡಿದ ತರುವಾಯ ಯಾವುದೇ ಭೂಮಿ ಅಥವಾ ಕಟ್ಟಡದ ನಮೂದನೆ, ಪರಿಶೀಲನೆ, ಮೋಜಣಿದಾರರ ಅಳತೆಯನ್ನು ಮಾಡಬಹುದು. ಮಾಲೀಕನು ಅಗತ್ಯಪಡಿಸಿದ ಮಾಹಿತಿ ಮತ್ತು (5) ನೇ ಉಪಪ್ರಕರಣದ ಅಡಿಯಲ್ಲಿಅಂತಹ ಪರಿಶೀಲನೆಯ ಮತ್ತು ಸಂಗ್ರಹಿಸಿದ ಮಾಹಿತಿಯ ಆಧಾರದ ಮೇಲೆ ಅವಶ್ಯಕವಾಗಿ ಒದಗಿಸಲು ಬದ್ಧವಾಗಿರತಕ್ಕದ್ದು, ಆತನ ಸ್ವತ್ತನ್ನು ಮೌಲ್ಯಮಾಪನ ಮಾಡತಕ್ಕದ್ದು ಮತ್ತು ಸಂಬಂಧಪಟ್ಟ ಮಾಲೀಕ ಅಥವಾ ಅಧಿಭೋಗದಾರನಿಗೆ ನಿರ್ಧರಣೆಯ ಆದೇಶದ ಒಂದು ಪ್ರತಿಯನ್ನು ಕಳುಹಿಸತಕ್ಕದ್ದು. ಮತ್ತು ಅಂತಹ ಯಾವುದೇ ಕಟ್ಟಡ ಅಥವಾ ಖಾಲಿ ಜಾಗಗಳನ್ನು ಪ್ರವೇಶಿಸುವ ಹಾಗೂ ಅದರ ಮೇಲೆ ಸೂರ್ಯೋದಯ ಮತ್ತು ಸೂರ್ಯಾಸ್ತದ ನಡುವೆ ಸಿದ್ಧಗೊಳಿಸತಕ್ಕದ್ದು.

(14) ಆವರಣಗಳ ತಪಾಸಣೆಯನ್ನು ನಡೆಸಲು ಅಧಿಕೃತಗೊಳಿಸಿದ ಅಧಿಕಾರಿಯು ಪ್ರವೇಶಿಸುವುದನ್ನು ಸ್ವತ್ತಿನ ಮಾಲೀಕ ಅಥವಾ ಅಧಿಭೋಗದಾರನು ನಿರಾಕರಿಸಿದರೆ, ಅಧಿಕಾರಿಯು ಯುಕ್ತ ಅವಕಾಶವನ್ನು ನೀಡಿದ ತರುವಾಯ ನಿರಾಕರಣೆಯನ್ನು ದಾಖಲಿಸತಕ್ಕದ್ದು ಮತ್ತು ಆತನ ಅತ್ಯುತ್ತಮ ವಿವೇಚನೆಯಲ್ಲಿ ಸ್ವತ್ತಿನ ಮೌಲ್ಯ ನಿರ್ಧರಣೆಯನ್ನು ಮುಂದುವರಿಸತಕ್ಕದ್ದು.

ಪರಂತು, ಮಾನವ ವಸತಿಯನ್ನು ಯುಕ್ತ ಗೌರವವಾಗಿ ಬಳಸಿದ ಕಟ್ಟಡಗಳ ಸಂದರ್ಭದಲ್ಲಿ, ಅಧಿಭೋಗದಾರರು ಸಾಮಾಜಿಕ ಮತ್ತು ಧಾರ್ಮಿಕ ರೂಢಿಗಳಿಗೆ ಸಲ್ಲಿಸತಕ್ಕದ್ದು ಮತ್ತು ಒಬ್ಬ ಮಹಿಳೆಯ ವಾಸ್ತವಿಕ ಅಧಿಭೋಗದಲ್ಲಿ ಅಪಾರ್ಟಮೆಂಟನ್ನು ಅವಳು ಹಿಂತೆಗೆದುಕೊಳ್ಳಲು ಸ್ವತಂತ್ರವಿದ್ದು ಮತ್ತು ಹಿಂತೆಗೆದುಕೊಳ್ಳುವುದಕ್ಕಾಗಿ ಆಕೆಗೆ ಪ್ರತಿಯೊಂದು ಯುಕ್ತ ಸೌಲಭ್ಯವನ್ನು ಒದಗಿಸಲಾಗಿದೆ ಎಂಬುದಾಗಿ ಆಕೆಯ ತಿಳಿಯಪಡಿಸುವವರೆಗೂ ಪ್ರವೇಶಿಸತಕ್ಕದ್ದಲ್ಲ.

(15) ಅನಿಶ್ಚಿತ ರೀತಿಯ ಪರಿಶೀಲನೆಯ ಮೇಲೆ, ಅಧಿಕೃತ ಅಧಿಕಾರಿಯು ಒದಗಿಸಿರುವ ಯಾವುದೇ ವಿವರ ಪಟ್ಟಿಕೆಗಳ ಮೌಲ್ಯ ನಿರ್ಧರಣೆಯು ತಪ್ಪಾಗಿದೆ ಎಂದು ನಂಬಲು ಕಾರಣಗಳಿವೆ ಎಂಬುದಾಗಿ ಭಾವಿಸಿದ್ದಲ್ಲಿ ಅಥವಾ ಸ್ವತ್ತಿನ ತೆರಿಗೆಯನ್ನು ತಪ್ಪಿಸುವ ಪರಿಣಾಮವಾಗಿ ಕಡಿಮೆ ನಿರ್ಧರಣೆ ಯನ್ನು ಮಾಡಿದ್ದಲ್ಲಿ,-

(ಎ) ದಾಖಲೆಯಲ್ಲಿ ಲಭ್ಯವಿರುವ ಮಾಹಿತಿಯ ಆಧಾರದ ಮೇಲೆ ಪ್ರತ್ಯಕ್ಷ ತಪಾಸಣೆಯ ತರುವಾಯ, ಈ ಪ್ರಕರಣದ ಮೇರೆಗೆ ಉಪಬಂಧಿಸಿದ ರೀತಿಯಲ್ಲಿ ಸ್ವತ್ತಿನ ಪುನಃ ನಿರ್ಧರಣೆಯನ್ನು ಮುಂದುವರಿಸುವುದು;

(ಬಿ) ತೆರಿಗೆಯ ಪುನಃ ನಿರ್ಧರಣೆಯು ವಿವರಪಟ್ಟಿಕೆಗಳೊಂದಿಗೆ ಸಲ್ಲಿಸಲಾದ ತೆರಿಗೆಗಿಂತ ಶೇಕಡಾ ಐದಕ್ಕಿಂತ ಹೆಚ್ಚಾಗಿದ್ದಲ್ಲಿ, ಸಂಬಂಧಪಟ್ಟ ವ್ಯಕ್ತಿಯು ತಪ್ಪಿಸಿದ ತೆರಿಗೆಯ ಮೊತ್ತದ ಎರಡರಷ್ಟು ವರ್ಷಕ್ಕೆ ಶೇಕಡಾ ಒಂಬತ್ತರ ಬಡ್ಡಿಯಲ್ಲಿ ಸಂದಾಯಮಾಡುವುದಕ್ಕೆ ಹೊಣೆಗಾರನಾಗಿರತಕ್ಕದ್ದು.

(ಸಿ) ಮುಖ್ಯ ಆಯುಕ್ತರು ಅಥವಾ ಅಧಿಕೃತ ಅಧಿಕಾರಿಯವರಿಂದ ಈ ಪ್ರಕರಣದ ಅಡಿಯಲ್ಲಿ ಪರಿಶೀಲನೆ ಮತ್ತು ಪುನರ್ ನಿರ್ಧರಣೆ ಮಾಡಲಾದಂತೆ, ತೆರಿಗೆದಾರನಿಗೆ ಪುನರ್ ನಿರ್ಧರಣೆಯ ನೋಟಿಸನ್ನು ಹೊರಡಿಸತಕ್ಕದ್ದು ಮತ್ತು ತೆರಿಗೆದಾರನಿಗೆ ಲಿಖಿತದಲ್ಲಿ ಕಾರಣವನ್ನು ಹೇಳಿಕೊಳ್ಳುವ ಅವಕಾಶವನ್ನು ನೀಡಿದ ತರುವಾಯ ನೋಟೀಸನ್ನು ಜಾರಿಮಾಡಿದ ಮೂವತ್ತು ದಿನಗಳೊಳಗಾಗಿ ತೆರಿಗೆಯನ್ನು ಪಾವತಿಸುವಂತೆ ಒತ್ತಾಯಪಡಿಸತಕ್ಕದ್ದು.

(ಡಿ) ನಿರ್ಧರಿಸಿದ ಸ್ವತ್ತು ತೆರಿಗೆಯನ್ನು ಮತ್ತು ವಿಧಿಸಿದ ದಂಡವನ್ನು ಮಾಲೀಕನು ಅಥವಾ ಅದಿಭೋಗದಾರನು ಒಪ್ಪಿಕೊಳ್ಳಬಹುದು ಅಥವಾ ಈ ಉಪಪ್ರಕರಣದ ಮೇರೆಗಿನ ನೋಟೀಸಿನ ಪ್ರತಿಯನ್ನು ಸ್ವೀಕರಿಸಿದ ಮೂವತ್ತು ದಿನಗಳೊಳಗಾಗಿ ಮುಖ್ಯ ಆಯುಕ್ತರಿಗೆ ಅಥವಾ ಅಧಿಕೃತ ಅಧಿಕಾರಿಗೆ ಆಕ್ಷೇಪಣೆಗಳನ್ನು ಸಲ್ಲಿಸಬಹುದು;

(ಇ) ಮುಖ್ಯ ಆಯುಕ್ತರು ಅಥವಾ ಅಧಿಕೃತ ಅಧಿಕಾರಿಯು ಆಕ್ಷೇಪಣೆಗಳನ್ನು ಪರಿಗಣಿಸಬಹುದು ಮತ್ತು ಆಕ್ಷೇಪಣೆಗಳನ್ನು ಸಲ್ಲಿಸಿದ ದಿನಾಂಕದಿಂದ ಅರವತ್ತು ದಿನಗಳೊಳಗೆ ಅಂಥ ನಿರ್ಧರಣೆಯನ್ನು ದೃಢಪಡಿಸುವ ಅಥವಾ ಪರಿಷ್ಕರಿಸುವ ಅಂಥ ಆದೇಶವನ್ನು ಹೊರಡಿಸತಕ್ಕದ್ದು ಹಾಗೂ ಆದೇಶದ ಒಂದು ಪ್ರತಿಯನ್ನು ಸಂಬಂಧಿಸಿದ ಮಾಲೀಕ ಅಥವಾ ಅದಿಭೋಗದಾರಇಗೆ ಕಳುಹಿಸತಕ್ಕದ್ದು.

(16) ಈ ಪ್ರಕರಣದ ಮೇರೆಗಿನ ತೆರಿಗೆ ನಿರ್ಧರಣೆಯನ್ನು ಅಥವಾ ತೆರಿಗೆ ಮರು ನಿರ್ಧರಣೆಯನ್ನು ಈ ಮುಂದಿನ ಕಾಲಮಿತಿಗಳ ನಂತರ ಮಾಡತಕ್ಕದ್ದಲ್ಲ, ಎಂದರೆ:-

(i) ಈ ಪ್ರಕರಣದ ಮೇರೆಗೆ ತೆರಿಗೆ ವಿವರ ಪತ್ರವನ್ನು ಸಲ್ಲಿಸಿದ ನಂತರ ಐದು ವರ್ಷಗಳು ಕಳೆದಮೇಲೆ;

(ii) ಮುಖ್ಯ ಆಯುಕ್ತರು ಅಥವಾ ಅಧಿಕೃತ ಅಧಿಕಾರಿಯ ಅಭಿಪ್ರಾಯದ ಪ್ರಕಾರ ತೆರಿಗೆ ಮರು ನಿರ್ಧರಣೆ ಮಾಡಿರುವುದನ್ನು ಸಮರ್ಥಿಸುವ ವಾಸ್ತವಾಂಶಗಳು ಸಾಕಷ್ಟು ಇವೆ ಎಂಬುದು ಅವರ ಗಮನಕ್ಕೆ ಬಂದ ತರುವಾಯ ಐದು ವರ್ಷಗಳು ಕಳೆದ ಮೇಲೆ, ಇದರಲ್ಲಿ ಯಾವುದು ನಂತರವೋ ಆ ಅವಧಿ ಕಳೆದ ನಂತರ.

(17) ಈ ಅಧಿನಿಯಮದ ಮೇರೆಗೆ ಸಂದರ್ಭಾನುಸಾರ ತೆರಿಗೆ ನಿರ್ಧರಣೆಗೆ ಅಥವಾ ತೆರಿಗೆ ಮರು ನಿರ್ಧರಣೆಗೆ ನಿರ್ದಿಷ್ಟಪಡಿಸಿರುವ ಕಾಲಮಿತಿಯನ್ನು ಲೆಕ್ಕ ಹಾಕುವಾಗ ತೆರಿಗೆ ನಿರ್ಧರಣೆಯ ಅಥವಾ ಇತರ ವ್ಯವಹರಣೆಗಳ ವಿರುದ್ಧ ಸಲ್ಲಿಸಿದ ಯಾವುದೇ ಅಪೀಲಿನ ವಿಲೆಗಾಗಿ ಅಪೀಲು ನ್ಯಾಯಮಂಡಳಿಯು ಅಥವಾ ಸಕ್ಷಮ ನ್ಯಾಯಾಲಯವು ತೆಗೆದುಕೊಂಡ ಅವಧಿಯನ್ನು ಲೆಕ್ಕಕ್ಕೆ ತೆಗೆದುಕೊಳ್ಳತಕ್ಕದ್ದಲ್ಲ.

ಪರಂತು, ಯಾರೇ ಮಾಲೀಕನು ಅಥವಾ ಅಧಿಬೋಗದಾರನು ಸ್ವತ್ತಿನ ಯಾವುದೇ ಉಪಯೋಗದ ಬದಲಾವಣೆಯ ಪ್ರಕರಣದಲ್ಲಿ ಸ್ವತ್ತಿನ ಮಾರ್ಪಾಡು ಅಥವಾ ವ್ಯತ್ಯಸ್ತಗೊಳಿಸುವುದನ್ನು ಪುನ□ನಿಧ□ರಿಸಿದ ವಿವರ ಪಟ್ಟಿಕೆ ಅಥವಾ ತೆರಿಗೆಯೊಂದಿಗೆ ಅಂಥ ಬದಲಾವಣೆಯನ್ನು ಮಾಡಿಕೊಂಡ ಅಥವಾ ಸ್ವಾಧೀನಕ್ಕೆ ಪಡೆದುಕೊಂಡ ದಿನಾಂಕದಿಂದ ಆರು ತಿಂಗಳ ಒಳಗಾಗಿ ವರದಿ ಮಾಡತಕ್ಕದ್ದು.

ಮತ್ತು ಪರಂತು, ಈ ಪ್ರಕರಣದಲ್ಲಿ ಏನೇ ಇದ್ದಾಗ್ಯೂ, ಹಿಂದಿನ ಪರಿಷ್ಕೃತ ಸ್ವತ್ತಿನ ತೆರಿಗೆಯನ್ನು ನಿರ್ದೇಶಿಸುವುದಕ್ಕೆ ಸರ್ಕಾರದ ಅಧಿಕಾರಕ್ಕೆ ಪರಿಣಾಮಕಾರಿಯಾಗಿರುತ್ತದೆ ಎಂದು ಭಾವಿಸತಕ್ಕದ್ದು.

(18) ಮುಖ್ಯ ಆಯುಕ್ತರು, ವಲಯಗಳ ವರ್ಗೀಕರಣ, ಯುನಿಟ್ ವಿಸ್ತೀರ್ಣ ಮೌಲ್ಯ ಮತ್ತು ಸ್ವತ್ತಿನ ವರ್ಗದ ಬಗ್ಗೆ ಬರುವ ಯಾವುವೇ ಸಂಶಯಗಳನ್ನು ಪರಿಹರಿಸುವ ಅಧಿಕಾರವನ್ನು ಹೊಂದಿರತಕ್ಕದ್ದು. ಈ ಸಂಬಂಧದಲ್ಲಿ ಮುಖ್ಯ ಆಯುಕ್ತರ ತೀರ್ಮಾನವು ಅಂತಿಮವಾಗಿರತಕ್ಕದ್ದು.

(19) ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದಾಗ್ಯೂ ಸಾಮಾಜಿಕವಾಗಿ ಅಥವಾ ಪರಿಸರ ಸ್ನೇಹಿಯಾಗಿ ಇರುವ ಯೋಜನೆಯಡಿಯಲ್ಲಿ ಇದ್ದಲ್ಲಿ ಕಟ್ಟಡದ ಅಥವಾ ಖಾಲಿ ಭೂಮಿಯ ಅಥವಾ ಎರಡರ ತೆರಿಗೆ ಪಾವತಿಯಲ್ಲಿ ವಿನಾಯಿತಿಯನ್ನು ಅಥವಾ ಪಾಲಿಕೆಯು ಈ ಪ್ರಕರಣದ ಮೇರೆಗೆ ಈ ಉದ್ದೇಶಗಳಿಗಾಗಿ ಗುರುತಿಸಬಹುದಾದಂತೆ ಅದನ್ನು ಜಾರಿಗೊಳಿಸುವ ಸಂಧರ್ಭದಲ್ಲಿ ಅಂಥ ನಿರ್ಧರಣೆಯು ಪಾಲಿಕೆಯಿಂದ ಅದರ ಸಂಬಂಧದಲ್ಲಿ ನಿರ್ಧರಿಸುವ ವಿನಾಯಿತಿಯು ಶೇಕಡಾ ಐವತ್ತರಷ್ಟು ತೆರಿಗೆಯನ್ನು ಮೀರತಕ್ಕದ್ದಲ್ಲ.

ವಿವರಣೆ: ಈ ಪ್ರಕರಣದ ಉದ್ದೇಶಗಳಿಗಾಗಿ ಪರಿಸರ ಸ್ನೇಹಿ ಯೋಜನೆಯು ಪಾಲಿಕೆಯಿಂದ ಅಥವಾ ಸರ್ಕಾರದಿಂದ ಗುರುತಿಸಲಾದಂತೆ, ಅದರ ನಿರ್ಮಾಣವು ಪರಿಸರ ಸ್ನೇಹಿಯಾಗಿರುವ ಮಳೆ ನೀರು ಸಂಗ್ರಹ ವ್ಯವಸ್ಥೆ ,ಕಾಂಪೋಸ್ಟ್ ತಯಾರಿಕೆ, ಸೋಲಾರ್ ಶಕ್ತಿಯ ಬಳಕೆ ಮತ್ತು ಇತರ ಅಸಂಪ್ರದಾಯಿಕ ಇಂಧನ

ಮೂಲಗಳು ನಿರುಪಯುಕ್ತ ನೀರಿನ ಮರುಬಳಕೆ ಅಥವಾ ಪರಿಸರ ಸ್ನೇಹಿಯಾಗಿರುವ ಯಾವುದೇ ಇತರ ಯೋಜನೆ.

(20) ಪಾಲಿಕೆಯು ಸ್ವತ್ತು ತೆರಿಗೆಯನ್ನು ಪಾವತಿಸುವ ಪ್ರತಿಯೊಬ್ಬ ವ್ಯಕ್ತಿಗೆ ಅಂಥ ತೆರಿಗೆಯ ಪಾವತಿಗಾಗಿ ಸ್ವೀಕೃತಿ ಅಥವಾ ಖಾತಾವನ್ನು ನೀಡತಕ್ಕದ್ದು, ಮತ್ತು ಹಾಗೆ ನೀಡಲಾದ ಅಂಥ ಸ್ವೀಕೃತಿ ಅಥವಾ ಖಾತಾವು ಕಾನೂನುಬದ್ಧ ಮತ್ತು ಕಾನೂನು ಬದ್ಧವಲ್ಲದ ಕಟ್ಟಡಗಳಿಗೆ ಅಥವಾ ಖಾಲಿ ಭೂಮಿಗೆ ವಿಭಿನ್ನವಾಗಿರತಕ್ಕದ್ದು ಹಾಗೂ ಅಂಥ ಸ್ವೀಕೃತಿ ಅಥವಾ ಖಾತಾದ ನಮೂನೆಯು ನಿಯಮಗಳ ಅಡಿಯಲ್ಲಿ ಕಾಲಕಾಲಕ್ಕೆ ನಿಯಮಿಸಬಹುದಾದಂತೆ ಇರತಕ್ಕದ್ದು.

(21) ಮುಖ್ಯ ಆಯುಕ್ತರು, ನಿಯಮಿಸಬಹುದಾದ ಅಂಥ ನಮೂನೆಯಲ್ಲಿ ದಾಖಲೆಯನ್ನು ನಿರ್ವಹಿಸತಕ್ಕದ್ದು, ಅದು ಈ ಪ್ರಕರಣದ ಅಡಿಯಲ್ಲಿ ತೆರಿಗೆ ನೀಡಿದ ಕಾನೂನು ಬದ್ಧ ಕಟ್ಟಡಗಳು ಅಥವಾ ಖಾಲಿ ಭೂಮಿಗಳು ಮತ್ತು ಕಾನೂನು ಬದ್ಧವಲ್ಲದ ಕಟ್ಟಡಗಳು ಅಥವಾ ಖಾಲಿ ಭೂಮಿಗಳ ವಿವರಗಳನ್ನು ಹೊಂದಿರತಕ್ಕದ್ದು.

(22) ಮುಖ್ಯ ಆಯುಕ್ತರು, ಸ್ವತ್ತು ತೆರಿಗೆಯನ್ನು ಪಾವತಿಸುವಲ್ಲಿ ತಪ್ಪಿದವರ ಪಟ್ಟಿಯನ್ನು ಸಹ ನಿರ್ವಹಿಸತಕ್ಕದ್ದು ಮತ್ತು ಅದನ್ನು ಪಾಲಿಕೆಯ ಜಾಲತಾಣದಲ್ಲಿ ಪ್ರಕಟಿಸತಕ್ಕದ್ದು.

(23) (22)ನೇ ಉಪಪ್ರಕರಣದ ಅಡಿಯಲ್ಲಿ ದಾಖಲೆಗಳನ್ನು ನಿರ್ವಹಿಸುವ ಉದ್ದೇಶಕ್ಕಾಗಿ, ಮುಖ್ಯ ಆಯುಕ್ತರು ಅಗತ್ಯಪಡಿಸಬಹುದಾದ ಅಂಥ ನಿರ್ದೇಶನಗಳನ್ನು ವಲಯ ಆಯುಕ್ತರಿಗೆ ಹೊರಡಿಸಬಹುದು ಹಾಗೂ ಪ್ರತಿಯೊಂದು ವಲಯ ಸಮಿತಿಯೂ ಸಹ ಅಂಥ ದಾಖಲೆಗಳನ್ನು ನಿರ್ವಹಿಸುವಂತೆ ನಿರ್ದೇಶಿಸತಕ್ಕದ್ದು.

145. ನೋಟೀಸಿನೊಂದಿಗೆ ನಿರ್ಣಯದ ಪ್ರಕಟಣೆ.- ಪಾಲಿಕೆಯು, ಸಾಮಾನ್ಯ ಸಭೆಯಲ್ಲಿ ಅಂಗೀಕರಿಸಿದ ನಿರ್ಣಯಗಳ ಮೂಲಕ 142ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ತೆರಿಗೆಯನ್ನು ಅಥವಾ 143ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಉಪಕರವನ್ನು ವಿಧಿಸತಕ್ಕದ್ದು ಮತ್ತು ಅಂಥ ನಿರ್ಣಯದಲ್ಲಿ, ತೆರಿಗೆಗೆ ಗುರಿಯಾಗತಕ್ಕ ವ್ಯಕ್ತಿಗಳ ಅಥವಾ ಸ್ವತ್ತುಗಳ ವರ್ಗಗಳನ್ನು ಮತ್ತು ತೆರಿಗೆ ವಿಧಿಸತಕಂಥ ಮೊಬಲಗನ್ನು ಅಥವಾ ದರವನ್ನು ನಿರ್ದಿಷ್ಟಪಡಿಸತಕ್ಕದ್ದು. ಅಂಥ ನಿರ್ಣಯವನ್ನು ಅಂಗೀಕರಿಸಿದ ಮೇಲೆ ಪಾಲಿಕೆಯು, ಅಂಥ ನಿರ್ಣಯದ ನೋಟೀಸನ್ನು ತನ್ನ ಕಚೇರಿಯ ಸೂಚನಾ ಫಲಕದಲ್ಲಿ ಮತ್ತು ಸ್ಥಳೀಯ ವೃತ್ತ ಪತ್ರಿಕೆಗಳಲ್ಲಿ ಜಾಹೀರಾತಿನ ಮೂಲಕ ಪ್ರಕಟಿಸತಕ್ಕದ್ದು. ಅಂಥ ನೋಟೀಸಿನ ಪ್ರಕಟಣೆಯು, ಈ ಅಧಿನಿಯಮದ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳ ಉಪಬಂಧಗಳಿಗನುಸಾರವಾಗಿ ತೆರಿಗೆಯನ್ನು ವಿಧಿಸಲಾಗಿದೆ ಎಂಬುದಕ್ಕೆ ನಿರ್ಣಾಯಕ ಸಾಕ್ಷ್ಯವಾಗಿರತಕ್ಕದ್ದು.

146. ಹಾಲಿ ಇರುವ ಯಾವುದೇ ತೆರಿಗೆಯನ್ನು ತೆಗೆದುಹಾಕುವ, ಕಡಿಮೆ ಮಾಡುವ ಅಥವಾ ರದ್ದುಗೊಳಿಸುವ ಅಧಿಕಾರ.- (1) ಪಾಲಿಕೆಯು, , ಯಾವುದೇ ಸಂದರ್ಭದಲ್ಲಿ ಸಾಕಷ್ಟು ಕಾರಣಕ್ಕಾಗಿ ಹಾಲಿ ಇರುವ ಯಾವುದೇ ತೆರಿಗೆಯನ್ನು ತೆಗೆದುಹಾಕಬಹುದು, ಮಾರ್ಪಾಟು ಮಾಡಬಹುದು ಅಥವಾ ರದ್ದುಗೊಳಿಸಬಹುದು.

(2) ತೆರಿಗೆಗಳನ್ನು ವಿಧಿಸುವುದಕ್ಕೆ ಸಂಬಂಧಪಟ್ಟ ಈ ಅಧ್ಯಾಯದ ಉಪಬಂಧಗಳು ಆದಷ್ಟು ಮಟ್ಟಿಗೆ ಯಾವುದೇ ತೆರಿಗೆಯನ್ನು ತೆಗೆದುಹಾಕುವುದಕ್ಕೆ ಮಾರ್ಪಾಟು ಮಾಡುವುದಕ್ಕೆ ಅಥವಾ ರದ್ದಿಯಾತಿಗೊಳಿಸುವುದಕ್ಕೆ ಅನ್ವಯವಾಗತಕ್ಕದ್ದು.

147. ಸ್ವತ್ತಿನ ತೆರಿಗೆಯ ಸಂದಾಯ.- (1) ಕಟ್ಟಡ ಅಥವಾ ಖಾಲಿ ಜಾಗಗಳು ಅಥವಾ ಎರಡರ ಮಾಲಿಕನು ಕಾಲಕಾಲಕ್ಕೆ ಪಾಲಿಕೆಯು ಅಧಿಸೂಚಿಸಿದಂತಹ ಕಾಲಾವಧಿಯೊಳಗೆ ಒಂದೇ ಕಂತಿನಲ್ಲಾಗಲಿ ಅಥವಾ ಎರಡು ಸಮಾನ ಕಂತಿನಲ್ಲಾಗಲಿ ತೆರಿಗೆಯನ್ನು ಸಂದಾಯಮಾಡತಕ್ಕದ್ದು.

(2) ಪಾಲಿಕೆಯು (1)ನೇ ಉಪ ಪ್ರಕರಣದ ಅಡಿಯಲ್ಲಿ ಅಂತಹ ಅಧಿಸೂಚಿತ ಕಾಲಾವಧಿಯನ್ನು ವಿಸ್ತರಿಸುವುದಕ್ಕೆ ಮತ್ತು ವಿಳಂಬಿತ ಮರು ಸಂದಾಯಕ್ಕಾಗಿ ಬಾಕಿಯನ್ನು ಸಂದಾಯ ಮಾಡಬಹುದಾದಂತಹ ದಂಡವನ್ನು ಮನ್ನಾ ಮಾಡುವ ಅಧಿಕಾರವನ್ನು ಹೊಂದಿರತಕ್ಕದ್ದು.

(3) ಕಟ್ಟಡ ಅಥವಾ ಖಾಲಿ ಜಾಗಗಳ ಅಥವಾ ಎರಡರ ಮಾಲೀಕನಾಗಿರುವ ಯಾವುದೇ ವ್ಯಕ್ತಿಯು ತೆರಿಗೆಯನ್ನು ಸಂದಾಯ ಮಾಡುವುದಕ್ಕೆ ಅಗತ್ಯಪಡಿಸಿದ್ದು ನಿಯಮಿಸಬಹುದಾದಂತಹ ನಮೂನೆಯಲ್ಲಿ ಸಂಪೂರ್ಣ ನಿರ್ಧರಣೆಯ ವಿವರಪಟ್ಟಿಗಳನ್ನು ಮುಖ್ಯ ಆಯುಕ್ತರಿಗೆ ಅಥವಾ ಆತನಿಂದ ಅಧಿಕೃತಗೊಳಿಸಿದಂತಹ ಅಧಿಕಾರಿ ಅಥವಾ ಏಜೆನ್ಸಿಗಳಿಗೆ (1) ನೇ ಉಪ-ಪ್ರಕರಣದ ಅಡಿಯಲ್ಲಿ ಅಧಿಸೂಚಿಸಿದ ಕಾಲಾವಧಿಯೊಳಗೆ ಅವುಗಳನ್ನು ಸಲ್ಲಿಸತಕ್ಕದ್ದು.

(4) ಒಬ್ಬ ಮಾಲೀಕ ಅಥವಾ ಅಧಿಭೋಗದಾರನ ಮೂಲಕ ವಿವರಪಟ್ಟಿಕೆಗಳನ್ನು ಸಲ್ಲಿಸಲು ಸುಲಭಗೊಳಿಸಲು ವ್ಯವಸ್ಥಿತವಾಗಿ ಪಾಲಿಕೆಯು ತೆರಿಗೆಯನ್ನು ಸಂದಾಯ ಮಾಡಬಹುದಾದ ಸುಲಭ ಲೆಕ್ಕ ಹಾಕುವಿಕೆಯ ಅಂತಹ ಮಾರ್ಗದರ್ಶಿ ಸೂತ್ರಗಳನ್ನು ಹೊರಡಿಸತಕ್ಕದ್ದು ಮತ್ತು ಮುಖ್ಯ ಆಯುಕ್ತರು ಅವಶ್ಯಕವೆನಿಸಬಹುದಾದ ವಲಯದೊಳಗೆ ಅಂತಹ ಸಹಾಯವಾಣಿ ಕೇಂದ್ರಗಳನ್ನು ಸ್ಥಾಪಿಸುವುದಕ್ಕಾಗಿ ಪಾಲಿಕೆಯ ವಲಯ ಆಯುಕ್ತರುಗಳು ನಿರ್ದೇಶಿಸತಕ್ಕದ್ದು.

148. ತೆರಿಗೆಯ ಸಂದಾಯಕ್ಕಾಗಿ ನೋಟಿಸುಗಳನ್ನು ನೀಡುವುದು ಮತ್ತು ತೆರಿಗೆಗಳ ವಸೂಲಾತಿ.- (1) ಈ ಅಧ್ಯಾಯದ ಅಡಿಯಲ್ಲಿ ಸಂದಾಯ ಮಾಡಬಹುದಾದ ದಂಡಗಳನ್ನು ಒಳಗೊಂಡು ಬಾಕಿಯಿರುವ ತರುವಾಯ ಅದನ್ನು ಪಾವತಿಸದೆ ಇದ್ದ ತೆರಿಗೆಯಾಗಿದ್ದಲ್ಲಿ ಪಾಲಿಕೆಯು ಅದೇ ಸಂದಾಯಕ್ಕಾಗಿ ನಿಯಮಿಸಬಹುದಾದಂತಹ ನಮೂನೆಯಲ್ಲಿ ಒಂದು ಬೇಡಿಕೆಯ ನೋಟೀಸನ್ನು ಹೊಣೆಗಾರನಾದ ವ್ಯಕ್ತಿಯ ಮೇಲೆ ನೋಟೀಸನ್ನು ಜಾರಿಮಾಡಬಹುದು.

(2) ಮುಖ್ಯ ಆಯುಕ್ತರು ಅಥವಾ ಅವರಿಂದ ಅಧಿಕೃತವಾದ ಯಾರೇ ವ್ಯಕ್ತಿಯಿಂದ ನೀಡಿದ ಬೇಡಿಕೆಯ ನೋಟೀಸ್‌ನ ವಿರುದ್ಧ ಮೇಲ್ಮನವಿಗೆ ಒಬ್ಬ ವ್ಯಕ್ತಿಯು ಕೋರಿದ್ದಲ್ಲಿ, ಅಂಥ ವ್ಯಕ್ತಿಯು ಮೇಲ್ಮನವಿಯನ್ನು ಪ್ರಶ್ನಿಸಲು ಮೇಲ್ಮನವಿ ನ್ಯಾಯಮಂಡಳಿಯ ಮುಂದೆ ಒಂದು ಮೇಲ್ಮನವಿಯನ್ನು ಸಲ್ಲಿಸಬಹುದು.

(3) (2)ನೇ ಉಪ-ಪ್ರಕರಣದ ಅಡಿಯಲ್ಲಿ ಮೇಲ್ಮನವಿಯನ್ನು ಸಲ್ಲಿಸುವುದಕ್ಕೆ ಕೋರುತ್ತಿರುವ ಯಾವುದೇ ವ್ಯಕ್ತಿಯು ಮೇಲ್ಮನವಿ ನ್ಯಾಯಮಂಡಳಿ ಹತ್ತಿರ ಬೇಡಿಕೆಯ ಮೊತ್ತದ ಶೇಕಡಾ ಐವತ್ತರಷ್ಟನ್ನು ಠೇವಣಿ ಇಡತಕ್ಕದ್ದು.

(4) ಅಂಥ ಬೇಡಿಕೆಯನ್ನು ಜಾರಿಮಾಡಿದ ಮೂವತ್ತು ದಿನಗಳೊಳಗಾಗಿ ತೆರಿಗೆಯನ್ನು ಸಂದಾಯ ಮಾಡದೆ (1)ನೇ ಉಪ ಪ್ರಕರಣದ ಅಡಿಯಲ್ಲಿ ಜಾರಿ ಮಾಡಲಾಗಿದ್ದ ಯಾರೇ ವ್ಯಕ್ತಿಯಾಗಿದ್ದಲ್ಲಿ, ಬೇಡಿಕೆಯ ನೋಟೀಸ್‌ನ ಮೇಲೆ ಮೇಲ್ಮನವಿ ನ್ಯಾಯಮಂಡಳಿ ಅಥವಾ ಯಾವುದೇ ನ್ಯಾಯಾಲಯದ ಮೂಲಕ ನೀಡಿದ ಯಾವುದೇ ತಡೆಗಡೆ ಇಲ್ಲದಿರುವಲ್ಲಿ ಮುಖ್ಯ ಆಯುಕ್ತರು ಬಾಕಿದಾರನ ಆತನ ವಾರಂಟಿನ ಅಡಿಯಲ್ಲಿ ಮತ್ತು ಚರಸ್ವತ್ತಿನ ಮಾರಾಟ ಅಥವಾ ಅಂತಹ ಕಟ್ಟಡ ಅಥವಾ ಜಾಗದಲ್ಲಿ ಕಂಡುಬರುವ ಯಾವುದೇ ಚರಸ್ವತ್ತಿನ ಜಪ್ತಿ ಮತ್ತು ಮಾರಾಟದ ಮೂಲಕ ಬಾಕಿದಾರನು ಕಟ್ಟಡದ ಬಾಕಿದಾರನು ಅಧಿಭೋಗದಾರನಾಗಿದ್ದಲ್ಲಿ, ಹಾಗೆ ಜಪ್ತಿ ಮಾಡಿದ ಸ್ವತ್ತನ್ನು ತಡೆಹಿಡಿದ ಮತ್ತು ಮಾರಾಟ ಮಾಡುವ ಸಂಬಂಧದಲ್ಲಿ ವೆಚ್ಚವಾಗಿದೆ ಎಂಬುದಾಗಿ ಸಂಭಾವ್ಯ ಚಾರ್ಜಗಳು ವಾರಂಟಿನ ಶುಲ್ಕ ಮತ್ತು ಜಪ್ತಿಯ ಶುಲ್ಕ ಮತ್ತು ಅಂಥ ಹೆಚ್ಚಿನ ಮೊತ್ತಗಳನ್ನು ಪೂರೈಸುವುದರ ಜೊತೆಗೆ ತೆರಿಗೆಯ ಕಾರಣದಿಂದಾಗಿ ಬಾಕಿ ಮೊತ್ತವನ್ನು ಜಪ್ತಿ ಮಾಡುವ ಮೂಲಕ ವಸೂಲು ಮಾಡಬಹುದು. ಜಪ್ತಿಮಾಡಿದ ಸ್ವತ್ತನ್ನು ತಡೆಹಿಡಿದ ಮತ್ತು ಮಾರಾಟ ಮಾಡುವ ಸಂಬಂಧದಲ್ಲಿ ವೆಚ್ಚವಾಗಿದೆ ಎಂಬುದಾಗಿ ಸಂಭಾವ್ಯ ವಾರಂಟಿನ ಶುಲ್ಕ ಮತ್ತು ಜಪ್ತಿಯ ಶುಲ್ಕ ಮತ್ತು ಅಂತ ಹೆಚ್ಚಿನ ಮೊತ್ತಗಳನ್ನು ಪೂರೈಸುವುದರ ಜೊತೆಗೆ ತೆರಿಗೆಯ ಕಾರಣದಿಂದಾಗಿ ಬಾಕಿ ಮೊತ್ತವನ್ನು ಜಪ್ತಿ ಮಾಡುವ ಮೂಲಕ ವಸೂಲು ಮಾಡಬಹುದು.

(5) ಯಾವುದೇ ಕಾರಣಗಳಿಗಾಗಿ ಸ್ವತ್ತು ಜಪ್ತಿಯಾಗಿದ್ದರೆ, ಅಥವಾ ಯಾರೇ ಬಾಕಿದಾರರ ಸ್ವತ್ತು ಪರಿಣಾಮಕಾರಿಯಾಗಿ ಜಪ್ತಿ ಆಗಿರದಿದ್ದರೆ, ಮುಖ್ಯ ಆಯುಕ್ತರು, ಅಂಥ ಬಾಕಿ ಇರುವ ಸ್ಥಿರ ಸ್ವತಿನ ತೆರಿಗೆಯು ವಸೂಲಾಗುವವರೆಗೆ ನಿಗದಿಪಡಿಸಿದ ನಮೂನೆಯಲ್ಲಿ ಅಂಥ ಬಾಕಿದಾರನ ಸ್ವತ್ತನ್ನು ಅಥವಾ ಬ್ಯಾಂಕ್ ಖಾತೆಯನ್ನು ಮುಟ್ಟುಗೋಲು ಹಾಕಿಕೊಳ್ಳಬಹುದು. ಮುಖ್ಯ ಆಯುಕ್ತರು ಅವರಿಂದ ಮಾಡಲಾದ ಜಪ್ತಿಯ ನಿರುಪಾಧಿಕ ಆದೇಶವನ್ನು ಸಕ್ಷಮ ನ್ಯಾಯಾಲಯಕ್ಕೆ ಸಲ್ಲಿಸಬಹುದು. ತರುವಾಯದಲ್ಲಿ ಮುಖ್ಯ ಆಯುಕ್ತರು ಸಕ್ಷಮ ನ್ಯಾಯಾಲಯದ ಮುಂದೆ ಬಾಕಿದಾರರನ್ನು ವಿಚಾರಣೆಗೊಳಿಸಬಹುದು.

149. ವರ್ಗಾವಣೆ ನೋಟೀಸನ್ನು ಕೊಡುವುದಕ್ಕಾಗಿ ವರ್ಗಾವಣೆಗೊಂಡ ಅಥವಾ ವರ್ಗಾವಣೆ ಪಡೆದವನ ಭಾದ್ಯತೆ.- (1) ಯಾವುದೇ ಆವರಣಗಳಲ್ಲಿ ಅಥವಾ ಅಂಥ ಆವರಣಗಳ ಮೇಲೆ ವರ್ಗಾಂತರಿತವಾಗಿದ್ದು, ತೆರಿಗೆಯನ್ನು ಸಂದಾಯ ಮಾಡುವುದಕ್ಕಾಗಿ ಮೂಲತ: ಹೊಣೆಗಾಗನಾಗಿರುವ ಯಾವುದೇ ವ್ಯಕ್ತಿಯ ಸ್ವಾಮ್ಯದ ಯಾವುದೇ ಸಂದರ್ಭದಲ್ಲಿ, ವ್ಯಕ್ತಿಸ್ವಾಮ್ಯವು ವರ್ಗಾಂತರಿತವಾದ ವ್ಯಕ್ತಿ ಮತ್ತು ಅದೇ ವ್ಯಕ್ತಿಗೆ ವರ್ಗಾಂತರಿವಾಗುತ್ತದೆ. ವರ್ಗಾವಣೆ ಪತ್ರವನ್ನು ಬರೆದು ಕೊಟ್ಟು ತರುವಾಯ ಮೂರು ತಿಂಗಳೊಳಗಾಗಿ ಅಥವಾ ನಂತರ ಅವುಗಳನ್ನು ನೋಂದಣಿಮಾಡತಕ್ಕದ್ದು, ಅದನ್ನು ನೋಂದಾಯಿಸಿದ್ದರೆ ಅಥವಾ ವರ್ಗಾವಣೆಯ ನಂತರ ಚಲಾವಣೆಯಲ್ಲಿದ್ದರೆ ಬರೆದು ಕೊಡಬೇಕಾದ ಲಿಖಿತಪತ್ರವಿಲ್ಲದಿದ್ದಲ್ಲಿ, ನಿಯಮಿಸ ಬಹುದಾದಂತಹ ನಮೂನೆಯಲ್ಲಿ ಮುಖ್ಯಆಯುಕ್ತರಿಗೆ ಅಂಥವರ್ಗಾವಣೆ ನೋಟೀಸನ್ನು ನೀಡತಕ್ಕದ್ದು.

(2) ಮುಂಚೆ ಹೇಳಿದಂತೆ ಮೂಲತ: ಹೊಣೆಗಾರನಾಗಿರುವ ಯಾವುದೇ ವ್ಯಕ್ತಿಯ ಮರಣದ ಸಂದರ್ಭದಲ್ಲಿ, ಮೃತನ ಸ್ವಾಮ್ಯವಿರುವ ವ್ಯಕ್ತಿಯ ವಾರಸುದಾರ ಅಥವಾ ಬೇರೆ ರೀತಿಯಲ್ಲಿ (ಅನ್ಯಥಾ) ವರ್ಗಾಂತರಿತವಾಗತಕ್ಕದ್ದು, ಮೃತನ ಮರಣದಿಂದ ಒಂದು ವರ್ಷಗಳೊಳಗಾಗಿ ಮುಖ್ಯ ಆಯುಕ್ತರಿಗೆ ಅಂಥ ವರ್ಗಾವಣೆಯ ನೋಟೀಸನ್ನು ನೀಡತಕ್ಕದ್ದು.

(3) ಅಂತಹ ನೋಟೀಸಿನ ಮುಖಾಂತರ ಮುಖ್ಯ ಆಯುಕ್ತರು ಅಥವಾ ಅಧಿಕೃತ ಅಧಿಕಾರಿಯ ಅರಿವಿಗೆ ಬಂದ ಅಂತಹ ವರ್ಗಾವಣೆಯ ಯಾವುದೇ ಸಂದರ್ಭದಲ್ಲಾದರೂ, ವರ್ಗಾವಣೆ ಪಡೆದವನ ಹೆಸರವನ್ನು ಸ್ವತ್ತಿನ ತೆರಿಗೆ ನೋಂದಣಿ (ರಿಜಿಸ್ಟ್ರ)ಯಲ್ಲಿ ನಮೂದಿಸತಕ್ಕದ್ದು.

(4) ಮುಖ್ಯ ಆಯುಕ್ತರಿಗೆ ನೋಟೀಸನ್ನು ನೀಡದೆ ಮುಂಚೆ ಹೇಳಿದಂತೆ ವರ್ಗಾವಣೆ ಮಾಡಿರುವ ಪ್ರತಿಯೊಬ್ಬ ವ್ಯಕ್ತಿಯ ಅಂತಹ ನಿರ್ಲಕ್ಷ್ಯದ ಮುಖಾಂತರ ಅವನು ವಹಿಸಬಹುದಾದ ಯಾವುದೇ ಇತರೆ ಹೊಣೆಗಾರಿಕೆಯ ಜೊತೆಗೆ, ಅವನು ನೋಟೀಸನ್ನು ನೀಡುವವರೆಗೆ ಅಥವಾ ವರ್ಗಾವಣೆಯಾಗುವವರೆಗೆ ವರ್ಗಾಂತರಿತ ಆವರಣಗಳ ಮೇಲೆ ನಿರ್ಧರಿಸಲಾದ ಸ್ವತ್ತಿನ ತೆರಿಗೆಯನ್ನು ಸಂದಾಯಮಾಡುವುದಕ್ಕಾಗಿ

ಹೊಣೆಗಾರಿಕೆಯನ್ನು ಮುಂದುವರಿಸತಕ್ಕದ್ದು, ಪಾಲಿಕೆಯ ನೋಂದಣಿ (ರಿಜಿಸ್ಟರ್‌ಗಳಲ್ಲಿ)ಯಲ್ಲಿ ದಾಖಲೆಯನ್ನು ಹೊಂದಿರತಕ್ಕದ್ದು. ಆದರೆ ಈ ಪ್ರಕರಣದಲ್ಲಿ ಪರಿಣಾಮಬೀರತಕ್ಕದ್ದಲ್ಲ.

(ಎ) ಸದರಿ ತೆರಿಗೆಯ ಸಂದಾಯಕ್ಕಾಗಿ ವರ್ಗಾವಣೆ ಪಡೆದವರ ಹೊಣೆಗಾರಿಕೆ, ಅಥವಾ

(ಬಿ) ಪಾಲಿಕೆಯ ಮುಂಚಿನ ವೆಚ್ಚ

(5) ಮುಖ್ಯ ಆಯುಕ್ತರವರಿಂದ, ಸ್ವಪ್ರೇರಣೆಯಿಂದಾಗಲೀ ಅಥವಾ ಬೇರೆರೀತಿಯಲ್ಲಾಗಲೀ ಮೋಸ ಅಥವಾ ಸಂಗಾತಿಗಳನ್ನು ಮರೆಮಾಡುವುದರ ಮೂಲಕ ಅಥವಾ ಸುಳ್ಳು, ತಪ್ಪೂ ಅಥವಾ ಅಪೂರ್ಣ ಸಂಗತಿಗಳನ್ನು ಒದಗಿಸುವುದರ ಮೂಲಕ ಪಾಲಿಕೆಯ ನೋಂದಣಿ ಪುಸ್ತಕದಲ್ಲಿ ದಾಖಲಿಸಲಾಗಿದ್ದು, ಸ್ವಾಮ್ಯದ ಯಾವುದೇ ವರ್ಗಾವಣೆಯ ಪೂರೈಕೆಯಾಗಿದೆ ಎಂದು ಆತನು ಅವಶ್ಯಕವೆಂದು ಪರ್ಯಾಲೋಚಿಸಿದ ಅಂತಹ ವಿಚಾರಣೆಯತರುವಾಯ, ಸ್ವಾಮ್ಯದ ವರ್ಗಾವಣೆಯನ್ನು ದಾಖಲುಮಾಡಿದಂತಹ ದಿನಾಂಕದಿಂದ ಮೂರು ವರ್ಷಗಳ ಅವಧಿಯೊಳಗಾಗಿ ಆತನು ತೀರ್ಮಾನಿಸಿದಂತೆ ಅದಕ್ಕೆ ಸಂಬಂಧಿಸಿದಂತೆ ಪ್ರಕರಣವನ್ನು ಪುನ: ಆರಂಭಿಸಬಹುದು ಮತ್ತು ಅಂತಹ ಆದೇಶಗಳನ್ನು ಮುಂದುವರೆಸಬಹುದು.

ಪರಂತು, ಅದರಿಂದ ಬಾಧಿತರಾಗಹುದಾದ ವ್ಯಕ್ತಿಯು ಅಹವಾಲನ್ನು ಹೇಳಿಕೊಳ್ಳಲು ಯುಕ್ತ ಅವಕಾಶವನ್ನು ನೀಡಿದ ತರುವಾಯದ ಹೊರತು ಅಂತಹ ಆದೇಶಗಳನ್ನು ಮಾಡತಕ್ಕದ್ದಲ್ಲ.

(6) ಈ ಪ್ರಕರಣದಲ್ಲಿಏನೇಒಳಗೊಂಡಿದ್ದಾಗ್ಯೂ, ಸಂಬಂಧಪಟ್ಟ ಮಂಡಳಿ ಅಥವಾ ಸ್ಥಳೀಯ ಪ್ರಾಧಿಕಾರದ ಮೂಲಕ ಯಾವುದೇ ಅನುದಾನ (ಅನುಮತಿ), ಹಂಚಿಕೆ ಅಥವಾ ಗುತ್ತಿಗೆ ನಿರ್ವಹಿಸಲು ಯಾವುದೇ ವ್ಯಕ್ತಿಗೆ ಕೊಡಲಾದ ಸ್ವಾಧೀನತೆ, ಯಾವುದೇ ಕಟ್ಟಡ ಅಥವಾ ಜಾಗದ ಸಂಬಂಧಲ್ಲಿ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಅಥವಾ ಕರ್ನಾಟಕ ಗೃಹಮಂಡಳಿ ಅಥವಾ ಯಾವುದೇ ಸ್ಥಳೀಯ ಪ್ರಾಧಿಕಾರವು ಸ್ವತ್ತಿನ ತೆರಿಗೆಯ ಸಂದಾಯಕ್ಕಾಗಿ ಮೂಲತ: ಹೊಣೆಗಾರನಾಗಿರುವ ಯಾವುದೇ ವ್ಯಕ್ತಿಯ ಸ್ವಾಮ್ಯದ ವರ್ಗಾವಣೆಯನ್ನು ಮಂಡಳಿ ಅಥವಾ ಸಂಬಂಧಪಟ್ಟ ಸ್ಥಳೀಯ ಪ್ರಾಧಿಕಾರವನ್ನು ಸಮಾಲೋಚಿಸದೆ ಪಾಲಿಕೆಯ ನೋಂದಣಿ ಪುಸ್ತಕದಲ್ಲಿ ದಾಖಲಿಸತಕ್ಕದಲ್ಲ.

150. ಮುಖ್ಯ ಆಯುಕ್ತರಿಂದ ಪುನರೀಕ್ಷಣೆ.- ಮುಖ್ಯ ಆಯುಕ್ತರು, ತಾನಾಗಿಯೇ ಆಗಲಿ ಅಥವಾ ಅನ್ಯಥಾ ಅವಶ್ಯವೆಂದು ಪರಿಗಣಿಸುವಂಥ ವಿಚಾರಣೆ ಮಾಡಿದ ತರುವಾಯ 149ನೇ ಪ್ರಕರಣದ ಮೇರೆಗೆ ಹಕ್ಕುಸ್ವಾಮ್ಯದ ಯಾವುದೇ ವರ್ಗಾವಣೆಯನ್ನು, ಪಾಲಿಕೆಯ ರಿಜಿಸ್ಟರಿನಲ್ಲಿ, ಮೋಸದಿಂದ, ತಪ್ಪು ನಿರೂಪಣೆಯಿಂದ ಅಥವಾ ವಾಸ್ತವ ಸಂಗತಿಗಳನ್ನು ಬಚ್ಚಿಟ್ಟು ಅಥವಾ ಸುಳ್ಳು, ಸರಿಯಲ್ಲದ ಅಥವಾ ಅಪೂರ್ಣ ಸಾಮಗ್ರಿಗಳನ್ನು ಒದಗಿಸಿ ದಾಖಲ್ಮಾಡಿಸಲಾಗಿದೆಯೆಂದು ಮನವರಿಕೆಯಾದರೆ, ಅವರು, ಹಾಗೆ ಹಕ್ಕು ಸ್ವಾಮ್ಯದ ವರ್ಗಾವಣೆಯನ್ನು ದಾಖಲಿಸಿದ ದಿನಾಂಕದಿಂದ ಮೂರು ವರ್ಷಗಳ ಅವಧಿಯೊಳಗೆ ಆ ಪ್ರಕರಣವನ್ನು ತೆರೆಯಬಹುದು ಮತ್ತು ಅದಕ್ಕೆ ಸಂಬಂಧಪಟಂತೆ ತಾನು ಸೂಕ್ತವೆಂದು ಭಾವಿಸಬಹುದಾದಂಥ ಆದೇಶವನ್ನು ಮಾಡಬಹುದು:

ಪರಂತು, ಅಂಥ ಯಾವುದೇ ಆದೇಶವನ್ನು, ಅದರಿಂದ ಬಾಧಿತನಾಗುವ ಸಂಭವವಿರುವ ವ್ಯಕ್ತಿಗೆ ಅಹವಾಲನ್ನು ಹೇಳಿಕೊಳ್ಳಲು ಸೂಕ್ತ ಅವಕಾಶವನ್ನು ಕೊಡದ ಹೊರತು ಮಾಡತಕ್ಕದ್ದಲ್ಲ.

151. ಕಟ್ಟಡ ನಿರ್ಮಾಣ ಅಥವಾ ಪುನರ್ ನಿರ್ಮಾಣದ ಅಥವಾ ಕಟ್ಟಡವನ್ನು ಕೆಡವಿ ಹಾಕುವುದರ ಬಗ್ಗೆ ನೋಟೀಸು ಕೊಡುವುದು ಮಾಲೀಕರ ಹೊಣೆಗಾರಿಕೆ.- (1) ನಗರದಲ್ಲಿ ಯಾವುದೇ ಕಟ್ಟಡವನ್ನು ನಿರ್ಮಾಣ ಮಾಡಿದರೆ ಅಥವಾ ಪುನರ್‌ನಿರ್ಮಾಣ ಮಾಡಿದರೆ ಮಾಲೀಕನು ಕಟ್ಟಡವನ್ನು ಕಟ್ಟಿ ಮುಗಿಸಿದ ದಿನಾಂಕ ಅಥವಾ ಸ್ವಾಧೀನಕ್ಕೆ ತೆಗೆದುಕೊಂಡ ದಿನಾಂಕ ಇವುಗಳಲ್ಲಿ ಯಾವುದು ಮೊದಲೋ ಆ ದಿನಾಂಕದಿಂದ ಹದಿನೈದು ದಿನಗಳೊಳಗಾಗಿ ಆ ಬಗ್ಗೆ ಮುಖ್ಯ ಆಯುಕ್ತರಿಗೆ ನೋಟೀಸನ್ನು ಕೊಡತಕ್ಕದ್ದು.

(2) ನಗರದಲ್ಲಿನ ಯಾವುದೇ ಕಟ್ಟಡವನ್ನು ಕೆಡವಿ ಹಾಕಿದರೆ ಅಥವಾ ನಾಶಪಡಿಸಿದರೆ, ಮಾಲೀಕನು ಆ ಬಗ್ಗೆ ಮುಖ್ಯ ಆಯುಕ್ತರಿಗೆ ನೋಟೀಸನ್ನು ಕೊಡುವವರೆಗೆ ಕಟ್ಟಡವನ್ನು ಕೆಡವಿಹಾಕಿರದಿದ್ದರೆ ಅಥವಾ ನಾಶಗೊಳಿಸಿರದಿದ್ದರೆ ಅವನು ಯಾವ ಸ್ವತ್ತು ತೆರಿಗೆಗೆ ಗುರಿಯಾಗಿರುತ್ತಿದ್ದನೋ ಆ ಸ್ವತ್ತು ತೆರಿಗೆಯನ್ನು ಪಾವತಿ ಮಾಡಲು ಹೊಣೆಗಾರನಾಗಿರತಕ್ಕದ್ದು.

152. ಸಾಮಾನ್ಯ ವಿನಾಯತಿಗಳು .- (1) ಈ ಕೆಳಕಂಡ ಕಟ್ಟಡಗಳಿಗೆ ಮತ್ತು ಭೂಮಿಗಳಿಗೆ ಸ್ವತ್ತು ತೆರಿಗೆಯಿಂದ ವಿನಾಯಿತಿ ನೀಡತಕ್ಕದ್ದು:-

(ಎ) ಸಾರ್ವಜನಿಕ ಆರಾಧನೆಗಾಗಿ ಪ್ರತ್ಯೇಕವಾಗಿಟ್ಟ ಮತ್ತು ಹಾಗೆ ವಾಸ್ತವವಾಗಿ ಬಳಸುತ್ತಿರುವ ಅಥವಾ ಯಾವ ಇತರ ಉದ್ದೇಶಗಳಿಗೂ ಬಳಸದಿರುವ ಸ್ಥಳಗಳು;

(ಬಿ) ಯಾವ ಛತ್ರಗಳಲ್ಲಿ ಇರುವುದಕ್ಕಾಗಿ ಬಾಡಿಗೆಯನ್ನು ವಿಧಿಸುವುದಿಲ್ಲವೋ ಆ ಛತ್ರಗಳು;

(ಸಿ) ನಿರಾಶ್ರಿತರಿಗೆ ಅಥವಾ ಪ್ರಾಣಿಗಳಿಗೆ ಆಶ್ರಯ ಕೊಡುವ ಧರ್ಮಾರ್ಥ ಉದ್ದೇಶಕ್ಕಾಗಿ ಬಳಸುತ್ತಿರುವ ಸ್ಥಳಗಳು ಮತ್ತು ಅನಾಥಾಲಯಗಳು, ಕಿವುಡರು ಮತ್ತು ಮೂಕರಿಗಾಗಿ ಗೃಹಗಳು ಮತ್ತು ಶಾಲೆಗಳು, ವೃದ್ಧರಿಗೆ

ಮತ್ತು ಪತಿತ ಮಹಿಳೆಯರಿಗಾಗಿ ಆಶ್ರಮಗಳು ಮತ್ತು ಸರ್ಕಾರವು ಅನುಮೋದಿಸಿದಂಥ ಲೋಕೋಪಕಾರಿ ರೀತಿಯಲ್ಲಿ ನಡೆಸಲಾಗುತ್ತಿರುವ ಅದೇ ರೀತಿಯ ಸಂಸ್ಥೆಗಳು;

(ಡಿ) 1961ರ ಕರ್ನಾಟಕ ಪ್ರಾಚೀನ ಮತ್ತು ಐತಿಹಾಸಿಕ ಸ್ಮಾರಕಗಳು ಮತ್ತು ಪುರಾತತ್ವ ಸ್ಥಳಗಳು ಮತ್ತು ಅವಶೇಷಗಳ ಅಧಿನಿಯಮದ ಮತ್ತು 1958ರ ಪ್ರಾಚೀನ ಸ್ಮಾರಕಗಳು ಮತ್ತು ಪುರಾತತ್ವ ಸ್ಥಳಗಳು ಮತ್ತು ಅವಶೇಷಗಳ ಅಧಿನಿಯಮದ (1958ರ ಕೇಂದ್ರ ಅಧಿನಿಯಮ 24) ಮೇರೆಗೆ ಸಂರಕ್ಷಿತವಾದಂಥ ಪ್ರಾಚೀನ ಸ್ಮಾರಕಗಳು ಅಥವಾ ವಾಸದ ಗೃಹಗಳಾಗಿ ಅಥವಾ ಸರ್ಕಾರಿ ಕಛೇರಿಗಳಾಗಿ ಬಳಸದೇ ಇರುವ ಅವುಗಳ ಭಾಗಗಳು;

(ಇ) ಧರ್ಮಾರ್ಥ ಆಸ್ಪತ್ರೆಗಳು ಮತ್ತು ಔಷಧಾಲಯಗಳು, ಆದರೆ ಅವುಗಳಿಗೆ ಲಗತ್ತಾದ ವಾಸಗೃಹಗಳು ಒಳಗೊಳ್ಳುವುದಿಲ್ಲ;

(ಎಫ್) ಕಾಲಕಾಲಕ್ಕೆ ಸರ್ಕಾರವು ಅಧಿಸೂಚಿಸಬಹುದಾದ ರೈಲ್ವೆ ಆಡಳಿತಗಳು ನಿರ್ವಹಿಸುತ್ತಿರುವಂಥ ಆಸ್ಪತ್ರೆಗಳು ಮತ್ತು ಔಷಧಾಲಯಗಳು, ಆದರೆ ಅವುಗಳಿಗೆ ಲಗತ್ತಾದ ವಾಸಗೃಹಗಳು ಒಳಗೊಳ್ಳುವುದಿಲ್ಲ;

(ಜಿ) ಆಯುಕ್ತರಿಂದ ಪ್ರಕಟಿಸಲಾದ ಪಟ್ಟಿಯಲ್ಲಿ ಇರುವ ಸ್ಮಶಾನ ಮತ್ತು ಸುಡುಗಾಡುಗಳು;

(ಹೆಚ್) ಉಚಿತ ಮನೋರಂಜನಾ ಉದ್ದೇಶಗಳಿಗಾಗಿ ಪ್ರತ್ಯೇಕವಾಗಿಟ್ಟ ಸರ್ಕಾರಿ ಭೂಮಿಗಳು ಮತ್ತು ಯಾವ ಸರ್ಕಾರಿ ಭೂಮಿಯಿಂದ ಯಾವುದೇ ಆದಾಯ ಬರುವುದಿಲ್ಲವೆಂದು ಸರ್ಕಾರವು ಅಭಿಪ್ರಾಯಪಟ್ಟು, ಅಧಿಸೂಚಿಸಬಹುದೋ ಅಂಥ ಎಲ್ಲ ಇತರ ಸರ್ಕಾರಿ ಭೂಮಿಗಳು;

(ಐ) (ಎ) ಲಾಭಕ್ಕಾಗಿ ಸ್ಥಾಪಿಸಿರದ ಅಥವಾ ನಡೆಸದಿರುವ ವಿದ್ಯಾರ್ಥಿ ನಿಲಯಗಳಿಗಾಗಿ,

(ಬಿ) ಶೈಕ್ಷಣಿಕ ಉದ್ದೇಶಗಳಿಗಾಗಿ ಸರ್ಕಾರಿ ಅಥವಾ ಸ್ಥಳೀಯ ಪ್ರಾಧಿಕಾರದ ಶೈಕ್ಷಣಿಕ ಸಂಸ್ಥೆಗಳು,

(ಸಿ) 1926ರ ಕಾರ್ಮಿಕ ಸಂಘಗಳ ಅಧಿನಿಯಮದ ಮೇರೆಗೆ ನೋಂದಾಯಿತವಾದ ಕಾರ್ಮಿಕ ಸಂಘಗಳಿಗಾಗಿ ಮತ್ತು ಅಂಥ ಸಂಘಕ್ಕೆ ಸೇರಿದ ಕಛೇರಿಗಳಿಗಾಗಿ

- ಅನನ್ಯವಾಗಿ ಬಳಸುತ್ತಿರುವ ಕಟ್ಟಡ ಅಥವಾ ಭೂಮಿಗಳು;

(ಜೆ) ಸರ್ಕಾರದ ಉದ್ದೇಶಗಳಿಗಾಗಿ ಬಳಸುತ್ತಿರುವ ಮತ್ತು ವಸತಿ ಅಥವಾ ವಾಣಿಜ್ಯ ಉದ್ದೇಶಗಳಿಗಾಗಿ ಬಳಸದಿರುವ ಅಥವಾ ಬಳಸಲು ಉದ್ದೇಶಿಸದಿರುವ, ಕೇಂದ್ರ ಸರ್ಕಾರಕ್ಕೆ ಅಥವಾ ಯಾವುದೇ ರಾಜ್ಯಸರ್ಕಾರಕ್ಕೆ ಸೇರಿದ ಕಟ್ಟಡಗಳು ಅಥವಾ ಭೂಮಿಗಳು;

(ಕೆ) ಯಾವುದೇ ಮಂಜೂರಾತಿಗೆ, ಹಂಚಿಕೆಗೆ ಅಥವಾ ಗುತ್ತಿಗೆಗೆ ಅನುಸಾರವಾಗಿ ಯಾರೇ ವ್ಯಕ್ತಿಗೆ, ಯಾವ ಕಟ್ಟಡಗಳ ಅಥವಾ ಭೂಮಿಗಳ ಸ್ವಾಧೀನವನ್ನು ಒಪ್ಪಿಸಿಲ್ಲವೊ, ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಅಧಿನಿಯಮ, 1987 ರ ಮೇರೆಗೆ ರಚಿಸಿದ ಯಾವುದೇ ನಗರಾಭಿವೃದ್ಧಿ ಪ್ರಾಧಿಕಾರಕ್ಕೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ, ಕರ್ನಾಟಕ ಗೃಹಮಂಡಲಿಗೆ ಅಥವಾ ಯಾವುದೇ ಸ್ಥಳೀಯ ಪ್ರಾಧಿಕಾರಕ್ಕೆ ಸೇರಿರುವ ಆ ಕಟ್ಟಡಗಳು ಅಥವಾ ಭೂಮಿಗಳು;

(ಎಲ್) ಸರ್ಕಾರದ ರೆವಿನ್ಯೂ ಲೆಕ್ಕಗಳಲ್ಲಿ ಕೃಷಿ ಉದ್ದೇಶಗಳಿಗಾಗಿ ಬಳಸುತ್ತಿರುವ ಭೂಮಿಯೆಂದು ನೋಂದಾಯಿತವಾಗಿರುವ ಮತ್ತು ಬೆಳೆಗಳ ಸಾಗುವಳಿಗಾಗಿ ವಾಸ್ತವವಾಗಿ ಬಳಸುತ್ತಿರುವ ಭೂಮಿ:

ಪರಂತು, (ಎ), (ಸಿ) ಮತ್ತು (ಇ) ಖಂಡಗಳಲ್ಲಿ ಒಳಗೊಂಡಿರುವುದು ಯಾವುದೂ, ಯಾವ ಕಟ್ಟಡಕ್ಕೆ ಅಥವಾ ಖಾಲಿ ಭೂಮಿಗೆ ಯಾವ ವ್ಯಕ್ತಿಯು ಬಾಡಿಗೆ ಸಂದಾಯ ಮಾಡಬೇಕಾಗಿದೆಯೋ ಅಥವಾ ಸದರಿ ಖಂಡಗಳಲ್ಲಿ ಉಲ್ಲೇಖಿಸಿರುವ ಉದ್ದೇಶಗಳಿಗಾಗಿ, ಅದನ್ನು ಯಾವ ವ್ಯಕ್ತಿಯು ಬಳಸುತ್ತಿರುವನೋ ಆ ಕಟ್ಟಡಕ್ಕೆ ಅಥವಾ ಖಾಲಿ ಭೂಮಿಗೆ, ಸ್ವತ್ತು ತೆರಿಗೆಯಿಂದ ವಿನಾಯಿತಿ ನೀಡಿದೆ ಎಂದು ಭಾವಿಸತಕ್ಕದ್ದಲ್ಲ:

ಮತ್ತೂ ಪರಂತು, (ಜೆ) ಖಂಡದ ಉದ್ದೇಶಕ್ಕಾಗಿ, ಯಾವುದೇ ಕಟ್ಟಡವನ್ನು ಅಥವಾ ಖಾಲಿ ಭೂಮಿಯನ್ನು ಸರ್ಕಾರದ ಉದ್ದೇಶಗಳಿಗಾಗಿ ಬಳಸಲಾಗುತ್ತಿದೆಯೇ ಹೊರತು ವಸತಿಯ ಅಥವಾ ವಾಣಿಜ್ಯ ಉದ್ದೇಶಗಳಿಗಾಗಿ ಬಳಸುತ್ತಿಲ್ಲ ಅಥವಾ ಬಳಸಲು ಉದ್ದೇಶಿಸಿಲ್ಲ ಎಂದು ಸರ್ಕಾರವು ಅಥವಾ ಸರ್ಕಾರದಿಂದ ಕ್ರಮಬದ್ಧವಾಗಿ ಅಧಿಕೃತನಾದ ಯಾರೇ ಅಧಿಕಾರಿಯು ನೀಡಿದ ಪ್ರಮಾಣಪತ್ರಕ್ಕೆ ಪಾಲಿಕೆಯು ಬದ್ಧವಾಗಿರತಕ್ಕದ್ದು.

(2) ಈ ಅಧ್ಯಾಯದ, ಮೇಲೆ ಹೇಳಿದ ಉಪಬಂಧಗಳಲ್ಲಿ, ಏನೇ ಇದ್ದರೂ, ಪಾಲಿಕೆಯು, ನಿಯಮಿಸಬಹುದಾದ ರೀತಿಯಲ್ಲಿ, ಮಾಜಿ ಸೈನಿಕ ಅಥವಾ ಮೃತ ಮಾಜಿ ಸೈನಿಕನ ಕುಟುಂಬಕ್ಕೆ ಸೇರಿದ ಯಾವುದಾದರೂ ಒಂದು ಭೂಮಿ ಅಥವಾ ಕಟ್ಟಡದ ಮೇಲೆ ಆಸ್ತಿ ತೆರಿಗೆಯ ಶೇಕಡ ಐವತ್ತರಷ್ಟನ್ನು ವಿನಾಯಿತಿಗೊಳಿಸಬಹುದು.

ವಿವರಣೆ.- ಈ ಪ್ರಕರಣದ ಉದ್ದೇಶಕ್ಕಾಗಿ,-

(ಎ) "ಮಾಜಿ ಸೈನಿಕ" ಎಂದರೆ, ಕೇಂದ್ರದ ಸ್ಥಾಯಿ ಸೇನೆ, ನೌಕಾ ಸೇನೆ ಮತ್ತು ವಾಯು ಸೇನೆಯಲ್ಲಿನ ಯಾವುದೇ ದರ್ಜೆಯಲ್ಲಿ ಸೇವೆ ಸಲ್ಲಿಸಿರುವ ವ್ಯಕ್ತಿ ಮತ್ತು ರಕ್ಷಣಾ ಭದ್ರತಾ ದಳಗಳು, ಸಾಮಾನ್ಯ ಮೀಸಲು ಇಂಜಿನಿಯರಿಂಗ್ ದಳ, ಲೋಕ ಸಹಾಯಕ ಸೇನೆ ಮತ್ತು ಅರೆ ಮಿಲಿಟರಿ ಪಡೆಗಳಲ್ಲಿ ಸೇವೆ ಸಲ್ಲಿಸಿರುವ ವ್ಯಕ್ತಿಯನ್ನು ಒಳಗೊಳ್ಳುವುದು;

(ಬಿ) "ಮೃತ ಮಾಜಿ ಸೈನಿಕನ ಕುಟುಂಬ" ಎಂದರೆ, ಮೃತ ಮಾಜಿ ಸೈನಿಕನ ತಂದೆ, ತಾಯಿ, ಜೀವಂತ ಪತ್ನಿ ಮತ್ತು ಅಪ್ರಾಪ್ತ ವಯಸ್ಕ ಮಕ್ಕಳು:

ಪರಂತು, ಒಂದು ಕಟ್ಟಡದ ಸಂಬಂಧದಲ್ಲಿ, ಇದನ್ನು ಮಾಜಿ ಸೈನಿಕ ಅಥವಾ ಮೃತ ಮಾಜಿ ಸೈನಿಕನ ಕುಟುಂಬದ ಸದಸ್ಯರು ಅವರ ನಿವಾಸದ ಉದ್ದೇಶಕ್ಕಾಗಿ ಬಳಸುತ್ತಿರಬೇಕು.

ಮತ್ತು ಪರಂತು, ಮಾಜಿ ಸೈನಿಕ ಅಥವಾ ಸಂದರ್ಭಾನುಸಾರವಾಗಿ, ಆತನ ಕುಟುಂಬವು, ಕರ್ನಾಟಕದ ಸೈನಿಕ ಕಲ್ಯಾಣ ಮಂಡಳಿಯು,-

(i) ಈತನು ಮಾಜಿ ಸೈನಿಕ ಅಥವಾ ಸಂದರ್ಭಾನುಸಾರ ಮೃತ ಮಾಜಿ ಸೈನಿಕನ ಕುಟುಂಬದ ಸದಸ್ಯನೆಂದು;

(ii) ಈತನು ಕರ್ನಾಟಕದ ಶಾಶ್ವತ ನಿವಾಸಿಯೆಂದು, ಮತ್ತು

(iii) ಈತನು ಅಂಥ ಕಟ್ಟಡದಲ್ಲಿ ವಾಸ ಮಾಡುತ್ತಿದ್ದಾನೆಂದು,

-ನೀಡಿರುವ ಪ್ರಮಾಣ ಪತ್ರವನ್ನು ಸಲ್ಲಿಸತಕ್ಕದ್ದು.

(3) ಈ ಪ್ರಕರಣದ ಮೇರೆಗೆ ವಿನಾಯಿತಿಗಳನ್ನು ಮಂಜೂರು ಮಾಡಿದ್ದರೂ, ನಾಗರಿಕ ಸೌಕರ್ಯಗಳನ್ನು ಒದಗಿಸುವುದಕ್ಕಾಗಿ ಮತ್ತು ಸಾಮಾನ್ಯ ಅಥವಾ ವಿಶೇಷ ಸೇವೆಗಳನ್ನು ಸಲ್ಲಿಸುವುದಕ್ಕಾಗಿ ನಿಯಮಿಸಬಹುದಾದಂಥ ದರಗಳಲ್ಲಿ ಪಾಲಿಕೆಯು ಸೇವಾ ಶುಲ್ಕಗಳನ್ನು ವಸೂಲು ಮಾಡುವುದಕ್ಕೆ ಅವಕಾಶ ಇರತಕ್ಕದ್ದು.

153. ಸ್ವತ್ತು ತೆರಿಗೆಯು ಯಾರಿಂದ ಮತ್ತು ಯಾವಾಗ ಸಂದಾಯವಾಗಬೇಕು.- (1) (2)ನೇ ಉಪ-ಪ್ರಕರಣದ ಉಪಬಂಧಗಳಿಗೆ ಒಳಪಟ್ಟು, ಸ್ವತ್ತು ತೆರಿಗೆಯು ಮೂಲತಃ,-

(ಎ) ಆವರಣಗಳು, ಸರ್ಕಾರದ ಅಥವಾ ಪಾಲಿಕೆಯ ನಿಕಟ ಸ್ವಾಧೀನದಲ್ಲಿದ್ದರೆ, ಅವುಗಳ ವಾಸ್ತವಿಕ ಅಧಿಭೋಗದಾರನಿಂದ:

ಪರಂತು, ಸರ್ಕಾರದ ಒಡೆತನದಲ್ಲಿರುವ ಮತ್ತು ಬಾಡಿಗೆ ಪಾವತಿಯ ಮೇಲೆ ಯಾರೇ ವ್ಯಕ್ತಿಯ ಸ್ವಾಧೀನದಲ್ಲಿರುವ ಆವರಣಗಳಿಗೆ ಸಂಬಂಧಿಸಿದಂತೆ, ಬಾಕಿ ಇರುವ ಸ್ವತ್ತು ತೆರಿಗೆಯನ್ನು ಸರ್ಕಾರವು ಪಾವತಿ ಮಾಡತಕ್ಕದ್ದು:

ಮತ್ತೂ ಪರಂತು, ಪಾಲಿಕೆಯ ಒಡೆತನದಲ್ಲಿರುವ ಮತ್ತು ಬಾಡಿಗೆಯ ಪಾವತಿಯ ಮೇಲೆ ಯಾರೇ ವ್ಯಕ್ತಿಯ ಸ್ವಾಧೀನದಲ್ಲಿರುವ ಆವರಣಗಳಿಗೆ ಸಂಬಂಧಿಸಿದಂತೆ, ಯಾವುದೇ ಸ್ವತ್ತು ತೆರಿಗೆಯನ್ನು ಪಾವತಿ ಮಾಡತಕ್ಕದ್ದಲ್ಲ;

(ಬಿ) ಆವರಣಗಳು ಹಾಗೆ ಸ್ವಾಧೀನದಲ್ಲಿಲ್ಲದಿದ್ದರೆ,-

(i) ಆವರಣಗಳನ್ನು ಬಾಡಿಗೆಗೆ ಕೊಟ್ಟಿದ್ದರೆ, ಬಾಡಿಗೆಗೆ ಕೊಟ್ಟವನಿಂದ;

(ii) ಆವರಣಗಳನ್ನು ಒಳಬಾಡಿಗೆಗೆ ಕೊಟ್ಟಿದ್ದರೆ ಮೊದಲು ಬಾಡಿಗೆಗೆ ಕೊಟ್ಟವನಿಂದ;

(iii) ಅವುಗಳನ್ನು ಬಾಡಿಗೆಗೆ ಕೊಟ್ಟಿರದಿದ್ದರೆ, ಯಾವ ವ್ಯಕ್ತಿಯಲ್ಲಿ ಆ ಆವರಣಗಳನ್ನು ಬಾಡಿಗೆಗೆ ಕೊಡುವ ಹಕ್ಕು ನಿಹಿತವಾಗಿದೆಯೋ ಆ ವ್ಯಕ್ತಿಯಿಂದ

- ಪಾವತಿಯಾಗತಕ್ಕದ್ದು.

(2) ಬಾಡಿಗೆದಾರನಿಗೆ ಯಾವುದೇ ಭೂಮಿಯನ್ನು ಒಂದು ವರ್ಷಕ್ಕೆ ಮೀರಿದ ಯಾವುದೇ ಅವಧಿಗಾಗಿ ಬಾಡಿಗೆಗೆ ಕೊಟ್ಟಿದ್ದರೆ ಮತ್ತು ಅಂಥ ಬಾಡಿಗೆದಾರನು ಅಥವಾ ಅಂಥ ಬಾಡಿಗೆದಾರನಿಂದ ಯಾವುದೇ ರೀತಿಯಲ್ಲಿ ಸ್ವಾಮ್ಯವನ್ನು ಪಡೆದಿರುವ ಯಾರೇ ವ್ಯಕ್ತಿಯು ಆ ಭೂಮಿಯ ಮೇಲೆ ಕಟ್ಟಡವನ್ನು ಕಟ್ಟಿದ್ದರೆ, ಸದರಿ ಭೂಮಿಯ ಮೇಲೆ ಮತ್ತು ಅದರ ಮೇಲೆ ಕಟ್ಟಿದ ಕಟ್ಟಡದ ಮೇಲೆ, ನಿರ್ಧರಣೆ ಮಾಡಿದ ಸ್ವತ್ತು ತೆರಿಗೆಯನ್ನು ಆ ಬಾಡಿಗೆದಾರನು ಅಥವಾ ಆ ವ್ಯಕ್ತಿಯು, ಆ ಆವರಣಗಳು ಸದರಿ ಬಾಡಿಗೆದಾರನ ಅಥವಾ ಆ ವ್ಯಕ್ತಿಯ ಸ್ವಾಧೀನದಲ್ಲಿ ಇರಲಿ ಅಥವಾ ಇಲ್ಲದಿರಲಿ ಮೂಲತಃ ಸಂದಾಯ ಮಾಡತಕ್ಕದ್ದು.

154. ಸ್ವತ್ತು ತೆರಿಗೆಯ ರಿಜಿಸ್ಟರನ್ನು ಸಿದ್ಧಪಡಿಸುವುದು ಮತ್ತು ಪ್ರಕಟಿಸುವುದು.- (1) ನಗರದಲ್ಲಿನ ಕಟ್ಟಡಗಳ ಅಥವಾ ಭೂಮಿಗಳ ಅಥವಾ ಅವೆರಡರ ಸಂಬಂಧದಲ್ಲಿನ ಸ್ವತ್ತು ತೆರಿಗೆಯ ರಿಜಿಸ್ಟರನ್ನು ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂಥ ರೀತಿಯಲ್ಲಿ ನಿರ್ವಹಿಸತಕ್ಕದ್ದು.

(2) ಯಾರೇ ವ್ಯಕ್ತಿಯು ಸಲ್ಲಿಸಿದ ಅರ್ಜಿಯ ಮೇಲೆ ಮತ್ತು ಪಾಲಿಕೆಯು ಕಾಲಕಾಲಕ್ಕೆ ನಿರ್ದಿಷ್ಟಪಡಿಸಬಹುದಾದ ಅಂಥ ಶುಲ್ಕವನ್ನು ಪಾವತಿ ಮಾಡುವುದಕ್ಕೆ ಒಳಪಟ್ಟು, ಅಧಿಕೃತ ಅಧಿಕಾರಿಯು ವ್ಯಕ್ತಿಗೆ ಸೂಕ್ತ ಸಮಯದಲ್ಲಿ ಸ್ವತ್ತು ತೆರಿಗೆಯ ರಿಜಿಸ್ಟರನ್ನು ಪರಿಶೀಲಿಸಲು ಅನುಮತಿ ನೀಡಬಹುದು ಅಥವಾ ರಿಜಿಸ್ಟರಿನಲ್ಲಿ ಮಾಡಿದ ನಮೂದುಗಳ ಪ್ರಮಾಣೀಕೃತ ಉದ್ಧೃತ ಪ್ರತಿಯನ್ನು ಅಥವಾ ಅದರ ಪ್ರಮಾಣಿತ ಪ್ರತಿಗಳನ್ನು ನೀಡಬಹುದು.

(3) ಮುಖ್ಯ ಆಯುಕ್ತರು ಅಥವಾ ಅಧಿಕೃತ ಅಧಿಕಾರಿಯು, ಕಟ್ಟಡದ ಅಥವಾ ಭೂಮಿಗಳ ಪ್ರತಿಯೊಬ್ಬ ಮಾಲೀಕನಿಗೆ ಅಥವಾ ಅಧಿಭೋಗದಾರನಿಗೆ, ಕಟ್ಟಡಗಳ ಅಥವಾ ಭೂಮಿಗಳ ಅಥವಾ ಅವೆರಡರ ಎಲ್ಲ

ವಿವರಗಳನ್ನು ಒಳಗೊಂಡ ಮತ್ತು ಅಂಥ ಕಟ್ಟಡಗಳ ಅಥವಾ ಭೂಮಿಯ ಅಥವಾ ಅವೆರಡಕ್ಕೆ ಸಂಬಂಧಿಸಿದಂತೆ ಪಾವತಿ ಮಾಡಬೇಕಾದ ಸ್ವತ್ತು ತೆರಿಗೆಯ ಪ್ರಮಾಣಪತ್ರವನ್ನು ನೀಡಬಹುದು.

155. ಭೂಮಿಗಳ ಮತ್ತು ಕಟ್ಟಡಗಳ ಸರ್ವೆ ಮಾಡುವುದು ಮತ್ತು ಸ್ವತ್ತು ರಿಜಿಸ್ಟರನ್ನು ಸಿದ್ಧಪಡಿಸುವುದು.- (1) ಮುಖ್ಯ ಆಯುಕ್ತರು, ಸರ್ಕಾರದ ಸಾಮಾನ್ಯ ಅಥವಾ ವಿಶೇಷ ಆದೇಶಗಳಿಗೊಳಪಟ್ಟು, ಸ್ವತ್ತು ತೆರಿಗೆಯ ನಿರ್ಧರಣೆಯ ದೃಷ್ಟಿಯಿಂದ, ನಗರದೊಳಗಿನ ಕಟ್ಟಡಗಳನ್ನು ಅಥವಾ ಭೂಮಿಗಳನ್ನು ಅಥವಾ ಅವೆರಡರನ್ನು ಸರ್ವೇ ಮಾಡಲು ನಿರ್ದೇಶಿಸತಕ್ಕದ್ದು ಮತ್ತು ಹಾಗೇ ಸರ್ವೆ ಮಾಡಲು ಮತ್ತು ಸ್ವತ್ತು ರಿಜಿಸ್ಟರನ್ನು ಸಿದ್ಧಪಡಿಸಲು ಯಾರೇ ಅರ್ಹ ವ್ಯಕ್ತಿಯ ಅಥವಾ ಏಜೆನ್ಸಿಯ ಸೇವೆಗಳನ್ನು ಪಡೆಯಬಹುದು.

(2) ಸ್ವತ್ತು ರಿಜಿಸ್ಟರನ್ನು ಕಟ್ಟಡಗಳ ಅಥವಾ ಭೂಮಿಗಳ ಅಥವಾ ಅವೆರಡರ ಸಂಬಂಧದಲ್ಲಿ ನಿಯಮಿಸಬಹುದಾದ ರೀತಿಯಲ್ಲಿ ಮತ್ತು ಅಂಥ ವಿವರಗಳನ್ನು ಒಳಗೊಂಡಂತೆ ನಿರ್ವಹಿಸತಕ್ಕದ್ದು.

(3) ಯಾವುದೇ ಕಟ್ಟಡಗಳಿಗೆ ಅಥವಾ ಭೂಮಿಗಳಿಗೆ ಅಥವಾ ಅವೆರಡಕ್ಕೂ ಸಂಬಂಧಿಸಿದಂತೆ ಸ್ವತ್ತು ರಿಜಿಸ್ಟರನ್ನು ಸಿದ್ಧಪಡಿಸುವ ಅಥವಾ ಸ್ವತ್ತು ತೆರಿಗೆಯ ನಿರ್ಧರಣೆಯ ಉದ್ದೇಶಕ್ಕಾಗಿ, ಮುಖ್ಯ ಆಯುಕ್ತರು ಅಥವಾ ಈ ಬಗ್ಗೆ ಅವರು ಅಧಿಕೃತಗೊಳಿಸಿದ ಯಾರೇ ವ್ಯಕ್ತಿಯು, ಅಂಥ ಪರಿವೀಕ್ಷಣೆ ಮಾಡುವುದಕ್ಕೂ ಮೊದಲು ಮಾಲೀಕನಿಗೆ ಅಥವಾ ಅಧಿಭೋಗದಾರನಿಗೆ ನೋಟೀಸನ್ನು ಕೊಟ್ಟ ತರುವಾಯ, ಯಾವುದೇ ಭೂಮಿಯನ್ನು ಅಥವಾ ಕಟ್ಟಡವನ್ನು ಪ್ರವೇಶಿಸಬಹುದು, ಪರಿವೀಕ್ಷಣೆ ಮಾಡಬಹುದು, ಸರ್ವೆ ಮಾಡಬಹುದು ಅಥವಾ ಅಳತೆ ಮಾಡಬಹುದು ಮತ್ತು ಮಾಲೀಕನು ಅಥವಾ ಅಧಿಭೋಗದಾರನು, ಈ ಉದ್ದೇಶಕ್ಕಾಗಿ ಅಗತ್ಯಪಡಿಸಿದ ಅವಶ್ಯಕ ಮಾಹಿತಿಯನ್ನು ಒದಗಿಸಲು ಬದ್ಧನಾಗಿರತಕ್ಕದ್ದು:

ಪರಂತು, ಯಾವುದೇ ಕಟ್ಟಡ ಅಥವಾ ಭೂಮಿಯ ಒಳಗೆ ಮತ್ತು ಮೇಲೆ ಸೂರ್ಯೋದಯ ಮತ್ತು ಸೂರ್ಯಾಸ್ತದ ನಡುವೆ ಪ್ರವೇಶಿಸತಕ್ಕದ್ದು:

ಮತ್ತೂ ಪರಂತು, ಮಾನವ ವಾಸಕ್ಕಾಗಿ ಬಳಸುತ್ತಿರುವ ಕಟ್ಟಡಗಳಾಗಿದ್ದರೆ, ಅಲ್ಲಿ ವಾಸಿಸುತ್ತಿರುವವರ ಸಾಮಾಜಿಕ ಹಾಗೂ ಧಾರ್ಮಿಕ ಬದ್ಧತೆಗಳಿಗೆ ಸೂಕ್ತ ಗೌರವವನ್ನು ನೀಡತಕ್ಕದ್ದು ಮತ್ತು ಮಹಿಳೆಯು ವಾಸ್ತವಿಕವಾಗಿ ವಾಸಿಸುತ್ತಿರುವ ಯಾವುದೇ ಕೋಣೆಯನ್ನು, ಆಕೆಯು ಆ ಕೋಣೆಯಿಂದ ಹೊರಕ್ಕೆ ಹೋಗುವುದಾದರೆ ಹೋಗಬಹುದೆಂದು ತಿಳಿಸಿದ್ದ ಹೊರತು, ಆಕೆಗೆ ತಿಳಿಸುವವರೆಗೆ ಮತ್ತು ಹೊರಕ್ಕೆ ಹೊಗಲು ಸಮಂಜಸ ಸೌಲಭ್ಯವನ್ನು ನೀಡುವವರೆಗೆ ಪ್ರವೇಶಿಸತಕ್ಕದ್ದಲ್ಲ.

156. ಸ್ವತ್ತು ತೆರಿಗೆ ಪಾವತಿ ಮಾಡುವುದಕ್ಕಾಗಿ ತಗಾದೆ ನೋಟೀಸು ಮತ್ತು ಅಂಥ ತಗಾದೆ ನೋಟೀಸಿನ ವಿರುದ್ಧ ಅಪೀಲು.- (1) 148ನೇ ಪ್ರಕರಣದ ಮೇರೆಗೆ ವಿಧಿಸತಕ್ಕ ದಂಡವನ್ನು ಒಳಗೊಂಡಂತೆ ಸ್ವತ್ತು ತೆರಿಗೆಯನ್ನು ಅದು ಬಾಕಿಯಾದ ತರುವಾಯವೂ ಪಾವತಿ ಮಾಡದಿದ್ದರೆ, ಅದನ್ನು ಪಾವತಿ ಮಾಡಲು ಹೊಣೆಗಾರನಾದ ವ್ಯಕ್ತಿಗೆ ಪಾಲಿಕೆಯು, ನಿಯಮಿಸಬಹುದಾದ ಅಂಥ ನಮೂನೆಯಲ್ಲಿ ತಗಾದೆ ನೋಟೀಸನ್ನು ಜಾರಿ ಮಾಡಿಸಬಹುದು.

(2) (1)ನೇ ಉಪಪ್ರಕರಣದ ಮೇರೆಗೆ ಯಾವ ವ್ಯಕ್ತಿಗೆ ತಗಾದೆ ನೋಟೀಸನ್ನು ಜಾರಿಮಾಡಲಾಗಿದೆಯೋ ಆ ವ್ಯಕ್ತಿಯು ಅಂಥ ತಗಾದೆ ನೋಟೀಸನ್ನು ಜಾರಿ ಮಾಡಿಸಿದ ದಿನಾಂಕದಿಂದ ಮೂವತ್ತು ದಿನಗಳೊಳಗೆ,-

(ಎ) ನೋಟೀಸಿನಲ್ಲಿ ತಗಾದೆ ಮಾಡಿದ ಮೊತ್ತವನ್ನು ಸಂದಾಯ ಮಾಡದಿದ್ದರೆ, ಅಥವಾ

(ಬಿ) ತಗಾದೆಯ ವಿರುದ್ಧ (3)ನೇ ಉಪಪ್ರಕರಣದ ಮೇರೆಗೆ ಅಪೀಲು ಸಲ್ಲಿಸದಿದ್ದರೆ,

- ಆತನನ್ನು ತಪ್ಪತಸ್ಥನೆಂದು ಭಾವಿಸತಕ್ಕದ್ದು ಮತ್ತು ತದನಂತರ ಅಂಥ ಮೊತ್ತವನ್ನು ನಿಯಮಿಸಬಹುದಾದಂಥ ದಂಡದ ಜೊತೆಗೆ ಮತ್ತು ಅಂಥ ರೀತಿಯಲ್ಲಿ ವಸೂಲ್ಮಾಡತಕ್ಕದ್ದು.

(3) 144ನೇ ಪ್ರಕರಣಗಳಲ್ಲಿ ಏನೇ ಒಳಗೊಂಡಿದ್ದಾಗ್ಯೂ, (1)ನೇ ಉಪಪ್ರಕರಣದ ಮೇರೆಗೆ ಜಾರಿ ಮಾಡಿದ ತಗಾದೆ ನೋಟೀಸಿನಲ್ಲಿರುವ ಕ್ಲೇಮಿನ ಬಗ್ಗೆ ವಿವಾದಿಸುವ ಯಾರೇ ವ್ಯಕ್ತಿಯು, ಅಂಥ ನೋಟೀಸನ್ನು ಜಾರಿ ಮಾಡಿದ ತರುವಾಯ ಮೂವತ್ತು ದಿನಗಳೊಳಗೆ ನಿಯಮಿಸಬಹುದಾದಂಥ ರೀತಿಯಲ್ಲಿ, ಅಂಥ ನಿಬಂಧನೆಗಳಿಗೊಳಪಟ್ಟು ಮತ್ತು ಅಂಥ ಪ್ರಾಧಿಕಾರಕ್ಕೆ ಅಪೀಲು ಮಾಡಿಕೊಳ್ಳಬಹುದು.

157. ಜಾಹೀರಾತಿನ ಮೇಲೆ ಶುಲ್ಕ.- ಯಾವುದೇ ಭೂಮಿಯ, ಕಟ್ಟಡದ, ಗೋಡೆಯ ಅಥವಾ ರಚನೆಯ ಮೇಲೆ ಅಥವಾ ಮೇಲ್ಭಾಗದಲ್ಲಿ ಯಾವುದೇ ಜಾಹೀರಾತನ್ನು ಇಟ್ಟಿರುವ, ಪ್ರದರ್ಶಿಸುವ, ಅಳವಡಿಸುವ ಅಥವಾ ಉಳಿಸಿಕೊಂಡಿರುವ ಅಥವಾ ಯಾವುದೇ ರೀತಿಯಲ್ಲಾಗಲಿ ಯಾವುದೇ ಸಾರ್ವಜನಿಕ ಇಲ್ಲವೇ ಖಾಸಗಿ ಸ್ಥಳದಲ್ಲಾಗಲಿ ಸಾರ್ವಜನಿಕರ ದೃಷ್ಟಿಗೆ ಬೀಳುವಂತೆ ಯಾವುದೇ ಜಾಹೀರಾತನ್ನು ಪ್ರದರ್ಶಿಸುವ ಪ್ರತಿಯೊಬ್ಬ ವ್ಯಕ್ತಿಯು, ಹಾಗೆ ಇಟ್ಟಿರುವ, ಪ್ರದರ್ಶಿಸಿದ, ಅಳವಡಿಸಿದ, ಉಳಿಸಿಕೊಂಡಿರುವ ಅಥವಾ ಸಾರ್ವಜನಿಕ ದೃಷ್ಟಿಗೆ ಬೀಳುವಂತೆ ಪ್ರದರ್ಶಿಸಿರುವ ಪ್ರತಿಯೊಂದು ಜಾಹೀರಾತಿನ ಮೇಲೆ ಸರ್ಕಾರದ ಅನುಮೋದನೆಯೊಂದಿಗೆ ಪಾಲಿಕೆಯು ನಿರ್ಣಯದ ಮೂಲಕ ನಿರ್ಧರಿಸಬಹುದಾದಂತೆ ಲೆಕ್ಕ ಹಾಕಿದಂಥ ದರಗಳಲ್ಲಿ ಮತ್ತು ಅಂಥ ರೀತಿಯಲ್ಲಿ ಮತ್ತು ಅಂಥ ವಿಧಾನದಲ್ಲಿ ಮತ್ತು ಅಂಥ ವಿನಾಯಿತಿಗಳಿಗೊಳಪಟ್ಟು ಪಾಲಿಕೆಯು ಸರ್ಕಾರದ ಅನುಮತಿಯೊಂದಿಗೆ ತೆರಿಗೆಯನ್ನು ಪಾವತಿ ಮಾಡತಕ್ಕದ್ದು:

ಪರಂತು, ಆ ದರಗಳು ಯಾವಾಗಲೂ ಈ ಬಗ್ಗೆ ಸರ್ಕಾರವು ವಿಧಿಸಿದ ಗರಿಷ್ಠ ಮತ್ತು ಕನಿಷ್ಠ ಮಿತಿಗಳಿಗೆ ಒಳಪಟ್ಟಿರತಕ್ಕದ್ದು:

ಮತ್ತೂ ಪರಂತು,-

(ಎ) ಸಾರ್ವಜನಿಕ ಸಭೆಯ ಅಥವಾ ಪಾಲಿಕೆಯ; ಅಥವಾ

(ಬಿ) ಯಾವುದೇ ಶಾಸನ ರಚನಾ ನಿಕಾಯದ ಚುನಾವಣೆಯ; ಅಥವಾ

(ಸಿ) ಅಂಥ ಚುನಾವಣೆಗೆ ಸಂಬಂಧಿಸಿದಂತೆ ಉಮೇದುವಾರಿಕೆಯ

- ಯಾವುದೇ ಜಾಹೀರಾತು ಅಥವಾ ನೋಟೀಸಿನ ಮೇಲೆ ಈ ಪ್ರಕರಣದ ಮೇರೆಗೆ ಯಾವುದೇ ತೆರಿಗೆಯನ್ನು ವಿಧಿಸತಕ್ಕದ್ದಲ್ಲ:

ಮತ್ತೂ ಪರಂತು, ಗಗನ ಚುಂಬಿ ಜಾಹೀರಾತು ಅಲ್ಲದ, ಮತ್ತು,–

(ಎ) ಯಾವುದೇ ಕಟ್ಟಡದ ಕಿಟಕಿಯೊಳಗೆ ಪ್ರದರ್ಶಿಸಿರುವಂಥ, ಅಥವಾ

(ಬಿ) ಯಾವ ಭೂಮಿಯ ಅಥವಾ ಕಟ್ಟಡದ ಮೇಲೆ ಅಥವಾ ಮೇಲ್ಭಾಗದಲ್ಲಿ ಅಂಥ ಜಾಹೀರಾತನ್ನು ಪ್ರದರ್ಶಿಸಲಾಗಿದೆಯೋ ಆ ಯಾವುದೇ ಭೂಮಿಯೊಳಗೆ ಅಥವಾ ಕಟ್ಟಡದೊಳಗೆ ನಡೆಸಲಾಗುತ್ತಿರುವ ವ್ಯಾಪಾರ ಅಥವಾ ವ್ಯವಹಾರಕ್ಕೆ ಅಥವಾ ಅಂಥ ಭೂಮಿಯ ಅಥವಾ ಕಟ್ಟಡದ ಅಥವಾ ಅದರಲ್ಲಿನ ಯಾವುದೇ ವಸ್ತುಗಳ ಯಾವುದೇ ಮಾರಾಟಕ್ಕೆ ಅಥವಾ ಬಾಡಿಗೆಗೆ ನೀಡುವುದಕ್ಕೆ ಅಥವಾ ಅಂಥ ಭೂಮಿಯ ಅಥವಾ ಕಟ್ಟಡದ ಮೇಲೆ ಅಥವಾ ಅದರಲ್ಲಿ ನಡೆಸಲಾಗುವ ಯಾವುದೇ ಮಾರಾಟಕ್ಕೆ, ಮನರಂಜನೆಗೆ ಅಥವಾ ಸಭೆಗೆ ಸಂಬಂಧಿಸಿದಂಥ; ಅಥವಾ

(ಸಿ) ಯಾವ ಭೂಮಿಯ ಅಥವಾ ಕಟ್ಟಡದ ಮೇಲೆ ಅಥವಾ ಮೇಲ್ಭಾಗದಲ್ಲಿ ಜಾಹೀರಾತನ್ನು ಪ್ರದರ್ಶಿಸಲಾಗಿದೆಯೋ ಆ ಭೂಮಿಯ ಅಥವಾ ಕಟ್ಟಡದ ಹೆಸರಿಗೆ ಅಥವಾ ಅಂಥ ಭೂಮಿಯ ಅಥವಾ ಕಟ್ಟಡದ ಮಾಲೀಕನ ಅಥವಾ ಅಧಿಭೋಗದಾರನ ಹೆಸರಿಗೆ ಸಂಬಂಧಪಟಂ್ಟಥ; ಅಥವಾ

(ಡಿ) ಯಾವುದೇ ರೈಲ್ವೆಯ ವ್ಯವಹಾರಗಳಿಗೆ ಸಂಬಂಧಪಟಂ್ಟಥ; ಅಥವಾ

(ಇ) ಯಾವುದೇ ರೈಲ್ವೆ ನಿಲ್ದಾಣದೊಳಗೆ ಅಥವಾ ಯಾವುದೇ ಬೀದಿಯ ಎದುರಿಗಿರುವಂಥ ಗೋಡೆಯ ಅಥವಾ ಸ್ವತ್ತಿನ ಮೇಲ್ಮೈನ ಯಾವುದೇ ಭಾಗವನ್ನು ಹೊರತುಪಡಿಸಿ ರೈಲ್ವೆಯ ಯಾವುದೇ ಗೋಡೆಯ ಅಥವಾ ಇತರ ಸ್ವತ್ತಿನ ಮೇಲೆ ಪ್ರದರ್ಶಿಸಿರುವಂಥ

- ಯಾವುದೇ ಜಾಹೀರಾತಿನ ಮೇಲೆ ಅಂಥ ಯಾವುದೇ ಶುಲ್ಕವನ್ನು ವಿಧಿಸತಕ್ಕದ್ದಲ್ಲ.

ವಿವರಣೆ 1.- ಈ ಪ್ರಕರಣದಲ್ಲಿ `ರಚನೆ' ಎಂಬ ಪದವು ಜಾಹೀರಾತಿನಂತೆ ಅಥವಾ ಜಾಹೀರಾತು ಮಾಧ್ಯಮವಾಗಿ ಬಳಸಲಾದ ಚಕ್ರಗಳ ಮೇಲಿರುವ ಯಾವುದೇ ಚಲಿಸುವ ಫಲಕವನ್ನು ಒಳಗೊಳ್ಳತಕ್ಕದ್ದು.

ವಿವರಣೆ 2.- ಈ ಪ್ರಕರಣದಲ್ಲಿ `ಗಗನಚುಂಬಿ' ಜಾಹೀರಾತು ಎಂದರೆ, ಯಾವುದೇ ಸಾರ್ವಜನಿಕ ಸ್ಥಳದಲ್ಲಿನ ಒಂದು ಜಾಗದಿಂದ ಆಕಾಶದ ಹಿನ್ನೆಲೆಯಲ್ಲಿ ಸ್ಪಷ್ಟವಾಗಿ ಕಾಣುವಂಥ ಯಾವುದೇ ಭೂಮಿಯ, ಕಟ್ಟಡದ, ಗೋಡೆಯ, ಅಥವಾ ರಚನೆಯ ಅಥವಾ ಅದರ ಯಾವುದೇ ಭಾಗದ ಮೇಲೆ ಅಥವಾ ಮೇಲ್ಭಾಗದಲ್ಲಿ ಸಂಪೂರ್ಣವಾಗಿ ಅಥವಾ ಭಾಗಶಃ ಇರುವ ಯಾವುದೇ ಸಂ್ಥಬ, ಕಂಬ, ನಿಲುಗಂಬ, ಚೌಕಟ್ಟು ಅಥವಾ ಇತರ ಆಸರೆಯ ಮೇಲೆ ನಿಂತಿರುವ ಅಥವಾ ಅದಕ್ಕೆ ಲಗತ್ತಾದ ಯಾವುದೇ ಜಾಹೀರಾತು ಮತ್ತು ಅದು ಅಂಥ ಯಾವುದೇ ಸಂ್ಥಬ, ಕಂಬ, ನಿಲುಗಂಬ, ಚೌಕಟ್ಟು ಅಥವಾ ಇತರ ಆಸರೆಯ ಎಲ್ಲ ಮತ್ತು ಪ್ರತಿಯೊಂದು ಭಾಗವನ್ನೂ ಒಳಗೊಳ್ಳುತ್ತದೆ. "ಗಗನಚುಂಬಿ ಜಾಹೀರಾತು" ಎಂಬ ಪದವು, ಯಾವುದೇ ಭೂಮಿಯ, ಕಟ್ಟಡದ, ರಚನೆಯ ಮೇಲೆ ಅಥವಾ ಮೇಲ್ಭಾಗದಲ್ಲಿ ಅಥವಾ ಯಾವುದೇ ಸಾರ್ವಜನಿಕ ಸ್ಥಳದ ಮೇಲೆ ಅಥವಾ ಮೇಲ್ಭಾಗದಲ್ಲಿ ಯಾವುದೇ ಜಾಹೀರಾತಿನ ಉದ್ದೇಶಗಳಿಗಾಗಿ ಸಂಪೂರ್ಣವಾಗಿ ಅಥವಾ ಭಾಗಶಃ ಬಳಸಲಾದ ಯಾವುದೇ ಬಲೂನು, ಪ್ಯಾರಾಚೂಟ್ ಅಥವಾ ಅಂಥದೇ ಸಾಧನವನ್ನು ಸಹ ಒಳಗೊಳ್ಳತಕ್ಕದ್ದು, ಆದರೆ,-

(ಎ) ಯಾವುದೇ ಜಾಹೀರಾತಿನ ಉದ್ದೇಶಕ್ಕಾಗಿ ಸಂಪೂರ್ಣವಾಗಿ ಅಥವಾ ಭಾಗಶಃ ಅಳವಡಿಸಿಕೊಂಡ ಅಥವಾ ಬಳಸಿಕೊಂಡ ಹೊರತು, ಯಾವುದೇ ಧ್ವಜಸಂ್ತಭ, ಕಂಬ, ವ್ಯಾನ್ ಅಥವಾ ವಾಯುದಿಕ್ಸೂಚಿ; ಅಥವಾ

(ಬಿ) ಯಾವುದೇ ಕಟ್ಟಡದ ಗೋಡೆಗೆ ಅಥವಾ ಪ್ಯಾರಾಪೆಟ್ ಗೋಡೆಗೆ ಅಥವಾ ಅದರ ತುದಿಯ ಮೇಲೆ ಅಥವಾ ಯಾವುದೇ ಗೋಡೆಯ ಕಾರ್ನಿಸು ಅಥವಾ ತಡೆವರಸೆಯ ಮೇಲೆ ಅಥವಾ ಮೇಲ್ಚಾವಣಿಯ ಅಂಚಿಗೆ ಸುಭದ್ರವಾಗಿ ಅಳವಡಿಸಿದ ಯಾವುದೇ ಚಿಹ್ನೆ ಅಥವಾ ಯಾವುದೇ ಫಲಕ, ಚೌಕ್ಕಟ್ಟು ಅಥವಾ ಇತರ ಸಾಧನ:

ಪರಂತು, ಅಂಥ ಫಲಕ, ಚೌಕಟ್ಟು ಅಥವಾ ಇತರ ಸಾಧನವು ಸಪಾಟಾದ ಮೇಲ್ಮೈನದಾಗಿರತಕ್ಕದ್ದು ಮತ್ತು ರಂಧ್ರ ಕೊರೆದು ಮಾಡಿದ ಚಿತ್ರ ಕೆಲಸವಾಗಿರತಕ್ಕದ್ದಲ್ಲ ಮತ್ತು ಯಾವ ಗೋಡೆಗೆ ಅಥವಾ ಪ್ಯಾರಾಪೆಟ್ ಗೋಡೆಗೆ ಅಥವಾ ಅಂಚಿಗೆ ಅಥವಾ ಅದಕ್ಕೆ ಎದುರಾಗಿ ಅಥವಾ ಅದರ ಮೇಲೆ ಅದನ್ನು ಅಳವಡಿಸಲಾಗಿದೆಯೋ ಅಥವಾ ಅದು ನಿಂತಿದೆಯೋ, ಆ

ಯಾವುದೇ ಗೋಡೆಯ ಅಥವಾ ಪ್ಯಾರಾಪೆಟ್ ಗೋಡೆಯ ಅಥವಾ ಅಂಚಿನ ಯಾವುದೇ ಭಾಗದ ಮೇಲೆ ಅದು ಒಂದು ಮೀಟರಿಗಿಂತ ಹೆಚ್ಚು ಎತ್ತರಕ್ಕೆ ವಿಸ್ತರಿಸಿರತಕ್ಕದ್ದಲ್ಲ:

(ಸಿ) ಯಾವ ಭೂಮಿಯ ಅಥವಾ ಕಟ್ಟಡದ ಮೇಲೆ ಅಥವಾ ಮೇಲ್ಭಾಗದಲ್ಲಿ ಜಾಹೀರಾತನ್ನು ಪ್ರದರ್ಶಿಸಲಾಗಿದೆಯೋ ಆ ಭೂಮಿಯ ಅಥವಾ ಕಟ್ಟಡದ ಹೆಸರಿಗೆ ಅಥವಾ ಅಂಥ ಭೂಮಿಯ ಅಥವಾ ಕಟ್ಟಡದ ಮಾಲೀಕನ ಅಥವಾ ಅಧಿಭೋಗದಾರನ ಹೆಸರಿಗೆ ಸಂಬಂಧಪಟ್ಟ ಯಾವುದೇ ಜಾಹೀರಾತು; ಅಥವಾ

(ಡಿ) ರೈಲ್ವೆ ವ್ಯವಹಾರಕ್ಕೆ ಅನನ್ಯವಾಗಿ ಸಂಬಂಧಿಸಿದ ಮತ್ತು ಯಾವುದೇ ರೈಲ್ವೆ, ರೈಲ್ವೆ ನಿಲ್ದಾಣ, ಪ್ರಾಂಗಣ, ಪ್ಲಾಟ್‌ಫಾರಂ ಅಥವಾ ರೈಲ್ವೆಗೆ ಸೇರಿದ ನಿಲ್ದಾಣಕ್ಕೆ ಹೋಗುವ ದಾರಿ ಇವುಗಳ ಮೇಲೆ ಅಥವಾ ಮೇಲ್ಭಾಗದಲ್ಲಿ ಸಂಪೂರ್ಣವಾಗಿ ಹಾಕಲಾದ ಮತ್ತು ಯಾವುದೇ ಬೀದಿಗೆ ಅಥವಾ ಸಾರ್ವಜನಿಕ ಸ್ಥಳದಲ್ಲಿ ಬೀಳದ ಹಾಗೆ ಹಾಕಲಾದ ಯಾವುದೇ ಜಾಹೀರಾತು; ಅಥವಾ

(ಇ) ಮಾರಾಟ ಮಾಡಬೇಕಾದ ಅಥವಾ ಬಾಡಿಗೆಗೆ ಕೊಡಬೇಕಾದ ಭೂಮಿ ಅಥವಾ ಕಟ್ಟಡಗಳ ಬಗ್ಗೆ, ಅಂಥ ಭೂಮಿಯ ಅಥವಾ ಕಟ್ಟಡಗಳ ಮೇಲೆ ಹಾಕಲಾದ ಯಾವುದೇ ನೋಟೀಸು

- ಒಳಗೊಳ್ಳತಕ್ಕದ್ದಲ್ಲ.

ವಿವರಣೆ 3.- ಈ ಪ್ರಕರಣದ ಉದ್ದೇಶಕ್ಕಾಗಿ `ಸಾರ್ವಜನಿಕ ಸ್ಥಳ' ಎಂದರೆ, ಅದನ್ನು ವಾಸ್ತವವಾಗಿ ಸಾರ್ವಜನಿಕರು ಬಳಸುತ್ತಿರಲಿ ಅಥವಾ ಬಳಸದಿರಲಿ ಅಥವಾ ಉಪಭೋಗಿಸುತ್ತಿರಲಿ ಅಥವಾ ಉಪಭೋಗಿಸದಿರಲಿ, ಸಾರ್ವಜನಿಕರ ಬಳಕೆಗೆ ಮತ್ತು ಉಪಭೋಗಕ್ಕೆ ಮುಕ್ತವಾಗಿರುವ ಆ ಯಾವುದೇ ಸ್ಥಳ.

158. ಮುಖ್ಯ ಆಯುಕ್ತರ ಲಿಖಿತ ಅನುಮತಿಯಿಲ್ಲದ ಜಾಹೀರಾತುಗಳ ನಿಷೇಧ.- (1) 157ನೇ ಪ್ರಕರಣದ ಮೇರೆಗೆ ಶುಲ್ಕ ವಿಧಿಸುವುದನ್ನು ಪಾಲಿಕೆಯು ನಿರ್ಧರಿಸಿದ ತರುವಾಯ ಮುಖ್ಯ ಆಯುಕ್ತರ ಲಿಖಿತ ಅನುಮತಿ ಇಲ್ಲದೆ ನಗರದೊಳಗಿನ ಯಾವುದೇ ಭೂಮಿಯ, ಕಟ್ಟಡದ, ಗೋಡೆಯ, ಜಾಹೀರಾತು ಫಲಕಗಳ ಅಥವಾ ರಚನೆಯ ಮೇಲೆ ಅಥವಾ ಅದರ ಮೇಲ್ಭಾಗದಲ್ಲಿ ಯಾವುದೇ ಜಾಹೀರಾತನ್ನು ನಿರ್ಮಿಸತಕ್ಕದ್ದಲ್ಲ, ಪ್ರದರ್ಶಿಸತಕ್ಕದ್ದಲ್ಲ, ಅಳವಡಿಸತಕ್ಕದ್ದಲ್ಲ ಅಥವಾ ಇಡತಕ್ಕದ್ದಲ್ಲ ಅಥವಾ ಯಾವುದೇ ಸ್ಥಳದಲ್ಲಿ ಯಾವುದೇ ರೀತಿಯಲ್ಲೇ ಆಗಲಿ ಪ್ರದರ್ಶಿಸತಕ್ಕದ್ದಲ್ಲ.

(2) ಮುಖ್ಯ ಆಯುಕ್ತರು,-

(i) ಜಾಹೀರಾತು ಪಾಲಿಕೆಯು ರಚಿಸಿದ ಯಾವುದೇ ಉಪವಿಧಿಯನ್ನು ಉಲಂಘಿಸಿದರೆ; ಅಥವಾ

(ii) ಜಾಹೀರಾತಿಗೆ ಸಂಬಂಧಿಸಿದಂತೆ ಶುಲ್ಕ ಯಾವುದಾದರೂ ಬಾಕಿ ಇದ್ದು ಅದನ್ನು ಪಾವತಿ ಮಾಡಿರದಿದ್ದರೆ,

- ಅಂಥ ಅನುಮತಿಯನ್ನು ಕೊಡತಕ್ಕದ್ದಲ್ಲ.

(3) (2)ನೇ ಉಪಪ್ರಕರಣದ ಉಪಬಂಧಗಳಿಗೊಳಪಟ್ಟು, ಜಾಹೀರಾತು ಶುಲ್ಕಕ್ಕೆ ಗುರಿಯಾಗಬಹುದಾದ ಜಾಹೀರಾತಿನ ಸಂದರ್ಭದಲ್ಲಿ, ಮುಖ್ಯ ಆಯುಕ್ತರು, ಯಾವ ಅವಧಿಗೆ ಶುಲ್ಕ ಪಾವತಿಯು ಸಂಬಂಧಪಟ್ಟಿದೆಯೋ ಆ ಯಾವುದೇ ಅವಧಿಗೆ ಅನುಮತಿಯನ್ನು ಕೊಡತಕ್ಕದ್ದು ಮತ್ತು ಅಂಥ ಅನುಮತಿಗೆ ಸಂಬಂಧಿಸಿದಂತೆ ಯಾವುದೇ ಶುಲ್ಕವನ್ನು ವಿಧಿಸತಕ್ಕದ್ದಲ್ಲ:

ಪರಂತು, ಈ ಪ್ರಕರಣದ ಉಪಬಂಧಗಳು, ರೈಲ್ವೆ ವ್ಯವಹಾರಕ್ಕೆ ಸಂಬಂಧಪಟಂತೆ ರೈಲ್ವೆಯ ಆವರಣಗಳಲ್ಲಿ ನಿರ್ಮಿಸಿದ, ಪ್ರದರ್ಶಿಸಿದ, ಅಳವಡಿಸಿದ, ಹಾಕಲಾದ ಯಾವುದೇ ಜಾಹೀರಾತಿಗೆ ಅನ್ವಯಿಸತಕ್ಕದ್ದಲ್ಲ.

159. ಕೆಲವು ಸಂದರ್ಭಗಳಲ್ಲಿ ಮುಖ್ಯ ಆಯುಕ್ತರ ಅನುಮತಿಯು ಅನೂರ್ಜಿತವಾಗತಕ್ಕದ್ದು.- 158ನೇ ಪ್ರಕರಣದ ಮೇರೆಗೆ ಕೊಡಲಾದ ಅನುಮತಿಯು ಈ ಕೆಳಕಂಡ ಸಂದರ್ಭಗಳಲ್ಲಿ, ಎಂದರೆ:-

(ಎ) ಜಾಹೀರಾತು, ಪಾಲಿಕೆಯು ರಚಿಸಿದ ಯಾವುದೇ ಉಪವಿಧಿಯನ್ನು ಉಲಂಘಿಸಿದರೆ;

(ಬಿ) ಪಾಲಿಕೆಯ ಇಂಜಿನಿಯರನ ನಿರ್ದೇಶನದ ಮೇರೆಗೆ ಜಾಹೀರಾತನ್ನು ಸುಭದ್ರವಾಗಿ ನಿಲ್ಲಿಸುವ ಉದ್ದೇಶಕ್ಕಾಗಿ ಅಲ್ಲದೆ ಆ ಜಾಹೀರಾತಿಗೆ ಯಾವುದೇ ಹೆಚ್ಚಿನದನ್ನು ಸೇರಿಸಿದರೆ;

(ಸಿ) ಜಾಹೀರಾತಿನಲ್ಲಿ ಅಥವಾ ಅದರ ಯಾವುದೇ ಭಾಗದಲ್ಲಿ ಯಾವುದೇ ಮುಖ್ಯ ಬದಲಾವಣೆಯನ್ನು ಮಾಡಿದರೆ;

(ಡಿ) ಆಕಸ್ಮಿಕವಾಗಿ ಅಲ್ಲದೆ ಅನ್ಯಥಾ ಜಾಹೀರಾತು ಅಥವಾ ಅದರ ಯಾವುದೇ ಭಾಗವು ಕೆಳಗೆ ಬಿದ್ದರೆ;

(ಇ) ಯಾವ ಕಟ್ಟಡದ, ಗೋಡೆಯ ಅಥವಾ ರಚನೆಯ ಮೇಲೆ ಅಥವಾ ಮೇಲ್ಭಾಗದಲ್ಲಿ ಆ ಜಾಹೀರಾತನ್ನು ನಿರ್ಮಿಸಲಾಗಿದೆಯೋ, ಪ್ರದರ್ಶಿಸಲಾಗಿದೆಯೋ, ಅಳವಡಿಸಲಾಗಿದೆಯೋ ಅಥವಾ ಇಡಲಾಗಿದೆಯೋ ಆ ಯಾವುದೇ ಕಟ್ಟಡಕ್ಕೆ, ಗೋಡೆಗೆ ಅಥವಾ ರಚನೆಗೆ ಅಥವಾ ಅದರಲ್ಲಿ ಯಾವುದೇ ಅಂಥ ಸೇರ್ಪಡೆ ಅಥವಾ ಬದಲಾವಣೆ ಮಾಡಿದರೆ, ಅಂಥ ಸೇರ್ಪಡೆಯಿಂದ ಅಥವಾ ಬದಲಾವಣೆಯಿಂದ ಜಾಹೀರಾತಿನ ಅಥವಾ ಅದರ ಯಾವುದೇ ಭಾಗದ ಸ್ಥಾನಪಲ್ಲಟವಾಗುವುದಾದರೆ; ಮತ್ತು

(ಎಫ್) ಯಾವ ಕಟ್ಟಡದ, ಗೋಡೆಯ ಅಥವಾ ರಚನೆ ಮೇಲೆ ಅಥವಾ ಮೇಲ್ಭಾಗದಲ್ಲಿ ಜಾಹೀರಾತನ್ನು ನಿರ್ಮಿಸಲಾಗಿದೆಯೋ, ಪ್ರದರ್ಶಿಸಲಾಗಿದೆಯೋ, ಅಳವಡಿಸಲಾಗಿದೆಯೋ ಅಥವಾ ಇಡಲಾಗಿದೆಯೋ ಆ ಕಟ್ಟಡವನ್ನು, ಗೋಡೆಯನ್ನು ಅಥವಾ ರಚನೆಯನ್ನು ಕೆಡವಿಹಾಕಿದರೆ ಅಥವಾ ನಾಶಪಡಿಸಿದರೆ

- ಅನೂರ್ಜಿತವಾಗತಕ್ಕದ್ದು.

160. ಮಾಲೀಕನು ಅಥವಾ ಅಧಿಭೋಗದಲ್ಲಿರುವ ವ್ಯಕ್ತಿಯು ಜವಾಬ್ದಾರನಾಗಿರುವುದಾಗಿ ಭಾವಿಸತಕ್ಕದ್ದು.- ಯಾವುದೇ ಜಾಹೀರಾತನ್ನು 158ನೇ ಪ್ರಕರಣದ ಅಥವಾ 159ನೇ ಪ್ರಕರಣದ ಉಪಬಂಧಗಳನ್ನು ಉಲಂಘಿಸಿ ಅಥವಾ ಜಾಹೀರಾತನ್ನು ಯಾವ ಅವಧಿಗೆ ಇಡಲು, ಪ್ರದರ್ಶಿಸಲು, ಅಳವಡಿಸಿಲು ಅಥವಾ ಉಳಿಸಿಕೊಳ್ಳಲು ಲಿಖಿತದಲ್ಲಿ ಅನುಮತಿ ನೀಡಲಾಗಿದೆಯೋ ಆ ಅನುಮತಿಯು ಮುಕ್ತಾಯವಾದ ಅಥವಾ ಅನೂರ್ಜಿತವಾದ ತರುವಾಯ, ಯಾವುದೇ ಭೂಮಿಯ, ಕಟ್ಟಡದ, ಗೋಡೆಯ, ಜಾಹೀರಾತು ಫಲಕದ ಅಥವಾ ರಚನೆಯ ಮೇಲೆ ಅಥವಾ ಮೇಲ್ಭಾಗದಲ್ಲಿ ಇಟ್ಟರೆ, ಪ್ರದರ್ಶಿಸಿದರೆ, ಅಳವಡಿಸಿದರೆ ಅಥವಾ ಉಳಿಸಿಕೊಂಡರೆ ಅಂಥ ಭೂಮಿಯ ಕಟ್ಟಡದ, ಗೋಡೆಯ, ಜಾಹೀರಾತು ಜಾಹೀರಾತು ಫಲಕದ ಅಥವಾ ರಚನೆಯ ಮಾಲೀಕನನ್ನು ಅಥವಾ ಅದರ ಅಧಿಭೋಗದಲ್ಲಿರುವ ವ್ಯಕ್ತಿಯನ್ನು, ಆತನು ತಾನು ನಿಯೋಜಿಸಿರದ ಅಥವಾ ತನ್ನ ನಿಯಂತ್ರಣದಲ್ಲಿ ಇರದ ವ್ಯಕ್ತಿಯು ಅಂಥ ಉಲಂಘನೆಯನ್ನು ಮಾಡಿದ್ದಾನೆಂದು ಅಥವಾ ತನ್ನ ಪರೋಕ್ಷ ಸಮ್ಮತಿಯಿಲ್ಲದೆ ಅದನ್ನು ಮಾಡಲಾಗಿದೆ ಎಂದು ರುಜುವಾತುಪಡಿಸಿದ ಹೊರತು, ಆ ಉಪಬಂಧಗಳನ್ನು ಉಲಂಘಿಸಿ, ಅಂಥ ಜಾಹೀರಾತನ್ನು ಇಟ್ಟಿರುವ, ಪ್ರದರ್ಶಿಸಿರುವ, ಅಳವಡಿಸಿರುವ ಅಥವಾ ಉಳಿಸಿಕೊಂಡಿರುವ ವ್ಯಕ್ತಿ ಎಂಬುದಾಗಿ ಭಾವಿಸತಕ್ಕದ್ದು.

161. ಅನಧಿಕೃತ ಜಾಹೀರಾತನ್ನು ತೆಗೆದುಹಾಕುವುದು.- 158ನೇ ಪ್ರಕರಣದ ಅಥವಾ 159ನೇ ಪ್ರಕರಣದ ಉಪಬಂಧಗಳಿಗೆ ತದ್ವಿರುದ್ಧವಾಗಿ ಅಥವಾ ಯಾವುದೇ ಅವಧಿಗೆ ಜಾಹೀರಾತನ್ನು ನಿರ್ಮಿಸಲು, ಪ್ರದರ್ಶಿಸಲು ಅಳವಡಿಸಲು ಅಥವಾ ಇಡಲು ನೀಡಲಾದ ಲಿಖಿತ ಅನುಮತಿಯು ಮುಕ್ತಾಯವಾದ ಅಥವಾ ಅನೂರ್ಜಿತವಾದ ತರುವಾಯ, ಯಾವುದೇ ಜಾಹೀರಾತನ್ನು ಇಟ್ಟರೆ, ಪ್ರದರ್ಶಿಸಿದರೆ, ಅಳವಡಿಸಿದರೆ ಅಥವಾ ಉಳಿಸಿಕೊಂಡರೆ, ಮುಖ್ಯ ಆಯುಕ್ತರು ಲಿಖಿತ ನೋಟೀಸನ್ನು ಕೊಡುವ ಮೂಲಕ, ಯಾವ ಭೂಮಿಯ, ಕಟ್ಟಡದ, ಗೋಡೆಯ, ಜಾಹೀರಾತು ಫಲಕದ ಅಥವಾ ರಚನೆಯ ಮೇಲೆ ಅಥವಾ ಮೇಲ್ಭಾಗದಲ್ಲಿ ಅದನ್ನು ಇಡಲಾಗಿದೆಯೋ, ಪ್ರದರ್ಶಿಸಲಾಗಿದೆಯೋ, ಅಳವಡಿಸಲಾಗಿದೆಯೋ ಅಥವಾ ಉಳಿಸಿಕೊಳ್ಳಲಾಗಿದೆಯೋ, ಆ ಯಾವುದೇ ಭೂಮಿಯ, ಕಟ್ಟಡದ, ಗೋಡೆಯ, ಜಾಹೀರಾತು ಫಲಕದ ಅಥವಾ ರಚನೆಯ ಮಾಲೀಕನನ್ನು ಅಥವಾ ಅಧಿಭೋಗದಾರನನ್ನು ಅಂಥ ಜಾಹೀರಾತನ್ನು ಕೆಳಗೆ ಇಳಿಸುವಂತೆ ಅಥವಾ ತೆಗೆದುಹಾಕುವಂತೆ, ಅಗತ್ಯಪಡಿಸಬಹುದು ಮತ್ತು ಯಾವುದೇ ಕಟ್ಟಡ, ಭೂಮಿ ಅಥವಾ ಸ್ವತ್ತನ್ನು ಪ್ರವೇಶಿಸಬಹುದು ಮತ್ತು ಜಾಹೀರಾತನ್ನು ತೆಗೆದುಹಾಕಿಸಬಹುದು.

162. ಜಾಹೀರಾತಿನ ಮೇಲೆ ಶುಲ್ಕ ಸಂಗ್ರಹಣೆ.- ಮುಖ್ಯ ಆಯುಕ್ತರು 158ನೇ ಪ್ರಕರಣದ ಮೇರೆಗೆ ಜಾಹೀರಾತಿನ ಮೇಲೆ ವಿಧಿಸಬಹುದಾದ ಯಾವುದೇ ತೆರಿಗೆಯ ಸಂಗ್ರಹಣೆಯನ್ನು ಉಪವಿಧಿಗಳಲ್ಲಿ ಉಪಬಂಧಿಸಬಹುದಾದಂಥ ನಿಬಂಧನೆಗಳು ಮತ್ತು ಪರತ್ತುಗಳ ಮೇಲೆ ಒಂದು ಬಾರಿಗೆ ಒಂದು ವರ್ಷಕ್ಕೆ ಮೀರದ ಯಾವುದೇ ಅವಧಿಗೆ ಗುತ್ತಿಗೆಗೆ ಕೊಡಬಹುದು.

163. ಮಾಹಿತಿಯನ್ನು ಕೇಳಲು ಮತ್ತು ಆವರಣಗಳ ಒಳಗೆ ಪ್ರವೇಶಿಸಲು ಮತ್ತು ನೋಟೀಸು ಕೊಡುವುದರಲ್ಲಿನ ಲೋಪವನ್ನು ಕ್ಷಮಿಸಲು ಮುಖ್ಯ ಆಯುಕ್ತರ ಅಧಿಕಾರ.- (1) ಸ್ವತ್ತು ತೆರಿಗೆಯ ನಿರ್ಧರಣೆಯ ಉದ್ದೇಶಕ್ಕಾಗಿ, ಮುಖ್ಯ ಆಯುಕ್ತರು, ಸರ್ಕಾರಕ್ಕೆ, ರೈಲ್ವೆ ಆಡಳಿತಕ್ಕೆ ಅಥವಾ ಕಂಪನಿಗೆ ನೋಟೀಸನ್ನು ಜಾರಿ ಮಾಡಿರುವಲ್ಲಿ, ನೋಟೀಸನ್ನು ಜಾರಿಮಾಡಿದ ತರುವಾಯದ ದಿನಾಂಕದಿಂದ ಮೂವತ್ತು ದಿವಸಗಳೊಳಗಾಗಿ ಮತ್ತು ಇತರ ಸಂದರ್ಭಗಳಲ್ಲಿ ಅಂಥ ಜಾರಿಯ ತರುವಾಯದ ದಿನಾಂಕದಿಂದ ಹದಿನಾಲ್ಕು ದಿವಸಗಳೊಳಗಾಗಿ, ಯಾವುದೇ ಕಟ್ಟಡದ ಅಥವಾ ಭೂಮಿಯ ಮಾಲೀಕನನ್ನು ಅಥವಾ ಅಧಿಭೋಗದಾರನನ್ನು ಆ ಕಟ್ಟಡಕ್ಕೆ ಅಥವಾ ಭೂಮಿಗೆ ಪಾವತಿ ಮಾಡಬೇಕಾದ ಬಾಡಿಗೆಯ, ಆ ಕಟ್ಟಡದ ನಿರ್ಮಾಣ ವೆಚ್ಚದ ಮತ್ತು ಭೂಮಿಯ ಅಳತೆಗಳ ಕುರಿತ ವಿವರಪಟ್ಟಿಕೆಗಳನ್ನು ಮತ್ತು ಮುಖ್ಯ ಆಯುಕ್ತರು ಅಗತ್ಯ ಪಡಿಸಬಹುದಾದಂಥ ಇತರ ಮಾಹಿತಿಯನ್ನು ತಮಗೆ ಒದಗಿಸುವಂತೆ ನೋಟೀಸಿನ ಮೂಲಕ ಕೇಳಬಹುದು ಮತ್ತು ಯಾವ ಮಾಲೀಕನಿಗೆ ಅಥವಾ ಅಧಿಭೋಗದಾರನಿಗೆ ಅಂಥ ಯಾವುದೇ ನೋಟೀಸನ್ನು ಜಾರಿಮಾಡಲಾಗಿದೆಯೋ, ಆ ಮಾಲೀಕನು ಅಥವಾ ಅಧಿಭೋಗದಾರನು ಅದನ್ನು ಪಾಲಿಸಲು ಮತ್ತು ತನಗೆ ತಿಳಿದಿರುವಷ್ಟರ ಮಟ್ಟಿಗೆ ಹಾಗೂ ತಾನು ನಂಬಿರುವಷ್ಟರಮಟ್ಟಿಗೆ ಸತ್ಯವಾದ ವಿವರಪಟ್ಟಿಕೆಯನ್ನು ನೀಡಲು ಬದ್ಧನಾಗಿರತಕ್ಕದ್ದು.

(2) ಮೇಲೆ ಹೇಳಿದ ಉದ್ದೇಶಕ್ಕಾಗಿ ಮುಖ್ಯ ಆಯುಕ್ತರು, ಮಾಲೀಕನಿಗೆ ಅಥವಾ ಅಧಿಭೋಗದಾರನಿಗೆ ಇಪ್ಪತ್ತನಾಲ್ಕು ಗಂಟೆಗಳ ನೋಟೀಸನ್ನು ಕೊಟ್ಟ ತರುವಾಯ ಯಾವುದೇ ಕಟ್ಟಡವನ್ನು ಅಥವಾ ಭೂಮಿಯನ್ನು ಪ್ರವೇಶಿಸಬಹುದು, ಪರೀಕ್ಷಿಸಬಹುದು, ಸರ್ವೆ ಮಾಡಬಹುದು ಮತ್ತು ಅಳತೆ ಮಾಡಬಹುದು.

(3) ಮುಖ್ಯ ಆಯುಕ್ತರು ನೋಟೀಸನ್ನು ಕೊಡುವಲ್ಲಿ ಆದ ಲೋಪಗಳನ್ನು ತಮ್ಮ ವಿವೇಚನೆಯಂತೆ ಅಂಥ ಪ್ರತಿಯೊಂದು ಕ್ಷಮೆಗೆ ಕಾರಣಗಳನ್ನು ಲಿಖಿತದಲ್ಲಿ ನೀಡಿ ಕ್ಷಮಿಸಬಹುದು.

164. ಸರ್ಚಾರ್ಜುಗಳನ್ನು ಮತ್ತು ಚಾರ್ಜುಗಳನ್ನು ವಸೂಲಿ ಮಾಡುವ ಬಗ್ಗೆ.- (1) ಯಾವುದೇ ವ್ಯಕ್ತಿಯಿಂದ ಬಾಕಿ ಬರಬೇಕಾಗಿದೆ ಎಂದು ಲೆಕ್ಕಪರಿಶೋಧಕರು ಪ್ರಮಾಣೀಕರಿಸಿದ ಪ್ರತಿಯೊಂದು ಮೊತ್ತವನ್ನು ಅಂಥ ವ್ಯಕ್ತಿಯು, ಮುಖ್ಯ ಆಯುಕ್ತರ ತೀರ್ಮಾನವನ್ನು ಅವನು ಸ್ವೀಕರಿಸಿದಂದಿನಿಂದ ಒಂದು ತಿಂಗಳ ಒಳಗಾಗಿ, ಆ ಕಾಲಾವಧಿಯ ಒಳಗೆ ಅಂಥ ವ್ಯಕ್ತಿಯು ನ್ಯಾಯಾಲಯಕ್ಕೆ ಅಥವಾ ಸರ್ಕಾರಕ್ಕೆ ಈ ಅಧಿನಿಯಮದಲ್ಲಿ ಉಪಬಂಧಿಸಿರುವಂತೆ ಅರ್ಜಿ ಸಲ್ಲಿಸಿದ ಹೊರತು, ಪಾಲಿಕೆಯ ನಿಧಿಗಳನ್ನು ಇಟ್ಟಿರುವ ಖಜಾನೆಗೆ ಅಥವಾ ಬ್ಯಾಂಕಿಗೆ ಅಥವಾ ಆನ್‌ಲೈನ್‌ನಲ್ಲಿ ಸಂದಾಯ ಮಾಡತಕ್ಕದ್ದು;

(2) ಸದರಿ ಮೊತ್ತವನ್ನು ಸಂದಾಯ ಮಾಡದಿದ್ದರೆ, ಈ ಅಧಿನಿಯಮದಲ್ಲಿ ಉಪಬಂಧಿಸಿರುವಂತೆ ಲೆಕ್ಕಪರಿಶೋಧಕರ ತೀರ್ಮಾನದ ವಿರುದ್ಧ ನ್ಯಾಯಾಲಯಕ್ಕೆ ಅಥವಾ ಸರ್ಕಾರಕ್ಕೆ ಅರ್ಜಿ ಸಲ್ಲಿಸಿದ್ದರೆ, ನ್ಯಾಯಾಲಯವು ಅಥವಾ ಸರ್ಕಾರವು ಬಾಕಿ ಇದೆ ಎಂದು ಘೋಷಿಸುವಂಥ ಮೊತ್ತವು ಮುಖ್ಯ ಆಯುಕ್ತರು ನ್ಯಾಯಾಲಯಕ್ಕೆ ಸಲ್ಲಿಸಿದ ಅರ್ಜಿಯ ಮೇಲೆ ಮುಖ್ಯ ಆಯುಕ್ತರ ಹೆಸರಿನಲ್ಲಿ ನ್ಯಾಯಾಲಯವು ಡಿಕ್ರಿ ಮಾಡಲಾದ ಮೊಬಲಗು ಎಂಬಂತೆ ಅದೇ ರೀತಿಯಲ್ಲಿ ವಸೂಲಿ ಮಾಡುವಂಥದ್ದು ಆಗಿರತಕ್ಕದ್ದು.

165. ಮನರಂಜನಾ ತೆರಿಗೆ ವಿಧಿಸುವಿಕೆ.- (1) ಪಾಲಿಕೆಯು, ಅಧಿನಿಯಮದನ್ವಯ ಯಾವುದೇ ಚೀಟಿ ಆಧಾರಿತ ಮನರಂಜನೆ, ಚೀಟಿ ಆಧಾರಿತವಲ್ಲದ ಮನರಂಜನೆ ಮತ್ತು ದೂರದರ್ಶನ ಮನರಂಜನೆಗಳ ಮೇಲೆ ಮನರಂಜನಾ ತೆರಿಗೆಯನ್ನು ವಿಧಿಸಿ ಸಂಗ್ರಹಿಸತಕ್ಕದ್ದು.

ಪರಂತು, ಪಾಲಿಕೆಯು ದೂರದರ್ಶನ ಮನರಂಜನೆಯ ಮೇಲೆ ಮನರಂಜನಾ ತೆರಿಗೆಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಪ್ರದೇಶ ವ್ಯಾಪ್ತಿಯೊಳಗೆ ಸಂಗ್ರಹಿಸತಕ್ಕದ್ದು.

(2) ಯಾವುದೇ ಚೀಟಿ ಆಧಾರಿತ ಮನರಂಜನೆ, ಚೀಟಿ ಆಧಾರಿತವಲ್ಲದ ಮನರಂಜನೆ ಮತ್ತು ದೂರದರ್ಶನ ಮನರಂಜನೆಗಳಿಗೆ ಸಂಬಂಧಿಸಿದಂತೆ ವಿಧಿಸಬಹುದಾದ ಮನರಂಜನಾ ತೆರಿಗೆಯ ದರವನ್ನು ನಿರ್ಣಯದ ಮೂಲಕ ಪಾಲಿಕೆಯು ನಿರ್ದರಿಸತಕ್ಕದ್ದು.

166. ಕಾಂಪ್ಲಿಮೆಂಟರಿ ಚೀಟಿ ಮತ್ತು ಸಂಪರ್ಕಗಳ ಮೇಲೆ ಮನರಂಜನಾ ತೆರಿಗೆಯನ್ನು ವಿಧಿಸುವುದು.-(1) ಚೀಟಿ ಆಧಾರಿತ ಮನರಂಜನೆಯನ್ನು ಒದಗಿಸಲು ಅರ್ಹ ಲೆಸೆನ್ಸನ್ನು ಹೊಂದಿರುವ ಅಥವಾ ಚೀಟಿ ಆಧಾರಿತ ಮನರಂಜನೆಯನ್ನು ಒದಗಿಸುವ ಸ್ಥಳದ ಒಡೆತನ ಹೊಂದಿರುವ ಅಥವಾ ಅದನ್ನು ನಿರ್ವಹಿಸುತ್ತಿರುವ ಮನರಂಜನಾ ಮಾಲೀಕರು ನೀಡಿದ ಪ್ರತಿಒಂದು ಕಾಂಪ್ಲಿಮೆಂಟರಿ ಚೀಟಿ ಮೇಲೆ ಪಾಲಿಕೆಯು ವಿಧಿಸುವ ಮತ್ತು ಪಾಲಿಕೆಗೆ ಸಂದಾಯ ಮಾಡುವ ಒಂದು ಮನರಂಜನಾ ತೆರಿಗೆಯಿರತಕ್ಕದ್ದು ಮತ್ತು ಅಂಥ ಕಾಂಪ್ಲಿಮೆಂಟರಿ ಚೀಟಿ ಮೇಲಿನ ತೆರಿಗೆಯನ್ನು ಟಿಕೆಟ್‌ನ ನೈಜ ಮೌಲ್ಯದ ಮೇಲೆ ಅಥವಾ ಮುಖ್ಯಆಯುಕ್ತರು ಕಾಲಕಾಲಕ್ಕೆ ನಿರ್ಧರಿಸುವಂಥ ಮೌಲ್ಯದ ಅನುಸಾರ ಸಂದಾಯ ಮಾಡತಕ್ಕದ್ದು.

(2) ಕೇಬಲ್ ಟೆಲಿವಿಷನ್ ಸೇವೆಯನ್ನು ಅಥವಾ ಡೈರೆಕ್ಟ್-ಟು-ಹೋಂ ಸೇವೆಯನ್ನು ಒದಗಿಸುವುದಕ್ಕೆ ಅನ್ವಯವಾಗಬಹುದಾದಂಥ ಕಾನೂನುಗಳ ಅಡಿಯಲ್ಲಿ ಅರ್ಹ ಲೈಸೆನ್ಸನ್ನು ಹೊಂದಿರುವ ಮನರಂಜನಾ ಮಾಲೀಕರು ಒದಗಿಸಿದ ಪ್ರತಿಯೊಂದು ಕಾಂಪ್ಲಿಮೆಂಟರಿ ಸಂಪರ್ಕದ ಮೇಲೆ ಪಾಲಿಕೆಯು ವಿಧಿಸಲಾಗುವ ಮತ್ತು ಪಾಲಿಕೆಗೆ ಸಂದಾಯ ಮಾಡುವ ಒಂದು ಮನರಂಜನಾ ತೆರಿಗೆಯಿರತಕ್ಕದ್ದು ಮತ್ತು ಅಂಥ ಕಾಂಪ್ಲಿಮೆಂಟರಿ ಸಂಪರ್ಕದ ಮೇಲಿನ ತೆರಿಗೆಯನ್ನು ಚೀಟಿ ನೈಜ ಮೌಲ್ಯದ ಮೇಲೆ ಅಥವಾ ಮುಖ್ಯ ಆಯುಕ್ತರು ನಿರ್ಧರಿಸಿದ ಮೌಲ್ಯದ ಅನುಸಾರ ಸಂದಾಯ ಮಾಡತಕ್ಕದ್ದು.

167.ಮನರಂಜನಾ ಸ್ಥಳದೊಳಗೆ ಯಾವುದೇ ಕರ್ತವ್ಯವನ್ನು ನಿರ್ವಹಿಸುವುದಕ್ಕೆ ಮನರಂಜನಾ ತೆರಿಗೆ ಸಂದಾಯದಿಂದ ವಿನಾಯಿತಿ.- ಚೀಟಿ ಆಧಾರಿತ ಮನರಂಜನಾ ಸ್ಥಳದಲ್ಲಿ ಕಾರ್ಯನಿರ್ವಹಿಸುವ ವ್ಯಕ್ತಿಗಳನ್ನು ಅಥವಾ ಯಾರ ಮೇಲೆ ಈ ಅಧಿನಿಯಮದ ಅಡಿಯಲ್ಲಿ ಸುಂಕವನ್ನು ವಿಧಿಸಲಾಗಿದೆಯೋ ಆ ವ್ಯಕ್ತಿಗಳನ್ನ ಹೊರತುಪಡಿಸಿ ಯಾರೇ ವ್ಯಕ್ತಿಗಳ ಚೀಟಿ ಅಥವಾ ಪಾಸ್ ಇಲ್ಲದೆ ಯಾವುದೇ ಚೀಟಿ ಆಧಾರಿತ ಮನರಂಜನೆಯನ್ನು ಪಡೆಯತಕ್ಕದಲ್ಲ.

ಪರಂತು, ಚೀಟಿ ಆಧಾರಿತ ಮನರಂಜನಾ ಸ್ಥಳದಲ್ಲಿ ಕರ್ತವ್ಯ ನಿರ್ವಹಿಸುವಂಥ ವ್ಯಕ್ತಿಗಳು ಖರೀದಿಸಿದ ಚೀಟಿ ಅಥವಾ ಕಾಂಪ್ಲಿಮೆಂಟರಿ ಚೀಟಿ ಮುಖಾಂತರ ಚೀಟಿ ಆಧಾರಿತ ಮನರಂಜನಾ ಸ್ಥಳದಲ್ಲಿ ಪ್ರವೇಶ ಪಡೆದ ವ್ಯಕ್ತಿಗಳಿಂದ ಪ್ರತ್ಯೇಕವಾಗಿ ಕುಳಿತುಕೊಳ್ಳತಕ್ಕದ್ದು.

ಮತ್ತು ಪರಂತು, ಅಂಥ ವ್ಯಕ್ತಿಗಳನ್ನು ಪ್ರವೇಶದ ಉದ್ದೇಶವನ್ನು ಸೂಚಿಸುವ ವಿಶೇಷ ಪಾಸುಗಳ ರೂಪದಲ್ಲಿ ಪ್ರತ್ಯೇಕಿಸತಕ್ಕದ್ದು ಅಥವಾ ಮುಖ್ಯ ಆಯುಕ್ತರ ಅನುಮೋದನೆಯ ಮೇರೆಗೆ ಅಂಥ ವ್ಯಕ್ತಿಯ ಪ್ರವೇಶಕ್ಕೆ ಅನುಮತಿ ನೀಡತಕ್ಕದ್ದು.

168. ಭದ್ರತಾ ಹಣ ಒದಗಿಸುವುದು.- (1) ಮುಖ್ಯ ಆಯುಕ್ತನು, ಯುಕ್ತವೆಂದು ಭಾವಿಸಿದಲ್ಲಿ ಮನರಂಜನಾತೆರಿಗೆ ಪಾವತಿಗಾಗಿ ಮುಂಗಡವನ್ನು ಮನರಂಜನೆಯ ಮಾಲೀಕನಿಂದ ಒಂದು ಮೊತ್ತವನ್ನು ಭದ್ರತೆಗಾಗಿ ಒದಗಿಸುವಂತೆ ಕಡ್ಡಾಯಗೊಳಿಸಬಹುದು.

(2) ಅಗತ್ಯಪಡಿಸಲಾದ ಭದ್ರತಾಮೊತ್ತವನ್ನು ಒದಗಿಸುವುದನ್ನು ಲೆಕ್ಕಮಾಡುವ ವಿಧಾನವನ್ನು (1)ನೇ ಉಪಪ್ರಕರಣದ ಅಡಿಯ ನಿಯಮಗಳಲ್ಲಿ ಒದಗಿಸತಕ್ಕದ್ದು.

169. ತೆರಿಗೆಗಳ ಪಾವತಿ ಮತ್ತು ಮನರಂಜನಾ ತೆರಿಗೆಯ ಪಾವತಿಗಾಗಿ ಸ್ವಯಂನಿರ್ಧರಿಸಿದ ವಿವರಪಟ್ಟಿಯನ್ನು ದಾಖಲು ಮಾಡುವುದು.- (1) ಪ್ರತಿಯೊಬ್ಬ ಮನರಂಜನೆಯ ಮಾಲೀಕನು ಮುಖ್ಯಆಯುಕ್ತರಿಗೆ ಅಂಥ ವಿವರಪಟ್ಟಿಯನ್ನು ನಿಯಮಗಳಡಿಯಲ್ಲಿ ನಿಯಮಿಸಲಾದ ಅಂಥ ಕಾಲಾವಧಿಯೊಳಗೆ ಸಲ್ಲಿಸತಕ್ಕದ್ದು.

(2) ಪ್ರತಿಯೊಂದು ಬಗೆಯ ಮನರಂಜನೆ ಮಾಲೀಕರು (1)ನೇ ಉಪಪ್ರಕರಣದಡಿ ಉಪಬಂಧಿಸಲಾದ ವಿವರಪಟ್ಟಿಯಲ್ಲಿನ ವಿವರಗಳು ನಿಯಮಗಳಡಿ ನಿಯಮಿಸಲಾಗಿರತಕ್ಕದ್ದು.

170. ವಿವರಪಟ್ಟಿಕೆಯನ್ನು ಸಲ್ಲಿಸುವಲ್ಲಿ ಅಥವಾ ವಿವರಪಟ್ಟಿಕೆಯಲ್ಲಿ ಪರ್ಯಾಪ್ತ ವಿವರಗಳನ್ನು ಒದಗಿಸುವಲ್ಲಿ ತಪ್ಪಿದ್ದಲ್ಲಿ.- **(1)** ಮನರಂಜನಾ ಮಾಲೀಕನು ಒದಗಿಸಿರುವ ವಿವರಪಟ್ಟಿಕೆಯಲ್ಲಿ ಎಲ್ಲ ವಿವರಗಳು ಇಲ್ಲವೆಂದು ಮುಖ್ಯ ಆಯುಕ್ತನು ನಂಬಿದರೆ ಅಥವಾ ಸಮಂಜಸ ಕಾರಣ ವಿದ್ದರೆ ಅಥವಾ ಪುನರ್ ನಿರ್ಧರಿಸಲಾದ ವಿವರಪಟ್ಟಿಕೆಯಲ್ಲಿನ ವಿವರಗಳು ಅಸತ್ಯವೆಂದು ಮುಖ್ಯ ಆಯುಕ್ತರಿಗೆ ಯುಕ್ತ ವಿಶ್ವಾಸವಿದ್ದರೆ ತೆರಿಗೆ ಬಾಕಿಯು ಕಡಿಮೆ ಪಾವತಿಸಲಾಗಿದ್ದರೆ, ಅಂಥ ಮಾಲೀಕನ ವಿರುದ್ಧ ಮುಖ್ಯ ಆಯುಕ್ತನು ಪುನರ್ ಕರನಿರ್ಧರಣೆಗೆ ಆದೇಶವನ್ನು ಹೊರಡಿಸತಕ್ಕದ್ದು.

(2) 169ನೇ ಪ್ರಕರಣದಡಿ ಮನರಂಜನಾ ಮಾಲೀಕನು ವಿವರಪಟ್ಟಿಕೆಯನ್ನು ಸಲ್ಲಿಸುವಲ್ಲಿ ವಿಫಲನಾದರೆ, ಮುಖ್ಯ ಆಯುಕ್ತನು ಅಂಥ ಮಾಲೀಕನ ವಿರುದ್ಧ ಪುನರ್ ಕರನಿರ್ಧರಣೆಗೆ ಆದೇಶವನ್ನು ಹೊರಡಿಸುವ ಅಧಿಕಾರವನ್ನು ಹೊಂದಿರತಕ್ಕದ್ದು.

(3) ಮನರಂಜನಾ ಮಾಲೀಕನ ಮೂಲಕ ನೀಡಲಾದ ಗೌರವಾರ್ಥ ಟಿಕೇಟುಗಳು ಟಿಕೆಟ್ಟಿನ ನೈಜದರ ಬಿಂಬಿಸುತ್ತಿಲ್ಲವೆಂದು ಮುಖ್ಯ ಆಯುಕ್ತನು ನಂಬಿದರೆ ಅಥವಾ ಯುಕ್ತ ಕಾರಣ ವಿದ್ದರೆ ಗೌರವಾರ್ಥ ಟಿಕೆಟ್ಟಿನ ನೈಜದರವನ್ನು ನಿರ್ಧರಿಸುವ ಅಧಿಕಾರವನ್ನು ಮತ್ತು ನಿಯಮಗಳಡಿ ಉಪಬಂಧಿಸಬಹುದಾದ ಪ್ರಮಾಣಗಳ ಅಧಿಕಾರವನ್ನು ಮುಖ್ಯ ಆಯುಕ್ತನು ಹೊಂದಿರತಕ್ಕದ್ದು.

ಪರಂತು, ಗೌರವಾರ್ಥ ಟಿಕೆಟ್ಟಿನ ದರವನ್ನು ನಿರ್ಧರಿಸಿದ ನಂತರ, ಮುಖ್ಯ ಆಯುಕ್ತನು ಮನರಂಜನಾ ಮಾಲೀಕನಿಗೆ ಮುಖ್ಯ ಆಯುಕ್ತನು ನಿರ್ಧರಿಸಿದ ಗೌರವಾರ್ಥ ಟಿಕೆಟ್ಟಿನ ದರವನ್ನು ಬಿಂಬಿಸುವ ಪರಿಷ್ಕೃತ ವಿವರ ಪಟ್ಟಿಕೆಯನ್ನು ಸಲ್ಲಿಸುವಂತೆ ಆದೇಶಿಸತಕ್ಕದ್ದು.

ಮತ್ತು ಪರಂತು, ಆದೇಶ ಸ್ವೀಕರಿಸಿದ ಹದಿನೈದು ದಿನಗಳೊಳಗಾಗಿ ಪರಿಷ್ಕೃತ ವಿವರಣ ಪಟ್ಟಿಕೆಯನ್ನು ಸಲ್ಲಿಸತಕ್ಕದ್ದು.

(4) (1)ನೇ ಉಪಪ್ರಕರಣ, (2)ನೇ ಉಪಪ್ರಕರಣಮತ್ತು (3)ನೇ ಉಪಪ್ರಕರಣಗಳ ಉದ್ದೇಶಗಳಿಗಾಗಿ ಮುಖ್ಯ ಆಯುಕ್ತನು, ಅಂಥ ಮನರಂಜನ ಸ್ಥಳಕ್ಕೆ ಪ್ರವೇಶಿಸುವುದು ಮತ್ತು ಸುತ್ತಮುತ್ತಲಿನ ಪ್ರದೇಶಗಳನ್ನು ಮತ್ತು ಸಂಬಂಧಿತ ದಾಖಲೆಗಳನ್ನು ಪರಿಶೀಲಿಸತಕ್ಕದ್ದು.

(5) (1)ನೇ ಉಪಪ್ರಕರಣದ ಉದ್ದೇಶಗಳಿಗಾಗಿ ಮುಖ್ಯ ಆಯುಕ್ತನು ಶೋಧಿಸುವ ಮತ್ತು ಯಾವುದೇ ಪುಸ್ತಕಗಳು, ದಾಖಲೆಗಳು, ಲೆಕ್ಕಪತ್ರಗಳು, ನೊಂದಣಿ ಪುಸ್ತಕಗಳು, ಟಿಕೆಟ್ಟುಗಳು ಮತ್ತು ಅದರ ಭಾಗಗಳನ್ನು ಅಭಿಗ್ರಹಿಸುವ (ವಶಪಡಿಸಿಕೊಳ್ಳುವ) ಅಧಿಕಾರವನ್ನು ಹೊಂದಿರತಕ್ಕದ್ದು ಮತ್ತು ಹಾಗೆ ಅಭಿಗ್ರಹಿಸಿದ ಯಾವುದೇ ವಸ್ತುವನ್ನು ಮುಖ್ಯ ಆಯುಕ್ತನು ಅಭಿಗ್ರಹಣದ ದಿನಾಂಕದಿಂದ ಹದಿನೈದು ದಿನಗಳಿಗೆ ಹೆಚ್ಚು ಇಟ್ಟುಕೊಳ್ಳತಕ್ಕದಲ್ಲ.

(6) ಮುಖ್ಯ ಆಯುಕ್ತನು, ಅವಶ್ಯವಿದ್ದಲ್ಲಿ ಯಾವುದೇ ಪುಸ್ತಕಗಳು, ದಾಖಲೆಗಳು, ಟಿಕೆಟ್ಟುಗಳು ಮತ್ತು ಅದರ ಭಾಗಗಳ ಪ್ರತಿಗಳನ್ನು ತೆಗೆದುಕೊಳ್ಳಬಹುದು ಅಥವಾ ಕಾರಣವಾದ ಪ್ರತಿಗಳನ್ನು ತೆಗೆದುಕೊಳ್ಳುವುದು.

(7) ಮುಖ್ಯ ಆಯುಕ್ತನು, ಪರಿಶೀಲನೆಯ ನಂತರ ಮನರಂಜನೆಯ ಮಾಲೀಕನು 170ನೇ ಪ್ರಕರಣದಡಿ ಎಲ್ಲ ಅಗತ್ಯ ವಿವರಗಳನ್ನು ಒದಗಿಸಲಿಲ್ಲವೆಂದು ಮನಗಂಡಲ್ಲಿ ಮುಖ್ಯ ಆಯುಕ್ತನು ಕಾರಣ ಕೇಳಿ ನೋಟೀಸನ್ನು ಹೊರಡಿಸತಕ್ಕದ್ದು ಮತ್ತು ಅಂಥ ಮನರಂಜನೆಯ ಮಾಲೀಕನನ್ನು ಆಲಿಸುವ ಅವಕಾಶವನ್ನು ಉಪಬಂಧಿಸುವುದು ಮತ್ತು ನಿಯಮಗಳ ಅಡಿಯಲ್ಲಿ ನಿಗದಿಪಡಿಸಲಾದ ದಂಡವನ್ನು ವಿಧಿಸುವುದು.

171. ಮೇಲ್ಮನವಿ.- ಮುಖ್ಯ ಆಯುಕ್ತರಿಂದಾದ ಪುನರ್ ಕರನಿರ್ಧರಣೆಯ ಆದೇಶದಿಂದ ಬಾಧಿತನಾದ ಯಾವೊಬ್ಬ ವ್ಯಕ್ತಿಯು ನ್ಯಾಯಾಧಿಕರಣದ ಮುಂದೆ ಮೇಲ್ಮನವಿ ಮಾಡಬಹುದು.

172. ಮನರಂಜನಾ ತೆರಿಗೆಯ ವಸೂಲಿ.- (1) ವ್ಯಕ್ತಿಯು ವಿವರ ಪಟ್ಟಿಕೆಯನ್ನು ದಾಖಲಿಸುವಲ್ಲಿ ವಿಫಲನಾದರೆ ಮತ್ತು ಅಗತ್ಯವಾದ ಮನರಂಜನಾ ತೆರಿಗೆಯನ್ನು ಪಾವತಿಸದೇ ಇದ್ದಲ್ಲಿ, ಮುಖ್ಯ ಆಯುಕ್ತನು ಮನರಂಜನಾ ತೆರಿಗೆ ಬಾಕಿಯನ್ನು ಪಾವತಿಸುವಂತೆ ಕೋರತಕ್ಕದ್ದು. ಆದೇಶವು ಸ್ವೀಕರಿಸಿದ ದಿನಾಂಕದಿಂದ ಹದಿನೈದು ದಿನಗಳೊಳಗೆ ಪಾವತಿಸತಕ್ಕದ್ದು.

(2) ತೆರಿಗೆಗಳನ್ನುಪಾವತಿಸಲು ಯಾವೊಬ್ಬ ವ್ಯಕ್ತಿಯ ವಿರುದ್ಧ ಕೋರಿಕೆಯನ್ನು ಹೊರಡಿಸಿದ್ದು ಪ್ರಕಾರ ಅಂಥ ಕೋರಿಕೆಯನ್ನು ನ್ಯಾಯಾಧೀಕರಣದ ಮುಂದೆ ಆಕ್ಷೇಪಿಸಬಹುದು.

(3) (1)ನೇ ಉಪಪ್ರಕರಣ ಮತ್ತು (2)ನೇ ಉಪಪ್ರಕರಣದಡಿ ಉಪಬಂಧಿಸಿದಂತೆ ಕಾಲಾವಧಿಯೊಳಗೆ ತೆರಿಗೆ ಪಾವತಿಸಲು ವ್ಯಕ್ತಿಯು ವಿಫಲನಾದರೆ, ಭೂಕಂದಾಯದ ಹಳೆಯ ಬಾಕಿಯಾಗಿ ತೆರಿಗೆಯನ್ನು ವಸೂಲಿಮಾಡುವಂತೆ ನ್ಯಾಯಾಧಿಕರಣವು ಆದೇಶಿಸಬಹುದು.

173. ಮನರಂಜನಾ ತೆರಿಗೆ ಪಾವತಿಸದೇ ಇರುವುದಕ್ಕಾಗಿ ದಂಡನೆ.-(1) ನಿಯಮಗಳ ಅಡಿಯಲ್ಲಿ ಉಪಬಂಧಿಸಲಾದ ಅಂಥ ಕಾಲಾವಧಿಯೊಳಗೆ ಮನರಂಜನೆಯ ಮಾಲೀಕನು ಅಧಿನಿಯಮದ ಅಡಿಯಲ್ಲಿ ಪಾವತಿಸಲು ವಿಫಲನಾದರೆ, ಅಂಥ ಮಾಲೀಕನು ಸಂದಾಯವಾಗಬೇಕಾದ ತೆರಿಗೆಯ ಎರಡು ಪಟ್ಟಿನವರೆಗೆ ಅಥವಾ ಒಂದು ವರ್ಷದವರೆಗೆ ಜೈಲುವಾಸದ ಶಿಕ್ಷೆ ಅಥವಾ ಎರಡಕ್ಕೆ ಹೊಣೆಗಾರನಾಗತಕ್ಕದ್ದು.

(2)ಮುಖ್ಯ ಆಯುಕ್ತನು, (1)ನೇ ಉಪಪ್ರಕರಣದ ಉದ್ದೇಶಕ್ಕಾಗಿ, ಅಂಥ ಮಾಲೀಕನ ವಿರುದ್ಧ ಕ್ರಿಮಿನಲ್ ದೂರನ್ನು ದಾಖಲಿಸುವ ಅಧಿಕಾರವನ್ನುಹೊಂದಿರುವನು.

174. ವಿವರಣಾ ಪಟ್ಟಿಕೆಯಲ್ಲಿನ ಮಾಹಿತಿಯನ್ನು ಉದ್ದೇಶಪೂರ್ವಕವಾಗಿ ಹತ್ತಿಕ್ಕುವುದಕ್ಕೆ ದಂಡನೆ.- (1) ಮನರಂಜನೆ ಮಾಲೀಕನು ಉದ್ದೇಶಪೂರ್ವಕವಾಗಿ ವಿವರಣಾ ಪಟ್ಟಿಕೆಯಲ್ಲಿನ ಮಾಹಿತಿಯನ್ನು ಹತ್ತಿಕ್ಕಿದಲ್ಲಿ ಮತ್ತು ಮುಖ್ಯ ಆಯುಕ್ತನು, ಅಂಥ ಮಾಹಿತಿಯು ಮನರಂಜನಾ ತೆರಿಗೆಯನ್ನು ಲೆಕ್ಕಹಾಕಲು ಅವಶ್ಯವಾದುದು ಎಂದು ಅಭಿಪ್ರಾಯಪಟ್ಟಲ್ಲಿ, ಅಂಥ ಮಾಲೀಕನು ವ್ಯತ್ಯಾಸ ಮೊತ್ತದ ಒಂದುವರೆ ಪಟ್ಟು ದಂಡ ಪಾವತಿ ಅಥವಾ ಆರು ತಿಂಗಳ ಜೈಲುವಾಸ ಅಥವಾ ಎರಡಕ್ಕೂ ಹೊಣೆಗಾರನಾಗಿರತಕ್ಕದ್ದು.

(2) ಮುಖ್ಯ ಆಯುಕ್ತನು, (1)ನೇ ಪ್ರಕರಣದ ಉದ್ದೇಶಕ್ಕಾಗಿ, ಅಂಥ ಮಾಲೀಕನ ವಿರುದ್ಧ ಕ್ರಿಮಿನಲ್ ದೂರನ್ನು ದಾಖಲಿಸುವ ಅಧಿಕಾರ ಹೊಂದಿರತಕ್ಕದ್ದು.

175. ಸ್ಥಿರಾಸ್ತಿಗಳ ವರ್ಗಾವಣೆ ಮೇಲೆ ಶುಲ್ಕ.- (1) ಪಾಲಿಕೆಯ ಮಿತಿಗಳೊಳಗೆ ಇರುವ ಎಲ್ಲಾ ಸ್ಥಿರಾಸ್ತಿಗಳ ಶಾಶ್ವತ ಮಾರಾಟ, ಉಡುಗೊರೆ, ಅಡಮಾನ, ವಿನಿಯಮ ಅಥವಾ ಗುತ್ತಿಗೆಗಳ ಲಿಖಿತಪತ್ರದ ಮೇಲೆ ಕರ್ನಾಟಕ ಸ್ಟಾಂಪು ಅಧಿನಿಯಮ, 1957ರಲ್ಲಿ (1957ರ ಕರ್ನಾಟಕ ಅಧಿನಿಯಿಮ, 34) ವಿಧಿಸಲಾದ ಶುಲ್ಕದ ಶೇಕಡಾ ಎರಡರ ದರದಲ್ಲಿ ಮೇಲ್ತೆರಿಗೆಯ ರೂಪದಲ್ಲಿ ಸ್ಥಿರಾಸ್ತಿಯ ವರ್ಗಾವಣೆ ಶುಲ್ಕವನ್ನು ವಿಧಿಸತಕ್ಕದ್ದು.

(2) ಸರ್ಕಾರವು ಸಂಗ್ರಹವಾದ ಮೇಲ್ತೆರಿಗೆಯನ್ನು ಅದರ ಪ್ರತಿ ತಿಂಗಳು ಕಳುಹಿಸತಕ್ಕದ್ದು ಮತ್ತು ಅಂಥ ಮೊತ್ತವನ್ನು ಆರು ತಿಂಗಳುಗಳಿಗೆ ಮೀರಿ ಕಳುಹಿಸಲು ವಿಫಲವಾದ ಮೇಲೆ ಸರ್ಕಾರವು ಅಂಥ ಮೊತ್ತವನ್ನು ಶೇಕಡಾ ಒಂಬತ್ತರ ಬಡ್ಡಿಯೊಂದಿಗೆ ವರ್ಗಾವಣೆ ಮಾಡತಕ್ಕದ್ದು.

176. ವರ್ಗಾವಣೆ ಶುಲ್ಕ ಸೇರಿಸುವುದಕ್ಕೆ ಅನ್ವಯಿಸುವ ಉಪಬಂಧಗಳು.- (1) ಕರ್ನಾಟಕ ಸ್ಟಾಂಪು ಅಧಿನಿಯಮ, 1957ರ 28ನೇ ಪ್ರಕರಣವನ್ನು ಓದತಕ್ಕದ್ದು. ಪಾಲಿಕೆಯ ಮಿತಿಗಳ ಹೊರಗೆ ಅಥವಾ ಒಳಗೆ ಇರುವ ಆಸ್ತಿಯ ಬಗ್ಗೆ ವಿಶೇಷವಾಗಿ ಅಗತ್ಯವಿದ್ದಲ್ಲಿ ವಿವರಗಳನ್ನು ಪ್ರತ್ಯೇಕವಾಗಿ ನಿಗದಿಪಡಿಸಲಾಗುವುದು.

(2) ಅದೇ ಅಧಿನಿಯಮದ 64ನೇ ಪ್ರಕರಣದಲ್ಲಿನ ಸರ್ಕಾರವು ಎಂದು ಹಾಗೆ ಉಲ್ಲೇಖಿಸಿರುವಲ್ಲಿ ಪಾಲಿಕೆ ಎಂದು ಓದಿಕೊಳ್ಳತಕ್ಕದ್ದು.

177. ವರ್ಗಾವಣೆ ಸುಂಕದ ನಿರ್ಧರಣೆ ಮತ್ತು ಸಂಗ್ರಹಣೆಯ ಬಗ್ಗೆ ನಿಯಮಗಳನ್ನು ರಚಿಸಲು ಅಧಿಕಾರ.- ಸರ್ಕಾರವು, ವರ್ಗಾವಣೆ ಸುಂಕದ ಸಂಗ್ರಹಣೆ, ಪಾಲಿಕೆಗೆ ಅದರ ಸಂದಾಯ ಹಾಗೂ ಅದರ ಸಂಗ್ರಹಣೆಗಾಗಿ ಸರ್ಕಾರವು ವಹಿಸಿದ ಯಾವುದೇ ವೆಚ್ಚಗಳನ್ನು ಕಳೆಯುವುದನ್ನು ವಿನಿಯಮಿಸುವುದಕ್ಕಾಗಿ ಈ ಅಧಿನಿಯಮಕ್ಕೆ ಅಸಂಗತವಲ್ಲದ ನಿಯಮಗಳನ್ನು ರಚಿಸಬಹುದು.

178. ತೆರಿಗೆ ನಿರ್ಧರಣೆಯಿಂದ ತಪ್ಪಿಸಿಕೊಂಡ ಸಂದರ್ಭದಲ್ಲಿ ತೆರಿಗೆ ನಿರ್ಧರಣೆ ಮಾಡಲು ಅಧಿಕಾರ.- ಈ ಅಧಿನಿಯಮದಲ್ಲಿ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳಲ್ಲಿ, ತದ್ವಿರುದ್ಧವಾದುದು ಏನೇ ಒಳಗೊಂಡಿದ್ದರೂ, ಈ ಅಧ್ಯಾಯದ ಮೇರೆಗೆ ವಿಧಿಸಬಹುದಾದ ಯಾವುವೇ ತೆರಿಗೆಯನ್ನು ಅಥವಾ ಫೀಜುಗಳನ್ನು ಪಾವತಿ ಮಾಡಲು ಹೊಣೆಗಾರನಾದ ಯಾರೇ ವ್ಯಕ್ತಿಯು, ಯಾವುದೇ ಕಾರಣಕ್ಕಾಗಿ ಯಾವುದೇ ಅರ್ಧ ವರ್ಷದಲ್ಲಿ ಅಥವಾ ವರ್ಷದಲ್ಲಿ ತೆರಿಗೆ ನಿರ್ಧರಣೆಯಿಂದ ತಪ್ಪಿಸಿಕೊಂಡಿದ್ದರೆ, ಮುಖ್ಯ ಆಯುಕ್ತರು, ಅಂಥ ವ್ಯಕ್ತಿಯು ಯಾವ ದಿನಾಂಕದಂದು ತೆರಿಗೆ ನಿರ್ಧರಣೆಗೆ ಒಳಗಾಗಬೇಕಾಗಿತ್ತೋ, ಆ ಯಾವುದೇ ದಿನಾಂಕದಿಂದ ಆರು ವರ್ಷಗಳೊಳಗೆ ಯಾವುದೇ ಕಾಲದಲ್ಲಿ, ಬಾಕಿ ಇರುವ ಆ ತೆರಿಗೆ ಅಥವಾ ಫೀಜಿಗೆ ಅವನನ್ನು ತೆರಿಗೆ ನಿರ್ಧರಣೆಗೆ ಒಳಪಡಿಸಿದ ನೋಟೀಸನ್ನು, ಅವನಿಗೆ ಜಾರಿ ಮಾಡಿದ ದಿನಾಂಕದಿಂದ ಹದಿನೈದು ದಿವಸಗಳ ಒಳಗಾಗಿ, ಬಾಕಿ ಇರುವ ಆ ತೆರಿಗೆಯನ್ನು ಅಥವಾ ಫೀಜನ್ನು ಪಾವತಿ ಮಾಡುವಂತೆ ತಗಾದೆ ಮಾಡಿ, ಅಂಥ ವ್ಯಕ್ತಿಗೆ ಜಾರಿ ಮಾಡಬಹುದು. ಈ ಅಧಿನಿಯಮದ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳ ಉಪಬಂಧಗಳು, ಯಾವ ಅರ್ಧ ವರ್ಷಕ್ಕೆ ಅಥವಾ ವರ್ಷಕ್ಕೆ ತೆರಿಗೆ ಅಥವಾ ಫೀಜುಗಳು ಸಂಬಂಧಿಸಿವೆಯೋ ಆ ಅರ್ಧ ವರ್ಷದಲ್ಲಿ ಅಥವಾ ವರ್ಷದಲ್ಲಿ ತೆರಿಗೆ ನಿರ್ಧರಣೆಯನ್ನು ಮಾಡಿದ್ದಿದ್ದರೆ ಹೇಗೋ ಹಾಗೆ ಆದಷ್ಟುಮಟ್ಟಿಗೆ ಅನ್ವಯವಾಗತಕ್ಕದ್ದು.

179. ಕರ್ನಾಟಕ ಮೇಲ್ಮನವಿ ನ್ಯಾಯಾಧೀಕರಣದ ಮುಂದೆ ಮೇಲ್ಮನವಿ.- (1) ಉಪಬಂಧಿಸಲಾದ ವಿಷಯಗಳ ಮೇಲೆ ಮುಖ್ಯ ಆಯುಕ್ತರು ಅಥವಾ ಆತನಿಂದ ಅಧಿಕೃತಗೊಳಿಸಿದ ಯಾವೊಬ್ಬ ಅಧಿಕಾರಿಯ ಪುನರ್ ಕರನಿರ್ಧರಣೆ, ತೆರಿಗೆ ಪಾವತಿಯ ಕೋರಿಕೆ ಅಥವಾ ಮೇಲ್ತೆರಿಗೆ ಅಥವಾ ಹೊರಡಿಸಲಾದ ಯಾವುದೇ ಇತರೆ ಆದೇಶದಿಂದ ಬಾಧಿತನಾದ ಯಾರೇ ವ್ಯಕ್ತಿಯು ಕರ್ನಾಟಕ ಮೇಲ್ಮನವಿ ನ್ಯಾಯಾಧಿಕರಣ ಅಧಿನಿಯಮ,

1976 (1976ರ ಕರ್ನಾಟಕ ಅಧಿನಿಯಮ ಸಂಖ್ಯೆ: 10)ರಡಿ ಉಪಬಂಧಿಸಲಾದಂಥ ರೀತಿಯಲ್ಲಿ ನ್ಯಾಯಾಧೀಕರಣದ ಮುಂದೆ ಮೇಲ್ಮನವಿ ಸಲ್ಲಿಸಬಹುದು.

(2) ಯಾರೇ ವ್ಯಕ್ತಿಯು ಮೇಲ್ಮನವಿಯನ್ನು ಸಲ್ಲಿಸಬೇಕೆಂದು ಬಯಸಿದ್ದಲ್ಲಿ, ಆದೇಶ ಅಥವಾ ಕೋರಿಕೆಯನ್ನು ಸ್ವೀಕರಿಸಿದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಹಾಗೆ ಮಾಡತಕ್ಕದ್ದು.

ಅಧ್ಯಾಯ XIV

ಹಣಕಾಸು, ಲೆಕ್ಕಪತ್ರ ಮತ್ತು ಲೆಕ್ಕಪರಿಶೋಧನೆ

180. ಪಾಲಿಕೆಯ ನಿಧಿ.- (1) ಈ ಅಧಿನಿಯಮದ ಉದ್ದೇಶಗಳಿಗಾಗಿ ಪಾಲಿಕೆಯಲ್ಲಿ ನ್ಯಾಸವಾಗಿ ಹೊಂದಿರುವ ಒಂದು ನಿಧಿ ಇರತಕ್ಕದ್ದು. ಅದನ್ನು ಪಾಲಿಕೆಯ ನಿಧಿ ಎಂದು ಕರೆಯತಕ್ಕದ್ದು ಮತ್ತು ಈ ಅಧಿನಿಯಮದ ಅಡಿ ವಸೂಲಾದ ಅಥವಾ ವಸೂಲಾಗುವಂತಹ ಎಲ್ಲ ಹಣಕಾಸು ಮತ್ತು ಬೇರೆ ರೀತಿಯಲ್ಲಿ ಸ್ವೀಕರಿಸಲಾದ ಎಲ್ಲಾ ಹಣಕಾಸು ಅಲ್ಲಿಗೆ ಜಮಾಮಾಡತಕ್ಕದ್ದು.

(2) ಈ ಅಧಿನಿಯಮದ ಅಥವಾ ಯಾವುದೇ ಇತರ ಕಾನೂನಿನ ಮೂಲಕ ಅಥವಾ ಮೇರೆಗೆ ಪಾಲಿಕೆಯು ಅಥವಾ ಪಾಲಿಕೆಯ ಪರವಾಗಿ ಸ್ವೀಕರಿಸಿದ ಎಲ್ಲಾ ಹಣವನ್ನು, ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಪಾಲಿಕೆಗೆ ಪಾವತಿಯಾದ ಅಥವಾ ಅದು ವಿಧಿಸಿದ ಎಲ್ಲಾ ತೆರಿಗೆಗಳು, ಜಕಾತಿಗಳು ಮತ್ತು ಇತರ ಕರಗಳು, ಜುಲ್ಮಾನೆಗಳು, ಫೀಜುಗಳು, ದಂಡಗಳು, ಪಾಲಿಕೆಯು ಮಾರಾಟ ಮಾಡಿದ ಭೂಮಿಯ ಅಥವಾ ಇತರ ಸ್ವತ್ತಿನ ಎಲ್ಲ ಉತ್ಪತ್ತಿಗಳು ಮತ್ತು ಅದರ ಭೂಮಿಗಳಿಂದ ಅಥವಾ ಸ್ವತ್ತಿನಿಂದ ಪ್ರಾಪ್ತವಾದ ಎಲ್ಲಾ ಬಾಡಿಗೆಗಳು ಮತ್ತು ಎಲ್ಲಾ ಬಡ್ಡಿಗಳು, ಲಾಭಗಳು ಮತ್ತು ಸರ್ಕಾರದಿಂದ ಅಥವಾ ಖಾಸಗೀ ವ್ಯಕ್ತಿಗಳಿಂದ ದಾನಗಳ ಅಥವಾ ವರ್ಗಾವಣೆಗಳ ಮೂಲಕ ಅಥವಾ ಅನ್ಯಥಾ ಪ್ರಾಪ್ತವಾದ ಎಲ್ಲ ಇತರ ಹಣ ಪಾಲಿಕೆಯ ನಿಧಿ ಆಗಿರತಕ್ಕದ್ದು ಮತ್ತು ಅದನ್ನು ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಮತ್ತು ವಿನಿಯಮಗಳ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಉಪಬಂಧಗಳಿಗೆ ಅನುಸಾರವಾಗಿ ಧಾರಣ ಮಾಡತಕ್ಕದ್ದು, ವಿನಿಯೋಗಿಸತಕ್ಕದ್ದು ಮತ್ತು ವಿಲೆ ಮಾಡತಕ್ಕದ್ದು.

(3) ಪಾಲಿಕೆಯ ಸ್ವೀಕೃತಿಗಳು ಮತ್ತು ವೆಚ್ಚಗಳನ್ನು ಗೊತ್ತುಪಡಿಸಲಾದ ಅಂಥ ಲೆಕ್ಕಶೀರ್ಷಿಕೆಯ ಅಡಿಯಲ್ಲಿ ಅಂಥ ರೀತಿಯಲ್ಲಿ ಮತ್ತು ಅಂಥ ರೂಪದಲ್ಲಿ ಇಡತಕ್ಕದ್ದು.

(4) (2)ನೇ ಉಪ-ಪ್ರಕರಣದ ಅಡಿಯಲ್ಲಿ ಪ್ರತಿ ಲೆಕ್ಕಶೀರ್ಷಿಕೆಯನ್ನು ಕಂದಾಯ ಖಾತೆ ಮತ್ತು ಬಂಡವಾಳ ಖಾತೆ ಎಂದು ವಿಂಗಡಿಸತಕ್ಕದ್ದು ಮತ್ತು ಸ್ವೀಕೃತಿಗಳು ಮತ್ತು ವೆಚ್ಚಗಳ ಎಲ್ಲಾ ಬಾಬುಗಳನ್ನು ಅಂಥ ಕಂದಾಯ ಖಾತೆ ಅಥವಾ ಬಂಡವಾಳ ಖಾತೆಯಡಿ ಸಂದರ್ಭಾನುಸಾರ ಸಮುಚಿತವಾಗಿ ಇಡತಕ್ಕದ್ದು.

(5) ಪಾಲಿಕೆಯು, ಭಾರತೀಯ ಚಾರ್ಟರ್ಡ್ ಅಕೌಂಟ್ಸ್ ಸಂಸ್ಥೆಯಿಂದ ಶಿಫಾರಸ್ಸು ಮಾಡಲಾದ ಲೆಕ್ಕಪರಿಶೋಧಕ ಮಾನದಂಡಗಳ ಅನುಸಾರವಾಗಿ ಎರಡು ಬಾರಿ ನಮೂದಿಸುವ ಲೆಕ್ಕ ಇಡುವ ಸಂಚಯ ವ್ಯವಸ್ಥೆಯಂತೆ ಮತ್ತು ನಿಯಮಿಸಲಾದ ಅಂಥ ರೀತಿಯಲ್ಲಿ ಲೆಕ್ಕಪತ್ರಗಳನ್ನು ಸಿದ್ಧಪಡಿಸುವುದು ಮತ್ತು ನಿರ್ವಹಿಸುವುದು.

181. ಪಾಲಿಕೆ ನಿಧಿಯ ವಿನಿಯೋಗ.- (1) ಈ ಅಧಿನಿಯಮ ಮತ್ತು ನಿಯಮಗಳು ಮತ್ತು ಅದರಡಿಯಲ್ಲಿ ರಚಿಸಲಾದ ಉಪವಿಧಿಗಳ ಉದ್ದೇಶಗಳನ್ನು ಈಡೇರಿಸುವುದಕ್ಕಾಗಿ ಎಲ್ಲಾ ಅವಶ್ಯಕ ಮೊತ್ತಗಳು, ಖರ್ಚುಗಳು ಮತ್ತು ವೆಚ್ಚಗಳ ಪಾವತಿಗೆ ಕಾಲಕಾಲಕ್ಕೆ ಹಣಕಾಸನ್ನು ಜಮೆ ಮಾಡಲಾದ ಪಾಲಿಕೆ ನಿಧಿಯಿಂದ ಉಪಯೋಗಿಸಿಕೊಳ್ಳತಕ್ಕದ್ದು ಮತ್ತು ಕರ್ನಾಟಕ ಸ್ಥಳೀಯ ನಿಧಿ ಪ್ರಾಧಿಕಾರಗಳ ಆರ್ಥಿಕ ಹೊಣೆಗಾರಿಕೆ ಅಧಿನಿಯಮ 2003 (2003ರ ಕರ್ನಾಟಕ ಅಧಿನಿಯಮ 41) ಅಥವಾ ಕಾಲಾನುಸಾರ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ನಿಯಮಿಸಲಾದ ಅನುಸಾರವಾಗಿ ಪಾಲಿಕೆ ನಿಧಿಯಿಂದ ಸಂದಾಯವಾಗಬೇಕಾದ ಎಲ್ಲ ಮೊತ್ತಗಳನ್ನು ಪಾವತಿಸುವುದು.

(2) ರಾಜ್ಯ ಸರ್ಕಾರವು, ಪಾಲಿಕೆ ನಿಧಿಯ ವಿನಿಯೋಗ ಪ್ರಕ್ರಿಯೆ, ಆರ್ಥಿಕ ದಾಖಲೆಗಳ ಲೆಕ್ಕಪರಿಶೋಧನಾ ಪದ್ಧತಿಗಳು, ಹಣಕಾಸಿನ ದಾಖಲೆಗಳ ಪ್ರಕಟಣೆ ಮತ್ತು ಸಮರ್ಥ ಆರ್ಥಿಕ ನಿರ್ವಹಣೆಗಾಗಿ ಅಂಥ ಪಕ್ರಿಯೆಗಳನ್ನು ನಿಯಮಿಸತಕ್ಕದ್ದು.

182. ನಗರ ಸಾರಿಗೆ ನಿಧಿ.- (1) ನಗರ ಸಾರಿಗೆ ನಿಧಿ ಎಂದು ಕರೆಯುವ ಒಂದು ನಿಧಿಯನ್ನು ರಚಿಸತಕ್ಕದ್ದು ಮತ್ತು ಇದು,-

(ಎ) ಈ ಅಧಿನಿಯಮದ 143ನೇ ಪ್ರಕರಣದ ಅಡಿಯಲ್ಲಿ ಸಂಗ್ರಹಿಸಿದ ನಗರ ಸಾರಿಗೆ ಉಪಕರ;

(ಬಿ) ರಾಜ್ಯ ಸರ್ಕಾರದಿಂದ ಮತ್ತು ಕೇಂದ್ರ ಸರ್ಕಾರದಿಂದ ಸ್ವೀಕರಿಸಿದ ಎಲ್ಲಾ ಅನುದಾನಗಳು ಯಾವುವಾದರೂ ಇದ್ದಲ್ಲಿ; ಮತ್ತು

(ಸಿ) ಈ ನಿಧಿಯ ಆದಾಯದ ಯಾವುದೇ ಇತರ ಸ್ವೀಕೃತಿಗಳು, ಬಡ್ಡಿ ಅಥವಾ ಯಾವುದೇ ಇತರ ಸ್ವರೂಪ,

-ಇವುಗಳನ್ನು ಒಳಗೊಂಡಿರತಕ್ಕದ್ದು.

(2) ನಗರ ಸಾರಿಗೆ ನಿಧಿಯನ್ನು,

(ಎ) ನಗರ ಸಾರಿಗೆ ಮತ್ತು ಅವುಗಳ ಸಮಗ್ರ ನಿರ್ವಹಣೆಗೆ ಸಂಬಂಧದಲ್ಲಿ ಸಮನ್ವಯಗೊಳಿಸಲಾಗಿರುವ ಯೋಜನೆಯನ್ನು ಪರಿಯೋಜನೆಗಳನ್ನು ರೂಪಿಸಲು ಮತ್ತು ಅನುಷ್ಠಾನಗೊಳಿಸಲು;

(ಬಿ) ಸಾರ್ವಜನಿಕ ಸಾರಿಗೆಯನ್ನು ಬಳಸಲು ಪ್ರೋತ್ಸಾಹಿಸುವುದಕ್ಕೆ ಅಧ್ಯಯನ ಮಾಡಲು ಸಂಶೋಧನೆ ನಡೆಸಲು, ಉತ್ತೇಜಿಸಲು ಮತ್ತು ಪ್ರಚಾರವನ್ನು ಕೈಗೊಳ್ಳಲು;

(ಸಿ) ನಗರ ಸ್ಥಳೀಯ ಸಂಸ್ಥೆಗಳು ಏಜೆನ್ಸಿಗಳಲ್ಲಿ, ಪರಸ್ಥಳ ಏಜೆನ್ಸಿಗಳಲ್ಲಿ ಮತ್ತು ರಾಜ್ಯ ಸರ್ಕಾರದಲ್ಲಿ ಸಾಮರ್ಥ್ಯ ನಿರ್ಮಾಣ ಮಾಡಲು

- ಬಳಸಿಕೊಳ್ಳತಕ್ಕದ್ದು.

(3) ನಗರ ಭೂ ಸಾರಿಗೆ ನಿರ್ದೇಶನಾಲಯವು, (1)ನೇ ಉಪಪ್ರಕರಣದ ಅಡಿಯಲ್ಲಿ ರಚಿತವಾದ ನಿಧಿಯನ್ನು ನಿರ್ವಹಿಸುವ ಕಾರ್ಯಾಲಯವಾಗಿರತಕ್ಕದ್ದು.

(4) ನಗರ ಸಾರಿಗೆ ನಿಧಿಯಿಂದ ಬರುವ ಎಲ್ಲಾ ಸ್ವೀಕೃತಿಗಳು ಮತ್ತು ವೆಚ್ಚದ ಲೆಕ್ಕಪತ್ರಗಳನ್ನು ನಿಯಮಿಸಲಾದ ಅಂಥ ರೀತಿಯಲ್ಲಿ ಮತ್ತು ಅಂಥ ನಮೂನೆಯಲ್ಲಿ ಇಡತಕ್ಕದ್ದು.

(5) ರಾಜ್ಯ ಸರ್ಕಾರವು, ರಾಜ್ಯ ಲೆಕ್ಕಪತ್ರಗಳ ನಿಯಂತ್ರಕರ ಉಸ್ತುವಾರಿ ಮತ್ತು ನಿಯಂತ್ರಣಕ್ಕೆ ಒಳಪಟ್ಟು ನಗರ ಸಾರಿಗೆ ನಿಧಿಯ ಲೆಕ್ಕಪರಿಶೋಧನೆಯನ್ನು ನಡೆಸಲು ಲೆಕ್ಕಪರಿಶೋಧಕರನ್ನಾಗಿ ತನ್ನ ಒಬ್ಬ ಅಧಿಕಾರಿಯನ್ನು ನೇಮಕ ಮಾಡತಕ್ಕದ್ದು ಮತ್ತು ಇವರು ನಗರ ಸಾರಿಗೆ ನಿಧಿಗೆ ಸಂಬಂಧಿಸಿದಂತೆ ಎಲ್ಲಾ ಲೆಕ್ಕಪತ್ರಗಳ ಪುಸ್ತಕಗಳನ್ನು ಮತ್ತು ಎಲ್ಲಾ ಸ್ವೀಕೃತಿಗಳು ಹಾಗೂ ವೆಚ್ಚಗಳನ್ನು ನೋಡುವ ಅವಕಾಶವನ್ನು ಹೊಂದಿರತಕ್ಕದ್ದು ಮತ್ತು ನಗರ ಭೂ ಸಾರಿಗೆ ನಿರ್ದೇಶಕರು ಅಥವಾ ಸಂದರ್ಭಾನುಸಾರ, ಪೌರಾಡಳಿತದ ನಿರ್ದೇಶಕರು ಅಥವಾ ಪಾಲಿಕೆಯ ಮುಖ್ಯ ಆಯುಕ್ತರು ಅಥವಾ ಪಾಲಿಕೆಯ ಯಾರೇ ಅಧಿಕಾರಿಯು, ತಾನು ಅಗತ್ಯಪಡಿಸಬಹುದಾದ ಅಂಥ ವೆಚ್ಚದ ಯಾವುದೇ ಸ್ವೀಕೃತಿಗೆ ಸಂಬಂಧಿಸಿದ ಯಾವುದೇ ಮಾಹಿತಿಯನ್ನು ಆತನಿಗೆ ಒದಗಿಸತಕ್ಕದ್ದು.

(6) ನಗರ ಭೂ ಸಾರಿಗೆ ನಿರ್ದೇಶಕರು ನಿಧಿಯ ನಿರ್ವಹಣೆಯ ವಾರ್ಷಿಕ ವರದಿಯನ್ನು ಸಿದ್ಧಪಡಿಸತಕ್ಕದ್ದು ಮತ್ತು ವರದಿಯನ್ನು ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ ಮಂಡಿಸಲು ರಾಜ್ಯ ಸರ್ಕಾರಕ್ಕೆ ಸಲ್ಲಿಸತಕ್ಕದ್ದು. ಲೆಕ್ಕಪರಿಶೋಧನಾ ವರದಿ ಮತ್ತು ಇದಕ್ಕೆ ಸಂಬಂಧಿಸಿದ ಅನುಸರಣೆಯನ್ನು ಸಹ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ ಮಂಡಿಸತಕ್ಕದ್ದು.

183. ಪಾಲಿಕೆಯಿಂದ ವೆಚ್ಚಕ್ಕೆ ವಂತಿಗೆ ನೀಡಿಕೆ.- (1) ನಿಯಮಗಳ ಮೂಲಕ ಅಧಿಕೃತಗೊಳಿಸಿದ ಯಾವುದೇ ಉದ್ದೇಶಕ್ಕಾಗಿ ಸರ್ಕಾರವು ಅಥವಾ ಯಾವುದೇ ಸ್ಥಳೀಯ ಪ್ರಾಧಿಕಾರವು ವಹಿಸಿದ ವೆಚ್ಚವು ನಗರದ ನಿವಾಸಿಗಳ ಪ್ರಯೋಜನಕ್ಕಾಗಿ ವಹಿಸಿದ್ದಾಗಿದ್ದರೆ ಅಂಥ ವೆಚ್ಚಕ್ಕಾಗಿ ಪಾಲಿಕೆಯು ವಂತಿಗೆಯನ್ನು ಕೊಡಬಹುದು.

(2) (1)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಿದ ಯಾವುದೇ ವಂತಿಗೆಯನ್ನು ಏಕೆ ಕೊಡಬಾರದು ಎಂಬ ಬಗ್ಗೆ ಸರ್ಕಾರವು ಈ ಬಗ್ಗೆ ನಿಗದಿಪಡಿಸಿದ ಒಂದು ತಿಂಗಳಿಗಿಂತ ಕಡಿಮೆಯಲ್ಲದ ಅವಧಿಯೊಳಗೆ ಕಾರಣ ತೋರಿಸಲು ಪಾಲಿಕೆಗೆ ಸರ್ಕಾರವು ನಿರ್ದೇಶನ ನೀಡಬಹುದು.

(3) ಸರ್ಕಾರಕ್ಕೆ ಮನದಟ್ಟಾಗುವಂತೆ ಸದರಿ ಅವಧಿಯೊಳಗೆ ಕಾರಣ ತೋರಿಸಲು ಪಾಲಿಕೆಯು ತಪ್ಪಿದರೆ, ಸರ್ಕಾರವು ಅದು ಹೆಸರಿಸತಕ್ಕಂಥ ವಂತಿಗೆಯನ್ನು ನೀಡುವಂತೆ ನಿರ್ದೇಶಿಸಬಹುದು ಮತ್ತು ಅದಕ್ಕನುಸಾರವಾಗಿ ಅದನ್ನು ಸಂದಾಯ ಮಾಡತಕ್ಕದ್ದು.

184. ಸಾಲ ಪಡೆಯಲು ಪಾಲಿಕೆಯ ಅಧಿಕಾರ.- (1) ಪಾಲಿಕೆಯು ವಿಶೇಷ ಸಭೆಯಲ್ಲಿ ಅಂಗೀಕರಿಸಿದ ಯಾವುದೇ ನಿರ್ಣಯಕ್ಕೆ ಅನುಸಾರವಾಗಿ ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಅಧಿಕೃತವಾದ ಎಲ್ಲ ಅಥವಾ ಯಾವುದೇ ತೆರಿಗೆಗಳ, ಸುಂಕಗಳ, ಫೀಜುಗಳ ಮತ್ತು ಬಾಕಿಗಳ ಭದ್ರತೆಯ ಮೇಲೆ,-

(ಎ) ಕಾಮಗಾರಿಗಳ ನಿರ್ಮಾಣಕ್ಕಾಗಿ;

(ಬಿ) ಭೂಮಿಗಳ ಮತ್ತು ಕಟ್ಟಡಗಳ ಅರ್ಜನೆಗಾಗಿ; ಅಥವಾ

(ಸಿ) ಸರ್ಕಾರಕ್ಕೆ ಬಾಕಿ ಇರುವ ಯಾವುದೇ ಋಣದ ಸಂದಾಯಕ್ಕಾಗಿ; ಅಥವಾ

(ಡಿ) ಈ ಅಧಿನಿಯಮದ ಅಥವಾ ಹಿಂದೆ ಜಾರಿಯಲ್ಲಿದ್ದ ಯಾವುದೇ ಇತರ ಕಾನೂನಿನ ಮೇರೆಗೆ ಎತ್ತಿದ ಸಾಲವನ್ನು ಮರುಸಂದಾಯ ಮಾಡುವುದಕ್ಕಾಗಿ

- ಅಗತ್ಯವಾಗಬಹುದಾದ ಯಾವುದೇ ಹಣದ ಮೊತ್ತವÀನ್ನು ಡಿಬೆಂಚರ್ ಮೂಲಕವಾಗಲಿ ಅಥವಾ ಅನ್ಯಥಾ ಸಾಲ ಪಡೆಯಬಹುದು:

ಪರಂತು,-

(i) ಸರ್ಕಾರದ ಪೂರ್ವ ಮಂಜೂರಾತಿಯಿಲ್ಲದೆ ಯಾವುದೇ ಸಾಲವನ್ನು ಎತ್ತತಕ್ಕದ್ದಲ್ಲ; ಮತ್ತು

(ii) ಸಾಲದ ಮೊಬಲಗು, ಬಡ್ಡಿಯ ದರ ಮತ್ತು ಹೊರಡಿಸಿದ ದಿನಾಂಕವೂ ಸೇರಿದಂತೆ ನಿಬಂಧನೆಗಳು, ಮರುಸಂದಾಯದ ಕಾಲ ಮತ್ತು ವಿಧಾನ ಮತ್ತು ಅಂಥವುಗಳು ಸರ್ಕಾರದ ಅನುಮೋದನೆಗೆ ಒಳಪಟ್ಟಿರತಕ್ಕದ್ದು.

(2) (1)ನೇ ಉಪ ಪ್ರಕರಣದ ಮೇರೆಗೆ ಯಾವುದೇ ಹಣದ ಮೊತ್ತವನ್ನು ಸಾಲವಾಗಿ ಪಡೆದಾಗ,-

(ಎ) ಪಡೆದ ಸಾಲದ ಯಾವುದೇ ಭಾಗವನ್ನು ಸರ್ಕಾರದ ಪೂರ್ವ ಮಂಜೂರಾತಿಯಿಲ್ಲದೆ ಯಾವ ಉದ್ದೇಶಕ್ಕಾಗಿ ಅದನ್ನು ಪಡೆಯಲಾಗಿದೆಯೋ ಅದರ ಹೊರತು ಬೇರೆ ಯಾವುದೇ ಉದ್ದೇಶಕ್ಕಾಗಿ ವಿನಿಯೋಗಿಸತಕ್ಕದ್ದಲ್ಲ;

(ಬಿ) (1)ನೇ ಉಪ-ಪ್ರಕರಣದ (ಎ) ಖಂಡದ ಮೇರೆಗೆ ಸಾಲವಾಗಿ ಪಡೆದ ಹಣದ ಮೊತ್ತದ ಯಾವುದೇ ಭಾಗವನ್ನು ಯಾವ ಕಾಮಗಾರಿಗಳ ನಿರ್ಮಾಣಕ್ಕಾಗಿ ಹಣವನ್ನು ಸಾಲ ಪಡೆಯಲಾಗಿತ್ತೋ ಆ ಕಾಮಗಾರಿಗಳಿಗಾಗಿಯೇ ನಿಯೋಜಿತರಾದವರನ್ನು ಹೊರತುಪಡಿಸಿ, ಪಾಲಿಕೆಯ ಯಾರೇ ಅಧಿಕಾರಿಗಳಿಗೆ ಅಥವಾ ನೌಕರರಿಗೆ ಸಂಬಳಗಳ ಅಥವಾ ಭತ್ಯಗಳ ಸಂದಾಯಕ್ಕೆ ವಿನಿಯೋಗಿಸತಕ್ಕದ್ದಲ್ಲ.

185. 184ನೇ ಪ್ರಕರಣದ ಮೇರೆಗೆ ಸಾಲವಾಗಿ ಪಡೆದ ಹಣದ ಮರುಸಂದಾಯದ ಕಾಲಾವಧಿ.- 184ನೇ ಪ್ರಕರಣದ ಮೇರೆಗೆ ಸಾಲವಾಗಿ ಪಡೆದ ಯಾವುದೇ ಹಣದ ಮರುಸಂದಾಯದ ಕಾಲಾವಧಿಯು ಯಾವುದೇ ಸಂದರ್ಭದಲ್ಲಿ ಅರವತ್ತು ವರ್ಷಗಳನ್ನು ಮೀರತಕ್ಕದ್ದಲ್ಲ ಮತ್ತು ಹಿಂದಿನ ಯಾವುದೇ ಸಾಲವನ್ನು ತೀರಿಸುವ ಉದ್ದೇಶಕ್ಕಾಗಿ ಸಾಲವಾಗಿ ಪಡೆದ ಯಾವುದೇ ಹಣದ ಮರುಸಂದಾಯದ ಕಾಲಾವಧಿಯನ್ನು ಸರ್ಕಾರದ ಸ್ಪಷ್ಟ ಮಂಜೂರಾತಿ ಇದ್ದ ಹೊರತು ಅಂಥ ಹಿಂದಿನ ಸಾಲವನ್ನು ಯಾವ ಅವಧಿಗೆ ಮಂಜೂರು ಮಾಡಲಾಗಿತ್ತೋ ಆ ಅವಧಿಯ ಉಳಿದಿರುವ ಭಾಗಕ್ಕೆ ಮೀರಿ ವಿಸ್ತರಿಸತಕ್ಕದ್ದಲ್ಲ.

186. ಸಾಲ ಪಡೆಯುವ ಅಧಿಕಾರಗಳ ಮಿತಿ.- ಇದರಲ್ಲಿ ಇನ್ನು ಮುಂದೆ ಏನೇ ಒಳಗೊಂಡಿದ್ದರೂ, ಪಾಲಿಕೆಯ ಸಾಲ ಪಡೆಯುವ ಅಧಿಕಾರಗಳು, ಬಡ್ಡಿಗಾಗಿ ಮತ್ತು ಇಲ್ಲಿ ಇನ್ನುಮುಂದೆ ಉಪಬಂಧಿಸಿರುವಂತೆ ಋಣತೀರಿಕೆ ನಿಧಿಗಳನ್ನು ನಿರ್ವಹಿಸುವುದಕ್ಕಾಗಿ ಮತ್ತು ಅನ್ಯಥಾ ಸಾಲ ಪಡೆದ ಯಾವುದೇ ಮೊತ್ತದ ಬಡ್ಡಿಗಾಗಿ ಮತ್ತು ಆ ಮೊತ್ತದ ಮರುಸಂದಾಯಕ್ಕಾಗಿ ವಾರ್ಷಿಕವಾಗಿ ಸಂದಾಯ ಮಾಡಬಹುದಾದ ಮೊತ್ತವು ಸರ್ಕಾರದ ಸ್ಪಷ್ಟ ಮಂಜೂರಾತಿಯಿದ್ದ ಹೊರತು, ಈ ಅಧಿನಿಯಮದ ಅಡಿಯಲ್ಲಿ ನಿರ್ಧರಿಸಲಾದಂತೆ ಕಟ್ಟಡಗಳ ಮತ್ತು ಭೂಮಿಗಳ ತೆರಿಗೆಗೆ ಒಳಪಡುವ ಮೌಲ್ಯದ ಶೇಕಡ ಹತ್ತರಷ್ಟನ್ನು ಮೀರದ ಹಾಗೆ ಸೀಮಿತವಾಗಿರತಕ್ಕದ್ದು.

187. ಡಿಬೆಂಚರುಗಳ ನಮೂನೆ ಮತ್ತು ಪರಿಣಾಮ.- ಈ ಅಧ್ಯಾಯದ ಮೇರೆಗೆ ಹೊರಡಿಸಿದ ಎಲ್ಲಾ ಡಿಬೆಂಚರುಗಳು ಸರ್ಕಾರದ ಪೂರ್ವ ಮಂಜೂರಾತಿ ಪಡೆದು ಪಾಲಿಕೆಯು ನಿರ್ಧರಿಸಬಹುದಾದಂಥ ನಮೂನೆಯಲ್ಲಿ ಇರತಕ್ಕದ್ದು ಮತ್ತು ಅವುಗಳಲ್ಲಿ ವ್ಯಕ್ತಪಡಿಸಿರುವಂಥ ರೀತಿಯಲ್ಲಿ ವರ್ಗಾವಣೆ ಮಾಡುವಂಥವುಗಳು ಆಗಿರತಕ್ಕದ್ದು ಮತ್ತು ಅಂಥ ಯಾವುದೇ ಡಿಬೆಂಚರುಗಳ ಮೂಲಕ ಭದ್ರತೆ ಒದಗಿಸಿದ ಹಣಕ್ಕೆ ಸಂಬಂಧಿಸಿದಂತೆ ದಾವೆ ಹೂಡುವ ಹಕ್ಕು, ಅಂಥ ಕೆಲವು ಡಿಬೆಂಚರುಗಳು ಹಿಂದಿನ ದಿನಾಂಕದಲ್ಲಿದ್ದವು ಎಂಬ ಕಾರಣದಿಂದಾಗಿ ಇತರರಿಗೆ ಯಾವುದೇ ಆದ್ಯತೆ ನೀಡದೆಯೇ ತತ್ಕಾಲದಲ್ಲಿ ಅವುಗಳನ್ನು ಧಾರಣ ಮಾಡಿರುವವರಲ್ಲಿ ನಿಹಿತವಾಗಿರತಕ್ಕದ್ದು.

188. ಜಂಟಿ ಸ್ವೀಕರ್ತರ ಜೀವಂತ ವಾರಸುದಾರರಿಗೆ ಸಂದಾಯ.- ಈ ಅಧಿನಿಯಮದ ಮೇರೆಗೆ ಹೊರಡಿಸಿದ ಯಾವುದೇ ಡಿಬೆಂಚರ್ ಅಥವಾ ಭದ್ರತೆಯನ್ನು ಇಬ್ಬರು ಅಥವಾ ಹೆಚ್ಚು ವ್ಯಕ್ತಿಗಳಿಗೆ ಜಂಟಿಯಾಗಿ ಸಂದಾಯ ಮಾಡಬೇಕಾಗಿರುವಲ್ಲಿ, ಮತ್ತು ಅವರಲ್ಲಿ ಒಬ್ಬನು ಅಥವಾ ಅವರಲ್ಲಿ ಯಾರೇ ಮರಣ ಹೊಂದಿದಲ್ಲಿ ಡಿಬೆಂಚರ್ ಅಥವಾ ಭದ್ರತೆಯನ್ನು ಅಂಥ ವ್ಯಕ್ತಿಗಳ ಜೀವಂತ ವಾರಸುದಾರನಿಗೆ ಅಥವಾ ಜೀವಂತ ವಾರಸುದಾರರಿಗೆ ಸಂದಾಯ ಮಾಡತಕ್ಕದ್ದು:

ಪರಂತು, ಈ ಪ್ರಕರಣದಲ್ಲಿರುವುದು ಯಾವುದೂ ಅಂಥ ಜೀವಂತ ವಾರುಸುದಾರನ ಅಥವಾ ಜೀವಂತ ವಾರಸುದಾರರ ವಿರುದ್ಧ ಮೃತ ವ್ಯಕ್ತಿಯ ಪ್ರತಿನಿಧಿಯು ಮಾಡುವ ಯಾವುದೇ ಕ್ಲೈಮಿಗೆ ಬಾಧಕವನ್ನುಂಟುಮಾಡತಕ್ಕದ್ದಲ್ಲ.

189. ಬಡ್ಡಿಗೆ ಅಥವಾ ಲಾಭಾಂಶಕ್ಕೆ ಜಂಟಿಧಾರಕನಿಂದ ಸ್ವೀಕೃತಿ.- ಈ ಅಧಿನಿಯಮದ ಮೇರೆಗೆ ಹೊರಡಿಸಿದ ಯಾವುದೇ ಡಿಬೆಂಚರ್ ಅಥವಾ ಭದ್ರತೆಗೆ ಇಬ್ಬರು ಅಥವಾ ಹೆಚ್ಚು ವ್ಯಕ್ತಿಗಳು ಜಂಟಿಧಾರಕರಾಗಿದ್ದಾಗ, ಅಂಥ ವ್ಯಕ್ತಿಗಳಲ್ಲಿ ಇತರ ಯಾರೇ ವ್ಯಕ್ತಿಯು ಪಾಲಿಕೆಗೆ ತದ್ವಿರುದ್ಧವಾಗಿ ನೋಟೀಸನ್ನು ಕೊಟ್ಟಿದ್ದ ಹೊರತು, ಅಂಥ ವ್ಯಕ್ತಿಗಳಲ್ಲಿ ಯಾರೇ ಒಬ್ಬ ವ್ಯಕ್ತಿಯು ಅಂಥ ಡಿಬೆಂಚರ್ ಅಥವಾ ಭದ್ರತೆಯ ಸಂಬಂಧದಲ್ಲಿ ಸಂದಾಯ ಮಾಡಬಹುದಾದ ಯಾವುದೇ ಬಡ್ಡಿಗೆ ಅಥವಾ ಲಾಭಾಂಶಕ್ಕೆ ಕ್ರಮಬದ್ಧವಾದ ಸ್ವೀಕೃತಿಯನ್ನು ಕೊಡಬಹುದು.

190. ಸಾಲಗಳನ್ನು ಸಂಚಿತಗೊಳಿಸಲು ಪಾಲಿಕೆಯ ಅಧಿಕಾರ.- (1) ಈ ಅಧ್ಯಾಯದಲ್ಲಿ ತದ್ವಿರುದ್ಧವಾದುದು ಏನೇ ಒಳಗೊಂಡಿದ್ದರೂ ಪಾಲಿಕೆಯು ಅದರ ಎಲ್ಲಾ ಅಥವಾ ಯಾವುದೇ ಸಾಲಗಳನ್ನು ಸಂಚಿತಗೊಳಿಸಬಹುದು ಮತ್ತು ಆ ಉದ್ದೇಶಕ್ಕಾಗಿ (“ಪಾಲಿಕೆಯ ಸಂಚಿತ ಸಾಲ, 20----” ಎಂದು ಕರೆಯಲಾಗುವ) ಹೊಸ ಸಾಲಕ್ಕಾಗಿ ಟೆಂಡರ್‌ಗಳನ್ನು ಆಹ್ವಾನಿಸಬಹುದು ಮತ್ತು ಪಾಲಿಕೆಯ ಡಿಬೆಂಚರ್ ಧಾರಕರನ್ನು ಅಂಥ ಸಾಲದ ಹಂಗಾಮಿ ಪಾವತಿ ಪತ್ರಕ್ಕೆ ಅವರ ಡಿಬೆಂಚರ್‌ಗಳನ್ನು ವಿನಿಮಯ ಮಾಡಿಕೊಳ್ಳಲು ಆಹ್ವಾನಿಸಬಹುದು.

(2) ಯಾವುದೇ ಅಂಥ ಸಂಚಿತ ಸಾಲದ ನಿಬಂಧನೆಗಳು ಮತ್ತು ಅದರ ಹಂಗಾಮಿ ಪಾವತಿ ಪತ್ರದ ನಮೂನೆ ಮತ್ತು ಯಾವ ದರಗಳಲ್ಲಿ ಅಂಥ ಸಂಚಿತ ಸಾಲಕ್ಕೆ ವಿನಿಮಯ ಮಾಡಿಕೊಳ್ಳಬಹುದೋ ಆ ದರಗಳಿಗೆ ಅನುಮತಿ ನೀಡುವುದು ಸರ್ಕಾರದ ಪೂರ್ವಾನುಮೋದನೆಗೆ ಒಳಪಟ್ಟಿರತಕ್ಕದ್ದು.

(3) ಯಾವುದೇ ಅಂಥ ಸಂಚಿತ ಸಾಲ ತೀರಿಕೆಯ ಕಾಲಾವಧಿಯನ್ನು ಸಂಚಿತಗೊಳಿಸಬೇಕಾದ ಯಾವುದೇ ಸಾಲಗಳನ್ನು ಯಾವ ದಿನಾಂಕದೊಳಗೆ ಅನ್ಯಥಾ ಮರುಸಂದಾಯ ಮಾಡಬಹುದಾಗಿತ್ತೋ ಆ ತೀರಾ ಕೊನೆಯ ದಿನಾಂಕವನ್ನು ಮೀರಿ ಸರ್ಕಾರದ ಮಂಜುರಾತಿಯಿಲ್ಲದೆ ವಿಸ್ತರಿಸತಕ್ಕದ್ದಲ್ಲ.

(4) ಪಾಲಿಕೆಯು, 204ನೇ ಪ್ರಕರಣದ ಮೇರೆಗೆ ಅಂಥ ಋಣತೀರಿಕೆ ನಿಧಿಗೆ ವರ್ಗಾವಣೆ ಮಾಡಿದ ಮೊಬಲಗನ್ನು ಗಮನದಲ್ಲಿಟ್ಟುಕೊಂಡು 203ನೇ ಪ್ರಕರಣದಲ್ಲಿ ಹೇಳಲಾದ ರೀತಿಯಲ್ಲಿ ಋಣತೀರಿಕೆ ನಿಧಿಯಿಂದ ಯಾವುದೇ ಅಂಥ ಸಂಚಿತ ಸಾಲದ ಮರುಸಂದಾಯಕ್ಕೆ ಏರ್ಪಾಡು ಮಾಡತಕ್ಕದ್ದು.

191. ಬಡ್ಡಿಯ ಸಂದಾಯಕ್ಕೆ ಮತ್ತು ಸಾಲಗಳ ಮರುಸಂದಾಯಕ್ಕೆ, ಇತರ ಸಂದಾಯಕ್ಕಿಂತ ಹೆಚ್ಚು ಆದ್ಯತೆ ನೀಡುವುದು.- ಸಾಲಗಳ ಮೇಲೆ ಬಡ್ಡಿ ಸಂದಾಯ ಮತ್ತು ಸಾಲಗಳ ಮರುಸಂದಾಯಕ್ಕಾಗಿ ಪಾಲಿಕೆಯು ಮಾಡಬೇಕಾದ ಎಲ್ಲ ಸಂದಾಯಗಳಿಗೆ ಪಾಲಿಕೆಯು ಮಾಡಬೇಕಾದ ಎಲ್ಲಾ ಇತರ ಸಂದಾಯಗಳಿಗಿಂತ ಹೆಚ್ಚಿನ ಆದ್ಯತೆ ನೀಡತಕ್ಕದ್ದು.

192. ಸರ್ಕಾರದಿಂದ ಸಾಲವಾಗಿ ಪಡೆದ ಹಣದ ವಸೂಲಿಗಾಗಿ ಪಾಲಿಕೆಯ ನಿಧಿಯ ಜಪ್ತಿ.- (1) ಈ ಅಧಿನಿಯಮವು ಪ್ರಾರಂಭವಾಗುವುದಕ್ಕೆ ಮುಂಚೆ ಅಥವಾ ನಂತರ ಪಾಲಿಕೆಯು ಸರ್ಕಾರದಿಂದ ಸಾಲವಾಗಿ ಪಡೆದ ಯಾವುದೇ ಹಣವನ್ನು ಅಥವಾ ಅದಕ್ಕೆ ಸಂಬಂಧಿಸಿದಂತೆ ಬಾಕಿಯಿರುವ ಯಾವುದೇ ಬಡ್ಡಿಯನ್ನು ಅಥವಾ ವೆಚ್ಚಗಳನ್ನು ಸಾಲ ಪರತ್ತುಗಳಿಗೆ ಅನುಸಾರವಾಗಿ ಮರುಸಂದಾಯ ಮಾಡದಿದ್ದರೆ ಸರ್ಕಾರವು, ಪಾಲಿಕೆಯ ನಿಧಿಯನ್ನು ಅಥವಾ ಅದರ ಯಾವುದೇ ಭಾಗವನ್ನು ಜಪ್ತಿ ಮಾಡಬಹುದು.

(2) ಅಂಥ ಜಪ್ತಿಯ ನಂತರ, ಜಪ್ತಿ ಮಾಡಿದ ನಿಧಿಯ ಬಗ್ಗೆ ಸರ್ಕಾರದಿಂದ ಈ ಬಗ್ಗೆ ನೇಮಕಗೊಂಡ ಅಧಿಕಾರಿಯ ಹೊರತು ಯಾರೇ ವ್ಯಕ್ತಿಯು, ಯಾವುದೇ ರೀತಿಯಲ್ಲಿ ವ್ಯವಹರಿಸತಕ್ಕದ್ದಲ್ಲ,, ಆದರೆ ಅಂಥ ಜಪ್ತಿಯನ್ನು ಮಾಡದೆ ಇದ್ದಿದ್ದರೆ ಅದಕ್ಕೆ ಸಂಬಂಧಿಸಿದಂತೆ ಯಾವುದೇ ಪಾಲಿಕೆ ಪ್ರಾಧಿಕಾರ, ಅಧಿಕಾರಿ ಅಥವಾ ನೌಕರನು ಮಾಡಬಹುದಾಗಿದ್ದ ಎಲ್ಲಾ ಕಾರ್ಯಗಳನ್ನು ಆ ಅಧಿಕಾರಿಯು ಮಾಡಬಹುದು ಮತ್ತು ಬಾಕಿಗಳನ್ನು ಮತ್ತು ಅದಕ್ಕೆ ಸಂಬಂಧಿಸಿದಂತೆ ಬಾಕಿಯಿರುವ ಎಲ್ಲಾ ಬಡ್ಡಿಯನ್ನು ಮತ್ತು ವೆಚ್ಚಗಳನ್ನು ಮತ್ತು ಜಪ್ತಿಯಿಂದಾಗಿ ಹಾಗೂ ತರುವಾಯದ ವ್ಯವಹರಣೆಗಳಿಂದಾಗಿ ಉಂಟಾದ ಎಲ್ಲಾ ವೆಚ್ಚಗಳನ್ನು ತೀರಿಸಲು ನಿಧಿಯ ಉತ್ಪತ್ತಿಗಳನ್ನು ವಿನಿಯೋಗಿಸಬಹುದು:

ಪರಂತು, ಯಾವುದೇ ಅಂಥ ಜಪ್ತಿಯು, ಯಾವ ಋಣಕ್ಕಾಗಿ ಜಪ್ತಿ ಮಾಡಿದ ನಿಧಿಗೆ ಈ ಹಿಂದೆ ಕಾನೂನಿಗನುಸಾರವಾಗಿ ಋಣಭಾರ ಹೊರಿಸಲಾಗಿತ್ತೋ, ಆ ಯಾವುದೇ ಋಣವನ್ನು ರದ್ದುಗೊಳಿಸತಕ್ಕದ್ದಲ್ಲ ಅಥವಾ ಅದಕ್ಕೆ ಬಾಧಕವನ್ನುಂಟುಮಾಡತಕ್ಕದ್ದಲ್ಲ ಆದರೆ ಅಂಥ ಎಲ್ಲ ಹಿಂದಿನ ಋಣಭಾರಗಳನ್ನು ಸರ್ಕಾರಕ್ಕೆ ಬಾಕಿಯಿರುವ ಋಣಗಳನ್ನು ತೀರಿಸುವುದಕ್ಕೆ ಉತ್ಪತ್ತಿಗಳ ಯಾವುದೇ ಭಾಗವನ್ನು ವಿನಿಯೋಗಿಸುವುದಕ್ಕೆ ಮುಂಚೆ ನಿಧಿಯ ಉತ್ಪತ್ತಿಗಳಿಂದ ಸಂದಾಯ ಮಾಡತಕ್ಕದ್ದು.

193. ಪಾಲಿಕೆಯ ಆಯವ್ಯಯವನ್ನು ಸಿದ್ಧಪಡಿಸುವುದು.- (1) ಒಂದು ನಿರ್ದಿಷ್ಟ ವಲಯದೊಳಗೆ ಈ ಅಧಿನಿಯಮವನ್ನು ಸಮರ್ಥವಾಗಿ ಕಾರ್ಯಗತಗೊಳಿಸುವ ಉದ್ದೇಶಗಳಿಗಾಗಿ ಅಸ್ತಿತ್ವದಲ್ಲಿರುವ ಯೋಜನೆಗಳನ್ನು ಕಾರ್ಯಗತೊಳಿಸುವುದಕ್ಕಾಗಿ ಅಗತ್ಯವಾದ ಮಾನವ ಸಂಪನ್ಮೂಲ ಮತ್ತು ಅಂಥ ಇತರೆ ವೆಚ್ಚಗಳ ಆಯವ್ಯಯ ಅಂದಾಜನ್ನು ಪ್ರತಿ ವಲಯ ಸಮಿತಿಯು ಸಲ್ಲಿಸತಕ್ಕದ್ದು.

(2) ವಲಯ ಸಮಿತಿಯು ವಾರ್ಡ ಸಮಿತಿಯೊಂದಿಗೆ ಸಮಾಲೋಚನೆ ಮತ್ತು ಅದರ ಶಿಫಾರಸ್ಸುಗಳನ್ನು ಪರಿಗಣಿಸದ ಹೊರತು ಮೇಯರ್‌ಗೆ ಆಯವ್ಯಯ ಅಂದಾಜನ್ನು ಸಲ್ಲಿಸತಕ್ಕದ್ದಲ್ಲ.

(3) ವಾರ್ಡ್ ಸಮಿತಿಯು ಅಂಥ ಅವಶ್ಯವಿರುವ ಸಾರ್ವಜನಿಕ ಸಮಾಲೋಚನೆಗಳನ್ನು ಸಂಘಟಿಸಿ ಪ್ರಾಮುಖ್ಯತೆಯನ್ನು ನೀಡಿ, ವಲಯ ಸಮಿತಿಗೆ ಅದರ ಶಿಫಾರಸ್ಸುಗಳನ್ನು ಮಾಡತಕ್ಕದ್ದು.

(4) ವಲಯ ಸಮಿತಿಯ ಆಯವ್ಯಯ ಅಂದಾಜಿನ ನಮೂನೆ ಮತ್ತು ಪ್ರಕ್ರಿಯೆಯ ಸಲ್ಲಿಸುವಿಕೆಯು ನಿಯಮಿಸಲಾದಂತಿರತಕ್ಕದ್ದು.

(5) ಮೇಯರ್‌ನು ಎಲ್ಲ ವಲಯ ಸಮಿತಿಗಳ ಆಯವ್ಯಯ ಅಂದಾಜನ್ನು ಪರಿಗಣಿಸಿದ ಮೇಲೆ ಪಾಲಿಕೆಯ ಮುಖ್ಯ ಆಯವ್ಯಯ ಅಂದಾಜನ್ನು ಸಿದ್ಧಪಡಿಸುವುದು.

(6) ಆಯವ್ಯಯದ ಅಂದಾಜು ಈ ಮುಂದಿನದನ್ನು ಹೊಂದಿರತಕ್ಕದು.

(ಎ) ಹಿಂದಿನ ಆರ್ಥಿಕ ವರ್ಷಗಳ ಸ್ವೀಕೃತಿಗಳು ಮತ್ತು ಪಾವತಿಗಳು ಹಾಗೂ ಮುಂಬರುವ ಆರ್ಥಿಕ ವರ್ಷದ ನಿರೀಕ್ಷಿತ ಸ್ವೀಕೃತಿಗಳು ಮತ್ತು ಪಾವತಿಗಳು;

(ಬಿ) ಸಂಕಲಿತ ಮಧ್ಯಮ ಅವಧಿ ಆರ್ಥಿಕ ಯೋಜನೆ;

(ಸಿ) ತಕ್ಷಣದ ಮುಂದುವರೆದ ಆರ್ಥಿಕ ವರ್ಷದಲ್ಲಿ ಪಾಲಿಕೆಯು ವಿಧಿಸುವ ವಿವಿಧ ತೆರಿಗೆಗಳು, ಮೇಲ್ತೆರಿಗೆ, ಉಪಕರ ಮತ್ತು ಶುಲ್ಕಗಳ ದರಗಳಿರತಕ್ಕದ್ದು; ಮತ್ತು

(ಡಿ) ಪ್ರತಿ ವಲಯ ಸಮಿತಿಗೆ ಏರಿಸಲಾದ ಸಾಲ ಹಣದ ಮೊತ್ತ, ಹಂಚಿಕೆಯಾದ ಹಣದ ಮೊತ್ತ ಮತ್ತು ಅಂಥ ಮೊತ್ತಗಳ ಉಪಯೋಗಿಸುವಿಕೆಯ ಆಧಾರವಾಗಿರುವುದು.

(7) ಆಯವ್ಯಯವನ್ನು ನಿಯಮಿಸಲಾದ ಅಂಥ ಮಾದರಿ ಮತ್ತು ಅಂಥ ವಿಧಾನ ಮತ್ತು ಒದಗಿಸಲಾದ ಅಂಥ ವಿಷಯಗಳಂತೆ ಸಿದ್ಧಪಡಿಸುವುದು, ಪ್ರಸ್ತುತಪಡಿಸುವುದು ಮತ್ತು ಅಳವಡಿಸಿಕೊಳ್ಳುವುದು;

194. ತೆರಿಗೆ, ಹಣಕಾಸು ಮತ್ತು ಅಪೀಲುಗಳಿಗಾಗಿ ಸ್ಥಾಯೀ ಸಮಿತಿಯು ಅಥವಾ ಸಂದರ್ಭಾನುಸಾರ ತೆರಿಗೆ ಮತ್ತು ಹಣಕಾಸು ಸ್ಥಾಯೀ ಸಮಿತಿಯು ಬಜೆಟ್ ಅಂದಾಜುಗಳನ್ನು ತಯಾರಿಸುವುದು.-(1) ತೆರಿಗೆ, ಹಣಕಾಸು ಮತ್ತು ಅಪೀಲುಗಳ ಸ್ಥಾಯೀ ಸಮಿತಿಯು ಜನವರಿ ಹದಿನೈದನೇ ದಿನಾಂಕದಂದು ಅಥವಾ ಅದರ ನಂತರ, ಆದಷ್ಟು ಬೇಗನೆ ಮುಖ್ಯ ಆಯುಕ್ತರ ಅಂದಾಜುಗಳನ್ನು ಮತ್ತು ಪ್ರಸ್ತಾವನೆಗಳನ್ನು ಪರ್ಯಾಲೋಚಿಸತಕ್ಕದ್ದು ಮತ್ತು ಇತರ ಸ್ಥಾಯೀ ಸಮಿತಿಗಳ ಪ್ರಸ್ತಾವನೆಗಳು ಯಾವುದಾದರೂ ಇದ್ದರೆ, ಅವುಗಳನ್ನು ಪಡೆದುಕೊಂಡ ತರುವಾಯ, ಮತ್ತು ತಾನು ಸೂಕ್ತವೆಂದು ಭಾವಿಸುವಂಥ ಅಗತ್ಯವಿರುವ ವಿವರವಾದ ಮಾಹಿತಿ ಯಾವುದಾದರೂ ಇದ್ದರೆ ಅದನ್ನು ಮುಖ್ಯ ಆಯುಕ್ತರಿಂದ ಪಡೆದ ತರುವಾಯ ಮತ್ತು ಈ ಅಧಿನಿಯಮದ ಎಲ್ಲಾ ಅಗತ್ಯತೆಗಳನ್ನು ಗಮನದಲ್ಲಿಟ್ಟುಕೊಂಡು ಈ ಎಲ್ಲವುಗಳ ಆಧಾರದ ಮೇಲೆ, ತಾನು ಸೂಕ್ತವೆಂದು ಭಾವಿಸತಕ್ಕಂಥ ಅದರಲ್ಲಿ ಅಥವಾ ಅದಕ್ಕೆ ಮಾಡುವ ಮಾರ್ಪಾಡುಗಳು ಮತ್ತು ಸೇರ್ಪಡೆಗಳಿಗೆ ಒಳಪಟ್ಟು ಮುಂಬರುವ ವರ್ಷಕ್ಕಾಗಿ ಪಾಲಿಕೆಯ ಆದಾಯ ಮತ್ತು ವೆಚ್ಚದ ಬಜೆಟ್ ಅಂದಾಜನ್ನು ತಯಾರಿಸತಕ್ಕದ್ದು.

(2) ಅಂಥ ಬಜೆಟ್ ಅಂದಾಜಿನಲ್ಲಿ ಸ್ಥಾಯೀ ಸಮಿತಿಯು,- (ಎ) ಸಾಲಗಳ ಕಾರಣದಿಂದಾಗಿ ಅಸಲಿನ ಯಾವ ಕಂತುಗಳಿಗೆ ಮತ್ತು ಬಡ್ಡಿಗೆ ಪಾಲಿಕೆಯು ಹೊಣೆಯಾಗಬಹುದಾಗಿದೆಯೋ ಆ ಅಸಲಿನ ಎಲ್ಲ ಕಂತುಗಳನ್ನು ಮತ್ತು ಬಡ್ಡಿಯನ್ನು ಸಂದಾಯ ಮಾಡಬೇಕಾದಾಗ ಅವುಗಳನ್ನು ಸಂದಾಯ ಮಾಡುವುದಕ್ಕೆ ಏರ್ಪಾಡು ಮಾಡತಕ್ಕದ್ದು;

(ಬಿ) ವಂತಿಗೆಗಳ, ಫೀಜುಗಳ ಬಾಬ್ತು, ಯಾವುದೇ ಮೊಬಲಗನ್ನು ಸಂದಾಯ ಮಾಡಬೇಕಾದಾಗ ಅದರ ಸಂದಾಯಕ್ಕೆ ಅಥವಾ ಪಾಲಿಕೆಯು ಸರ್ಕಾರಕ್ಕೆ ಸಂದಾಯ ಮಾಡಬಹುದಾದಂಥ ಇತರ ಮೊಬಲಗುಗಳ ಸಂದಾಯಕ್ಕೆ ಏರ್ಪಾಡು ಮಾಡತಕ್ಕದ್ದು.

(ಸಿ) ಜನರಲ್ ಅಕೌಂಟ್-ರೆವಿನ್ಯೂದಲ್ಲಿ ವರ್ಷದ ಕೊನೆಯಲ್ಲಿ ಒಂದು ಲಕ್ಷ ರೂಪಾಯಿಗಳಿಗೆ ಕಡಿಮೆಯಿಲ್ಲದಷ್ಟು ನಗದು ಶಿಲ್ಕನ್ನು ಉಳಿಸಿಕೊಳ್ಳಲು ಅವಕಾಶ ನೀಡತಕ್ಕದ್ದು.

(3) ಮುಖ್ಯ ಆಯುಕ್ತರು, ಸ್ಥಾಯೀ ಸಮಿತಿಯಿಂದ ಅಂತಿಮವಾಗಿ ಅನುಮೋದನೆಯಾದಂಥ ಬಜೆಟ್ ಅಂದಾಜನ್ನು ಮುದ್ರಣ ಮಾಡಿಸತಕ್ಕದ್ದು ಮತ್ತು ಫೆಬ್ರವರಿ ಮೊದಲನೆಯ ದಿನಕ್ಕೆ ಮೀರದಂತೆ ಅದರ ಮುದ್ರಿತ ಪ್ರತಿಯನ್ನು ಪ್ರತಿಯೊಬ್ಬ ಕೌನ್ಸಿಲರನಿಗೂ ಕಳುಹಿಸಿಕೊಡತಕ್ಕದ್ದು.

195. ಆಯವ್ಯಯದ ಅನುದಾನವನ್ನು ಮಾರ್ಪಡಿಸಲು ಪಾಲಿಕೆಯ ಅಧಿಕಾರ.- ಪಾಲಿಕೆಯು ಕಾಲದಿಂದ ಕಾಲಕ್ಕೆ, ಲಿಖಿತವಾಗಿ ವಿವರಿಸಲಾದ ನಿರ್ದಿಷ್ಟ ಕಾರಣಗಳಿಗಾಗಿ, ಆರ್ಥಿಕ ವರ್ಷದಲ್ಲಿ,-

(ಎ) ಯಾವುದೇ ಶೀರ್ಷಿಕೆಯಡಿಯಲ್ಲಿ ಆಯವ್ಯಯದ ಯಾವುದೇ ಅನುದಾನದ ಮೊತ್ತವನ್ನು ಹೆಚ್ಚಿಸಬಹುದು;

(ಬಿ) ಸದರಿ ವರ್ಷದಲ್ಲಿ ಯಾವುದೇ ವಿಶೇಷ ಅಥವಾ ಅನಿರೀಕ್ಷಿತ ಅಗತ್ಯತೆಗಳು ಉದ್ಭವಿಸಿದಲ್ಲಿ ಎದುರಿಸುವ ಉದ್ದೇಶಕ್ಕಾಗಿ ಹೆಚ್ಚುವರಿ ಆಯವ್ಯಯ ಅನುದಾನವನ್ನು ನೀಡಬಹುದು;

(ಸಿ) ಯಾವುದೇ ಆಯವ್ಯಯ ಅನುದಾನ ಹಣವನ್ನು ಅಥವಾ ಅದರ ಭಾಗವನ್ನು ಆಯವ್ಯಯ ಅನುದಾನ ಹಣದ ಒಂದು ಶೀರ್ಷಿಕೆಯ ಅಡಿಯಿಂದ ಯಾವುದೇ ಇತರ ಶೀರ್ಷಿಕೆಗೆ ವರ್ಗಾಯಿಸಬಹುದು.

(ಡಿ) ಯಾವುದೇ ಶೀರ್ಷಿಕೆಯಡಿಯ ಆಯವ್ಯಯ ಅನುದಾನದ ಹಣವನ್ನು ಕಡಿಮೆ ಮಾಡಬಹುದು.

196. ವರ್ಷದ ಪ್ರಾರಂಭಕ್ಕೆ ಮುಂಚೆ ಬಜೆಟನ್ನು ಅಂಗೀಕರಿಸಲು ಹೊಣೆಗಾರಿಕೆ.- (1) ಪಾಲಿಕೆಯು ಬಜೆಟ್ ಅಂದಾಜು ಯಾವ ವರ್ಷಕ್ಕೆ ಸಂಬಂಧಿಸಿದೆಯೋ ಆ ವರ್ಷದ ಪ್ರಾರಂಭಕ್ಕೆ ಕನಿಷ್ಠ ಮೂರು ವಾರಗಳಿಗೆ ಮುಂಚೆ ಅದನ್ನು ಅಂತಿಮವಾಗಿ ಅಂಗೀಕರಿಸತಕ್ಕದ್ದು ಮತ್ತು ತತ್‌ಕ್ಷಣವೇ ಅದರ ಒಂದು ಪ್ರತಿಯನ್ನು ಸರ್ಕಾರಕ್ಕೆ ಒಪ್ಪಿಸತಕ್ಕದ್ದು.

(2) ಸರ್ಕಾರವು ಬಜೆಟನ್ನು ಸಮಗ್ರವಾಗಿ ಅಥವಾ ತಾನು ಸೂಕ್ತವೆಂದು ಭಾವಿಸಬಹುದಾಂಥ ಮಾರ್ಪಾಟುಗಳಿಗೆ ಒಳಪಟ್ಟು ಮಂಜೂರು ಮಾಡಬಹುದು:

ಪರಂತು ,ಆದಾಗ್ಯೂ ಬಜೆಟನ್ನು ಸ್ವೀಕರಿಸಿದ ದಿನಾಂಕದಿಂದ ಎರಡು ತಿಂಗಳೊಳಗೆ ಸರ್ಕಾರವು ಅದರ ಬಗ್ಗೆ ಯಾವುದೇ ಆದೇಶಗಳನ್ನು ತಿಳಿಸದಿದ್ದರೆ, ಆ ಬಜೆಟ್ ಸರ್ಕಾರದಿಂದ ಮುಂಜೂರಾಗಿದೆಯೆಂದು ಭಾವಿಸತಕ್ಕದ್ದು.

197. ಪಾಲಿಕೆಯು ಪೂರಕ ಬಜೆಟನ್ನು ಅಂಗೀಕರಿಸಬಹುದು.- ತೆರಿಗೆ, ಹಣಕಾಸು ಮತ್ತು ಅಪೀಲುಗಳ ಸ್ಥಾಯೀ ಸಮಿತಿಯು ತೆರಿಗೆ ಮತ್ತು ಹಣಕಾಸು ಸ್ಥಾಯೀ ಸಮಿತಿಯ ಶಿಫಾರಸಿನ ಮೇಲೆ ಆ ವರ್ಷದಲ್ಲಿ ಉದ್ಭವಿಸುವ ಯಾವುದೇ ವಿಶೇಷ ಅಥವಾ ಮುಂಗಾಣದ ಅಗತ್ಯತೆಗಳನ್ನು ಈಡೇರಿಸುವ ಉದ್ದೇಶಕ್ಕಾಗಿ ಪೂರಕ ಬಜೆಟ್ ಅಂದಾಜನ್ನು ಅಂಗೀಕರಿಸಬಹುದು. ಆದಾಗ್ಯೂ, ವರ್ಷದ ಕೊನೆಯಲ್ಲಿ ಜನರಲ್ ಅಕೌಂಟ್-ರೆವಿನ್ಯೂದಲ್ಲಿ ಅಂದಾಜು ನಗದು ಶಿಲ್ಕನ್ನು ಒಂದು ಲಕ್ಷ ರೂಪಾಯಿಗಳಿಗಿಂತ ಕಡಿಮೆ ಮಾಡತಕ್ಕದ್ದಲ್ಲ:

ಪರಂತು, ಬಜೆಟನ್ನು ಮಂಜೂರು ಮಾಡುವ ಸಮಯದಲ್ಲಿ ಸರ್ಕಾರವು ಅಂಗೀಕರಿಸದಿದಂಥ ಯಾವುದೇ ಬಾಬನ್ನು ಪೂರಕ ಬಜೆಟ್ಟಿನಲ್ಲಿ ಸೇರಿಸತಕ್ಕದ್ದಲ್ಲ.

198. ಅವಶ್ಯವಾದಾಗಲೆಲ್ಲಾ ಅಧಿಕೃತ ವರ್ಷದ ಅವಧಿಯಲ್ಲಿ ಪಾಲಿಕೆಯು ಆದಾಯ ಮತ್ತು ವೆಚ್ಚವನ್ನು ಮರುಹೊಂದಾಣಿಕೆ ಮಾಡುವುದು.- (1) ಯಾವುದೇ ವರ್ಷದ ಯಾವುದೇ ಕಾಲದಲ್ಲಿ ತೆರಿಗೆ, ಹಣಕಾಸು ಮತ್ತು ಅಪೀಲು ಸ್ಥಾಯೀ ಸಮಿತಿಯ ಅಥವಾ ಸಂದರ್ಭಾನುಸಾರ ತೆರಿಗೆ ಮತ್ತು ಹಣಕಾಸು ಸ್ಥಾಯೀ ಸಮಿತಿಯ ಮನವಿಯ ಮೇಲೆ 195ನೇ ಪ್ರಕರಣದ ಮೇರೆಗೆ ಬಜೆಟ್ ಅನುದಾನಗಳಲ್ಲಿ ಯಾವುದೇ ಕಡಿತಮಾಡಬಹುದಾಗಿದ್ದರೂ ಸದರಿ ವರ್ಷದ ಅವಧಿಯಲ್ಲಿ ಪಾಲಿಕೆಯ ನಿಧಿಯ ಆದಾಯವು ಸದರಿ ವರ್ಷದ ಬಜೆಟ್ ಅಂದಾಜಿನಲ್ಲಿ ಮಂಜೂರಾದ ವೆಚ್ಚವನ್ನು ಭರಿಸಲು ಮತ್ತು ಜನರಲ್ ಅಕೌಂಟ್-ರೆವಿನ್ಯೂದಲ್ಲಿ ಒಂದು ಲಕ್ಷ ರೂಪಾಯಿಗಿಂತ ಕಡಿಮೆಯಿಲ್ಲದಂತೆ ನಗದು ಶಿಲ್ಕನ್ನು ವರ್ಷದ ಕೊನೆಯಲ್ಲಿ ಬಿಡಲು ಸಾಕಷ್ಟಿಲ್ಲವೆಂದು ಪಾಲಿಕೆಗೆ ಕಂಡುಬಂದರೆ, ಈ ಅಧಿನಿಯಮದ ಎಲ್ಲಾ ಅಗತ್ಯತೆಗಳಿಗೆ ಸೂಕ್ತ ಗಮನ ನೀಡಿ ಸಾಧ್ಯವಾದಷ್ಟುಮಟ್ಟಿಗೆ ವರ್ಷದ ಮಂಜೂರಾದ ವೆಚ್ಚವನ್ನು ಕಡಿಮೆ ಮಾಡುವುದು ಅಥವಾ ಪೂರಕ ತೆರಿಗೆ ವಿಧಿಸಲು ಅಥವಾ ವರ್ಷದ ಕೊನೆಯಲ್ಲಿ ಜನರಲ್ ಅಕೌಂಟ್-ರೆವಿನ್ಯೂದಲ್ಲಿ ಅಂದಾಜು ನಗದು ಶಿಲ್ಕು ಒಂದು ಲಕ್ಷ ರೂಪಾಯಿಗಳಿಗಿಂತ ಕಡಿಮೆಯಿಲ್ಲದಂತೆ ಇರುವುದನ್ನು ಖಚಿತಪಡಿಸಿಕೊಳ್ಳಲು ಅವಶ್ಯವಾಗಬಹುದಾದಂಥ ಪ್ರಮಾಣದಲ್ಲಿ ಆ ಎರಡೂ ವಿಹಿತ ಕಾರ್ಯಗಳನ್ನು ಅಳವಡಿಸಿಕೊಳ್ಳುವುದು ಪಾಲಿಕೆಯ ಕರ್ತವ್ಯವಾಗಿರತಕ್ಕದ್ದು.

(2) ಯಾವುದೇ ವರ್ಷದಲ್ಲಿ ಪೂರಕ ತೆರಿಗೆ ವಿಧಿಸಬೇಕೆಂದು ಪಾಲಿಕೆಯು ನಿರ್ಧರಿಸಿದಾಗಲೆಲ್ಲಾ Xನೇ ಅಧ್ಯಾಯದಲ್ಲಿ ಹೇಳಿರುವ ಪರತ್ತುಗಳು, ಮಿತಿಗಳು ಮತ್ತು ನಿರ್ಬಂಧಗಳಿಗೆ ಒಳಪಟ್ಟು ಯಾವುದೇ ತೆರಿಗೆ ಅಥವಾ ಸುಂಕವನ್ನು ಯಾವ ದರದಲ್ಲಿ ವಿಧಿಸಲಾಗುತ್ತಿದೆಯೋ ಆ ದರವನ್ನು ಆ ವರ್ಷದ ಉಳಿದ ಅವಧಿಗೆ ಹೆಚ್ಚಿಸುವ ಮೂಲಕ ಅದು ಹಾಗೆ ಮಾಡತಕ್ಕದ್ದು.

199. ಮಧ್ಯಮಾವಧಿ ವಿತ್ತಿಯ ಯೋಜನೆಯನ್ನು ಸಿದ್ಧಪಡಿಸುವುದು.- (1) ಮೇಯರನು ಮುಖ್ಯ ಆಯುಕ್ತರ ಸಮಾಲೋಚನೆಯೊಂದಿಗೆ, ತೆರಿಗೆ, ಹಣಕಾಸು ಹಾಗೂ ಅಪೀಲುಗಳ ಸ್ಥಾಯಿ ಸಮಿತಿ ಹಾಗೂ ವಲಯ ಸಮಿತಿಗಳು ಪಾಲಿಕೆಗಾಗಿ ನಿಯಮಿಸಲಾದ ವಿಧಾನದಲ್ಲಿ ಮಧ್ಯಮಾವಧಿ ವಿತ್ತಿಯ ಯೋಜನೆಯನ್ನು ಸಿದ್ಧಪಡಿಸಬಹುದು.

(2) (1)ನೇ ಉಪ-ಪ್ರಕರಣದ ಅಡಿಯಲ್ಲಿ ಸಿದ್ಧಪಡಿಸಿದ ಮಧ್ಯಮಾವಧಿ ವಿತ್ತಿಯ ಯೋಜನೆಯು ಮೂರು ವರ್ಷಗಳಿಗಾಗಿ ಸ್ವೀಕೃತಿಗಳು ಮತ್ತು ಪಾವತಿಗಳ ಮುಂದಿನ ಅಂದಾಜುಗಳು, ಹಿಂದಿನ ಆಯವ್ಯಯ ಅಂದಾಜುಗಳ ಗುರಿಗಳ ಸ್ಥಾಪನೆಯ ಎದುರು ಸಾಮರ್ಥ್ಯದ ಮೌಲ್ಯಮಾಪನದ ಆಧಾರದ ಮೇಲೆ ಊಹೆಗಳನ್ನು ಒಳಗೊಂಡಿರತಕ್ಕದ್ದು

200. ಸಮಗ್ರ ಋಣ ಮಿತಿ ನೀತಿ.-(1) ಅಲ್ಪಾವಧಿ ಸಾಲಗಳನ್ನು ಒಳಗೊಂಡು ಪಾಲಿಕೆಗಳು ಎತ್ತಬೇಕಾದ ಸಾಲಗಳು ಮತ್ತು ಪಾಲಿಕೆಯು ಅದರ ಹಣಕಾಸು ಸಾಮರ್ಥ್ಯದ ಕುರಿತಂತೆ ಸಾಲಗಳನ್ನು ಎತ್ತುವಲ್ಲಿ ಮಾಡಿಸಿದ ಸಾಮಾನ್ಯ ತತ್ವಗಳ ಸಂದರ್ಭದಲ್ಲಿ ಅನ್ವಯವಾಗುವ ಒಂದು ಸಮಗ್ರ ಋಣ ಮಿತಿ ನೀತಿಯನ್ನು ಪಾಲಿಕೆಯು ರಚಿಸತಕ್ಕದ್ದು.

(2) ಸಮಗ್ರ ಋಣ ಮಿತಿ ನೀತಿಯ ಅಡಿಯಲ್ಲಿ ಅನುಮತಿಸಿದ ಅಂಥ ಸಾಲ ಅಥವಾ ಎರವಲನ್ನು ಉಪಬಂಧಿಸಿದಂತೆ ಪಾಲಿಕೆಯು ಸಾಲ ಅಥವಾ ಎರವಲಿನ ಯಾವುದೇ ರೂಪದಲ್ಲಿ ಪಡೆಯಬಹುದು.

201. ಕಡ್ಡಾಯ ಅನುಸರಣೆ.-(1) ಮಧ್ಯಮಾವಧಿ ವಿತ್ತಿಯ ಯೋಜನೆ, ಸಮಗ್ರ ಋಣ ಮಿತಿ ನೀತಿ ಮತ್ತು ಸರ್ಕಾರವು ಕಾಲಕಾಲಕ್ಕೆ ಹೊರಡಿಸಿದ ಆದೇಶಗಳ ಅನುಸರಣೆಯಲ್ಲಿ ಪಾಲಿಕೆಯು ಸಿದ್ಧಪಡಿಸಿದ ಅನುದಾನ ಅಂದಾಜು ತಯಾರಿಸಿರತಕ್ಕದ್ದು.

(2) ಕೌನ್ಸಿಲ್ ಅನುಮೋದಿಸಿದ ಅನುದಾನ ಅಂದಾಜು, ಮಧ್ಯಂತರ ಕಾಲಾವದಿ ಹಣಕಾಸು ಯೋಜನೆ ಮತ್ತು ಸಮಗ್ರ ಋಣ ಮಿತಿ ನೀತಿಯ ಅನುಸರಣೆಯಲ್ಲಿ ಇಲ್ಲವೆಂದು ಅಭಿಪ್ರಾಯಪಟ್ಟರೆ, ಪಾಲಿಕೆಯು ಹೊಸದಾಗಿ ಅನುದಾನ ಅಂದಾಜನ್ನು ಸಿದ್ಧಪಡಿಸುವಂತೆ ಸರ್ಕಾರವು ನಿರ್ದೇಶಿಸಬಹುದು.

(3) ಅಹವಾಲು ಹೇಳಿಕೊಳ್ಳಲು ಅವಕಾಶವನ್ನು ನೀಡದೆ (2)ನೇ ಉಪಪ್ರಕರಣದ ಅಡಿಯಲ್ಲಿ ಯಾವುದೇ ನಿರ್ದೇಶನವನ್ನು ನೀಡತಕ್ಕದ್ದಲ್ಲ.

202. **ಸಾಲ ತೀರಿಕೆ ನಿಧಿಯ ಸ್ಥಾಪನೆ.-** (1) ಪಡೆಯಲಾದ ಎಲ್ಲ ಹಣಕಾಸಿನ ಮರುಪಾವತಿಗಾಗಿ ಈ ಅಧ್ಯಾಯದ ಅಡಿಯಲ್ಲಿ ಎತ್ತಲಾದ ಪ್ರತಿಯೊಂದು ಸಾಲದ ಸಂಬಂಧದಲ್ಲಿ ಸಾಲತೀರಿಕೆ ನಿಧಿಯೊಂದನ್ನು

ಪಾಲಿಕೆಯು ಸ್ಥಾಪಿಸತಕ್ಕದ್ದು ಮತ್ತು ಪಡೆದ ಹಣಕಾಸಿನ ನಿಗದಿಪಡಿಸಿದ ಅವಧಿಯೊಳಗೆ ಮರುಪಾವತಿಗಾಗಿ ಸಾಕಷ್ಟು ಮೊತ್ತವನ್ನು ಅಂಥ ಸಾಲತೀರಿಕೆ ನಿಧಿಗೆ ಪ್ರತಿ ವರ್ಷವೂ ಪಾವತಿಸತಕ್ಕದ್ದು.

(2) ಈ ಅಧಿನಿಯಮದ ಅಡಿಯಲ್ಲಿ ಋಣ ತೀರಿಕೆ ನಿಧಿಯು ಕ್ರೆಡಿಟ್‌ನಲ್ಲಿ ಯಾವುದೇ ಸಮಯದಲ್ಲಿ ಇರುವ ಮೊತ್ತವನ್ನು ಅಂಥ ಮೊತ್ತದ ಯಾವುದೇ ಸಾಲದ ಮರುಪಾವತಿಗಾಗಿ ಮಂಜೂರಾದ ಬಡ್ಡಿದರದಲ್ಲಿ ಸೇರಿದಂತೆ ಹಂಚಿಕೆಯಾಗಿದ್ದಲ್ಲಿ, ಮುಖ್ಯ ಆಯುಕ್ತನು ಮೇಯರ್ ಅನುಮೋದನೆಯೊಂದಿಗೆ ಅಂಥ ನಿಧಿಯೆಡೆಗೆ ಮತ್ತಷ್ಟು ಪಾವತಿಯನ್ನು ಮುಂದುವರೆಸತಕ್ಕದ್ದು.

203. ಸಾಲ ತೀರಿಕೆ ನಿಧಿಯ ಜಮೆಯಲ್ಲಿ ಮೊತ್ತದ ಹೂಡಿಕೆ.- (1) ಸರ್ಕಾರವು ವಿಧಿಸಿದ ಯಾವುದೇ ಸಾರ್ವಜನಿಕ ಉದ್ಯಮಕ್ಕೆ ಅನ್ವಯವಾಗುವ ಹೂಡಿಕೆ ನೀತಿಯ ಅನುಸಾರವಾಗಿ, ಸಾಲ ತೀರಿಕೆ ನಿಧಿಗೆ ಪಾವತಿಸಿದ ಎಲ್ಲಾ ಹಣವನ್ನು ಸಾಧ್ಯವಾದಷ್ಟು ಬೇಗನೆ ಪಾಲಿಕೆ ಹೂಡಿಕೆ ಮಾಡತಕ್ಕದ್ದು.

(2) (1)ನೇ ಉಪ-ಪ್ರಕರಣದ ಅಡಿಯಲ್ಲಿನ ಯಾವುದೇ ಹೂಡಿಕೆಯ ಸಂಬಂಧದಲ್ಲಿ ಸ್ವೀಕರಿಸಿದ ಎಲ್ಲಾ ಮೊತ್ತವನ್ನು ಅದನ್ನು ಸ್ವೀಕರಿಸಿದ ತರುವಾಯ ಸಾಧ್ಯವಾದಷ್ಟು ಬೇಗನೇ ಸಾಲ ತೀರಿಕೆ ನಿಧಿಗೆ ಪಾವತಿಸತಕ್ಕದ್ದು ಹಾಗೂ ಆ ಉಪ-ಪ್ರಕರಣದಲ್ಲಿ ಹೇಳಲಾದ ವಿಧಾನದಲ್ಲಿ ಹೂಡಿಕೆಯನ್ನು ಮಾಡತಕ್ಕದ್ದು.

(3) ಎರಡು ಅಥವಾ ಹೆಚ್ಚಿನ ಸಾಲ ತೀರಿಕೆ ನಿಧಿಗಳಲ್ಲಿ ಜಮೆಯಾಗಿರುವ ಹಣವನ್ನು ಪಾಲಿಕೆಯ ವಿವಚನೆಯಲ್ಲಿ ಒಟ್ಟಾಗಿ ಸೌಲಭ್ಯ ನಿಧಿಯಲ್ಲಿ ಹೂಡಿಕೆ ಮಾಡಬಹುದು. ಹಾಗೂ ಪಾಲಿಕೆಗೆ ಅಂಥ ಹೂಡಿಕೆಗಳಲ್ಲಿ ಇರುವ ಭದ್ರತೆಗಳನ್ನು ಹಲವು ಸಾಲತೀರಿಕೆ ನಿಧಿಗಳಿಗೆ ಹಂಚುವುದು ಅಗತ್ಯವಾಗಿರತಕ್ಕದ್ದಲ್ಲ.

(4) (1)ನೇ ಉಪ-ಪ್ರಕರಣದ ಉಪಬಂಧಗಳಿಗೆ ಒಳಪಟ್ಟು, ಈ ಪ್ರಕರಣದಲ್ಲಿ ಮಾಡಲಾದ ಯಾವುದೇ ಹೂಡಿಕೆಯನ್ನು ಕಾಲಕಾಲಕ್ಕೆ ಮಾರ್ಪಾಡಾಗಬಹುದು ಅಥವಾ ವರ್ಗಾಯಿಸಬಹುದು.

204. ಋಣತೀರಿಕೆ ನಿಧಿಯ ವಿನಿಯೋಗ.- ಪಾಲಿಕೆಯ ಋಣತೀರಿಕೆ ನಿಧಿಯನ್ನು ಅಥವಾ ಅದರ ಯಾವುದೇ ಭಾಗವನ್ನು, ಅಂಥ ನಿಧಿಯನ್ನು ಯಾವ ಸಾಲಕ್ಕಾಗಿ ಅಥವಾ ಸಾಲದ ಭಾಗಕ್ಕಾಗಿ ಸೃಜಿಸಲಾಗಿತ್ತೋ ಅಂಥ ಸಾಲವನ್ನು ಅಥವಾ ಅದರ ಭಾಗವನ್ನು ತೀರಿಸುವುದಕ್ಕಾಗಿ ವಿನಿಯೋಗಿಸಬಹುದು ಮತ್ತು ಅಂಥ ಸಾಲವನ್ನು ಅಥವಾ ಸಾಲದ ಭಾಗವನ್ನು ಸಂಪೂರ್ಣವಾಗಿ ತೀರಿಸುವವರೆಗೆ, ಅದನ್ನು ಯಾವುದೇ ಇತರ ಉದ್ದೇಶಕ್ಕಾಗಿ ವಿನಿಯೋಗಿಸತಕ್ಕದ್ದಲ್ಲ:

ಪರಂತು, ಯಾವುದೇ ಸಾಲವನ್ನು ಅಥವಾ ಅದರ ಭಾಗಗಳನ್ನು ಸಂಚಿತಗೊಳಿಸಿದಾಗ ಸಂಚಿತ ಸಾಲದಲ್ಲಿ ಸೇರಿಸಿದ ಮೂಲ ಸಾಲಗಳ ಮೊಬಲಗಿಗೆ ಪ್ರಮಾಣಾನುಸಾರವಾಗಬಹುದಾದ ಮೂಲ ಸಾಲಗಳ ಋಣತೀರಿಕೆ ನಿಧಿಗಳ ಅಂಥ ಭಾಗವನ್ನು ಪಾಲಿಕೆಯು ಹಾಗೆ ಸೃಜಿಸಿದ ಸಂಚಿತ ಸಾಲದ ಋಣತೀರಿಕೆ ನಿಧಿಗೆ ವರ್ಗಾಯಿಸತಕ್ಕದ್ದು.

205. ಪಾಲಿಕೆಯಿಂದ ವಾರ್ಷಿಕ ವಿವರಣಾಪತ್ರ.- (1) ಪಾಲಿಕೆಯು, ಪ್ರತಿ ವರ್ಷದ ಕೊನೆಯಲ್ಲಿ,-

(ಎ) ವರ್ಷದಲ್ಲಿ ಹೂಡಿದ ಮೊಬಲಗನ್ನು;

(ಬಿ) ವಿವರಣಾ ಪತ್ರವನ್ನು ಸಲ್ಲಿಸುವುದಕ್ಕೆ ಮುಂಚೆ ಮಾಡಿದ ಕೊನೆಯ ಹೂಡಿಕೆಯ ದಿನಾಂಕವನ್ನು;

(ಸಿ) ಆಗ ಅವರಲ್ಲಿದ್ದ ಭದ್ರತಾ ಪತ್ರಗಳ ಒಟ್ಟು ಮೊಬಲಗನ್ನು; ಮತ್ತು

(ಡಿ) ವಿವರಣಾ ಪತ್ರದ ದಿನಾಂಕದ ವರೆಗಿನ ಸಾಲಗಳ ತೀರಿಕೆಗಾಗಿ ವಿನಿಯೋಗಿಸಿದ ಒಟ್ಟು ಮೊಬಲಗನ್ನು

- ತೋರಿಸುವ ವಿವರಣಾಪತ್ರವನ್ನು ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

(2) ಪ್ರತಿಯೊಂದು ಅಂಥ ವಿವರಣಾ ಪತ್ರವನ್ನು ಪಾಲಿಕೆಯ ಮುಂದೆ ಇಡತಕ್ಕದ್ದು ಮತ್ತು ಪ್ರಕಟಿಸತಕ್ಕದ್ದು.

206. ಸರ್ಕಾರದಿಂದ ಸಾಲವಾಗಿ ಪಡೆದ ಹಣದ ವಸೂಲಿಗಾಗಿ ಪಾಲಿಕೆಯ ನಿಧಿಯ ಜಪ್ತಿ.- (1) ಈ ಅಧಿನಿಯಮವು ಪ್ರಾರಂಭವಾಗುವುದಕ್ಕೆ ಮುಂಚೆ ಅಥವಾ ನಂತರ ಪಾಲಿಕೆಯು ಸರ್ಕಾರದಿಂದ ಸಾಲವಾಗಿ ಪಡೆದ ಯಾವುದೇ ಹಣವನ್ನು ಅಥವಾ ಅದಕ್ಕೆ ಸಂಬಂಧಿಸಿದಂತೆ ಬಾಕಿಯಿರುವ ಯಾವುದೇ ಬಡ್ಡಿಯನ್ನು ಅಥವಾ ವೆಚ್ಚಗಳನ್ನು ಸಾಲ ಪರತ್ತುಗಳಿಗೆ ಅನುಸಾರವಾಗಿ ಮರುಸಂದಾಯ ಮಾಡದಿದ್ದರೆ ಸರ್ಕಾರವು, ಪಾಲಿಕೆಯ ನಿಧಿಯನ್ನು ಅಥವಾ ಅದರ ಯಾವುದೇ ಭಾಗವನ್ನು ಜಪ್ತಿ ಮಾಡಬಹುದು.

(2) ಅಂಥ ಜಪ್ತಿಯ ನಂತರ, ಜಪ್ತಿ ಮಾಡಿದ ನಿಧಿಯ ಬಗ್ಗೆ ಸರ್ಕಾರದಿಂದ ಈ ಬಗ್ಗೆ ನೇಮಕಗೊಂಡ ಅಧಿಕಾರಿಯ ಹೊರತು ಯಾರೇ ವ್ಯಕ್ತಿಯು, ಯಾವುದೇ ರೀತಿಯಲ್ಲಿ ವ್ಯವಹರಿಸತಕ್ಕದ್ದಲ್ಲ, ಆದರೆ ಅಂಥ ಜಪ್ತಿಯನ್ನು ಮಾಡದೆ ಇದ್ದಿದ್ದರೆ ಅದಕ್ಕೆ ಸಂಬಂಧಿಸಿದಂತೆ ಯಾವುದೇ ಪಾಲಿಕೆ ಪ್ರಾಧಿಕಾರ, ಅಧಿಕಾರಿ ಅಥವಾ ನೌಕರನು ಮಾಡಬಹುದಾಗಿದ್ದ ಎಲ್ಲಾ ಕಾರ್ಯಗಳನ್ನು ಆ ಅಧಿಕಾರಿಯು ಮಾಡಬಹುದು ಮತ್ತು ಬಾಕಿಗಳನ್ನು ಮತ್ತು ಅದಕ್ಕೆ ಸಂಬಂಧಿಸಿದಂತೆ ಬಾಕಿಯಿರುವ ಎಲ್ಲಾ ಬಡ್ಡಿಯನ್ನು ಮತ್ತು ವೆಚ್ಚಗಳನ್ನು ಮತ್ತು ಜಪ್ತಿಯಿಂದಾಗಿ ಹಾಗೂ ತರುವಾಯದ ವ್ಯವಹರಣೆಗಳಿಂದಾಗಿ ಉಂಟಾದ ಎಲ್ಲಾ ವೆಚ್ಚಗಳನ್ನು ತೀರಿಸಲು ನಿಧಿಯ ಉತ್ಪತ್ತಿಗಳನ್ನು ವಿನಿಯೋಗಿಸಬಹುದು:

ಪರಂತು, ಯಾವುದೇ ಅಂಥ ಜಪ್ತಿಯು, ಯಾವ ಋಣಕ್ಕಾಗಿ ಜಪ್ತಿ ಮಾಡಿದ ನಿಧಿಗೆ ಈ ಹಿಂದೆ ಕಾನೂನಿಗನುಸಾರವಾಗಿ ಋಣಭಾರ ಹೊರಿಸಲಾಗಿತ್ತೋ, ಆ ಯಾವುದೇ ಋಣವನ್ನು ರದ್ದುಗೊಳಿಸತಕ್ಕದ್ದಲ್ಲ ಅಥವಾ ಅದಕ್ಕೆ ಬಾಧಕವನ್ನುಂಟುಮಾಡತಕ್ಕದ್ದಲ್ಲ ಆದರೆ ಅಂಥ ಎಲ್ಲ ಹಿಂದಿನ ಋಣಭಾರಗಳನ್ನು ಸರ್ಕಾರಕ್ಕೆ ಬಾಕಿಯಿರುವ ಋಣಗಳನ್ನು ತೀರಿಸುವುದಕ್ಕೆ ಉತ್ಪತ್ತಿಗಳ ಯಾವುದೇ ಭಾಗವನ್ನು ವಿನಿಯೋಗಿಸುವುದಕ್ಕೆ ಮುಂಚೆ ನಿಧಿಯ ಉತ್ಪತ್ತಿಗಳಿಂದ ಸಂದಾಯ ಮಾಡತಕ್ಕದ್ದು.

207. ಮಖ್ಯ ಹಣಕಾಸು ಅಧಿಕಾರಿಯ ನೇಮಕಾತಿ.- (1) ಪಾಲಿಕೆ ಎಲ್ಲಾ ಹಣಕಾಸು ವಿಷಯಗಳಲ್ಲಿ ಮಾರ್ಗದರ್ಶನ ಮಾಡಲು ಪಾಲಿಕೆ ಮುಖ್ಯ ಹಣಕಾಸು ಅಧಿಕಾರಿಯನ್ನು ನೇಮಕ ಮಾಡತಕ್ಕದ್ದು ಹಾಗೂ ಮೇಯರ್ ಅಥವಾ ಮುಖ್ಯ ಆಯುಕ್ತರು ಕಾಲಕಾಲಕ್ಕೆ ಹಂಚಿಕೆ ಮಾಡುವ ಅಂಥ ಕರ್ತವ್ಯಗಳನ್ನು ಅವನು ನಿರ್ವಹಿಸತಕ್ಕದ್ದು.

(2) ಮುಖ್ಯ ಹಣಕಾಸು ಅಧಿಕಾರಿಯು ಸರ್ಕಾರವು ನಿರ್ದಿಷ್ಟ ಪಡಿಸಬಹುದಾದ ಅಂಥ ದರ್ಜೆ ಮತ್ತು ಪದನಾಮವುಳ್ಳವನಾಗಿರತಕ್ಕದ್ದು.

208. ವಾರ್ಷಿಕ ಹಣಕಾಸು ತ:ಖ್ತೆ.- (1) ಮುಖ್ಯ ಆಯುಕ್ತರು, ಪಾಲಿಕೆಯ ಲೆಕ್ಕಪತ್ರಗಳ ಸಂಬಂಧದಲ್ಲಿ ಹಿಂದಿನ ವರ್ಷಕ್ಕಾಗಿನ ಆದಾಯ ಮತ್ತು ವೆಚ್ಚದ ಖಾತೆ, ನಗದು ಹರಿವು ತ:ಖ್ತೆ ಹಾಗೂ ಸ್ವೀಕೃತಿಗಳು ಮತ್ತು ಪಾವತಿಗಳ ಖಾತೆಗಳ ಒಂದು ವಾರ್ಷಿಕ ಹಣಕಾಸು ತ:ಖ್ತೆಯನ್ನು ಹಣಕಾಸು ವರ್ಷ ಮುಕ್ತಾಯಗೊಳ್ಳುವ ಎರಡು ತಿಂಗಳ ಒಳಗಾಗಿ ಹಾಗೂ ಮೇಲಿನವುಗಳಿಗೆ ಅನುಸೂಚಿಗಳೊಂದಿಗೆ ಮತ್ತು ಗಮನಾರ್ಹ ಲೆಕ್ಕವಿವರ ನೀತಿಗಳನ್ನು ಒಳಗೊಂಡ ಲೆಕ್ಕಪತ್ರಗಳಿಗೆ ಟಿಪ್ಪಣಿಗಳನ್ನು ಹಾಗೂ ಹಣಕಾಸು ತಖ್ತೆಗಳನ್ನು ಸ್ಪಷ್ಟವಾಗಿ ಅರ್ಥೈಸಿಕೊಳ್ಳಲು ಉಪಯುಕ್ತವಾಗಬಹುದಾದ ಅಂಥ ಯಾವುದೇ ಇತರ ಮಾಹಿತಿಯುಳ್ಳ ಸಾದಿಲ್ವಾರು ಹೊಣೆಗಾರಿಕೆಗಳ ವಿವರಗಳುಳ್ಳ ಹಿಂದಿನ ಹಣಕಾಸು ವರ್ಷದ ಕೊನೆಯ ದಿನದಲ್ಲಿರುವಂತೆ ಹಣಕಾಸು ವಿವರ ಪಟ್ಟಿಯನ್ನು ಸಿದ್ಧಪಡಿಸುವಂತೆ ಮಾಡತಕ್ಕದ್ದು.

(2) ಹಣಕಾಸು ತ:ಖ್ತೆ ಮತ್ತು ಹಣಕಾಸು ವಿವರ ಪಟ್ಟಿಯ ನಮೂನೆ ಹಾಗೂ ಹಣಕಾಸು ತ:ಖ್ತೆ ಮತ್ತು ಹಣಕಾಸು ವಿವರ ಪ್ರತಿಯನ್ನು ಸಿದ್ಧಪಡಿಸುವ ವಿಧಾನವು ನಿಯಮಿಸಬಹುದಾದಂತೆ ಇರತಕ್ಕದ್ದು.

209. ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ.- (1) ಪಾಲಿಕೆಯ ಎಲ್ಲಾ ಜಮಾ ಮತ್ತು ಖರ್ಚಿನ ಲೆಕ್ಕಪತ್ರಗಳನ್ನು ನಿಯಮಿಸಬಹುದಾದಂಥ ರೀತಿಯಲ್ಲಿ ಮತ್ತು ನಮೂನೆಯಲ್ಲಿ ಇಡತಕ್ಕದ್ದು.

(2) ಸರ್ಕಾರವು, ಅದರ ಅಧಿಕಾರಿಗಳ ಪೈಕಿ ಒಬ್ಬ ಅಧಿಕಾರಿಯನ್ನು ಪಾಲಿಕೆಯ ಮುಖ್ಯ ಲೆಕ್ಕಪರಿಶೋಧಕನನ್ನಾಗಿ ನೇಮಿಸತಕ್ಕದ್ದು. ಅವರು ರಾಜ್ಯ ಲೆಕ್ಕಪತ್ರಗಳ ನಿಯಂತ್ರಕರ ಮೇಲ್ವಿಚಾರಣೆ ಮತ್ತು ನಿಯಂತ್ರಣಕ್ಕೆ ಒಳಪಟ್ಟು ಪಾಲಿಕೆಯ ಲೆಕ್ಕಪತ್ರಗಳ ಪರಿಶೋಧನೆ ನಡೆಸತಕ್ಕದ್ದು ಮತ್ತು ಈ ಉದ್ದೇಶಕ್ಕಾಗಿ, ಪಾಲಿಕೆಯ ಲೆಕ್ಕಪತ್ರಗಳನ್ನು ಮತ್ತು ಅದಕ್ಕೆ ಸಂಬಂಧಿಸಿದ ಎಲ್ಲಾ ಜಮಾ ಮತ್ತು ಖರ್ಚಿನ ಲೆಕ್ಕಗಳನ್ನು ನೋಡಲು ಅವರಿಗೆ ಅವಕಾಶವಿರತಕ್ಕದ್ದು ಮತ್ತು ಯಾವುದೇ ಜಮೆಗೆ ಅಥವಾ ಖರ್ಚಿಗೆ ಸಂಬಂಧಿಸಿದಂತೆ ಅವರು ಅಗತ್ಯಪಡಿಸಬಹುದಾದಂಥ ಯಾವುದೇ ಮಾಹಿತಿಯನ್ನು ಮುಖ್ಯ ಆಯುಕ್ತರು ಅವರಿಗೆ ಒದಗಿಸತಕ್ಕದ್ದು.

(3) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಉಪಬಂಧಗಳಿಗೆ ಒಳಪಟ್ಟು, ಪಾಲಿಕೆಯ ಸ್ವೀಕೃತಿ ಮತ್ತು ವೆಚ್ಚಗಳ ಎಲ್ಲಾ ವ್ಯವಹರಣೆಗಳ ಲೆಕ್ಕಪರಿಶೋಧನೆಯು ಭಾರತದ ನಿಯಂತ್ರಕರು ಮತ್ತು ಮಹಾ ಲೆಕ್ಕಪರಿಶೋಧಕರ ತಾಂತ್ರಿಕ ಮಾರ್ಗದರ್ಶನ ಮತ್ತು ಮೇಲ್ವಿಚಾರಣೆಗೆ ಒಳಪಟ್ಟಿರತಕ್ಕದ್ದು ಮತ್ತು ಆತನು ವಾರ್ಷಿಕ ತಾಂತ್ರಿಕ ಪರಿಶೀಲನಾ ವರದಿಯನ್ನು ರಾಜ್ಯ ವಿಧಾನಮಂಡಲದ ಉಭಯ ಸದನಗಳ ಮುಂದೆ ಮಂಡಿಸುವುದಕ್ಕಾಗಿ ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕದ್ದು.

(4) ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರಗಳ ಇಲಾಖೆಯ ನಿಯಂತ್ರಕರು, ಎಲ್ಲಾ ಪಾಲಿಕೆಗೆ ಸಂಬಂಧಿಸಿದಂತೆ ಕ್ರೋಢೀಕೃತ ವಾರ್ಷಿಕ ಲೆಕ್ಕಪರಿಶೋಧನಾ ವರದಿಯನ್ನು ರಾಜ್ಯ ವಿಧಾನಮಂಡಲದ ಉಭಯ ಸದನಗಳ ಮುಂದೆ ಮಂಡಿಸುವುದಕ್ಕಾಗಿ ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕದ್ದು.

(5) ಪಾಲಿಕೆಯ ಮುಖ್ಯ ಲೆಕ್ಕಪರಿಶೋಧಕರು, ವೆಚ್ಚದಲ್ಲಿ ಅಥವಾ ಪಾಲಿಕೆಗೆ ಬರಬೇಕಾದ ಹಣದ ವಸೂಲಿಯಲ್ಲಿ ಅಥವಾ ಪಾಲಿಕೆಯ ಲೆಕ್ಕಪತ್ರಗಳಲ್ಲಿ ಅವರು ಯಾವುದೇ ಕಾಲದಲ್ಲಿ ಗಮನಿಸಬಹುದಾದ ಯಾವುದೇ ಸ್ಪಷ್ಟ ಅನೌಚಿತ್ಯ ಅಥವಾ ಅಕ್ರಮತೆಯನ್ನು ನಿಯಮಿಸಿದ ಪಾಲಿಕೆ ಪ್ರಾಧಿಕಾರಕ್ಕೆ ವರದಿ ಮಾಡತಕ್ಕದ್ದು ಮತ್ತು ಅಂಥ ವಿಷಯಕ್ಕೆ ಸಂಬಂಧಿಸಿದಂತೆ ನಿಯಮಗಳಲ್ಲಿ ವಿಧಿಸಬಹುದಾದಂಥ ಮಾಹಿತಿಯನ್ನು ಒದಗಿಸತಕ್ಕದ್ದು.

(6) ಸರ್ಕಾರವು ನಿರ್ಧರಿಸಬಹುದಾದಂಥ ಸಂಬಳ ಮತ್ತು ಭತ್ಯಗಳನ್ನು ಅವರಿಗೆ ಸಂದಾಯ ಮಾಡತಕ್ಕದ್ದು ಮತ್ತು ಅವರು ಸರ್ಕಾರದ ಯಾವ ಸೇವಾ ವಿಭಾಗಕ್ಕೆ ಸೇರಿದ್ದಾರೋ ಆ ವಿಭಾಗದ ಮತ್ತು ತತ್ಕಾಲದಲ್ಲಿ ಜಾರಿಯಲ್ಲಿರುವ ನಿಯಮಗಳಿಗೆ ಮತ್ತು ವಿನಿಯಮಗಳಿಗೆ ಅನುಸಾರವಾಗಿ ವಿಶೇಷಾಧಿಕಾರಗಳಿಗೆ ಅವರು ಹಕ್ಕುಳ್ಳವರಾಗಿರತಕ್ಕದ್ದು ಮತ್ತು ಅವರು ಅಥವಾ ಅವರ ಪರವಾಗಿ ಅಂಥ ನಿಯಮಗಳ ಮತ್ತು ವಿನಿಯಮಗಳ ಮೇರೆಗೆ ಸಂದಾಯ ಮಾಡಬಹುದಾದಂಥ ರಜೆ ಭತ್ಯೆಗಳು, ನಿವೃತ್ತಿ ವೇತನ ಮತ್ತು ಭವಿಷ್ಯನಿಧಿ ಬಾಬಿಗೆ ಅಂಥ ವಂತಿಗೆಯನ್ನು ಪಾಲಿಕೆಯ ನಿಧಿಯಿಂದ ಕೊಡತಕ್ಕದ್ದು.

ಅಧ್ಯಾಯ - XV
ಬೀದಿಗಳು

210. ಸಾರ್ವಜನಿಕ ಬೀದಿಗಳು ಮತ್ತು ಅವುಗಳಿಗೆ ಲಗತ್ತಾದುವುಗಳು ಪಾಲಿಕೆಯಲ್ಲಿ ನಿಹಿತವಾಗುವುದು.- (1) ಈ ಮುಂದಿನವುಗಳು ಪಾಲಿಕೆಯಲ್ಲಿ ನಿಹಿತವಾಗತಕ್ಕದ್ದು,-

(ಎ) ಸರ್ಕಾರದ ನಿಯಂತ್ರಣದ ಮೇರೆಗೆ ಕಾಯ್ದಿರಿಸಲಾದ ಪಾಲಿಕೆಯಲ್ಲಿನ ಎಲ್ಲ ಸಾರ್ವಜನಿಕ ಬೀದಿಗಳು, ಅವುಗಳ ನೆಲೆಗಟ್ಟಿನ ಪಾದಚಾರಿ ಮಾರ್ಗಗಳು, ಕಲ್ಲುಗಳು ಮತ್ತು ಇತರ ಸಾಮಗ್ರಿಗಳು ಮತ್ತು ಅಂಥ ಬೀದಿಗಳಿಗೆ ಒದಗಿಸಿದ ಎಲ್ಲ ಕಾಮಗಾರಿ ಸಾಮಗ್ರಿಗಳು, ಉಪಕರಣಗಳು ಮತ್ತು ಇತರ ವಸ್ತುಗಳು;

(ಬಿ) ಸಾರ್ವಜನಿಕವಾದದ್ದೆ ಆಗಲಿ ಅಥವಾ ಖಾಸಗಿಯದ್ದೆ ಆಗಲಿ ಯಾವುದೇ ಬೀದಿಯಲ್ಲಿ ಅಥವಾ ಅದರ ಪಕ್ಕದಲ್ಲಿ ಅಥವಾ ಅದರ ಕೆಳಗೆ ಪಾಲಿಕೆಯ ನಿಧಿಯ ಖರ್ಚಿನಲ್ಲಿ ಅಥವಾ ಅನ್ಯಥಾ ನಿರ್ಮಿಸಿದ ಎಲ್ಲ ಒಳಚರಂಡಿಗಳು, ಚರಂಡಿಗಳು, ಚರಂಡಿ ಕಾಮಗಾರಿಗಳು, ಸುರಂಗಗಳು ಮತ್ತು ಅಡಿಗಾಲುವೆಗಳು, ಮತ್ತು

(ಸಿ) ಅವುಗಳಿಗೆ ಲಗತ್ತಾಗಿರುವ ಎಲ್ಲ ಕಾಮಗಾರಿಗಳು, ಸಾಮಗ್ರಿಗಳು, ಉಪಕರಣಗಳು ಮತ್ತು ಇತರ ವಸ್ತುಗಳೊಂದಿಗೆ ಮತ್ತು ಸಾರ್ವಜನಿಕ ಬೀದಿಗಳಲ್ಲಿ ಅಥವಾ ಅವುಗಳ ಪಕ್ಕದಲ್ಲಿ ಬೆಳೆಯುತ್ತಿರುವ ಖಾಸಗಿ ಸ್ವತ್ತಾಗಿರದ ಎಲ್ಲ ಮರಗಳು.

(2) ಸರ್ಕಾರವು, ಪಾಲಿಕೆಯೊಂದಿಗೆ ಸಮಾಲೋಚನೆ ನಡೆಸಿದ ತರುವಾಯ ಅಧಿಸೂಚನೆ ಮೂಲಕ ಯಾವುದೇ ಅಂಥ ಬೀದಿ, ಒಳಚರಂಡಿ, ಚರಂಡಿ, ಚರಂಡಿ ಕಾಮಗಾರಿ, ಸುರಂಗ, ಅಡಿಗಾಲುವೆ ಅಥವಾ ಮರಗಳನ್ನು ಪಾಲಿಕೆಯ ನಿಯಂತ್ರಣದಿಂದ ಹಿಂತೆಗೆದುಕೊಳ್ಳಬಹುದು.

(3) ಪಾಲಿಕೆಯಲ್ಲಿ ನಿಹಿತವಾದ ಎಲ್ಲಾ ಸಾರ್ವಜನಿಕ ಬೀದಿಗಳು ಸಂಬಂಧಿತ ವಲಯದ ವಲಯ ಆಯುಕ್ತನ ನಿಯಂತ್ರಣದಲ್ಲಿ ಇರತಕ್ಕದ್ದು ಹಾಗೂ ಅವುಗಳನ್ನು ಆತನು ಈ ಕುರಿತು ಮಾಡಲಾದ ಉಪವಿಧಿಗಳ ಮತ್ತು ಮುಖ್ಯ ಆಯುಕ್ತರು ಹೊರಡಿಸಿದ ಅಂಥ ನಿರ್ದೇಶನಗಳ ಅನುಸಾರವಾಗಿ ನಿರ್ವಹಿಸತಕ್ಕದ್ದು, ನಿಯಂತ್ರಿಸತಕ್ಕದ್ದು ಮತ್ತು ಹತೋಟಿಯಲ್ಲಿಡತಕ್ಕದ್ದು.

211. ಸಾರ್ವಜನಿಕ ಬೀದಿಗಳ ಸಂದರ್ಭದಲ್ಲಿ ವಲಯ ಆಯುಕ್ತನ ಅಧಿಕಾರಗಳು.- (1) ವಲಯ ಆಯುಕ್ತನು ತಾನಾಗಿಯೇ ಅಥವಾ ವಾರ್ಡ್ ಸಮಿತಿಯ ಮನವಿಯ ಮೇರೆಗೆ ಪಾಲಿಕೆಯಲ್ಲಿ ನಿಹಿತವಾಗಿರುವ ಎಲ್ಲಾ ಸಾರ್ವಜನಿಕ ಬೀದಿಗಳನ್ನು ಕಾಲಕಾಲಕ್ಕೆ ಸಮತಟ್ಟು ಮಾಡುವಂತೆ ಅಥವಾ ದುರಸ್ತಿಗೊಳಿಸುವಂತೆ ಮಾಡತಕ್ಕದ್ದು, ಆತನು ಪಾದಚಾರಿಗಳ ಸುರಕ್ಷತೆಗಾಗಿ ಅಂಥ ಯಾವುದೇ ಬೀದಿಯನ್ನು ಕಾಲಕಾಲಕ್ಕೆ ವಿಸ್ತರಿಸಲೂಬಹುದು ಅಥವಾ ಅನ್ಯಥಾ ಸುಧಾರಿಸಬಹುದು.

(2) ವಲಯ ಆಯುಕ್ತರು, ಯಾವುದೇ ಸಮಯದಲ್ಲಿ ಸಂಬಂಧಿತ ವಲಯದಲ್ಲಿ ನಿಹಿತಗೊಂಡ ಸಾರ್ವಜನಿಕ ರಸ್ತೆಯನ್ನು ಪೂರ್ಣವಾಗಿ ಅಥವಾ ಯಾವುದೇ ಭಾಗವನ್ನು ಮುಚ್ಚಬಹುದು.

ಪರಂತು, ಹಾಗೆ ಮಾಡುವ ಮೊದಲು, ಅಂಥ ಮುಚ್ಚುವಿಕೆಯ ಸಂದರ್ಭದಲ್ಲಿನ ಸಲಹೆಗಳು ಅಥವಾ ಆಕ್ಷೇಪಣೆಗಳನ್ನು ಮಾಡಲು ಅಂಥ ಮುಚ್ಚುವಿಕೆಯಿಂದ ಬಾಧಿತರಾಗಹುದಾದ ನಿವಾಸಿಗಳಿಗೆ ಯುಕ್ತ ಅವಕಾಶವನ್ನು ನೀಡಿ, ಪಾಲಿಕೆಯು ಉಪವಿಧಿಗಳಲ್ಲಿ ನಿರ್ದಿಷ್ಟ ಪಡಿಸಿದ ವಿಧಾನದಲ್ಲಿ ನೋಟಿಸ್‌ನ್ನು ಪ್ರಕಟಿಸತಕ್ಕದ್ದು ಹಾಗೂ ಸದರಿ ನೋಟಿಸಿನ ಪ್ರಕಟಣೆಯ ದಿನಾಂಕದಿಂದ 30 ದಿವಸಗಳೊಳಗೆ ಮಾಡಿರುವ ಎಲ್ಲಾ ಅಂಥ ಸಲಹೆಗಳು ಅಥವಾ ಆಕ್ಷೇಪಣೆಗಳನ್ನು ಪರಿಗಣಿಸತಕ್ಕದ್ದು.

212. **ಸಾರ್ವಜನಿಕ ಬೀದಿಗಳ ಸಂದರ್ಭದಲ್ಲಿ ಮುಖ್ಯ ಆಯುಕ್ತರ ಅಧಿಕಾರಗಳು .-** (1) ವಲಯ ಆಯುಕ್ತನಿಗೆ ಕಾಲಕಾಲಕ್ಕೆ ಅಗತ್ಯವಾಗಬಹುದಾದ ನಿರ್ದೇಶನಗಳನ್ನು ಹೊರಡಿಸುವ ಅಧಿಕಾರವನ್ನು ಮುಖ್ಯ ಆಯುಕ್ತರು ಹೊಂದಿರತಕ್ಕದ್ದು.

(2) ಎರಡು ಅಥವಾ ಹೆಚ್ಚಿನ ವಲಯಗಳ ಸಂಧಿಸುವ ರಸ್ತೆಗಳಿಗೆ ಸಂಬಂಧಿಸಿದ ವಿಷಯಗಳಲ್ಲಿ ತೀರ್ಮಾನಗಳನ್ನು ತೆಗೆದುಕೊಳ್ಳುವ ಅಧಿಕಾರವನ್ನು ಮುಖ್ಯ ಆಯುಕ್ತರು ಹೊಂದಿರತಕ್ಕದ್ದು.

213. ಹೊಸ ಸಾರ್ವಜನಿಕ ಬೀದಿಗಳನ್ನು ರಚಿಸುವ ಅಧಿಕಾರ.- (1)ವಲಯ ಆಯುಕ್ತನು ಮುಖ್ಯ ಆಯುಕ್ತರ ಪೂರ್ವಾನುಮತಿಯೊಂದಿಗೆ ಯಾವುದೇ ಸಮಯದಲ್ಲಿ,-

(ಎ) ಹೊಸ ಸಾರ್ವಜನಿಕ ಬೀದಿಗಳನ್ನು ವಿನ್ಯಾಸಗಳಿಸಬಹುದು ಮತ್ತು ರಚಿಸಬಹುದು;

(ಬಿ) ಸೇತುವೆಗಳು ಮತ್ತು ಒಳದಾರಿಗಳನ್ನು ನಿರ್ಮಾಣ ಮಾಡಬಹುದು;

(ಸಿ) ಅಸ್ತಿತ್ವದಲ್ಲಿರುವ ಸಾರ್ವಜನಿಕ ಬೀದಿಯನ್ನು ತಿರುಗಿಸಬಹುದು ಅಥವಾ ದಿಕ್ಕು ಬದಲಾಯಿಸಬಹುದು;

(ಡಿ) ಯಾವುದೇ ಸಾರ್ವಜನಿಕ ಬೀದಿಯನ್ನು ಅಗಲೀಕರಿಸಬಹುದು, ಮುಕ್ತಗೊಳಿಸಬಹುದು, ವಿಸ್ತರಿಸಬಹುದು ಅಥವಾ ಅನ್ಯಥಾ ಸುಧಾರಿಸಬಹುದು; ಮತ್ತು

(ಇ) ಬೆಂಗಳೂರಿನ ಯಾವುದೇ ಭಾಗದಲ್ಲಿರುವ ಬೀದಿ ಅಥವಾ ಬೀದಿಗಳ ಸ್ಥಿತಿ ಅಥವಾ ದಿಕ್ಕನ್ನು, ಅಕ್ಕಪಕ್ಕದಲ್ಲಿ ಯಾವುದೇ ಕಟ್ಟಡವನ್ನು ಕಟ್ಟುವುದಕ್ಕಾಗಿ ಪ್ರಸ್ತಾವನೆ ಸ್ವೀಕರಿಸಿದ್ದಾಗ್ಯೂ, ರೂಪಿಸಬಹುದು ಮತ್ತು ನಿರ್ಧರಿಸಬಹುದು.

(2) ಪಾಲಿಕೆಯು ಅದರ ಪ್ರಕಾರ್ಯಗಳನ್ನು ಕಾರ್ಯಗತಗೊಳಿಸುವಲ್ಲಿ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಸಹರಿಸತಕ್ಕದ್ದು.

(3) ಯಾವುದೇ ಅಂಥ ಉದ್ದೇಶಗಳಿಗಾಗಿ ಸ್ವಾಧೀನ ಪಡಿಸಿಕೊಂಡಿರುವ ಅಥವಾ ಅದರಿಂದ ಹಾನಿಯುಂಟಾಗಿರುವ ಯಾವುದೇ ಜಮೀನು ಅಥವಾ ಕಟ್ಟಡಗಳ ಮಾಲೀಕರಿಗೆ ಹಾಗೂ ಅಧಿಭೋಗದಾರರಿಗೆ ಯುಕ್ತ ಪರಿಹಾರವನ್ನು ಸಂದಾಯ ಮಾಡತಕ್ಕದ್ದು.

(4) ಅಂಥ ಪರಿಹಾರವನ್ನು ನಿರ್ಧರಿಸುವಲ್ಲಿ ಮುಖ್ಯ ಆಯುಕ್ತರು ನಿರ್ಮಾಣ ಅಥವಾ ಸುಧಾರಣೆಯಿಂದ ಮಾಲೀಕರಿಗೆ ಅಥವಾ ಅಧಿಭೋಗದಾರರಿಗೆ ಬರುವ ಯಾವುದೇ ಪ್ರಯೋಜನಕ್ಕಾಗಿ ಭತ್ಯೆಯನ್ನು ಸಂದಾಯಮಾಡತಕ್ಕದು.

214. ಹೊಸ ಸಾರ್ವಜನಿಕ ಬೀದಿಗಳ ಕನಿಷ್ಠ ಅಗಲ.- ಸಂಚಾರಿ ದಟ್ಟಣೆಯು ಅಲ್ಲಿ ಉಂಟಾಗುವ ಸ್ವರೂಪದ ಮತ್ತು ಅವು ಒಂದು ಅಥವಾ ಎರಡೂ ಕೊನೆಯಲ್ಲಿ ಸಂಧಿಸುವ ಬೀದಿಗಳ, ಅವುಗಳು ಇರುವ ಸ್ಥಳಗಳ ಮತ್ತು ಇತರ ಇದೇ ರೀತಿಯ ಪರಿಗಣನೆಗಳ ಅನುಸಾರವಾಗಿ ಮುಖ್ಯ ಆಯುಕ್ತರು ವಿವಿಧ ಸಾರ್ವಜನಿಕ ಬೀದಿಗಳ ಕನಿಷ್ಠ ಅಗಲವನ್ನು ಕಾಲಕಾಲಕ್ಕೆ ನಿರ್ದಿಷ್ಟಪಡಿಸತಕ್ಕದ್ದು.

215. ಕೆಲವು ರೀತಿಯ ಸಂಚಾರಕ್ಕಾಗಿ ಸಾರ್ವಜನಿಕ ಬೀದಿಗಳ ಬಳಕೆಯನ್ನು ನಿಷೇಧಿಸುವ ಅಧಿಕಾರ.- (1) ಸಾರ್ವಜನಿಕರಿಗೆ ಅಪಾಯ, ಅಡಚಣೆ ಅಥವಾ ಅನಾನುಕೂಲವನ್ನು ತಡೆಗಟ್ಟಲು ಅಥವಾ ಯಾವುದೇ ಸ್ಥಳದಲ್ಲಿ ಶಾಂತತೆಯನ್ನು ಖಚಿತಪಡಿಸಿಕೊಳ್ಳಲು ಯಾವುದೇ ಸಾರ್ವಜನಿಕ ಬೀದಿ ಅಥವಾ ಅದರ ಭಾಗದಲ್ಲಿ ವಾಹನ ಸಂಚಾರವನ್ನು ವಲಯ ಆಯುಕ್ತರು ನಿಷೇಧಿಸಬಹುದು.

(2) ಕರ್ನಾಟಕ ಪೋಲಿಸು ಅಧಿನಿಯಮ, 1963ರ ಪ್ರಕರಣ 69ನೇ ಪ್ರಕರಣದಲ್ಲಿ ನಿಗದಿಪಡಿಸಿದಂತೆ ಸಂಚಾರವನ್ನು ನಿಯಂತ್ರಿಸಲು ಪೋಲಿಸರ ಸಹಕಾರವನ್ನು ವಲಯ ಆಯುಕ್ತನು ಕೋರತಕ್ಕದ್ದು.

216. ಕಟ್ಟಡ ನಿವೇಶನಗಳಾಗಿ ಭೂಮಿಯನ್ನು ವಿಲೆ ಮಾಡುವಾಗ ಬೀದಿಯನ್ನು ರಚಿಸಲು ಮಾಲೀಕನ ಹೊಣೆಗಾರಿಕೆ.- ಯಾವುದೇ ಭೂಮಿಯ ಮಾಲೀಕನು ಕಟ್ಟಡಗಳ ನಿರ್ಮಾಣಕ್ಕಾಗಿ ಅಂಥ ಭೂಮಿಯನ್ನು ಅಥವಾ ಅದರ ಯಾವುದೇ ಭಾಗವನ್ನು ಅಥವಾ ಭಾಗಗಳನ್ನು ನಿವೇಶನಗಳಾಗಿ ಬಳಸಿಕೊಂಡರೆ, ಮಾರಾಟ ಮಾಡಿದರೆ, ಗುತ್ತಿಗೆಗೆ ಕೊಟ್ಟರೆ ಅಥವಾ ಅನ್ಯಥಾ ವಿಲೆ ಮಾಡಿದರೆ, ಹಾಲಿ ಇರುವ ಸಾರ್ವಜನಿಕ ಅಥವಾ ಖಾಸಗಿ ಬೀದಿಯಲ್ಲಿರಬಹುದಾದಂಥ ನಿವೇಶನ ಅಥವಾ ನಿವೇಶನಗಳ ಸಂದರ್ಭದಲ್ಲಿ ಹೊರತು, ಅವನು ನಿವೇಶನಕ್ಕೆ ಅಥವಾ ನಿವೇಶನಗಳಿಗೆ ಪ್ರವೇಶಾವಕಾಶ ಕಲ್ಪಿಸುವ ಮತ್ತು ಹಾಲಿ ಇರುವ ಸಾರ್ವಜನಿಕ ಅಥವಾ ಖಾಸಗಿ ಬೀದಿಗೆ ಸಂಪರ್ಕ ಕಲ್ಪಿಸುವ ಬೀದಿಯನ್ನು ಅಥವಾ ಬೀದಿಗಳನ್ನು ಅಥವಾ ರಸ್ತೆಯನ್ನು ಅಥವಾ ರಸ್ತೆಗಳನ್ನು ರೂಪಿಸತಕ್ಕದ್ದು ಮತ್ತು ರಚಿಸತಕ್ಕದ್ದು.

217. ಹೊಸ ಖಾಸಗಿ ಬೀದಿಗಳ ರಚನೆ.- (1) ಹೊಸ ಖಾಸಗಿ ರಸ್ತೆಯನ್ನು ವಿನ್ಯಾಸಗೊಳಿಸುವ ಅಥವಾ ರಚಿಸುವ ಉದ್ದೇಶವಿರುವ ಯಾವೊಬ್ಬ ವ್ಯಕ್ತಿಯು ಲಿಖಿತ ಅರ್ಜಿಯನ್ನು ಯೋಜನೆಗಳು ಮತ್ತು ಈ ಮುಂದಿನ ವಿವರಗಳನ್ನು ತೋರಿಸುವ ವಿಭಾಗಗಳೊಂದಿಗೆ ಮುಖ್ಯ ಆಯುಕ್ತರಿಗೆ ಸಲ್ಲಿಸುವುದು, ಎಂದರೆ ,-

(ಎ) ಬೀದಿಯ ಉದ್ದೇಶಿತ ಮಟ್ಟ, ದಿಕ್ಕು ಮತ್ತು ಅಗಲ;

(ಬಿ) ಬೀದಿ ಪಂಕ್ತೀಕರಣ ಮತ್ತು ಕಟ್ಟಡ ಸಾಲು; ಮತ್ತು

(ಸಿ) ಮಟ್ಟಗೊಳಿಸುವಿಕೆ, ನೆಲಹಾಸುವಿಕೆ, ಲೋಹ ಹೊದಿಸುವಿಕೆ, ಕಂಬಕೂರಿಸುವಿಕೆ, ಸಂಪರ್ಕಗೊಳಿಸುವಿಕೆ, ಒಳಚರಂಡಿ ರಚನೆ, ಕಾಲುವೆ ರಚನೆ, ಸಂರಕ್ಷಣೆ ಮತ್ತು ಬೀದಿ ದೀಪ ವ್ಯವಸ್ಥೆಗಾಗಿ ಮಾಡಬೇಕಾದ ಏರ್ಪಾಡುಗಳು.

(2) ಸಾರ್ವಜನಿಕ ಬೀದಿಗಳ ಮಧ್ಯ ಮತ್ತು ಅಗಲ ಹಾಗೂ ಅದರ ಮೇಲೆ ಕಟ್ಟುವ ಕಟ್ಟಡಗಳ ಎತ್ತರ ಕುರಿತಂತೆ ಈ ಅಧಿನಿಯಮದ ಮತ್ತು ಅದರಡಿಯಲ್ಲಿ ಮಾಡಿದ ಯಾವುದೇ ನಿಯಮಗಳು ಅಥವಾ ಉಪವಿಧಿಗಳ ಉಪಬಂಧಗಳು (1)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಿದ ರಸ್ತೆಗಳ ಪ್ರಕರಣಗಳಲ್ಲೂ ಸಹ ಅನ್ವಯಿಸ ತಕ್ಕದ್ದು ಹಾಗೂ ಆ ಉಪ-ಪ್ರಕರಣದಲ್ಲಿ ಉಲ್ಲೇಖಿಸಿದ ಎಲ್ಲಾ ವಿವರಗಳು ವಲಯ ಸಮಿತಿಯ ಅನುಮೋದನೆಗೆ ಒಳಪಟ್ಟಿರತಕ್ಕದ್ದು.

(3) (1)ನೇ ಉಪ-ಪ್ರಕರಣದ ಅಡಿಯಲ್ಲಿ ಯಾವುದೇ ಅರ್ಜಿಯನ್ನು ಸ್ವೀಕರಿಸಿದ ತರುವಾಯ ಅರವತ್ತು ದಿನಗಳ ಒಳಗಾಗಿ ವಲಯ ಸಮಿತಿಯು ಅದು ಸೂಕ್ತವೆಂದು ಭಾವಿಸಬಹುದಾದ ಅಂಥ ಪರತ್ತುಗಳ ಮೇಲೆ ಬೀದಿ ರಚನೆಗೆ ಅನುಮತಿ ನೀಡತಕ್ಕದ್ದು ಅಥವಾ ನಿರಾಕರಿಸತಕ್ಕದ್ದು ಅಥವಾ ಅದಕ್ಕೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿಯನ್ನು ಕೋರತಕ್ಕದ್ದು.

(4) ಅಂಥ ಅನುಮತಿಯನ್ನು,-

(ಎ) ಉದ್ದೇಶಿತ ಬೀದಿಯು, ಮಾಡಲಾಗಿರುವ ಯಾವುದೇ ವ್ಯವಸ್ಥೆಗಳಿಗೆ ಅಥವಾ ಬೀದಿ ಸುಧಾರಣೆಯ ಯಾವುದೇ ಸಾಮಾನ್ಯ ಯೋಜನೆಯನ್ನು ಕಾರ್ಯಗತಗೊಳಿಸುವುದಕ್ಕಾಗಿ ಮಾಡಬಹುದಾದ ಸ್ಥಾಯಿ ಸಮಿತಿಯ ಅಭಿಪ್ರಾಯಕ್ಕೆ ತೊಡಕಾದರೆ;

(ಬಿ) ಉದ್ದೇಶಿತ ಬೀದಿಯ, (2)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಿದ ಅಧಿನಿಯಮದ, ನಿಯಮಗಳ ಮತ್ತು ಉಪವಿಧಿಗಳ ಉಪಬಂಧಗಳನ್ನು ಪಾಲಿಸದಿದ್ದರೆ; ಅಥವಾ

(ಸಿ) ಉದ್ದೇಶಿತ ಬೀದಿಯು, ಈಗಾಗಲೇ ಮುಕ್ತವಾಗಿರುವ ಬೀದಿಯ ಕೊನೆಗೆ ಸಂಪರ್ಕವಿರುವಂತೆ ವಿನ್ಯಾಸಗೊಳಿಸದಿದ್ದರೆ, ನಿರಾಕರಿಸಬಹುದು.

(5) ವಲಯ ಸಮಿತಿಯ ಆದೇಶವನ್ನು ಪಾಲಿಸದಿರುವ ಅಥವಾ ಅನ್ಯಥಾ ಯಾವೊಬ್ಬ ವ್ಯಕ್ತಿಯು ಯಾವುದೇ ಹೊಸ ಖಾಸಗಿ ಬೀದಿಯನ್ನು ವಿನ್ಯಾಸಗೊಳಿಸತಕ್ಕದ್ದಲ್ಲ ಅಥವಾ ರಚಿಸತಕ್ಕದ್ದಲ್ಲ. ಹೆಚ್ಚುವರಿ ಮಾಹಿತಿಯನ್ನು ಕೋರಿದಲ್ಲಿ, ಅಂಥ ಮಾಹಿತಿಯನ್ನು ಸ್ವೀಕರಿಸುವ ಮೇರೆಗೆ ಆದೇಶಗಳನ್ನು ಹೊರಡಿಸುವವರೆಗೆ ಬೀದಿಯನ್ನು ವಿನ್ಯಾಸಗೊಳಿಸುವ ಅಥವಾ ರಚಿಸುವ ಯಾವುದೇ ಕ್ರಮವನ್ನು ಕೈಗೊಳ್ಳತಕ್ಕದ್ದಲ್ಲ;

ಪರಂತು, ಅಂಥ ಆದೇಶಗಳನ್ನು ಹೊರಡಿಸಿದ ಯಾವುದೇ ಪ್ರಕರಣದಲ್ಲಿ ಸದರಿ ಅರ್ಜಿಯೊಂದಿಗೆ ಅಂತಿಮವಾಗಿ ವ್ಯವಹರಿಸುವುದಕ್ಕೆ ಸಾಧ್ಯವಾಗಿಸಲು ಅಗತ್ಯವೆಂದು ಅದು ಪರಿಗಣಿಸಿದ ಎಲ್ಲಾ ಮಾಹಿತಿಯನ್ನು ಸ್ವೀಕರಿಸಿದ ತರುವಾಯ ಅರವತ್ತು ದಿನಗಳಿಗೂ ಹೆಚ್ಚು ವಿಳಂಬವನ್ನು ಮಾಡತಕದ್ದಲ್ಲ.

(6) (1)ನೇ ಉಪಪ್ರಕರಣದ ಅಡಿಯಲ್ಲಿ ಅರ್ಜಿಯನ್ನು ಸ್ವೀಕರಿಸಿದ ಅಥವಾ (5)ನೇ ಉಪಪ್ರಕರಣದ ಅಡಿಯಲ್ಲಿ ಕೋರಿದ ಎಲ್ಲಾ ಮಾಹಿತಿಯನ್ನು ಸ್ವೀಕರಿಸಿದ ಅರವತ್ತು ದಿನಗಳ ಒಳಗಾಗಿ ವಲಯ ಸಮಿತಿಯು ಅನುಮತಿಯನ್ನು ನಿರಾಕರಿಸದಿದ್ದಲ್ಲಿ, ಅಂಥ ಅನುಮತಿಯನ್ನು ನೀಡಲಾಗಿದೆ ಎಂದು ಭಾವಿಸತಕ್ಕದ್ದು ಹಾಗೂ ಅರ್ಜಿದಾರನು ಬೀದಿಯನ್ನು ರಚಿಸಲು ಮುಂದುವರೆಯಬಹುದು. ಆದರೆ, ಈ ಅಧಿನಿಯಮದಡಿಯಲ್ಲಿ ಅಥವಾ ಅದರಡಿಯಲ್ಲಿ ಮಾಡಿದ ನಿಯಮಗಳ ಅಥವಾ ಉಪವಿಧಿಗಳ ಉಪಬಂಧಗಳನ್ನು ಉಲ್ಲಂಘಿಸುವಂತಿಲ್ಲ.

218. 217ನೇ ಪ್ರಕರಣವನ್ನು ಉಲ್ಲಂಘಿಸಿ ಮಾಡಿದ ಬೀದಿಯ ಮಾರ್ಪಾಡು ಅಥವಾ ಧ್ವಂಸ.- (1) ಸ್ಥಾಯಿ ಸಮಿತಿಯ ಆದೇಶಗಳನ್ನು ಪಾಲಿಸದೆಯೇ ಅಥವಾ ಅನ್ಯಥಾ ಯಾವೊಬ್ಬ ವ್ಯಕ್ತಿಯು 217ನೇ ಪ್ರಕರಣದಲ್ಲಿ ಉಲ್ಲೇಖಿಸಿರುವಂತೆ ಯಾವುದೇ ಬೀದಿಯನ್ನು ವಿನ್ಯಾಸಗೊಳಿಸಿದ್ದಲ್ಲಿ ಅಥವಾ ಗುರುತು ಮಾಡಿದಲ್ಲಿ, ವಲಯ ಆಯುಕ್ತನು, ಈ ಅಧಿನಿಯಮದ ಅಡಿಯಲ್ಲಿ ಅಪರಾಧಿಯನ್ನು ಅಭಿಯೋಜನೆಗೆ ಒಳಪಡಿಸುವುದಲ್ಲದೇ ನೋಟಿಸ್‌ನ ಮೂಲಕ ಅಪರಾಧಿಯನ್ನು ಈ ಮುಂದಿನವುಗಳಿಗಾಗಿ ಅಗತ್ಯಪಡಿಸುವುದು,-

(ಎ) ಆತನ ಸಹಿ ಇರುವ ಲಿಖಿತ ಹೇಳಿಕೆಯ ಮೂಲಕ ಸಾಕಷ್ಟು ಕಾರಣವನ್ನು ತೋರಿಸುವ ಹಾಗೂ ನೋಟಿಸಿನಲ್ಲಿ ನಿರ್ದಿಷ್ಟ ಪಡಿಸಬಹುದಾದ ಅಂಥ ದಿನದಂದು ಅಥವಾ ಅದಕ್ಕೂ ಮೊದಲು ಅಂಥ ಬೀದಿಯನ್ನು ಯಾಕೆ ಮಾರ್ಪಾಡು ಮಾಡಬಾರದೆಂದು ಅಥವಾ ಅಂಥ ಮಾರ್ಪಾಡುಗೊಳಿಸುವಿಕೆಯ ಕಾರ್ಯಸಾಧುವಲ್ಲದ ವಲಯ, ಆಯುಕ್ತನಿಗೆ ಕಳುಹಿಸುವುದು, ಏಕೆ ಆ ಬೀದಿಯನ್ನು ದಂಡಸಗೊಳಿಸಬಾರದೆಂದು ವಲಯ ಆಯುಕ್ತನ ಸಮಾಧಾನಕ್ಕಾಗಿ; ಅಥವಾ

(ಬಿ) ನೋಟೀಸಿನಲ್ಲಿ ನಿರ್ದಿಷ್ಟಪಡಿಸಬಹುದಾದ ಅಂಥ ದಿನದಿಂದ ಅಂಥ ಸಮಯದಲ್ಲಿ ವೈಯಕ್ತಿಕವಾಗಿ ಅಥವಾ ಯುಕ್ತವಾಗಿ ಅಧಿಕೃತಗೊಳಿಸಿದ ಏಜೆಂಟಿನ ಮತ್ತು ಮೇಲೆ ಹೇಳಿದ ಕಾರಣಗಳನ್ನು ಸ್ಪಷ್ಟಪಡಿಸಲು ವಲಯ ಆಯುಕ್ತನ ಮುಂದೆ ಹಾಜರಾಗುವುದು.

(2) ಅಂಥ ನೋಟೀಸನ್ನು ಪಡೆದ ಯಾವೊಬ್ಬ ವ್ಯಕ್ತಿಯು, ಅಂಥ ಬೀದಿಯನ್ನು ಏತಕ್ಕಾಗಿ ಮಾರ್ಪಾಡುಗೊಳಿಸಬಾರದು ಅಥವಾ ಧ್ವಂಸ ಮಾಡಬಾರದು ಎಂಬ ಸಾಕಷ್ಟು ಕಾರಣಗಳನ್ನು ವಲಯ ಆಯುಕ್ತನಿಗೆ ಸಮಾಧಾನವಾಗುವಂತೆ ಸ್ಪಷ್ಟಪಡಿಸದಿದ್ದಲ್ಲಿ, ವಲಯ ಆಯುಕ್ತನು ಅಂಥ ಬೀದಿಯನ್ನು ಮಾರ್ಪಾಡುಗೊಳಿಸುವ ಅಥವಾ ಧ್ವಂಸಪಡಿಸುವ ನಿರ್ದೇಶನವಿರುವ ಆದೇಶವನ್ನು ಹೊರಡಿಸಬಹುದು.

(3)ನೋಟೀಸಿನಲ್ಲಿ ನಿರ್ದಿಷ್ಟಪಸಿಸಿದ ಸಮಯದೊಳಗೆ ಅಂಥ ಕಾಮಗಾರಿಯನ್ನು ಕೈಗೊಳ್ಳದಿದ್ದಲ್ಲಿ, ವಲಯ ಆಯುಕ್ತನು, ಆತನು ಸೂಕ್ತವೆಂದು ಭಾವಿಸಿದ್ದರೆ, ಅದನ್ನು ಕಾರ್ಯಗತಗೊಳಿಸಬಹುದು ಮತ್ತು ವಲಯ ಆಯುಕ್ತನು ಇತ್ಯರ್ಥಪಡಿಸಬಹುದಾದ ಅಂಥ ಅನುಪಾತದಲ್ಲಿ ಭರಿಸಲಾದ ವೆಚ್ಚವನ್ನು (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಮಾಲೀಕನು ಪಾವತಿಸತಕ್ಕದ್ದು.

219. ಶಾಶ್ವತವಾಗಿ ಮುಚ್ಚಿರುವ ಬೀದಿಗಳನ್ನು ವಿಲೆ ಮಾಡುವ ಅಧಿಕಾರ.- (1) 213ನೇ ಪ್ರಕರಣದ ಮೇರೆಗೆ ಯಾವುದೇ ಸಾರ್ವಜನಿಕ ಬೀದಿಯನ್ನು ಶಾಶ್ವತವಾಗಿ ಮುಚ್ಚಿದಾಗ ಪಾಲಿಕೆಯು ಹಾಗೆ ಮುಚ್ಚಿದ್ದರಿಂದ ಹಾನಿಗೊಳಗಾದ ಯಾರೇ ವ್ಯಕ್ತಿಗೆ ಸೂಕ್ತ ನಷ್ಟಪರಿಹಾರವನ್ನು ಕೊಟ್ಟು, ನಿವೇಶನವನ್ನು ಅಥವಾ ಅದರಲ್ಲಿ ಇನ್ನು ಮುಂದೆ ಎಷ್ಟು ಅಗತ್ಯವಿಲ್ಲವೋ ಅಷ್ಟನ್ನು ವಿಲೆ ಮಾಡಬಹುದು.

(2) ಅಂಥ ನಷ್ಟಪರಿಹಾರವನ್ನು ನಿರ್ಧರಿಸುವಲ್ಲಿ, ಯಾವ ಸಾರ್ವಜನಿಕ ಬೀದಿಗಾಗಿ ನಷ್ಟಪರಿಹಾರವನ್ನು ಸಂದಾಯ ಮಾಡಲಾಗಿದೆಯೋ ಆ ಸಾರ್ವಜನಿಕ ಬೀದಿಯನ್ನು ಮುಚ್ಚಿದಾಗ ಅದೇ ಕಾಲದಲ್ಲಿ ಅಥವಾ ಆ ಸರಿಸುಮಾರಿನಲ್ಲಿ, ಇತರ ಯಾವುದೇ ಸಾರ್ವಜನಿಕ ಬೀದಿಯ ನಿರ್ಮಾಣದಿಂದಾಗಿ ಅಥವಾ ಮೇಲ್ಮಾಟಿನಿಂದಾಗಿ

ಅದೇ ಮಾಲೀಕನಿಗೆ ಸೇರಿದ ಅದೇ ಆವರಣಕ್ಕೆ ಅಥವಾ ಹೊಂದಿಕೊಂಡಿರುವ ಯಾವುದೇ ಆವರಣಕ್ಕೆ ಒದಗಿಬರುವ ಯಾವುದೇ ಪ್ರಯೋಜನಕ್ಕಾಗಿ ಅವಕಾಶ ಕಲ್ಪಿಸತಕ್ಕದ್ದು.

220. ಬೀದಿಗಳ ಮೇಲ್ಪಾಟಿಗಾಗಿ ಭೂಮಿಯ ಮತ್ತು ಕಟ್ಟಡಗಳ ಆರ್ಜನೆ.- (1) ಅಗತ್ಯಪಡಿಸಬಹುದಾದಂಥ ಮಂಜೂರಾತಿಗೆ ಯಾವಾಗಲೂ ಒಳಪಟ್ಟು ಮುಖ್ಯ ಆಯುಕ್ತರು-

(ಎ) ಯಾವುದೇ ಸಾರ್ವಜನಿಕ ಬೀದಿಯನ್ನು ಅಗಲಗೊಳಿಸುವ, ತೆರೆಯುವ, ವಿಸ್ತರಿಸುವ ಅಥವಾ ಅನ್ಯಥಾ ಮೇಲ್ಪಾಟು ಮಾಡುವ ಅಥವಾ ಯಾವುದೇ ಹೊಸ ಸಾರ್ವಜನಿಕ ಬೀದಿಯನ್ನು ನಿರ್ಮಿಸುವ ಉದ್ದೇಶಕ್ಕಾಗಿ ಅಗತ್ಯವಾದ ಯಾವುದೇ ಭೂಮಿಯನ್ನು ಮತ್ತು ಅಂಥ ಭೂಮಿಯ ಮೇಲಿರುವ ಕಟ್ಟಡ ಯಾವುದಾದರೂ ಇದ್ದರೆ, ಅದನ್ನು;

(ಬಿ) ಪಾಲಿಕೆಯು ಆರ್ಜಿಸುವುದು ವಿಹಿತವೆಂದು ಪರಿಗಣಿಸಬಹುದಾದಂಥ ಉದ್ದೇಶಿತ ಬೀದಿಯ ಪಂಕ್ತೀಕರಣದ ಹೊರಗಡೆಯ ಯಾವುದೇ ಭೂಮಿಯನ್ನು, ಅದರ ಮೇಲೆ ಕಟ್ಟಡ ಯಾವುದಾದರೂ ಇದ್ದರೆ ಅದರ ಸಹಿತ;

- ಆರ್ಜಿಸಬಹುದು.

(2) (1)ನೇ ಉಪಪ್ರಕರಣದ (ಬಿ) ಖಂಡದ ಮೇರೆಗೆ ಆರ್ಜಿಸಿದ ಯಾವುದೇ ಭೂಮಿಯನ್ನು ಅಥವಾ ಕಟ್ಟಡವನ್ನು ಸಾರ್ವಜನಿಕವಾಗಿ ಜಾಹೀರಾತು ಮಾಡಿದ ತರುವಾಯ ಮಾರಬಹುದು, ಬಾಡಿಗೆಗೆ ಕೊಡಬಹುದು ಅಥವಾ ಅನ್ಯಥಾ ವಿಲೆ ಮಾಡಬಹುದು ಮತ್ತು ಆ ಉದ್ದೇಶಕ್ಕಾಗಿ ಮಾಡಿದ ಯಾವುದೇ ಹಸ್ತಾಂತರಣ ಪತ್ರವು, ಹಾಲಿ ಇರುವ ಕಟ್ಟಡ ಯಾವುದಾದರೂ ಇದ್ದರೆ, ಅದನ್ನು ತೆಗೆದುಹಾಕುವುದು, ನಿರ್ಮಿಸಬೇಕಾದ ಹೊಸ ಕಟ್ಟಡ (ಯಾವುದಾದರೂ ಇದ್ದರೆ) ಅದರ ವರ್ಣನೆ, ಹೊಸ ಕಟ್ಟಡ ಯಾವುದಾದರೂ ಇದ್ದರೆ ಅದನ್ನು ಯಾವ ಅವಧಿಯೊಳಗೆ ಪೂರ್ಣಗೊಳಿಸಬೇಕೋ ಆ ಅವಧಿ ಮತ್ತು ಅಂಥಹುದೇ ಇತರ ವಿಷಯಗಳ ಬಗ್ಗೆ ಸ್ಥಾಯೀ ಸಮಿತಿಯು ಸೂಕ್ತವೆಂದು ಯೋಚಿಸುವಂಥ ಷರತ್ತುಗಳನ್ನು ಒಳಗೊಂಡಿರಬಹುದು.

(3) ಸ್ಥಾಯೀ ಸಮಿತಿಯು, (2)ನೇ ಉಪ-ಪ್ರಕರಣದ ಮೇರೆಗೆ ಯಾವುದೇ ಭೂಮಿಯನ್ನು ಅಥವಾ ಕಟ್ಟಡವನ್ನು ಯಾವ ವ್ಯಕ್ತಿಗೆ ವರ್ಗಾಯಿಸಲಾಗಿದೆಯೋ ಆ ಯಾರೇ ವ್ಯಕ್ತಿಯನ್ನು ಭೂಮಿ ಅಥವಾ ಕಟ್ಟಡದ ಸ್ವಾಧೀನವನ್ನು ಅವನಿಗೆ ಒಪ್ಪಿಸುವ ಮುಂಚೆ ಸದರಿ ಹಸ್ತಾಂತರಣ ಪತ್ರದಲ್ಲಿ ಒಳಗೊಂಡ ಯಾವುವೇ ಷರತ್ತುಗಳನ್ನು ಪಾಲಿಸಲು ಅಗತ್ಯಪಡಿಸಬಹುದು.

221. ಕಟ್ಟಡದ ಸಾಲು ಮತ್ತು ಬೀದಿಯ ಪಂಕ್ತೀಕರಣವನ್ನು ನಿಯಮಿಸಲು ಅಧಿಕಾರಗಳು.- ಸ್ಥಾಯೀ ಸಮಿತಿಯು,-

(ಎ) ಯಾವುದೇ ಸಾರ್ವಜನಿಕ ಬೀದಿಗಾಗಿ ಕಟ್ಟಡದ ಸಾಲು ಅಥವಾ ಬೀದಿಯ ಪಂಕ್ತೀಕರಣ ಅಥವಾ ಕಟ್ಟಡದ ಸಾಲು ಮತ್ತು ಬೀದಿಯ ಪಂಕ್ತೀಕರಣ ಇವೆರಡನ್ನು ನಿಯಮಿಸಬಹುದು.

(ಬಿ) ಕಾಲಕಾಲಕ್ಕೆ, ಆದರೆ ಪ್ರತಿಯೊಂದು ಪ್ರಕರಣದಲ್ಲಿ ಆ ಬಗ್ಗೆ ಪಾಲಿಕೆಯ ಅಧಿಕಾರವನ್ನು ಅದು ಸ್ವೀಕರಿಸುವುದಕ್ಕೆ ಒಳಪಟ್ಟು ಹಾಗೆ ನಿರ್ಧರಿಸಿದ ಯಾವುದೇ ಸಾಲಿಗೆ ಅಥವಾ ಅದರ ಯಾವುದೇ ಭಾಗಕ್ಕೆ ಬದಲಾಗಿ ಹೊಸ ಸಾಲನ್ನು ನಿರ್ಧರಿಸಬಹುದು

ಪರಂತು,-

(i) ಪಾಲಿಕೆಯ ಯಾವ ಸಭೆಯಲ್ಲಿ ಆ ವಿಷಯವನ್ನು ಪರಿಶೀಲಿಸಬೇಕಾಗಿದೆಯೋ ಆ ಸಭೆಗೆ ಕನಿಷ್ಪಪಕ್ಷ ಒಂದು ತಿಂಗಳು ಮುಂಚೆ ಸ್ಥಳೀಯ ವೃತ್ತಪತ್ರಿಕೆಗಳಲ್ಲಿ ಮತ್ತು ಸರ್ಕಾರೀ ರಾಜ್ಯಪತ್ರದಲ್ಲಿ ಜಾಹೀರಾತಿನ ಮೂಲಕ ಮುಖ್ಯ ಆಯುಕ್ತರು ಪ್ರಸ್ತಾವನೆಯ ಬಗ್ಗೆ ಸಾರ್ವಜನಿಕ ನೋಟೀಸನ್ನು ಕೊಟ್ಟಿದ್ದ ಹೊರತು ಮತ್ತು ಅದರ ಬಗ್ಗೆ ಮುಖ್ಯ ಆಯುಕ್ತರು ಸಹಿ ಮಾಡಿದ ವಿಶೇಷ ನೋಟೀಸನ್ನು, ಯಾವ ಬೀದಿಯ ಅಥವಾ ಬೀದಿಯ ಭಾಗಕ್ಕೆ ಹೊಸ ಸಾಲನ್ನು ನಿರ್ಧರಿಸಲು ಪ್ರಸ್ತಾವಿಸಲಾಗಿದೆಯೋ ಆ ಬೀದಿಯಲ್ಲಿ ಅಥವಾ ಬೀದಿಯ ಭಾಗದಲ್ಲಿ ಹಾಕಿದ್ದ ಹೊರತು; ಮತ್ತು

(ii) ಲಿಖಿತದಲ್ಲಿ ಸಲ್ಲಿಸಿದ ಮತ್ತು ಅಂಥ ಸಭೆಯ ದಿನಕ್ಕೆ ಮುಂಚೆ ಮೂರು ಸ್ಪಷ್ಟ ದಿನಗಳಿಗೆ ಕಡಿಮೆಯಿಲ್ಲದಂತೆ ಪಾಲಿಕೆಯ ಕಚೇರಿಯಲ್ಲಿ ಕೊಟ್ಟ ಸದರಿ ಪ್ರಸ್ತಾವಗಳಿಗೆ ಬಂದ ಎಲ್ಲಾ ಆಕ್ಷೇಪಣೆಗಳನ್ನು ಪಾಲಿಕೆಯು ಪರಿಶೀಲಿಸುವವರೆಗೆ

- ಅಂಥ ಅಧಿಕಾರವನ್ನು ಕೊಡತಕ್ಕದ್ದಲ್ಲ.

222. ಬೀದಿಯ ಪಂಕ್ತೀಕರಣದೊಳಗೆ ಅಥವಾ ಕಟ್ಟಡಗಳ ಸಾಲಿನೊಳಗೆ ಕಟ್ಟಡಗಳ ನಿರ್ಮಾಣದ ಅಥವಾ ಕಟ್ಟಡಗಳ ವಿಸ್ತರಣೆಯ ಮೇಲೆ ನಿರ್ಬಂಧ.- (1) ಯಾರೇ ವ್ಯಕ್ತಿಯು, 221ನೇ ಪ್ರಕರಣದ ಮೇರೆಗೆ ನಿರ್ಧರಿಸಲಾದ ಬೀದಿಯ ಪಂಕ್ತೀಕರಣದೊಳಗೆ ಯಾವುದೇ ಕಟ್ಟಡದ ಯಾವುದೇ ಭಾಗವನ್ನು ನಿರ್ಮಿಸತಕ್ಕದ್ದಲ್ಲ: ಪರಂತು ಆದಾಗ್ಯೂ ಮುಖ್ಯ ಆಯುಕ್ತರು ತಮ್ಮ ವಿವೇಚನೆಯಲ್ಲಿ ಬೀದಿ ಪಂಕ್ತೀಕರಣದೊಳಗೆ ಕಟ್ಟಡ ವಿಸ್ತರಣೆಯನ್ನು ಮಾಡಲು, ಅಂಥ ವಿಸ್ತರಣೆಯು, ಎತ್ತರವನ್ನು ಕೇವಲ ಹೆಚ್ಚಿಸಿದರೆ ಮತ್ತು ಹಾಲಿ ಇರುವ

ಕಟ್ಟಡದ ಅಥವಾ ಗೋಡೆಯ ಮೇಲೆ ನಿಂತರೆ ಕಟ್ಟಡದ ಮಾಲೀಕನು ಸ್ವತಃ ಮತ್ತು ತನ್ನ ಹಿತಾಸಕ್ತಿಯ ಉತ್ತರಾಧಿಕಾರಿಗಳನ್ನು,-

(ಎ) ಅಂಥ ಅನುಮತಿಯ ಅನುಸಾರವಾಗಿ ನಿರ್ಮಿಸಿದ ಅಥವಾ ಅದಕ್ಕೆ ವಿಸ್ತರಿಸಿದ ಯಾವುದೇ ಕಟ್ಟಡವನ್ನು ಅಥವಾ ಅದರ ಯಾವುದೇ ಭಾಗವನ್ನು ತೆಗೆದುಹಾಕಲು, ಮುಖ್ಯ ಆಯುಕ್ತರು ಆ ನಂತರದ ಯಾವುದೇ ಕಾಲದಲ್ಲಿ ಅವನನ್ನು ಅಥವಾ ಅವನ ಉತ್ತರಾಧಿಕಾರಿಗಳನ್ನು, ಕೋರುವ ಸಂದರ್ಭದಲ್ಲಿ ನಷ್ಟ ಪರಿಹಾರವನ್ನು ಕ್ಲೈಮು ಮಾಡುವುದಿಲ್ಲವೆಂದು; ಮತ್ತು

(ಬಿ) ಅಂಥ ತೆಗೆದುಹಾಕುವುದರ ವೆಚ್ಚಗಳನ್ನು ಸಂದಾಯ ಮಾಡಲು

- ಬದ್ಧರಾಗಿರುವ ಬಗ್ಗೆ ಒಪಂದವನ್ನು ಬರೆದುಕೊಟ್ಟ ಮೇಲೆ ಅನುಮತಿಸಬಹುದು:

ಪರಂತು, ಮುಖ್ಯ ಆಯುಕ್ತರು ತಾನು ಅನುಮತಿಸುವ ಪ್ರತಿಯೊಂದು ಪ್ರಕರಣದಲ್ಲಿ ಸ್ಥಾಯೀ ಸಮಿತಿಗೆ ಲಿಖಿತದಲ್ಲಿ ತನ್ನ ಕಾರಣಗಳನ್ನು ವರದಿ ಮಾಡತಕ್ಕದ್ದು.

(2) 221ನೇ ಪ್ರಕರಣದ ಮೇರೆಗೆ ನಿಯಮಿಸಿದ ಬೀದಿಯ ಪಂಕ್ತೀಕರಣದೊಳಗೆ ಸಂಪೂರ್ಣವಾಗಿ ಅಥವಾ ಭಾಗಶಃ ಪ್ರಸ್ತಾವಿಸಿದ ನಿವೇಶನವು ಬರುತ್ತದೆ ಎಂಬ ಕಾರಣದ ಮೇಲೆ ಯಾವುದೇ ಕಟ್ಟಡವನ್ನು ನಿರ್ಮಿಸಲು ಅಥವಾ ಅದಕ್ಕೆ ವಿಸ್ತರಣೆ ಮಾಡಲು, ಅನುಮತಿಯನ್ನು ಕೊಡಲು ಮುಖ್ಯ ಆಯುಕ್ತರು ನಿರಾಕರಿಸಿದರೆ, ಮತ್ತು ಅಂಥ ಪಂಕ್ತೀಕರಣದೊಳಗೆ ಬರುವ ಅಂಥ ನಿವೇಶನವನ್ನು ಅಥವಾ ಅದರ ಭಾಗವನ್ನು ಅಂಥ ನಿರಾಕರಣೆಯ ದಿನಾಂಕದ ತರುವಾಯ ಒಂದು ವರ್ಷದೊಳಗೆ ಪಾಲಿಕೆಯ ಪರವಾಗಿ ಆರ್ಜನೆ ಮಾಡದಿದ್ದರೆ, ಪಾಲಿಕೆಯು ಆ ನಿವೇಶನದ ಮಾಲೀಕನಿಗೆ ಸೂಕ್ತ ನಷ್ಟಪರಿಹಾರವನ್ನು ಸಂದಾಯ ಮಾಡತಕ್ಕದ್ದು.

(3) ಮುಖ್ಯ ಆಯುಕ್ತರ ಅನುಮತಿಯೊಂದಿಗೆ ಹೊರತು 221ನೇ ಪ್ರಕರಣದ ಮೇರೆಗೆ ನಿರ್ಧರಿಸಿದ ಬೀದಿಯ ಪಂಕ್ತೀಕರಣ ಮತ್ತು ಕಟ್ಟಡದ ಸಾಲುಗಳ ನಡುವೆ ಯಾವುದೇ ಕಟ್ಟಡವನ್ನು ಯಾರೇ ವ್ಯಕ್ತಿಯು ನಿರ್ಮಿಸತಕ್ಕದ್ದಲ್ಲ ಅಥವಾ ಅದಕ್ಕೆ ವಿಸ್ತರಣೆ ಮಾಡತಕ್ಕದ್ದಲ್ಲ, ಮುಖ್ಯ ಆಯುಕ್ತರು ಅನುಮತಿಯನ್ನು ಕೊಡುವಾಗ ಸ್ಥಾಯೀ ಸಮಿತಿಯು ಅಂಥ ಪ್ರಕರಣಗಳಿಗೆ ನಿರೂಪಿಸಬಹುದಾದಂಥ ಷರತ್ತುಗಳನ್ನು ವಿಧಿಸಬಹುದು.

223. ಮುಂಚಾಚಿದ ಕಟ್ಟಡವನ್ನು ಅಥವಾ ಗೋಡೆಯನ್ನು ಹಿಂದಕ್ಕೆ ಕಟ್ಟುವುದು.- (1) ಸಾರ್ವಜನಿಕ ಬೀದಿಗೆ ಹೊಂದಿಕೊಂಡಿರುವ ಯಾವುದೇ ಕಟ್ಟಡ ಅಥವಾ ಅದರ ಭಾಗವು 221ನೇ ಪ್ರಕರಣದ ಮೇರೆಗೆ ನಿರ್ಧರಿಸಿದ ಬೀದಿಯ ಪಂಕ್ತೀಕರಣದೊಳಗೆ ಇರುವಾಗ ಮುಖ್ಯ ಆಯುಕ್ತರು-

(ಎ) ಅಂಥ ಕಟ್ಟಡವನ್ನು ಪುನಃ ಕಟ್ಟಲು ಅಥವಾ ನೆಲಮಟ್ಟದ ಮೇಲೆ ಅದರ ಅರ್ಧದಪ್ಪನ್ನು ಮೀರುವಷ್ಟರ ಮಟ್ಟಿಗೆ ಇಳಿಸಲು ಅಂಥ ಅರ್ಧದಪ್ಪನ್ನು ಕ್ಯೂಬಿಕ್ ಮೀಟರಿನಲ್ಲಿ ಅಳೆಯಬೇಕು;

(ಬಿ) ಬೀದಿಯ ಪಂಕ್ತೀಕರಣದೊಳಗೆ ಇರುವ ಅಂಥ ಕಟ್ಟಡದ ಯಾವುದೇ ಭಾಗವನ್ನು ತೆಗೆದುಹಾಕಲು, ಪುನಃ ನಿರ್ಮಿಸಲು ಅಥವಾ ಅದಕ್ಕೆ ಯಾವುದೇ ವಿಸ್ತರಣೆ ಮಾಡಲು

- ಪ್ರಸ್ತಾಪಿಸಿದಾಗಲೆಲ್ಲಾ, ಅಂಥ ಕಟ್ಟಡವನ್ನು ಪುನಃ ಕಟ್ಟುವುದು, ಬದಲಾವಣೆ ಮಾಡುವುದು ಅಥವಾ ದುರಸ್ತಿ ಮಾಡುವುದಕ್ಕೆ ಸಂಬಂಧಿಸಿದಂತೆ ಅವನು ಹೊರಡಿಸುವ ಆದೇಶದಲ್ಲಿ ಅಂಥ ಕಟ್ಟಡವನ್ನು ಆ ಬೀದಿಯ ಪಂಕ್ತೀಕರಣದ ಹಿಂದಕ್ಕೆ ಕಟ್ಟಲು ಅಗತ್ಯಪಡಿಸಬಹುದು.

(2) ಬೀದಿಯ ಪಂಕ್ತೀಕರಣದೊಳಗೆ ಬರುವ ಯಾವುದೇ ಕಟ್ಟಡವು ಅಥವಾ ಅದರ ಯಾವುದೇ ಭಾಗವು ಬಿದ್ದುಹೋಗಿದ್ದಾಗ ಅಥವಾ ಸುಟ್ಟುಹೋಗಿರುವಾಗ ಅಥವಾ ಮುಖ್ಯ ಆಯುಕ್ತರ ಆದೇಶದ ಮೂಲಕವಾಗಿಯಾಗಲಿ ಅಥವಾ ಅನ್ಯಥಾ ಆಗಲಿ ಕೆಳಗೆ ಇಳಿಸಿದಾಗ, ಸದರಿ ಕಟ್ಟಡವು ಆಕ್ರಮಿಸಿಕೊಂಡ ಬೀದಿಯ ಪಂಕ್ತೀಕರಣದೊಳಗಿನ ಭೂಮಿಯ ಭಾಗವನ್ನು ಪಾಲಿಕೆಯ ಪರವಾಗಿ ಮುಖ್ಯ ಆಯುಕ್ತರು ತತ್‌ಕ್ಷಣವೇ ಸ್ವಾಧೀನಕ್ಕೆ ತೆಗೆದುಕೊಳ್ಳಬಹುದು ಮತ್ತು ಅವಶ್ಯವಿದ್ದರೆ ಅದನ್ನು ಖಾಲಿ ಮಾಡಿಸಬಹುದು.

(3) ಈ ಪ್ರಕರಣದ ಮೇರೆಗೆ ಆರ್ಜಿಸಿದ ಭೂಮಿಯನ್ನು ಆ ಸಾರ್ವಜನಿಕ ಬೀದಿಯ ಭಾಗವೆಂದು ಭಾವಿಸತಕ್ಕದ್ದು ಮತ್ತು ಅದು ಪಾಲಿಕೆಯಲ್ಲಿ ನಿಹಿತವಾಗತಕ್ಕದ್ದು.

(4) ಉಪ-ಪ್ರಕರಣ (1)ರ ಮೇರೆಗೆ ಕೊಟ್ಟ ಯಾವುದೇ ಸೂಚನೆಯ ಅನುಸಾರವಾಗಿ ಯಾವುದೇ ಕಟ್ಟಡವನ್ನು ಹಿಂದಕ್ಕೆ ಕಟ್ಟಿದಾಗ ಅಥವಾ ಮುಖ್ಯ ಆಯುಕ್ತರು (2)ನೇ ಉಪ-ಪ್ರಕರಣದ ಮೇರೆಗೆ ಯಾವುದೇ ಭೂಮಿಯನ್ನು ಸ್ವಾಧೀನಕ್ಕೆ ತೆಗೆದುಕೊಂಡಾಗ ಅದರಿಂದ ಮಾಲೀಕನು ಅನುಭವಿಸಬಹುದಾದ ಯಾವುದೇ ನೇರ ಹಾನಿಗಾಗಿ ಅವನಿಗೆ ಸಂಪೂರ್ಣ ನಷ್ಟಪರಿಹಾರವನ್ನು ತತ್‌ಕ್ಷಣವೇ ಕೊಡತಕ್ಕದ್ದು.

ವಿವರಣೆ.- ಭೂಮಿಗೆ ಸಂಬಂಧಿಸಿದಂತೆ (4)ನೇ ಉಪಪ್ರಕರಣದಲ್ಲಿ ಬಳಸಿದ `ನೇರ ಹಾನಿ' ಎಂಬ ಪದಾವಳಿಗೆ ತೆಗೆದುಕೊಂಡ ಭೂಮಿಯ ಮಾರುಕಟ್ಟೆ ಮೌಲ್ಯ ಮತ್ತು ಆ ಪ್ರದೇಶದ ಗಾತ್ರವು ಕಡಿಮೆಯಾಗಿದ್ದರಿಂದ ಉಂಟಾಗುವ ಉಳಿದ ಭೂಮಿಯ ಸಾಮಾನ್ಯ ಮಾರುಕಟ್ಟೆ ಮೌಲ್ಯದಲ್ಲಿನ ಇಳಿತಾಯ ಯಾವುದಾದರೂ ಇದ್ದರೆ ಅದು-ಎಂದು ಅರ್ಥ. ಆದರೆ ಅಂಥ ಬಳಕೆಗೆ ಆ ನಿವೇಶನದ ಗಾತ್ರವು ಕಡಿಮೆಯಾಗಿದ್ದರಿಂದ ಹಾನಿಕರವಾಗಿ ಭಾದಕವಾಗಬಹುದಾಗಿದ್ದರೂ ಯಾವ ವಿಶಿಷ್ಟ ಬಳಕೆಗೆ ಆ ಮಾಲೀಕನು ತನ್ನ ಭೂಮಿಯನ್ನು ಬಳಸಲು

ಉದ್ದೇಶಿಸಿರುವನೆಂದು ಹೇಳಬಹುದೋ ಆ ಯಾವುದೇ ವಿಶಿಷ್ಟ ಬಳಕೆಯಲ್ಲಿ ಇನ್ನು ಮುಂದೆ ಆಗುವ ನಷ್ಟದಿಂದ ಉಂಟಾಗುವ ಹಾನಿಯನ್ನು ಒಳಗೊಳ್ಳುವುದಿಲ್ಲ.

224. **ಬೀದಿಯ ನಿಯತ ರೇಖೆಯ ಹಿಂದಕ್ಕೆ ಕಟ್ಟಡಗಳನ್ನು ಕಟ್ಟುವುದಕ್ಕೆ ಆದೇಶಿಸಲು ಮುಖ್ಯ ಆಯುಕ್ತರ ಹೆಚ್ಚಿನ ಅಧಿಕಾರ**.- (1) ಸಾರ್ವಜನಿಕ ಬೀದಿಯ ರೇಖೆಯೊಳಗೆ ಯಾವುದೇ ಕಟ್ಟಡವು ಅಥವಾ ಅದರ ಯಾವುದೇ ಭಾಗವು ಇದ್ದರೆ ಮತ್ತು ಆ ಬೀದಿಯ ನಿಯತ ರೇಖೆಗೆ ಆ ಕಟ್ಟಡವನ್ನು ಹಿಂದಕ್ಕೆ ಕಟ್ಟುವುದು ಅವಶ್ಯಕವೆಂದು ಮುಖ್ಯ ಆಯುಕ್ತರು ಅಭಿಪ್ರಾಯಪಟ್ಟರೆ, 223ನೆಯ ಪ್ರಕರಣದ ಉಪಬಂಧಗಳು ಅನ್ವಯವಾಗದಿದ್ದರೆ, ಲಿಖಿತ ನೋಟೀಸಿನ ಮೂಲಕ, ಅವರು-

(ಎ) ಆ ಬೀದಿಯ ನಿಯತ ರೇಖೆಯೊಳಗಿರುವ ಆ ಕಟ್ಟಡವನ್ನು ಅಥವಾ ಅದರ ಯಾವುದೇ ಭಾಗವನ್ನು ಏಕೆ ಕೆಡವಿಹಾಕಬಾರದು ಮತ್ತು ಸದರಿ ರೇಖೆಯೊಳಗಿರುವ ಭೂಮಿಯನ್ನು ಆಯುಕ್ತರು ಏಕೆ ಆರ್ಜಿಸಬಾರದು ಎಂಬುದಕ್ಕೆ ಅಂಥ ಕಟ್ಟಡದ ಮಾಲೀಕನನ್ನು ಅಂಥ ನೋಟೀಸಿನಲ್ಲಿ ನಿರ್ದಿಷ್ಟಪಡಿಸುವ ಅವಧಿಯೊಳಗೆ ಅವನು ಅಥವಾ ಆ ಬಗ್ಗೆ ಅವನಿಂದ ಕ್ರಮಬದ್ಧವಾಗಿ ಅಧಿಕೃತನಾದ ಏಜೆಂಟನು ಸಹಿ ಮಾಡಿದ ಮತ್ತು ಮುಖ್ಯ ಆಯುಕ್ತರಿಗೆ ಸಂಬೋಧಿಸಿದ ಲಿಖಿತ ಹೇಳಿಕೆ ಮೂಲಕ ಕಾರಣ ತೋರಿಸಲು ಅಗತ್ಯಪಡಿಸಬಹುದು; ಅಥವಾ

(ಬಿ) ಆ ಬೀದಿಯ ನಿಯತ ರೇಖೆಯೊಳಗಿರುವ ಅಂಥ ಕಟ್ಟಡವನ್ನು ಅಥವಾ ಅದರ ಯಾವುದೇ ಭಾಗವನ್ನು ಏಕೆ ಕೆಡವಿಹಾಕಬಾರದು ಮತ್ತು ಆ ರೇಖೆಯೊಳಗಿನ ಭೂಮಿಯನ್ನು ಮುಖ್ಯ ಆಯುಕ್ತರು ಏಕೆ ಆರ್ಜಿಸಬಾರದು ಎಂಬುದಕ್ಕೆ ಕಾರಣ ತೋರಿಸಲು ಆ ಮಾಲೀಕನನ್ನು, ಅಂಥ ನೋಟೀಸಿನಲ್ಲಿ ನಿರ್ದಿಷ್ಟಪಡಿಸಿರುವ ದಿನದಂದು ಮತ್ತು ಅಂಥ ಸಮಯದಲ್ಲಿ ಮತ್ತು ಸ್ಥಳದಲ್ಲಿ ಖುದ್ದಾಗಿ ಅಥವಾ ಆ ಬಗ್ಗೆ ಅವನಿಂದ ಕ್ರಮಬದ್ಧವಾಗಿ ಅಧಿಕೃತನಾದ ಏಜೆಂಟನ ಮೂಲಕ ಹಾಜರಾಗಲು ಅಗತ್ಯಪಡಿಸಬಹುದು.

(2) ಅಂಥ ಮಾಲೀಕನು, ಬೀದಿಯ ನಿಯತ ರೇಖೆಯೊಳಗಿರುವ ಅಂಥ ಕಟ್ಟಡವನ್ನು ಅಥವಾ ಅದರ ಭಾಗವನ್ನು ಏಕೆ ಕೆಡವಿಹಾಕಬಾರದು ಮತ್ತು ಸದರಿ ರೇಖೆಯೊಳಗಿರುವ ಭೂಮಿಯನ್ನು ಮೇಲೆ ಹೇಳಿರುವಂತೆ ಏಕೆ ಆರ್ಜಿಸಬಾರದು ಎಂಬುದಕ್ಕೆ ಮುಖ್ಯ ಆಯುಕ್ತರಿಗೆ ಮನವರಿಕೆಯಾಗುವಂಥ ಸಾಕಷ್ಟು ಕಾರಣವನ್ನು ತೋರಿಸಲು ವಿಫಲನಾದರೆ, ಮುಖ್ಯ ಆಯುಕ್ತರು, ಸ್ಥಾಯೀ ಸಮಿತಿಯ ಅನುಮೋದನೆಯೊಂದಿಗೆ ಲಿಖಿತ ನೋಟೀಸಿನ ಮೂಲಕ ಆ ನೋಟೀಸಿನಲ್ಲಿ ನಿಯಮಿಸಿರುವ ಅವಧಿಯೊಳಗೆ ಆ ಬೀದಿಯ ನಿಯತ ರೇಖೆಯೊಳಗಿರುವ ಆ ಕಟ್ಟಡವನ್ನು ಅಥವಾ ಅದರ ಭಾಗವನ್ನು ಕೆಡವಿಹಾಕುವಂತೆ ಅಂಥ ಮಾಲೀಕನನ್ನು ಅಗತ್ಯಪಡಿಸಬಹುದು.

(3) ಅಂಥ ಕಟ್ಟಡದ ಮಾಲೀಕನು ಅಂಥ ಅವಧಿಯೊಳಗೆ ಸದರಿ ರೇಖೆಯೊಳಗೆ ಬರುವ ಅಂಥ ಕಟ್ಟಡವನ್ನು ಅಥವಾ ಅದರ ಯಾವುದೇ ಭಾಗವನ್ನು ಕೆಡವಿಹಾಕಲು ವಿಫಲನಾದರೆ, ಮುಖ್ಯ ಆಯುಕ್ತರು, ಅದನ್ನು ಕೆಡವಿಹಾಕಬಹುದು ಮತ್ತು ಹಾಗೆ ಕೆಡವಿ ಹಾಕುವುದಕ್ಕಾಗಿ ವಹಿಸಿದ ಎಲ್ಲ ವೆಚ್ಚಗಳನ್ನು ಆ ಮಾಲೀಕನು ಸಂದಾಯ ಮಾಡತಕ್ಕದ್ದು.

(4) ಮುಖ್ಯ ಆಯುಕ್ತರು ಪಾಲಿಕೆಯ ಪರವಾಗಿ ಕೂಡಲೇ, ಸದರಿ ಕಟ್ಟಡಗಳು ಆ ತನಕ ಸದರಿ ರೇಖೆಯೊಳಗಿನ ಭೂಮಿಯಲ್ಲಿ ಆಕ್ರಮಿಸಿಕೊಂಡಿದ್ದಷ್ಟು ಭಾಗವನ್ನು ಸ್ವಾಧೀನಕ್ಕೆ ತೆಗೆದುಕೊಳ್ಳತಕ್ಕದ್ದು ಮತ್ತು ಅಂದಿನಿಂದ ಅಂಥ ಭೂಮಿಯನ್ನು ಸಾರ್ವಜನಿಕ ಬೀದಿಯ ಭಾಗವೆಂದು ಭಾವಿಸತಕ್ಕದ್ದು ಮತ್ತು ಹಾಗೆಂದು ಅದು ಪಾಲಿಕೆಯಲ್ಲಿ ನಿಹಿತವಾಗತಕ್ಕದ್ದು.

ಪರಂತು, ಈ ಪ್ರಕರಣದಲ್ಲಿರುವುದು ಯಾವುದೂ, ಸರ್ಕಾರದಲ್ಲಿ ನಿಹಿತವಾಗಿರುವ ಕಟ್ಟಡಗಳಿಗೆ ಅನ್ವಯವಾಗುತ್ತದೆ ಎಂದು ಭಾವಿಸತಕ್ಕದ್ದಲ್ಲ.

225. **ಕಾಮಗಾರಿಯನ್ನು ಕಾರ್ಯಗತಗೊಳಿಸುವಂತೆ ಆದೇಶಿಸಲು ಅಥವಾ ಅದಕ್ಕೆ ತಪ್ಪಿದಲ್ಲಿ ತಾವೇ ಕಾರ್ಯಗತಗೊಳಿಸಲು ವಲಯ ಆಯುಕ್ತರ ಅಧಿಕಾರ**.- (1) ವಲಯ ಆಯುಕ್ತರಿಗೆ ಸಮಾಧಾನವಾಗುವಂತೆ ಯಾವುದೇ ಖಾಸಗಿ ಬೀದಿಯನ್ನು ಅಥವಾ ಅದರ ಭಾಗವನ್ನು ಮಟ್ಟ ಮಾಡದಿದ್ದರೆ, ಅದಕ್ಕೆ ನೆಲಗಟ್ಟು ಮಾಡದಿದ್ದರೆ, ಜಲ್ಲಿ ಹಾಕದಿದ್ದರೆ, ಚಪ್ಪಡಿ ಹಾಸದಿದ್ದರೆ, ಕಾಲುವೆ ಮಾಡದಿದ್ದರೆ, ಒಳಚರಂಡಿಯನ್ನು ಮಾಡದಿದ್ದರೆ, ಚರಂಡಿಯನ್ನು ಮಾಡದಿದ್ದರೆ, ನಿರ್ಮಲೀಕರಿಸದಿದ್ದರೆ ಅಥವಾ ದೀಪದ ವ್ಯವಸ್ಥೆ ಮಾಡಿಲ್ಲದಿದ್ದರೆ ಆತನು ನೋಟೀಸಿನ ಮೂಲಕ, ಅಂಥ ಬೀದಿಯ ಅಥವಾ ಅದರ ಭಾಗದ ಮಾಲೀಕರನ್ನು ಮತ್ತು ಆ ಭೂಮಿಯ ಮತ್ತು ಅದರ ಮೇಲಿನ ಕಟ್ಟಡದ ಮಾಲೀಕರು ಬೇರೆ ಬೇರೆಯವರಾಗಿರುವ ಸಂದರ್ಭಗಳಲ್ಲಿ, ಆ ಭೂಮಿ ಮತ್ತು ಕಟ್ಟಡ ಇವೆರಡರ ಮಾಲೀಕರೂ ಸೇರಿದಂತೆ ಅಂಥ ಬೀದಿಗೆ ಅಥವಾ ಅದರ ಭಾಗಕ್ಕೆ ಮುಖ ಮಾಡಿರುವ ಅಥವಾ ಅಂಥ ಬೀದಿಗೆ ಅಥವಾ ಅದರ ಭಾಗಕ್ಕೆ ಲಗತ್ತಾಗಿರುವ ಕಟ್ಟಡಗಳ ಅಥವಾ ಭೂಮಿಗಳ ಮಾಲೀಕರನ್ನು, ಆತನ ಅಭಿಪ್ರಾಯದಲ್ಲಿ ಅವಶ್ಯವಾಗಬಹುದಾದ ಯಾವುದೇ ಕಾಮಗಾರಿಯನ್ನು ಮತ್ತು ಅಂಥ ನೋಟೀಸಿನಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಕಾಲದೊಳಗೆ ಕಾರ್ಯಗತಗೊಳಿಸುವಂತೆ ಅಗತ್ಯಪಡಿಸಬಹುದು.

(2) ಅಂಥ ಕಾಮಗಾರಿಯನ್ನು, ನೋಟೀಸಿನಲ್ಲಿ ನಿರ್ದಿಷ್ಟಪಡಿಸಿದ ಕಾಲದೊಳಗೆ ಕಾರ್ಯಗತಗೊಳಿಸದಿದ್ದರೆ, ವಲಯ ಆಯುಕ್ತರು, ತಾವು ಸೂಕ್ತ ಎಂದು ಭಾವಿಸಿದರೆ, ಆ ಕಾಮಗಾರಿಯನ್ನು

ಕಾರ್ಯಗತಗೊಳಿಸಬಹುದು ಮತ್ತು ಅದಕ್ಕೆ ತಗಲಿದ ವೆಚ್ಚಗಳನ್ನು ವಲಯ ಆಯುಕ್ತರು ನಿರ್ಧರಿಸಬಹುದಾದಂಥ ಪ್ರಮಾಣಗಳಲ್ಲಿ (1)ನೇ ಉಪ-ಪ್ರಕರಣದಲ್ಲಿ ತಿಳಿಸಿದ ಮಾಲೀಕನು ಸಂದಾಯ ಮಾಡತಕ್ಕದ್ದು.

226. ಬೀದಿಗಳನ್ನು ಸಾರ್ವಜನಿಕವೆಂದು ಘೋಷಿಸಬೇಕಾದ ಮಾಲೀಕನ ಹಕ್ಕು.- ವಲಯ ಆಯುಕ್ತರು, 225ನೇ ಪ್ರಕರಣದ ಅನುಸಾರವಾಗಿ ಕಾಮಗಾರಿಯನ್ನು ಕೈಗೊಂಡರೆ ಬಹುಪಾಲು ಮಾಲೀಕರ ಮನವಿಯ ಮೇರೆಗೆ ಆತನು ಅಂಥ ಬೀದಿಯನ್ನು ಸಾರ್ವಜನಿಕ ಬೀದಿಯನ್ನಾಗಿ ಘೋಷಿಸುವುದು ಹಾಗೂ ಆನಂತರ ಬೀದಿಯು ಪಾಲಿಕೆಯಲ್ಲಿ ನಿಹಿತಗೊಳ್ಳತಕ್ಕದ್ದು.

227. ಬೀದಿಗಳ ಮೇಲೆ ಪ್ರಕ್ಷೇಪಗಳ (projection) ನಿಷೇಧ.- (1) ಸಾರ್ವಜನಿಕರಿಗೆ ನಿರ್ಬಂಧ ಉಂಟುಮಾಡುವ ಅಥವಾ ಅನಾನುಕೂಲವನ್ನು ಉಂಟು ಮಾಡುವ ಅಂಥ ಪ್ರಕ್ಷೇಪಗಳನ್ನು ಯಾವೊಬ್ಬ ವ್ಯಕ್ತಿಯು ನಿಲ್ಲಿಸತಕ್ಕದ್ದಲ್ಲ.

(2) ಅಂಥ ಪ್ರಕ್ಷೇಪಗಳನ್ನು ವ್ಯಕ್ತಿಯು ನಿಲ್ಲಿಸಿದ ಸಂದರ್ಭದಲ್ಲಿ ವಲಯ ಆಯುಕ್ತನು ಅಂಥ ಪ್ರಕ್ಷೇಪಗಳನ್ನು ತೆಗೆದು ಹಾಕುವಂತೆ ಆತನನ್ನು ಅಗತ್ಯಪಡಿಸತಕ್ಕದ್ದು, ವಿಫಲವಾದಲ್ಲಿ ಆತನ ವಿರುದ್ಧ ಸೂಕ್ತ ಕ್ರಮವನ್ನು ಕೈಗೊಳ್ಳಬಹುದು.

(3) ಈ ಅಧಿನಿಯಮದ ಅಥವಾ ಅದರಡಿಯಲ್ಲಿ ನಿಯಮಿಸಿದ ನಿಯಮಗಳ ಅಥವಾ ಉಪವಿಧಿಗಳ ಉಪಬಂಧಗಳನ್ನು ಅನುಷ್ಠಾನಗೊಳಿಸುವುದು ಪಾಲಿಕೆಯ ಕರ್ತವ್ಯವಾಗಿರತಕ್ಕದ್ದು.

228. ಬೀದಿಗಳಲ್ಲಿ ನಿರ್ಬಂಧವನ್ನು ಉಂಟುಮಾಡುವ ರಚನೆಗಳು ಅಥವಾ ಜೋಡಣೆಗಳ ನಿರ್ಬಂಧ.- ವಲಯ ಆಯುಕ್ತನ ಅನುಮತಿಯ ಹೊರತಾಗಿ ಯಾವೊಬ್ಬ ವ್ಯಕ್ತಿಯು ಸ್ಥಿರವಾದ ಅಥವಾ ಚಲಿಸಬಹುದಾದ ಅಥವಾ ಶಾಶ್ವತ ಅಥವಾ ತಾತ್ಕಾಲಿಕ ಸ್ವರೂಪದ ಯಾವುದೇ ಗೋಡೆ, ತಂತಿಬೇಲಿ, ಅಡ್ಡಕಂಬಿ, ಪ್ರಕಟಣೆ, ಮೆಟ್ಟಿಲು, ಗೂಡಂಗಡಿ ಅಥವಾ ಇತರ ರಚನೆಯನ್ನು ನಿಲ್ಲಿಸತಕ್ಕದ್ದಲ್ಲ ಅಥವಾ ಯಾವುದೇ ಬೀದಿಯಲ್ಲಿ ಅಥವಾ ಅದರ ಮೇಲೆ ಅಥವಾ ಯಾವುದೇ ಮುಕ್ತ ಮಾರ್ಗದ ಮೇಲೆ ಯಾವುದೇ ಬೀದಿಯಲ್ಲಿನ ಕಾಲುವೆ, ಬಾವಿ ಅಥವಾ ಕೆರೆಗೆ ನಿರ್ಬಂಧವಾಗುವ ರೀತಿಯಲ್ಲಿ ಅಥವಾ ಒತ್ತುವರಿಯಾಗುವಂತೆ ಅಥವಾ ಪ್ರಕ್ಷೇಪವನ್ನಾಗುವಂತೆ ಜೋಡಣೆಗಳನ್ನು ನಿಲ್ಲಿಸತಕ್ಕದ್ದಲ್ಲ ಅಥವಾ ಅಂಥ ಬೀದಿಯ ಯಾವುದೇ ಭಾಗ, ಮಾರ್ಗ, ಕಾಲುವೆ, ಬಾವಿ ಅಥವಾ ಕೆರೆಯನ್ನು ಸ್ವಾಧೀನಪಡಿಸಿಕೊಳ್ಳತಕ್ಕದ್ದಲ್ಲ.

229. ಒತ್ತುವರಿಗಳನ್ನು ತೆರವುಗೊಳಿಸುವುದು.- (1) ಯಾವುದೇ ಬೀದಿಯಲ್ಲಿರುವ ಮತ್ತು ಅಂಥ ಆವರಣಗಳಿಗೆ ಪ್ರತಿಯಾಗಿ ಅಥವಾ ಎದುರಾಗಿರುವ ಬಾಗಿಲು, ದ್ವಾರ, ಸಲಾಕಿ ಅಥವಾ ನೆಲಮಹಡಿಯ ಕಿಟಕಿ ಯಾವುದೇ ಪ್ರಕ್ಷೇಪವನ್ನು ತೆಗೆದು ಹಾಕುವಂತೆ ಅಥವಾ ಮಾರ್ಪಾಡುಗೊಳಿಸುವಂತೆ ಯಾವುದೇ ಆವರಣಗಳ ಮಾಲೀಕ ಅಥವಾ ಅಧಿಭೋಗದಾರರನ್ನು ಅಗತ್ಯಪಡಿಸಬಹುದುದು.

(2) ಪಾಲಿಕೆಗೆ ಸೇರಿರುವ ಅಥವಾ ಅದರಲ್ಲಿ ನಿಹಿತವಾದ ಅಥವಾ ಅನ್ಯತಾ ಯಾವುದೇ ರಸ್ತೆ ಅಥವಾ ಬೀದಿ ಯಾವುದಾದರೂ ಇದ್ದಲ್ಲಿ ಪಾದಚಾರಿ ಪಥವನ್ನು ಒಳಗೊಂಡು, ಯಾವೊಬ್ಬ ವ್ಯಕ್ತಿಯು ಬೀದಿಯ ಸಂಚಾರ ಮತ್ತು ಬಳಕೆದಾರರಿಗೆ ನಿರ್ಬಂಧ ತಾತ್ಕಾಲಿಕವಾಗಿ ಅಥವಾ ಶಾಶ್ವತವಾಗಿ ಅಥವಾ ಅಡಚಣೆ ಅಥವಾ ಅನಾನುಕೂಲವನ್ನು ಉಂಟು ಮಾಡಲು ಒತ್ತುವರಿ ಮಾಡಿದ್ದನೆಂದು, ವಲಯ ಆಯುಕ್ತನು ಮನಗಂಡರೆ, ವಲಯ ಆಯುಕ್ತನು ಅಂಥ ಒತ್ತುವರಿಗಳನ್ನು ಕೂಡಲೇ ತೆಗೆದುಹಾಕತಕ್ಕದ್ದು.

(3) ತೊರೆಯುವಂತೆ ನಿರ್ದೇಶಿಸಲಾದ ಅಂಥ ವ್ಯಕ್ತಿಯು ಅದನ್ನು ಪಾಲಿಸುವುದು ಮತ್ತು ಆ ವ್ಯಕ್ತಿಯು ತೊರೆಯುವಲ್ಲಿ ವಿಫಲನಾದರೆ, ವಲಯ ಆಯುಕ್ತನು ಅಂಥ ವ್ಯಕ್ತಿಯ ವಿರುದ್ಧವಾಗಿ ಕ್ರಿಮಿನಲ್ ದೂರನ್ನು ದಾಖಲಿಸಬಹುದು.

230. ಬೀದಿಗಳ ದುರಸ್ತಿಯ ಸಮಯದಲ್ಲಿನ ಮುನ್ನೆಚ್ಚರಿಕೆಗಳು.- (1) ಪಾಲಿಕೆಯಲ್ಲಿ ನಿಹಿತವಾದ ಯಾವುದೇ ಸಾರ್ವಜನಿಕ ಬೀದಿಯ ನಿರ್ಮಾಣ ಅಥವಾ ದುರಸ್ತಿಯ ಸಮಯದಲ್ಲಿ ಕಾರ್ಯಸಾಧುವಾಗುವಷ್ಟರ ಮಟ್ಟಿಗೆ ವಲಯ ಆಯುಕ್ತನು.-

(ಎ) ಅದಕ್ಕೆ ಬೇಲಿ ಹಾಕುವಂತೆ ಮತ್ತು ಕಾವಲಿರುವಂತೆ ನೋಡಿಕೊಳ್ಳತಕ್ಕದ್ದು;

(ಬಿ) ಪಕ್ಕದಲ್ಲಿರುವ ಕಟ್ಟಡಗಳನ್ನು ಕಾಪಾಡುವ ಮೂಲಕ ಅಪಘಾತದ ವಿರುದ್ಧ ಸೂಕ್ತ ಮುನ್ನೆಚ್ಚರಿಕೆಗಳನ್ನು ತೆಗೆದುಕೊಳ್ಳತಕ್ಕದ್ದು;

(2) ನಿರ್ಮಾಣ ಅಥವಾ ದುರಸ್ತಿಯು ನಡೆಯುವಾಗ ರಾತ್ರಿಯ ಸಮಯದಲ್ಲಿ ಅಂಥ ಬೀದಿಯನ್ನು ಸಾಕಷ್ಟು ಬೆಳಕಿರುವಂತೆ ವಲಯ ಆಯುಕ್ತನು ನೋಡಿಕೊಳ್ಳತಕ್ಕದ್ದು.

(3) ವಲಯ ಆಯುಕ್ತನು ಸದರಿ ಕಾಮಗಾರಿಯನ್ನು ಕಾರ್ಯಸಾಧ್ಯವಾಗುವಷ್ಟರ ಮಟ್ಟಿಗೆ ಸಾರ್ವಜನಿಕರಿಗೆ ಅನುಕೂಲವಾಗುವಂತೆ ಮತ್ತು ಆದಷ್ಟು ಬೇಗನೆ ಪೂರ್ಣಗೊಳಿಸುವಂತೆ ಮಾಡತಕ್ಕದ್ದು.

231. ಬೀದಿಗಳನ್ನು ಅನುಮತಿ ಇಲ್ಲದೆ ಮುಕ್ತವಾಗಿಸುವಂತಿಲ್ಲ ಅಥವಾ ಭಗ್ನಗೊಳಿಸುವಂತಿಲ್ಲ ಮತ್ತು ಕಟ್ಟಡ ಸಾಮಗ್ರಿಗಳನ್ನು ಅದರ ಮೇಲೆ ಸುರಿಯುವಂತಿಲ್ಲ.- (1) ವಲಯ ಸಮಿತಿಯ

ಸಮಾಲೋಚನೆಯ ಮೇರೆಗೆ ನೀಡತಕ್ಕ ಅಂಥ ಅನುಮತಿಯನ್ನು ವಲಯ ಆಯುಕ್ತ ಲಿಖಿತ ಅನುಮತಿ ಇಲ್ಲದೆ ವಲಯ ಆಯುಕ್ತ ಅಥವಾ ಪಾಲಿಕೆ ನೌಕರನ ಹೊರತಾಗಿ ಯಾವೊಬ್ಬ ವ್ಯಕ್ತಿ ಅಥವಾ ಏಜೆನ್ಸಿಯು ನೀಡತಕ್ಕದ್ದಲ್ಲ,-

(ಎ) ಯಾವುದೇ ಬೀದಿಯ ಭಾಗವಾಗಿ ರೂಪುಗೊಂಡ ಯಾವುದೇ ಸಾಮಗ್ರಿಯನ್ನು ಮುಕ್ತಗೊಳಿಸತಕ್ಕದ್ದಲ್ಲ, ಭಗ್ನಗೊಳಿಸತಕ್ಕದ್ದಲ್ಲ, ಸ್ಥಳಾಂತರಿಸತಕ್ಕದ್ದಲ್ಲ, ಕೈಗೊಳ್ಳತಕ್ಕದ್ದಲ್ಲ ಅಥವಾ ಯಾವುದೇ ಮಾರ್ಪಾಡು ಮಾಡತಕ್ಕದ್ದಲ್ಲ;

(ಬಿ) ಯಾವುದೇ ಬೀದಿಯಲ್ಲಿ ಯಾವುದೇ ಕಟ್ಟಡ ಸಾಮಗ್ರಿಗಳನ್ನು ಸುರಿಯತಕ್ಕದ್ದಲ್ಲ;

(2) ಯಾವುದೇ ಬೀದಿಯಲ್ಲಿ ಸುರಿದ ಅಥವಾ ಹಾಕಿದ (1)ನೇ ಉಪ ಪ್ರಕರಣದಲ್ಲಿ ಉಲ್ಲೇಖಿಸಿದ ಯಾವುದೇ ವಸ್ತುಗಳನ್ನು ಆ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಅನುಮತಿ ಇಲ್ಲದೆ ವಲಯ ಆಯುಕ್ತನು ನೋಟೀಸನ್ನು ನೀಡದೆ ಹೊರಹಾಕಬಹುದು.

232. ಸಾರ್ವಜನಿಕ ಬೀದಿಯಲ್ಲಿ ಯಾವುದೇ ದೋಷದಿಂದ ಉಂಟಾದುದಕ್ಕೆ ನಷ್ಟ ಪರಿಹಾರವನ್ನು ಪಡೆಯುವ ಹಕ್ಕು.- (1) ಒಬ್ಬ ವ್ಯಕ್ತಿಯ ಮೋಟಾರು ವಾಹನ ಅಥವಾ ಯಾವುದೇ ವಾಹನ ಅಥವಾ ಪಾದಚಾರಿಯಾಗಿ ಸಾರ್ವಜನಿಕ ರಸ್ತೆಯ ಮೂಲಕ ಚಲಿಸುತ್ತಿರುವಾಗ ಸಾರ್ವಜನಿಕ ಬೀದಿಯಲ್ಲಿನ ದೋಷದ ಕಾರಣ ಸಂಭವಿಸಿದ ಅಪಘಾತದಿಂದಾಗಿ ಅಂಥ ವ್ಯಕ್ತಿಯು ಮೃತಪಟ್ಟಲ್ಲಿ, ಅವರ ನಿಕಟ ಸಂಬಂಧಿ ಅಥವಾ ಅವಲಂಭಿತರು ಜಂಟಿಯಾಗಿ ಮತ್ತು ಒಟ್ಟಾಗಿ ಪಾಲಿಕೆಯಿಂದ ನಷ್ಟಪರಿಹಾರವನ್ನು ಕ್ಲೇಮು ಮಾಡಲು ಹಕ್ಕನ್ನು ಹೊಂದಿರತಕ್ಕದ್ದು.

(2) ಮೋಟಾರು ವಾಹನ ಅಥವಾ ಯಾವುದೇ ವಾಹನ ಅಥವಾ ಪಾದಚಾರಿಯಾಗಿ ಸಾರ್ವಜನಿಕ ಬೀದಿಯ ಮೇಲೆ ಚಲಿಸುತ್ತಿರುವಾಗ ಸಾರ್ವಜನಿಕ ಬೀದಿಯಲ್ಲಿನ ದೋಷದ ಕಾರಣ ಸಂಭವಿಸಿದ ಅಪಘಾತದಿಂದ ಗಾಯಾಳುವಾಗಿ ಬಳಲುವ ಯಾವೊಬ್ಬ ವ್ಯಕ್ತಿಯು ಪಾಲಿಕೆಯಿಂದ ನಷ್ಟಪರಿಹಾರವನ್ನು ಕ್ಲೇಮು ಮಾಡಲು ಹಕ್ಕುಳ್ಳವನಾಗಿರತಕ್ಕದ್ದು.

(3) ನಷ್ಟಪರಿಹಾರದ ನಿರ್ಧರಣೆ ಮತ್ತು ಪಾವತಿಯ ಕಾರ್ಯವಿಧಾನವನ್ನು ನಿಯಮಗಳು ಮತ್ತು ಉಪವಿಧಿಗಳಲ್ಲಿ ನಿಯಮಿಸಿದ ಅನುಸಾರವಾಗಿ ನಡೆಸತಕ್ಕದ್ದು.

233. ಸಾರ್ವಜನಿಕ ರಸ್ತೆಗಳಿಗೆ ಹೆಸರಿಡುವುದು.- (1) ಮುಖ್ಯ ಆಯುಕ್ತರು, ಪಾಲಿಕೆಯ ಹಾಗೂ ಮೇಯರ್ ಮಂಜೂರಾತಿಯೊಂದಿಗೆ, ಪಾಲಿಕೆಯ ವ್ಯಾಪ್ತಿಗೆ ಸೇರಿದ ಯಾವುದೇ ಬೀದಿ ಅಥವಾ ಸಾರ್ವಜನಿಕ ಸ್ಥಳಕ್ಕೆ ಗುರುತಿಸತಕ್ಕ ಒಂದು ಹೆಸರನ್ನು ನಾಮಕರಣ ಮಾಡಬಹುದು ಮತ್ತು ಬೀದಿಯ ಅಂತಹ ಹೆಸರನ್ನು ಯಾವುದೇ ಸಮಯದಲ್ಲಿ ಬದಲಾಯಿಸಬಹುದು:

ಪರಂತು, ಅಂತಹ ನಾಮಕರಣ ಅಥವಾ ಮರುನಾಮಕಾರಣ ಮಾಡುವ ಮೊದಲು, ಸಂಬಂಧಪಟ್ಟ ವಾರ್ಡ್ ಸಮಿತಿಗಳ ಅಭಿಪ್ರಾಯವನ್ನು ಪರಿಗಣನೆಗೆ ತೆಗೆದುಕೊಳ್ಳತಕ್ಕದ್ದು.

(2) ವಲಯ ಆಯುಕ್ತರ ಆದೇಶದ ಮೂಲಕ, ಹಾಗೆ ಇಡಲಾದ ಅಥವಾ ಬಣ್ಣದಿಂದ ಬರೆಯಲಾದ ಯಾವುದೇ ಹೆಸರನ್ನು, ಯಾರೇ ವ್ಯಕ್ತಿಯು ಕಾನೂನುಬದ್ಧ ಅಧಿಕಾರವಿಲ್ಲದೆ ನಾಶಮಾಡುವುದು, ತೆಗೆದುಹಾಕುವುದು, ಕೆಡವಿಹಾಕುವುದು, ವಿರೂಪಗೊಳಿಸುವುದು ಅಥವಾ ಯಾವುದೇ ರೀತಿಯಲ್ಲಿ ಹಾನಿಗೊಳಿಸುವುದು ಅಥವಾ ಅದರ ಮೇಲೆ ಬಣ್ಣ ಬಳಿಯುವ ಮೂಲಕ ಬದಲಾಯಿಸತಕ್ಕದ್ದಲ್ಲ.

(3) ವಲಯ ಆಯುಕ್ತರು, ಪ್ರತಿಯೊಂದು ಸಾರ್ವಜನಿಕ ಬೀದಿಯ ಹೆಸರನ್ನು ಪ್ರತಿಯೊಂದು ಬೀದಿಯಲ್ಲಿ ಅಥವಾ ಬೀದಿಯ ಕೊನೆಯಲ್ಲಿ, ಮೂಲೆಯಲ್ಲಿ ಅಥವಾ ಪ್ರವೇಶದಲ್ಲಿ, ಕೆಲವು ಕಟ್ಟಡ, ಗೋಡೆ ಅಥವಾ ಸ್ಥಳಗಳಲ್ಲಿ ಎದ್ದುಕಾಣುವ ಭಾಗದಲ್ಲಿ ಇಂಗ್ಲೀಷ್ ಮತ್ತು ಕನ್ನಡದಲ್ಲಿ ಇರಿಸತಕ್ಕದ್ದು ಅಥವಾ ಬಣ್ಣದಲ್ಲಿ ಬರೆಸತಕ್ಕದ್ದು.

234. ಕಟ್ಟಡಗಳಿಗೆ ಸಂಖ್ಯೆ ನೀಡುವುದು.- (1) ವಲಯ ಆಯುಕ್ತರು ಯಾವುದೇ ಕಟ್ಟಡದ ಮುಂಭಾಗದಲ್ಲಿ ಪಕ್ಕಕ್ಕೆ ಅಥವಾ ಹೊರಬಾಗಿಲಿಗೆ ಅಥವಾ ಆವರಣದ ಪ್ರವೇಶದ್ವಾರದಲ್ಲಿರುವ ಯಾವುದಾದರೂ ಸ್ಥಳದಲ್ಲಿ ಸಂಖ್ಯೆಯನ್ನು ಹಾಕುವಂತೆ ಮಾಡತಕ್ಕದ್ದು.

(2) ಕಾನೂನುಬದ್ಧ ಅಧಿಕಾರವನ್ನು ಹೊಂದಿರದ ಯಾರೇ ವ್ಯಕ್ತಿಯು, ಅಂತಹ ಯಾವುದೇ ಸಂಖ್ಯೆಯನ್ನು ನಾಶಮಾಡತಕ್ಕದ್ದಲ್ಲ, ಕೆಡವತಕ್ಕದ್ದಲ್ಲ ಅಥವಾ ವಿರೂಪಗೊಳಿಸತಕ್ಕದ್ದಲ್ಲ.

(3) ಉಪ-ಪ್ರಕರಣ(1)ರ ಮೇರೆಗೆ ಸಂಖ್ಯೆಯನ್ನು ಹಾಕಿರುವಲ್ಲಿ, ಅಂತಹ ಸಂಖ್ಯೆಯನ್ನು ಕಾಪಾಡಿಕೊಳ್ಳುವುದಕ್ಕೆ ಮತ್ತು ಅದನ್ನು ತೆಗೆದುಹಾಕಿದ್ದರೆ ಅಥವಾ ವಿರೂಪಗೊಳಿಸಿದ್ದರೆ ಅದನ್ನು ಬದಲಾಯಿಸುವುದಕ್ಕೆ ಕಟ್ಟಡದ ಮಾಲೀಕನು ಬದ್ಧನಾಗಿರತಕ್ಕದ್ದು. ಆತನು ಹಾಗೆ ಮಾಡಲು ವಿಫಲನಾದರೆ, ವಲಯ ಆಯುಕ್ತರು ನೋಟೀಸು ನೀಡುವ ಮೂಲಕ ಅದನ್ನು ಬದಲಾಯಿಸುವಂತೆ ಆತನನ್ನು ಅಗತ್ಯಪಡಿಸಬಹುದು.

235.ಸಾರ್ವಜನಿಕ ಬೀದಿಗಳಿಗೆ ದೀಪಗಳನ್ನು ಹಾಕುವುದಕ್ಕೆ ಅವಕಾಶ.-1) ಪಾಲಿಕೆಯು ಸಾರ್ವಜನಿಕ ಬೀದಿಗಳಿಗೆ ಬೀದಿದೀಪಗಳನ್ನು ಹಾಕುವಂತೆ ಮಾಡತಕ್ಕದ್ದು ಮತ್ತು ಆ ಉದ್ದೇಶಕ್ಕಾಗಿ ಅಗತ್ಯವಿರಬಹುದಾದಷ್ಟು ಬೀದಿದೀಪಗಳನ್ನು ಒದಗಿಸತಕ್ಕದ್ದು.

(2) ವಲಯ ಆಯುಕ್ತರು ಅಂತಹ ಎಲ್ಲಾ ಸಾರ್ವಜನಿಕ ಬೀದಿಗಳು ಮತ್ತು ಸಾರ್ವಜನಿಕ ಸ್ಥಳಗಳಿಗೆ ಸೂಕ್ತ ರೀತಿಯಲ್ಲಿ ಬೀದಿದೀಪಗಳನ್ನು ಹಾಕಿಸುವುದಕ್ಕಾಗಿ ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು.

(3) ವಲಯ ಆಯುಕ್ತರು ಸದರಿ ಉದ್ದೇಶಕ್ಕಾಗಿ ಅಗತ್ಯವಿರಬಹುದಾದಷ್ಟು ಸಂಖ್ಯೆಯ ಬೀದಿದೀಪಗಳು, ಲ್ಯಾಂಪ್‌ಗಳು, ದೀಪದ ಕಂಬಗಳು ಮತ್ತು ಇತರ ಅಕ್ಸೆಸರಿಗಳ ಖರೀದಿ, ಅಳವಡಿಕೆ ಮತ್ತು ನಿರ್ವಹಣೆಯನ್ನು ಮಾಡತಕ್ಕದ್ದು.

236. ಬೀದಿ ದೀಪಗಳನ್ನು ತೆಗೆಯುವುದಕ್ಕೆ ನಿಷೇಧ.-(1) ಯಾರೇ ವ್ಯಕ್ತಿಯು, ಯಾವುದೇ ಕಾನೂನುಬದ್ಧ ಅಧಿಕಾರವಿಲ್ಲದೆ,

(ಎ) ಯಾವುದೇ ಸಾರ್ವಜನಿಕ ಬೀದಿಯಲ್ಲಿ ಅಥವಾ ಯಾವುದೇ ಸಾರ್ವಜನಿಕ ಸ್ಥಳದಲ್ಲಿ ಅಳವಡಿಸಿದ ಯಾವುವೇ ಬೀದಿದೀಪಗಳು, ಲ್ಯಾಂಪ್ ಅಥವಾ ದೀಪದ ಕಂಬವನ್ನು;

(ಬಿ) ಅಂತಹ ಬೀದಿದೀಪ ಅಥವಾ ಲ್ಯಾಂಪನ್ನು ಬೆಳಗಿಸುವ ಯಾವುದೇ ವಿದ್ಯುತ್ ತಂತಿಯನ್ನು;

-ತೆಗೆದುಕೊಂಡು ಹೋಗುವುದಾಗಲಿ ಅಥವಾ ಉದ್ದೇಶಪೂರ್ವಕವಾಗಿ ಅಥವಾ ನಿರ್ಲಕ್ಷ್ಯದಿಂದ ಒಡೆದುಹಾಕುವುದಾಗಲಿ ಅಥವಾ ಕೆಳಗೆ ಎಸೆಯುವುದಾಗಲಿ ಅಥವಾ ಹಾನಿಗೊಳಿಸುವುದಾಗಲಿ ಮಾಡತಕ್ಕದ್ದಲ್ಲ.

(2) ಯಾವುದೇ ಸಾರ್ವಜನಿಕ ಬೀದಿ ಅಥವಾ ಯಾವುದೇ ಸಾರ್ವಜನಿಕ ಸ್ಥಳದಲ್ಲಿ ಅಳವಡಿಸಿದ ಯಾವುದೇ ಬೀದಿದೀಪ ಅಥವಾ ಲ್ಯಾಂಪನ್ನು ಉದ್ದೇಶಪೂರ್ವಕವಾಗಿ ಅಥವಾ ನಿರ್ಲಕ್ಷ್ಯತೆಯಿಂದ ನಂದಿಸತಕ್ಕದ್ದಲ್ಲ.

(3) ಉಪ-ಪ್ರಕರಣ(1)ರಲ್ಲಿ ವಿವರಿಸಿದ ಯಾವುವೇ ವಸ್ತುಗಳನ್ನು, ಯಾರೇ ವ್ಯಕ್ತಿಯು ಉದ್ದೇಶಪೂರ್ವಕವಾಗಿ ಅಥವಾ ನಿರ್ಲಕ್ಷ್ಯದಿಂದ ಅಥವಾ ಆಕಸ್ಮಿಕವಾಗಿ ಒಡೆದುಹಾಕಿದರೆ ಅಥವಾ ಯಾವುದೇ ರೀತಿಯಲ್ಲಿ ಹಾನಿಗೊಳಿಸಿದರೆ, ಆತನು ಈ ಅಧಿನಿಯಮದ ಮೇರೆಗೆ ಒಳಪಡಬಹುದಾದ ಯಾವುದೇ ದಂಡದ ಜೊತೆಗೆ ಆತನಿಂದ ಉಂಟಾದ ಹಾನಿಯ ದುರಸ್ತಿಗೆ ತಗಲುವ ವೆಚ್ಚವನ್ನು ಆತನು ಸಂದಾಯಮಾಡತಕ್ಕದ್ದು.

237. ಕೆಲವು ಮುಂಚಾಚುಗಳಿಗೆ ಮತ್ತು ನಿರ್ಮಾಣಗಳಿಗೆ ಅವಕಾಶ ಕೊಡಲು ಅಧಿಕಾರ.- (1) ವಲಯ ಆಯುಕ್ತರು, ತಾವು ಸೂಕ್ತವೆಂದು ಭಾವಿಸುವಂತಹ ಪರತ್ತುಗಳು ಮತ್ತು ನಿರ್ಬಂಧಗಳಿಗೆ ಒಳಪಟ್ಟು, ಯಾವುದೇ ಆವರಣದ ಮಾಲೀಕನಿಗೆ ಅಥವಾ ಅಧಿಭೋಗದಾರನಿಗೆ,-

(ಎ) ವರಾಂಡಗಳು, ಬಾಲ್ಕನಿಗಳು, ಬಿಸಿಲು ಮರೆಗಳು, ಗಾಳಿಮಳೆ ಚೌಕಟ್ಟುಗಳು ಮತ್ತು ಅಂತಹವುಗಳನ್ನು ಬೀದಿಯ ಮೇಲೆ ಮುಂಚಾಚಿದಂತೆ ನಿರ್ಮಿಸಲು ಅಥವಾ ಅವುಗಳನ್ನು ಹಾಗೆ ಉಳಿಸಿಕೊಂಡು ಹೋಗಲು; ಅಥವಾ

(ಬಿ) ಯಾವ ಬೀದಿಗಳಲ್ಲಿ ಆರ್ಕೇಡ್‌ಗಳನ್ನು ನಿರ್ಮಿಸಲು ಅಥವಾ ಆರ್ಕೇಡ್‌ಗಳನ್ನು ಉಳಿಸಿಕೊಂಡು ಹೋಗಲು ಪಾಲಿಕೆಯು ಮಂಜೂರಾತಿಯನ್ನು ನೀಡಿದೆಯೋ ಆ ಬೀದಿಗಳಲ್ಲಿ ಆರ್ಕೇಡ್‌ಗಳನ್ನು ನಿರ್ಮಿಸಲು ಅಥವಾ ಉಳಿಸಿಕೊಂಡು ಹೋಗಲು; ಅಥವಾ

(ಸಿ) ಆವರಣದೊಳಗೆ ಪ್ರವೇಶಿಸುವುದಕ್ಕಾಗಿ ಅಗತ್ಯವಾದ ಯಾವುದೇ ಮೆಟ್ಟಿಲನ್ನು ಅಥವಾ ಚರಂಡಿ ಮುಚ್ಚಿಕೆಯನ್ನು ನಿರ್ಮಿಸಲು

- ಲೈಸೆನ್ಸ್‌ನ್ನು ಕೊಡಬಹುದು.

(2) ವಲಯ ಆಯುಕ್ತರು, ಯಾವ ಬೀದಿಯ ಅಥವಾ ಸಾರ್ವಜನಿಕ ಸ್ಥಳದ ನಿಯಂತ್ರಣವು ಪಾಲಿಕೆಯಲ್ಲಿ ನಿಹಿತವಾಗಿದೆಯೋ ಆ ಯಾವುದೇ ಬೀದಿಯಲ್ಲಿ ಅಥವಾ ಆ ಯಾವುದೇ ಸಾರ್ವಜನಿಕ ಸ್ಥಳದಲ್ಲಿ ತಾವು ಸೂಕ್ತವೆಂದು ಭಾವಿಸಬಹುದಾದಂಥ ಪರತ್ತುಗಳಿಗೆ ಮತ್ತು ನಿರ್ಬಂಧಗಳಿಗೆ ಒಳಪಟ್ಟು ಯಾವುದೇ ತಾತ್ಕಾಲಿಕ ನಿರ್ಮಾಣಕ್ಕೆ ಲೈಸೆನ್ಸ್ ಕೊಡಬಹುದು.

(3) ಆ ಮುಂಚಾಚು ಅಥವಾ ನಿರ್ಮಾಣವು ಆರೋಗ್ಯಕ್ಕೆ ಹಾನಿಕರವಾಗುವ ಅಥವಾ ಸಾರ್ವಜನಿಕರಿಗೆ ಅನಾನುಕೂಲ ಉಂಟುಮಾಡುವ ಅಥವಾ ರಸ್ತೆಯನ್ನು ಹಾಗೆ ಉಪಯೋಗಿಸುವುದಕ್ಕೆ ವಾಸ್ತವವಾಗಿ ಅನ್ಯಥಾ ಅಡ್ಡಿ ಉಂಟು ಮಾಡುವ ಸಂಭವವಿದ್ದರೆ (1)ನೇ ಉಪಪ್ರಕರಣದ ಮೇರೆಗೆ ಯಾವುದೇ ಲೈಸೆನ್ಸ್ ಕೊಡತಕ್ಕದ್ದಲ್ಲ.

(4) ಈ ಪ್ರಕರಣದ ಮೇರೆಗೆ ಯಾವ ಅವಧಿಗೆ ಲೈಸೆನ್ಸನ್ನು ಕೊಡಲಾಗಿದೆಯೋ ಆ ಯಾವುದೇ ಅವಧಿಯು ಮುಕ್ತಾಯವಾದ ಮೇಲೆ ಅಥವಾ ಅಂಥ ಲೈಸೆನ್ಸನ್ನು ಅಮಾನತುಗೊಳಿಸುವ ಅಥವಾ ರದ್ದುಗೊಳಿಸುವ ಆದೇಶವನ್ನು ಕ್ರಮಬದ್ಧವಾಗಿ ತಿಳಿಸಿದ ತರುವಾಯ ವಲಯ ಆಯುಕ್ತರು, ನೋಟೀಸು ಕೊಡದೆ (1) ಅಥವಾ (2)ನೇ ಉಪಪ್ರಕರಣದ ಮೇರೆಗೆ ನಿರ್ಮಿಸಿದ ಯಾವುದೇ ಮುಂಚಾಚನ್ನು ಅಥವಾ ನಿರ್ಮಾಣವನ್ನು ತೆಗೆದುಹಾಕಿಸಬಹುದು ಮತ್ತು ಹಾಗೆ ಮಾಡಿದ್ದಕ್ಕೆ ಆದ ಖರ್ಚನ್ನು, ಯಾವ ವ್ಯಕ್ತಿಗೆ ಲೈಸೆನ್ಸನ್ನು ಕೊಡಲಾಗಿತ್ತೋ ಆ ವ್ಯಕ್ತಿಯಿಂದ ವಸೂಲಿ ಮಾಡತಕ್ಕದ್ದು.

(5) ಪಾಲಿಕೆಯು, ಪಾಲಿಕೆಯಲ್ಲಿ ನಿಹಿತವಾಗಿರುವ ರಸ್ತೆಯ ಬದಿಗಳನ್ನು, ಬೀದಿಯ ಅಂಚುಗಳನ್ನು ಅದು ನಿಗದಿಪಡಿಸಬಹುದಾದಂಥ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ಮತ್ತು ಅಂಥ ಅವಧಿಗೆ ಬಾಡಿಗೆಗೆ ಕೊಡಲು ಅಧಿಕಾರ ಹೊಂದಿರತಕ್ಕದ್ದು:

ಪರಂತು, ಸರ್ಕಾರದ ಪೂರ್ವ ಮಂಜೂರಾತಿಯಿಲ್ಲದೆ ಅಂಥ ಯಾವುದೇ ರಸ್ತೆ ಬದಿಗಳನ್ನು ಮತ್ತು ಬೀದಿಯ ಅಂಚುಗಳನ್ನು ಮೂರು ವರ್ಷಗಳಿಗೆ ಮೀರಿದ ಯಾವುದೇ ಅವಧಿಗೆ ಬಾಡಿಗೆಗೆ ಕೊಡತಕ್ಕದ್ದಲ್ಲ:

ಮತ್ತೂ ಪರಂತು, ಈ ಪ್ರಕರಣದ ಮೇರೆಗೆ ಪಾಲಿಕೆಯು ಬಾಡಿಗೆಗೆ ಕೊಟ್ಟ ರಸ್ತೆ ಬದಿಯ ಅಥವಾ ಬೀದಿ ಅಂಚಿನ ಯಾವುದೇ ಅಧಿಭೋಗವು ಆರೋಗ್ಯಕ್ಕೆ ಹಾನಿಕಾರಕವಾಗುವ ಅಥವಾ ಸಾರ್ವಜನಿಕರಿಗೆ ಅನಾನುಕೂಲ ಉಂಟುಮಾಡುವ ಅಥವಾ ರಸ್ತೆಯ ಬದಿಯನ್ನು ಅಥವಾ ಬೀದಿಯ ಅಂಚನ್ನು ಹಾಗೆ ಉಪಯೋಗಿಸಲು ವಾಸ್ತವವಾಗಿ ಅನ್ಯಥಾ ಅಡ್ಡಿಉಂಟುಮಾಡುವ ಸಂಭವವಿದೆ ಎಂದು ಸರ್ಕಾರವು ಪರಿಗಣಿಸಿದರೆ, ಸರ್ಕಾರವು ಬಾಡಿಗೆಗೆ ಕೊಟ್ಟಿರುವುದನ್ನು ರದ್ದುಗೊಳಿಸಲು ಅಥವಾ ಮಾರ್ಪಾಟು ಮಾಡಲು ಪಾಲಿಕೆಗೆ ನಿರ್ದೇಶಿಸಬಹುದು ಮತ್ತು ಪಾಲಿಕೆಯು ಆ ತರುವಾಯ ತದನುಸಾರವಾಗಿ ಬಾಡಿಗೆಗೆ ಕೊಟ್ಟಿರುವುದನ್ನು ರದ್ದುಪಡಿಸತಕ್ಕದ್ದು ಅಥವಾ ಮಾರ್ಪಾಟು ಮಾಡತಕ್ಕದ್ದು.

ಅಧ್ಯಾಯ XVI

ನಗರಯೋಜನೆ ಸಂರಿದಂತೆ ಕಟ್ಟಡಗಳ ವಿನಿಯಮನ

238. ಕಟ್ಟಡ ಉಪ-ವಿಧಿಗಳು (ಬೈ-ಲಾಗಳು).- (1) ಪಾಲಿಕೆಯು ಸರ್ಕಾರದ ಅನುಮೋದನೆಯೊಂದಿಗೆ,

(ಎ) ನಿವೇಶನಗಳು ಅಥವಾ ಕಟ್ಟಡಗಳ ಬಳಕೆಯನ್ನು ವಿನಿಯಮಿಸುವುದಕ್ಕಾಗಿ ಅಥವಾ ನಿರ್ಬಂಧಿಸುವುದಕ್ಕಾಗಿ;

(ಬಿ) ಕಟ್ಟಡಗಳನ್ನು ವಿನಿಯಮಿಸುವುದಕ್ಕಾಗಿ ಅಥವಾ ನಿರ್ಬಂಧಿಸುವುದಕ್ಕಾಗಿ ಉಪ-ವಿಧಿಗಳನ್ನು ರಚಿಸಬಹುದು.

(2) (1)ನೇ ಉಪ-ಪ್ರಕರಣದ (ಬಿ) ಖಂಡದ ಮೂಲಕ ಪ್ರದತ್ತವಾದ ಅಧಿಕಾರದ ಸಾಮಾನ್ಯಾನ್ವಯತೆಗೆ ಬಾಧಕವಾಗದಂತೆ ಈ ಕೆಳಕಂಡ ವಿಷಯಗಳಿಗಾಗಿ ಬೈ-ಲಾಗಳನ್ನುಉಪಬಂಧಿಸಬಹುದು-

(ಎ) ಪಾಲಿಕೆಯ ಅಧಿಕಾರವ್ಯಾಪ್ತಿಯ ಒಳಗೆ ಕಟ್ಟಡ ನಿರ್ಮಾಣ ಮಾಡಲು ಉದ್ದೇಶಿಸಿದ ಯಾರೇ ವ್ಯಕ್ತಿಯು ಪಾಲಿಕೆಗೆ ಸಲ್ಲಿಸಬೇಕೆಂದು ಅಗತ್ಯಪಡಿಸಲಾಗುವ ಮಾಹಿತಿ ಮತ್ತು ನಕ್ಷೆಗಳು.

(ಬಿ) ಕಟ್ಟಡಗಳನ್ನು ನಿರ್ಮಾಣ ಮಾಡಬಹುದಾದ ನಿವೇಶನದ ಮಾದರಿ ಮತ್ತು ಅಂತಹ ನಿರ್ಮಾಣಕ್ಕಾಗಿ ಅನುಮತಿಸಲಾದ ತಾಂತ್ರಿಕ ಗುಣಮಟ್ಟಗಳು.

(ಸಿ) ಕೆಲವು ಮಾದರಿಯ ನಿರ್ಮಾಣಗಳನ್ನು ಯಾವ ಸ್ಥಳಗಳ ಸುತ್ತಮುತ್ತ ಮಾಡಬಾರದೆಂದು ನಿಷೇಧಿಸಲಾಗಿದೆಯೋ ಆ ಸ್ಥಳಗಳ ಪಟ್ಟಿ.

(ಡಿ) ಬೀದಿಯ ವಿಸ್ತೀರ್ಣಕ್ಕೆ ಪರಿಪೂರ್ಣವಾಗಿರಲಿ ಅಥವಾ ಸಂಬಂಧಿತವಾಗಿರಲಿ ನಿರ್ಮಾಣಮಾಡಲು ಉದ್ದೇಶಿಸಿದ ಕಟ್ಟಡದ ಎತ್ತರ.

(ಇ) ನಿರ್ಮಿಸಲು ಕೋರಿರುವ ಕಟ್ಟಡದ ಅಡಿಪಾಯದ ಮಟ್ಟ ಮತ್ತು ಅಗಲ ಹಾಗೂ ನಿರ್ಮಾಣದ ಅತಿಕಡಿಮೆ ಮಹಡಿ ಮತ್ತು ಸ್ಥಿರತೆಯ ಮಟ್ಟ.

(ಎಫ್)ಕಟ್ಟಡದೊಳಗೆ ಮತ್ತು ಹೊರಗೆ ಸಾಕಷ್ಟು ಮುಕ್ತ ಸ್ಥಳಾವಕಾಶ ಮತ್ತುಪರ್ಯಾಪ್ತ ಗಾಳಿ ಬೆಳಕಿನ ವ್ಯವಸ್ಥೆ.

(ಜಿ) ಕಟ್ಟಡದಿಂದ ತ್ಯಾಜ್ಯವನ್ನು ತೆಗೆದು ಹಾಕುವುದಕ್ಕಾಗಿ ದ್ವಿತೀಯ ಸಾಧನಗಳ ಅವಕಾಶ.

(ಎಚ್) ಕಟ್ಟಡದೊಳಗೆ ಹೊರ ಮತ್ತು ವಿಭಾಗ (ಪಾರ್ಟಿ) ಗೋಡೆಗಳು, ಮೇಲ್ಛಾವಣಿಗಳು ಹಾಗೂ ಕಟ್ಟಡದ ಮಹಡಿಗಳನಿರ್ಮಾಣ ಸಾಮಗ್ರಿಗಳು ಮತ್ತು ವಿಧಾನಗಳು.

(ಐ) ಕಟ್ಟಡದ ಒಳ ಅಥವಾ ಹೊರ ಭಾಗದಲ್ಲಿ ಆಂತರಿಕ ಒಳ ರಚನೆಗಳು, ಹೊಗೆ ಹೋಗುವ ಸಾಧನಗಳು, ಚಿಮ್ನಿಗಳು, ಮೆಟ್ಟಿಲುಗಳು, ಪಾಯಿಖಾನೆಗಳು, ಚರಂಡಿಗಳು, ರೊಚ್ಚು ಗುಂಡಿಗಳ ನಿರ್ಮಾಣದ ಸ್ಥಾನ, ಸಾಮಗ್ರಿಗಳು ಮತ್ತು ವಿಧಾನಗಳು.

(ಜೆ) ಕಟ್ಟಡವನ್ನು ನಿರ್ಮಿಸಲುಕೋರಿರುವನಿವೇಶನದೊಳಗಿನಪ್ರಾಂಗಣದಸ್ಥಳ.

(ಕೆ) ಇತರೆ ಸಂಬಂಧಪಟ್ಟ ವಿನಿಯಮಗಳ ಅನುಸಾರವಾಗಿ, ಕಟ್ಟಡದೊಳಗೆ ಧಹನಾನುಕೂಲಿ ವಸ್ತುಗಳ ಬಳಕೆಯ ಮೇಲಿನ ನಿರ್ಬಂಧಗಳು.

(ಎಲ್) ಕಟ್ಟಡದೊಳಗೆ ಲಿಫ್ಟ್‌ಗಳ ವ್ಯವಸ್ಥೆ.

(ಎಂ) ಅಗ್ನಿಶಾಮಕ ಯೋಜನೆ ಅನುಸಾರ ಕಟ್ಟಡದೊಳಗೆ ಅಗತ್ಯ ಅಗ್ನಿಶಾಮಕಸಾಧನ.

(ಎನ್) ಕಟ್ಟಡದೊಳಗೆ ಅಗತ್ಯವಾದ ಕನಿಷ್ಠ ನೆಡುತೋಪು (ಪ್ಲಾಂಟೇಷನ್).

(ಓ) ಕಟ್ಟಡದೊಳಗೆ ಮಳೆನೀರುಕೋಯ್ಲು ವ್ಯವಸ್ಥೆಗಳ ಅಳವಡಿಕೆ.

(ಪಿ) ಕಟ್ಟಡಗಳ ನಿರ್ಮಾಣ ಅವಧಿಯಲ್ಲಿ ಬಳಸಬೇಕಾಗುವ ಸಾಮಗ್ರಿಗಳ ಕನಿಷ್ಠ ಗುಣಮಟ್ಟ.

239. ಮಂಜೂರಾತಿ ಪಡೆಯದ ಕಟ್ಟಡ ನಿರ್ಮಾಣದ ನಿಷೇಧ.-(1) ಯಾರೇ ವ್ಯಕ್ತಿಯು, 238ನೇ ಪ್ರಕರಣದ ಅಡಿಯಲ್ಲಿ ಹೊರಡಿಸಿದ ಕಟ್ಟಡ ಬೈ-ಲಾಗಳ ಅನುಸಾರವಾಗಿ ಹಾಗೂ ನಿರ್ಮಾಣ ಕೈಗೊಳ್ಳಲು ಪಾಲಿಕೆಯ ಅನುಮತಿಯ ಹೊರತು ಪಾಲಿಕೆಯ ಅಧಿಕಾರ ವ್ಯಾಪ್ತಿಯೊಳಗೆ ಯಾವುದೇ ಕಟ್ಟಡ ಅಥವಾ ಶಾಶ್ವತ ಸ್ವರೂಪದ ಯಾವುದೇ ನಿರ್ಮಿತಿಯನ್ನು ನಿರ್ಮಿಸತಕ್ಕದ್ದಲ್ಲ ಅಥವಾ ಪ್ರಸ್ತುತ ಇರುವ ಕಟ್ಟಡಕ್ಕೆ ಸೇರ್ಪಡೆ, ಬದಲಾವಣೆ ಮತ್ತು ಮಾರ್ಪಾಡು ಸೇರಿದಂತೆ ಕಟ್ಟಡ ನಿರ್ಮಾಣಕ್ಕೆ ಸಂಬಂಧಪಟ್ಟ ಯಾವುದೇ ಕಾರ್ಯವನ್ನು ನಿರ್ವಹಿಸತಕ್ಕದ್ದಲ್ಲ.

240. ಕಟ್ಟಡಯೋಜನೆಯಮಂಜೂರಾತಿಗಾಗಿಪ್ರಕ್ರಿಯೆ.- (1) ಯಾರೇ ವ್ಯಕ್ತಿ ಕಟ್ಟಡ ನಿರ್ಮಾಣ ಅಥವಾ ಪುನರ್-ನಿರ್ಮಾಣ ಮಾಡಲು ಉದ್ದೇಶಿಸಿದ್ದಲ್ಲಿ, ಅನುಮತಿಗಾಗಿ ಅವನು ಅಂಥ ಕಟ್ಟಡ ನಿರ್ಮಾಣ ಅಥವಾ ಪುನರ್-ನಿರ್ಮಾಣ ಕಾರ್ಯ ಕೈಗೊಳ್ಳಲು ನಿಗದಿಪಡಿಸಿದ ದಸ್ತಾವೇಜುಗಳೊಂದಿಗೆ ವಲಯ ಆಯುಕ್ತರಿಗೆ ಅರ್ಜಿಯನ್ನು ಸಲ್ಲಿಸತಕ್ಕದ್ದು.

(2) ವಲಯ ಆಯುಕ್ತರು (1)ನೇ ಉಪ-ಪ್ರಕರಣದ ಮೇರೆಗೆ ಅರ್ಜಿಯನ್ನು ಸ್ವೀಕರಿಸಿದ ಮೇಲೆ, ಕಟ್ಟಡ ಬೈ-ಲಾಗಳಿಗೆ ಅನುಗುಣವಾಗಿದ್ದಲ್ಲಿ, ಅರ್ಜಿಯನ್ನು ಪರಿಶೀಲಿಸಿ, ಕಟ್ಟಡ ನಿರ್ಮಾಣ ಕೈಗೊಳ್ಳಲು ಅನುಮತಿ ನೀಡತಕ್ಕದ್ದು ಅಥವಾ ಅರ್ಜಿಯು ಕಟ್ಟಡ ಬೈ-ಲಾಗಳಿಗೆ ಅನುಗುಣವಾಗಿಲ್ಲದಿದ್ದಲ್ಲಿ ಅಂಥ ಅರ್ಜಿಗಳನ್ನು ತಿರಸ್ಕರಿಸತಕ್ಕದ್ದು.

(3) ಪಾಲಿಕೆಯು ಕಟ್ಟಡಬೈ-ಲಾಗಳ ಅನುಮತಿ ಅಥವಾ ತಿರಸ್ಕಾರಗಳಿಗಾಗಿ ಪರತ್ತುಗಳನ್ನು ಗೊತ್ತುಪಡಿಸತಕ್ಕದ್ದು.

(4) ವಲಯ ಆಯುಕ್ತರು (1)ನೇ ಉಪಪ್ರಕರಣದ ಮೇರೆಗಿನ ಅರ್ಜಿಯನ್ನು ಪರಿಶೀಲಿಸುವಾಗ, ಅರ್ಜಿಯ ಪ್ರಕ್ರಿಯೆಗೆ ಸಂಬಂಧಿಸಿದಂಥ ಅಗತ್ಯ ಮಾಹಿತಿಗಾಗಿ ವಾರ್ಡ್ ಸಮಿತಿಗಳ ಅಧಿಕಾರಿಗಳನ್ನು ಕೋರಬಹುದು.

(5) ವಲಯ ಆಯುಕ್ತರು (1)ನೇಉಪ-ಪ್ರಕರಣದ ಮೇರೆಗೆ ಸ್ವೀಕರಿಸಿದ ಯಾವುದೇ ಅರ್ಜಿಯನ್ನು ಮುಖ್ಯ ಆಯುಕ್ತರಿಗೆ ಕಳುಹಿಸಬೇಕಾದ ಅಗತ್ಯವಿದ್ದಲ್ಲಿ, ಅವರುಅಧಿನಿಯಮದ ಅನುಸಾರವಾಗಿ ಮೇಯರ್ ಅಥವಾ ಯಾವುದೇ ಇತರ ಸಮುಚಿತ ಪಾಲಿಕೆ ಪ್ರಾಧಿಕಾರದೊಂದಿಗೆ ಸಮಾಲೋಚಿಸಿ ಅಂಥ ಅರ್ಜಿಯ ಬಗ್ಗೆ ನಿರ್ಧರಿಸಬಹುದು.

(6) ವಲಯ ಆಯುಕ್ತರು, ನಿಗದಿಪಡಿಸಿದ ಅವಧಿಯೊಳಗೆ (1)ನೇ ಉಪ-ಪ್ರಕರಣದ ಮೇರೆಗೆ ಸ್ವೀಕರಿಸಲಾದ ಯಾವುದೇ ಅರ್ಜಿಗೆ ಸಂಬಂಧಿಸಿದ ಪ್ರಕ್ರಿಯೆಯನ್ನು ಪೂರ್ಣಗೊಳಿಸತಕ್ಕದ್ದು ಹಾಗೂ ವಲಯ ಆಯುಕ್ತರು ನಿಗದಿಪಡಿಸಿದಅವಧಿಯೊಳಗೆ ಅಂಥ ಅರ್ಜಿ ಕುರಿತು ಯಾವುದೇ ನಿರ್ಣಯ ತಿಳಿಸದಿದ್ದ ಸಂದರ್ಭದಲ್ಲಿಅನುಮತಿ ನೀಡಲಾಗಿದೆ ಎಂದು ಭಾವಿಸತಕ್ಕದ್ದು.

ಪರಂತು, (4)ನೇ ಉಪ-ಪ್ರಕರಣದ ಮೇರೆಗೆ ಮುಖ್ಯ ಆಯುಕ್ತರಿಗೆ ಕಳುಹಿಸಲಾದ ಅರ್ಜಿಗೆ ಸಂಬಂಧಪಟಂತೆ ಹಾಗೆ ಅನುಮೋದನೆ ನೀಡಲಾಗಿದೆಯೆಂದು ಭಾವಿಸತಕ್ಕದ್ದಲ್ಲ.

(7) ಈ ಪ್ರಕರಣದ ಅಡಿಯಲ್ಲಿ ನೀಡಿದ ಕಟ್ಟಡ ನಕ್ಷೆಗೆ ಸಂಬಂಧಿಸಿದ ಯಾವುದೇ ಅನುಮೋದನೆಯು ಐದು ವರ್ಷಗಳವರೆಗೆ ಸಿಂಧುವಾಗಿರತಕ್ಕದ್ದು. ಆನಂತರ ಅನುಮತಿಗಾಗಿ ಹೊಸ ಅರ್ಜಿಯನ್ನು ಸಲ್ಲಿಸತಕ್ಕದ್ದು.

(8) ಕಟ್ಟಡ ನಕ್ಷೆಯ ಮಂಜೂರಾತಿಯನ್ನು ಪಡೆಯದೇ ಕಟ್ಟಡ ನಿರ್ಮಿಸುವಂಥ ಯಾರೇ ವ್ಯಕ್ತಿಗೆ ಗೊತ್ತುಪಡಿಸಿದ ದಂಡವನ್ನು ಪಾವತಿಸುವಂತೆ ಹಾಗೂ ಈ ಅಧ್ಯಾಯದ ಅನುಸಾರ ಕಟ್ಟಡ ಯೋಜನೆಯ ಅನುಮತಿಗಾಗಿ ಅರ್ಜಿಸಲ್ಲಿಸುವಂತೆ ಅಗತ್ಯಪಡಿಸತಕ್ಕದ್ದು.

(9) ಮಂಜೂರಾತಿ ನೀಡಿದ ಕಟ್ಟಡ ನಕ್ಷೆಯ ಅನುಸಾರವಾಗಿ ಕಟ್ಟಡ ನಿರ್ಮಾಣ ಮಾಡದಿರುವಂಥ ಯಾರೇ ವ್ಯಕ್ತಿಗೆ ಮಂಜೂರಾತಿ ನೀಡಿದ ಕಟ್ಟಡ ಯೋಜನೆಯ ಅನುಸಾರವಾಗಿ ಕಟ್ಟಡವನ್ನು ಮಾರ್ಪಾಡು ಅಥವಾ ಬದಲಾವಣೆ ಕೈಗೊಳ್ಳುವಂತೆ ವಲಯ ಆಯುಕ್ತರು ನಿರ್ದೇಶಿಸಬಹುದು.

(10) ವಲಯ ಆಯುಕ್ತರು ಅಥವಾ ಅವರು ಅಧಿಕೃತಗೊಳಿಸಿದಂಥ ಅಧಿಕಾರಿಗಳು ಈ ಅಧಿನಿಯಮದ ಉಪಬಂಧಗಳನ್ನು ಜಾರಿಮಾಡುವ ಉದ್ದೇಶಗಳಿಗಾಗಿ ಅಗತ್ಯವಿರುವಂತೆ ಕಟ್ಟಡಗಳ ಯಾದೃಚ್ಛಿಕ ಪ್ರತ್ಯಕ್ಷ ಪರಿಶೀಲನೆಯನ್ನು ಕೈಗೊಳ್ಳಬಹುದು.

(11) ಈ ಪ್ರಕರಣದಲ್ಲಿ ಒಳಗೊಂಡಿರುವುದು ಏನೇ ಇದ್ದರೂ, ಯಾವುದಾದರೂ ನಿರ್ಮಾಣದಿಂದ ಮನುಷ್ಯ ಜೀವಕ್ಕೆ ಅಪಾಯವುಂಟಾಗುತ್ತದೆಂದು ವಲಯ ಆಯುಕ್ತರು ಅಭಿಪ್ರಾಯಪಟ್ಟರೆ, ಅಂತಹ ಯಾವುದೇ ನಿರ್ಮಾಣವನ್ನು ನಿಲ್ಲಿಸುವುದಕ್ಕಾಗಿ ಆದೇಶವನ್ನು ಮಾಡುವ ಅಧಿಕಾರವನ್ನು ಅವರು ಹೊಂದಿರತಕ್ಕದ್ದು.

241. ಮಳೆ ನೀರು ಕೊಯ್ಲು ನಿರ್ಮಿತಿಯನ್ನು ಒದಗಿಸುವ ಹೊಣೆಗಾರಿಕೆ.- (1) 108 ಚದರ ಮೀಟರಗಿಂತ ಕಡಿಮೆಯಲ್ಲದ ನಿವೇಶನದಲ್ಲಿ ಕಟ್ಟಡವನ್ನು ನಿರ್ಮಿಸುವ ಉದ್ದೇಶವನ್ನು ಹೊಂದಿರುವ ಪ್ರತಿಯೊಬ್ಬ ಮಾಲೀಕನು, ಪಾಲಿಕೆಯು ಹೊರಡಿಸಿದ ವಿನಿಯಮಗಳು ಮತ್ತು ಮಾರ್ಗಸೂಚಿಗಳಲ್ಲಿ

ಉಪಬಂಧಿಸಬಹುದಾದ ಅಂಥ ರೀತಿಯಲ್ಲಿ ಮತ್ತು ಅಂಥ ಪರತ್ತುಗಳಿಗೆ ಒಳಪಟ್ಟು,ಶೇಖರಣೆಗಾಗಿ, ಬಳಕೆಗಾಗಿ ಅಥವಾ ಅಂತರ್ಜಲ ಮರುಪೂರಣಕ್ಕಾಗಿ ಮಳೆ ನೀರು ಕೊಯ್ಲು ನಿರ್ಮಿತಿಯನ್ನು ಒದಗಿಸತಕ್ಕದ್ದು.

(2) 216 ಚ.ಮಿ. ಗಳಿಗಿಂತ ಕಡಿಮೆಯಿರದ ನಿವೇಶನ ಪ್ರದೇಶದ ಮೇಲೆ ಕಟ್ಟಡವನ್ನು ನಿರ್ಮಿಸಲು ಉದ್ದೇಶಿಸಿರುವ ಪ್ರತಿಯೊಬ್ಬ ಮಾಲೀಕನು ಅಥವಾ 216 ಚ.ಮಿ. ಗಳಿಗಿಂತ ಕಡಿಮೆಯಿರದ ನಿವೇಶನ ಪ್ರದೇಶದಲ್ಲಿ ಕಟ್ಟಡವನ್ನು ಹೊಂದಿರುವ ಪ್ರತಿಯೊಬ್ಬ ಮಾಲೀಕ ಅಥವಾ ಅಧೀಭೋಗದಾರನು ಪಾಲಿಕೆಯು ಹೊರಡಿಸಿದ ವಿನಿಯಮಗಳು ಮತ್ತು ಮಾರ್ಗಸೂಚಿಗಳಲ್ಲಿ ನಿರ್ದಿಷ್ಟಪಡಿಸಬಹುದಾದ ಅಂಥ ಪರತ್ತುಗಳಿಗೆ ಒಳಪಟ್ಟು ಶೇಖರಣೆಗಾಗಿ, ಬಳಕೆಗಾಗಿ ಅಥವಾ ಅಂತರ್ಜಲ ಮರುಪೂರಣಕ್ಕಾಗಿ ಮಳೆ ನೀರು ಕೊಯ್ಲು ನಿರ್ಮಿತಿಯನ್ನು ಒದಗಿಸತಕ್ಕದ್ದು.

(3) ಈ ಅಧಿನಿಯಮವು ಪ್ರಾರಂಭವಾಗುವುದಕ್ಕಿಂತ ಮುಂಚೆ ಮಳೆ ನೀರು ಕೊಯ್ಲು ನಿರ್ಮಿತಿಯನ್ನು ಕಲ್ಪಿಸದಿರುವ 1000 ಚ.ಮಿ. ಗಳಿಗಿಂತ ಕಡಿಮೆಯಿರದ ವಿಸ್ತೀರ್ಣದಲ್ಲಿ ಕಟ್ಟಡವನ್ನು ನಿರ್ಮಿಸಲು ಉದ್ದೇಶಿಸಿರುವ ಮಾಲೀಕ ಅಥವಾ 1000 ಚ.ಮಿ. ಗಿಂತ ಕಡಿಮೆಯಿರದ ವಿಸ್ತೀರ್ಣದಲ್ಲಿ ಕಟ್ಟಡವನ್ನು ಹೊಂದಿರುವ ಮಾಲೀಕನು ಛಾವಣಿಯಿಂದ ಬೀಳುವ ಮಳೆ ನೀರು ಸಂಗ್ರಹಣೆ ಹಾಗೂ ಮರು ಬಳಕೆಗಾಗಿ ಮತ್ತು ಕಲ್ಲು ಹಾಸು ಮತ್ತು ಕಲ್ಲು ಹಾಸು ಇಲ್ಲದ ಜಾಗದಿಂದ ಬರುವ ಮಳೆ ನೀರನ್ನು ಅಂತರ್ ಜಲ ಮರುಪೂರ್ಣಕ್ಕಾಗಿ ಪಾಲಿಕೆಯು ಹೊರಡಿಸಿದ ವಿನಿಯಮಗಳು ಹಾಗೂ ಮಾರ್ಗಸೂಚಿಗಳಲ್ಲಿ ಉಪಬಂಧಿಸಬಹುದಾದಂಥ ರೀತಿಯಲ್ಲಿ ಹಾಗೂ ಅಂಥ ಪರತ್ತುಗಳಿಗೊಳಪಟ್ಟು ಮಳೆ ನೀರು ಕೊಯ್ಲು ನಿರ್ಮಿತಿ ಹಾಗೂ ದ್ವಿ ಕೊಳವೆ ವ್ಯವಸ್ಥೆಯನ್ನುಕಲ್ಪಿಸತಕ್ಕದ್ದು.

ವಿವರಣೆ: ಈ ಪ್ರಕರಣದ ಉದ್ದೇಶಕ್ಕಾಗಿ,-

(ಎ) "ಮಳೆ ನೀರು ಕೊಯ್ಲು" ಎಂದರೆ, ಪುನರ್‌ಬಳಕೆ ಅಥವಾ ಅಂತರ್ಜಲ ಮರುಪೂರಣಕ್ಕಾಗಿ, ಕಟ್ಟಡದ ಮೇಲ್ಛಾವಣಿಯಿಂದ ಬೀಳುವ ಅಥವಾ ಖಾಲಿ ಭೂಮಿಯಿಂದ ಮಳೆ ನೀರಿನ ಶೇಖರಣೆ ಮತ್ತು ಸಂಗ್ರಹಣೆ; ಮತ್ತು

(ಬಿ) "ಅಂತರ್ಜಲ ಮರುಪೂರಣ" ಎಂದರೆ, ಕೊಯ್ಲು ಮಾಡಿದ ಮಳೆ ನೀರಿನ ಬಳಕೆಯಿಂದ ತೆರೆದ ಬಾವಿ ಅಥವಾ ಸಂದರ್ಭಾನುಸಾರವಾಗಿ ಅಂತರ್ಜಲ ನೀರಿನ ಮಟ್ಟವನ್ನು ಹೆಚ್ಚಿಸಲು ಮರುಪೂರಣ ಮಾಡುವುದು:

242. ಕಟ್ಟಡದ ನಿರ್ಮಾಣ ಅಥವಾ ಪುನರ್ ನಿರ್ಮಾಣಕ್ಕೆ ಅರ್ಜಿ.- (1) ಯಾರೇ ವ್ಯಕ್ತಿಯು, ಕಟ್ಟಡವನ್ನು ನಿರ್ಮಿಸಲು ಅಥವಾ ಪುನರ್ ನಿರ್ಮಿಸಲು ಉದ್ದೇಶಿಸಿದರೆ, ಅವನು ಕಾಮಗಾರಿಯನ್ನು ನಿರ್ವಹಿಸಲು ಅನುಮತಿಗಾಗಿ ಲಿಖಿತ ಅರ್ಜಿಯನ್ನು, ಭೂಮಿಯ ನಿವೇಶನ ಸ್ಥಳದ ನಕ್ಷೆ, ನೆಲನಕ್ಷೆ, ಕಟ್ಟಡದ ಹೊರನೋಟ ನಕ್ಷೆಗಳು ಮತ್ತು ಖಂಡ ಚಿತ್ರಗಳು, ಕಾಮಗಾರಿಯ ತಪಶೀಲು ಮತ್ತು ನಿಯಮಿಸಬಹುದಾದಂಥ ಇತರ ದಸ್ತಾವೇಜುಗಳೊಂದಿಗೆ ವಲಯ ಆಯುಕ್ತರಿಗೆ ಕಳುಹಿಸತಕ್ಕದ್ದು.

ವಿವರಣೆ:- ಈ ಉಪ-ಪ್ರಕರಣದಲ್ಲಿ `ಕಟ್ಟಡ' ಎಂಬುದು ಯಾವುದೇ ಸಾರ್ವಜನಿಕ ಬೀದಿಯ ಎಲ್ಲೆ ಗೆರೆಯಲ್ಲಿರುವ ಅಥವಾ ಅದಕ್ಕೆ ಲಗತ್ತಾಗಿರುವ ಯಾವುದೇ ಎತ್ತರದ ಗೋಡೆ ಅಥವಾ ಬೇಲಿಯನ್ನು ಒಳಗೊಳ್ಳತಕ್ಕದ್ದು.

(2) ಉಪ-ಪ್ರಕರಣ (1)ರ ಮೇರೆಗೆ ಒದಗಿಸಿದ ಪ್ರತಿಯೊಂದು ದಸ್ತಾವೇಜು, ನಿಯಮಗಳ ಅಥವಾ ಉಪವಿಧಿಗಳ ಮೇರೆಗೆ ಅಗತ್ಯಪಡಿಸಬಹುದಾದಂತಹ ವಿವರಗಳನ್ನು ಒಳಗೊಂಡಿರತಕ್ಕದ್ದು ಮತ್ತು ಅದನ್ನು ಅಂಥ ರೀತಿಯಲ್ಲಿ ಸಿದ್ಧಪಡಿಸತಕ್ಕದ್ದು.

243. ಕಾಮಗಾರಿಯನ್ನು ನಿರ್ವಹಿಸಲು ವಲಯ ಆಯುಕ್ತರು ಯಾವ ಅವಧಿಯೊಳಗೆ ಅನುಮತಿಯನ್ನು ಕೊಡಬಹುದೋ ಅಥವಾ ಅನುಮತಿಯನ್ನು ನಿರಾಕರಿಸಬಹುದೋ ಆ ಅವಧಿ.- ಯಾವುದೇ ಕಾಮಗಾರಿಯನ್ನು ನಿರ್ವಹಿಸಲು ಅನುಮತಿಗಾಗಿ 242ನೇ ಪ್ರಕರಣದ ಮೇರೆಗೆ ಸಲ್ಲಿಸಿದ ಯಾವುದೇ ಅರ್ಜಿಯನ್ನು ನಿಯಮಗಳ ಅಥವಾ ಉಪವಿಧಿಗಳ ಮೇರೆಗೆ ಅಗತ್ಯಪಡಿಸಿದ ಯಾವುದೇ ಮಾಹಿತಿಯನ್ನು ಅಥವಾ ದಸ್ತಾವೇಜುಗಳನ್ನು ಅಥವಾ ಯಾವುದೇ ಹೆಚ್ಚಿನ ಮಾಹಿತಿಯನ್ನು ಅಥವಾ ದಸ್ತಾವೇಜುಗಳನ್ನು ಸ್ವೀಕರಿಸಿದ ತರುವಾಯ ಮೂವತ್ತು ದಿವಸಗಳೊಳಗಾಗಿ ಆಯುಕ್ತರು ಲಿಖಿತ ಆದೇಶದ ಮೂಲಕ ಅಂಥ ಅನುಮತಿಯನ್ನು ನೀಡತಕ್ಕದ್ದು ಅಥವಾ 244ನೇ ಪ್ರಕರಣದಲ್ಲಿ ಅಥವಾ 245ನೇ ಪ್ರಕರಣಗಳಲ್ಲಿ ತಿಳಿಸಿದ ಒಂದು ಅಥವಾ ಹೆಚ್ಚು ಕಾರಣಗಳ ಮೇಲೆ ಅನುಮತಿಯನ್ನು ನೀಡಲು ನಿರಾಕರಿಸತಕ್ಕದ್ದು.

(2) ವಲಯ ಆಯುಕ್ತರು ಸದರಿ ಮೂವತ್ತು ದಿವಸಗಳ ಅವಧಿಯೊಳಗಾಗಿ ಯಾವುದೇ ಆದೇಶವನ್ನು ಹೊರಡಿಸದಿದ್ದರೆ, ಅರ್ಜಿದಾರನು ತನ್ನ ಅರ್ಜಿಯ ಬಗ್ಗೆ ಅಗತ್ಯವಾದ ಆದೇಶವನ್ನು ಹೊರಡಿಸುವಂತೆ ಮುಖ್ಯ ಆಯುಕ್ತರನ್ನು ಕೋರಿ ಅವರ ಹೆಸರಿಗೆ ಪತ್ರವನ್ನು ಬರೆಯಬಹುದು ಮತ್ತು ಮುಖ್ಯ ಆಯುಕ್ತರು ಅಂಥ ಪತ್ರವನ್ನು ಸ್ವೀಕರಿಸಿದ ದಿನಾಂಕದಿಂದ ಇನ್ನೂ ಮೂವತ್ತು ದಿವಸಗಳ ಅವಧಿಯೊಳಗೆ ಲಿಖಿತ ಆದೇಶದ ಮೂಲಕ ಅನುಮತಿಯನ್ನು ನೀಡತಕ್ಕದ್ದು. ಇಲ್ಲವೇ 244ನೇ ಪ್ರಕರಣದಲ್ಲಿ ಅಥವಾ 245ನೇ ಪ್ರಕರಣದಲ್ಲಿ ತಿಳಿಸಿದ ಒಂದು ಅಥವಾ ಹೆಚ್ಚಿನ ಕಾರಣಗಳ ಮೇಲೆ ಅದನ್ನು ನೀಡಲು ನಿರಾಕರಿಸತಕ್ಕದ್ದು.

244. ಯಾವ ಕಾರಣಗಳ ಮೇಲೆ ಕಟ್ಟಡ ನಿರ್ಮಾಣಕ್ಕಾಗಿ ನಿವೇಶನಕ್ಕೆ ಅನುಮೋದನೆಯನ್ನು ಅಥವಾ ಕಟ್ಟಡ ನಿರ್ಮಾಣಕ್ಕೆ ಅನುಮತಿಯನ್ನು ನಿರಾಕರಿಸಬಹುದೋ ಆ ಕಾರಣಗಳು.- (1) ಯಾವ ಕಾರಣಗಳ ಮೇಲೆ ಮಾತ್ರವೇ ಕಟ್ಟಡ ನಿರ್ಮಾಣಕ್ಕಾಗಿ ಅಥವಾ ಪುನರ್‌ನಿರ್ಮಾಣಕ್ಕಾಗಿ ನಿವೇಶನಕ್ಕೆ ಅನುಮೋದನೆಯನ್ನು ಅಥವಾ ಕಟ್ಟಡ ನಿರ್ಮಾಣಕ್ಕೆ ಅಥವಾ ಪುನರ್ ನಿರ್ಮಾಣಕ್ಕೆ ಅನುಮತಿಯನ್ನು ನಿರಾಕರಿಸಬಹುದೋ, ಆ ಕಾರಣಗಳು, ಕೆಳಕಂಡಂತಿವೆ, ಎಂದರೆ,-

(ಎ) ಕಾಮಗಾರಿಯು ಅಥವಾ ಕಾಮಗಾರಿಗಾಗಿ ನಿವೇಶನದ ಬಳಕೆಯು ಅಥವಾ ನಿವೇಶನದ ನಕ್ಷೆ, ನೆಲನಕ್ಷೆ, ಕಟ್ಟಡದ ಹೊರನೋಟ ನಕ್ಷೆಗಳು, ಖಂಡಚಿತ್ರಗಳು ಅಥವಾ ತಪಶೀಲುಗಳಲ್ಲಿ ಒಳಗೊಂಡಿರುವ ಯಾವುದೇ ವಿವರವು ಯಾವುದೇ ಕಾನೂನಿನ ಯಾವುದೇ ನಿರ್ದಿಷ್ಟ ಉಪಬಂಧಗಳನ್ನು ಅಥವಾ ಯಾವುದೇ ಕಾನೂನಿನ ಮೇರೆಗೆ ರಚಿಸಿದ ಯಾವುದೇ ನಿರ್ದಿಷ್ಟ ಆದೇಶವನ್ನು, ನಿಯಮವನ್ನು, ಘೋಷಣೆಯನ್ನು ಅಥವಾ ಉಪವಿಧಿಯನ್ನು ಉಲಂಘಿಸುವುದು;

(ಬಿ) ಅಂಥ ಅನುಮತಿಗಾಗಿ ಸಲ್ಲಿಸಿದ ಅರ್ಜಿಯು ನಿಯಮಗಳ ಅಥವಾ ಉಪವಿಧಿಗಳ ಮೇರೆಗೆ ಅಗತ್ಯಪಡಿಸಿದ ರೀತಿಯಲ್ಲಿ ವಿವರಗಳನ್ನು ಒಳಗೊಂಡಿರದಿರುವುದು ಅಥವಾ ಅಂಥ ರೀತಿಯಲ್ಲಿ ತಯಾರಿಸಿಲ್ಲದಿರುವುದು;

(ಸಿ) 242ನೇ ಪ್ರಕರಣದಲ್ಲಿ ತಿಳಿಸಿದ ಯಾವುವೇ ದಸ್ತಾವೇಜುಗಳಿಗೆ ನಿಯಮಗಳ ಅಥವಾ ಉಪವಿಧಿಗಳ ಮೇರೆಗೆ ಅಗತ್ಯಪಡಿಸಿದಂತೆ ರುಜು ಮಾಡದಿರುವುದು;

(ಡಿ) ನಿಯಮಗಳ ಅಥವಾ ಉಪವಿಧಿಗಳ ಮೇರೆಗೆ ವಲಯ ಆಯುಕ್ತರು ಅಗತ್ಯಪಡಿಸಿದ ಯಾವುದೇ ಮಾಹಿತಿಯನ್ನು ಅಥವಾ ದಸ್ತಾವೇಜುಗಳನ್ನು ಯಥೋಚಿತವಾಗಿ ಒದಗಿಸಿಲ್ಲದಿರುವುದು;

(ಇ) 216ನೇ ಪ್ರಕರಣದ ಮೂಲಕ ಅಗತ್ಯಪಡಿಸಿದಂತೆ ಬೀದಿಗಳನ್ನು ಅಥವಾ ರಸ್ತೆಗಳನ್ನು ನಿರ್ಮಿಸದೇ ಇರುವುದು;

(ಎಫ್) ಉದ್ದೇಶಿತ ಕಟ್ಟಡವು ಸರ್ಕಾರದ ಅಥವಾ ಪಾಲಿಕೆಯ ಭೂಮಿಯನ್ನು ಒತ್ತುವರಿ ಮಾಡಿರುವುದು;

(ಜಿ) ಅಂಥ ಕಟ್ಟಡದ ನಿವೇಶನವು ಬೀದಿಗೆ ಅಥವಾ ಯೋಜಿತ ಬೀದಿಗೆ ಹೊಂದಿಕೊಂಡಿಲ್ಲದಿರುವುದು ಮತ್ತು ಅಂಥ ನಿವೇಶನಕ್ಕೆ ಸೇರಿಕೊಂಡಿರುವ ಮತ್ತು ಯಾವುದೇ ಭಾಗದಲ್ಲಿ ಐದು ಮೀಟರುಗಳಿಗಿಂತ ಕಡಿಮೆ ಇಲ್ಲದ ಅಗಲದ ದಾರಿಯ ಅಥವಾ ಹಾದಿಯ ಮೂಲಕ ಯಾವುದೇ ಅಂಥ ಬೀದಿಯಿಂದ ಅಂಥ ಕಟ್ಟಡಕ್ಕೆ ಪ್ರವೇಶ ಅನುಕೂಲ ಇಲ್ಲದಿರುವುದು.

(2) ವಲಯ ಆಯುಕ್ತರು ಅಥವಾ ಸ್ಥಾಯೀ ಸಮಿತಿಯು, ಕಟ್ಟಡಕ್ಕಾಗಿ ನಿವೇಶನಕ್ಕೆ ಅನುಮೋದನೆಯನ್ನು ನೀಡಲು ಅಥವಾ ಕಟ್ಟಡದ ನಿರ್ಮಾಣಕ್ಕೆ ಅಥವಾ ಪುನರ್ ನಿರ್ಮಾಣಕ್ಕೆ ಅನುಮತಿಯನ್ನು ನೀಡಲು ನಿರಾಕರಿಸಿದಾಗಲೆಲ್ಲಾ, ಅಂಥ ನಿರಾಕರಣೆಗೆ ಕಾರಣಗಳನ್ನು ಆದೇಶದಲ್ಲಿ ನಿರ್ದಿಷ್ಟವಾಗಿ ತಿಳಿಸತಕ್ಕದ್ದು.

245. ಕೆಲವು ಸಂದರ್ಭಗಳಲ್ಲಿ ಮನರಂಜನೆಯ ಕಟ್ಟಡದ ನಿರ್ಮಾಣಕ್ಕೆ ಮಂಜೂರಾತಿಯನ್ನು ನೀಡುವ ಅಧಿಕಾರದ ಮೇಲೆ ನಿರ್ಬಂಧ.- ಈ ಅಧಿನಿಯಮದಲ್ಲಿ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮದಲ್ಲಿ ಅಥವಾ ಉಪವಿಧಿಯಲ್ಲಿ ಏನೇ ಒಳಗೊಂಡಿದ್ದರೂ, ಸಾರ್ವಜನಿಕ ಮನರಂಜನೆಯ ಯಾವುದೇ ಕಟ್ಟಡದ ನಿರ್ಮಾಣಕ್ಕೆ ಅಥವಾ ಆ ಕಟ್ಟಡಕ್ಕೆ ಯಾವುದೇ ಹೆಚ್ಚಿನ ಸೇರ್ಪಡೆಯ ನಿರ್ಮಾಣಕ್ಕೆ ಅಥವಾ ಆ ಕಟ್ಟಡಕ್ಕೆ ಮಾಡುವ ಯಾವುದೇ ಸೇರ್ಪಡೆಗೆ ಅಂಥ ಕಟ್ಟಡದ ನಿವೇಶನವು ಅಥವಾ ಅಂಥ ಕಟ್ಟಡಕ್ಕಾಗಿ ಉದ್ದೇಶಿಸಲಾದ ನಿವೇಶನವು,-

(ಎ) (i) ಕಾಲೇಜು, ಪ್ರೌಢಶಾಲೆ ಅಥವಾ ಬಾಲಕಿಯರ ಶಾಲೆಗಳಂತಹ ಮನ್ನಣೆ ಪಡೆದ ಶಿಕ್ಷಣ ಸಂಸ್ಥೆಗೆ ಲಗತ್ತಾಗಿರುವ ಯಾವುದೇ ವಸತಿ ಸಂಸ್ಥೆಯಿಂದ; ಅಥವಾ

(ii) ಹೆಚ್ಚು ಒಳರೋಗಿಗಳ ವಾರ್ಡನ್ನು ಹೊಂದಿರುವ ಸರ್ಕಾರಿ ಆಸ್ಪತ್ರೆಯಿಂದ; ಅಥವಾ

(iii) ಒಂದು ನೂರು ಅಥವಾ ಅದಕ್ಕೂ ಹೆಚ್ಚಿನ ಸಂಖ್ಯೆಯ ನಿವಾಸಿಗಳನ್ನು ಒಳಗೊಂಡಿರುವ ಅನಾಥಾಲಯದಿಂದ

- ಇನ್ನೂರು ಮೀಟರುಗಳ ವ್ಯಾಸದೊಳಗೆ ಇದ್ದರೆ; ಅಥವಾ

(ಬಿ) ಯಾವ ವಸತಿ ಪ್ರದೇಶವು, ವಸತಿಗಾಗಿಯೇ ಇರುವುದೋ ಅಥವಾ ವ್ಯಾಪಾರ ವ್ಯವಹಾರ ಉದ್ದೇಶಗಳಿಗೆ ಭಿನ್ನವಾದಂಥ ವಸತಿಗಾಗಿ ಅದನ್ನು ಕಾಯ್ದಿರಿಸಲಾಗಿದೆಯೋ ಅಥವಾ ಸಾಮಾನ್ಯವಾಗಿ ಬಳಸಲಾಗಿದೆಯೋ ಆ ಯಾವುದೇ ಜನನಿಬಿಡವಾದ ವಸತಿ ಪ್ರದೇಶದಲ್ಲಿ ಇದ್ದರೆ;

(ಸಿ) ಯಾವುದೇ ಗೃಹ ನಿರ್ಮಾಣದ ಯೋಜನೆಯ ಅಥವಾ ಉದ್ದಿಷ್ಟ ಯೋಜನೆಯ ಮೂಲಕ ಅಥವಾ ಅನ್ಯಥಾ ಯಾವುದೇ ಅಧಿನಿಯಮಿತಿಯ ಮೇರೆಗೆ ವಸತಿ ಉದ್ದೇಶಗಳಿಗಾಗಿ, ಕಾಯ್ದಿರಿಸಿದ ಯಾವುದೇ ಪ್ರದೇಶದಲ್ಲಿ ಇದ್ದರೆ,

- ಸರ್ಕಾರದ ಪೂರ್ವ ಅನುಮೋದನೆ ಇಲ್ಲದೆ ವಲಯ ಆಯುಕ್ತರು ಅಥವಾ ಸ್ಥಾಯೀ ಸಮಿತಿಯು ಮಂಜೂರಾತಿ ನೀಡತಕ್ಕದ್ದಲ್ಲ:

ಪರಂತು, ಚಲನಚಿತ್ರ ಪ್ರದರ್ಶನಕ್ಕಾಗಿ ಬಳಸಲು ಉದ್ದೇಶಿಸಿರುವ ಯಾವುದೇ ಕಟ್ಟಡದ ನಿರ್ಮಾಣಕ್ಕೆ ಕರ್ನಾಟಕ ಚಲನಚಿತ್ರಗಳ (ನಿಯಂತ್ರಣ) ಅಧಿನಿಯಮ, 1964ರ (1964ರ ಕರ್ನಾಟಕ ಅಧಿನಿಯಮ 23) ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳಿಗೆ ಅನುಸಾರವಾಗಿ ನಕ್ಷೆಗಳು ಮತ್ತು ತಪಶೀಲುಗಳಿಗೆ ಮಂಜೂರಾತಿಯನ್ನು ಪಡೆಯಲಾಗಿದೆ ಎಂದು ಸ್ಥಾಯೀ ಸಮಿತಿಗೆ ಮನವರಿಕೆಯಾದ ಹೊರತು ಯಾವುದೇ ಅನುಮತಿಯನ್ನು ಕೊಡತಕ್ಕದ್ದಲ್ಲ.

246. ಮುಕ್ತಾಯ ಪ್ರಮಾಣಪತ್ರ ನೀಡಿಕೆ.- (1) ಈ ಅಧ್ಯಾಯದ ಉಪಬಂಧಗಳ ಅನುಸಾರವಾಗಿ ಕಟ್ಟಡವನ್ನು ನಿರ್ಮಾಣ ಮಾಡಿದ ಪ್ರತಿಯೊಬ್ಬ ವ್ಯಕ್ತಿಯು ನಿರ್ಮಾಣ ಮುಕ್ತಾಯಗೊಂಡ ದಿನಾಂಕದಿಂದ ಒಂದು ತಿಂಗಳೊಳಗೆ ಮುಕ್ತಾಯ ಪ್ರಮಾಣಪತ್ರಕ್ಕಾಗಿ ವಲಯ ಆಯುಕ್ತರಿಗೆ ಅರ್ಜಿಯನ್ನು ಸಲ್ಲಿಸತಕ್ಕದ್ದು.

(2) ಮುಕ್ತಾಯ ಪ್ರಮಾಣಪತ್ರಕ್ಕಾಗಿ ಸಲ್ಲಿಸಿದ ಯಾವುದೇ ಅರ್ಜಿಯನ್ನು ಅರ್ಹತಾಪಟ್ಟಿಯಲ್ಲಿ ಸೇರ್ಪಡೆಗೊಂಡಿರುವ ವಾಸ್ತುಶಿಲ್ಪಿಯು ಅನುಮೋದಿತ ಕಟ್ಟಡ ನಕ್ಷೆಗೆ ಅನುಸಾರವಾಗಿ ಕಟ್ಟಡವನ್ನು ನಿರ್ಮಾಣ ಮಾಡಲಾಗಿದೆ ಎಂದು ಪ್ರಮಾಣೀಕರಿಸಿರತಕ್ಕದ್ದು:

ಪರಂತು, ಪಟ್ಟಿಯಲ್ಲಿ ಸೇರ್ಪಡೆಗೊಂಡಿರುವ ವಾಸ್ತುಶಿಲ್ಪಿಯು ಒಂದು ಕಟ್ಟಡವು ಕಟ್ಟಡ ಉಪ-ವಿಧಿಯ ಅನುಸಾರವಾಗಿಲ್ಲವೆಂದು ಪ್ರಮಾಣೀಕರಿಸಿದರೆ, ಪಾಲಿಕೆಯು ಸಂಬಂಧಪಟ್ಟ ವಾಸ್ತುಶಿಲ್ಪಿಯ ಅಹವಾಲನ್ನು ಆಲಿಸಿದ ನಂತರ ಅದಕ್ಕೆ ನಿಯಮಿಸಲಾದಂಥ ದಂಡವನ್ನು ವಿಧಿಸಬಹುದು.

(3) ವಲಯ ಆಯುಕ್ತರು, ಮುಕ್ತಾಯ ಪ್ರಮಾಣಪತ್ರಕ್ಕೆ ಕೋರಿಕೆ ಸಲ್ಲಿಸಿದಕ್ಕಾಗಿ ಅರ್ಜಿಯನ್ನು ಸ್ವೀಕರಿಸಿದ ಮೇಲೆ ಮುಕ್ತಾಯ ಪ್ರಮಾಣಪತ್ರವನ್ನು ನೀಡಬಹುದು ಅಥವಾ ಪಾಲಿಕೆಯು ಕಟ್ಟಡದ ಅಗತ್ಯವಿರುವಂಥ ಪ್ರತ್ಯಕ್ಷ ಪರಿಶೀಲನೆಯನ್ನು ನಡೆಸಿ, ಮುಕ್ತಾಯ ಪ್ರಮಾಣಪತ್ರದ ಅರ್ಜಿಯನ್ನು ಪುರಸ್ಕರಿಸಬಹುದು ಅಥವಾ ತಿರಸ್ಕರಿಸಬಹುದು.

(4)ಯಾರೇ ವ್ಯಕ್ತಿಯು, ಮುಕ್ತಾಯ ಪ್ರಮಾಣ ಪತ್ರವನ್ನು ಪಡೆಯದೆ ಕಟ್ಟಡವನ್ನು ಅದಿಭೋಗಿಸತಕ್ಕದ್ದಲ್ಲ.

247. ಬದಲಾವಣೆಗಳಿಗೆ ಮತ್ತು ಸೇರ್ಪಡೆಗಳಿಗೆ ಉಪಬಂಧಗಳ ಅನ್ವಯ.- (1) ಕಟ್ಟಡಗಳ ಅಥವಾ ಗುಡಿಸಲುಗಳ ನಿರ್ಮಾಣಕ್ಕೆ ಅಥವಾ ಪುನರ್ ನಿರ್ಮಾಣಕ್ಕೆ ಸಂಬಂಧಪಟ್ಟ ಈ ಅಧ್ಯಾಯದ ಉಪಬಂಧಗಳು ಮತ್ತು ಈ ಅಧಿನಿಯಮದ ಮೇರೆಗೆ ರಚಿಸಿದ ಯಾವುದೇ ನಿಯಮಗಳು ಅಥವಾ ಉಪವಿಧಿಗಳು, ಅವುಗಳಿಗೆ ಮಾಡಿದ ಯಾವುದೇ ಬದಲಾವಣೆಗೆ ಅಥವಾ ಅವುಗಳಿಗೆ ಮಾಡಿದ ಸೇರ್ಪಡೆಗೂ ಸಹ ಅನ್ವಯವಾಗತಕ್ಕದ್ದು:

ಪರಂತು, ಯಾವ ಅವಶ್ಯಕ ದುರಸ್ತಿ ಕಾಮಗಾರಿಯಿಂದ ಕಟ್ಟಡದಲ್ಲಿನ ಅಥವಾ ಗುಡಿಸಲಿನಲ್ಲಿನ ಅಥವಾ ಯಾವುದೇ ಕೊಠಡಿಯ ಸ್ಥಾನವು ಅಥವಾ ಉದ್ದಗಲವು ವ್ಯತ್ಯಾಸವಾಗುವುದಿಲ್ಲವೋ ಆ ಕಾಮಗಾರಿಯನ್ನು ಈ ಪ್ರಕರಣದ ಉದ್ದೇಶಕ್ಕಾಗಿ ಬದಲಾವಣೆ ಅಥವಾ ಸೇರ್ಪಡೆ ಎಂದು ಭಾವಿಸತಕ್ಕದ್ದಲ್ಲ.

(2) ಯಾವುದೇ ಸೇರ್ಪಡೆಯು ಅಥವಾ ಬದಲಾವಣೆಯು ಕಟ್ಟಡದ ಅಥವಾ ಗುಡಿಸಲಿನ ಅಥವಾ ಯಾವುದೇ ಕೊಠಡಿಯ ಸ್ಥಾನವನ್ನು ಅಥವಾ ಉದ್ದಗಲವನ್ನು ವ್ಯತ್ಯಾಸ ಮಾಡದಂಥ ಅವಶ್ಯಕ ದುರಸ್ತಿಯೇ ಎಂಬ ಯಾವುದೇ ಪ್ರಶ್ನೆಯು ಉದ್ಭವಿಸಿದರೆ, ಅಂಥ ಪ್ರಶ್ನೆಯನ್ನು ಸ್ಥಾಯೀ ಸಮಿತಿಗೆ ಒಪ್ಪಿಸತಕ್ಕದ್ದು ಅದರ ತೀರ್ಮಾನವು ಅಂತಿಮವಾದುದು ಆಗಿರತಕ್ಕದ್ದು.

248. ಕಾನೂನುಬಾಹಿರವಾಗಿ ಪ್ರಾರಂಭಿಸಿದ, ನಿರ್ವಹಿಸುತ್ತಿರುವ ಅಥವಾ ಪೂರ್ಣಗೊಳಿಸಿದ ಕಟ್ಟಡಗಳ ಅಥವಾ ಬಾವಿಯ ಕಾಮಗಾರಿಯನ್ನು ಕೆಡವಿಹಾಕುವುದು ಅಥವಾ ಬದಲಾಯಿಸುವುದು.- (1) ವಲಯ ಆಯುಕ್ತರಿಗೆ,-

(i) ಯಾವುದೇ ಕಟ್ಟಡದ ಅಥವಾ ಗುಡಿಸಲಿನ ಅಥವಾ ಬಾವಿಯ ನಿರ್ಮಾಣವನ್ನು ಅಥವಾ ಪುನರ್ ನಿರ್ಮಾಣವನ್ನು,-

(ಎ) ತನ್ನ ಅನುಮತಿಯನ್ನು ಪಡೆಯದೆ ಅಥವಾ ಸ್ಥಾಯೀ ಸಮಿತಿಗೆ, ಅಪೀಲನ್ನು ಅಥವಾ ಕೋರಿಕೆಯನ್ನು ಮಾಡಿಕೊಂಡಿದ್ದರೆ, ಸ್ಥಾಯೀ ಸಮಿತಿಯು ಮಾಡಿದ ಯಾವುದೇ ಆದೇಶವನ್ನು ಉಲಂಘಿಸಿ ಪ್ರಾರಂಭಿಸಲಾಗಿದೆ ಎಂದು; ಅಥವಾ

(ಬಿ) ಯಾವ ನಕ್ಷೆಗಳ ಅಥವಾ ವಿವರಗಳ ಮೇಲೆ ಅಂಥ ಅನುಮತಿಯು ಅಥವಾ ಆದೇಶವು ಆಧಾರಿತವಾಗಿದೆಯೋ ಅಂಥ ನಕ್ಷೆಗಳಿಗೆ ಅಥವಾ ವಿವರಗಳಿಗೆ ಅನುಸಾರವಾಗಿ ಅಲ್ಲದೆ, ಅನ್ಯಥಾ ನಿರ್ವಹಿಸಲಾಗುತ್ತಿದೆ ಎಂದು ಅಥವಾ ಪೂರ್ಣಗೊಳಿಸಲಾಗಿದೆ ಎಂದು; ಅಥವಾ

(ಸಿ) ಈ ಅಧಿನಿಯಮದ ಅಥವಾ ಈ ಅಧಿನಿಯಮದ ಮೇರೆಗೆ ರಚಿಸಿದ ಯಾವುದೇ ನಿಯಮದ ಅಥವಾ ಉಪವಿಧಿಯ ಯಾವುದೇ ಉಪಬಂಧಗಳನ್ನು ಅಥವಾ ಈ ಅಧಿನಿಯಮದ ಅಥವಾ ಅಂಥ ನಿಯಮಗಳ ಅಥವಾ ಉಪವಿಧಿಗಳ ಮೇರೆಗೆ ಕಾನೂನು ಸಮ್ಮತವಾಗಿ ನೀಡಿದ ಯಾವುದೇ ನಿರ್ದೇಶನವನ್ನು ಅಥವಾ ಕೋರಿಕೆಯನ್ನು ಉಲಂಘಿಸಿ ನಿರ್ವಹಿಸಲಾಗುತ್ತಿದೆ ಎಂದು ಅಥವಾ ಪೂರ್ಣಗೊಳಿಸಲಾಗಿದೆ ಎಂದು; ಅಥವಾ

(ii) 308ನೇ ಪ್ರಕರಣದ ಮೇರೆಗೆ ಹೊರಡಿಸಿದ ಯಾವುದೇ ನೋಟೀಸಿನ ಮೂಲಕ ಅಗತ್ಯಪಡಿಸಿದ ಯಾವುದೇ ಬದಲಾವಣೆಯನ್ನು ಸೂಕ್ತವಾಗಿ ಮಾಡಿಲ್ಲವೆಂದು; ಅಥವಾ

(iii) ಯಾವುದೇ ಕಟ್ಟಡಕ್ಕೆ ಅಥವಾ ಗುಡಿಸಲಿಗೆ ಯಾವುದೇ ಬದಲಾವಣೆಯನ್ನು ಅಥವಾ ಸೇರ್ಪಡೆಯನ್ನು ಅಥವಾ ಯಾವುದೇ ಉದ್ದೇಶಕ್ಕಾಗಿ ಯಾವುದೇ ಕಟ್ಟಡದ ಅಥವಾ ಗುಡಿಸಲಿನ ಒಳಗಡೆ ಅಥವಾ ಅದರ ಮೇಲೆ ಯಾವುದೇ ಇತರ ಕಾಮಗಾರಿಯನ್ನು 247ನೇ ಪ್ರಕರಣವನ್ನು ಉಲಂಘಿಸಿ ಪ್ರಾರಂಭಿಸಲಾಗಿದೆ ಎಂದು ಅಥವಾ ನಿರ್ವಹಿಸಲಾಗುತ್ತಿದೆ ಎಂದು ಅಥವಾ ಪೂರ್ಣಗೊಳಿಸಲಾಗಿದೆ ಎಂದು ಮನವರಿಕೆಯಾದರೆ ಅಥವಾ ಮಾಡಿದ ಕಾಮಗಾರಿಯನ್ನು ಅಥವಾ ಕಾನೂನು ಬಾಹಿರವಾಗಿ ಮಾಡಲಾಗಿದೆ ಎಂದು ಆಯುಕ್ತರು ಅಭಿಪ್ರಾಯಪಡುವಷ್ಟನ್ನು ಕೆಡವಿಹಾಕುವಂತೆ ಅಥವಾ ಮೇಲೆ ಹೇಳಿದಂತೆ, ಕಾಮಗಾರಿಯನ್ನು ಈ ಅಧಿನಿಯಮ, ನಿಯಮಗಳು, ಉಪವಿಧಿಗಳು, ನಿರ್ದೇಶನಗಳು ಅಥವಾ ಕೋರಿಕೆಗಳಿಗೆ ಅಥವಾ ಅಂಥ ಅನುಮತಿಯು ಅಥವಾ ಆದೇಶಗಳು ಯಾವ ನಕ್ಷೆಗಳ ಅಥವಾ ವಿವರಗಳ ಮೇಲೆ ಆಧಾರಿತವಾಗಿವೆಯೋ ಅಂಥ ನಕ್ಷೆಗಳಿಗೆ ಅಥವಾ ವಿವರಗಳಿಗೆ ಅನುಗುಣವಾಗಿ ಇರುವಂತೆ ಮಾಡಲು ಯಾವ ಬದಲಾವಣೆಗಳು ಅವಶ್ಯಕವೆಂದು ವಲಯ ಆಯುಕ್ತರು ಅಭಿಪ್ರಾಯಪಡುವರೋ ಅಂಥ ಬದಲಾವಣೆಯನ್ನು ಮಾಡುವಂತೆ ಅವರು, ಕಟ್ಟಡದ ಮಾಲೀಕನನ್ನು ಅಗತ್ಯಪಡಿಸಿರುವ ತಾತ್ಕಾಲಿಕ ಆದೇಶವನ್ನು ಹೊರಡಿಸಬಹುದು ಮತ್ತು ಆದೇಶವನ್ನು ಪಾಲಿಸುವವರೆಗೆ ಮಾಲೀಕ ಅಥವಾ ನಿರ್ಮಾಣಕಾರನಿಗೆ ಕಟ್ಟಡದ ಅಥವಾ ಬಾವಿಯ ಅಥವಾ ಗುಡಿಸಲಿನ ಕಾರ್ಯವನ್ನು ಮುಂದುವರೆಸತಕ್ಕದ್ದಲ್ಲವೆಂದು ಸಹ ನಿರ್ದೇಶಿಸಬಹುದು.

(2) ವಲಯ ಆಯುಕ್ತರು, (1)ನೇ ಉಪಪ್ರಕರಣದ ಮೇರೆಗೆ ಮಾಡಿದ ತಾತ್ಕಾಲಿಕ ಆದೇಶದ ಪ್ರತಿಯನ್ನು ಕಟ್ಟಡದ ಅಥವಾ ಗುಡಿಸಲಿನ ಅಥವಾ ಬಾವಿಯ ಮಾಲೀಕನಿಗೆ ಅಥವಾ ನಿರ್ಮಾಣಕಾರನಿಗೆ, ಆ ಆದೇಶವನ್ನು ಏಕೆ ಸ್ಥಿರೀಕರಿಸಬಾರದು ಎಂಬುದಕ್ಕೆ ಅಂಥ ನೋಟೀಸಿನಲ್ಲಿ ತಿಳಿಸಿದ ಸಮಂಜಸ ಕಾಲದೊಳಗೆ ಕಾರಣ ತೋರಿಸುವಂತೆ ಅವನನ್ನು ಅಗತ್ಯಪಡಿಸುವ ನೋಟೀಸಿನೊಂದಿಗೆ ಜಾರಿ ಮಾಡತಕ್ಕದ್ದು.

(3) ಮಾಲೀಕನು ಅಥವಾ ನಿರ್ಮಾಣಕಾರನು ವಲಯ ಆಯುಕ್ತರಿಗೆ ಮನವರಿಕೆಯಾಗುವಂತೆ ಕಾರಣ ತೋರಿಸಲು ತಪ್ಪಿದರೆ, ವಲಯ ಆಯುಕ್ತರು ತಾವು ಸೂಕ್ತವೆಂದು ಯೋಚಿಸಬಹುದಾದ ಯಾವುದೇ ಮಾರ್ಪಾಟಿನೊಂದಿಗೆ ಆದೇಶವನ್ನು ಸ್ಥಿರೀಕರಿಸಬಹುದು ಮತ್ತು ಅಂಥ ಆದೇಶಕ್ಕೆ ಮಾಲೀಕನು ಬದ್ಧವಾಗಿರತಕ್ಕದ್ದು.

(4) 240ನೇ ಪ್ರಕರಣದ ಉಪಬಂಧಗಳಿಗೆ ತದ್ವಿರುದ್ಧವಾಗಿ ಯಾವುದೇ ಕಟ್ಟಡದ ಅಥವಾ ಗುಡಿಸಲಿನ ನಿರ್ಮಾಣವನ್ನು ಅಥವಾ ಪುನರ್‌ನಿರ್ಮಾಣವನ್ನು ಪ್ರಾರಂಭಿಸಿದ್ದರೆ ಮತ್ತು ಕೂಡಲೇ ಕ್ರಮ ತೆಗೆದುಕೊಳ್ಳಬೇಕೆಂದು ಮುಖ್ಯ ಆಯುಕ್ತರು ಅಭಿಪ್ರಾಯಪಟ್ಟರೆ, ಆಗ, ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ, (2)ನೇ ಉಪಪ್ರಕರಣದ ಮೇರೆಗೆ, ಕೊಡಬೇಕಾದ ನೋಟೀಸು ಇಪ್ಪತ್ತನಾಲ್ಕು ಗಂಟೆಗಳಿಗಿಂತ ಕಡಿಮೆ ಅವಧಿಯದಾಗಿರತಕ್ಕದ್ದಲ್ಲ ಮತ್ತು ಯಾವ ಕಟ್ಟಡಕ್ಕೆ ಅಥವಾ ಗುಡಿಸಲಿಗೆ ಆ ನೋಟೀಸು ಸಂಬಂಧಪಡುವುದೋ ಆ ಕಟ್ಟಡದ ಅಥವಾ ಗುಡಿಸಲಿನ ಎದ್ದು ಕಾಣುವ ಯಾವುದೇ ಭಾಗದಲ್ಲಿ ಅದನ್ನು ಅಂಟಿಸಿದ್ದರೆ ಮತ್ತು ಡಂಗುರದ ಮೂಲಕ ಅಂಥ ಕಟ್ಟಡದ ಅಥವಾ ಗುಡಿಸಲಿನ ಹತ್ತಿರ ಸಾರುವ ಮೂಲಕ ಪ್ರಕಟಿಸಿದರೆ ಆ ನೋಟಿಸನ್ನು ಕ್ರಮಬದ್ಧವಾಗಿ ಜಾರಿ ಮಾಡಲಾಗಿದೆಯೆಂದು ಭಾವಿಸತಕ್ಕದ್ದು ಮತ್ತು ಹಾಗೆ ಅಂಟಿಸಿದ ಮತ್ತು ಹಾಗೆ ಪ್ರಕಟಣೆ ಮಾಡಿದ ತರುವಾಯ ಸಂಬಂಧಪಟ್ಟ ಎಲ್ಲ ವ್ಯಕ್ತಿಗಳಿಗೆ ಅದರಲ್ಲಿ ನಿರೂಪಿಸಿದ ವಿಷಯಗಳನ್ನು ಕ್ರಮಬದ್ಧವಾಗಿ ತಿಳಿಸಲಾಗಿದೆಯೆಂದು ಭಾವಿಸತಕ್ಕದ್ದು.

249. ಕಾನೂನುಬಾಹಿರವಾದ ಕೆಲವು ಕಟ್ಟಡಗಳನ್ನು ಸಕ್ರಮಗೊಳಿಸುವುದು.- (1) ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ, 240ನೇ ಪ್ರಕರಣವನ್ನು, 245ನೇ ಪ್ರಕರಣವನ್ನು ಮತ್ತು 239ನೇ ಪ್ರಕರಣದ ಮೇರೆಗೆ ರಚಿಸಿದ ಯಾವುವೇ ಕಟ್ಟಡ ಉಪವಿಧಿಗಳನ್ನು ಉಲಂಘಿಸಿ ಯಾವುದೇ ಕಟ್ಟಡ ನಿರ್ಮಾಣವನ್ನು ಪೂರ್ಣಗೊಳಿಸಿದ್ದಲ್ಲಿ, ವಲಯ ಆಯುಕ್ತರು ಕೆಳಕಂಡ ನಿರ್ಬಂಧಗಳಿಗೆ ಮತ್ತು ನಿಯಮಿಸಬಹುದಾದಂಥ ನಿಮಯಗಳಿಗೆ ಒಳಪಟ್ಟು, (2)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಮೊಬಲಗನ್ನು ಸಂದಾಯ ಮಾಡಿದ ಮೇಲೆ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಹಾಗೂ ಇತರ ಕೆಲವು ಕಾನೂನುಗಳ (ತಿದ್ದುಪಡಿ) ಅಧಿನಿಯಮ, 2013ರ ಪ್ರಾರಂಭದ ದಿನಾಂಕಕ್ಕೆ ಮೊದಲು ನಿರ್ಮಿಸಿದ ಕಟ್ಟಡವನ್ನು ಸಕ್ರಮಗೊಳಿಸಬಹುದು.

(ಎ) ಕಟ್ಟಡವನ್ನು ಪಕ್ಕದ ಸ್ವತ್ತಿಗೆ ಹೊಂದಿಕೊಂಡಿರುವಂತೆ ನಿರ್ಮಿಸಿರುವಲ್ಲಿ ಅಥವಾ ಹಿಂದಕ್ಕೆ ಕಟ್ಟಲು ಕಲ್ಪಿಸಿರುವ ಜಾಗವು ಉಪವಿಧಿಗಳಲ್ಲಿ ನಿಯಮಿಸಲಾದ ಮಿತಿಗಳಿಗಿಂತ ಕಡಿಮೆ ಇದ್ದಲ್ಲಿ, ನಿವಾಸೇತರ ಕಟ್ಟಡಗಳ ಸಂದರ್ಭದಲ್ಲಿ ಶೇಕಡಾ ಇಪ್ಪತ್ತೈದರವರೆಗಿನ ಮತ್ತು ನಿವಾಸದ ಕಟ್ಟಡಗಳ ಸಂದರ್ಭದಲ್ಲಿ ಶೇಕಡಾ ಐವತ್ತರವರೆಗಿನ ಉಲಂಘನೆಯನ್ನು ಸಕ್ರಮಗೊಳಿಸತಕ್ಕದ್ದು.

(ಬಿ) ನೆಲ ಮಹಡಿಯಲ್ಲಿ ಮಾಡಿದ ಯಾವ ಅಭಿವೃದ್ಧಿಯನ್ನೂ ಅಥವಾ ಉಪವಿಧಿಯನ್ನು ಉಲಂಘಿಸಿ ಮಾಡಿದ ಯಾವ ಬಳಕೆಯನ್ನೂ ಸಕ್ರಮಗೊಳಿಸತಕ್ಕದ್ದಲ್ಲ.

(ಸಿ) ಕಟ್ಟಡದ ನಿರ್ಮಾಣವು ಅದು ಯಾವ ನಿರ್ದಿಷ್ಟ ರಸ್ತೆಯ ಮೇಲಿರುವ ನಿರ್ದಿಷ್ಟ ಕಟ್ಟಡ ರೇಖೆಯನ್ನು ಉಲಂಘಿಸಿದ್ದರೆ ಅಂಥ ಕಟ್ಟಡದ ಮಾಲೀಕರು, ಕಟ್ಟಡ ರೇಖೆಯ ಹಾಗೂ ರಸ್ತೆಯ ಅಥವಾ ಪಾದಚಾರಿ ರಸ್ತೆಯ ಅಥವಾ ಅಂಚಿನ ನಡುವಿನ ಸ್ಥಳವನ್ನು, ಆ ರಸ್ತೆಯನ್ನು ಅಗಲ ಮಾಡುವ ಉದ್ದೇಶಕ್ಕಾಗಿ ಅವಶ್ಯಕವಾದಾಗ, ಉಚಿತವಾಗಿ ಬಿಟ್ಟುಕೊಡುವುದಾಗಿ ಮುಚ್ಚಳಿಕೆಯನ್ನು ಬರೆದುಕೊಟ್ಟ ಹೊರತು ಆ ಕಟ್ಟಡದ ನಿರ್ಮಾಣವನ್ನು ಸಕ್ರಮಗೊಳಿಸತಕ್ಕದ್ದಲ್ಲ.

(ಡಿ) ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961ರ 76ಎಫ್‌ಎಫ್ ಪ್ರಕರಣದ (2) ರಿಂದ (14)ರ ವರೆಗಿನ ಉಪಪ್ರಕರಣದ ಉಪಬಂಧಗಳು, ಯಥೋಚಿತ ಬದಲಾವಣೆಗಳೊಂದಿಗೆ, ಈ ಪ್ರಕರಣದ ಮೇರೆಗೆ ಕಟ್ಟಡವನ್ನು ಸಕ್ರಮಗೊಳಿಸುವುದಕ್ಕೆ ಅನ್ವಯವಾಗತಕ್ಕದ್ದು ಮತ್ತು ಸಕ್ರಮಗೊಳಿಸುವುದಕ್ಕಾಗಿ ಅರ್ಜಿಯನ್ನು ವಲಯ ಆಯುಕ್ತರಿಗೆ ಸಲ್ಲಿಸತಕ್ಕದ್ದು.

(2) ಈ ಪ್ರಕರಣದ ಮೇರೆಗೆ ಯಾವುದೇ ಕಟ್ಟಡ ನಿರ್ಮಾಣವನ್ನು ಸಕ್ರಮಗೊಳಿಸುವುದು, ನಿಯಮಿಸಲಾದ ಮೊಬಲಗನ್ನು ಸಂದಾಯ ಮಾಡುವುದಕ್ಕೆ ಒಳಪಟ್ಟಿರತಕ್ಕದ್ದು, ಅಂಥ ನಿಯಮಿಸಲಾದ ಮೊಬಲಗು ಕಟ್ಟಡ ನಿರ್ಮಾಣ ಉಪವಿಧಿಗಳ ಬೇರೆ ಬೇರೆ ಬಗೆಯ ಉಲಂಘನೆಗಳಿಗೆ ಬೇರೆ ಬೇರೆಯಾಗಿರತಕ್ಕದ್ದು:

ಪರಂತು, ಹಾಗೆ ನಿಯಮಿಸಿದ ಮೊಬಲಗು,-

(i) ಮೇಲೆ ಹೇಳಿದ ಉಪಬಂಧಗಳನ್ನು ಉಲಂಘಿಸಿ ನಿರ್ಮಿಸಿದ ಕಟ್ಟಡದ ಭಾಗದ, ಕರ್ನಾಟಕ ಸ್ಟಾಂಪ್ ಅಧಿನಿಯಮ, 1957ರ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳಿಗೆ ಅನುಸಾರವಾಗಿ ನಿರ್ಧರಿಸಿದ, ಮಾರುಕಟ್ಟೆ ಮೌಲ್ಯವು ಹಿಂದಕ್ಕೆ ಕಟ್ಟಲು ಕಲ್ಪಿಸಿರುವ ನಿಬಂಧನೆಗಳನ್ನು ಅಂಥ ಉಲಂಘನೆಯು ಅನುಮತಿಸಬಹುದಾದ ನೆಲ ವಿಸ್ತೀರ್ಣದ ಪ್ರಮಾಣವು ಶೇಕಡಾ ಇಪ್ಪತ್ತೈದನ್ನು ಮೀರದಿದ್ದರೆ ಮಾರುಕಟ್ಟೆ ಮೌಲ್ಯವು ಶೇಕಡಾ ಆರಕ್ಕಿಂತ ಕಡಿಮೆ ಇರತಕ್ಕದ್ದಲ್ಲ.

(ii) ಮೇಲೆ ಹೇಳಿದ ಉಪಬಂಧಗಳನ್ನು ಉಲಂಘಿಸಿ, ನಿರ್ಮಿಸಿದ ಕಟ್ಟಡದ ಭಾಗದ, ಕರ್ನಾಟಕ ಸ್ಟಾಂಪ್ ಅಧಿನಿಯಮ, 1957ರ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳಿಗೆ ಅನುಸಾರವಾಗಿ ನಿರ್ಧರಿಸಿದ ಮಾರುಕಟ್ಟೆ ಮೌಲ್ಯವು ಹಿಂದಕ್ಕೆ ಕಟ್ಟಲು ಕಲ್ಪಿಸಿರುವ ನಿಬಂಧನೆಗಳ ಅಂಥ ಉಲಂಘನೆಯು ಅನುಮತಿಸಬಹುದಾದ ನೆಲ ವಿಸ್ತೀರ್ಣದ ಪ್ರಮಾಣವು ಶೇಕಡಾ ಇಪ್ಪತ್ತೈದನ್ನು ಮೀರಿದ್ದು ಆದರೆ ಶೇಕಡಾ ಐವತ್ತನ್ನು ಮೀರದಿದ್ದರೆ, ಮಾರುಕಟ್ಟೆ ಮೌಲ್ಯವು ಶೇಕಡಾ ಎಂಟಕ್ಕಿಂತ ಕಡಿಮೆ ಇರತಕ್ಕದ್ದಲ್ಲ:

ಮತ್ತೂ ಪರಂತು, ಮೇಲೆ ಹೇಳಿದ ಉಪಬಂಧಗಳನ್ನು ಉಲಂಘಿಸಿ ನಿರ್ಮಿಸಿದ ಕಟ್ಟಡದ ಭಾಗವನ್ನು ನಿವಾಸೇತರ ಉದ್ದೇಶಕ್ಕಾಗಿ ಬಳಸುತ್ತಿದ್ದರೆ ಅಥವಾ ಅದಕ್ಕೆಂದು ಉದ್ದೇಶಿಸಿದ್ದರೆ ಮತ್ತು ಅಂಥ ಭಾಗವನ್ನು ಸಕ್ರಮಗೊಳಿಸಲು ಸಂದಾಯವಾಗತಕ್ಕ ಮೊಬಲಗು,-

(ಎ) ಮೇಲೆ ಹೇಳಿದ ಉಪಬಂಧಗಳನ್ನು ಉಲಂಘಿಸಿ ನಿರ್ಮಿಸಿದ ಕಟ್ಟಡದ ಭಾಗದ, ಕರ್ನಾಟಕ ಸ್ಟಾಂಪ್ ಅಧಿನಿಯಮ, 1957ರ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳಿಗೆ ಅನುಸಾರವಾಗಿ ನಿರ್ಧರಿಸಿದ ಮಾರುಕಟ್ಟೆ ಮೌಲ್ಯವು ಹಿಂದಕ್ಕೆ ಕಟ್ಟಲು ಕಲ್ಪಿಸಿರುವ ನಿಬಂಧನೆಗಳ ಅಂಥ ಉಲಂಘನೆಯು ಮತ್ತು ಅನುಮತಿಸಬಹುದಾದ ನೆಲ ವಿಸ್ತೀರ್ಣದ ಪ್ರಮಾಣವು ಶೇಕಡಾ ಹನ್ನೆರಡುವರೆಯನ್ನು ಮೀರದಿದ್ದರೆ, ಶೇಕಡಾ ಇಪ್ಪತ್ತರಷ್ಟು ಆಗಿರತಕ್ಕದ್ದು.

(ಬಿ) ಮೇಲೆ ಹೇಳಿದ ಉಪಬಂಧಗಳನ್ನು ಉಲಂಘಿಸಿ ನಿರ್ಮಿಸಿದ ಕಟ್ಟಡದ ಭಾಗದ, ಕರ್ನಾಟಕ ಸ್ಟಾಂಪ್ ಅಧಿನಿಯಮ, 1957ರ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳಿಗೆ ಅನುಸಾರವಾಗಿ ನಿರ್ಧರಿಸಿದ ಮಾರುಕಟ್ಟೆ ಮೌಲ್ಯವು, ಹಿಂದಕ್ಕೆ ಕಟ್ಟಲು ಕಲ್ಪಿಸಿರುವ ನಿಬಂಧನೆಗಳ ಅಂಥ ಉಲಂಘನೆಯು ಮತ್ತು ಅನುಮತಿಸಬಹುದಾದ ನೆಲ ವಿಸ್ತೀರ್ಣದ ಪ್ರಮಾಣವು ಶೇಕಡಾ ಹನ್ನೆರಡುವರೆಯನ್ನು ಮೀರಿದ್ದು, ಆದರೆ ಶೇಕಡಾ ಇಪ್ಪತ್ತೈದನ್ನು ಮೀರದಿದ್ದರೆ, ಶೇಕಡಾ ಮೂವತ್ತೈದರಷ್ಟು ಆಗಿರತಕ್ಕದ್ದು.

(3) ಯಾರೇ ವ್ಯಕ್ತಿಯು, ಅದೇ ಉಲಂಘನೆಗಳಿಗಾಗಿ ಈ ಅಧಿನಿಯಮದ ಮೇರೆಗೆ, ಸಕ್ರಮೀಕರಣ ಫೀಜನ್ನು ಅವನು ಸಂದಾಯ ಮಾಡಿದರೆ, ಯಾವುದೇ ಇತರೆ ಕಾನೂನಿನ ಮೇರೆಗೆ ಸಕ್ರಮೀಕರಣಕ್ಕಾಗಿ ದಂಡವನ್ನು ಅಥವಾ ಫೀಜನ್ನು ಸಂದಾಯ ಮಾಡುವುದಕ್ಕೆ ಗುರಿಯಾಗತಕ್ಕದ್ದಲ್ಲ.

(4) ಉಪ-ಪ್ರಕರಣ (1)ರ ಮೇರೆಗೆ ಮಾಡಿದ ಎಲ್ಲಾ ಸಂದಾಯಗಳನ್ನು ಸಂಬಂಧಪಟ್ಟ ಸ್ಥಳೀಯ/ಯೋಜನಾ ಪ್ರಾಧಿಕಾರದಲ್ಲಿ ಇಟ್ಟಿರುವ, ನಗರ ಪ್ರದೇಶ ಮೂಲ ಸೌಲಭ್ಯ ಅಭಿವೃದ್ಧಿ ನಿಧಿ ಎಂದು ಕರೆಯಲಾಗುವ ಪ್ರತ್ಯೇಕ ನಿಧಿಗೆ ಜಮೆ ಮಾಡತಕ್ಕದ್ದು ಹಾಗೂ ಮೂಲ ಸೌಲಭ್ಯ ಅಭಿವೃದ್ಧಿ, ನಾಗರಿಕ ಸೌಲಭ್ಯಗಳು, ವಿದ್ಯುತ್ ದೀಪಗಳು, ಉದ್ಯಾನವನಗಳು, ಕುಡಿಯುವ ನೀರಿನ ಸೌಲಭ್ಯ, ಚರಂಡಿ ವ್ಯವಸ್ಥೆ ಮತ್ತು ಇತರೆ ಯಾವುದೇ ಮೂಲ ಸೌಲಭ್ಯಗಳನ್ನು ಒದಗಿಸಲು, ಅದನ್ನು ನಿಯಮಿಸಬಹುದಾದಂಥ ರೀತಿಯಲ್ಲಿ ಬಳಸಿಕೊಳ್ಳತಕ್ಕದ್ದು.

25ಂ. ನಿರ್ದಿಷ್ಟ ಬೀದಿಗಳಲ್ಲಿ ಅಥವಾ ಸ್ಥಳಗಳಲ್ಲಿ ಕೆಲವು ವರ್ಗಗಳ ಕಟ್ಟಡಗಳ ಭಾವೀ ನಿರ್ಮಾಣವನ್ನು ನಿಯಂತ್ರಿಸಲು ಪಾಲಿಕೆಯ ಅಧಿಕಾರ.- (1) ಪಾಲಿಕೆಯು,-

(ಎ) ನೋಟೀಸಿನಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಬೀದಿಗಳಲ್ಲಿ ಅಥವಾ ಬೀದಿಗಳ ಭಾಗಗಳಲ್ಲಿ,-

(i) ನಿರಂತರವಾಗಿ ಕಟ್ಟಡಗಳನ್ನು ಕಟ್ಟಲು ಅನುಮತಿಸಲಾಗುವುದೆಂದು;

(ii) ಅನಂತರ ನಿರ್ಮಿಸಿದ ಅಥವಾ ಪುನಃ ನಿರ್ಮಿಸಿದ ಕಟ್ಟಡಗಳ ಮುಂಭಾಗದ ಹೊರನೋಟವು ಮತ್ತು ನಿರ್ಮಾಣವು ಅದಕ್ಕೆ ಸಂಬಂಧಿಸಿದ ವಾಸ್ತುಶಿಲ್ಪದ ಗುಣಲಕ್ಷಣಗಳ ಬಗ್ಗೆ ಸ್ಥಾಯೀ ಸಮಿತಿಯು ಆ ಸ್ಥಳಕ್ಕೆ ಸೂಕ್ತವೆಂದು ಪರಿಗಣಿಸಬಹುದಾದಂತೆ ಇರತಕ್ಕದ್ದೆಂದು; ಅಥವಾ

(ಬಿ) ನೋಟೀಸಿನಲ್ಲಿ ನಿರ್ದಿಷ್ಟಪಡಿಸಿದ ಯಾವುವೇ ಸ್ಥಳಗಳಲ್ಲಿ ಒಂದಕ್ಕೊಂದು ಅಂಟಿಕೊಂಡಿರದಂಥ ಕಟ್ಟಡಗಳ ನಿರ್ಮಾಣಕ್ಕೆ ಮಾತ್ರ ಅನುಮತಿಸಲಾಗುವುದೆಂದು; ಅಥವಾ

(ಸಿ) ನೋಟೀಸಿನಲ್ಲಿ ನಿರ್ದಿಷ್ಟಪಡಿಸಿದ ಸ್ಥಳಗಳ ಯಾವುವೇ ಬೀದಿಗಳಲ್ಲಿ, ಬೀದಿಗಳ ಭಾಗಗಳಲ್ಲಿ ನಿರ್ದಿಷ್ಟಪಡಿಸಿದ ವಾಸ್ತುಶಿಲ್ಪ ಲಕ್ಷಣದ ಅಂಗಡಿಗಳು, ಉಗ್ರಾಣಗಳು, ಕಾರ್ಖಾನೆಗಳು, ಕುಟೀರಗಳು ಅಥವಾ ಕಟ್ಟಡಗಳ ಅಥವಾ ವಿಶಿಷ್ಟ ಬಳಕೆಗಾಗಿ ವಿನ್ಯಾಸಗೊಳಿಸಿದ ಕಟ್ಟಡಗಳ ನಿರ್ಮಾಣಕ್ಕೆ, ಸ್ಥಾಯೀ ಸಮಿತಿಯ ವಿಶೇಷ ಅನುಮತಿಯಿಲ್ಲದೆ ಅವಕಾಶ ನೀಡಲಾಗುವುದಿಲ್ಲವೆಂದು

- ಘೋಷಿಸುವ ತನ್ನ ಉದ್ದೇಶದ ಬಗ್ಗೆ ಸಾರ್ವಜನಿಕ ನೋಟೀಸನ್ನು ಕೊಡಬಹುದು.

(2) ಅಂಥ ನೋಟೀಸು ಪ್ರಕಟವಾದಂದಿನಿಂದ ಮೂರು ತಿಂಗಳುಗಳ ಅವಧಿಯ ತರುವಾಯ ಅಂಥ ಯಾವುದೇ ಘೋಷಣೆಯ ಬಗ್ಗೆ ಯಾವುವೇ ಆಕ್ಷೇಪಣೆಗಳನ್ನು ಸ್ವೀಕರಿಸತಕ್ಕದ್ದಲ್ಲ.

(3) ಸ್ಥಾಯೀ ಸಮಿತಿಯು, ಸದರಿ ಅವಧಿಯೊಳಗೆ ಸ್ವೀಕರಿಸಿದ ಎಲ್ಲಾ ಆಕ್ಷೇಪಣೆಗಳನ್ನು ಪರ್ಯಾಲೋಚಿಸತಕ್ಕದ್ದು ಮತ್ತು ಅನಂತರ ಘೋಷಣೆಯನ್ನು ಸ್ಥಿರೀಕರಿಸಬಹುದು ಮತ್ತು ಹಾಗೆ ಮಾಡುವುದಕ್ಕೆ ಮೊದಲು ಅದನ್ನು ಮಾರ್ಪಾಡು ಮಾಡಬಹುದು. ಆದರೆ ಅದರ ಪರಿಣಾಮವನ್ನು ವಿಸ್ತರಿಸುವ ಹಾಗೆ ಮಾಡತಕ್ಕದ್ದಲ್ಲ.

(4) ವಲಯ ಆಯುಕ್ತರು, ಹಾಗೆ ಸ್ಥಿರೀಕರಿಸಿದ ಯಾವುದೇ ಘೋಷಣೆಯನ್ನು ಪ್ರಕಟಿಸತಕ್ಕದ್ದು ಮತ್ತು ಅದು ಪ್ರಕಟವಾದ ದಿನಾಂಕದಿಂದ ಪರಿಣಾಮಕಾರಿಯಾಗಿರತಕ್ಕದ್ದು.

(5) ಯಾರೇ ವ್ಯಕ್ತಿಯು ಅಂಥ ಘೋಷಣೆಯು ಪ್ರಕಟವಾದ ದಿನಾಂಕದ ತರುವಾಯ ಅಂಥ ಯಾವುದೇ ಘೋಷಣೆಯನ್ನು ಉಲಂಘಿಸಿ ಯಾವುದೇ ಕಟ್ಟಡವನ್ನು ನಿರ್ಮಿಸತಕ್ಕದ್ದಲ್ಲ ಅಥವಾ ಪುನರ್ ನಿರ್ಮಿಸತಕ್ಕದ್ದಲ್ಲ.

251. ಬೀದಿಗಳ ಮೂಲೆಯಲ್ಲಿ ಕಟ್ಟಡ ಕಟ್ಟುವುದು.- (1) ಪಾಲಿಕೆಯು, ಎರಡು ಬೀದಿಗಳ ಮೂಲೆಯಲ್ಲಿ ನಿರ್ಮಿಸಲು ಉದ್ದೇಶಿಸಿರುವ ಯಾವುದೇ ಕಟ್ಟಡವನ್ನು ತಾನು ಅನ್ಯಥಾ ನಿರ್ಧರಿಸಬಹುದಾದಂಥ ಎತ್ತರಕ್ಕೆ ಮತ್ತು ಅಂಥ ವಿಸ್ತೀರ್ಣಕ್ಕೆ ನೇರ್ಪಡಿಸಲು ಅಥವಾ ಎದ್ದು ಕಾಣುವಂತೆ ಮಾಡಲು ಅಗತ್ಯಪಡಿಸಬಹುದು ಮತ್ತು ಸಾರ್ವಜನಿಕರ ಅನುಕೂಲತೆ ಅಥವಾ ಸೌಕರ್ಯಕ್ಕಾಗಿ ಅದು ಅವಶ್ಯವೆಂದು ಪರಿಗಣಿಸಬಹುದಾದಂತೆ ಮೂಲೆಯಲ್ಲಿನ ನಿವೇಶನದ ಅಂಥ ಭಾಗವನ್ನು ಆರ್ಜಿಸಬಹುದು.

(2) ಹಾಗೆ ಆರ್ಜಿಸಿದ ಯಾವುದೇ ಭೂಮಿಗೆ ಪಾಲಿಕೆಯು ಭೂ ಸ್ವಾಧೀನ ಅಧಿನಿಯಮಕ್ಕೆ ಅನುಸಾರವಾಗಿ ಪರಿಹಾರವನ್ನು ಸಂದಾಯ ಮಾಡತಕ್ಕದ್ದು.

(3) ಅಂಥ ಪರಿಹಾರವನ್ನು ನಿರ್ಧರಿಸುವಲ್ಲಿ, ಬೀದಿಗಳ ಮೇಲ್ಪಾಟಿನಿಂದ ಅದೇ ಆವರಣಕ್ಕೆ ಪ್ರಾಪ್ತವಾಗುವ ಯಾವುದೇ ಪ್ರಯೋಜನಕ್ಕಾಗಿ ಅವಕಾಶ ಕಲ್ಪಿಸತಕ್ಕದ್ದು.

252. ಬೇರೆ ರೀತಿಯಲ್ಲಿ ಅನಧಿಕೃತವಾಗಿ ಕಟ್ಟುವುದನ್ನು ಅಥವಾ ಅನಧಿಕೃತ ನಿರ್ಮಾಣಗಳನ್ನು ತಡೆಯಲು ವಿಫಲನಾದ ಆ ಪ್ರದೇಶದ ಅಧಿಕಾರ ವ್ಯಾಪ್ತಿಯುಳ್ಳ ಅಧಿಕಾರಿಗೆ ದಂಡ.- ತನ್ನ ಅಧಿಕಾರ ವ್ಯಾಪ್ತಿಯುಳ್ಳ ಪ್ರದೇಶದಲ್ಲಿ ಬೇರೆ ರೀತಿಯಲ್ಲಿ ಅನಧಿಕೃತವಾಗಿ ಕಟ್ಟುವುದನ್ನು ಅಥವಾ ಅನಧಿಕೃತ ನಿರ್ಮಾಣಗಳನ್ನು ತಡೆಯಲು ಅಂಥ ಅಧಿಕಾರಿಯು ವಿಫಲನಾಗಿರುವನೆಂದು ರುಜುವಾತಾದಲ್ಲಿ ಅವನು, ನಿಯಮಿಸಬಹುದಾದಂಥ ಶಿಕ್ಷೆಗೆ ಗುರಿಯಾಗತಕ್ಕದ್ದು.

253. ವಲಯ ಆಯುಕ್ತರ ನಿರ್ಣಯಗಳ ವಿರುದ್ಧ ಮೇಲ್ಮನವಿ.- (1)ಈ ಪ್ರಕರಣದ ಮೇರೆಗೆ ವಲಯ ಆಯುಕ್ತರ ನಿರ್ಣಯದಿಂದ ಬಾಧಿತನಾದ ಯಾರೇ ವ್ಯಕ್ತಿಯು ಅಂತಹ ನಿರ್ಣಯವನ್ನು ಸ್ವೀಕರಿಸಿದ ದಿನಾಂಕದಿಂದ ಮೂವತ್ತು ದಿನಗಳೊಳಗೆ ಮುಖ್ಯ ಆಯುಕ್ತರಿಗೆ ಮೇಲ್ಮನವಿಯನ್ನು ಸಲ್ಲಿಸತಕ್ಕದ್ದು ಹಾಗೂ ಮುಖ್ಯ ಆಯುಕ್ತರ ತೀರ್ಮಾನವೇ ಅಂತಿಮವಾಗಿರತಕ್ಕದ್ದು.

(2) ಮುಖ್ಯ ಆಯುಕ್ತರು (1)ನೇಉಪ-ಪ್ರಕರಣದ ಅಡಿಯಲ್ಲಿ ತನಗೆ ಒಪ್ಪಿಸಿದ ಯಾವುದೇ ವಿಷಯಗಳನ್ನು ಅರವತ್ತುದಿನಗಳೊಳಗೆ ತೀರ್ಮಾನಿಸತಕ್ಕದ್ದು.

ಅಧ್ಯಾಯXVII
ಉಪದ್ರವ

254. ಉಪದ್ರವ ನಿಷೇಧ.- (1) ಯಾರೇ ವ್ಯಕ್ತಿಯು ಯಾವುದೇ ಸಾರ್ವಜನಿಕ ಬೀದಿ ಅಥವಾ ಸಾರ್ವಜನಿಕ ಸ್ಥಳದಲ್ಲಿ ಯಾವುದೇ ಉಪದ್ರವವನ್ನುನೀಡತಕ್ಕದ್ದಲ್ಲ, ಅಥವಾ

(ಎ) ಯಾವುದೇ ಕಟ್ಟಡ, ಸ್ಮಾರಕ, ಕಂಬ, ಗೋಡೆ, ಬೇಲಿ, ಮರದ ಮೇಲೆ ಅಥವಾ ಇತರ ಯಾವುದೇ ಸಾರ್ವಜನಿಕ ಜಾಗದಲ್ಲಿ, ಯಾವುದೇ ಕರಪತ್ರ, ನೋಟೀಸು, ಅಥವಾ ಇತರೆ ದಸ್ತಾವೇಜುಗಳನ್ನು ಅನಧಿಕೃತವಾಗಿ ಅಂಟಿಸತಕ್ಕದ್ದಲ್ಲ.

(ಬಿ) ಕಟ್ಟಡ, ಸ್ಮಾರಕ, ಕಂಬ, ಗೋಡೆ, ಬೇಲಿ, ಮರ ಅಥವಾ ಯಾವುದೇ ಸಾರ್ವಜನಿಕಸ್ಥಳವನ್ನು, ಅನಧಿಕೃತವಾಗಿ ವಿರೂಪಗೊಳಿಸತಕ್ಕದ್ದಲ್ಲ ಅಥವಾ ಅವುಗಳ ಮೇಲೆ ಬರೆಯತಕ್ಕದ್ದಲ್ಲ ಅಥವಾ ಬೇರೆ ಏನಾದರೂ ಗುರುತು ಮಾಡತಕ್ಕದ್ದಲ್ಲ.

(ಸಿ) ವಲಯಆಯುಕ್ತರು ಈ ಬಗ್ಗೆ ನೋಟೀಸಿನ ಮೂಲಕ ಮಾಡಿದ ಯಾವುದೇ ನಿಷೇಧವನ್ನು ಉಲಂಘಿಸಿ, ಯಾವುದೇ ಮಾರ್ಗದ ಉದ್ದಕ್ಕೂ ಕಸ, ಹೊಲಸು ಅಥವಾ ಇತರ ಮಾಲಿನ್ಯಕಾರಕ ಮತ್ತು ಅಸಹ್ಯಕರ ಪದಾರ್ಥಗಳನ್ನು ಸಾಗಿಸತಕ್ಕದ್ದಲ್ಲ, ಅಥವಾ

(ಡಿ) ಯಾವುದೇ ಶವವನ್ನು ಆ ಉದ್ದೇಶಕ್ಕಾಗಿ ಪರವಾನಿಗೆ ಇಲ್ಲದೇ ಇರುವಂತಹ ಸ್ಥಳಗಳಲ್ಲಿ ಹೂಳತಕ್ಕದ್ದಲ್ಲ ಅಥವಾ ಸುಡತಕ್ಕದ್ದಲ್ಲ ಅಥವಾ ಅನ್ಯಥಾ ವಿಲೆಮಾಡತಕ್ಕದ್ದಲ್ಲ, ಅಥವಾ

(ಇ) ನೆರೆಹೊರೆಯಲ್ಲಿ ಹಾದುಹೋಗುವ, ವಾಸಮಾಡುತ್ತಿರುವ ಅಥವಾ ಕಾರ್ಯನಿರ್ವಹಿಸುತ್ತಿರುವ ವ್ಯಕ್ತಿಗಳಿಗೆ ಅಪಾಯವುಂಟಾಗುವಂತೆ ಅಥವಾ ಅಪಾಯವುಂಟಾಗುವ ಸಂಭವವಿರುವಂತೆ ಕಲ್ಲುಗಣಿಗಾರಿಕೆ ನಡೆಸತಕ್ಕದ್ದಲ್ಲ, ಸ್ಫೋಟಿಸತಕ್ಕದ್ದಲ್ಲ, ಮರವನ್ನು ಕತ್ತರಿಸತಕ್ಕದ್ದಲ್ಲ ಅಥವಾ ಸಾಗಿಸತಕ್ಕದ್ದಲ್ಲ ಅಥವಾ ಕಟ್ಟಡ ಕಾರ್ಯಾಚರಣೆಗಳನ್ನು ನಡೆಸತಕ್ಕದ್ದಲ್ಲ;

ಎಫ್) ಶಬ್ದಮಾಲಿನ್ಯ ನಿಯಂತ್ರಣ ಆದೇಶವೇನಾದರೂ ಇದ್ದರೆ, ಅದನ್ನು ಉಲಂಘಿಸಿ, ಸಾರ್ವಜನಿಕ ಶಾಂತಿ ಮತ್ತು ಸುವ್ಯವಸ್ಥೆಗೆ ಭಂಗತರತಕ್ಕದ್ದಲ್ಲ; ಅಥವಾ

ಜಿ) ವಾಯುಮಾಲಿನ್ಯ ನಿಯಂತ್ರಣ ಆದೇಶವೇನಾದರೂ ಇದ್ದರೆ, ಅದನ್ನು ಉಲಂಘಿಸಿ, ಮಾಲಿನ್ಯವನ್ನುಂಟು ಮಾಡತಕ್ಕದ್ದಲ್ಲ; ಅಥವಾ

ಎಚ್) ಸಕ್ಷಮ ಪ್ರಾಧಿಕಾರದಿಂದ ಯಾವುದೇ ಅನುಮತಿ ಪಡೆಯದೆ ವಾಹನ ಅಥವಾ ಪಾದಾಚಾರಿಗಳ ಸಂಚಾರಕ್ಕೆಅಡ್ಡಿಯುಂಟುಮಾಡತಕ್ಕದ್ದಲ್ಲ.

(2) ವಲಯ ಆಯುಕ್ತರು ಅಥವಾ ಈ ಬಗ್ಗೆ ಅಧಿಕೃತಗೊಳಿಸಲಾದ ಅಧಿಕಾರಿಯು, ಯಾವುದೇ ಭೂಮಿ ಅಥವಾ ಕಟ್ಟಡದಲ್ಲಿ (1)ನೇ ಉಪ ಪ್ರಕರಣದಲ್ಲಿ ತಿಳಿಸಲಾದಂಥ ಉಪದ್ರವವನ್ನು ನೀಡಲಾಗಿದೆ ಎಂದು ಅಭಿಪ್ರಾಯಪಟ್ಟಲ್ಲಿ, ಅವರು ಲಿಖಿತ ನೋಟೀಸಿನ ಮೂಲಕ, ಯಾರ ಕೃತ್ಯ, ಲೋಪ ಅಥವಾ ಸಮ್ಮತಿಯಿಂದ ಉಪದ್ರವ ಸಂಭವಿಸಿತೋ ಅಥವಾ ಮುಂದುವರಿಯುತ್ತಿದೆಯೋ ಆ ವ್ಯಕ್ತಿಗೆ ಅಥವಾ ಅಂಥ ಭೂಮಿ ಅಥವಾ ಕಟ್ಟಡದ ಮಾಲೀಕರಿಗೆ, ಬಾಡಿಗೆದಾರರಿಗೆ ಅಥವಾ ಅನುಭೋಗದಾರರಿಗೆ ಕರ್ನಾಟಕ ಬಹಿರಂಗಸ್ಥಳಗಳ (ವಿರೂಪಗೊಳಿಸುವಿಕೆ ಪ್ರತಿಬಂಧ) ಅಧಿನಿಯಮ, 1981 (1982ರ ಕರ್ನಾಟಕ ಅಧಿನಿಯಮ 35) ಅನ್ವಯ ವಾಗುವೆಡೆಗಳಲ್ಲಿ ಅದರ ಉಪಬಂಧಗಳಿಗನು ಸಾರವಾಗಿ, ನೋಟೀಸಿನಲ್ಲಿ ನಿರ್ದಿಷ್ಟಪಡಿಸಿರಬಹುದಾದಂಥ ಕ್ರಮಗಳನ್ನುತೆಗೆದುಕೊಳ್ಳುವಮೂಲಕ, ಅಂಥ ರೀತಿಯಲ್ಲಿ ಮತ್ತು ಅಂಥ ಅವಧಿಯೊಳಗೆ ಮಾಡಿರುವ ಉಪದ್ರವವನ್ನು ತೆಗೆದುಹಾಕುವಂತೆ ಅಥವಾ ಹೋಗಲಾಡಿಸುವಂತೆ ಅಗತ್ಯಪಡಿಸತಕ್ಕದ್ದು.

(3) ವಲಯ ಆಯುಕ್ತರು ಅಥವಾ ಈ ಬಗ್ಗೆ ಪ್ರಾಧಿಕೃತವಾಗಿರುವ ಅಧಿಕಾರಿಯು, ಈ ಅಧಿನಿಯಮದ ಉಪಬಂಧಗಳನ್ನು ಉಲಂಘಿಸಿ, ಯಾವುದೇ ಜಮೀನು ಅಥವಾ ಕಟ್ಟಡದ ಮೇಲೆ (1)ನೇ ಉಪ-ಪ್ರಕರಣದ ಅನುಸಾರ ಮುಂದುವರಿಯುತ್ತಿರುವ ಯಾವುದೇ ಉಪದ್ರವವನ್ನು ಕೂಡಲೇ ತೆಗೆದುಹಾಕ ಬೇಕೆಂದು ಅಭಿಪ್ರಾಯಪಟ್ಟಲ್ಲಿ, ಅವರು ಲಿಖಿತದಲ್ಲಿ ದಾಖಲಿಸಬೇಕಾದ ಕಾರಣಗಳಿಗಾಗಿ, ಕರ್ನಾಟಕ ಬಹಿರಂಗಸ್ಥಳಗಳ (ವಿರೂಪಗೊಳಿಸುವಿಕೆಯ ಪ್ರತಿಬಂಧಕ) ಅಧಿನಿಯಮ, 1981ರ ಉಪಬಂಧಕ್ಕೆ ಅನುಸಾರವಾಗಿ, ಅನ್ವಯವಾಗುವ ಕಡೆಗಳಲ್ಲಿ ಕೂಡಲೇ ಅಂಥ ಉಪದ್ರವವನ್ನು ತೆಗೆದುಹಾಕಬೇಕಾದುದು ಅಗತ್ಯವಾಗಿದೆ.

(4) ಈ ಪ್ರಕರಣದ ಅಡಿಯಲ್ಲಿನ ಯಾವುದೇ ಆದೇಶವನ್ನು ಪಾಲಿಸಲು ವಿಫಲನಾಗುವಂಥ ಯಾರೇ ವ್ಯಕ್ತಿ ಅಥವಾ ವ್ಯಕ್ತಿಗಳ ಸಮೂಹವು ಕರ್ನಾಟಕ ಬಹಿರಂಗ ಸ್ಥಳಗಳ (ವಿರೂಪಗೊಳಿಸುವಿಕೆಯ ಪ್ರತಿಬಂಧಕ) ಅಧಿನಿಯಮ, 1981ರ (1982ರ ಕರ್ನಾಟಕ ಅಧಿನಿಯಮ 35) ಉಪಬಂಧವು ನಿಯಮಿಸಿರುವಂತೆ ಅಥವಾ ಅನ್ವಯವಾಗುವ ಕಡೆಗಳಲ್ಲಿ ಅವುಗಳಿಗನುಸಾರವಾಗಿ ದಂಡಕ್ಕೆ ಹೊಣೆಗಾರನಾಗಿರತಕ್ಕದ್ದು.

255. ಮಾಲಿನ್ಯ ನಿಯಂತ್ರಣ ಮತ್ತು ಮಾಲಿನ್ಯಕಾರಕನು ದಂಡಪಾವತಿಸುವುದು.- (1) ತತ್ಕಾಲದಲ್ಲಿ ಜಾರಿಯಲ್ಲಿರುವ ವಾಯು, ಜಲ ಅಥವಾ ಶಬ್ದಮಾಲಿನ್ಯಕ್ಕೆ ಸಂಬಂಧಿಸಿದ ಯಾವುದೇ ಕಾನೂನಿಗೆ ಒಳಪಟ್ಟು ಹಾಗೂ ಆ ಬಗ್ಗೆ ರಾಜ್ಯ ಸರ್ಕಾರವು ಹೊರಡಿಸಿರುವ ಯಾವುದೇ ಅಧಿಸೂಚನೆಗನುಸಾರವಾಗಿ ಪಾಲಿಕೆಯು ಅಂಥ ಕಾನೂನನ್ನು ಜಾರಿಗೊಳಿಸುವುದಕ್ಕೆ ಸಂಬಂಧಿಸಿದಂತೆ ಸಕ್ಷಮ ಪ್ರಾಧಿಕಾರವಾಗಿ ಕಾರ್ಯನಿರ್ವಹಿಸಬಹುದು.

(2) ಪಾಲಿಕೆಯು ವಿನಿಯಮಗಳ ಮೂಲಕ ಈ ಅಧ್ಯಾಯದಲ್ಲಿ ಉಲ್ಲೇಖಿಸಲಾದ ಯಾವುದೇ ರೀತಿಯ ಮಾಲಿನ್ಯವನ್ನುಂಟುಮಾಡುವುದಕ್ಕಾಗಿ ನೇರವಾಗಿ ಜವಾಬ್ದಾರರಾದಂಥ ವ್ಯಕ್ತಿಗಳಿಂದ ಶುಲ್ಕಗಳನ್ನು ವಸೂಲಿಮಾಡುವುದಕ್ಕಾಗಿ ಮತ್ತು ಅವರ ಮೇಲೆ ದಂಡವಿಧಿಸುವುದಕ್ಕಾಗಿ ಉಪಬಂಧ ಕಲ್ಪಿಸುವುದು.

256. ಅಪಾಯಕಾರಿ ರಚನೆಗಳ ಬಗ್ಗೆ ಮುನ್ನೆಚ್ಚರಿಕೆಗಳು.- (1) ಯಾವುದೇ ರಚನೆಯು ಹಾಳಾಗುವ ಸ್ಥಿತಿಯಲ್ಲಿದೆ ಎಂದು ಅಥವಾ ಹತ್ತಿರ ಹಾದುಹೋಗುವವರಿಗೆ ಅಥವಾ ನೆರೆಹೊರೆಯ ರಚನೆಗಳ ಅಧಿಭೋಗದಾರರಿಗೆ ಅಪಾಯಕಾರಿಯಾಗಿದೆಯೆಂದು ಮುಖ್ಯ ಆಯುಕ್ತರು ಭಾವಿಸಿದರೆ, ಮುಖ್ಯ ಆಯುಕ್ತರು ನೋಟೀಸಿನ ಮೂಲಕ ಮಾಲೀಕನನ್ನು ಅಥವಾ ಅಧಿಭೋಗದಾರನನ್ನು ಅದರಿಂದ ಉಂಟಾಗುವ ಯಾವುದೇ ಅಪಾಯವನ್ನು ತಡೆಗಟ್ಟುವ ಹಾಗೆ ಅಂಥ ರಚನೆಗೆ ಬೇಲಿ ಹಾಕಲು, ಅದನ್ನು ಕೆಡವಿಹಾಕಲು, ಭದ್ರ ಪಡಿಸಲು ಅಥವಾ ದುರಸ್ತಿ ಮಾಡಲು ಅಗತ್ಯಪಡಿಸಬಹುದು.

(2) ಕೂಡಲೇ ಕ್ರಮ ಕೈಗೊಳ್ಳುವುದು ಅವಶ್ಯವಾದರೆ, ಮುಖ್ಯ ಆಯುಕ್ತರು ಅಂಥ ನೋಟೀಸನ್ನು ಕೊಡುವುದಕ್ಕೆ ಮುಂಚೆ ಅಥವಾ ನೋಟೀಸಿನ ಅವಧಿಯು ಮುಕ್ತಾಯವಾಗುವುದಕ್ಕೆ ಮುಂಚೆ, ತಾವಾಗಿಯೇ ಅಂಥ ರಚನೆಗೆ ಬೇಲಿ ಹಾಕಿಸಬಹುದು, ಅದನ್ನು ಕೆಡವಿ ಹಾಕಿಸಬಹುದು, ಭದ್ರಪಡಿಸಬಹುದು ಅಥವಾ ದುರಸ್ತಿ ಮಾಡಿಸಬಹುದು ಅಥವಾ ಅಪಾಯವನ್ನು ತಡೆಗಟ್ಟುವುದಕ್ಕೆ ಯಾವುದೇ ಬೀದಿಯ ಭಾಗಕ್ಕೆ ಬೇಲಿ ಹಾಕಿಸಬಹುದು ಅಥವಾ ತಾನು ಸೂಕ್ತವೆಂದು ಯೋಚಿಸುವಂಥ ತಾತ್ಕಾಲಿಕ ಕ್ರಮಗಳನ್ನು ತೆಗೆದುಕೊಳ್ಳಬಹುದು ಮತ್ತು ಹಾಗೆ ಮಾಡುವುದಕ್ಕಾಗಿ ತಗಲುವ ಖರ್ಚನ್ನು ಮಾಲೀಕನಿಂದ ಅಥವಾ ಅಧಿಭೋಗದಾರನಿಂದ ಭೂ ಕಂದಾಯ ಬಾಕಿಗಳಂತೆ ವಸೂಲು ಮಾಡುವಂಥದ್ದು ಆಗಿರತಕ್ಕದ್ದು.

(3) ಸದರಿ ರಚನೆಯು, ಅದರಲ್ಲಿ ವಾಸಿಸುವವರಿಗೆ ಸನ್ನಿಹಿತ ಅಪಾಯ ಉಂಟುಮಾಡುವಂಥದ್ದೆಂದು ಮುಖ್ಯ ಆಯುಕ್ತರು ಅಭಿಪ್ರಾಯಪಟ್ಟರೆ, ಮುಖ್ಯ ಆಯುಕ್ತರು ಅದರಲ್ಲಿ ವಾಸಿಸುವವರು ಕೂಡಲೇ ಅದನ್ನು ಖಾಲಿ ಮಾಡಲು ಆದೇಶಿಸತಕ್ಕದ್ದು. ಮತ್ತು ಆದೇಶ ಪಾಲನೆ ಮಾಡದಿರುವ ಯಾರೇ ವ್ಯಕ್ತಿಗಳನ್ನು ಯಾರೇ ಪೊಲೀಸು ಅಧಿಕಾರಿಯು ಹೊರಹಾಕಬಹುದು.

257. ಅಪಾಯಕಾರಿ ಮರಗಳ ಬಗ್ಗೆ ಮುನ್ನೆಚ್ಚರಿಕೆಗಳು.- (1) ಮುಖ್ಯ ಆಯುಕ್ತರು, ಯಾವುದೇ ಮರವು ಅಥವಾ ಮರದ ಯಾವುದೇ ಕೊಂಬೆಯು ಅಥವಾ ಯಾವುದೇ ಮರದ ಹಣ್ಣು ಬೀಳುವ ಸಂಭವವಿದೆ ಎಂದು ಮತ್ತು ಅದರಿಂದಾಗಿ ಯಾರೇ ವ್ಯಕ್ತಿಗೆ ಅಥವಾ ಯಾವುದೇ ರಚನೆಗೆ ಅಪಾಯವುಂಟಾಗುವುದೆಂದು ಭಾವಿಸಿದರೆ, ಮುಖ್ಯ ಆಯುಕ್ತರು ನೋಟೀಸಿನ ಮೂಲಕ ಸದರಿ ಮರದ ಮಾಲೀಕನನ್ನು ಅದರಿಂದ ಉಂಟಾಗುವ ಯಾವುದೇ ಅಪಾಯವನ್ನು ತಡೆಗಟ್ಟುವ ಹಾಗೆ ಅದನ್ನು ಭದ್ರಪಡಿಸಲು, ಸವರಲು, ಕತ್ತರಿಸಿಹಾಕಲು ಅಥವಾ ಹಣ್ಣನ್ನು ಕೀಳಲು ಅಗತ್ಯಪಡಿಸಬಹುದು.

(2) ಕೂಡಲೇ ಕ್ರಮಕ್ಕೆಗೊಳ್ಳುವುದು ಅವಶ್ಯವಾದರೆ ಮುಖ್ಯ ಆಯುಕ್ತರು ಅಂಥ ನೋಟೀಸನ್ನು ಕೊಡುವ ಮುಂಚೆ ಅಥವಾ ಅಂಥ ನೋಟೀಸಿನ ಅವಧಿಯು ಮುಕ್ತಾಯವಾಗುವುದಕ್ಕೆ ಮುಂಚೆ ತಾವಾಗಿಯೇ ಸದರಿ ಮರವನ್ನು ಭದ್ರಪಡಿಸಬಹುದು, ಸವರಿಹಾಕಿಸಬಹುದು ಅಥವಾ ಕತ್ತರಿಸಿಹಾಕಿಸಬಹುದು ಅಥವಾ ಅದರ ಹಣ್ಣನ್ನು ಕೀಳಿಸಬಹುದು ಅಥವಾ ಯಾವುದೇ ಬೀದಿಯ ಭಾಗಕ್ಕೆ ಬೇಲಿ ಹಾಕಿಸಬಹುದು ಅಥವಾ ಅಪಾಯವನ್ನು ತಪ್ಪಿಸಲು ತಾನು ಸೂಕ್ತವೆಂದು ಯೋಚಿಸಬಹುದಾದಂಥ ತಾತ್ಕಾಲಿಕ ಕ್ರಮಗಳನ್ನು ತೆಗೆದುಕೊಳ್ಳಬಹುದು ಮತ್ತು ಹಾಗೆ ಮಾಡುವುದಕ್ಕಾಗಿ ತಗಲುವ ಖರ್ಚನ್ನು ಮರದ ಮಾಲೀಕನಿಂದ ಭೂ ಕಂದಾಯ ಬಾಕಿಗಳಂತೆ ವಸೂಲು ಮಾಡುವಂಥದ್ದು ಆಗಿರತಕ್ಕದ್ದು.

258. ಅಪಾಯಕಾರಿ ಕೆರೆಗಳು, ಬಾವಿಗಳು, ಗುಂಡಿಗಳು ಇತ್ಯಾದಿಗಳ ಬಗ್ಗೆ ಮುನ್ನೆಚ್ಚರಿಕೆಗಳು.- (1) ಮುಖ್ಯ ಆಯುಕ್ತರು, ಯಾವುದೇ ಕೆರೆ, ಕೊಳ, ಬಾವಿ, ಗುಂಡಿ, ತೊರೆ, ಒಡ್ಡು, ದಂಡೆ ಅಥವಾ ಇತರ ಸ್ಥಳವು ಸಾಕಷ್ಟು ದುರಸ್ತಿ, ಸಂರಕ್ಷಣೆ ಅಥವಾ ಸುತ್ತುಗಟ್ಟು ಇಲ್ಲದಿರುವುದಕ್ಕಾಗಿ ಹಾದುಹೋಗುವವರಿಗೆ ಅಥವಾ ನೆರೆಹೊರೆಯಲ್ಲಿ ವಾಸಿಸುತ್ತಿರುವ ವ್ಯಕ್ತಿಗಳಿಗೆ ಅಪಾಯಕಾರಿಯಾಗಿರುವುದಾಗಿ ಭಾವಿಸಿದರೆ, ಮುಖ್ಯ ಆಯುಕ್ತರು, ಅದರಿಂದ ಅಪಾಯವನ್ನು ತಡೆಗಟ್ಟುವ ಹಾಗೆ ಅದನ್ನು ಮುಚ್ಚಿಸಲು, ತೆಗೆದುಹಾಕಿಸಲು, ದುರಸ್ತಿ ಮಾಡಿಸಲು, ಸಂರಕ್ಷಿಸಲು ಅಥವಾ ಸುತ್ತುಗಟ್ಟು ನಿರ್ಮಿಸಲು ಮಾಲೀಕನನ್ನು ನೋಟೀಸಿನ ಮೂಲಕ ಅಗತ್ಯಪಡಿಸಬಹುದು.

(2) ಕೂಡಲೇ ಕ್ರಮ ಕೈಗೊಳ್ಳುವುದು ಅವಶ್ಯವಾದರೆ ಮುಖ್ಯ ಆಯುಕ್ತರು ಅಂಥ ನೋಟೀಸನ್ನು ಕೊಡುವುದಕ್ಕೆ ಮುಂಚೆ ಅಥವಾ ನೋಟೀಸಿನ ಅವಧಿಯು ಮುಕ್ತಾಯವಾಗುವುದಕ್ಕೆ ಮುಂಚೆ ಅಪಾಯವನ್ನು ತಡೆಗಟ್ಟುವುದಕ್ಕೆ ತಾನು ಸೂಕ್ತವೆಂದು ಯೋಚಿಸುವಂಥ ತಾತ್ಕಾಲಿಕ ಕ್ರಮಗಳನ್ನು ತಾವಾಗಿಯೇ ತೆಗೆದುಕೊಳ್ಳಬಹುದು ಮತ್ತು ಹಾಗೆ ಮಾಡುವುದಕ್ಕಾಗಿ ತಗಲುವ ಖರ್ಚನ್ನು ಭೂ ಕಂದಾಯ ಬಾಕಿಗಳಂತೆ ಮಾಲೀಕನಿಂದ ವಸೂಲು ಮಾಡುವಂಥದ್ದು ಆಗಿರತಕ್ಕದ್ದು.

259. ಬೆಂಕಿಯ ವಿರುದ್ಧ ಮುನ್ನೆಚ್ಚರಿಕೆ.- (1) ಮುಖ್ಯ ಆಯುಕ್ತರು, ಯಾವುದೇ ರಚನೆಯ ಭಾಗಶಃ ಅಥವಾ ಸಂಪೂರ್ಣವಾಗಿ ಹೊರಚಾವಣಿಯಿಂದ ಕೂಡಿರುವ ಅಥವಾ ಹೊಂದಿರುವ ಯಾವುದೇ ಬೂತಿನ ಅಥವಾ ಟೆಂಟಿನ, ವರಾಂಡದ, ಪೆಂಡಾಲಿನ ಅಥವಾ ಬೇಲಿಯ ಅಥವಾ ಬಟ್ಟೆಯಿಂದ ಅಥವಾ ಹುಲ್ಲಿನಿಂದ, ಎಲೆಗಳಿಂದ ಅಥವಾ ಚಾಪೆಗಳಿಂದ ಅಥವಾ ಇತರ ಸುಲಭ ದಹನ ಸಾಮಗ್ರಿಗಳಿಂದ ಕೂಡಿರುವ ಗೋಡೆಯ ಮಾಲೀಕನನ್ನು, ಅಂಥ ರಚನೆಯನ್ನು, ಬೂತನ್ನು, ಟೆಂಟನ್ನು, ಚಾವಣಿಯನ್ನು, ವರಾಂಡವನ್ನು, ಪೆಂಡಾಲನ್ನು, ಬೇಲಿಯನ್ನು ಅಥವಾ ಗೋಡೆಯನ್ನು ತೆಗೆದುಹಾಕುವಂತೆ ಅಥವಾ ಬದಲಾಯಿಸುವಂತೆ ಅಗತ್ಯಪಡಿಸಬಹುದು ಅಥವಾ ಬೆಂಕಿಯಿಂದ ಅಪಾಯವನ್ನು ತಪ್ಪಿಸಲು ಮುಖ್ಯ ಆಯುಕ್ತರು ಅವಶ್ಯವೆಂದು ಯೋಚಿಸಬಹುದಾದಂಥ ಪರತ್ತುಗಳ ಮೇಲೆ ಅವುಗಳನ್ನು ಉಳಿಸಿಕೊಳ್ಳಲು ಅವನಿಗೆ ಅನುಮತಿಯನ್ನು ಕೊಡಬಹುದು.

(2) ಮುಖ್ಯ ಆಯುಕ್ತರು, ಮರಮುಟ್ಟು, ಸೌದೆ ಅಥವಾ ಇತರ ದಹನ ವಸ್ತುಗಳನ್ನು ಖಾಸಗಿ ಬಳಕೆಗಾಗಿ ದಾಸ್ತಾನು ಮಾಡಲು ಯಾವುದೇ ಸ್ಥಳವನ್ನು ಬಳಸುತ್ತಿರುವ ಯಾರೇ ವ್ಯಕ್ತಿಯನ್ನು ಬೆಂಕಿಯಿಂದ ಅಪಾಯವಾಗದಂತೆ ರಕ್ಷಿಸಲು ವಿಶೇಷ ಕ್ರಮಗಳನ್ನು ತೆಗೆದುಕೊಳ್ಳುವಂತೆ ನೋಟೀಸು ಮೂಲಕ ಅಗತ್ಯಪಡಿಸಬಹುದು.

(3) ಬೆಂಕಿಯು ಹೊತ್ತಿಕೊಂಡ ಸಂದರ್ಭದಲ್ಲಿ ಯಾವುದೇ ರಚನೆಯಿಂದ ಸುರಕ್ಷಿತವಾಗಿ ಹೊರ ಹೋಗಲು ಕಲ್ಪಿಸಿರುವ ಸಾಧನಗಳು ಸಾಕಷ್ಟಿಲ್ಲವೆಂದು ಮುಖ್ಯ ಆಯುಕ್ತರು ಅಭಿಪ್ರಾಯಪಟ್ಟರೆ ಅವರು ಸ್ಥಾಯೀ ಸಮಿತಿಯ ಮಂಜೂರಾತಿಯೊಂದಿಗೆ ನೋಟೀಸು ಮೂಲಕ ರಚನೆಯ ಮಾಲೀಕನನ್ನು ಅಥವಾ ಅಧಿಭೋಗದಾರನನ್ನು ಅವರು ನಿರ್ದೇಶಿಸಬಹುದಾದಂಥ ರೀತಿಯಲ್ಲಿ ಯಾವುದೇ ಮೆಟ್ಟಿಲ ಸಾಲುಗಳನ್ನು ಬದಲಾಯಿಸಲು ಅಥವಾ ಪುನರ್‌ರಚಿಸಲು ಅಥವಾ ಅಂಥ ಹೆಚ್ಚಿನ ಅಥವಾ ತುರ್ತು ಮೆಟ್ಟಿಲ ಸಾಲುಗಳನ್ನು ಕಲ್ಪಿಸುವಂತೆ ಅಗತ್ಯಪಡಿಸಬಹುದು; ಮತ್ತು ಸಾರ್ವಜನಿಕ ಮನೋರಂಜನೆಯ ಉದ್ದೇಶಗಳಿಗಾಗಿ ಯಾವುದೇ ರಚನೆಯನ್ನು, ಬೂತನ್ನು ಅಥವಾ ಟೆಂಟನ್ನು ಬಳಸುವಾಗ ಮೇಲೆ ಹೇಳಿದಂತೆ ಮಂಜೂರಾತಿಗೆ ಒಳಪಟ್ಟು ಅವರು, ಪ್ರೇಕ್ಷಕರು ಸುರಕ್ಷಿತವಾಗಿ ಹೊರಗೆ ಹೋಗುವುದಕ್ಕೆ ಸಾಕಷ್ಟು ಸಾಧನಗಳನ್ನು ಇಟ್ಟಿರುವ ಮತ್ತು ನಿರ್ವಹಿಸಿರುವ, ಸ್ಪಷ್ಟವಾಗಿ ತೋರಿಸಿರುವ ಸಾಕಷ್ಟು ಸಂಖ್ಯೆಯ ಮಾರ್ಗಗಳನ್ನು ಒದಗಿಸತಕ್ಕದ್ದೆಂದು, ಹೊರಗೆ ಹೋಗುವ ಮಾರ್ಗಗಳಿಗೆ ಮುಕ್ತ ಪ್ರವೇಶಕ್ಕೆ ಅಡಚಣೆ ಉಂಟಾಗದ ಹಾಗೆ ಆಸನ ವ್ಯವಸ್ಥೆಯನ್ನು ಕಲ್ಪಿಸಬೇಕೆಂದು ಮತ್ತು ಹೊರಹೋಗುವ ದಾರಿಗಳಿಗೆ ಸಂಪರ್ಕವಿರುವ ನಡುದಾರಿಗಳನ್ನು, ದಾರಿಗಳನ್ನು ಮತ್ತು ಮೆಟ್ಟಿಲಸಾಲುಗಳನ್ನು ಸಾರ್ವಜನಿಕರು ಇರುವಾಗ ಅಡಚಣೆಗಳಿಂದ ಮುಕ್ತವಾಗಿ ಇಟ್ಟಿರತಕ್ಕದ್ದೆಂದು ಅಗತ್ಯಪಡಿಸಬಹುದು.

260. ಹೊಲಸು ಅಥವಾ ಹಾನಿಕರ ಸಸ್ಯಗಳನ್ನು ತೆಗೆದುಹಾಕುವುದು.- ಮುಖ್ಯ ಆಯುಕ್ತರು**,** ನೋಟೀಸಿನ ಮೂಲಕ (ಹೊಲಸು ಅಥವಾ ಅನಾರೋಗ್ಯಕರ ಸ್ಥಿತಿಯಲ್ಲಿರುವುದೆಂದು ಅಥವಾ ಆರೋಗ್ಯಕ್ಕೆ ಹಾನಿಕರವಾದ ಅಥವಾ ನೆರೆಹೊರೆಗೆ ಅಸಹ್ಯಕರವಾದ ಯಾವುದೇ ದಟ್ಟ ಅಥವಾ ಹಾನಿಕರ ಸಸ್ಯಗಳು, ಮರಗಳು ಅಥವಾ ಗಿಡಗಂಟೆಗಳು ಮಿತಿಮೀರಿ ಬೆಳೆದಿರುವುದಾಗಿ ಅವರಿಗೆ ಕಂಡು ಬರುವ) ಯಾವುದೇ ಕಟ್ಟಡದ ಅಥವಾ ಭೂಮಿಯ ಮಾಲೀಕನನ್ನು ಅಥವಾ ಅಧಿಭೋಗದಾರನನ್ನು ಆ ಕಟ್ಟಡವನ್ನು ಅಥವಾ ಭೂಮಿಯನ್ನು ಸ್ವಚ್ಛಗೊಳಿಸಲು, ತೆರವುಗೊಳಿಸಲು ಅಥವಾ ಅನ್ಯಥಾ ಅದನ್ನು ಸರಿಯಾದ ಸ್ಥಿತಿಯಲ್ಲಿಡಲು ಅಥವಾ ಅಂಥ ಸಸ್ಯಗಳು, ಮರಗಳು ಅಥವಾ ಗಿಡ ಗಂಟೆಗಳನ್ನು ಇಪ್ಪತ್ನಾಲ್ಕು ಗಂಟೆಗಳೊಳಗಾಗಿ ಅಥವಾ ನೋಟೀಸಿನಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಹೆಚ್ಚಿನ ಅವಧಿಯೊಳಗಾಗಿ ಮತ್ತು ಅಂಥ ರೀತಿಯಲ್ಲಿ ಕತ್ತರಿಸಿ ತೆಗೆದುಹಾಕಲು ಅಗತ್ಯಪಡಿಸಬಹುದು.

261. ಧೂಳು, ಹೊಗೆ, ಇತ್ಯಾದಿಗಳಿಂದ ಆಗುವ ಉಪದ್ರವವನ್ನು ನಿವಾರಿಸುವುದು.- ಯಾವುದೇ ಕಟ್ಟಡದಲ್ಲಿ ಅಥವಾ ಭೂಮಿಯಲ್ಲಿ ಕಲ್ಲಿದ್ದಲು, ಇದ್ದಲು, ಬೂದಿ, ಕಿಟ್ಟ, ಗೋಣಿಚೀಲಗಳು, ಉಣ್ಣೆ, ಹತ್ತಿ ಅಥವಾ ಯಾವುದೇ ಸಾಮಗ್ರಿಯನ್ನು ದಾಸ್ತಾನು ಮಾಡುವುದು, ರಾಶಿ ಹಾಕುವುದು, ಅಥವಾ ಸಂಗ್ರಹಿಸುವುದರಿಂದಾಗಿ ಅಥವಾ ಅಂಥ ಕಲ್ಲಿದ್ದಲು, ಇದ್ದಲು, ಬೂದಿ, ಕಿಟ್ಟ ಅಥವಾ ಸಾಮಗ್ರಿಯನ್ನು ಸ್ಥಳಾಂತರಿಸುವುದು, ಒಡೆಯುವುದು, ಕತ್ತರಿಸುವುದು, ಅಥವಾ ಸುಡುವುದರಿಂದಾಗಿ ಅಥವಾ ಅದನ್ನು ಯಾವುದೇ ಸಂಸ್ಕರಣೆಗೆ ಒಳಪಡಿಸುವುದರಿಂದಾಗಿ, ಧೂಳು, ತೇಲುವ ಕಣಗಳು, ಹೊಗೆ, ದುರ್ವಾಸನೆ ಅಥವಾ ಶಬ್ದ ಹೊರಹೊಮ್ಮುವುದರಿಂದ ಅಥವಾ ಅನ್ಯಥಾ ಅಂಥ ಕಟ್ಟಡದ ಅಥವಾ ಭೂಮಿಯ ನೆರೆಹೊರೆಯಲ್ಲಿನ ನಿವಾಸಿಗಳಿಗೆ ಉಪದ್ರವವಾಗುತ್ತದೆ ಅಥವಾ ಉಪದ್ರವವಾಗುವ ಸಂಭವವಿದೆಯೆಂದು, ಮುಖ್ಯ ಆಯುಕ್ತರು ಅಭಿಪ್ರಾಯಪಟ್ಟರೆ ಅವರು, ಅಂಥ ಕಟ್ಟಡ ಅಥವಾ ಭೂಮಿಯ ಮಾಲೀಕನನ್ನು ಅಥವಾ ಅಧಿಭೋಗದಾರನನ್ನು ಅಂಥ ಉಪದ್ರವವನ್ನು ನಿವಾರಿಸುವುದಕ್ಕಾಗಿ ನೋಟೀಸಿನ ಮೂಲಕ, ನೋಟೀಸಿನಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಕ್ರಮಕ್ಕೆಗೊಳ್ಳಲು ಅಗತ್ಯಪಡಿಸಬಹುದು.

262. ಕಟ್ಟಡಗಳು ಅಥವಾ ಭೂಮಿಗಳಿಗೆ ಬೇಲಿ ಹಾಕುವುದು ಮತ್ತು ಹಸಿರು ಬೇಲಿಗಳನ್ನು ಮತ್ತು ಮರಗಳನ್ನು ಸವರುವುದು.- ಮುಖ್ಯ ಆಯುಕ್ತರು, ಸಾರ್ವಜನಿಕ ಬೀದಿಗೆ ಸಮೀಪವಿರುವ ಯಾವುದೇ ಕಟ್ಟಡದ ಅಥವಾ ಭೂಮಿಯ ಮಾಲೀಕನನ್ನು ಅಥವಾ ಅಧಿಭೋಗದಾರರನ್ನು-

(ಎ) ಮುಖ್ಯ ಆಯುಕ್ತರಿಗೆ ಸಮಾಧಾನವಾಗುವಂತೆ ಅದಕ್ಕೆ ಬೇಲಿ ಹಾಕಲು; ಅಥವಾ

(ಬಿ) ಸದರಿ ಬೀದಿಯ ಅಂಚಿನಲ್ಲಿರುವ ಯಾವುದೇ ಹಸಿರು ಬೇಲಿಗಳು, ಪಕ್ಕದಲ್ಲಿರುವ ರಸ್ತೆಯ ಮಟ್ಟದಿಂದ ಮುಖ್ಯ ಆಯುಕ್ತರು ನಿರ್ಧರಿಸಬಹುದಾದಂಥ ಎತ್ತರವನ್ನು ಮೀರದ ಹಾಗೆ ಅವುಗಳನ್ನು ಕತ್ತರಿಸಿ ಸಮಮಾಡಲು ಅಥವಾ ಸವರಲು; ಅಥವಾ

(ಸಿ) ಸದರಿ ಬೀದಿಯ ಮೇಲೆ ಚಾಚಿಕೊಂಡಿರುವ ಮತ್ತು ಅದನ್ನು ಅಥವಾ ಅದರಲ್ಲಿ ಸಂಚರಿಸುವ ವಾಹನಗಳು ಕಾಣದ ಹಾಗೆ ಅಡ್ಡಿಯುಂಟು ಮಾಡುವ ಅಥವಾ ಅದಕ್ಕೆ ಹಾನಿಯುಂಟು ಮಾಡುವ ಯಾವುದೇ ಹಸಿರು ಬೇಲಿಗಳನ್ನು ಮತ್ತು ಮರಗಳನ್ನು ಕತ್ತರಿಸಲು ಮತ್ತು ಕತ್ತರಿಸಿ ಸಮಮಾಡಲು; ಅಥವಾ

(ಡಿ) ಗೋಡೆಯ ಅಥವಾ ಬೇಲಿಯ ಎತ್ತರ ಮತ್ತು ಅದು ಇರುವ ಸ್ಥಳದ ಕಾರಣದಿಂದಾಗಿ ಅಪಾಯವನ್ನು ಉಂಟುಮಾಡುವ ಹಾಗೆ, ಸಂಚರಿಸುವ ವಾಹನಗಳು ಕಾಣದಂತೆ ಅಡ್ಡಿಯುಂಟುಮಾಡುವ ಸುತ್ತುಗಟ್ಟಿರುವ ಗೋಡೆಯ ಅಥವಾ ಬೇಲಿಯ ಎತ್ತರವನ್ನು ತಗ್ಗಿಸಲು

- ನೋಟೀಸಿನ ಮೂಲಕ ಅಗತ್ಯಪಡಿಸಬಹುದು.

263. ಮನುಷ್ಯರ ವಾಸಕ್ಕೆ ಯೋಗ್ಯವಲ್ಲದ ಕಟ್ಟಡ.- (1) ವಾಸಸ್ಥಳಕ್ಕೆ ಉದ್ದೇಶಿಸಲಾದ ಅಥವಾ ವಾಸಸ್ಥಳವಾಗಿ ಬಳಸುತ್ತಿರುವ ಯಾವುದೇ ಕಟ್ಟಡವು ಅಥವಾ ಅದರ ಭಾಗವು ಮನುಷ್ಯರ ವಾಸಕ್ಕೆ ಯೋಗ್ಯವಾಗಿಲ್ಲವೆಂದು ಮುಖ್ಯ ಆಯುಕ್ತರಿಗೆ ಕಂಡುಬಂದರೆ, ಅವರು ಅಂಥ ಉದ್ದೇಶಕ್ಕಾಗಿ ಅಂಥ ಕಟ್ಟಡವನ್ನು ಮುಂದೆ ಬಳಸುವುದನ್ನು ನಿಷೇಧಿಸಲು ಸ್ಥಾಯೀ ಸಮಿತಿಗೆ ಮನವಿ ಮಾಡಿಕೊಳ್ಳಬಹುದು ಮತ್ತು ಸ್ಥಾಯೀ ಸಮಿತಿಯು, ಅದರ ಮಾಲೀಕನಿಗೆ ಮತ್ತು ಅಧಿಭೋಗದಾರರಿಗೆ ಅಂಥ ಆದೇಶವನ್ನು ಏಕೆ ಮಾಡಬಾರದು ಎಂಬುದಕ್ಕೆ ಕಾರಣ ತೋರಿಸಲು ಯುಕ್ತ ಅವಕಾಶವನ್ನು ಕೊಟ್ಟ ತರುವಾಯ, ಮೇಲೆ ಹೇಳಿದಂತೆ ನಿಷೇಧಾಜ್ಞೆಯನ್ನು ಮಾಡಬಹುದು.

(2) ಯಾವುದೇ ಅಂಥ ನಿಷೇಧಾಜ್ಞೆಯನ್ನು ಮಾಡಿರುವಾಗ, ಮುಖ್ಯ ಆಯುಕ್ತರು ಕಟ್ಟಡದ ಮಾಲೀಕನಿಗೆ ಮತ್ತು ಅಧಿಭೋಗದಾರನಿಗೆ ಅದರ ತಾತ್ಪರ್ಯವನ್ನು ತಿಳಿಸತಕ್ಕದ್ದು ಮತ್ತು ನೋಟೀಸನ್ನು ಜಾರಿ ಮಾಡಿದ ನಂತರ, ಮೂವತ್ತು ದಿನಗಳಿಗಿಂತ ಕಡಿಮೆಯಿರದ, ನೋಟೀಸಿನಲ್ಲಿ ನಿರ್ದಿಷ್ಟಪಡಿಸಿದ ಅವಧಿಯು ಮುಕ್ತಾಯವಾದ ಮೇಲೆ ಮುಖ್ಯ ಆಯುಕ್ತರು ಮನುಷ್ಯರ ವಾಸಕ್ಕೆ ಅದನ್ನು ಯೋಗ್ಯವಲ್ಲದನ್ನಾಗಿಸುವ ಸ್ಥಿತಿಗಳನ್ನು ತಮಗೆ ಮನವರಿಕೆಯಾಗುವಂತೆ ನಿವಾರಿಸಲಾಗಿದೆಯೆಂದು ಲಿಖಿತದಲ್ಲಿ ಪ್ರಮಾಣೀಕರಿಸುವವರೆಗೆ ಅಥವಾ ಸ್ಥಾಯೀ ಸಮಿತಿಯು ನಿಷೇಧವನ್ನು ಹಿಂತೆಗೆದುಕೊಳ್ಳುವವರೆಗೆ ಯಾರೇ ಮಾಲೀಕನು ಅಥವಾ ಅಧಿಭೋಗದಾರನು ಆ ಕಟ್ಟಡವನ್ನು ಮನುಷ್ಯರ ವಾಸಕ್ಕೆ ಬಳಸತಕ್ಕದ್ದಲ್ಲ ಅಥವಾ ಬಳಸಲು ಅವಕಾಶ ನೀಡತಕ್ಕದ್ದಲ್ಲ.

(3) ಅಂಥ ನಿಷೇಧಾಜ್ಞೆಯು ಮೂರು ತಿಂಗಳವರೆಗೆ ಪ್ರವರ್ತನೆಯಲ್ಲಿರುವಾಗ, ಮುಖ್ಯ ಆಯುಕ್ತರು, ಸ್ಥಾಯೀ ಸಮಿತಿಗೆ ಆ ಪ್ರಕರಣವನ್ನು ವರದಿ ಮಾಡತಕ್ಕದ್ದು, ಸ್ಥಾಯೀ ಸಮಿತಿಯು ಆ ನಂತರ ಕಟ್ಟಡವನ್ನು ಕೆಡವಿಹಾಕಬಾರದೇ ಹೇಗೆ ಎಂಬ ಬಗ್ಗೆ ಪರ್ಯಾಲೋಚಿಸತಕ್ಕದ್ದು. ಸ್ಥಾಯೀ ಸಮಿತಿಯು, ಆ ಪ್ರಶ್ನೆಯನ್ನು ಯಾವ ಕಾಲದಲ್ಲಿ ಮತ್ತು ಸ್ಥಳದಲ್ಲಿ ಪರ್ಯಾಲೋಚಿಸಲಾಗುತ್ತದೋ ಆ ಕಾಲದ ಮತ್ತು ಸ್ಥಳದ ಬಗ್ಗೆ ಮೂವತ್ತು ದಿನಗಳಿಗೆ ಕಡಿಮೆಯಿಲ್ಲದ ನೋಟೀಸನ್ನು ಮಾಲೀಕನಿಗೆ ನೀಡತಕ್ಕದ್ದು. ಆ ಪ್ರಶ್ನೆಯನ್ನು ಪರ್ಯಾಲೋಚನೆಗೆ ತೆಗೆದುಕೊಂಡಾಗ ಅಹವಾಲನ್ನು ಹೇಳಿಕೊಳ್ಳಲು ಮಾಲೀಕನು ಹಕ್ಕುಳ್ಳವನಾಗಿರತಕ್ಕದ್ದು.

(4) ಅಂಥ ಪರ್ಯಾಲೋಚನೆಯ ತರುವಾಯ ಸ್ಥಾಯೀ ಸಮಿತಿಯು, ಆ ಕಟ್ಟಡವನ್ನು ಮನುಷ್ಯರ ವಾಸಕ್ಕೆ ಯೋಗ್ಯವಾದುದನ್ನಾಗಿ ಮಾಡಿಲ್ಲವೆಂದು ಮತ್ತು ಅದನ್ನು ಹಾಗೆ ಯೋಗ್ಯವಾದುದನ್ನಾಗಿ ಮಾಡಲು ಯುಕ್ತ ಶ್ರದ್ಧೆಯಿಂದ ಕ್ರಮಗಳನ್ನು ತೆಗೆದುಕೊಳ್ಳುತ್ತಿಲ್ಲವೆಂದು ಮತ್ತು ಅದರ ಮುಂದುವರಿಕೆಯು ಸಾರ್ವಜನಿಕ ಆರೋಗ್ಯಕ್ಕೆ ಅಥವಾ ನೆರೆಹೊರೆಯ ನಿವಾಸಿಗಳಿಗೆ ಉಪದ್ರವಕಾರಿ ಅಥವಾ ಅಪಾಯಕಾರಿ ಅಥವಾ ಹಾನಿಕರವೆಂದು ಅಭಿಪ್ರಾಯಪಟ್ಟರೆ, ತೀರ್ಮಾನಕ್ಕೆ ಕಾರಣಗಳ ಸಹಿತ ಆ ಮಟ್ಟಿಗೆ ಒಂದು ತೀರ್ಮಾನವನ್ನು ದಾಖಲ್ಮಾಡತಕ್ಕದ್ದು ಮತ್ತು ಮುಖ್ಯ ಆಯುಕ್ತರು ಸದರಿ ತೀರ್ಮಾನದ ಅನುಸಾರವಾಗಿ ಆ ಕಟ್ಟಡವನ್ನು ಕೆಡವಿಹಾಕಲು ಮಾಲೀಕನನ್ನು ನೋಟೀಸಿನ ಮೂಲಕ ಅಗತ್ಯಪಡಿಸತಕ್ಕದ್ದು.

(5) ಮನುಷ್ಯರ ವಾಸಕ್ಕೆ ಕಟ್ಟಡವನ್ನು ಯೋಗ್ಯವಾದುದನ್ನಾಗಿಸಲು ಅವಶ್ಯವಾದ ಕೆಲಸಗಳನ್ನು ತತ್‌ಕ್ಷಣವೇ ನಿರ್ವಹಿಸುವುದಾಗಿ ಮಾಲೀಕನು ಮುಚ್ಚಳಿಕೆ ಬರೆದುಕೊಟ್ಟರೆ, ಮತ್ತು ಅದನ್ನು ಹಾಗೆ ಯೋಗ್ಯವಾದುದನ್ನಾಗಿಸಬಹುದೆಂದು ಮುಖ್ಯ ಆಯುಕ್ತರು ಪರ್ಯಾಲೋಚಿಸಿದರೆ, ಮುಖ್ಯ ಆಯುಕ್ತರು, ಅವಶ್ಯವಾದ ಕೆಲಸಗಳನ್ನು ನಿರ್ವಹಿಸಲು ಮಾಲೀಕನಿಗೆ ಅವಕಾಶವನ್ನು ಕೊಡುವ ಉದ್ದೇಶಕ್ಕಾಗಿ ತಾವು ಸಾಕಷ್ಟು ಎಂದು ಭಾವಿಸುವಂಥ ಆರು ತಿಂಗಳುಗಳಿಗೆ ಮೀರದಂಥ ಕಾಲದವರೆಗೆ ಸ್ಥಾಯೀ ಸಮಿತಿಯ ತೀರ್ಮಾನವನ್ನು ಜಾರಿಗೊಳಿಸುವುದನ್ನು ಮುಂದೂಡಬಹುದು.

264. ನಷ್ಟಪರಿಹಾರದ ಮಿತಿ.- 283ನೇ ಪ್ರಕರಣಗಳಲ್ಲಿ ಉಪಬಂಧಿಸಿದಂತೆ ಹೊರತು, ಈ ಅಧ್ಯಾಯದ ಮೇರೆಗಿನ ತನ್ನ ಅಧಿಕಾರಗಳ ಅನುಸಾರವಾಗಿ ಪಾಲಿಕೆ ಪ್ರಾಧಿಕಾರವು ಕೈಗೊಂಡ ಯಾವುದೇ ಕ್ರಮದ ಕಾರಣದಿಂದಾಗಿ ಅನುಭವಿಸಿದ ಯಾವುದೇ ಹಾನಿಗಳಿಗಾಗಿನ ನಷ್ಟ ಪರಿಹಾರಕ್ಕೆ ಯಾರೇ ವ್ಯಕ್ತಿಯು ಹಕ್ಕುಳ್ಳವನಾಗಿರತಕ್ಕದ್ದಲ್ಲ.

ಅಧ್ಯಾಯXVIII

ಸಾರ್ವಜನಿಕ ಆರೋಗ್ಯ

265.ಸಾರ್ವಜನಿಕ ಆರೋಗ್ಯಕ್ಕೆ ಸಂಬಂಧಿಸಿದಂತೆ ಪಾಲಿಕೆಯ ಕರ್ತವ್ಯಗಳು.- ಸೂಕ್ತ ನೈರ್ಮಲ್ಯವನ್ನು ಅಪಾಯಕಾರಿ ರೋಗಗಳ ಹರಡುವಿಕೆಯನ್ನು ತಡೆಗಟ್ಟುವುದು ಹಾಗೂ ಸಾರ್ವಜನಿಕ ಆರೋಗ್ಯದ ಅಗತ್ಯ ಗುಣಮಟ್ಟಗಳನ್ನು ಕಾಪಾಡಲು ಅವಶ್ಯಕವಾಗಿರುವಂಥ ಕ್ರಮಗಳನ್ನು ಕೈಗೊಳ್ಳುವುದನ್ನು ಖಚಿತಪಡಿಸಲು ಆವರಣಗಳ ಪರಿಶೀಲನೆ, ಮೇಲ್ವಿಚಾರಣೆ, ವಿನಿಯಮ ಮತ್ತು ನಿಯಂತ್ರಣ ಸೇರಿದಂತೆ ಸಾರ್ವಜನಿಕ ಆರೋಗ್ಯ ವಿಷಯದ ಬಗ್ಗೆ ಸೂಕ್ತ ಕ್ರಮಗಳನ್ನು ಕೈಗೊಳ್ಳುವುದು ಪಾಲಿಕೆ ಅಥವಾ ಆ ಬಗ್ಗೆ ಪಾಲಿಕೆಯಿಂದ ಅಧಿಕೃತಗೊಂಡ ಇತರ ಯಾವುದೇ ಏಜೆನ್ಸಿಯ ಕರ್ತವ್ಯವಾಗಿರತಕ್ಕದ್ದು.

266. ಕಟ್ಟಡಗಳು ಅಥವಾ ನಿವೇಶನಗಳ ನೈರ್ಮಲ್ಯದ ಬಗ್ಗೆಆದೇಶ ಹೊರಡಿಸುವ ಅಥವಾ ನೈರ್ಮಲ್ಯವನ್ನು ಕಾಪಾಡುವ ಪಾಲಿಕೆಯ ಅಧಿಕಾರ.-(1) ಆ ಬಗ್ಗೆ ಮಾಡಬಹುದಾದಂಥ ವಿನಿಯಮಗಳಿಗೆ ಒಳಪಟ್ಟು, ವಲಯ ಆಯುಕ್ತರು ಅಥವಾ ಆ ಬಗ್ಗೆ ಅಧಿಕೃತಗೊಳಿಸಿರುವ ಇತರ ಯಾರೇ ಅಧಿಕಾರಿಯು ಸ್ವಯಂ ತಾನೇ ಆಗಲಿ ಅಥವಾ ಇತರ ಯಾವುದೇ ಏಜೆನ್ಸಿಯ ಮೂಲಕವಾಗಲಿ ಅಥವಾ ಆ ಬಗ್ಗೆ ಅವರ ಮೂಲಕ ಅಧಿಕೃತಗೊಳಿಸಲಾದ ಅಧಿಕಾರಿಯಾಗಲಿ,-

ಎ) ಯಾವುದೇ ಕಟ್ಟಡ ಅಥವಾ ಇತರ ಆವರಣಗಳ ನೈರ್ಮಲ್ಯ ಪರಿಸ್ಥಿತಿಯನ್ನು ಖಚಿತಪಡಿಸುವ ಉದ್ದೇಶಕ್ಕಾಗಿ ಅವುಗಳನ್ನು ಪರಿಶೀಲನೆಗೊಳಪಡಿಸುವಂತೆ ಮಾಡಬಹುದು.

ಬಿ) ಯಾವುದೇ ಜಮೀನು ಅಥವಾ ಕಟ್ಟಡದ ಮಾಲೀಕ ಅಥವಾ ಸ್ವಾಧೀನ ಹೊಂದಿರುವವರು ತಮ್ಮ ಜಮೀನು ಅಥವಾ ಕಟ್ಟಡ ಅಥವಾ ಅದರ ಯಾವುದೇ ಭಾಗವನ್ನು ಸ್ವಚ್ಛಗೊಳಿಸಬೇಕೆಂದು ಕೋರಿಕೊಂಡರೆ, ನೈರ್ಮಲ್ಯದ ಕಾರಣಗಳಿಗಾಗಿ ಹಾಗೆ ಮಾಡುವುದು ಅಗತ್ಯವೆಂದು ಕಂಡುಬಂದರೆ, ಅವರು ಹಾಗೆ ಮಾಡುವಂತೆ ಅಗತ್ಯಪಡಿಸಬಹುದು.

ಸಿ) ಅಂಥ ನೈರ್ಮಲ್ಯರಹಿತ ಆವರಣಗಳ ನಿವಾಸಿಗಳಿಗೆ ಅಥವಾ ಅದರ ನೆರೆಹೊರೆಯ ನಿವಾಸಿಗಳಿಗೆ ರೋಗದ ಅಪಾಯವನ್ನುಂಟುಮಾಡುವ ಅಥವಾ ಯಾವುದೇ ಕಾರಣಕ್ಕಾಗಿ ಜನಸಮುದಾಯದ ಆರೋಗ್ಯ ಅಥವಾ ಸುರಕ್ಷತೆಗೆ ವಿಪತ್ತುತರುವ ಸಾಧ್ಯತೆಗಳಿರುವಂಥ ಯಾವುದೇ ನೈರ್ಮಲ್ಯ ರಹಿತ ಆವರಣಗಳ ಸುಧಾರಣೆಗಾಗಿ ಅವರು ಅಗತ್ಯವೆಂದು ಭಾವಿಸಬಹುದಾದಂಥ ಆದೇಶವನ್ನು ಹೊರಡಿಸಬಹುದು.

ಡಿ) ಮಾಲೀಕ ಅಥವಾ ಸ್ವಾಧೀನಹೊಂದಿರುವವರಿಗೆ ನೋಟೀಸು ನೀಡುವ ಮೂಲಕ, ಅವರಿಗೆ ಮನುಷ್ಯನ ವಾಸಕ್ಕೆ ಸೂಕ್ತವಲ್ಲವೆಂದು ಕಂಡುಬರುವಂಥ ಯಾವುದೇ ಕಟ್ಟಡ ಅಥವಾ ಆ ಕಟ್ಟಡದಲ್ಲಿರುವ ಯಾವುದೇ ಕೊಠಡಿಯನ್ನು ವಾಸದ ಮನೆಯಾಗಿ ಬಳಸುವುದನ್ನು ನಿಷೇಧಿಸುವುದು.

ಇ) ಆರೋಗ್ಯಕ್ಕೆ ಹಾನಿಕಾರಕವೆಂದು ಅಥವಾ ನೆರೆಹೊರೆಯವರಿಗೆ ದುರ್ವಾಸನೆಯನ್ನುಂಟು ಮಾಡಬಹುದೆಂದು ಅವರಿಗೆ ಕಂಡುಬರುಬಂಥ ಯಾವುದೇ ಬಾವಿ, ಕೊಳ, ಹಳ್ಳ, ಕುಂಟೆ, ಹೊಂಡ, ಗುಂಡಿ ಅಥವಾ ನೀರು ಬಸಿದು ಹೋಗದ ಮೈದಾನ, ತೊಟ್ಟಿ ಅಥವಾ ಯಾವುದೇ ನಿರುಪಯುಕ್ತ ಅಥವಾ ನಿಂತ ನೀರಿನ ಕಟ್ಟೆಯನ್ನು ಮುಚ್ಚಲು ನಿರ್ದೇಶಿಸುವುದು.

ಎಫ್) ಯಾವುದೇ ಖಾಸಗಿ ನೀರಿನ ಮಾರ್ಗ, ಚಿಲುಮೆ, ಕೆರೆ, ಬಾವಿ ಅಥವಾ ಕುಡಿಯಲು, ಸ್ನಾನಮಾಡಲು ಅಥವಾ ಬಟ್ಟೆಒಗೆಯಲು ಬಳಸುವಂಥ ನೀರಿನ ಇತರೆ ಸ್ಥಳದ ಮೇಲೆ ನಿಯಂತ್ರಣ ಹೊಂದಿರುವ ಮಾಲೀಕ ಅಥವಾ ವ್ಯಕ್ತಿಗೆ ನೋಟೀಸು ನೀಡುವ ಮೂಲಕ ಅವುಗಳನ್ನು ಉತ್ತಮ ದುರಸ್ತಿಯಲ್ಲಿಡಲು, ಮಾಲಿನ್ಯದಿಂದ ರಕ್ಷಿಸುವಂಥ ರೀತಿಯಲ್ಲಿ ಅವುಗಳನ್ನು ಸ್ವಚ್ಛಗೊಳಿಸುವಂತೆ ಅಗತ್ಯಪಡಿಸುವುದು.

ಜಿ) ನಿರ್ಲಕ್ಷಿಸಿರುವಂಥ ಕಟ್ಟಡ ಅಥವಾ ಭೂಮಿ ಎಂದು ಅವರಿಗೆ ಕಂಡುಬಂದಂಥ ಅಥವಾ ಸಾರ್ವಜನಿಕ ಆರೋಗ್ಯಕ್ಕೆ ಹಾನಿಯನ್ನುಂಟುಮಾಡುವ ಅಥವಾ ನೆರೆಹೊರೆಯರಿಗೆ ದುರ್ವಾಸನೆಯನ್ನುಂಟುಮಾಡುವ ಸಾಧ್ಯತೆಯಿರುವ ಯಾವುದೇ ಕಟ್ಟಡ ಅಥವಾ ಭೂಮಿಯನ್ನು ಸ್ವಚ್ಛಗೊಳಿಸಲು ಮಾಲೀಕರು ಅಥವಾ ಸ್ವಾಧೀನ ಹೊಂದಿರುವವರಿಗೆ ನೋಟೀಸು ನೀಡುವ ಮೂಲಕನಿರ್ದೇಶನ ನೀಡಬಹುದು.

(2) ವಲಯ ಆಯುಕ್ತರು ಅಥವಾ ಆ ಬಗ್ಗೆ ಅಧಿಕೃತಗೊಳಿಸಲಾದ ಅಧಿಕಾರಿಯು, ಯಾವುದೇ ಭೂಮಿ ಅಥವಾ ಕಟ್ಟಡದಲ್ಲಿ ಆರೋಗ್ಯ ಅಥವಾ ಸುರಕ್ಷತೆಗೆ ಸಂಬಂಧಿಸಿದಂತೆ ಅಪಾಯವಿದೆ ಎಂದು ಅಭಿಪ್ರಾಯಪಟ್ಟಲ್ಲಿ, ಅವರು ಲಿಖಿತದಲ್ಲಿ ನೋಟೀಸು ನೀಡುವ ಮೂಲಕ ಯಾವ ವ್ಯಕ್ತಿಯ ಕೃತ್ಯ, ತಪ್ಪು ಅಥವಾ ಮೌನಸಮ್ಮತಿಯಿಂದಾಗಿ ಸದರಿ ಅಪಾಯ ಉದ್ಭವಿಸಿರುವುದೋ ಅಥವಾ ಮುಂದುವರಿದಿದೆಯೋ ಅಂಥ ವ್ಯಕ್ತಿ ಅಥವಾ ಅಂಥ ಜಮೀನು ಅಥವಾ ಕಟ್ಟಡದ ಎಲ್ಲಾ ಮಾಲೀಕರು, ಬಾಡಿಗೆದಾರರು ಅಥವಾ ಅಧಿಭೋಗದಾರರು,

ನೋಟೀಸಿನಲ್ಲಿ ನಿರ್ದಿಷ್ಟಪಡಿಸಿರುವಂತೆ ಅಂಥ ರೀತಿಯಲ್ಲಿ ಮತ್ತು ಅಂಥ ಅವಧಿಯೊಳಗೆ ಅಂಥ ಕ್ರಮಗಳನ್ನು ಕೈಗೊಳ್ಳುವ ಮೂಲಕ ಅದನ್ನು ತೆಗೆದುಹಾಕಲು ಅಥವಾ ಕಡಿಮೆ ಮಾಡಲು ಅಗತ್ಯಪಡಿಸಬಹುದು.

(3) ತುರ್ತುಕ್ರಮ ಅಗತ್ಯವಿದ್ದರೆ, ಆಯುಕ್ತರು ತಾನೇ ನಿರಾತಂಕವಾಗಿ ಅಂಥ ನೋಟೀಸು ನೀಡುವುದಕ್ಕೆ ಮುಂಚೆ ಅಥವಾ ನೋಟೀಸಿನ ಅವಧಿ ಮುಕ್ತಾಯವಾಗುವುದಕ್ಕೆ ಮುಂಚೆ, ಆರೋಗ್ಯ ಅಥವಾ ಸುರಕ್ಷತೆಗೆ ಸಂಬಂಧಿಸಿದ ಅಪಾಯವನ್ನು ತಡೆಯಲು ಅವರು ಸೂಕ್ತವೆಂದು ಭಾವಿಸಬಹುದಾಂಥ ಕ್ರಮಗಳನ್ನು ತೆಗೆದುಕೊಳ್ಳಬಹುದು ಹಾಗೂ ಹಾಗೆಮಾಡಲು ತಗಲಬಹುದಾದ ವೆಚ್ಚವನ್ನು ಉಪ-ವಿಧಿಯಲ್ಲಿ ನಿಗದಿಪಡಿಸಸಲಾದ ರೀತಿಯಲ್ಲಿ ಕಟ್ಟಡ ಅಥವಾ ಜಮೀನಿನ ಮಾಲೀಕರು ಅಥವಾ ಸ್ವಾಧೀನ ಹೊಂದಿರುವವರಿಂದ ವಸೂಲುಮಾಡಿಕೊಳ್ಳತಕ್ಕದ್ದು.

267. ಅಪಾಯಕಾರಿರೋಗಗಳನ್ನುಅಧಿಸೂಚಿಸುವಅಧಿಕಾರ.- (1) ಪಾಲಿಕೆ ಪ್ರದೇಶದಲ್ಲಿನ ಯಾವುದೇ ಸಾರ್ವಜನಿಕ ಅಥವಾ ಖಾಸಗಿ ವಾಸಸ್ಥಳದಲ್ಲಿ ಯಾವುದೇ ರೀತಿಯ ಅಪಾಯಕಾರಿ ರೋಗ ಇರುವುದು ಪಾಲಿಕೆಯ ಗಮನಕ್ಕೆ ಬಂದಲ್ಲಿ, ವಲಯ ಆಯುಕ್ತರು, ಅಂತಹ ಅಪಾಯಕಾರಿ ರೋಗವನ್ನು ತಡೆಯುವುದಕ್ಕಾಗಿ ಅವಶ್ಯಕ ಕ್ರಮಗಳನ್ನು ಕೈಗೊಳ್ಳಬಹುದು.

(2) ವಲಯ ಆಯುಕ್ತರು ಅಥವಾ ಈ ಬಗ್ಗೆ ಯಾರೇ ಅಧಿಕೃತಗೊಂಡ ಅಧಿಕಾರಿಯು, ಯಾವುದೇ ಅಪಾಯಕಾರಿ ರೋಗವು ವರದಿಯಾಗಿದೆ ಮತ್ತು ಅಸ್ತಿತ್ವದಲ್ಲಿ ಇದೆ ಎಂದು ಶಂಕಿಸಲಾಗಿರುವ, ಯಾವುದೇ ಸ್ಥಳವನ್ನು ಪರಿಶೀಲಿಸುವುದು ಸಮಂಜಸವೆಂದು ಕಂಡುಬಂದರೆ ಮತ್ತು ಅಂತಹ ಸ್ಥಳವನ್ನು ಮೀರಿ ಅಂತಹ ರೋಗ ಹರಡುವುದನ್ನು ತಡೆಯುವುದಕ್ಕಾಗಿ ಸೂಕ್ತವೆಂದು ಭಾವಿಸಬಹುದಾದಂತಹ ಕ್ರಮಗಳನ್ನು ತೆಗೆದುಕೊಳ್ಳಬಹುದು.

(3) ಪಾಲಿಕೆ ಪ್ರದೇಶದೊಳಗೆ ಅಪಾಯಕಾರಿ ರೋಗ ಅಸ್ತಿತ್ವದಲ್ಲಿರುವ ಸಂದರ್ಭದಲ್ಲಿ, ವಲಯ ಆಯುಕ್ತರು, ನೋಟೀಸಿನ ಮೂಲಕ, ಸಾರ್ವಜನಿಕ ಮನೋರಂಜನೆಯ ಉದ್ದೇಶಕ್ಕಾಗಿ ಬಳಸಲಾಗುವ ಯಾವುದೇ ಕಟ್ಟಡ ಅಥವಾ ನಿವೇಶನದ ಮಾಲೀಕರನ್ನು ಅಥವಾ ಅಧಿಭೋಗದಾರರನ್ನುಅಗತ್ಯವೆಂದು ಭಾವಿಸಬಹುದಾದಂತಹ ಅವಧಿಗೆ ಮುಚ್ಚುವಂತೆ ಅಗತ್ಯಪಡಿಸಬಹುದು.

268. ಕಟ್ಟಡಗಳ ಮತ್ತು ವಸ್ತುಗಳ ಸೋಂಕು ನಿವಾರಣೆ.- (1) ವಲಯ ಆಯುಕ್ತರು ಅಥವಾ ಆರೋಗ್ಯಧಿಕಾರಿಯು, ಸೋಂಕು ಉಳಿದಿರುವ ಸಂಭವವಿರುವ ಕಟ್ಟಡವನ್ನು ಅಥವಾ ಅದರ ಯಾವುದೇ ಭಾಗವನ್ನು ಅಥವಾ ಅದರಲ್ಲಿನ ಯಾವುದೇ ವಸ್ತುವನ್ನು ಸ್ವಚ್ಛಗೊಳಿಸುವುದು ಅಥವಾ ಸೋಂಕು ನಿವಾರಿಸುವುದು ಯಾವುದೇ ಅಪಾಯಕಾರಿ ರೋಗ ಹರಡುವುದನ್ನು ತಡೆಗಟ್ಟಲು ಅಥವಾ ತಡೆಯಲು ಸಾಧ್ಯವಾಗುತ್ತದೆ ಎಂದು ಅಭಿಪ್ರಾಯಪಟ್ಟರೆ, ಅವರು ನೋಟೀಸಿನ ಮೂಲಕ ಅಂಥ ನೋಟೀಸಿನಲ್ಲಿ ನಿರ್ದಿಷ್ಟಪಡಿಸಿದ ರೀತಿಯಲ್ಲಿ ಮತ್ತು ಕಾಲದೊಳಗೆ ಅದನ್ನು ಸ್ವಚ್ಛಗೊಳಿಸಲು ಅಥವಾ ಸೋಂಕು ನಿವಾರಿಸಲು ಅದರ ಮಾಲೀಕನನ್ನು ಅಥವಾ ಅಧಿಭೋಗದಾರನನ್ನು ಅಗತ್ಯಪಡಿಸಬಹುದು.

(2) ಮೇಲೆ ಹೇಳಿದಂತೆ ನಿರ್ದಿಷ್ಟಪಡಿಸಿದ ಕಾಲದೊಳಗೆ ಮಾಲೀಕನು ಅಥವಾ ಅಧಿಭೋಗದಾರನು ಆ ನೋಟೀಸಿನ ನಿಬಂಧನೆಗಳನ್ನು ಪಾಲಿಸತಕ್ಕದ್ದು.

(3) ಕೂಡಲೇ ಕ್ರಮ ಕೈಗೊಳ್ಳುವುದು ಅವಶ್ಯವಿದೆಯೆಂದು ಅಥವಾ ಆ ಮಾಲೀಕನು ಅಥವಾ ಅಧಿಭೋಗದಾರನು ಬಡತನದ ಕಾರಣದಿಂದ ಅಥವಾ ಅನ್ಯಥಾ ತಮ್ಮ ಕಡ್ಡಾಯ ಸೂಚನೆಯನ್ನು ಪರಿಣಾಮಕಾರಿಯಾಗಿ ಪಾಲಿಸಲು ಅಸಮರ್ಥನಾಗಿದ್ದಾನೆಂದು ವಲಯ ಆಯುಕ್ತರು ಅಥವಾ ಆರೋಗ್ಯಾಧಿಕಾರಿಯು ಪರಿಗಣಿಸಿದರೆ, ವಲಯ ಆಯುಕ್ತರು ಅಥವಾ ಆರೋಗ್ಯಾಧಿಕಾರಿಯು ನೋಟೀಸನ್ನು ಕೊಡದೆ ತಾವಾಗಿಯೇ ಅಂಥ ಕಟ್ಟಡಗಳನ್ನು ಅಥವಾ ವಸ್ತುವನ್ನು ಸ್ವಚ್ಛಗೊಳಿಸುವಂತೆ ಅಥವಾ ಅದರ ಸೋಂಕನ್ನು ನಿವಾರಿಸುವಂತೆ ಮಾಡಬಹುದು ಮತ್ತು ಈ ಉದ್ದೇಶಕ್ಕಾಗಿ ಅಂಥ ವಸ್ತುವನ್ನು ಆ ಕಟ್ಟಡದಿಂದ ಅಥವಾ ಆವರಣದಿಂದ ತೆಗೆದುಹಾಕಿಸಬಹುದು ಮತ್ತು ವಲಯ ಆಯುಕ್ತರು ಅಥವಾ ಆರೋಗ್ಯಾಧಿಕಾರಿಯು ವಹಿಸಿದ ವೆಚ್ಚಗಳು ಸದರಿ ಮಾಲೀಕನಿಂದ ಅಥವಾ ಅಧಿಭೋಗದಾರನಿಂದ ವಸೂಲಿ ಮಾಡುವಂಥವುಗಳು ಆಗಿರತಕ್ಕದ್ದು.

269. ಸೋಂಕು ನಿವಾರಣೆಗಾಗಿ ಸ್ಥಳಗಳ ವ್ಯವಸ್ಥೆ ಮತ್ತು ಸೋಂಕು ತಗುಲಿದ ವಸ್ತುಗಳನ್ನು ನಾಶಪಡಿಸಲು ಅಧಿಕಾರ.- (1) ವಲಯ ಆಯುಕ್ತರು,-

(ಎ) ಯಾವುದೇ ಅಪಾಯಕಾರಿ ರೋಗದಿಂದ ಸೋಂಕು ತಗಲುವ ಅವಕಾಶವಿರುವಂಥ ವಾಹನಗಳು, ಬಟ್ಟೆಬರೆ, ಹಾಸಿಗೆ ಮತ್ತು ಇತರ ವಸ್ತುಗಳ ಸೋಂಕು ನಿವಾರಣೆಗಾಗಿ ಅವಶ್ಯವಾದ ಎಲ್ಲ ಸಹಾಯಕರು ಮತ್ತು ಉಪಕರಣಗಳೊಂದಿಗೆ ಸರಿಯಾದ ಸ್ಥಳಗಳನ್ನು ಒದಗಿಸಬಹುದು; ಮತ್ತು

(ಬಿ) ಸೋಂಕು ನಿವಾರಣೆಗಾಗಿ ತರಲಾದ ವಾಹನಗಳು, ಬಟ್ಟೆಬರೆ, ಹಾಸಿಗೆ ಅಥವಾ ಇತರ ವಸ್ತುಗಳ ಸೋಂಕು ನಿವಾರಣೆಯನ್ನು ಶುಲ್ಕವಿಲ್ಲದೆ ಅಥವಾ ಸ್ಥಾಯೀ ಸಮಿತಿಯು ಅನುಮೋದಿಸಬಹುದಾದಂಥ ಶುಲ್ಕಗಳನ್ನು ವಿಧಿಸುವುದಕ್ಕೆ ಒಳಪಟ್ಟು ಮಾಡಿಸಬಹುದು.

(2) ಯಾವುದೇ ಅಪಾಯಕಾರಿ ರೋಗಗಳಿಂದ ಸೋಂಕು ತಗಲುವ ಅವಕಾಶವಿರುವಂಥ ವಾಹನ, ಬಟ್ಟೆಬರೆ, ಹಾಸಿಗೆ ಮತ್ತು ಇತರ ವಸ್ತುಗಳನ್ನು ಯಾವ ಸ್ಥಳಗಳಲ್ಲಿ ತೊಳೆಯತಕ್ಕದ್ದು ಮತ್ತು ಸೋಂಕು ನಿವಾರಿಸತಕ್ಕದ್ದು ಎಂಬ ಬಗ್ಗೆ ವಲಯ ಆಯುಕ್ತರು ಅಧಿಸೂಚಿಸತಕ್ಕದ್ದು ಮತ್ತು ಹಾಗೆ ಅಧಿಸೂಚಿಸದೆ ಇರುವ ಯಾವುದೇ ಸ್ಥಳದಲ್ಲಿ ಯಾರೇ ವ್ಯಕ್ತಿಯು ಅಂಥ ಯಾವುದೇ ವಸ್ತುವನ್ನು ತೊಳೆಯತಕ್ಕದ್ದಲ್ಲ ಅಥವಾ ಅದರ ಸೋಂಕನ್ನು ನಿವಾರಿಸತಕ್ಕದ್ದಲ್ಲ.

(3) ಯಾವುದೇ ಅಪಾಯಕಾರಿ ರೋಗದಿಂದ ಸೋಂಕು ಉಳಿದಿರುವ ಸಂಭವವಿರುವ ಯಾವುದೇ ಬಟ್ಟೆಬರೆ, ಹಾಸಿಗೆ ಅಥವಾ ಇತರ ವಸ್ತುವಿನ ಸೋಂಕನ್ನು ನಿವಾರಿಸಲು ಅಥವಾ ಅದನ್ನು ನಾಶಪಡಿಸಲು ವಲಯ ಆಯುಕ್ತರು ನಿರ್ದೇಶಿಸಬಹುದು.

270. ಸಾರ್ವಜನಿಕ ಮನೋರಂಜನಾ ಸ್ಥಳಗಳನ್ನು ಮುಚ್ಚುವಂತೆ ಆದೇಶ ನೀಡಲು ಅಧಿಕಾರ.- ನಗರದೊಳಗೆ ಯಾವುದೇ ಅಪಾಯಕಾರಿ ರೋಗವು ಹರಡಿರುವ ಸಂದರ್ಭದಲ್ಲಿ, ಮುಖ್ಯ ಆಯುಕ್ತರು ಸ್ಥಾಯೀ ಸಮಿತಿಯ ಮಂಜೂರಾತಿ ಪಡೆದು ನೋಟೀಸಿನ ಮೂಲಕ, ಸಾರ್ವಜನಿಕ ಮನೋರಂಜನಾ ಉದ್ದೇಶಗಳಿಗಾಗಿ ಬಳಸುತ್ತಿರುವ ಯಾವುದೇ ಕಟ್ಟಡ, ಬೂತು ಅಥವಾ ಟೆಂಟಿನ ಮಾಲೀಕನನ್ನು ಅಥವಾ ಅಧಿಭೋಗದಾರನನ್ನು, ಸ್ಥಾಯೀ ಸಮಿತಿಯು ನಿಗದಿಪಡಿಸಬಹುದಾದಂಥ ಅವಧಿಗೆ ಅದನ್ನು ಮುಚ್ಚುವಂತೆ ಅಗತ್ಯಪಡಿಸಬಹುದು.

271. ಸೋಂಕು ತಗುಲಿದ ವಸ್ತುಗಳ ವರ್ಗಾವಣೆಗೆ ನಿಷೇಧ.- ಯಾರೇ ವ್ಯಕ್ತಿಯು ಯಾವುದೇ ಅಪಾಯಕಾರಿ ರೋಗದಿಂದ ಸೋಂಕು ತಗಲುವ ಅವಕಾಶವಿದೆ ಎಂದು ಅವರು ತಿಳಿದಿರುವ ಅಥವಾ ತಿಳಿಯಲು ಕಾರಣವಿರುವಂಥ ಯಾವುದೇ ವಸ್ತುವನ್ನು, ಅದನ್ನು ಮುಂಚಿತವಾಗಿ ಸೋಂಕು ನಿವಾರಿಸದೆ ಕೊಡತಕ್ಕದ್ದಲ್ಲ, ಎರವಲು ಕೊಡತಕ್ಕದ್ದಲ್ಲ, ಗುತ್ತಿಗೆಗೆ ಕೊಡತಕ್ಕದ್ದಲ್ಲ, ಬಾಡಿಗೆಗೆ ಕೊಡತಕ್ಕದ್ದಲ್ಲ, ಮಾರತಕ್ಕದ್ದಲ್ಲ, ರವಾನಿಸತಕ್ಕದ್ದಲ್ಲ ಅಥವಾ ಅನ್ಯಥಾ ವಿಲೆ ಮಾಡತಕ್ಕದ್ದಲ್ಲ:

ಪರಂತು, ಈ ಪ್ರಕರಣದಲ್ಲಿ ಇರುವುದು ಯಾವುದೂ, ಯಾವುದೇ ವಸ್ತುವನ್ನು ಸೋಂಕು ನಿವಾರಿಸುವ ಉದ್ದೇಶಕ್ಕಾಗಿ ಸರಿಯಾದ ಮುನ್ನೆಚ್ಚರಿಕೆ ಕ್ರಮಗಳೊಂದಿಗೆ ರವಾನಿಸುವ ವ್ಯಕ್ತಿಗೆ ಅನ್ವಯವಾಗತಕ್ಕದ್ದಲ್ಲ.

272. ಸೋಂಕು ತಗುಲಿದ ವ್ಯಕ್ತಿಯು ವೃತ್ತಿಯನ್ನು ನಡೆಸುವುದಕ್ಕೆ ನಿಷೇಧ.- ಅಪಾಯಕಾರಿ ರೋಗದಿಂದ ತಾನು ನರಳುತ್ತಿದ್ದೇನೆಂದು ಯಾರೇ ವ್ಯಕ್ತಿಗೆ ತಿಳಿದರೆ, ಅಥವಾ ಸರ್ಕಾರದ ಅಥವಾ ಪಾಲಿಕೆಯ ಸೇವೆಯಲ್ಲಿರುವ ಆರೋಗ್ಯಾಧಿಕಾರಿ ಅಥವಾ ನೋಂದಾಯಿತ ವೈದ್ಯವೃತ್ತಿಗರು ಹಾಗೆಂದು ಪ್ರಮಾಣೀಕರಿಸಿದರೆ, ಅವನು ರೋಗವನ್ನು ಹರಡುವ ಅಪಾಯವಿಲ್ಲದ ಹಾಗೆ ಯಾವುದೇ ವೃತ್ತಿಯಲ್ಲಿ ತೊಡಗಬಹುದುದಾಗಿದ್ದ ಹೊರತು ಅಥವಾ ವ್ಯಾಪಾರವನ್ನು ಅಥವಾ ವ್ಯವಹಾರವನ್ನು ನಡೆಸಬಹುದಾಗಿದ್ದ ಹೊರತು, ಅವನು ಹಾಗೆ ವೃತ್ತಿಯಲ್ಲಿ ತೊಡಗತಕ್ಕದ್ದಲ್ಲ ಅಥವಾ ನಡೆಸತಕ್ಕದ್ದಲ್ಲ.

273. ರೋಗಗ್ರಸ್ತ ವ್ಯಕ್ತಿಯು ಸಾರ್ವಜನಿಕ ವಾಹನವನ್ನು ಪ್ರವೇಶಿಸುವುದಕ್ಕೆ ನಿಷೇಧ.- (1) ಯಾವುದೇ ಅಪಾಯಕಾರಿ ರೋಗದಿಂದ ನರಳುತ್ತಿರುವ ಯಾರೇ ವ್ಯಕ್ತಿಯು ತಾನು ಹಾಗೆ ರೋಗದಿಂದ ನರಳುತ್ತಿರುವುದಾಗಿ ಸಾರ್ವಜನಿಕ ವಾಹನದ ಮಾಲೀಕನಿಗೆ ಅಥವಾ ಚಾಲಕನಿಗೆ ಅಥವಾ ಅದರ ಪ್ರಭಾರದಲ್ಲಿರುವ ವ್ಯಕ್ತಿಗೆ ಮುಂಚಿತವಾಗಿ ತಿಳಿಸದೆಯೇ ಅಂಥ ವಾಹನವನ್ನು ಪ್ರವೇಶಿಸತಕ್ಕದ್ದಲ್ಲ.

(2) ಸಾರ್ವಜನಿಕ ವಾಹನದ ಯಾರೇ ಮಾಲೀಕ ಅಥವಾ ಚಾಲಕ ಅಥವಾ ಅದರ ಪ್ರಭಾರದಲ್ಲಿರುವ ವ್ಯಕ್ತಿಯು ಮೇಲೆ ಹೇಳಿದಂತೆ ರೋಗದಿಂದ ನರಳುತ್ತಿರುವ ಯಾರೇ ವ್ಯಕ್ತಿಯನ್ನು ಸದರಿ ವ್ಯಕ್ತಿಯು, ಅಂಥ ವಾಹನದ ಸೋಂಕನ್ನು ನಿವಾರಿಸಲು ವಹಿಸಬಹುದಾದ ಯಾವುದೇ ನಷ್ಟವನ್ನು ಮತ್ತು ಖರ್ಚುಗಳನ್ನು ತುಂಬಿಕೊಡಲು ಸಾಕಾಗುವಷ್ಟು ಮೊತ್ತವನ್ನು ಸಂದಾಯ ಮಾಡಿದ ಅಥವಾ ಕೊಟ್ಟ ಹೊರತು ಮತ್ತು ಹಾಗೆ ಸಂದಾಯ ಮಾಡುವವರೆಗೆ ಅಥವಾ ಕೊಡುವವರೆಗೆ ಅವನನ್ನು ಕರೆದೊಯ್ಯಲು ಬದ್ಧನಾಗಿರತಕ್ಕದ್ದಲ್ಲ.

(3) ಉಪ-ಪ್ರಕರಣ (1)ನ್ನು ಉಲಂಘಿಸಿವ ಯಾರೇ ವ್ಯಕ್ತಿಯನ್ನು, ಅಪರಾಧಿಯೆಂದು ನಿರ್ಣಯಿಸುವ ನ್ಯಾಯಾಲಯವು, ಈ ಅಧಿನಿಯಮದಲ್ಲಿ ಉಪಬಂಧಿಸಿದ ಅಪರಾಧಕ್ಕೆ ವಿಧಿಸುವ ದಂಡನೆಯ ಜೊತೆಗೆ, ವಾಹನದ ಸೋಂಕನ್ನು ನಿವಾರಿಸುವ ಉದ್ದೇಶಕ್ಕಾಗಿ ಮಾಲೀಕನು ಅಥವಾ ಚಾಲಕನು ವಹಿಸುವಂಥ ನಷ್ಟವನ್ನು ಮತ್ತು ಖರ್ಚನ್ನು ತುಂಬಿಕೊಡಲು ನ್ಯಾಯಾಲಯವು ಸಾಕಷ್ಟೆಂದು ಭಾವಿಸುವಂಥ ಮೊಬಲಗನ್ನು ವಿಧಿಸಬಹುದು. ಹಾಗೆ ವಿಧಿಸಿದ ಮೊಬಲಗನ್ನು ನ್ಯಾಯಾಲಯವು ವಾಹನದ ಮಾಲೀಕನಿಗೆ ಅಥವಾ ಚಾಲಕನಿಗೆ ಕೊಡಿಸತಕ್ಕದ್ದು:

ಪರಂತು, ಅಪೀಲಿಗೆ ಒಳಪಡುವಂಥ ಪ್ರಕರಣದಲ್ಲಿ, ಅಪೀಲು ಸಲ್ಲಿಸುವುದಕ್ಕೆ ಅನುಮತಿಸಿದ ಅವಧಿಯು ಗತಿಸುವುದಕ್ಕೆ ಮುಂಚೆ ಅಥವಾ ಅಪೀಲನ್ನು ಸಲ್ಲಿಸಿದ್ದರೆ, ಅಪೀಲಿನ ತೀರ್ಮಾನಕ್ಕೆ ಮುಂಚೆ ಅಂಥ ಮೊಬಲಗನ್ನು ಮಾಲೀಕನಿಗೆ ಅಥವಾ ಚಾಲಕನಿಗೆ ಸಂದಾಯಮಾಡತಕ್ಕದ್ದಲ್ಲ.

(4) ಅದೇ ವಿಷಯಕ್ಕೆ ಸಂಬಂಧಪಟಂತೆ ತರುವಾಯದ ಯಾವುದೇ ಸಿವಿಲ್ ದಾವೆಯಲ್ಲಿ ನಷ್ಟಪರಿಹಾರದ ಐತೀರ್ಪು ನೀಡುವ ಕಾಲದಲ್ಲಿ, ಈ ಪ್ರಕರಣದ ಮೇರೆಗೆ ವಾದಿಯು ಸ್ವೀಕರಿಸಿರುವ ಯಾವುದೇ ಮೊತ್ತವನ್ನು ನ್ಯಾಯಾಲಯವು ಗಣನೆಗೆ ತೆಗೆದುಕೊಳ್ಳತಕ್ಕದ್ದು.

274. ರೋಗಿಗಳನ್ನು ಸಾಗಿಸಿದ ತರುವಾಯ ಸಾರ್ವಜನಿಕ ವಾಹನದ ಸೋಂಕು ನಿವಾರಣೆ.- (1) ಅಪಾಯಕಾರಿ ರೋಗದಿಂದ ನರಳುತ್ತಿರುವ ಯಾರೇ ವ್ಯಕ್ತಿಯನ್ನು ಸಾಗಿಸಿದ ಯಾವುದೇ ವಾಹನದ ಮಾಲೀಕನು, ಚಾಲಕನು ಅಥವಾ ಅದರ ಪ್ರಭಾರದಲ್ಲಿರುವ ವ್ಯಕ್ತಿಯು, ಆ ವಾಹನದ ಸೋಂಕನ್ನು ತಕ್ಷಣವೇ ನಿವಾರಿಸತಕ್ಕದ್ದು ಅಥವಾ ಅದರ ಸೋಂಕನ್ನು ನಿವಾರಿಸುವಂತೆ ಮಾಡತಕ್ಕದ್ದು.

(2) ಅಂಥ ಯಾವುದೇ ವಾಹನವನ್ನು, ಆರೋಗ್ಯಾಧಿಕಾರಿಯು ಅಥವಾ ಈ ಬಗ್ಗೆ ಅವರಿಂದ ಅಧಿಕೃತನಾದ ಯಾರೇ ವ್ಯಕ್ತಿಯು, ಸೋಂಕಿನ ಅಪಾಯವನ್ನು ಉಂಟುಮಾಡಲು ಸಾಧ್ಯ ಇಲ್ಲ ಎಂದು, ವಾಹನವನ್ನು ಬಳಸಬಹುದೆಂದು ತಿಳಿಸುವ ಪ್ರಮಾಣಪತ್ರವನ್ನು ಕೊಡುವವರೆಗೆ, ಅದನ್ನು ಬಳಸತಕ್ಕದ್ದಲ್ಲ.

275. ಸೋಂಕು ತಗುಲಿದ ಕಟ್ಟಡವನ್ನು ಬಾಡಿಗೆಗೆ ಕೊಡುವುದು.- (1) ಯಾರೇ ವ್ಯಕ್ತಿಯು, ಯಾವ ಕಟ್ಟಡದಲ್ಲಿ ಅಪಾಯಕಾರಿ ರೋಗದಿಂದ ವ್ಯಕ್ತಿಯು ನರಳುತ್ತಿದ್ದಾನೆಂದು ಅವನು ತಿಳಿದಿರುವನೋ ಅಥವಾ ತಿಳಿಯಲು ಕಾರಣವಿದೆಯೋ ಆ ಕಟ್ಟಡವನ್ನು ಅಥವಾ ಕಟ್ಟಡದ ಯಾವುದೇ ಭಾಗವನ್ನು, ಅಂಥ ಕಟ್ಟಡವನ್ನು ಪುನಃ ವಾಸಕ್ಕೆ ಬಳಸಬಹುದೆಂದು ಆರೋಗ್ಯಾಧಿಕಾರಿಯು ಪ್ರಮಾಣಪತ್ರವನ್ನು ಕೊಡುವವರೆಗೆ ಬಾಡಿಗೆಗೆ ಅಥವಾ ಒಳಬಾಡಿಗೆಗೆ ಕೊಡತಕ್ಕದಲ್ಲ ಅಥವಾ ಆ ಉದ್ದೇಶಕ್ಕಾಗಿ ಅದರೊಳಗೆ ಪ್ರವೇಶಿಸಲು ಯಾರೇ ವ್ಯಕ್ತಿಗೆ ಅವಕಾಶ ನೀಡತಕ್ಕದ್ದಲ್ಲ.

(2) ಉಪ-ಪ್ರಕರಣ (1)ರ ಉದ್ದೇಶಕ್ಕಾಗಿ ಹೋಟೆಲ್ ಅಥವಾ ವಸತಿಗೃಹವನ್ನು ಇಟ್ಟಿರುವವನು, ಅದರಲ್ಲಿ ಯಾವ ವ್ಯಕ್ತಿಗೆ ಸ್ಥಳಾವಕಾಶ ಕೊಟ್ಟಿರುವನೋ ಆ ಯಾರೇ ವ್ಯಕ್ತಿಗೆ ಅದನ್ನು ಅಥವಾ ಅದರ ಭಾಗವನ್ನು ಬಾಡಿಗೆಗೆ ಕೊಟ್ಟಿರುವುದಾಗಿ ಭಾವಿಸತಕ್ಕದ್ದು.

276. ಅಪಾಯಕಾರಿ ರೋಗದಿಂದ ನರಳುತ್ತಿರುವ ಅಪ್ರಾಪ್ತ ವಯಸ್ಕನು ಶಾಲೆಗೆ ಹಾಜರಾಗತಕ್ಕದ್ದಲ್ಲ.- ಅಪಾಯಕಾರಿ ರೋಗದಿಂದ ನರಳುವ ಅಥವಾ ನರಳುತ್ತಿರುವ ಅಥವಾ ಅದರಿಂದ ಸೋಂಕಿಗೆ ಗುರಿಯಾಗಿರುವ ಅಪ್ರಾಪ್ತ ವಯಸ್ಕನ ತಂದೆತಾಯಿಯಾಗಿರುವ ಅಥವಾ ಅವರ ಪಾಲನೆಯ ಜವಾಬ್ದಾರಿಯನ್ನು ಹೊಂದಿರುವ ಯಾರೇ ವ್ಯಕ್ತಿಯು, ಅಪ್ರಾಪ್ತ ವಯಸ್ಕನನ್ನು ಶಾಲೆಗೆ ಅಥವಾ ಕಾಲೇಜಿಗೆ ಕಳುಹಿಸಕೂಡದೆಂದು ಆರೋಗ್ಯಾಧಿಕಾರಿಯಿಂದ ನೋಟೀಸು ಬಂದ ತರುವಾಯ, ಅಂಥ ಅಪ್ರಾಪ್ತ ವಯಸ್ಕನು ಅಂಥ ರೋಗವನ್ನು ಇತರರಿಗೆ ಹರಡುವ ಅನಿರೀಕ್ಷಿತ ಅಪಾಯವಿಲ್ಲವೆಂದು, ಅವನು ಶಾಲೆಗೆ ಅಥವಾ ಕಾಲೇಜಿಗೆ ಹಾಜರಾಗಬಹುದೆಂದು ಆರೋಗ್ಯಾಧಿಕಾರಿಯು ಅಭಿಪ್ರಾಯಪಟ್ಟು ನೀಡಿದ ಪ್ರಮಾಣಪತ್ರವನ್ನು ಅವನಿಂದ ಪಡೆದ ಹೊರತು (ಅದನ್ನು ಅರ್ಜಿಯನ್ನು ಹಾಕಿಕೊಂಡ ಮೇಲೆ ಉಚಿತವಾಗಿ ಕೊಡತಕ್ಕದ್ದು) ಅಂಥ ಅಪ್ರಾಪ್ತ ವಯಸ್ಕನಿಗೆ ಶಾಲೆ ಅಥವಾ ಕಾಲೇಜಿಗೆ ಹಾಜರಾಗಲು ಅನುಮತಿಸತಕ್ಕದ್ದಲ್ಲ.

277. ಗ್ರಂಥಾಲಯ ಪುಸ್ತಕಗಳಿಗೆ ವ್ಯವಸ್ಥೆ.- (1) ಸೋಂಕು ರೋಗದಿಂದ ನರಳುತ್ತಿರುವ ಯಾರೇ ವ್ಯಕ್ತಿಯು, ಯಾವುದೇ ಸಾರ್ವಜನಿಕ ಅಥವಾ ಪರಿಚಲನ ಗ್ರಂಥಾಲಯದಿಂದ ಅಥವಾ ಅದರಲ್ಲಿ ತನ್ನ ಉಪಯೋಗಕ್ಕಾಗಿ ಯಾವುದೇ ಪುಸ್ತಕವನ್ನು ತೆಗೆದುಕೊಳ್ಳತಕ್ಕದ್ದಲ್ಲ ಅಥವಾ ಉಪಯೋಗಿಸತಕ್ಕದ್ದಲ್ಲ ಅಥವಾ ತನ್ನ ಉಪಯೋಗಕ್ಕಾಗಿ ಯಾವುದೇ ಪುಸ್ತಕವನ್ನು ತರಿಸಿಕೊಳ್ಳತಕ್ಕದ್ದಲ್ಲ.

(2) ವ್ಯಕ್ತಿಯು, ಸಾರ್ವಜನಿಕ ಅಥವಾ ಪರಿಚಲನ ಗ್ರಂಥಾಲಯದಿಂದ ತೆಗೆದುಕೊಂಡಿರುವ ಮತ್ತು ಅವನ ಸುಪರ್ದಿನಲ್ಲಿರುವಂಥ ಯಾವುದೇ ಪುಸ್ತಕವನ್ನು, ಸೋಂಕು ರೋಗದಿಂದ ನರಳುತ್ತಿದ್ದಾನೆಂದು ತನಗೆ ತಿಳಿದಿರುವಂತಹ ಯಾರೇ ವ್ಯಕ್ತಿಯು ಉಪಯೋಗಿಸುವುದಕ್ಕೆ ಅನುಮತಿಸತಕ್ಕದ್ದಲ್ಲ.

(3) ವ್ಯಕ್ತಿಯು, ಯಾವುದೇ ಸೋಂಕು ರೋಗದಿಂದ, ಸೋಂಕಿಗೆ ಒಳಗಾಗಿದೆ ಎಂದು ಅವನು ತಿಳಿದಿರುವ ಯಾವುದೇ ಪುಸ್ತಕವನ್ನು ಯಾವುದೇ ಸಾರ್ವಜನಿಕ ಅಥವಾ ಪರಿಚಲನ ಗ್ರಂಥಾಲಯಕ್ಕೆ ವಾಪಸು ಮಾಡತಕ್ಕದ್ದಲ್ಲ ಅಥವಾ ತನ್ನ ಸುಪರ್ದಿನಲ್ಲಿರುವ ಅಂಥ ಪುಸ್ತಕವನ್ನು ಹಾಗೆ ವಾಪಸ್ಸು ಮಾಡಲು ಅನುಮತಿಸತಕ್ಕದ್ದಲ್ಲ, ಆದರೆ ಪುಸ್ತಕವು ಹಾಗೆ ಸೋಂಕಿಗೆ ಒಳಗಾಗಿದೆ ಎಂದು ಅವನು ಮುಖ್ಯ ಆಯುಕ್ತರಿಗೆ ತಿಳಿಸತಕ್ಕದ್ದು ಮತ್ತು ಮುಖ್ಯ ಆಯುಕ್ತರು ಪುಸ್ತಕದ ಸೋಂಕನ್ನು ನಿವಾರಿಸುವಂತೆ ಮತ್ತು ಪುಸ್ತಕವನ್ನು ಗ್ರಂಥಾಲಯಕ್ಕೆ ವಾಪಸು ಮಾಡುವಂತೆ ಅಥವಾ ನಾಶಪಡಿಸುವಂತೆ ಮಾಡತಕ್ಕದ್ದು.

(4) ಮುಖ್ಯ ಆಯುಕ್ತರು, ನಾಶಪಡಿಸಿದ ಯಾವುದೇ ಪುಸ್ತಕದ ಮೌಲ್ಯವನ್ನು ಸಂಬಂಧಿಸಿದ ಗ್ರಂಥಾಲಯದ ಮಾಲೀಕರಿಗೆ ಸಂದಾಯ ಮಾಡತಕ್ಕದ್ದು.

ವಿವರಣೆ.- ಈ ಪ್ರಕರಣದ ಉದ್ದೇಶಗಳಿಗಾಗಿ ಆಯುಕ್ತರು ಯಾವ ರೋಗಗಳನ್ನು ಸೋಂಕು ರೋಗಗಳಾಗಿ ಭಾವಿಸಬೇಕು ಎಂಬುದನ್ನು ಕಾಲಕಾಲಕ್ಕೆ ಅಧಿಸೂಚಿಸತಕ್ಕದ್ದು.

278. ಸೋಂಕು ಹರಡುವ ಸಂಭವವಿರುವ ನೀರಿನ ಬಳಕೆಯನ್ನು ನಿಷೇಧಿಸಲು ಅಧಿಕಾರ.- ನಗರದ ಎಲ್ಲೆಗಳ ಒಳಗೆ ಇರುವ ಯಾವುದೇ ಬಾವಿಯ, ಕೆರೆಯ ಅಥವಾ ಇತರೆ ಸ್ಥಳದಲ್ಲಿನ ನೀರನ್ನು ಕುಡಿಯುವುದಕ್ಕಾಗಿ ಬಳಸಿದರೆ ಅಪಾಯವನ್ನುಂಟುಮಾಡುವ ಸಂಭವವಿದೆಯೆಂದು ಅಥವಾ ಯಾವುದೇ ಅಪಾಯಕಾರಿ ರೋಗವು ಹರಡುವುದಕ್ಕೆ ಕಾರಣವಾಗುವುದೆಂದು ಆರೋಗ್ಯಾಧಿಕಾರಿಯು ಪ್ರಮಾಣೀಕರಿಸಿದರೆ, ಮುಖ್ಯ ಆಯುಕ್ತರು ಸಾರ್ವಜನಿಕ ನೋಟೀಸಿನ ಮೂಲಕ, ನಿರ್ದಿಷ್ಟಪಡಿಸಿದ ಅವಧಿಯಲ್ಲಿ ಕುಡಿಯುವುದಕ್ಕಾಗಿ ಮತ್ತು

ಗೃಹಬಳಕೆಯ ಉದ್ದೇಶಗಳಿಗಾಗಿ ಅಂಥ ನೀರನ್ನು ತೆಗೆದುಕೊಂಡು ಹೋಗುವುದನ್ನು ಅಥವಾ ಬಳಸುವುದನ್ನು ನಿಷೇಧಿಸಬಹುದು.

279. ಕಡ್ಡಾಯವಾಗಿ ಲಸಿಕೆ ಹಾಕುವುದು.- ಪಾಲಿಕೆಯು, ನಿಯಮಿಸಬಹುದಾದಂಥ ರೀತಿಯಲ್ಲಿ ನಗರದಾದಂ್ಯತ ಲಸಿಕೆ ಹಾಕಿಸಿಕೊಳ್ಳುವುದನ್ನು ಒತ್ತಾಯಪಡಿಸತಕ್ಕದ್ದು ಮತ್ತು ನಿಯಮಿಸಬಹುದಾದಂಥ ವ್ಯಕ್ತಿಗೆ ಸಂಬಂಧಿಸಿದಂತೆ, ನಿಯಮಿಸಬಹುದಾದಷ್ಟರಮಟ್ಟಿಗೆ, ಮತ್ತು ಅಂಥ ರೀತಿಯಲ್ಲಿ ನಗರದಾದಂ್ಯತ ಅಥವಾ ಅದರ ಯಾವುದೇ ಭಾಗದಲ್ಲಿ ಲಸಿಕೆ ಹಾಕಿಸಿಕೊಳ್ಳುವುದನ್ನು ಒತ್ತಾಯಪಡಿಸಬಹುದು.

280. ಅಪಾಯಕಾರಿ ರೋಗದ ಬಗ್ೆ ಮಾಹಿತಿಯನ್ನು ನೀಡುವ ಹೊಣೆಗಾರಿಕೆ.- ನಗರದೊಳಗಿನ ಯಾವುದೇ ವಾಸಸ್ಥಳದ ನಿವಾಸಿಯು ಅಪಾಯಕಾರಿ ರೋಗದಿಂದ ನರಳುತ್ತಿರುವಲ್ಲಿ, ನಿವಾಸಿಯು ಯಾವ ಕುಟುಂಬಕ್ಕೆ ಸೇರಿದ್ದಾನೋ ಆ ಕುಟುಂಬದ ಯಜಮಾನರು ಮತ್ತು ಅವನು ತಪ್ಪಿದಲ್ಲಿ, ಅಂಥ ಸ್ಥಳದಲ್ಲಿ ವಾಸಿಸುತ್ತಿರುವ ಅಥವಾ ಅದರ ಪ್ರಭಾರದಲ್ಲಿರುವ ವ್ಯಕ್ತಿಯು, ಸಾಧ್ಯವಾದಷ್ಟುಮಟ್ಟಿಗೆ ತುಂಬಾ ವಿಳಂಬ ಮಾಡದೇ ಮುಖ್ಯ ಆಯುಕ್ತರಿಗೆ, ಆರೋಗ್ಯಾಧಿಕಾರಿಗೆ ಅಥವಾ ಆ ವಿಭಾಗದ ಸ್ಯಾನಿಟರಿ ಇನ್ಸ್ಪೆಕ್ಟರನಿಗೆ ತಿಳಿಸತಕ್ಕದ್ದು.

281. ನಗರ ಪ್ರವೇಶಕ್ೆ ನಿಷೇಧ: ಅಪಾಯಕಾರಿ ರೋಗವನ್ನು ಹೊಂದಿರುವ ಯಾರೇ ವ್ಯಕ್ತಿಯು, ಮುಖ್ಯಆಯುಕ್ತರು ಅಧಿಸೂಚಿಸಿದ ದಿನಾಂಕದಿಂದ ಅಂಥ ವ್ಯಕ್ತಿಯು ಸಂಪರ್ಕಕ್ಕೆ ಅಥವಾ ಸನಿಹಕ್ಕೆ ಬರುವುದರಿಂದ ಅಪಾಯಕಾರಿ ರೋಗವು ಬರುವ ಸಂಭವವಿಲ್ಲವೆಂದು ಮುಖ್ಯ ಆಯುಕ್ತರು ಅಧಿಕೃತಗೊಳಿಸಬಹುದಾದಂಥ ದರ್ಜೆಯ ವೈದ್ಯರಿಂದ ಪ್ರಮಾಣ ಪತ್ರವನ್ನು ಪಡೆಯದೆ ನಗರವನ್ನು ಪ್ರವೇಶಿಸತಕ್ಕದ್ದಲ್ಲ.

282. ಅಪಾಯಕಾರಿ ಕಲ್ಲುಗಣಿ ಕೆಲಸವನ್ನು ನಿಲ್ಲಿಸಲು ಅಧಿಕಾರ.- ಮುಖ್ಯ ಆಯುಕ್ತರು, ಯಾವುದೇ ಕಲ್ಲುಗಣಿಯ ಕೆಲಸವು ಅಥವಾ ಯಾವುದೇ ಸ್ಥಳದಿಂದ ಕಲ್ಲು, ಮಣ್ಣು ಅಥವಾ ಇತರ ಸಾಮಗ್ರಿಗಳನ್ನು ಸ್ಥಳಾಂತರಿಸುವುದು ಆ ಸ್ಥಳದಲ್ಲಿ ವಾಸಿಸುತ್ತಿರುವ ಅಥವಾ ಆ ಸ್ಥಳದ ಅಕ್ಕಪಕ್ಕದ ಸ್ಥಳಕ್ಕೆ ಕಾನೂನು ಸಮ್ಮತ ಪ್ರವೇಶಾವಕಾಶವನ್ನು ಹೊಂದಿರುವ ವ್ಯಕ್ತಿಗಳಿಗೆ ಅಪಾಯಕಾರಿಯಾಗಿದೆ ಎಂದು ಅಥವಾ ಉಪದ್ರವವನ್ನು ಉಂಟುಮಾಡುತ್ತದೆ ಎಂದು ಅಥವಾ ಉಂಟುಮಾಡುವ ಸಂಭವ ಇದೆ ಎಂದು ಅಭಿಪ್ರಾಯಪಟ್ಟರೆ ಮುಖ್ಯ ಆಯುಕ್ತರು ಸ್ಥಾಯೀ ಸಮಿತಿಯ ಅನುಮೋದನೆಯೊಂದಿಗೆ ಆ ಸದರಿ ಕಲ್ಲುಗಣಿಯ ಕೆಲಸದ ಮೇಲೆ ಅಥವಾ ಸ್ಥಳದ ಮೇಲೆ ನಿಯಂತ್ರಣವನ್ನು ಹೊಂದಿರುವ ಮಾಲೀಕನನ್ನು ಅಥವಾ ವ್ಯಕ್ತಿಯನ್ನು ಆ ಕೆಲಸವನ್ನು ಮುಂದುವರೆಸದಂತೆ ಅಥವಾ ಅಂಥ ಸ್ಥಳದಿಂದ ಕಲ್ಲು, ಮಣ್ಣು ಅಥವಾ ಇತರ ಸಾಮಗ್ರಿಯನ್ನು ಸ್ಥಳಾಂತರಿಸುವುದನ್ನು ಮುಂದುವರೆಸದಂತೆ ಅಥವಾ ಅಂಥ ಕೆಲಸದಿಂದ ಉಂಟಾಗುವ ಅಥವಾ ಉಂಟಾಗುವ ಸಂಭವವಿರುವ ಅಪಾಯವನ್ನು ತಪ್ಪಿಸುವ ಅಥವಾ ಉಪದ್ರವವನ್ನು ಉಪಶಮನಗೊಳಿಸುವುದಕ್ಕಾಗಿ ಅಂಥ ಕಲ್ಲುಗಣಿಗೆ ಅಥವಾ ಸ್ಥಳದ ಬಗ್ೆ ಅವಶ್ಯವೆಂದು ತಾವು ಭಾವಿಸುವಂಥ ಆದೇಶವನ್ನು ಪಡೆದುಕೊಳ್ಳಬೇಕೆಂದು ಅಗತ್ಯಪಡಿಸಬಹುದು.

283. ಉಪದ್ರವಕಾರಿಯಾಗಿರುವಂಥ ಹೊಂಡಗಳು, ಇತ್ಯಾದಿಗಳನ್ನು ಮುಚ್ಚುವಂತೆ ಆದೇಶಿಸಲು ಮತ್ತು ನಗರದೊಳಗೆ ಕೃಷಿಯನ್ನು ನಿಯಂತ್ರಿಸಲು ಅಧಿಕಾರ.- (1) ಮುಖ್ಯಆಯುಕ್ತರು-

(ಎ) ಯಾವುದೇ ಹೊಂಡ, ಗುಂಡಿ, ಕೆರೆ, ಬಾವಿ, ಕೊಳ, ಕೆಸರು ಭೂಮಿ, ಜೌಗುನೆಲ, ಕಲ್ಲುಗುಣಿ, ಚರಂಡಿ, ರೊಚ್ಚುಗುಂಡಿ, ಗುಂಡಿ, ಜಲಮಾರ್ಗ ಅಥವಾ ನೀರು ಯಾವುದೇ ರೀತಿಯಲ್ಲಿ ಸಂಗ್ರಹವಾಗಿರುವುದು; ಅಥವಾ

(ಬಿ) ಯಾವ ಭೂಮಿಯ ಮೇಲೆ ಯಾವುದೇ ಕಾಲದಲ್ಲಿ ನೀರು ಶೇಖರವಾಗುವುದೋ ಆ ಯಾವುದೇ ಭೂಮಿಯು ಸೊಳ್ಳೆಗಳ ಉತ್ಪತ್ತಿಯ ಸ್ಥಳ ಅಥವಾ ಇತರ ಯಾವುದೇ ರೀತಿಯಲ್ಲಿ ಉಪದ್ರವಕಾರಿಯಾಗಿದೆ ಎಂದು ಅಥವಾ ಆಗುವ ಸಂಭವವಿದೆ ಎಂದು ಅಭಿಪ್ರಾಯಪಟ್ಟರೆ, ಮುಖ್ಯ ಆಯುಕ್ತರು, ನೋಟೀಸಿನ ಮೂಲಕ ಮಾಲೀಕನನ್ನು ಅಥವಾ ಅದರ ನಿಯಂತ್ರಣವನ್ನು ಹೊಂದಿರುವ ವ್ಯಕ್ತಿಯನ್ನು ಮುಖ್ಯ ಆಯುಕ್ತರು ನಿರ್ದೇಶಿಸುವಂಥ ರೀತಿಯಲ್ಲಿ ಮತ್ತು ಅಂಥ ಸಾಮಗ್ರಿಗಳೊಂದಿಗೆ ಅದನ್ನು ಮುಚ್ಚಲು, ಸುತ್ತುಗಟ್ಟು ನಿರ್ಮಿಸಲು, ಕಳೆ ತೆಗೆಯಲು, ಕಳೆ ತೆಗೆದು ಶೇಖರಣೆ ಮಾಡಲು, ಮರಿಹುಳು ನಾಶಕ ಮೀನನ್ನು ಸಂಗ್ರಹಿಸಲು, ಸೀಮೆ ಎಣ್ಣೆಯಿಂದ ಸಂಸ್ಕರಿಸಲು ಅಥವಾ ಅದನ್ನು ಬರಿದು ಮಾಡಲು ಅಥವಾ ಆಯುಕ್ತರು ನಿರ್ದೇಶಿಸುವಂಥ ರೀತಿಯಲ್ಲಿ ಉಪದ್ರವವನ್ನು ನಿವಾರಿಸುವುದಕ್ಕಾಗಿ ಅಥವಾ ಉಪಶಮನಗೊಳಿಸುವುದಕ್ಕಾಗಿ ಅದರ ಬಗ್ೆ ಅಂಥ ಆದೇಶವನ್ನು ಪಡೆದುಕೊಳ್ಳುವಂತೆ ಅಗತ್ಯ ಪಡಿಸಬಹುದು.

(2) ಬಾವಿಯನ್ನು ಮುಚ್ಚಲು, ಮೇಲೆ ಸುತ್ತುಗಟ್ಟು ನಿರ್ಮಿಸಲು ಅಥವಾ ಬಾವಿಯನ್ನು ಬರಿದು ಮಾಡಲು (1)ನೇ ಉಪ-ಪ್ರಕರಣದ ಮೇರೆಗೆ ಯಾವ ವ್ಯಕ್ತಿಗೆ ಕಡ್ಡಾಯವಾಗಿ ಕೋರಲಾಗಿದೆಯೋ ಆ ವ್ಯಕ್ತಿಯು ಅದನ್ನು ಪಾಲಿಸಲು ನಿಗದಿಪಡಿಸಿದ ಕಾಲದೊಳಗೆ ಮುಖ್ಯ ಆಯುಕ್ತರಿಗೆ ಹಾಗೆ ಕಡ್ಡಾಯವಾಗಿ ಕೋರಿರುವುದಕ್ಕೆ ಲಿಖಿತದಲ್ಲಿ ಆಕ್ೇಪಣೆಗಳನ್ನು ತಲುಪಿಸಿದರೆ, ಸ್ಥಾಯೀ ಸಮಿತಿಗೆ ಮುಖ್ಯ ಆಯುಕ್ತರು ಅಂಥ ಆಕ್ೇಪಣೆಗಳನ್ನು ವರದಿ ಮಾಡತಕ್ಕದ್ದು ಹಾಗೂ ಪ್ರಕರಣದ ಬಗ್ೆ ಹೆಚ್ಚಿನ ವಿಚಾರಣೆಯನ್ನು ಮಾಡತಕ್ಕದ್ದು ಮತ್ತು ಅಂಥ ಕಡ್ಡಾಯ ಕೋರಿಕೆಯನ್ನು ಪಾಲನೆ ಮಾಡಲು ತಪ್ಪಿದ್ದಕ್ಕಾಗಿ ಯಾವುದೇ ಪ್ರಾಸಿಕ್ಯೂಷನನ್ನು ಸ್ಥಾಯೀ ಸಮಿತಿಯ

ಅನುಮೋದನೆಯನ್ನು ಪಡೆದ ಹೊರತು ಅವರು ಹೂಡತಕ್ಕದ್ದಲ್ಲ. ಆದರೆ ಮುಖ್ಯ ಆಯುಕ್ತರು, ಆದಾಗ್ಯೂ ಅಂಥ ಕಡ್ಡಾಯ ಕೋರಿಕೆಯಲ್ಲಿ ಅಪೇಕ್ಷಿಸಿದಂಥ ಕಾಮಗಾರಿಯನ್ನು ನಿರ್ವಹಿಸುವುದು, ತುರ್ತು ಮಹತ್ವದ್ದೆಂದು ಅವರು ಭಾವಿಸಿದರೆ, 356ನೇ ಪ್ರಕರಣಕ್ಕೆ ಅನುಸಾರವಾಗಿ ಮುಂದುವರಿಯಬಹುದು ಹಾಗೂ ಆ ಸದರಿ ಬಾವಿಯನ್ನು ಶಾಶ್ವತವಾಗಿ ಮುಚ್ಚಬೇಕೇ, ಮೇಲೆ ಸುತ್ತುಗಟ್ಟು ನಿರ್ಮಿಸಬೇಕೇ ಅಥವಾ ಬೇರೆ ಏನನ್ನಾದರೂ ಮಾಡಬೇಕೇ ಎಂಬ ಪ್ರಶ್ನೆಯನ್ನು ಸ್ಥಾಯೀ ಸಮಿತಿಯು ಇತ್ಯರ್ಥ ಮಾಡುವವರೆಗೆ ಅಂಥ ಬಾವಿಯನ್ನು ಸೊಳ್ಳೆಗಳು ಒಳಹೋಗುವುದನ್ನು ತಪ್ಪಿಸುವ ಹಾಗೆ ಸುಭದ್ರವಾಗಿ ಮೇಲೆ ಸುತ್ತುಗಟ್ಟು ನಿರ್ಮಿಸುವಂತೆ ಮಾಡತಕ್ಕದ್ದು ಮತ್ತು ಅಂಥ ಪ್ರತಿಯೊಂದು ಸಂದರ್ಭದಲ್ಲಿ ಮುಖ್ಯ ಆಯುಕ್ತರು ಸ್ಥಾಯೀ ಸಮಿತಿಯ ಅನುಮೋದನೆಯೊಂದಿಗೆ ಮೇಲೆ ಹೇಳಿದಂತೆ ಈಗಾಗಲೇ ಮಾಡಿದ ಯಾವುದೇ ಕಾಮಗಾರಿಯ ವೆಚ್ಚಗಳನ್ನು, ಆ ಮಾಲೀಕನು ಸಂದಾಯ ಮಾಡಬೇಕೇ ಅಥವಾ ಪಾಲಿಕೆಯ ನಿಧಿಯಿಂದ ಮುಖ್ಯ ಆಯುಕ್ತರು ಸಂದಾಯ ಮಾಡಬೇಕೇ ಅಥವಾ ಭಾಗಮಾಡಿಕೊಳ್ಳಬೇಕೇ ಮತ್ತು ಹಾಗಾದರೆ ಯಾವ ಪ್ರಮಾಣಗಳಲ್ಲಿ ಸಂದಾಯ ಮಾಡಬೇಕು ಎಂಬುದನ್ನು ನಿರ್ಧರಿಸತಕ್ಕದ್ದು.

(3) ನಗರದ ಎಲ್ಲೆಗಳ ಒಳಗೆ ಇರುವ ಯಾವುದೇ ಸ್ಥಳದಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಬೆಳೆಯ ಸಾಗುವಳಿಯು ಅಥವಾ ನಿರ್ದಿಷ್ಟಪಡಿಸಿದ ಯಾವುದೇ ಗೊಬ್ಬರದ ಬಳಕೆಯು ಅಥವಾ ಭೂಮಿಯ ನೀರಾವರಿಯು ಸಾರ್ವಜನಿಕ ಆರೋಗ್ಯಕ್ಕೆ ಹಾನಿಕಾರಕವಾಗಿದೆಯೆಂಬ, ಆರೋಗ್ಯಾಧಿಕಾರಿಯ ವರದಿಯ ಮೇಲೆ, ಪಾಲಿಕೆಯು ಸರ್ಕಾರದ ಪೂರ್ವ ಮಂಜೂರಾತಿಯೊಂದಿಗೆ, ಸಾರ್ವಜನಿಕ ನೋಟೀಸಿನ ಮೂಲಕ ಹಾನಿಕಾರಕವಾಗಿರುವುದಾಗಿ ಹಾಗೆ ವರದಿ ಮಾಡಲಾದ ಸಾಗುವಳಿಯನ್ನು, ಗೊಬ್ಬರದ ಬಳಕೆಯನ್ನು ಅಥವಾ ನೀರಾವರಿಯನ್ನು ನಿಯಂತ್ರಿಸಬಹುದು ಅಥವಾ ನಿಷೇಧಿಸಬಹುದು:

ಪರಂತು, ಅಂಥ ಸಾಗುವಳಿಯನ್ನು ಅಥವಾ ನೀರಾವರಿಯನ್ನು ಅಂಥ ಸಾರ್ವಜನಿಕ ನೋಟೀಸಿನ ದಿನಾಂಕಕ್ಕೆ ಹಿಂದಿನ ಐದು ವರ್ಷಗಳ ಅವಧಿಯಲ್ಲಿ, ವಾಡಿಕೆಯಂತೆ ಬೇಸಾಯದ ನಿರ್ವಹಣೆಯನುಸಾರ ಸತತವಾಗಿ ನಡೆಸಿಕೊಂಡು ಬರುತ್ತಿರುವ ಪದ್ಧತಿಯಾಗಿದ್ದರೆ ಅಂಥ ನಿಷೇಧದಿಂದ ಅವರಿಗೆ ಉಂಟಾದ ಯಾವುದೇ ಹಾನಿಗಾಗಿ ಹಿತಾಸಕ್ತಿಯುಳ್ಳ ಎಲ್ಲ ವ್ಯಕ್ತಿಗಳಿಗೆ ಪಾಲಿಕೆಯ ನಿಧಿಯಿಂದ ನಷ್ಟಪರಿಹಾರವನ್ನು ಸಂದಾಯ ಮಾಡತಕ್ಕದ್ದು.

ಅಧ್ಯಾಯ XIX

ವಿಪತ್ತು ನಿರ್ವಹಣೆ

284. ವಿಪತ್ತು ನಿರ್ವಹಣೆ.-(1)ಯಾವುದೇ ನೈಸರ್ಗಿಕ ವಿಕೋಪವನ್ನು ತಡೆಗಟ್ಟುವುದಕ್ಕಾಗಿ ಅಥವಾ ನಿರ್ವಹಿಸುವುದಕ್ಕಾಗಿ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರವು ಸ್ಥಾಪಿಸಿದ ಸಂಬಂಧಪಟ್ಟ ಪ್ರಾಧಿಕಾರಗಳಿಗೆ ಹಾಗೆ ಮಾಡಲು ನಿರ್ದೇಶಿಸಬಹುದಾದಂಥ ರೀತಿಯಲ್ಲಿ

(2) ರಾಜ್ಯ ವಿಧಾನ ಮಂಡಲ ಅಥವಾ ಸಂಸತ್ತಿನ ಯಾವುದೇ ಕಾನೂನಿಗೆ ಒಳಪಟ್ಟು ಪಾಲಿಕೆಯು ನೈಸರ್ಗಿಕ ಅಥವಾ ತಾಂತ್ರಿಕ ವಿಪತ್ತಿನಂತಹ ಯಾವುದೇ ರೀತಿಯ ಅಪಾಯವನ್ನು ತಗ್ಗಿಸಲು ಈ ಅಧಿನಿಯಮದ ಅಡಿಯಲ್ಲಿ ತನ್ನ ನಿಯಂತ್ರಣಾತ್ಮಕ ಮತ್ತು ಮೇಲ್ವಿಚಾರಣಾ ಕಾರ್ಯಗಳನ್ನು ನಿರ್ವಹಿಸುವಾಗ ಅಗತ್ಯವಿರುವ ಎಲ್ಲಾ ಕ್ರಮಗಳನ್ನು ಕೈಗೊಳ್ಳತಕ್ಕದ್ದು.

(3) ಪಾಲಿಕೆಯು, ಪ್ರತಿ ವರ್ಷ ರಾಜ್ಯ ಸರ್ಕಾರವು ನಿಯಮಿಸಬಹುದಾದಂತೆ ಅಗ್ನಿ ಅವಘಡ ಸಂಭವನೆ ಮತ್ತು ಪರಿಹಾರ ಯೋಜನೆಯನ್ನು ಸಮಾಲೋಚನೆಯ ಪ್ರಕ್ರಿಯೆಯ ಮೂಲಕ ಸಿದ್ಧಪಡಿಸತಕ್ಕದ್ದು ಮತ್ತು ಯೋಜನೆಯನ್ನು ಪೂರ್ವ ಪ್ರಕಟಣೆಯ ತರುವಾಯ ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸತಕ್ಕದ್ದು.

ಅಧ್ಯಾಯ XX

ತ್ಯಾಜ್ಯನಿರ್ವಹಣೆ

285. ಘನ ತ್ಯಾಜ್ಯವನ್ನು ನಿರ್ವಹಿಸುವಲ್ಲಿ ಪಾಲಿಕೆಯ ಕರ್ತವ್ಯ.- (1) ಪಾಲಿಕೆಯ ಘನತ್ಯಾಜ್ಯದ ವ್ಯವಸ್ಥಾಪನೆ ಮತ್ತು ನಿರ್ವಹಣೆಯನ್ನು ನಿಯಂತ್ರಿಸುವುದಕ್ಕೆ ಮತ್ತು ಅಂತಹ ಘನತ್ಯಾಜ್ಯಗಳ ಸಂಗ್ರಹಣೆ, ದಾಸ್ತಾನು, ಸಾಗಣೆ, ಸಂಸ್ಕರಣೆ ಮತ್ತು ವಿಲೇವಾರಿಗಾಗಿ ಯಾವುದೇ ಮೂಲಸೌಕರ್ಯಗಳ ಅಭಿವೃದ್ಧಿಗಾಗಿ ಏಜೆನ್ಸಿ ಮೂಲಕವಾಗಲೀ ಅಥವಾ ತನ್ನ ಮೂಲಕವಾಗಲೀ ಘನತ್ಯಾಜ್ಯ ನಿರ್ವಹಣೆ ನಿಯಮಗಳು, 2016ರ ಉಪಬಂಧಗಳನ್ನು ಅನುಷ್ಠಾನಗೊಳಿಸುವುದು ಪಾಲಿಕೆಯ ಕರ್ತವ್ಯವಾಗಿರತಕ್ಕದ್ದು.

(2) ಪಾಲಿಕೆಯು, ರಾಜ್ಯದ ಕಾರ್ಯನೀತಿಗನುಸಾರವಾಗಿ ಘನತ್ಯಾಜ್ಯ ನಿರ್ವಹಣಾ ಯೋಜನೆಯನ್ನು ಸಹ ಸಿದ್ಧಪಡಿಸತಕ್ಕದ್ದು ಮತ್ತು ಕಾರ್ಯತಂತ್ರವನ್ನು ಜಾರಿಗೆತರತಕ್ಕದ್ದು.

(3) ಪಾಲಿಕೆಯು, ಘನತ್ಯಾಜ್ಯ ನಿರ್ವಹಣೆಯ ಕುರಿತು ಚಿಂದಿ ಆಯುವವರಿಗೆ ಮತ್ತು ಸಂಗ್ರಹಿಸುವವರಿಗೂ ಸಹ ತರಬೇತಿಯನ್ನು ನೀಡತಕ್ಕದ್ದು.

(4) ಪಾಲಿಕೆಯು, ತ್ಯಾಜ್ಯ ನಿರ್ವಹಣೆಯಲ್ಲಿ ಸಮುದಾಯವನ್ನು (ಸಾರ್ವಜನಿಕರನ್ನು) ಸಹತೊಡಗಿಸಿಕೊಳ್ಳತಕ್ಕದ್ದು ಮತ್ತು ಸಮುದಾಯದ (ಸಾರ್ವಜನಿಕರ) ಮಟ್ಟದಲ್ಲಿ ಮನೆಯ ಜೈವಿಕಗೊಬ್ಬರ ಮತ್ತು ಇತರೆ ಅಂತಹ ಕಾರ್ಯವಿಧಾನಗಳಿಗಾಗಿ ಉತ್ತೇಜಿಸತಕ್ಕದ್ದು.

(5) ಪಾಲಿಕೆಯು ಮಾಹಿತಿಯ ಮೂಲಕ ಸೂಕ್ತವಾದ ತ್ಯಾಜ್ಯ ನಿರ್ವಹಣೆಯನ್ನು ಖಾತ್ರಿಗೊಳಿಸುವ ಅಗತ್ಯತೆಯ ಕುರಿತು ಸಾರ್ವಜನಿಕರಲ್ಲಿ ಅರಿವನ್ನು ಮೂಡಿಸತಕ್ಕದ್ದು.

286. ಘನ ತ್ಯಾಜ್ಯಗಳ ವ್ಯವಸ್ಥಾಪನೆ ಮತ್ತು ನಿರ್ವಹಣೆ ಹಾಗೂ ಬಿಲ್ಲಿಂಗ್ ಮತ್ತು ಶುಲ್ಕ ಸಂಗ್ರಹಣೆಯ ಜವಾಬ್ದಾರಿಗಳು.-ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಪಾಲಿಕೆ ಘನ ತ್ಯಾಜ್ಯಗಳ ವ್ಯವಸ್ಥಾಪನೆ ಮತ್ತು ನಿರ್ವಹಣೆಯ ಉದ್ದೇಶಕ್ಕಾಗಿ ಹಾಗೂ ಮೂಲಸೌಕರ್ಯಗಳ ಅಭಿವೃದ್ಧಿಗಾಗಿ ಎಂದರೆ, ಅಂತಹ ಘನ ತ್ಯಾಜ್ಯದ ಸಂಗ್ರಹಣೆ, ದಾಸ್ತಾನು, ಸಾಗಣೆ, ಸಂಸ್ಕರಣೆ ಮತ್ತು ವಿಲೇವಾರಿ ಮಾಡುವುದಕ್ಕಾಗಿ ಶುಲ್ಕಗಳನ್ನು ವಿಧಿಸತಕ್ಕದ್ದು ಮತ್ತು ಪಾಲಿಕೆಯು ಕಾಲಕಾಲಕ್ಕೆ ನಿಗದಿಪಡಿಸಬಹುದಾದಂತಹ ದರದಲ್ಲಿ ಅದನ್ನುಪಾವತಿಸತಕ್ಕದ್ದು.

ಪರಂತು, ಮೇಲಿನ ಶುಲ್ಕವು, ಸಾಧ್ಯವಾದಷ್ಟು ಪ್ರಾಯೋಗಿಕವಾಗಿ, ಪಾಲಿಕೆ ಘನ ತ್ಯಾಜ್ಯಗಳ ವ್ಯವಸ್ಥಾಪನೆ ಮತ್ತು ನಿರ್ವಹಣೆ ಮತ್ತು ಅದರ ಸಂಗ್ರಹಣೆ, ದಾಸ್ತಾನು, ಸಾಗಣೆ, ಸಂಸ್ಕರಣೆ ಮತ್ತು ವಿಲೇವಾರಿಗಾಗಿ ಮೂಲಸೌಕರ್ಯಗಳ ಅಭಿವೃದ್ಧಿ, ವೆಚ್ಚಗಳನ್ನು ಒಳಗೊಂಡಿರತಕ್ಕದ್ದು.

287. ಘನ ತ್ಯಾಜ್ಯದ ವಿಲೇವಾರಿಗಾಗಿ ಮತ್ತು ಅಂತಿಮ ವಿಲೇವಾರಿಗಾಗಿ ಸ್ಥಳಗಳನ್ನು ಗುರುತಿಸುವಿಕೆ.-ಪಾಲಿಕೆಯು, ಸ್ವತಃ ತಾನೇ ಆಗಲೀ ಅಥವಾ ಇತರೆ ಯಾವುದೇ ಏಜೆನ್ಸಿಯ ಮೂಲಕವಾಗಲಿ, ಘನತ್ಯಾಜ್ಯವನ್ನು ಪೌರಾಡಳಿತ ಪ್ರದೇಶದ ಒಳಗೆ ಅಥವಾ ಹೊರಗಿನ ಸ್ಥಳ ಅಥವಾ ಸ್ಥಳಗಳಲ್ಲಿ ಸೂಕ್ತವೆಂದು ಭಾವಿಸಬಹುದಾದ ರೀತಿಯಲ್ಲಿ ವಿಲೇವಾರಿ ಮಾಡಬೇಕಾಗುತ್ತದೆ.

ಪರಂತು, ರಾಜ್ಯ ಸರ್ಕಾರವು ಅನುಮತಿಸದಿರು ವಂಥರೀತಿಯಲ್ಲಿ ಘನತ್ಯಾಜ್ಯಗಳನ್ನು ಅಂತಿಮವಾಗಿವಿಲೇವಾರಿಮಾಡತಕ್ಕದ್ದಲ್ಲ.

288. ಘನ ತ್ಯಾಜ್ಯಗಳನ್ನು ಅವುಗಳ ಉತ್ಪತ್ತಿಯ ಮೂಲದಲ್ಲೆ ಸಂಗ್ರಹಿಸಿಡುವ ಸಂಬಂಧ ಆವರಣಗಳ/ಕಟ್ಟಡಗಳ ಮಾಲೀಕರ ಮತ್ತು ಅಧಿಭೋಗದಾರರ ಕರ್ತವ್ಯ.- ಈ ಕೆಳಕಂಡವುಗಳು ಪೌರಾಡಳಿತ ಪ್ರದೇಶದಲ್ಲಿರುವ ಎಲ್ಲಾ ಭೂಮಿಗಳು ಮತ್ತು ಕಟ್ಟಡಗಳ ಮಾಲೀಕರ ಹಾಗೂ ಅಧಿಭೋಗದಾರರ ಕರ್ತವ್ಯಗಳಾಗಿರತಕ್ಕದ್ದು,-

(1) ಆವರಣಗಳನ್ನು ನಿಯತವಾಗಿ ಗುಡಿಸಿ ಸ್ವಚ್ಛವಾಗಿಡುವುದು;

(2) ಈ ಕೆಳಕಂಡವುಗಳ ಸಂಗ್ರಹಣೆಗಾಗಿ ಪ್ರತ್ಯೇಕವಾದ ಕಸದಬುಟ್ಟಿಗಳನ್ನು ಅಥವಾ ಕಸ ವಿಲೇವಾರಿ ಚೀಲಗಳನ್ನುಒದಗಿಸುವುದು.

(ಎ) ಸಾವಯವ ಮತ್ತು ಜೈವಿಕ ವಿಘಟನೀಯ(ಕೊಳೆಯಬಹುದಾದ) ತ್ಯಾಜ್ಯಗಳು,

(ಬಿ) ಮರುಬಳಕೆಮಾಡಬಹುದಾದ ಅಥವಾ ಜೈವಿಕ ವಿಘಟನೀಯವಲ್ಲದ (ಕೊಳೆಯದ) ತ್ಯಾಜ್ಯಗಳು, ಮತ್ತು

(ಸಿ) ಮನೆಯಲ್ಲಿ ಉತ್ಪತ್ತಿಯಾಗುವ ಅಪಾಯಕಾರಿ ತ್ಯಾಜ್ಯಗಳು- ಈ ವಿವಿಧ ಬಗೆಯ ತ್ಯಾಜ್ಯಗಳು ಪರಸ್ಪರ ಒಂದಕ್ಕೊಂದು ಬೆರೆಯದಂತೆ ಖಾತ್ರಿಪಡಿಸಿಕೊಳ್ಳುವ ರೀತಿಯಲ್ಲಿ ಸಂಗ್ರಹಿಸುವುದು;

(ಡಿ) ಅಂತಹ ಕಸದ ಬುಟ್ಟಿಗಳನ್ನು ಸುಸ್ಥಿತಿಯಲ್ಲಿ ಹಾಗೂ ಸುವ್ಯವಸ್ಥಿತ ರೀತಿಯಲ್ಲಿ ಇಟ್ಟುಕೊಳ್ಳುವುದು; ಮತ್ತು

(ಇ) ಕಸ, ಯಾವುದೇ ಹಾನಿಕಾರಕ ಅಥವಾ ಅಸಹ್ಯಕರ ವಸ್ತು, ಪಾಯಿಖಾನೆ, ಹೊಲಸು, ವ್ಯಾಪಾರಿ ತ್ಯಾಜ್ಯ ವಸ್ತುಗಳು, ಸಗಣಿ, ಮೂಳೆಗಳು, ಚಿತಾಭಸ್ಮ, ಸತ್ತಪ್ರಾಣಿಗಳ ಕಳೇಬರಗಳು, ಬಯೋಮೆಡಿಕಲ್ ತ್ಯಾಜ್ಯಗಳು ಹಾಗೂ ಇತರೆ ಕಲುಷಿತ ಮತ್ತು ಹೇಸಿಗೆ ಹುಟ್ಟಿಸುವ ವಸ್ತುಗಳೂ ಸೇರಿದಂತೆ ಅಂತಹ ಎಲ್ಲಾ ತ್ಯಾಜ್ಯಗಳನ್ನು ಆಯಾಯ ಆವರಣ/ ಕಟ್ಟಡಗಳಿಂದ ಸಂಗ್ರಹಿಸಿ ವಲಯ ಆಯುಕ್ತರು ಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂತೆ ಅಂತಹ ವೇಳೆಗಳಲ್ಲಿ ಮತ್ತು ಅಂತಹ ಸ್ಥಳಗಳಲ್ಲಿ ಸಮುದಾಯ ಕಸದ ತೊಟ್ಟಿ ಅಥವಾ ಕಸದ ಬುಟ್ಟಿಗಳಲ್ಲಿ ಹಾಕುವಂತೆಮಾಡುವುದು.

289. ವಿವಿಧ ಬಗೆಯ ತ್ಯಾಜ್ಯವನ್ನು ನಿರ್ವಹಿಸುವುದಕ್ಕೆ ಸಂಬಂಧಿಸಿದ ಪಾಲಿಕೆಯ ಕರ್ತವ್ಯ.-

(1) ಬಯೋಮೆಡಿಕಲ್ ತ್ಯಾಜ್ಯ.- ಈ ಅಧಿನಿಯಮದ ಮೇರೆಗೆ ಗೊತ್ತುಪಡಿಸಲಾದ ನಿಯಮಗಳ ಉಪಬಂಧಗಳನ್ನು ಯಾವುದೇ ಏಜೆನ್ಸಿಯ ಮೂಲಕವಾಗಲೀ ಅಥವಾ ಸ್ವತಃ ಪಾಲಿಕೆಯಾಗಲೀ ಜಾರಿಗೊಳಿಸುವುದು ಪಾಲಿಕೆಯ ಕರ್ತವ್ಯವಾಗಿರತಕ್ಕದ್ದು.

(2) ಇ-ತ್ಯಾಜ್ಯ.-ಈ ಅಧಿನಿಯಮದ ಮೇರೆಗೆಗೊತ್ತುಪಡಿಸಲಾದ ನಿಯಮಗಳ ಉಪಬಂಧಗಳನ್ನು ಯಾವುದೇ ಏಜೆನ್ಸಿಯ ಮೂಲಕ ಜಾರಿಗೊಳಿಸುವುದು ಪಾಲಿಕೆಯ ಕರ್ತವ್ಯವಾಗಿರತಕ್ಕದ್ದು.

(3) ಪ್ಲಾಸ್ಟಿಕ್ ತ್ಯಾಜ್ಯ.- ಈ ಅಧಿನಿಯಮದ ಮೇರೆಗೆಗೊತ್ತುಪಡಿಸಲಾದ ನಿಯಮಗಳಉಪಬಂಧಗಳನ್ನು ಜಾರಿಗೊಳಿಸುವುದು ಪಾಲಿಕೆಯ ಕರ್ತವ್ಯವಾಗಿರತಕ್ಕದ್ದು.

290. ವಾಣಿಜ್ಯ ತ್ಯಾಜ್ಯ ಉತ್ಪಾದಕರ ಹೊಣೆಗಾರಿಕೆಗಳು. (**1**) ಬೀದಿಬದಿಯ ವ್ಯಾಪಾರಿಗಳಂತಹ ತ್ಯಾಜ್ಯ ಉತ್ಪಾದನೆಗೆ ಕಾರಣವಾಗುವಂತಹ ವ್ಯಾಪಾರಿಗಳು ತಮ್ಮ ವ್ಯಾಪಾರ ಚಟುವಟಿಕೆಯ ಅವಧಿಯಲ್ಲಿ ಉತ್ಪತ್ತಿಯಾಗುವ ಘನತ್ಯಾಜ್ಯಗಳನ್ನು ಅಂದರೆ, ಆಹಾರತ್ಯಾಜ್ಯ, ಬಳಸಿ ಬಿಸಾಡಬಹುದಾದ ಪ್ಲೇಟ್‌ಗಳು, ಲೋಟಗಳು, ಕ್ಯಾನುಗಳು, ರ್ಯಾಪರ್ಸ್‌ಳು, ತೆಂಗಿನಚಿಪ್ಪುಗಳು, ಉಳಿದಿರುವ ಆಹಾರ ಪದಾರ್ಥಗಳು, ತರಕಾರಿಗಳು, ಹಣ್ಣು ಮತ್ತು ಅಂತಹದೇ ರೀತಿಯ ವಸ್ತುಗಳನ್ನು ಬೇರೆಬೇರೆಯಾಗಿ ವಿಂಗಡಿಸತಕ್ಕದ್ದು.

(2) ಯಾವುದೇ ವಾಣಿಜ್ಯ ಚಟುವಟಿಕೆಯ ಪರಿಣಾಮವಾಗಿ, ಕೋಳಿ, ಮೀನು ಹಾಗೂ ಕಸಾಯಿ ತ್ಯಾಜ್ಯದ ಉತ್ಪಾದನೆಗೆ ಕಾರಣವಾಗುವ ಯಾವುದೇ ಕಟ್ಟಡ/ ಆವರಣದ ಪ್ರತಿಯೊಬ್ಬ ಅಧಿಭೋಗದಾರನು ಅಂತಹ ತ್ಯಾಜ್ಯಗಳನ್ನು ಪ್ರತ್ಯೇಕವಾಗಿ ಮುಚ್ಚಿದ ಮತ್ತು ಶುಚಿಯಾದ ಸ್ಥಿತಿಯಲ್ಲಿ ಸಂಗ್ರಹಣೆಮಾಡತಕ್ಕದ್ದು ಮತ್ತು ಅಂತಹ ತ್ಯಾಜ್ಯವನ್ನು ಬೇರೆ ಯಾವುದೇ ಬಗೆಯ ಘನ ತ್ಯಾಜ್ಯದೊಂದಿಗೆ ಬೆರೆಸತಕ್ಕದ್ದಲ್ಲ.

291. ವಾರ್ಡ್ ಸಮಿತಿಯ ಪ್ರಕಾರ್ಯಗಳು.- (**1**) ವಾರ್ಡ್ ಸಮಿತಿಯು, ಸಮುದಾಯ ಕಸದ ತೊಟ್ಟಿಗಳ ಮೂಲಕ ಸಂಗ್ರಹಣೆ, ಮನೆ-ಮನೆ ಕಸಸಂಗ್ರಹಣೆ, ನಿಯತ ಪೂರ್ವ ನಿಯೋಜಿತ ಸಮಯ ಮತ್ತು ವೇಳಾಪಟ್ಟಿಗಳಿಗನುಸಾರ ಕಸದ ಸಂಗ್ರಹಣೆಯಂತಹ ಯಾವುದೇ ವಿಧಾನಗಳ ಮೂಲಕ ಪಾಲಿಕೆ ಘನತ್ಯಾಜ್ಯಗಳ ಸಂಗ್ರಹಣೆಗೆ ವ್ಯವಸ್ಥೆಮಾಡತಕ್ಕದ್ದು.;

(2) ವಾರ್ಡ್ ಸಮಿತಿಯು, ಹೋಟೇಲುಗಳು, ರೆಸ್ಟೋರೆಂಟ್‌ಗಳು, ಕಚೇರಿ ಸಂಕೀರ್ಣಗಳು ಮತ್ತು ವಾಣಿಜ್ಯ ಪ್ರದೇಶಗಳನ್ನು ಒಳಗೊಂಡಂತೆ ಕೊಳಗೇರಿಗಳು ಹಾಗೂ ಅಕ್ರಮ ವಸತಿ ಪ್ರದೇಶಗಳು ಅಥವಾ ಇತರ ವಸತಿ ಸ್ಥಳಗಳಿಂದ ತ್ಯಾಜ್ಯಗಳ ಸಂಗ್ರಹಣೆಗೆ ಯೋಜನೆ ರೂಪಿಸತಕ್ಕದ್ದು.

(3) ವಾರ್ಡ್ ಸಮಿತಿಯು, ದಿನನಿತ್ಯ ಕಸವಿಲೇವಾರಿಗಾಗಿ ಮಾಡುವ (1) ಮತ್ತು (2)ನೇ ಖಂಡದ ಮೇರೆಗೆ ಹಾಗೆ ಸಂಗ್ರಹಿಸಲಾದ ಎಲ್ಲಾ ಘನತ್ಯಾಜ್ಯಗಳನ್ನು ನಿಯತಕಾಲಾಂತರಗಳಲ್ಲಿ ತೆಗೆಯತಕ್ಕದ್ದು;

(4)ವಾರ್ಡ್ ಸಮಿತಿಯು, ಕಸಾಯಿಖಾನೆಗಳು, ಮಾಂಸ ಮತ್ತುಮೀನು ಮಾರುಕಟ್ಟೆಗಳು ಹಾಗೂ ಹಣ್ಣು ಮತ್ತು ತರಕಾರಿ ಮಾರುಕಟ್ಟೆಗಳಿಂದ ಜೈವಿಕ ವಿಘಟನೀಯ (ಕೊಳೆಯಬಹುದಾದ) ತ್ಯಾಜ್ಯಗಳನ್ನು ಪರಿಸರದ ದೃಷ್ಟಿಯಿಂದ ಅಂಗೀಕಾರಾರ್ಹವಾದ ರೀತಿಯಲ್ಲಿ ಬಳಕೆ ಮಾಡಿಕೊಳ್ಳುವುದಕ್ಕೆ ವ್ಯವಸ್ಥೆಮಾಡತಕ್ಕದ್ದು.

(5)ವಾರ್ಡ್ ಸಮಿತಿಯು, ಆಯಾಯ ವಾರ್ಡ್‌ನ ವ್ಯಾಪ್ತಿಯೊಳಗೆ ಬರುವ ಉದ್ಯಾನವನಗಳು, ಮಾರುಕಟ್ಟೆಗಳು, ರಸ್ತೆಗಳು, ಬೀದಿಗಳು, ಗಾರ್ಡನ್‌ಗಳು ಮತ್ತು ಅಂತಹುದೇ ಪ್ರದೇಶಗಳಂತಹ ಸಾರ್ವಜನಿಕ ಸ್ಥಳಗಳಿಂದ ಘನತ್ಯಾಜ್ಯವನ್ನು ಸಂಗ್ರಹಿಸಲಾಗಿದೆಯೇ ಎಂಬುದನ್ನು ಕೂಡ ಖಾತ್ರಿಪಡಿಸಿಕೊಳ್ಳತಕ್ಕದ್ದು.

292. ತ್ಯಾಜ್ಯ ನಿರ್ವಹಣೆಗೆ ಸಂಬಂಧಿಸಿದಂತೆ ವಾರ್ಡ್ ಸಮಿತಿಗಳ ಕರ್ತವ್ಯಗಳು.- (1) ಈ ಅಧಿನಿಯಮದ ಮೇರೆಗೆ ಸ್ಥಾಪಿತಗೊಂಡ ವಾರ್ಡ್ ಸಮಿತಿಗಳು, ವಾರ್ಡಿನಲ್ಲಿ ಸಮರ್ಪಕ ಘನತ್ಯಾಜ್ಯನಿರ್ವಹಣೆ ಮತ್ತು ನೈರ್ಮಲ್ಯೀಕರಣ ಕಾರ್ಯಕ್ಕೆ ಸಂಬಂಧಿಸಿದಂತೆ ಪಾಲಿಕೆಯೊಂದಿಗೆ ಕೆಲಸಮಾಡತಕ್ಕದ್ದು.

(2) ವಾರ್ಡ್ ಸಮಿತಿಗಳು ಕ್ರಿಯಾ ಯೋಜನೆಯನ್ನು ತಯಾರಿಸತಕ್ಕದ್ದು ಮತ್ತು ಅಂಥ ಕ್ರಿಯಾ ಯೋಜನೆಯನ್ನು ಪಾಲಿಕೆಯ ವಾರ್ಡ್ ಮಟ್ಟದ ಕಿರುಯೋಜನೆ ಹಾಗೂ ಇತರ ನೀತಿಗಳೊಂದಿಗೆ ಸಂಯೋಜಿಸುವಾಗ, ವಾರ್ಡ್‌ನ ಅಗತ್ಯತೆ, ಆಯವ್ಯವಯದ ಹಂಚಿಕೆಗಳು, ಮೂಲಸೌಕರ್ಯ ಅಗತ್ಯತೆಗಳನ್ನು ಪರಿಗಣನೆಗೆ ತೆಗೆದುಕೊಂಡು ತಯಾರಿಸತಕ್ಕದ್ದು.

(3)ವಾರ್ಡ್ ಸಮಿತಿಯು, ವಾರ್ಡ್‌ನಲ್ಲಿ ಉತ್ಪತ್ತಿಯಾಗುವ ಘನತ್ಯಾಜ್ಯದ ಬಗೆ ಮತ್ತು ಪ್ರಮಾಣ, ಚಾಲ್ತಿಯಲ್ಲಿರುವ ಸಂಸ್ಕರಣಾ ಸಾಮರ್ಥ್ಯ, ಹೆಚ್ಚುವರಿ ಸಂಸ್ಕರಣೆ ಮತ್ತು ಸೌಲಭ್ಯ ಯೋಜನೆಗಳ ಬಗ್ಗೆ ನಿರ್ಣಯಿಸತಕ್ಕದ್ದು.

(4) ವಾರ್ಡ್ ಕ್ರಿಯಾಯೋಜನೆಯಲ್ಲಿ ಗುರುತಿಸಲಾದ ಅಗತ್ಯತೆಗಳು ಮತ್ತು ಗುರಿಗಳನ್ನು ವಾರ್ಡ್ ಸಮಿತಿಯು ನಿಯತವಾಗಿ ಮೇಲ್ವಿಚಾರಣೆಮಾಡತಕ್ಕದ್ದು.

(5) ವಾರ್ಡ್ ಕ್ರಿಯಾ ಯೋಜನೆಗನುಸಾರವಾಗಿ, ವಾರ್ಡ್ ಸಮಿತಿಗಳು ಉತ್ಪಾದನೆಗೊಂಡ ತ್ಯಾಜ್ಯದ ಬಗೆ ಮತ್ತು ಪ್ರಮಾಣ, ತ್ಯಾಜ್ಯ ಸಂಗ್ರಹಣಾ ಮತ್ತು ತ್ಯಾಜ್ಯ ಸಂಸ್ಕರಣಾ ವಿಧಾನ ಹಾಗೂ ತಮ್ಮ ತಮ್ಮ ವಾರ್ಡ್‌ಗಳಲ್ಲಿ ಸಮರ್ಪಕ ತ್ಯಾಜ್ಯ ನಿರ್ವಹಣೆಗೆ ನೆರವಾಗಬಹುದಾದಂಥ ಇತರೆ ಸೌಲಭ್ಯಗಳ ಬಗ್ಗೆ ನಿರ್ಣಯಿಸತಕ್ಕದ್ದು.

(6) ವಾರ್ಡ್ ಯೋಜನೆಯು, ವಿವಿಧ ಪ್ರವರ್ಗದ ತ್ಯಾಜ್ಯ, ಸಂಗ್ರಹಣಾಜಾಗಗಳು, ತ್ಯಾಜ್ಯ ಸಂಗ್ರಹಣೆಯ ವಾಹನಗಳು ಮತ್ತು ಘನ ತ್ಯಾಜ್ಯನಿರ್ವಹಣೆ ನಿಯಮಗಳು, 2016 ಅನ್ನು

ಅನುಷ್ಠಾನಗೊಳಿಸುವುದಕ್ಕೆ ಅಗತ್ಯ ಪಡಿಸಲಾದಂಥ ಇತರ ಮಾಹಿತಿಗಳನ್ನು ಕೂಡ ಗಣನೆಗೆ ತೆಗೆದುಕೊಳ್ಳತಕ್ಕದ್ದು.

(7) ಅಂತಹ ಯೋಜನೆಯನ್ನು ವಲಯ ಆಯುಕ್ತರ ಆಶ್ರಯದಲ್ಲಿ ನಿಯತವಾಗಿ ಮೇಲ್ವಿಚಾರಣೆ ಮತ್ತು ಪುನರಾವಲೋಕನ ಮಾಡತಕ್ಕದ್ದು ಹಾಗೂ ಅವರು ಸದರಿ ಪುನರಾವಲೋಕನವನ್ನು ಕೈಗೊಳ್ಳುವುದಕ್ಕೆ ತಮ್ಮ ಪರವಾಗಿ ಅಂತಹ ಇತರೆ ಅಧಿಕಾರಿಗಳನ್ನು ನೇಮಿಸಬಹುದು.

(8) ವಲಯ ಆಯುಕ್ತರು ಅಥವಾ ಅವರ ಪರವಾಗಿ ನೇಮಕಗೊಂಡ ಅಧಿಕಾರಿಯು ತಪಾಸಣೆ ನಡೆಸುವ ಅಧಿಕಾರವನ್ನು ಹೊಂದಿರತಕ್ಕದ್ದು ಹಾಗೂ ಈ ಕುರಿತು ಒಂದು ವರದಿಯನ್ನು ಸಿದ್ಧಪಡಿಸತಕ್ಕದ್ದು. ಈ ವರದಿಯನ್ನು ಪಾಲಿಕೆಯು ಪುನರಾವಲೋಕನ ಮಾಡಬೇಕು. ತಪಾಸಣೆಯ ಉದ್ದೇಶಕ್ಕಾಗಿ, ಅಧಿಕಾರಿಯು, ವಾರ್ಡ್‌ನ ಕ್ರಿಯಾಯೋಜನೆಯನ್ನು ಪಾಲಿಸುವ ಉದ್ದೇಶಗಳಿಗಾಗಿ ಯಾವುದೇ ಸ್ಥಳ/ಜಾಗಕ್ಕೆ, ಎಲ್ಲಾ ಯುಕ್ತ ಸಮಯಗಳಲ್ಲಿ ಪ್ರವೇಶಿಸುವ ಹಕ್ಕನ್ನು ಹೊಂದಿರತಕ್ಕದ್ದು.

(9) ವಾರ್ಡ್ ಸಮಿತಿಯು, ಪಾಲಿಕೆಯು ಕೈಗೊಂಡಕ್ರಮಗಳ ಮೇಲೆ ಚರ್ಚಿಸತಕ್ಕದ್ದು ಮತ್ತು ಅಂತಹ ವರದಿಯಲ್ಲಿ ಮಾಡಲಾದ ಶಿಫಾರಸುಗಳನ್ನು ಪಾಲಿಸಲು ಬೇಕಾಗಿರುವಂಥ ಅವಶ್ಯಕ ಕ್ರಮಗಳನ್ನು ಕೈಗೊಳ್ಳತಕ್ಕದ್ದು.

(10) ವಾರ್ಡ್ ಸಮಿತಿಯು, ಸ್ವಚ್ಛತೆಯ ನಿರ್ವಹಣೆ ಘನ ತ್ಯಾಜ್ಯದ ಸಂಗ್ರಹಣೆ ಕುರಿತು ಸಮೀಕ್ಷೆ ನಡೆಸಿ, ಆ ಬಗ್ಗೆ ನಿಯತವರದಿಗಳನ್ನು ನೀಡಲು ಮತ್ತು ತಮ್ಮ ವಾರ್ಡಿನಲ್ಲಿನ ಸ್ವಚ್ಛತಾ ಅಭಿಯಾನ ಅಥವಾ ಜಾಗೃತಿ ಆಂದೋಲನ ಕಾರ್ಯಕ್ರಮಗಳ ಆ ಯೋಜನೆಯಲ್ಲಿ ಭಾಗವಹಿಸಲು ಪ್ರತಿಯೊಂದು ವಾರ್ಡಿನಲ್ಲಿ ಸಂಬಂಧ ಪಟ್ಟ ನಾಗರೀಕರನ್ನು ಒಳಗೊಂಡಿರತಕ್ಕ ಒಂದು ಸಮಿತಿಯನ್ನು ರಚಿಸತಕ್ಕದ್ದು.

(11) ತ್ಯಾಜ್ಯ ನಿರ್ವಹಣಾ ಸಮಿತಿಯು ಸಿದ್ಧಪಡಿಸಿದ ವರದಿಗಳಲ್ಲಿ ಎತ್ತಿ ತೋರಿಸಲಾದ ಸಮಸ್ಯೆಗಳ ನಿವಾರಣೆಯ ಅನುಷ್ಠಾನವನ್ನು ಖಾತರಿ ಪಡಿಸುವ ಸಲುವಾಗಿ ಸದರಿ ಸಮಿತಿಯು ವಾರ್ಡ್ ಸಮಿತಿಯೊಂದಿಗೆ ನಿಯತಕಾಲಿಕ ಸಭೆಗಳನ್ನು ನಡೆಸತಕ್ಕದ್ದು.

293. ವಾರ್ಡ್ ಮಟ್ಟದ ಕಿರುಯೋಜನೆ (ಮೈಕ್ರೋಪ್ಲಾನ್).- (1) ಪಾಲಿಕೆಯು ವಾರ್ಡ್‌ನಲ್ಲಿನ ಪ್ರತಿಯೊಂದು ಬ್ಲಾಕ್‌ನಲ್ಲಿ ಘನತ್ಯಾಜ್ಯದ ನಿರ್ವಹಣೆಯ ಯೋಜನೆಯನ್ನು ಸೃಜಿಸತಕ್ಕದ್ದು ಮತ್ತು ವಾರ್ಡ್ ಸಮಿತಿಯ ಜೊತೆಯಾಗಿ ಈ ಯೋಜನೆಯ ಅನುಷ್ಠಾನವನ್ನು ಖಾತರಿಪಡಿಸಿಕೊಳ್ಳತಕ್ಕದ್ದು. ಪಾಲಿಕೆಯು ಸೂಕ್ತ ಎಂದು ಪರಿಗಣಿಸಬಹುದಾದಂತೆ ಘನತ್ಯಾಜ್ಯ ನಿರ್ವಹಣೆಯ ಪರಿಣಾಮಕಾರಿ ಅನುಷ್ಠಾನಕ್ಕೆ ಅಗತ್ಯವಾಗಿರುವ ವಿವಿಧ ಪ್ರವರ್ಗದ ಘನತ್ಯಾಜ್ಯದ ಸಂಗ್ರಹಣಾಸಮಯ, ಸಂಗ್ರಹಣಾ ವಾಹನಗಳು ಮತ್ತುಸ್ಥಳಗಳವಿವರಗಳು, ಬ್ಲಾಕ್‌ವಾರು ವಾರ್ಡ್‌ನ ನಕ್ಷೆ, ಬೀದಿಗುಡಿಸುವಿಕೆಗೆ ರಸ್ತೆಗಳು/ಬೀದಿಗಳ ಮಾಹಿತಿ, ಸಿಬಂಬ್ಬದಿಯ ಸಂಖ್ಯೆ ಮತ್ತಿತರ ಮಾಹಿತಿಯನ್ನು ವಾರ್ಡ್‌ಮಟ್ಟದ ಕಿರುಯೋಜನೆಯು ಒಳಗೊಂಡಿರತಕ್ಕದ್ದು.

(2) ಘನತ್ಯಾಜ್ಯ ನಿರ್ವಹಣಾ ನಿಯಮಗಳು ಮತ್ತು ಈ ಅಧಿನಿಯಮದ ವಿವಿಧ ಉಪಬಂಧಗಳ ಅನುಪಾಲನೆಯ ಬಗ್ಗೆ ಮೇಲ್ವಿಚಾರಣೆಮಾಡಲು ವಲಯ ಸಮಿತಿಯು ವಾರ್ಡ್‌ನ ವಿವಿಧ ಭಾಗಗಳಲ್ಲಿ ಮತ್ತು ತನ್ನ ಪ್ರಾದೇಶಿಕ ಪರಿಮಿತಿಯೊಳಗಿನ ಘನ ತ್ಯಾಜ್ಯದ ಸಂಗ್ರಹಣೆ, ಸಾಗಣೆ, ಸಂಸ್ಕರಣೆ ಮತ್ತುವಿಲೇವಾರಿಯ ಇತರೆ ಸ್ಥಳಗಳಲ್ಲಿ ನಿಯತಪರಿಶೀಲನೆಗಳನ್ನುನಡೆಸತಕ್ಕದ್ದು.

(3) ಪಾಲಿಕೆಯು, ವಾರ್ಡ್‌ಮಟ್ಟದ ಕಿರುಯೋಜನೆಯ ಅನುಷ್ಠಾನವನ್ನು ಮೇಲ್ವಿಚಾರಣೆ ಮತ್ತು ಪುನರ್ಪರಿಶೀಲನೆ ಮಾಡತಕ್ಕ ಮತ್ತು ಮಾಸಿಕವಾಗಿ ವಾರ್ಡ್ ಕ್ರಿಯಾ ಯೋಜನೆಯನ್ನು ತಯಾರಿಸತಕ್ಕ ಅಧಿಕಾರಿಗಳಿಗೆ ಅದನ್ನು ಪಾಲಿಕೆಯ ವಲಯ ಆಯುಕ್ತರಿಗೆ ಮುಂದಿನ ಕ್ರಮಕ್ಕಾಗಿ ಸಲ್ಲಿಸುವ ಅಧಿಕಾರವನ್ನು ನೀಡಬಹುದು.

(4) ಅಂತಹ ಅಧಿಕಾರಿಯು,-

(ಎ) ಪಾಲಿಕೆಯು ತನಗೆವಹಿಸಿದ ಯಾವುದೇ ಪ್ರಕಾರ್ಯಗಳನ್ನು ನಿರ್ವಹಿಸುವ ಸಲುವಾಗಿ ಅಥವಾ

(ಬಿ) ಈ ಅಧಿನಿಯಮದ ಉಪಬಂಧಗಳ ಅನುಪಾಲನೆಯನ್ನು ನಿರ್ಧರಿಸುವ ಸಲುವಾಗಿ,

- ಎಲ್ಲಾ ಯುಕ್ತ ಸಮಯದಲ್ಲಿ ತಾನುಅಗತ್ಯವೆಂದು ಪರಿಗಣಿಸಬಹುದಾದ ನೆರವಿನೊಂದಿಗೆ ಯಾವುದೇ ಸ್ಥಳವನ್ನು ಪ್ರವೇಶಿಸುವ ಅಧಿಕಾರವನ್ನುಹೊಂದಿರತಕ್ಕದ್ದು.

(5) ಪಾಲಿಕೆಯು, ಮಾಧ್ಯಮ, ಸಂಕೇತಗಳು, ಜಾಹೀರಾತುಗಳು, ಹಸ್ತಪತ್ರಗಳ ಮೂಲಕ ಬಾನುಲಿ ಮತ್ತು ದೂರದರ್ಶನ ವಾಹಿನಿಗಳಲ್ಲಿ, ಸುದ್ದಿಪತ್ರಿಕೆಗಳಲ್ಲಿ, ಪ್ರಕಟಣೆಗಳನ್ನು ನೀಡುವುದರ ಮೂಲಕ ಮತ್ತು ಇತರೆ ಯಾವುದೇ ಸೂಕ್ತವಿಧಾನಗಳ ಮೂಲಕ ಕಸವಿಂಗಡಣೆಯ ರೀತಿಗಳನ್ನುಪ್ರಕಟಿಸತಕ್ಕದ್ದು. ಇದರಿಂದ, ಕಸದ ವಿಂಗಡಣೆ, ಮರುಬಳಕೆ, ಕಸಹರಡುವಿಕೆ, ಕಸದಕಿರಿಕಿರಿ, ಶಿಕ್ಷೆ ಮತ್ತು ದಂಡನೆಗಳಿಗೆ ಸಂಬಂಧಿಸಿದಂತೆ ನಾಗರಿಕರ ಮತ್ತುಪಾಲಿಕೆಯ ಕರ್ತವ್ಯಗಳ ಬಗೆಗೆ ಎಲ್ಲಾ ನಾಗರಿಕರನ್ನು ಜಾಗೃತಗೊಳಿಸಿದಂತಾಗುವುದು.

294. ತರಬೇತಿ ಮತ್ತು ಸಾರ್ವಜನಿಕ ಜಾಗೃತಿ.- ಪಾಲಿಕೆಯು, ತನ್ನ ಸಿಬಂಬ್ಬದಿ, ಅನೌಪಚಾರಿಕ ಘನತ್ಯಾಜ್ಯ ಆರಿಸುವವರು/ ಸಂಗ್ರಹಕರಿಗೆ ಘನತ್ಯಾಜ್ಯ ನಿರ್ವಹಣೆಯ ನಿಯಮಗಳು ಮತ್ತು ಈ ಅಧಿನಿಯಮದ ಅಡಿಯಲ್ಲಿ ಹೇಳಿರುವ ರೀತಿಯಲ್ಲಿ ವಿಂಗಡಿಸಿದ ವಿಧಾನದಲ್ಲಿ ಘನತ್ಯಾಜ್ಯವನ್ನು ಸಂಗ್ರಹಣೆ ಮತ್ತು ಸಾಗಣೆಮಾಡುವ ಕುರಿತು ಮತ್ತು ಅದನ್ನುಸಂಸ್ಕರಣೆ ಮಾಡುವ ಕುರಿತು ಅರಿವು ಮೂಡಿಸಲು ತರಬೇತಿಯನ್ನು ಆಯೋಜಿಸತಕ್ಕದ್ದು.

295. ಪಾಲಿಕೆಯಿಂದ ತ್ಯಾಜ್ಯವನ್ನು ಕಡಿಮೆಗೊಳಿಸುವಿಕೆ.- ಪಾಲಿಕೆಯು, ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸುವುದು ಮತ್ತು ಪ್ರೋತ್ಸಾಹಧನಗಳನ್ನು ಒದಗಿಸುವುದರ ಮೂಲಕ ಅನಗತ್ಯ ಪ್ಯಾಕೇಜು ಪರಿಕರ, ಬಳಸಿ ಬಿಸಾಡಬಹುದಾದ ಉತ್ಪನ್ನಗಳನ್ನುಒಳಗೊಂಡಿರುವ ಉತ್ಪನ್ನಗಳ ಉತ್ಪಾದನೆ, ಮಾರಾಟ ಮತ್ತು ಬಳಕೆಗೆ ತಡೆಯೊಡ್ಡುವ ಮೂಲಕ ಘನತ್ಯಾಜ್ಯದ ಉತ್ಪತ್ತಿಯನ್ನು ಕನಿಷ್ಠಪ್ರಮಾಣಕ್ಕೆ ತರಲು ಮತ್ತು ಕಡಿಮೆ ಮಾಡಲು ಪ್ರಯತ್ನಿಸತಕ್ಕದ್ದು.

296. ತ್ಯಾಜ್ಯ ನಿರ್ವಹಣೆಯ ಉಲಂಘನೆಗಾಗಿ ದಂಡನೆಗಳು.- (1) ತ್ಯಾಜ್ಯ ನಿರ್ವಹಣೆಯ ನಿಯಮಗಳ ಅಥವಾ ಬೈಲಾಗಳ ಯಾವುದೇ ಉಪಬಂಧಗಳನ್ನು ಉಲಂಘಿಸಿದ ಅಥವಾ ಅವುಗಳನ್ನು ಪಾಲಿಸಲು ವಿಫಲನಾದ ಯಾರೇ ವ್ಯಕ್ತಿಯು ಪಾಲಿಕೆಯ ಅಂತಹ ಅನ್ವಯವಾಗಬಹುದಾದ ನಿಯಮಗಳು ಅಥವಾ ಉಪವಿಧಿಗಳ ಮೇರೆಗೆ ನಿರ್ಧರಿಸಲಾದ ಎರಡು ಲಕ್ಷ ರೂಪಾಯಿಗಳಿಗೆ ಮೀರದ ಜುಲ್ಮಾನೆಯೊಂದಿಗೆ ದಂಡನೆಗೆ ಗುರಿಪಡಿಸತಕ್ಕದ್ದು.

(2) ಪಾಲಿಕೆಯು, ತ್ಯಾಜ್ಯ ನಿರ್ವಹಣೆ ಅಧಿನಿಯಮದ ಅನುಸಾರವಾಗಿ ಅಥವಾ ಈ ಉದ್ದೇಶಕ್ಕಾಗಿ ಮಾಡಲಾದ ಯಾವುದೇ ನಿಯಮಗಳು ಅಥವಾ ಉಪವಿಧಿಗಳ ಮೇರೆಗೆ ತಮ್ಮ ಪ್ರಕಾರ್ಯಗಳನ್ನು ನಿರ್ವಹಿಸಲು ವಿಫಲರಾಗುವ ನೌಕರರ ಮೇಲೆ ದಂಡನೆಗಳನ್ನು ವಿಧಿಸುವುದು, ಶಿಸ್ತುಕ್ರಮ ಜಾರಿಗೊಳಿಸುವುದೂ ಒಳಗೊಂಡಂತೆ ಸೂಕ್ತ ಕ್ರಮವನ್ನು ಸಹ ಕೈಗೊಳ್ಳತಕ್ಕದ್ದು.

297. ಸಾರ್ವಜನಿಕ ಸಭೆ/ಸಮಾರಂಭಗಳ ಸಂದರ್ಭದಲ್ಲಿ ಉತ್ಪತ್ತಿಯಾದ ತ್ಯಾಜ್ಯ.-(1) ಯಾವುದೇ ಪರವಾನಗಿ ಪಡೆದ ಸ್ಥಳದಲ್ಲಿ 100ಕ್ಕಿಂತ ಹೆಚ್ಚು ಜನ ಭಾಗವಹಿಸುವ ಕಾರ್ಯಕ್ರಮ ಅಥವಾ ಸಭೆಸಮಾರಂಭವನ್ನು ಆಯೋಜಿಸುವ ಎಲ್ಲಾ ವ್ಯಕ್ತಿಗಳು ನಿಯಮಿಸಿರುವ ರೀತಿಯಲ್ಲಿ ಘನತ್ಯಾಜ್ಯ ವಿಂಗಡಣೆಯನ್ನು ಖಚಿತಪಡಿಸಿಕೊಳ್ಳತಕ್ಕದ್ದು.

(2) ನಿಯಮಿಸಿದ ಕಾನೂನಿನ ಅನುಸಾರವಾಗಿ, ಸಮಾರಂಭವನ್ನು ಆಯೋಜಿಸಿದ ಪ್ರತಿವ್ಯಕ್ತಿಯು ಸಮಾರಂಭದ ಮುಕ್ತಾಯದ ನಂತರ, ಘನತ್ಯಾಜ್ಯವನ್ನು ವಿಂಗಡಿಸಿ, ಸಂಗ್ರಹಿಸಿ, ಸಂಸ್ಕರಿಸಿದ ಪ್ರದೇಶದ ಸ್ವಚ್ಛತೆಯನ್ನೂ ಸಹ ಖಚಿತಪಡಿಸಿಕೊಳ್ಳತಕ್ಕದ್ದು.

(3) ಸಾರ್ವಜನಿಕ ಸಭೆ/ಸಮಾರಂಭಗಳ ಸಂದರ್ಭದಲ್ಲಿ ಉತ್ಪತ್ತಿಯಾದ ತ್ಯಾಜ್ಯವನ್ನು ನಿರ್ವಹಣೆ ಮಾಡುವುದಕ್ಕಾಗಿನ ನಿರ್ವಹಣಾ ಕಾರ್ಯವಿಧಾನವನ್ನು ಅಧಿನಿಯಮದಡಿಯಲ್ಲಿನ ಉಪವಿಧಿಗಳ ಮೇರೆಗೆ ನಿಗದಿಪಡಿಸತಕ್ಕದ್ದು.

ಅಧ್ಯಾಯ-XXI

ನಗರ ಪರಂಪರೆ

298. ನಗರ ಪರಂಪರೆಯ ರಕ್ಷಣೆ, ಸಂರಕ್ಷಣೆ ಮತ್ತು ನಿರ್ವಹಣೆ.-(1) ಪಾಲಿಕೆಯು.-

(ಎ) ಪಾರಂಪರಿಕ ಕಟ್ಟಡಗಳು ಅಥವಾ ತಾಣಗಳು ಮತ್ತು ಐತಿಹಾಸಿಕ, ವಾಸ್ತುಶಿಲ್ಪದ, ಸಾಂಸ್ಕೃತಿಕ, ಪ್ರಾಕೃತಿಕ ಅಥವಾ ಜೀವಪರಿಸರೀಯ ಮಹತ್ವ ಹೊಂದಿರುವ ಪಾರಂಪರಿಕ ಪ್ರದೇಶಗಳ ಅಥವಾ ನಿಸರ್ಗ ರಮಣೀಯ ಸೌಂದರ್ಯವುಳ್ಳ ತಾಣಗಳನ್ನು ಪಾಲಿಕೆಯ ಆಡಳಿತ ವ್ಯಾಪ್ತಿಯೊಳಗಿನ ಯಾವುದೇ ಹೊಸ ಅಭಿವೃದ್ಧಿಯಿಂದಾಗಿ ಅವುಗಳ ಮೇಲೆ ವ್ಯತಿರಿಕ್ತವಾಗಿ ಪರಿಣಾಮ ಬೀರದಿರುವಂತೆ ಕಾಪಾಡುವ ಮತ್ತು ಸಂರಕ್ಷಿಸುವ;

(ಬಿ) ನಗರದ ಭೂದೃಶ್ಯ ಸೇರಿದಂತೆ ನಗರವಿನ್ಯಾಸ ಮತ್ತು ಕಟ್ಟಡ ನಿರ್ಮಾಣ ವೈಶಿಷ್ಟ್ಯತೆಯ ಮೂಲ ಅಂಶಗಳನ್ನು ವೃದ್ಧಿಸುವ;

(ಸಿ) ಪಾರಂಪರಿಕಪ್ರದೇಶಗಳಲ್ಲಿ, ಪಾರಂಪರಿಕ ಕಟ್ಟಡಗಳೆಂದು ಗೊತ್ತುಪಡಿಸಿ ಸಂರಕ್ಷಿಸಬೇಕಾದ ಹಾಲಿಯಿರುವ ಕಟ್ಟಡಗಳ ನೆಲಸಮಗೊಳಿಸುವಿಕೆ, ರಕ್ಷಣೆ, ಸಂರಕ್ಷಣೆ ಅಥವಾ ಮರುನಿರ್ಮಾಣಕ್ಕೆ ಮತ್ತು ಅವುಗಳ ಮಾರ್ಪಾಡುಗೊಳಿಸುವಿಕೆ ಅಥವಾ ವಿಸ್ತರಣೆಗೆ ಸಂಬಂಧಿಸಿದಂತೆ ಮಾರ್ಗಸೂಚಿಗಳನ್ನುನೀಡುವ

- ಹೊಣೆಗಾರಿಕೆಯನ್ನು ಹೊಂದಿರತಕ್ಕದ್ದು.

(2) ಕೇಂದ್ರಸರ್ಕಾರ ಅಥವಾ ರಾಜ್ಯಸರ್ಕಾರವು ಕಾಲಕಾಲಕ್ಕೆ ಹೊರಡಿಸುವ ಆದೇಶಗಳು, ನಿಯಮಗಳು, ವಿನಿಯಮಗಳು, ಉಪ-ವಿಧಿಗಳು ಅಥವಾ ಮಾರ್ಗಸೂಚಿಗಳಿಗೆ ಅನುಸಾರವಾಗಿ ಈ ಅಧ್ಯಾಯದ ಅನುಷ್ಠಾನಕ್ಕಾಗಿ ನಿಬಂಧನೆಗಳನ್ನು ಅಥವಾ ಉಪ-ವಿಧಿಗಳನ್ನು ಪಾಲಿಕೆಯು ಹೊರಡಿಸತಕ್ಕದ್ದು.

299. ಪಾರಂಪರಿಕ ಕಟ್ಟಡಗಳು, ಪಾರಂಪರಿಕ ಆವರಣಗಳು ಮತ್ತು ಪಟ್ಟಿ ಮಾಡಲಾದ ನೈಸರ್ಗಿಕ ವೈಶಿಷ್ಟ್ಯತೆಯುಳ್ಳ ಪ್ರದೇಶಗಳನ್ನೊಳಗೊಂಡ ಪಾರಂಪರಿಕ ತಾಣಗಳ ಪಟ್ಟಿ ತಯಾರಿಸುವುದು.- (1) ಮುಖ್ಯ ಆಯುಕ್ತರು, ಪರಂಪರೆ ಸಂರಕ್ಷಣಾ ಸಮಿತಿಯ ಸಲಹೆಯ ಮೇರೆಗೆ ಪಾರಂಪರಿಕ ಕಟ್ಟಡಗಳು, ಪಾರಂಪರಿಕ ಆವರಣಗಳು ಮತ್ತು ಪಟ್ಟಿಮಾಡಲಾದ ನೈಸರ್ಗಿಕ ವೈಶಿಷ್ಟ್ಯತೆಯುಳ್ಳ ಪ್ರದೇಶಗಳನ್ನೊಳಗೊಂಡ ಒಂದು ಪಾರಂಪರಿಕ ತಾಣಗಳ ಪಟ್ಟಿಯನ್ನು ಸಿದ್ಧಪಡಿಸಿ ಅದನ್ನು ಅನುಬಂಧಿಸತಕ್ಕದ್ದು.

(2) ಅಂತಿಮಗೊಳಿಸುವುದಕ್ಕೆ ಮುಂಚೆ ಸಾರ್ವಜನಿಕರಿಂದ ಆಕ್ಷೇಪಣೆಗಳು ಮತ್ತು ಸಲಹೆ-ಸೂಚನೆಗಳನ್ನು ಆಹ್ವಾನಿಸಬೇಕು ಮತ್ತು ಸಾರ್ವಜನಿಕರಿಂದ ಬಂದ ಆಕ್ಷೇಪಣೆಗಳು ಮತ್ತು ಸಲಹೆ-ಸೂಚನೆಗಳನ್ನು ಪರಿಗಣಿಸಬೇಕು.

(3) ಸರ್ಕಾರದ ಶಿಫಾರಸ್ಸುಗಳ ಮೇರೆಗೆ ಮುಖ್ಯ ಆಯುಕ್ತರು ಕಾಲಕಾಲಕ್ಕೆ ಪಟ್ಟಿಗೆ ಅನುಬಂಧವನ್ನು ಸೇರಿಸಬಹುದು. ಒಂದು ಕಟ್ಟಡ ಅಥವಾ ಕಟ್ಟಡಗಳ ಗುಂಪು ಅಥವಾ ನೈಸರ್ಗಿಕ ವೈಶಿಷ್ಟ್ಯತೆಗಳುಳ್ಳ ಪ್ರದೇಶಗಳನ್ನು ಪಟ್ಟಿಮಾಡಿದಾಗ ಅನ್ಯಥಾ ಸೂಚಿಸಿದ ಹೊರತು, ಆವರಣಗೋಡೆ (ಕಾಂಪೌಂಡ್) ನಿವೇಶನ ಗಡಿಯೊಳಗಿನ ಎಲ್ಲಾ ಪೂರಕ ಕಟ್ಟಡರಚನೆಗಳು ಮತ್ತು ಪ್ರಾಕ್ತನ ಕಲಾಕೃತಿಗಳ ಜೊತೆಗೆ ಅದರ ಸಂಪೂರ್ಣ ಆವರಣಗೋಡೆ (ಕಾಂಪೌಂಡ್) ನಿವೇಶನಗಡಿಯೂ ಒಳಗೊಂಡಂತೆ ಇಡೀ ಸ್ವತ್ತು ಆ ಪಟ್ಟಿಯಲ್ಲಿ ಸೇರಿರುತ್ತದೆಂದು ಅರ್ಥೈಸಿಕೊಳ್ಳತಕ್ಕದ್ದು.

300. ಪಾರಂಪರಿಕ ಕಟ್ಟಡಗಳಿಗೆ ಪ್ರೋತ್ಸಾಹಧನ.- ಪಾಲಿಕೆಯು, ಪಾರಂಪರಿಕ ಸಂರಕ್ಷಣಾ ಪಟ್ಟಿಯಲ್ಲಿ ಸೇರಿರುವ ಪಾರಂಪರಿಕ ಕಟ್ಟಡಗಳ ಮಾಲಿಕರು ಅಥವಾ ಅಧಿಭೋಗದಾರರಿಗೆ, ಪಾರಂಪರಿಕ ಕಟ್ಟಡಗಳನ್ನು ಅವುಗಳು ಪ್ರಸ್ತುತ ಯಾವ ಸ್ಥಿತಿಯಲ್ಲಿವೆಯೋ ಅದೇಸ್ಥಿತಿಯಲ್ಲಿ ಸಂರಕ್ಷಿಸಿಕೊಂಡು ಬರುವುದಕ್ಕೆ ನೆರವಾಗಲು ಮತ್ತು ಅಗತ್ಯವೆಂದು ಭಾವಿಸುವ ದುರಸ್ತಿ ಕಾರ್ಯಗಳೊಂದಿಗೆ ಅವುಗಳ 'ಪಾರಂಪರಿಕತೆ' ಸ್ಥಿತಿಯನ್ನು ಕಾಪಾಡಿಕೊಂಡು ಬರಲು ನಿಯಮಿಸಬಹುದಾದ ರೀತಿಯಲ್ಲಿ ಹಣಕಾಸು ಸಹಾಯ ಒದಗಿಸುವಿಕೆ, ಆಸ್ತಿತೆರಿಗೆಯಿಂದ ವಿನಾಯಿತಿ ನೀಡುವಿಕೆ ಮತ್ತು ಇವುಗಳನ್ನು ಒಳಗೊಂಡಿರುವ ಇತರ ಪ್ರೋತ್ಸಾಹ ಧನಗಳನ್ನು ಒದಗಿಸಬಹುದಾಗಿರುತ್ತದೆ:

ಪರಂತು, ಪಾರಂಪರಿಕ ಕಟ್ಟಡವನ್ನು ಸೂಕ್ತವಾಗಿ ನಿರ್ವಹಿಸದಿದ್ದಲ್ಲಿ ಅಥವಾ ಅಂಥ ಕಟ್ಟಡದ 'ಪಾರಂಪರಿಕ' ಮೌಲ್ಯವನ್ನು ಯಾವುದೇ ರೀತಿಯಲ್ಲಿ ಹಾಳುಗೆಡವಿದ್ದಲ್ಲಿ, ಪ್ರೋತ್ಸಾಹಧನಗಳನ್ನು ರದ್ದುಗೊಳಿಸಬಹುದು ಮತ್ತು ನಿಯಮಿಸಲಾದ ದಂಡಗಳನ್ನು ವಿಧಿಸಬಹುದು.

301. ಪರಂಪರೆ-ಸಂರಕ್ಷಣಾ ಸಮಿತಿಯ ನೇಮಕಾತಿ.- (1) ರಾಜ್ಯಸರ್ಕಾರವು, ನಿಯಮಿಸ ಸಬಹುದಾದಂಥ ಅಧಿಕಾರಗಳು ಮತ್ತು ಪ್ರಕಾರ್ಯಗಳಿಂದ ಸಶಕ್ತವಾದ ಪರಂಪರೆ-ಸಂರಕ್ಷಣಾ ಸಮಿತಿಯನ್ನು ರಚಿಸತಕ್ಕದ್ದು.

(2) ಪರಂಪರೆ –ಸಂರಕ್ಷಣಾ ಸಮಿತಿಯ ಸಲಹೆಯ ಮೇರೆಗೆ, ಮುಖ್ಯ ಆಯುಕ್ತರು, ನಗರದಲ್ಲಿನ ಪಾರಂಪರಿಕ ಕಟ್ಟಡಗಳು ಮತ್ತು ತಾಣಗಳ ರಕ್ಷಣೆ, ಸಂರಕ್ಷಣೆ ಮತ್ತು ನಿರ್ವಹಣೆಗಾಗಿ ಯುಕ್ತ ವಿನಿಯಮಗಳನ್ನು ರಚಿಸತಕ್ಕದ್ದು.

(3) ಪರಂಪರೆ ಸಂರಕ್ಷಣಾ ಸಮಿತಿಯು ಈ ಮುಂದಿನವರನ್ನುಒಳಗೊಂಡಿರತಕ್ಕದ್ದು:

(i)	ಮುಖ್ಯ ಆಯುಕ್ತರು	ಅಧ್ಯಕ್ಷರು
(ii)	ವಾಸ್ತುಶಿಲ್ಪಿ, ಲೋಕೋಪಯೋಗಿ ಇಲಾಖೆ	ಸದಸ್ಯರು
(iii)	ವಿಷಯ ಕ್ಷೇತ್ರದಲ್ಲಿ ಹತ್ತು ವರ್ಷಗಳ ಅನುಭವವುಳ್ಳ ಮತ್ತು ಭಾರತದ ಎಂಜಿನಿಯರುಗಳ ಸಂಸ್ಥೆಯ ಸದಸ್ಯತ್ವ ಹೊಂದಿರುವ ರಾಚನಿಕ ಎಂಜಿನಿಯರ್	ಸದಸ್ಯರು

(iv)	ಸರ್ಕಾರವು ನಾಮ ನಿರ್ದೇಶನ ಮಾಡಿದ ಹತ್ತು ವರ್ಷಗಳ ಅನುಭವವುಳ್ಳ ವಾಸ್ತುಶಿಲ್ಪಿ	ಸದಸ್ಯರು
(v)	ಸರ್ಕಾರವು ನಾಮ ನಿರ್ದೇಶನ ಮಾಡಿದ ನಗರ ವಿನ್ಯಾಸಕ	ಸದಸ್ಯರು
(vi)	ಸರ್ಕಾರವು ನಾಮ ನಿರ್ದೇಶನ ಮಾಡಿದ ಐದು ವರ್ಷಗಳ ಅನುಭವವುಳ್ಳ ಸಂರಕ್ಷಣಾ ವಾಸ್ತುಶಿಲ್ಪಿ	ಸದಸ್ಯರು
(vii)	ಸರ್ಕಾರವು ನಾಮ ನಿರ್ದೇಶನ ಮಾಡಿದ ವಿಷಯ ಕ್ಷೇತ್ರದಲ್ಲಿ ಆಳವಾದ ಜ್ಞಾನವುಳ್ಳ ಮತ್ತು ಹತ್ತು ವರ್ಷಗಳ ಅನುಭವವುಳ್ಳ ಪರಿಸರವಾದಿ	ಸದಸ್ಯರು
(viii)	ಸರ್ಕಾರವು ನಾಮ ನಿರ್ದೇಶನ ಮಾಡಿದ ವಿಷಯ ಕ್ಷೇತ್ರದಲ್ಲಿ ಆಳವಾದ ಜ್ಞಾನವುಳ್ಳ ಮತ್ತು ಹತ್ತು ವರ್ಷಗಳ ಅನುಭವವುಳ್ಳ ಇತಿಹಾಸಕಾರ	ಸದಸ್ಯರು
(ix)	ಸರ್ಕಾರವು ನಾಮ ನಿರ್ದೇಶನ ಮಾಡಿದ ವಿಷಯ ಕ್ಷೇತ್ರದಲ್ಲಿ ಆಳವಾದ ಜ್ಞಾನ ಮತ್ತು ಹತ್ತು ವರ್ಷಗಳ ಅನುಭವವುಳ್ಳ ಪ್ರಾಕೃತಿಕ ಇತಿಹಾಸಕಾರ	ಸದಸ್ಯರು
(x)	ಪ್ರತಿನಿಧಿ, ರಾಜ್ಯ ಪುರಾತತ್ವ ಇಲಾಖೆ	ಸದಸ್ಯರು
(xi)	ಮುಖ್ಯ ನಗರಯೋಜಕ, ನಗರ ಮತ್ತು ಗ್ರಾಮಾಂತರ ಯೋಜನೆ ಇಲಾಖೆ	ಸದಸ್ಯ ಕಾರ್ಯದರ್ಶಿ

(4) ಸಮಿತಿಯು ಈ ಸಂಬಂಧಿತ ಅನುಭವವುಳ್ಳ ವ್ಯಕ್ತಿಗಳನ್ನು ಮೂವರು ಹೆಚ್ಚುವರಿ ಸದಸ್ಯರವರೆಗೆ ಸಹ-ಸದಸ್ಯರನ್ನಾಗಿ ಸೇರಿಸಿಕೊಳ್ಳುವ ಅಧಿಕಾರ ಹೊಂದಿರತಕ್ಕದ್ದು.

(5) ಸಮಿತಿಯ ಕಾರ್ಯನಿರ್ವಹಣೆಯು, ನಿಯಮಿಸಬಹುದಾದಂತೆ ಇರತಕ್ಕದ್ದು.

(6) ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರ ಕರ್ತವ್ಯದ ಅವಧಿಯು, ಯಾವುದೇ ಅಧಿಕೃತ ಮನವಿ ಇಲ್ಲದಿದ್ದ ಪಕ್ಷದಲ್ಲಿ, ಮೂರು ವರ್ಷಗಳಾಗಿರತಕ್ಕದ್ದು.

302. ಪಾರಂಪರಿಕ ಕಟ್ಟಡಗಳು ಮತ್ತು ತಾಣಗಳಿಗೆ ಶ್ರೇಣಿ ನೀಡುವುದು.- (1) ಪಟ್ಟಿ ಮಾಡಲಾದ ಪಾರಂಪರಿಕ ಕಟ್ಟಡಗಳು ಮತ್ತು ಪಾರಂಪರಿಕ ಸ್ಥಳಾವರಣಗಳನ್ನು ಅನುಸೂಚಿ II ರಲ್ಲಿ ನಿರೂಪಿಸಲಾಗಿರುವಂತೆ ಪ್ರವರ್ಗಗಳಾಗಿ ವರ್ಗೀಕರಿಸತಕ್ಕದ್ದು.

(2) ಪಾರಂಪರಿಕ ಕಟ್ಟಡ ಅಥವಾ ತಾಣ ಅಥವಾ ಸ್ಥಳಾವರಣದ ಮೂಲ ಸ್ವರೂಪವನ್ನು ಬದಲಾಯಿಸಬಹುದಾದ ಮುಖಭಾಗ, ಒಳಾಂಗಣ ಅಥವಾ ಹೊರಾಂಗಣ ಭಾಗದಲ್ಲಿನ ಯಾವುದೇ ಮಾರ್ಪಾಡು, ದುರಸ್ತಿ ಅಥವಾ ಬದಲಾವಣೆಯನ್ನು ಅನುಸೂಚಿ II ರಲ್ಲಿ ಅನುಮತಿಸಲಾಗಿರುವ ಮಟ್ಟಿಗೆ ಮತ್ತು ಇದನ್ನು ಕಾರ್ಯಗತಗೊಳಿಸುವುದಕ್ಕಾಗಿ ಹೊರಡಿಸುವ ಯಾವುದೇ ಆದೇಶಗಳು, ನಿಯಮಗಳು, ವಿನಿಯಮಗಳು, ಉಪ-ವಿಧಿಗಳು ಅಥವಾ ಮಾರ್ಗಸೂಚಿಗಳಿಗೆ ಅನುಸಾರವಾಗಿಮಾಡತಕ್ಕದ್ದು.

303. ಪರಂಪರೆ-ಸಂರಕ್ಷಣಾ ಸಮಿತಿಯ ಪ್ರಕಾರ್ಯಗಳು.- ಪರಂಪರೆ-ಸಂರಕ್ಷಣಾಸಮಿತಿಯು ಈ ಮುಂದಿನ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.

ಎ) ಅಧಿಸೂಚಿಸಬೇಕಾಗಿರುವ ಪಾರಂಪರಿಕ ಕಟ್ಟಡಗಳು ಮತ್ತು ಸ್ಥಳಾವರಣಗಳನ್ನು ಗುರುತಿಸುವುದು ಮತ್ತು ಪಟ್ಟಿ ಮಾಡುವುದನ್ನು ಕೈಗೊಳ್ಳುವುದು ಹಾಗೂ ಅವನ್ನು ಪಟ್ಟಿಗೆ ಸೇರ್ಪಡೆ ಮಾಡುವಂತೆ ಪಾಲಿಕೆಗೆ ಶಿಫಾರಸು ಮಾಡುವುದು.

ಬಿ) ಪಾರಂಪರಿಕ ಕಟ್ಟಡಗಳನ್ನು ಅಭಿವೃದ್ಧಿ ಪಡಿಸುವುದಕ್ಕೆ ಅನುಮತಿಯನ್ನು ನೀಡಬೇಕೆ ಎಂಬುದನ್ನು ಪಾಲಿಕೆಗೆ ಶಿಫಾರಸು ಮಾಡುವುದು;

ಸಿ) ಪಟ್ಟಿಯಲ್ಲಿನ ಯಾವುದೇ ಕಟ್ಟಡದ ಸಂರಕ್ಷಣೆ ಅಥವಾ ನಿರ್ವಹಣೆಗಾಗಿ ಮಾಲಿಕರಿಗೆ ಪಾವತಿಸಬೇಕಾದ ದುರಸ್ತಿ ವೆಚ್ಚವನ್ನು ಮೌಲ್ಯ ಮಾಪನ ಮಾಡುವುದು.

ಡಿ) ಅಧಿಸೂಚಿತ ಕಟ್ಟಡಗಳಿಗಾಗಿನ ವಿಶಿಷ್ಟ ವಿನ್ಯಾಸಗಳು ಮತ್ತು ಮಾರ್ಗಸೂಚಿಗಳನ್ನು ಅನುಮೋದಿಸುವುದು ಮತ್ತು ಕಟ್ಟಡಗಳ ಎತ್ತರ ಮತ್ತು ಅತ್ಯಾವಶ್ಯಕ ಮುಂಭಾಗ ವೈಲಕ್ಷಣಗಳನ್ನು ನಿಯಂತ್ರಿಸುವುದು ಮತ್ತು ಸೂಕ್ತ ವಿನ್ಯಾಸಗಳನ್ನು ಸಲಹೆ ಮಾಡುವುದು ಹಾಗೂ ಸಾಧ್ಯವಾದಷ್ಟು ಮಟ್ಟಿಗೆ ಕಟ್ಟಡದ ಹಿಂದಿನ ರೂಪವು ಅಚ್ಚಳಿಯದ ಹಾಗೇ ಇರುವಂತೆ ಹಳೆಯ ಪರಿಕರಗಳ ಬದಲಿಗೆ ಹೊಸ ಪರಿಕರಗಳನ್ನು ಅಳವಡಿಸಲು ಅಂಗೀಕರಿಸುವುದು.

ಇ) ಪಾರಂಪರಿಕ ಕಟ್ಟಡಗಳು ಮತ್ತು ಪಾರಂಪರಿಕ ಸ್ಥಳಾವರಣಗಳಿಗೆ ಸಂಬಂಧಿಸಿದಂತೆ ವಿಶೇಷ ವಿನಿಯಮಗಳನ್ನು ರಚಿಸುವುದು ಮತ್ತು ಅವನ್ನು ಪಾಲಿಕೆಗೆ ಸಲ್ಲಿಸುವುದು;

ಎಫ್) ನಗರದಲ್ಲಿನ ನಗರ-ಪಾರಂಪರಿಕ ಕಟ್ಟಡಗಳು ಮತ್ತು ತಾಣಗಳ ಭೌತಿಕ ಸಂರಕ್ಷಣೆ ಮತ್ತು ಜೀರ್ಣೋದ್ಧಾರಕ್ಕಾಗಿ ಅಗತ್ಯವಾಗಬಹುದಾದಂಥ ಕ್ರಮಗಳನ್ನು ಕೈಗೊಳ್ಳುವುದು;

ಜಿ) ಪರಂಪರೆ ಬಗೆಗೆ ಅರಿವು ಮೂಡಿಸುವುದಕ್ಕಾಗಿ ಶೈಕ್ಷಣಿಕ ಕಾರ್ಯಕ್ರಮಗಳು, ಪಾರಂಪರಿಕ ಸಂಪನ್ಮೂಲಗಳನ್ನು ಗುರುತಿಸುವಿಕೆ ಮತ್ತು ಪಟ್ಟಿಮಾಡುವಿಕೆ, ಪರಂಪರೆ-ಜಾಥಾ, ನಗರದಲ್ಲಿ ಪರಂಪರೆಗೆಂದೇಮೀಸಲಾದ ಉಪನ್ಯಾಸಗಳು, ವಿಚಾರ ಸಂಕಿರಣಗಳು ಮತ್ತು ಸಮಾವೇಶಗಳಂತ ಕಾರ್ಯಕ್ರಮಗಳು ಮತ್ತು ಯೋಜನೆಗಳನ್ನು ಹಮ್ಮಿಕೊಳ್ಳುವುದು.

304. ಅಬಾಧಿತ ಮಾಲಿಕತ್ವ.- (1) ಪಾರಂಪರಿಕ ಕಟ್ಟಡ ಎಂಬುದಾಗಿ ಪಟ್ಟಿ ಮಾಡಲಾಗಿರುವುದು, ಅಂಥ ಕಟ್ಟಡದ ದರ್ಜೆಯ ಆಧಾರದ ಮೇಲೆ ನಿಯಮಿಸಲಾದ ಷರತ್ತುಗಳಿಗೆ ಅನುಗುಣವಾಗಿ ಆ ಕಟ್ಟಡವನ್ನು ಬಳಸಿಕೊಳ್ಳುವುದನ್ನು ಅಗತ್ಯ ಪಡಿಸುತ್ತದೆ ಮತ್ತು ಅಂಥ ಕಟ್ಟಡದ ಮಾರಾಟ ಅಥವಾ ಖರೀದಿಯ ಮೇಲೆ ಯಾವುದೇ ನಿರ್ಬಂಧವನ್ನು ಹೇರುವುದಿಲ್ಲ ಮತ್ತು ಅದಕ್ಕಾಗಿ ಪಾಲಿಕೆಯ ಅಥವಾ ಪರಂಪರೆ-ಸಂರಕ್ಷಣಾ ಸಮಿತಿಯಿಂದ ಅನುಮತಿ ಪಡೆಯುವ ಅಗತ್ಯವಿರುವುದಿಲ್ಲ.

(2) ಪಟ್ಟಿಯಲ್ಲಿರುವ ಯಾವುದೇ ಪಾರಂಪರಿಕ ಕಟ್ಟಡ ಮಾರಾಟವನ್ನು ನಿರಾಕರಿಸುವ ಪ್ರಥಮ ಹಕ್ಕನ್ನು ಪಾಲಿಕೆ ಹೊಂದಿರತಕ್ಕದ್ದು.

ಅಧ್ಯಾಯ – XXII

ಪರವಾನಗಿಗಳು ಮತ್ತು ಶುಲ್ಕಗಳು

305. ಪರವಾನಗಿ ಮಂಜೂರಾತಿ ಅಂಶಗಳು.- (1) ವಲಯ ಆಯುಕ್ತರು ಈ ಮುಂದಿನ ವಿಷಯಗಳಿಗೆ ಸಂಬಂಧಪಟಂತೆ ಪರವಾನಗಿ ಮಂಜೂರು ಮಾಡುವ ಅಧಿಕಾರ ಹೊಂದಿರತಕ್ಕದ್ದು:-

(ಎ) ಸಗಟು ಅಥವಾ ಚಿಲ್ಲರೆ ಮಾರು ಕಟ್ಟೆಗಳ ಸ್ಥಾಪನೆ ಮತ್ತು ಕಾರ್ಯಾಚರಣೆ;

(ಬಿ) ವ್ಯಾಪಾರ ಸಂಸ್ಥೆಗಳ ಸ್ಥಾಪನೆ ಮತ್ತು ಕಾರ್ಯಾಚರಣೆ;

(ಸಿ) ಕಸಾಯಿ ಖಾನೆಗಳ ಸ್ಥಾಪನೆ ಮತ್ತು ಕಾರ್ಯಾಚರಣೆ;

(ಡಿ) ರೆಸ್ಟೋರೆಂಟ್‌ಗಳ ಸ್ಥಾಪನೆ ಮತ್ತು ಕಾರ್ಯಾಚರಣೆ;

(ಇ) ಕಾರ್ಖಾನೆಗಳ ಸ್ಥಾಪನೆ ಮತ್ತು ಕಾರ್ಯಾಚರಣೆ;

(ಎಫ್) ವಾಣಿಜ್ಯ ಸಂಸ್ಥೆಗಳ ಸ್ಥಾಪನೆ ಮತ್ತು ಕಾರ್ಯಾಚರಣೆ;

(ಜಿ) ನಿಗಮಿತ (ಕಾರ್ಪೊರೇಟ್) ಕಚೇರಿಗಳ ಸ್ಥಾಪನೆ ಮತ್ತು ಕಾರ್ಯಾಚರಣೆ;

(ಎಚ್) ಸೇವಾ ವಸತಿ ಗೃಹಗಳು, ಪಾವತಿಸುವ ಅತಿಥಿ ವಾಸ್ತವ್ಯ ಗೃಹಗಳ ಸ್ಥಾಪನೆ;

(ಐ) ಪಾಲುದಾರಿಕೆ-ಕಚೇರಿ ಮತ್ತು ವಾಸ್ತವ್ಯ ಸ್ಥಳಗಳ ಸ್ಥಾಪನೆ ಮತ್ತುಕಾರ್ಯಾಚರಣೆ;

(ಜೆ) ಆಸ್ಪತ್ರೆಗಳು ಮತ್ತು ಚಿಕಿತ್ಸಾಲಯಗಳ ಸ್ಥಾಪನೆ ಮತ್ತು ಕಾರ್ಯಾಚರಣೆ;

(ಕೆ) ವಿಶ್ರಾಂತಿ ಧಾಮಗಳ ಸ್ಥಾಪನೆ ಮತ್ತು ಕಾರ್ಯಾಚರಣೆ;

(ಎಲ್) ಚಿತ್ರಮಂದಿರಗಳು, ಜಾತ್ರೆಗಳು, ಸರ್ಕಸ್ಸುಗಳು ಮತ್ತು ಸಾರ್ವಜನಿಕ ಮನರಂಜನಾ ಸ್ಥಳಗಳ ಸ್ಥಾಪನೆ ಮತ್ತು ಕಾರ್ಯಾಚರಣೆ;

(ಎಂ) ಹಾಲು ಮಾರಾಟದ ಸ್ಥಾಪನೆ ಮತ್ತುಕಾರ್ಯಾಚರಣೆ;

(ಎನ್) ಪ್ರಾಣಿಗಳು ಮತ್ತು ಪಕ್ಷಿಗಳ ಸಾಕಣೆ;

(ಓ) ಕುದುರೆ ಲಾಯಗಳು, ದನದ ಕೊಟ್ಟಿಗೆಗಳು ಮತ್ತು ಗೋಶಾಲೆಗಳ ಸ್ಥಾಪನೆ;

(ಪಿ) ಮೃತರನ್ನು ಹೂಳುವುದಕ್ಕಾಗಿ ಸ್ಥಳಗಳನ್ನು ಒದಗಿಸುವುದು;

(ಕ್ಯೂ) ಆಹಾರದ ಗಾಡಿಗಳು ಅಥವಾ ಯಾವುದೇ ಗಾಡಿ ನಿಲುಗಡೆ ಸ್ಥಳಗಳನ್ನು ಸ್ಥಾಪಿಸುವುದು;

(ಆರ್) ಸಾರ್ವಜನಿಕ ಸ್ಥಳಗಳಲ್ಲಿ ಜಾಹಿರಾತು ಫಲಕಗಳನ್ನು ನಿಲ್ಲಿಸುವುದು.

(2) (1)ನೇ ಉಪ ಪ್ರಕರಣದ ಅಡಿಯಲ್ಲಿ ನಿಯಮಿಸಲಾದ ವಿಷಯಗಳಿಗೆ ಸಂಬಂಧಿಸಿದಂತೆ ಪರವಾನಗಿ ಪಡೆಯುವ ವಿಧಾನವು ನಿಯಮಗಳು ಅಥವಾ ಉಪ ವಿಧಿಗಳ ಅಡಿಯಲ್ಲಿ ಉಪಬಂಧಿಸತಕ್ಕದ್ದು.

306. ಪರವಾನಗಿ ಪಡೆಯುವುದರಿಂದ ಸರ್ಕಾರಕ್ಕೆ ವಿನಾಯಿತಿ.- ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರವು, ಅಂಥ ಸರ್ಕಾರದ ಸ್ವಾಧೀನದಲ್ಲಿರುವ ಅಥವಾ ಹತೋಟಿಯಲ್ಲಿರುವ ಯಾವುದೇ ಸ್ಥಳದ ಸಂಬಂಧವಾಗಿ ಅಥವಾ ಅಂಥ ಸರ್ಕಾರಕ್ಕೆ ಸೇರಿದ ಯಾವುದೇ ಸ್ವತ್ತಿನ ಸಂಬಂಧವಾಗಿ ಪಾಲಿಕೆಯ ಪರವಾನಗಿ ಪಡೆಯುವುದು ಅಗತ್ಯವಾಗಿರತಕ್ಕದ್ದಲ್ಲ.

307. ಪರವಾನಗಿಗಳು ಮತ್ತು ಲಿಖಿತ ಅನುಮತಿಗಳನ್ನು ಯಾವ ಷರತ್ತುಗಳ ಮೇಲೆ ನೀಡಲಾಗಿದೆಯೋ ಆ ಷರತ್ತುಗಳನ್ನು ನಿರ್ದಿಷ್ಟಪಡಿಸುವುದು.- (1) ಯಾವುದೇ ಉದ್ದೇಶಕ್ಕಾಗಿ ಪರವಾನಗಿ

ಅಥವಾ ಲಿಖಿತ ಅನುಮತಿಯನ್ನು ನೀಡಬಹುದೆಂಬುದಾಗಿ ಈ ಅಧಿನಿಯಮದಲ್ಲಿ ಉಪಬಂಧಿಸಿದಾಗಲೆಲ್ಲಾ, ಅಂಥ ಪರವಾನಗಿ ಅಥವಾ ಲಿಖಿತ ಅನುಮತಿಯಲ್ಲಿ ಅದನ್ನು ಯಾವ ಅವಧಿಗಾಗಿ ಮತ್ತು ಯಾವ ನಿರ್ಬಂಧಗಳು ಮತ್ತು ಷರತ್ತುಗಳಿಗೆ ಒಳಪಟ್ಟು ಮಂಜೂರು ಮಾಡಲಾಗಿದೆಯೆಂಬುದನ್ನು ನಿರ್ದಿಷ್ಟಪಡಿಸತಕ್ಕದ್ದು ಮತ್ತು ಅಂಥ ಪರವಾನಗಿ ಮತ್ತು ಲಿಖಿತ ಅನುಮತಿಯನ್ನು ವಲಯ ಆಯುಕ್ತರ ಸಹಿಯ ಮೇರೆಗೆ ಅಥವಾ ಆ ನಿರ್ದಿಷ್ಟ ವಲಯಕ್ಕಾಗಿ ಅವುಗಳನ್ನು ಮಂಜೂರು ಮಾಡುವ ಅಧಿಕಾರ ಹೊಂದಿರುವ ಪಾಲಿಕೆ ಅಧಿಕಾರಿಯ ಸಹಿಯ ಮೇರೆಗೆ ನೀಡತಕ್ಕದ್ದು.

(2) ಪ್ರತಿಯೊಂದು ಪರವಾನಗಿ ಮತ್ತು ಅನುಮತಿಗಾಗಿ ಸಲ್ಲಿಸಿದ ಪ್ರತಿಯೊಂದು ಅರ್ಜಿಯನ್ನು ವಲಯ ಆಯುಕ್ತರಿಗೆ ಸಲ್ಲಿಸತಕ್ಕದ್ದು. ಹಾಗೆ ಮಂಜೂರು ಮಾಡಲಾದ ಅಂಥ ಪರವಾನಗಿ ಅಥವಾ ಲಿಖಿತ ಅನುಮತಿಯು, ನಿಯಮಿಸಬಹುದಾಂಥ ರೀತಿಯಲ್ಲಿ ಪಾಲಿಕೆಯು ನಿಗದಿಪಡಿಸಬಹುದಾಂತಥ ಶುಲ್ಕಗಳನ್ನು ಸಂದಾಯ ಮಾಡುವುದಕ್ಕೆ ಒಳಪಟ್ಟಿರತಕ್ಕದ್ದು ಅಥವಾ ವಿವಿಧ ಪರವಾನಗಿಗಳು ಅನುಮತಿಗೆ ವಿವಿಧ ದರಗಳನ್ನು ಪಾಲಿಕೆಯು ನಿಗದಿಪಡಿಸಬಹುದು

(3) ಈ ಅಧಿನಿಯಮದ ಮೇರೆಗೆ ಪರವಾನಗಿ ಅಥವಾ ಲಿಖಿತ ಅನುಮತಿಯನ್ನು ನೀಡಿರುವ ವ್ಯಕ್ತಿಯು, ಆ ಪರವಾನಗಿ ಅಥವಾ ಲಿಖಿತ ಅನುಮತಿಯ ಯಾವುವೇ ನಿರ್ಬಂಧಗಳು ಅಥವಾ ಷರತ್ತುಗಳನ್ನು ಪಾಲಿಸಲು ತಪ್ಪಿದ್ದಲ್ಲಿ ಅಥವಾ ಉಲಂಘಿಸಿದ್ದಲ್ಲಿ ಅಥವಾ ಸದರಿ ವ್ಯಕ್ತಿಯು ಸಂಬಂಧಿಸಿದ ಯಾವುದೇ ವಿಷಯಗಳಲ್ಲಿ ಈ ಅಧಿನಿಯಮದ ಯಾವುದೇ ಉಪಬಂಧಗಳನ್ನು ಅಥವಾ ಅವುಗಳ ಅಡಿ ಮಾಡಿದ ಯಾವುದೇ ಉಪ-ವಿಧಿಗಳನ್ನು, ಅಂಥಯಾವುದೇ ಪರವಾನಗಿ ಅಥವಾ ಲಿಖಿತ ಅನುಮತಿಯನ್ನು ಉಲಂಘಿಸಿದ್ದಕ್ಕಾಗಿ ದೋಷಿಯೆಂದು ನಿರ್ಣೀತನಾಗಿದ್ದಲ್ಲಿ, ಅದನ್ನು ವಲಯ ಆಯುಕ್ತರು ಅಮಾನತುಗೊಳಿಸಬಹುದು ಅಥವಾ ರದ್ದುಪಡಿಸಬಹುದು.

(4) ನೀಡಲಾದ ಪರವಾನಗಿ ನಿಬಂಧನೆಗಳನ್ನು ಉಲಂಘಿಸಿ ಯಾವುದೇ ಆವರಣಗಳನ್ನು ಉಪಯೋಗಿಸಿದರೆ ಅಥವಾ ವಲಯ ಆಯುಕ್ತರು ಪರವಾನಗಿಯನ್ನು ಅಮಾನತುಗೊಳಿಸಿದ ಅಥವಾ ರದ್ದುಪಡಿಸಿದ ನಂತರವೂ ಉಪಯೋಗಿಸುತ್ತಿದ್ದರೆ, ವಲಯ ಆಯುಕ್ತರು, ಆವರಣವನ್ನು ಹಾಗೆ ಉಪಯೋಗಿಸುತ್ತಿರುವ ವ್ಯಕ್ತಿಯು ಹಾಗೆ ಅದನ್ನು ಮುಂದುವರಿಸತಕ್ಕದ್ದಲ್ಲವೆಂದು ಯಾವುದೇ ಸಮಯದಲ್ಲಿ ಲಿಖಿತ ನೋಟೀಸನ್ನು ನೀಡಬಹುದು.

308. ಲೈಸೆನ್ಸುಗಳನ್ನು ಉಲಂಘಿಸಿ ಬಳಸಿದ ಸ್ಥಳಗಳನ್ನು ನಿಲ್ಲಿಸಲು ವಲಯ ಆಯುಕ್ತರ ಅಧಿಕಾರ.- ಸಾರ್ವಜನಿಕರು ವಿರಾಮಕ್ಕಾಗಿ ಅಥವಾ ಯಾವುದೇ ಆಹಾರ ಅಥವಾ ಪಾನೀಯದ ಬಳಕೆಗಾಗಿ ಅಥವಾ ಯಾವುದೇ ಥಿಯೇಟರ್, ಸರ್ಕಸ್, ಸಿನೆಮಾ ಟಾಕೀಸ್ ಅಥವಾ ನೃತ್ಯ ಮಾಡುವ ಸ್ಥಳ ಅಥವಾ ಸಾರ್ವಜನಿಕರು ಸೇರುವ ಜಾಗ, ಮನೋರಂಜನೆ ಅಥವಾ ವಿಹಾರದಂತಹ ಇತರ ಸ್ಥಳಗಳಿಗೆ ಆಹಾರವನ್ನು ಮಾರಾಟ ಮಾಡಲು ತಯಾರಿಸಿದ್ದರೆ ಅಥವಾ ಯಾವುದೇ ಭೋಜನ ಗೃಹ, ವಸತಿ ಗೃಹ, ಹೋಟೇಲ್, ಉಪಹಾರ ಗೃಹ, ಟೀ ಅಂಗಡಿ, ಕಾಫಿ ಅಂಗಡಿ, ಕೆಫೆ, ರೆಸ್ಟೋರೆಂಟ್, ವಿಶ್ರಾಂತಿ ಕೊಠಡಿ ಅಥವಾ ಇತರ ಸ್ಥಳಕ್ಕೆ, ಸಂಬಂಧಿಸಿದಂತೆ ನೀಡಿದ ಪರವಾನಗಿಯ ನಿಬಂಧನೆಗಳೊಂದಿಗೆ ಪರವಾನಗಿ ಇಲ್ಲದೆ ತೆರೆದಿದೆ ಎಂದು ಅಥವಾ ಅನುಸರಣೆ ಮಾಡುತ್ತಿಲ್ಲವೆಂದು ವಲಯ ಆಯುಕ್ತರು ಅಭಿಪ್ರಾಯ ಪಟ್ಟರೆ, ಆತನು, ಅವಶ್ಯಕವೆಂದು ಪರಿಗಣಿಸಬಹುದಾದಂಥ ಸಾಧನಗಳ ಮೂಲಕ ನಿರ್ದಿಷ್ಟ ಪಡಿಸಿದ ಅವಧಿಗೆ ಅಂತಹ ಯಾವುದೇ ಉದ್ದೇಶಕ್ಕಾಗಿ ಅಂತಹ ಯಾವುದೇ ಸ್ಥಳಗಳನ್ನು ಉಪಯೋಗಿಸಲು ನಿಲ್ಲಿಸಬಹುದು.

309. ಮಾರಾಟ ಮಾಡುತ್ತಿರುವ ಸ್ಥಳಗಳ ತಪಾಸಣೆ.- ವಲಯ ಆಯುಕ್ತರು ಪ್ರಾಣಿಗಳು, ಮೃತ ಪ್ರಾಣಿಗಳ ಭಾಗಗಳು, ಮಾಂಸ, ಕೋಳಿ ಸಾಕಣಿಕೆ, ಬಾಡು, ಮೀನು, ಹಣ್ಣುಗಳು, ತರಕಾರಿಗಳು, ಜೋಳ, ಬ್ರೆಡ್, ಹಿಟ್ಟು, ಹಾಲು, ತುಪ್ಪ, ಬೆಣ್ಣೆ, ಎಣ್ಣೆ ಮತ್ತು ಇತರ ವಸ್ತುಗಳನ್ನು ತೆರೆದಿಟ್ಟ ಅಥವಾ ಮಾರಾಟ ಮಾಡುವ ಉದ್ದೇಶಕ್ಕಾಗಿ ಅಥವಾ ಮಾರಾಟಕ್ಕೆ ಸಿದ್ಧಪಡಿಸುವುದಕ್ಕಾಗಿ ಇಟ್ಟಿರುವ ಯಾವುದೇ ಸ್ಥಳದಲ್ಲಿ ಅಥವಾ ಖರೀದಿ ಸ್ಥಳಕ್ಕೆ ನಿರಂತರವಾಗಿ ಅಥವಾ ಜಾಗೃತೆಯಿಂದ ತಪಾಸಣೆ ಮಾಡಲು ಉಪಬಂಧಗಳನ್ನು ರಚಿಸತಕ್ಕದ್ದು.

310. ತಪಾಸಣೆಯ ಉದ್ದೇಶಗಳಿಗಾಗಿ ವಲಯ ಆಯುಕ್ತರ ಅಧಿಕಾರ.- (1) ವಲಯ ಆಯುಕ್ತರು ಅಥವಾ ಆ ಉದ್ದೇಶಕ್ಕಾಗಿ, ಲಿಖಿತದಲ್ಲಿ ಆತನು ಅಧಿಕೃತಗೊಳಿಸಿದ ಯಾರೇ ವ್ಯಕ್ತಿಯು, ಯಾವುದೇ ಕಸಾಯಿಖಾನೆ ಅಥವಾ ಯಾವುದೇ ಪ್ರಾಣಿಗಳು ಅಥವಾ ಕೋಳಿ ಅಂಗಡಿಯ ಯಾವುದೇ ಸ್ಥಳಗಳು, ಆಹಾರಕ್ಕಾಗಿ ಮೀನನ್ನು ತೆರೆದಿರಿಸಿದ ಅಥವಾ ಆಹಾರದ ವಸ್ತುಗಳನ್ನು ಹಗಲು ಅಥವಾ ರಾತ್ರಿಯ ಸಮಯದಲ್ಲಿ ಮಾರಾಟಕ್ಕಾಗಿ ಸಿದ್ಧಪಡಿಸುತ್ತಿರುವ ಅಥವಾ ತೆರೆದಿಟ್ಟಿರುವ ಆಹಾರದ ವಸ್ತುಗಳನ್ನು, ಮಾರಾಟಕ್ಕೆ ಅಥವಾ ಸಿದ್ಧತೆಗಾಗಿ ಸಾಗಣೆ ಮಾಡುತ್ತಿರುವ ವಸ್ತುಗಳ ಸ್ಥಳವನ್ನು, ನೋಟೀಸು ನೀಡದೆ ಪ್ರವೇಶಿಸಬಹುದು ಮತ್ತು ಅದನ್ನು ತಪಾಸಣೆ ಮಾಡಬಹುದು ಮತ್ತು ತಯಾರಿಸುವುದಕ್ಕಾಗಿ, ಸಿದ್ಧಪಡಿಸುವುದಕ್ಕಾಗಿ ಅಥವಾ ಯಾವುದೇ ವಸ್ತುಗಳನ್ನು ಒಳಗೊಂಡಿರುವ, ಯಾವುದೇ ಮನೆ ಬಳಕೆಯ ಪಾತ್ರೆಗಳನ್ನು ಅಥವಾ ಪಾತ್ರೆಗಳನ್ನು ತಪಾಸಣೆ ಮಾಡಬಹುದು.

(2) ವಲಯ ಆಯುಕ್ತರು ಅಥವಾ ಅವರಿಂದ ಹಾಗೆ ಅಧಿಕೃತನಾದ ಯಾರೇ ವ್ಯಕ್ತಿಯು, ಯಾವುದೇ ಸ್ಥಳದಲ್ಲಿ ಮನುಷ್ಯನ ಆಹಾರಕ್ಕಾಗಿ ಉದ್ದೇಶಿಸಲಾದ ಯಾವುದೇ ಪ್ರಾಣಿಯನ್ನು ವಧೆ ಮಾಡಲಾಗುತ್ತಿದೆ ಅಥವಾ ಯಾವುದೇ ಪ್ರಾಣಿಯ ಶವದ ಚರ್ಮವನ್ನು ಸುಲಿಯಲಾಗುತ್ತಿದೆ ಅಥವಾ ಅದನ್ನು ಕತ್ತರಿಸಲಾಗುತ್ತಿದೆ ಅಥವಾ ಮಾರಾಟಕ್ಕಾಗಿ ಯಾವುದೇ ಆಹಾರವನ್ನು ತಯಾರಿಸಲಾಗುತ್ತಿದೆ, ದಾಸ್ತಾನು ಮಾಡಲಾಗುತ್ತಿದೆ,

ಸಿದ್ಧಪಡಿಸಲಾಗುತ್ತಿದೆ, ಪ್ಯಾಕು ಮಾಡಲಾಗುತ್ತಿದೆ, ಸ್ವಚ್ಛಪಡಿಸಲಾಗುತ್ತಿದೆ, ಇಡಲಾಗಿದೆ ಅಥವಾ ತೆರೆದಿಡಲಾಗಿದೆ ಅಥವಾ ಲೈಸೆನ್ಸ್ ಇಲ್ಲದೆ ಅಥವಾ ಲೈಸೆನ್ಸಿನ ಅನುಸಾರವಾಗಿ ಅಲ್ಲದೆ ಅನ್ಯಥಾ ಮಾರಾಟ ಮಾಡಲಾಗುತ್ತಿದೆ ಎಂದು ನಂಬಲು ಕಾರಣವಿದ್ದರೆ, ಅವರು ಈ ಅಧಿನಿಯಮದ ಉಪವಿಧಿಗಳ ಅಥವಾ ವಿನಿಯಮಗಳ ಯಾವುದೇ ಉಪಬಂಧವನ್ನು ಅಥವಾ ಲೈಸೆನ್ಸಿನ ಯಾವುದೇ ಪರತ್ತನ್ನು ಉಲಂಘಿಸಲಾಗುತ್ತಿದೆಯೇ, ಇಲ್ಲವೇ ಎಂಬುದರ ಬಗ್ಗೆ ತಾವು ಮನದಟ್ಟುಮಾಡಿಕೊಳ್ಳುವ ಉದ್ದೇಶಕ್ಕಾಗಿ ಹಗಲು ಅಥವಾ ರಾತ್ರಿಯಲ್ಲಿ ಯಾವುದೇ ಸಮಯದಲ್ಲಿ ನೋಟೀಸು ಕೊಡದೆಯೇ ಅಂಥ ಯಾವುದೇ ಸ್ಥಳವನ್ನು ಪ್ರವೇಶಿಸಬಹುದು.

(3) ಈ ಪ್ರಕರಣದ ಮೇರೆಗಿನ ಅಧಿಕಾರಗಳನ್ನು ಚಲಾಯಿಸುವುದರಿಂದಾಗಿ ಅಥವಾ ಈ ಪ್ರಕರಣದ ಮೇರೆಗೆ ಯಾವುದೇ ಸ್ಥಳದೊಳಕ್ಕೆ ಪ್ರವೇಶ ಮಾಡುವುದಕ್ಕಾಗಿ ಯಾವುದೇ ಅವಶ್ಯವಾದ ಬಲವನ್ನು ಪ್ರಯೋಗಿಸುವುದರಿಂದ ಉಂಟಾದ ಯಾವುದೇ ಹಾನಿಗಾಗಿ ಅಥವಾ ಅನಾನುಕೂಲಕ್ಕಾಗಿ ವಲಯ ಆಯುಕ್ತರ ಅಥವಾ ಅವರ ಅಧಿಕಾರದ ಮೇರೆಗೆ ಕೆಲಸ ಮಾಡುತ್ತಿರುವ ಯಾರೇ ವ್ಯಕ್ತಿಯ ಅಥವಾ ಪಾಲಿಕೆಯ ವಿರುದ್ಧ ಯಾವುದೇ ಕೇ್ಲಮನ್ನು ಮಾಡಲು ಅವಕಾಶವಿರತಕ್ಕದ್ದಲ್ಲ.

(4) ಈ ಪ್ರಕರಣದ ಮೇರೆಗೆ ಚಲಾಯಿಸಿದ ಅಧಿಕಾರಗಳಿಗೆ ಸಂಬಂಧಿಸಿದಂತೆ ಯಾವ ಕಾನೂನು ವ್ಯವಹರಣೆಗಳಲ್ಲಿ ಮಾರಾಟಕ್ಕಾಗಿ ಯಾವುದೇ ಪ್ರಾಣಿಗಳು, ಕೋಳಿಗಳು, ಮೀನು ಅಥವಾ ಆಹಾರದ ಪದಾರ್ಥಗಳನ್ನು ಇಟ್ಟಿರಲಿಲ್ಲ ಅಥವಾ ತೆರೆದಿಟ್ಟಿರಲಿಲ್ಲ, ಅವುಗಳನ್ನು ಹೊತ್ತು ಮಾರುತ್ತಿರಲಿಲ್ಲ, ಮಾರಾಟಕ್ಕಾಗಿ ತಯಾರಿಸುತ್ತಿರಲಿಲ್ಲ, ಸಿದ್ಧಪಡಿಸುತ್ತಿರಲಿಲ್ಲ, ದಾಸ್ತಾನು ಮಾಡಿರಲಿಲ್ಲ, ಪ್ಯಾಕು ಮಾಡಿರಲಿಲ್ಲ ಅಥವಾ ಸ್ವಚ್ಛಗೊಳಿಸುತ್ತಿರಲಿಲ್ಲ ಅಥವಾ ಅವುಗಳನ್ನು ಮನುಷ್ಯರ ಆಹಾರಕ್ಕಾಗಿ ಉದ್ದೇಶಿಸಿರಲಿಲ್ಲ ಎಂದು ಹೇಳಲಾಗಿದೆಯೋ ಆ ಯಾವುದೇ ಕಾನೂನು ವ್ಯವಹರಣೆಗಳಲ್ಲಿ ಅದನ್ನು ರುಜುವಾತುಪಡಿಸುವ ಭಾರವು ಹಾಗೆ ಹೇಳುತ್ತಿರುವ ಪಕ್ಷಕಾರನ ಮೇಲೆ ಇರತಕ್ಕದ್ದು.

311. ಮುಖ್ಯ ಆಯುಕ್ತರಿಗೆ ಮೇಲ್ಮನವಿ.- (1) 310ನೇ ಪ್ರಕರಣದ ಮೇರೆಗೆ ವಲಯ ಆಯುಕ್ತರು ನೀಡಿದ ಯಾವುದೇ ನೋಟೀಸಿನಿಂದ, ತೆಗೆದುಕೊಂಡ ಕ್ರಮದಿಂದ ಅಥವಾ ತೆಗೆದುಕೊಳ್ಳಲು ಉದ್ದೇಶಿಸಿದ ಕ್ರಮದಿಂದ ಬಾಧಿತನಾದ ಯಾರೇ ವ್ಯಕ್ತಿಯು ಮುಖ್ಯ ಆಯುಕ್ತರಿಗೆ ಮೇಲ್ಮನವಿ ಸಲ್ಲಿಸಬಹುದು.

(2) ಮುಖ್ಯ ಆಯುಕ್ತರ ತೀರ್ಮಾನವೇ ಅಂತಿಮವಾಗಿರತಕ್ಕದ್ದು.

312. ಅಪೀಲುಗಳಿಗೆ ಕಾಲ ಪರಿಮಿತಿಯ ಅವಧಿ.- ಈ ಅಧಿನಿಯಮದ ಹಿಂದೆ ಹೇಳಿದ ಉಪಬಂಧಗಳಲ್ಲಿ, ಈ ಅಧಿನಿಯಮದ ಮೇರೆಗೆ ಅನುಮತಿಸಿದ ಅಪೀಲನ್ನು ಸಲ್ಲಿಸುವುದಕ್ಕೆ ಯಾವುದೇ ಕಾಲವನ್ನು ಗೊತ್ತುಪಡಿಸದಿರುವ ಸಂದರ್ಭದಲ್ಲಿ ಅಂಥ ಅಪೀಲನ್ನು,-

(ಎ) ಆ ಅಪೀಲು ಲೈಸೆನ್ಸ್‌ನ್ನು ಅಥವಾ ಅನುಮತಿಯನ್ನು ಕೊಡುವ ಆದೇಶದ ವಿರುದ್ಧದ ಅಪೀಲು ಆಗಿರುವಲ್ಲಿ, ಪಾಲಿಕೆಯ ಸೂಚನಾ ಫಲಕದಲ್ಲಿ ಆದೇಶವನ್ನು ಪ್ರಕಟಿಸಿದ ದಿನಾಂಕದ ತರುವಾಯ ಅರವತ್ತು ದಿನಗಳ ಒಳಗಾಗಿ; ಮತ್ತು

(ಬಿ) ಇತರ ಪ್ರಕರಣಗಳಲ್ಲಿ, ಅಪೀಲನ್ನು ಯಾವ ಆದೇಶದ ಅಥವಾ ವ್ಯವಹರಣೆಯ ವಿರುದ್ಧ ಸಲ್ಲಿಸಲಾಗಿದೆಯೋ ಆ ಆದೇಶವನ್ನು ಅಥವಾ ವ್ಯವಹರಣೆಯನ್ನು ಸ್ವೀಕರಿಸಿದ ದಿನಾಂಕದ ತರುವಾಯ ಅರವತ್ತು ದಿನಗಳ ಒಳಗಾಗಿ

- ಸಲ್ಲಿಸತಕ್ಕದ್ದು.

313. ಹಾಜರಾಗಲು ಮತ್ತು ಸಾಕ್ಷ್ಯ ನೀಡಲು ಅಥವಾ ದಸ್ತಾವೇಜುಗಳನ್ನು ಹಾಜರುಪಡಿಸಲು ಸಮನುಗಳು.- ವಲಯ ಆಯುಕ್ತರು ಈ ಅಧಿನಿಯಮದ ಉಪಬಂಧಗಳ ಮೇರೆಗೆ, ತೆರಿಗೆ ವಿಧಿಸುವುದಕ್ಕೆ ಅಥವಾ ಪರಿಶೀಲನೆಗೆ ಅಥವಾ ನೋಂದಣಿಗೆ ಅಥವಾ ಯಾವುದೇ ಲೈಸೆನ್ಸನ್ನು ಅಥವಾ ಅನುಮತಿಯನ್ನು ಕೊಡುವುದಕ್ಕೆ ಸಂಬಂಧಪಟ್ಟ ಯಾವುದೇ ಪ್ರಶ್ನೆಯ ಬಗ್ಗೆ ಸಂದರ್ಭಾನುಸಾರ ತನ್ನ ಮುಂದೆ ಹಾಜರಾಗಲು ಮತ್ತು ಸಾಕ್ಷ್ಯ ನೀಡಲು ಅಥವಾ ದಸ್ತಾವೇಜುಗಳನ್ನು ಹಾಜರುಪಡಿಸಲು ಯಾರೇ ವ್ಯಕ್ತಿಯನ್ನು ಸಮನು ಮಾಡಬಹುದು.

314. ಲೈಸೆನ್ಸು, ಇತ್ಯಾದಿಗಳನ್ನು ಪಡೆಯಲು ತಪ್ಪುವುದರ ಅಥವಾ ಅವುಗಳ ಉಲಂಘನೆಯ ಪರಿಣಾಮಗಳು.- (1) ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮದ, ಉಪವಿಧಿಯ ಅಥವಾ ವಿನಿಯಮದ ಮೇರೆಗೆ ಯಾವುದೇ ಕಾರ್ಯವನ್ನು ಮಾಡಲು ಪಾಲಿಕೆಯ, ಸ್ಥಾಯೀ ಸಮಿತಿಯ ಅಥವಾ ವಲಯ ಆಯುಕ್ತರ ಲೈಸೆನ್ಸು ಅಥವಾ ಅನುಮತಿಯು ಅಥವಾ ಪಾಲಿಕೆಯ ಕಚೇರಿಯಲ್ಲಿ ನೋಂದಾಯಿಸುವುದು ಅವಶ್ಯವಿದ್ದರೆ ಮತ್ತು ಅಂಥ ಕಾರ್ಯವನ್ನು ಅಂಥ ಲೈಸೆನ್ಸು ಅಥವಾ ಅನುಮತಿ ಅಥವಾ ನೋಂದಣಿ ಇಲ್ಲದೆಯೇ ಮಾಡಿದ್ದರೆ, ಆಗ,-

(ಎ) ವಲಯ ಆಯುಕ್ತರು ನೋಟೀಸು ಮೂಲಕ ಅಂಥ ಕಾರ್ಯವನ್ನು ಮಾಡಿದ ವ್ಯಕ್ತಿಯನ್ನು ನೋಟೀಸಿನಲ್ಲಿ ನಿರ್ದಿಷ್ಟಪಡಿಸಬಹುದಾದ ಕಾಲದೊಳಗೆ ಆ ಕಾರ್ಯದಿಂದ ಪರಿಣಾಮಕ್ಕೊಳಗಾದ ಯಾವುದೇ ಚರ ಅಥವಾ ಸ್ಥಿರ, ಸಾರ್ವಜನಿಕ ಇಲ್ಲವೇ ಖಾಸಗಿ ಸ್ವತ್ತನ್ನು ಸಂಪೂರ್ಣವಾಗಿ ಅಥವಾ ಅದರ ಯಾವುದೇ ಭಾಗವನ್ನು ಬದಲಾಯಿಸುವಂತೆ, ತೆಗೆದುಹಾಕುವಂತೆ ಅಥವಾ ಕಾರ್ಯಸಾಧ್ಯವಾಗುವಷ್ಟರಮಟ್ಟಿಗೆ ಅದನ್ನು ಅದರ ಮೂಲ ಸ್ಥಿತಿಗೆ ತರುವಂತೆ ಅಗತ್ಯಪಡಿಸಬಹುದು.

(ಬಿ) ವಲಯ ಆಯುಕ್ತರು ಅಥವಾ ಅವನಿಂದ ಕ್ರಮಬದ್ಧವಾಗಿ ಅಧಿಕೃತನಾದ ಯಾರೇ ಅಧಿಕಾರಿಯು, ಯಾವ ಕಟ್ಟಡದಲ್ಲಿ ಅಥವಾ ಭೂಮಿಯಲ್ಲಿ ಅಂಥ ಕಾರ್ಯವನ್ನು ಮಾಡಲಾಗಿದೆಯೋ ಆ ಯಾವುದೇ ಕಟ್ಟಡದೊಳಗೆ ಅಥವಾ ಭೂಮಿಯೊಳಗೆ ಅಥವಾ ಅದರ ಮೇಲೆ ಸಹ ಪ್ರವೇಶಿಸಬಹುದು ಮತ್ತು ಅಂಥ ಕಾರ್ಯ ಮುಂದುವರಿಯುವುದನ್ನು ತಡೆಗಟ್ಟಲು ಅವಶ್ಯವಾಗಬಹುದಾದ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳಬಹುದು.

(ಸಿ) ಅಂಥ ಕಾರ್ಯವನ್ನು ಹಾಗೆ ಮಾಡಿದ್ದಕ್ಕೆ ಈ ಅಧಿನಿಯಮದಲ್ಲಿ ವಿಶೇಷವಾಗಿ ಯಾವುದೇ ದಂಡವನ್ನು ಉಪಬಂಧಿಸಿರದಿದ್ದರೆ ಹಾಗೆ ಆ ಕಾರ್ಯವನ್ನು ಮಾಡುವ ವ್ಯಕ್ತಿಯು ಮ್ಯಾಜಿಸ್ಟ್ರೇಟರನಿಂದ ಅಪರಾಧ ನಿರ್ಣಯವಾದ ಮೇಲೆ, ಅಂಥ ಪ್ರತಿಯೊಂದು ಅಪರಾಧಕ್ಕಾಗಿ ಐವತ್ತು ರೂಪಾಯಿಗಳಿಗೆ ಮೀರದ ಜುಲ್ಮಾನೆಗೆ ಗುರಿಯಾಗತಕ್ಕದ್ದು.

(2) ಈ ಪ್ರಕರಣದ ಮೇರೆಗೆ ಕೊಟ್ಟಿರುವ ಅಧಿಕಾರವನ್ನು ಚಲಾಯಿಸುವುದರಿಂದಾಗಿ ಅಥವಾ ಈ ಪ್ರಕರಣದ ಉಪಬಂಧಗಳನ್ನು ಈಡೇರಿಸುವ ಉದ್ದೇಶಕ್ಕಾಗಿ ಅವಶ್ಯವಿರುವ ಬಲಪ್ರಯೋಗ ಮಾಡಿದ್ದರಿಂದಾಗಿ ಉಂಟಾದ ಯಾವುದೇ ಹಾನಿಗೆ ಅಥವಾ ಅನಾನುಕೂಲತೆಗೆ ವಲಯ ಆಯುಕ್ತರ ಅಥವಾ ಇತರ ಯಾರೇ ವ್ಯಕ್ತಿಯ ವಿರುದ್ಧ ಯಾವುದೇ ಕೇ್ಲಮು ಮಾಡಲು ಅವಕಾಶವಿರತಕ್ಕದ್ದಲ್ಲ.

315. ಹೊಣೆಗಾರರಾದ ವ್ಯಕ್ತಿಗಳಿಂದ ವೆಚ್ಚಗಳ ವಸೂಲಿ ಮತ್ತು ಅಧಿಭೋಗದಾರನ ಹೊಣೆಗಾರಿಕೆಯ ಪರಿಮಿತಿ.- (1) ಮುಖ್ಯ ಆಯುಕ್ತರು, 358ನೇ ಪ್ರಕರಣದ ಮೇರೆಗೆ ವಹಿಸಿದ ಯಾವುವೇ ಯುಕ್ತ ವೆಚ್ಚಗಳನ್ನು ಯಾವ ವ್ಯಕ್ತಿಯ ಹೆಸರಿಗೆ ನೋಟೀಸನ್ನು, ಕಡ್ಡಾಯ ಸೂಚನೆಯನ್ನು ಅಥವಾ ಆದೇಶವನ್ನು ನೀಡಲಾಗಿತ್ತೋ ಆ ವ್ಯಕ್ತಿಯಿಂದ ಅಥವಾ ಆ ವ್ಯಕ್ತಿಗಳ ಪೈಕಿ ಯಾರೇ ಒಬ್ಬನಿಂದ ಕಟ್ಟಡಗಳ ಅಥವಾ ಭೂಮಿಗಳ ಮೇಲಿನ ತೆರಿಗೆಯಂತೆಯೇ ವಸೂಲಿ ಮಾಡಬಹುದು ಮತ್ತು 358ನೇ ಪ್ರಕರಣದ ಮೇರೆಗೆ ಕೆಲಸವನ್ನು ಮಾಡುವಾಗ ಅಥವಾ ಕ್ರಮಗಳನ್ನು ಕೈಗೊಳ್ಳುವಾಗ ಸಂಬಂಧಪಟ್ಟ ಸ್ವತ್ತಿನ ಮೇಲೆ ಸಿಕ್ಕಿದ ಯಾವುದೇ ಸಾಮಗ್ರಿಗಳನ್ನು ಬಳಸಿಕೊಳ್ಳಬಹುದು ಅಥವಾ ಅವುಗಳನ್ನು ಮಾರಬಹುದು ಮತ್ತು ಮಾರಾಟದಿಂದ ಬಂದ ಉತ್ಪತ್ತಿಯನ್ನು ವಹಿಸಿದ ವೆಚ್ಚಗಳ ಸಂದಾಯಕ್ಕಾಗಿ ಅಥವಾ ಸಂದಾಯ ನಿಮಿತ್ತ ವಿನಿಯೋಗಿಸಬಹುದು.

(2) ಯಾವ ವ್ಯಕ್ತಿಗೆ ನೋಟೀಸನ್ನು ನೀಡಲಾಗಿದೆಯೋ ಆ ವ್ಯಕ್ತಿಯು, ಯಾವ ಸ್ವತ್ತಿನ ಸಂಬಂಧದಲ್ಲಿ ಅದನ್ನು ನೀಡಲಾಗಿದೆಯೋ ಆ ಸ್ವತ್ತಿನ ಮಾಲೀಕನಾಗಿದ್ದರೆ, ಮುಖ್ಯ ಆಯುಕ್ತರು (ಅಂಥ ಮಾಲೀಕನ ವಿರುದ್ಧ ಯಾವುದೇ ಕ್ರಮವನ್ನು ಅಥವಾ ಇತರ ವ್ಯವಹರಣೆಯನ್ನು ಪ್ರಾರಂಭಿಸಿರಲಿ ಅಥವಾ ಕೈಗೊಂಡಿರಲಿ ಅಥವಾ ಇಲ್ಲದಿರಲಿ) ಮಾಲೀಕನ ಅಧೀನದಲ್ಲಿರುವ ಅಂಥ ಸ್ವತ್ತನ್ನು ಅಥವಾ ಅದರ ಯಾವುದೇ ಭಾಗವನ್ನು ಅಧಿಭೋಗಿಸುತ್ತಿರುವ ವ್ಯಕ್ತಿ ಯಾರಾದರೂ ಇದ್ದರೆ ಆ ಯಾರೇ ವ್ಯಕ್ತಿಯನ್ನು (1)ನೇ ಉಪಪ್ರಕರಣದ ಮೇರೆಗೆ ಮಾಲೀಕನಿಂದ ವಸೂಲಿ ಮಾಡಬೇಕಾದ ಮೊಬಲಗಿನವರೆಗೆ ಅಥವಾ ಮುಖ್ಯ ಆಯುಕ್ತರು ಯುಕ್ತವೆಂದು ಭಾವಿಸಬಹುದಾದಂಥ ಕಡಿಮೆ ಮೊಬಲಗಿನವರೆಗೆ, ಅಂಥ ಸ್ವತ್ತಿನ ಸಂಬಂಧದಲ್ಲಿ ಅವನು ಸಂದಾಯ ಮಾಡಬೇಕಾದ ಬಾಡಿಗೆಯನ್ನು ಅದು ಬಾಕಿಯಾದಂತೆಲ್ಲ, ಮಾಲೀಕನಿಗೆ ಸಂದಾಯ ಮಾಡುವ ಬದಲು ಪಾಲಿಕೆಗೆ ಸಂದಾಯ ಮಾಡುವಂತೆ ಅಗತ್ಯಪಡಿಸಬಹುದು ಮತ್ತು ಹಾಗೆ ಸಂದಾಯ ಮಾಡಿದ ಯಾವುದೇ ಮೊಬಲಗನ್ನು ಮಾಲೀಕನು ಸಂದಾಯ ಮಾಡಬಹುದಾದ ಮೊಬಲಗಿನಿಂದ ಮುರಿದುಕೊಳ್ಳಬಹುದು.

(3) ಉಪಪ್ರಕರಣ (2)ರ ಮೇರೆಗೆ ಕ್ರಮವನ್ನು ತೆಗೆದುಕೊಳ್ಳಬೇಕೇ ಅಥವಾ ಬೇಡವೇ ಎಂಬುದನ್ನು ತೀರ್ಮಾನಿಸುವ ಉದ್ದೇಶಕ್ಕಾಗಿ ಮುಖ್ಯ ಆಯುಕ್ತರು ಅಂಥ ಸ್ವತ್ತಿನ ಬಾಬ್ತು ಬಾಡಿಗೆಯಾಗಿ ಸ್ವತ್ತಿನ ಯಾರೇ ಅಧಿಭೋಗದಾರನು ಸಂದಾಯ ಮಾಡಬೇಕಾದ ಮೊತ್ತಕ್ಕೆ ಸಂಬಂಧಿಸಿದ ಮಾಹಿತಿಯನ್ನು ಮತ್ತು ಅದನ್ನು ಯಾರಿಗೆ ಸಂದಾಯ ಮಾಡಬೇಕೋ ಆ ವ್ಯಕ್ತಿಯ ಹೆಸರು ಮತ್ತು ವಿಳಾಸದ ಬಗ್ಗೆ ಮಾಹಿತಿಯನ್ನು ಒದಗಿಸುವಂತೆ ಅವನನ್ನು ಅಗತ್ಯಪಡಿಸಬಹುದು ಮತ್ತು ಅಂಥ ಅಧಿಭೋಗದಾರನು ಅಂಥ ಮಾಹಿತಿಯನ್ನು ಒದಗಿಸಲು ಬದ್ಧನಾಗಿರತಕ್ಕದ್ದು.

(4) ಈ ಪ್ರಕರಣದ ಉಪಬಂಧವು, ಮೇಲೆ ಹೇಳಿದಂಥ ಯಾವುದೇ ಕೆಲಸದ ವೆಚ್ಚಗಳ ಸಂದಾಯದ ಸಂಬಂಧದಲ್ಲಿ ಯಾರೇ ಮಾಲೀಕನ ಮತ್ತು ಅಧಿಭೋಗದಾರನ ನಡುವೆ ಆಗಿರುವ ಯಾವುದೇ ಕರಾರಿಗೆ ಬಾಧಕವಾಗತಕ್ಕದ್ದಲ್ಲ.

ಅಧ್ಯಾಯ XXIII

ನಿಯಮಗಳು ಮತ್ತು ಉಪವಿಧಿಗಳಿಗೆ ಸಂಬಂಧಿಸಿದ ಅಧಿಕಾರ

316. ನಿಯಮಗಳ ರಚನಾಧಿಕಾರ.- (1) ಸರ್ಕಾರವು, ಅಧಿಸೂಚನೆಯ ಮೂಲಕ ಪೂರ್ವ ಪ್ರಕಟಣೆಯ ತರುವಾಯ ಈ ಅಧಿನಿಯಮದ ಎಲ್ಲ ಅಥವಾ ಯಾವುದೇ ಉದ್ದೇಶಗಳನ್ನು ಈಡೇರಿಸಲು ನಿಯಮಗಳನ್ನು ರಚಿಸಬಹುದು,-

(2) ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, ಸರ್ಕಾರವು, ಸರ್ಕಾರಿ ರಾಜ್ಯ ಪತ್ರದಲ್ಲಿ ಅಧಿಸೂಚನೆಯ ಮೂಲಕ ಈ ಮುಂದಿನವುಗಳನ್ನು ಒಳಗೊಂಡಂತೆ ನಿಯಮಗಳನ್ನು ರಚಿಸಬಹುದು,-

(ಎ) ಪಾಲಿಕೆಯು ಆರ್ಜಿಸಬಹುದಾದ ಸ್ವತ್ತಿನ ಮೇಲೆ ಅಥವಾ ಮಾರಾಟ, ಅಡಮಾನ, ಭೋಗ್ಯ ಅಥವಾ ವಿನಿಮಯ ಅಥವಾ ಅನ್ಯಥಾ ಆ ಮೂಲಕ ಪಾಲಿಕೆಗೆ ವರ್ಗಾಯಿಸಬಹುದಾದ ಅಥವಾ ಅದರಲ್ಲಿ ನಿಹಿತವಾದ ಸ್ವತ್ತಿಗೆ ಸಂಬಂಧಿಸಿದ ಪಾಲಿಕೆ ಪರತ್ತುಗಳು.

(ಬಿ) ಪಾಲಿಕೆಗಳ ವೆಚ್ಚಗಳಲ್ಲಿ ಭಾಗಶಃ ಅಥವಾ ಸಂಪೂರ್ಣವಾಗಿ ರೂಪಿಸಿದ ಕಾಮಗಾರಿಗಳ ಯೋಜನೆಗಳು ಮತ್ತು ಅಂದಾಜುಗಳ ತಯಾರಿಕೆ ಹಾಗೂ ಅಂದಾಜುಗಳಿಗೆ ಔದ್ಯೋಗಿಕ ಅಥವಾ ಆಡಳಿತಾತ್ಮಕ ಅನುಮತಿಯನ್ನು ದಾಖಲಿಸಲು ಪಾಲಿಕೆ ಅಧಿಕಾರಿಗಳ ಅಥವಾ ಸರ್ಕಾರಿ ಅಧಿಕಾರಿಗಳ ಅಧಿಕಾರ;

(ಸಿ) ಪಾಲಿಕೆಗಳು ಸಲ್ಲಿಸಬೇಕಾದ ರಶೀದಿಗಳು ಮತ್ತು ವೆಚ್ಚ ವಿವರಗಳು, ವಿವರಪಟ್ಟಿಕೆಗಳು, ವಿವರಣೆಗಳು ಮತ್ತು ವರದಿಗಳ ಅಂದಾಜು;

(ಡಿ) ಕೌನ್ಸಿಲ್ ಸಭೆಯಲ್ಲಿ ನಿರ್ಣಯಗಳನ್ನು ಮಂಡಿಸುವುದು;

(ಇ) ಜನನ ಮತ್ತು ಮರಣಗಳ ರಿಜಿಸ್ಟರ್ಗಳು ಹಾಗೂ ವಿವರಪಟ್ಟಿಕೆಗಳ ನಮೂನೆ, ರಿಜಿಸ್ಟರ್ಗಳನ್ನು ನಿರ್ವಹಿಸಬೇಕಾಗಿರುವ ವಿಧಾನ, ವಿವರಪಟ್ಟಿಕೆಗಳನ್ನು ದಾಖಲಿಸಬೇಕಾದ ದಿನಾಂಕ ಮತ್ತು ಯಾವ ಅಧಿಕಾರಿಯ ಮುಂದೆ ವಿವರಪಟ್ಟಿಕೆಗಳನ್ನು ಸಲ್ಲಿಸಬೇಕು;

(ಎಫ್) ಲೆಕ್ಕಪರಿಶೋಧಕರ ಪರಿಶೀಲನಾ ಅಧಿಕಾರಗಳು ಮತ್ತು ಅಧಿಕಾರಿಗಳ ಅಧೀಕ್ಷಣೆ ಮತ್ತು ಅಧಿಕೃತಗೊಳಿಸಲಾದ ಅಧಿಕಾರಿಗಳ ಸಮನ್ಗಳನ್ನು ನೀಡಲು ಮತ್ತು ಸಾಕ್ಷಿಗಳನ್ನು ವಿಚಾರಣೆ ಮಾಡಲು ಮತ್ತು ದಸ್ತಾವೇಜುಗಳನ್ನು ಹಾಜರುಪಡಿಸಲು ಒತ್ತಾಯಿಸುವುದು ಮತ್ತು ಲೆಕ್ಕಪರಿಶೋಧನೆ, ತಪಾಸಣೆ ಮತ್ತುಅಧೀಕ್ಷಣೆ ಮಾಡಲು ಸಂಬಂಧಿಸಿದ ಎಲ್ಲಾಇತರೆ ವಿಷಯಗಳನ್ನು ವಿಚಾರಣೆಗಳನ್ನು ನಡೆಸುವುದಕ್ಕೆ ಅಧಿಕಾರಗಳು.

(ಜಿ) ನಿಯಮಿಸಬಹುದಾದಂತ ಸಂಬಂಧಪಟ್ಟ ಪಕ್ಷಕಾರರ ವಿವರಗಳನ್ನು ಒಳಗೊಂಡಿರುವ ವಿವಾಹ ನೋಂದಣಿ ಮತ್ತು ಅಂಥ ಪ್ರಮಾಣ ಪತ್ರಗಳಿಗೆ ನಿಗದಿಪಡಿಸಿದ ಶುಲ್ಕಗಳನ್ನು ಭರಿಸಿಕೊಂಡು ನಂತರ ಅರ್ಜಿಯನುಸಾರ ಅದರ ಪ್ರಮಾಣ ಪತ್ರಗಳನ್ನು ನೀಡುವುದು;

(ಹೆಚ್) ಪಾಲಿಕೆ ಪ್ರದೇಶಗಳ ಅಭಿವೃದ್ಧಿ ಯೋಜನೆಗಳು, ಅದರ ಅನುಮೋದನೆ ಮತ್ತು ಅನುಷ್ಠಾನ;

(ಐ) ವಾರ್ಡ್ ಸಮಿತಿಗಳ ಮತ್ತು ವಾರ್ಡ್ ಸಭಾಗಳ ಪ್ರಕಾರ್ಯಗಳು; ಮತ್ತು

(ಜೆ) ಪೌರಾಡಳಿತ ವಿಷಯಗಳ ಮೇಲೆ ಮತ್ತು ಕರ್ತವ್ಯದ ವಿಷಯಗಳಿಗೆ ಸಂಬಂಧಿಸಿದಂತೆ ಸಾರ್ವಜನಿಕರ ಮಾಹಿತಿ ಹಕ್ಕು.

(ಕೆ) ಪಾಲಿಕೆ ಅಧಿಕಾರಿಗಳ ಮತ್ತು ನೌಕರರ ನೇಮಕಾತಿ ವಿಧಾನ ಮತ್ತು ಸೇವಾ ಪರತ್ತುಗಳು ಹಾಗೂ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕ ಪತ್ರಗಳ ಇಲಾಖೆ, ಆರೋಗ್ಯ, ಪಟ್ಟಣ ಮತ್ತು ನಗರ ಯೋಜನೆ ಮುಂತಾದ ಇಲಾಖೆಗಳಿಂದ ಅಧಿಕಾರಿಗಳು ಮತ್ತು ನೌಕರರನ್ನು ಪ್ರತಿನಿಯೋಜನೆ ಮಾಡಿಕೊಳ್ಳುವುದಕ್ಕೆ ಸಂಬಂಧಪಟ್ಟ ವಿಷಯಗಳು:

(ಎಲ್) ಈ ಅಧಿನಿಯಮದ ಮೇರೆಗೆ ನಿಯಮಿಸಬೇಕಾದಂಥ ಅಥವಾ ನಿಯಮಿಸಬಹುದಾದಂಥ ಯಾವುದೇ ಇತರ ವಿಷಯ.

(3) ಸರ್ಕಾರವು ಅಧಿಸೂಚನೆಯ ಮೂಲಕ ಮತ್ತು ಪೂರ್ವ ಪ್ರಕಟಣೆಯ ನಂತರ ಈ ಅಧಿನಿಯಮದ ಯಾವುವೇ ಅನುಸೂಚಿಗಳನ್ನು ಮಾರ್ಪಡಿಸುವ, ಸೇರ್ಪಡಿಸುವ ಅಥವಾ ರದ್ದುಪಡಿಸುವ ನಿಯಮಗಳನ್ನು ರಚಿಸಬಹುದು.

(4) ಈ ಅಧಿನಿಯಮದ ಮೇರೆಗೆ ಒಂದು ನಿಯಮವನ್ನು ಪೂರ್ವಾನ್ವಯದಿಂದ ಜಾರಿಗೆ ಬರುವಂತೆ ರಚಿಸಬಹುದು, ಮತ್ತು ಹಾಗೇ ಒಂದು ನಿಯಮವನ್ನು ರಚಿಸಿದಾಗ ನಿಯಮವನ್ನು ರಚಿಸಿದ ಕಾರಣಗಳನ್ನು ರಾಜ್ಯ ವಿಧಾನ ಮಂಡಲದ ಉಭಯ ಸದನಗಳ ಮುಂದೆ ಮಂಡಿಸಿದ ಹೇಳಿಕೆಯಲ್ಲಿ ನಿರ್ದಿಷ್ಟ ಪಡಿಸತಕ್ಕದ್ದು ಮತ್ತು ಅದು (5)ನೇ ಉಪ-ಪ್ರಕರಣದ ಅಡಿಯಲ್ಲಿ ಮಾಡಿದ ಯಾವುವೇ ಮಾರ್ಪಾಟಿಗೆ ಒಳಪಟ್ಟಿರತಕ್ಕದ್ದು, ಈ ಅಧಿನಿಯಮದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವು ಈ ಅಧಿನಿಯಮದಲ್ಲಿ ಅಧಿನಿಯಮಿಸಿದ್ದರೆ ಹೇಗೋ ಹಾಗೆ ಪರಿಣಾಮ ಉಳ್ಳದ್ದಾಗಿರತ್ತದ್ದು.

(5) ಈ ಅಧಿನಿಯಮದ ಅಡಿಯಲ್ಲಿ ರಚಿಸಿದ ಪ್ರತಿಯೊಂದು ನಿಯಮವನ್ನು ಅಥವಾ ಅಧಿಸೂಚನೆಯನ್ನು ಅದನ್ನು ರಚಿಸಿದ ತರುವಾಯ, ಆದಷ್ಟು ಬೇಗನೆ, ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ, ಒಂದು ಅಧಿವೇಶನದಲ್ಲಿ ಅಥವಾ ಎರಡು ಅಥವಾ ಹೆಚ್ಚು ನಿರಂತರ ಅಧಿವೇಶನಗಳಲ್ಲಿ ಅಡಕವಾಗಿರಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಅದು ಅಧಿವೇಶನದಲ್ಲಿರುವಾಗ ಮಂಡಿಸತಕ್ಕದ್ದು ಮತ್ತು ಮೇಲೆ ಹೇಳಿದ ಅಧಿವೇಶನ ಅಥವಾ ನಿರಂತರ ಅಧಿವೇಶನಗಳ ನಿಕಟ ತರುವಾಯದ ಅಧಿವೇಶನವು

ಮುಕ್ತಾಯವಾಗುವುದಕ್ಕೆ ಮೊದಲು ಉಭಯ ಸದನಗಳು ನಿಯಮದಲ್ಲಿ ಅಥವಾ ಅಧಿಸೂಚನೆಯಲ್ಲಿ ಯಾವುದೇ ಮಾರ್ಪಾಡು ಮಾಡಲು ಒಪ್ಪಿದರೆ ಅಥವಾ ಆ ನಿಯಮವನ್ನು ಅಥವಾ ಅಧಿಸೂಚನೆಯನ್ನು ರಚಿಸತಕ್ಕದ್ದಲ್ಲವೆಂದು ಉಭಯ ಸದನಗಳು ಒಪ್ಪಿದರೆ ತದನಂತರ ಅಂಥ ನಿಯಮವು ಅಥವಾ ಅಧಿಸೂಚನೆಯು ಹಾಗೆ ಮಾರ್ಪಾಟಾದ ರೀತಿಯಲ್ಲಿ ಪರಿಣಾಮಕಾರಿಯಾಗತಕ್ಕದ್ದು ಅಥವಾ ಸಂದರ್ಭಾನುಸಾರವಾಗಿ ಪರಿಣಾಮಕಾರಿಯಾಗತಕ್ಕದ್ದಲ್ಲ. ಆದಾಗ್ಯೂ, ಯಾವುದೇ ಅಂಥ ಮಾರ್ಪಾಡು ಅಥವಾ ರದ್ದತಿಯು ಆ ನಿಯಮದ ಅಥವಾ ಅಧಿಸೂಚನೆಯ ಅಡಿಯಲ್ಲಿ ಈ ಮೊದಲು ಮಾಡಲಾದ ಯಾವುದೇ ಕಾರ್ಯದ ಮಾನ್ಯತೆಗೆ ಬಾಧಕವನ್ನು ಉಂಟುಮಾಡತಕ್ಕದ್ದಲ್ಲ.

317. ವಿನಿಯಮಗಳನ್ನು ರಚಿಸಲು ಅಧಿಕಾರ.- ಪಾಲಿಕೆಯು ಸರ್ಕಾರದ ಪೂರ್ವ ಅನುಮೋದನೆ ಪಡೆದು ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಮೂಲಕ ರಚಿಸಿದ ವಿನಿಮಯಗಳಿಂದ ಉಪಬಂಧಿಸಬೇಕೆಂದು ಅಗತ್ಯಪಡಿಸಿದ ವಿಷಯಗಳಿಗೆ ಸಂಬಂಧಿಸಿದಂತೆ ಈ ಅಧಿನಿಯಮದ ಉಪಬಂಧಗಳಿಗೆ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳಿಗೆ ಅಸಂಗತವಾಗಿರದ ವಿನಿಯಮಗಳನ್ನು ರಚಿಸಬಹುದು.

318. ಉಪವಿಧಿಗಳನ್ನು ರಚಿಸುವ ಅಧಿಕಾರ.- ಈ ಅಧಿನಿಯಮ, ನಿಯಮಗಳು ಮತ್ತು ವಿನಿಯಮಗಳ ಉಪಬಂಧಗಳಿಗೆ ಒಳಪಟ್ಟು, ಪಾಲಿಕೆಯು, ಈ ಮುಂದಿನವುಗಳಿಗೆ ಸಂಬಂಧಿಸಿದಂತೆ ಉಪವಿಧಿಗಳನ್ನು ರಚಿಸಬಹುದು ಎಂದರೆ,-

(1) ಉಪವಿಧಿಗಳಿಂದ ಉಪಬಂಧಿಸುವ ಈ ಅಧಿನಿಯಮದ ಮೂಲಕ ಸ್ಪಷ್ಟವಾಗಿ ಅಗತ್ಯ ಪಡಿಸಲಾದ ಅಥವಾ ಅನುಮತಿಸಲಾದ ಎಲ್ಲಾ ವಿಷಯಗಳಿಗಾಗಿ.

(2) ಪಾಲಿಕೆಯ ಎಲ್ಲಾ ಅಧಿಕಾರಿಗಳು ಮತ್ತು ನೌಕರರಿಗೆ, ಅವರಿಗೆ ವಹಿಸಲಾದ ಕರ್ತವ್ಯಗಳನ್ನು ಸೂಕ್ತವಾಗಿ ನಿರ್ವಹಿಸುವುದಕ್ಕಾಗಿ;

(3) ಪಾಲಿಕೆಯ ವ್ಯವಹಾರಗಳಿಗೆ ಸಂಬಂಧಿಸಿದ ಯಾವುದೇ ವಿಷಯ;

(4) ಈ ಅಧಿನಿಯಮದ ಅಡಿಯಲ್ಲಿ ತೆರಿಗೆಯನ್ನು ಸಂಗ್ರಹಿಸುವ ಅವಧಿ ಮತ್ತು ವಿಧಾನವನ್ನು ನಿಯಂತ್ರಿಸುವುದಕ್ಕಾಗಿ;

(5) ಪಾಲಿಕೆ ಅಥವಾ ಇತರೆ ವ್ಯಕ್ತಿಗಳಿಗೆ ಸೇರಿದ ಚರಂಡಿಗಳು ಅಥವಾ ಕೊಳವೆಗಳು, ಖಾಸಗಿ ಸ್ಥಳ, ಮೂತ್ರಾಲಯಗಳು, ಸ್ವಚ್ಛತಾ ಸ್ಥಳಗಳು, ಒಳಚರಂಡಿ ಕಾಮಗಾರಿಗಳ ನಿರ್ವಹಣೆ ಮತ್ತು ನಿರ್ಮಾಣವನ್ನು ನಿಯಂತ್ರಿಸುವುದಕ್ಕಾಗಿ;

(6) ನೀರಿನ ಬಳಕೆಗೆ ಸಂಬಂಧಿಸಿದ ಎಲ್ಲಾ ವಿಷಯಗಳನ್ನು ನಿಯಂತ್ರಿಸುವುದಕ್ಕಾಗಿ;

(7) ಪಾಲಿಕೆಯಲ್ಲಿ ನಿಹಿತಗೊಳಿಸಲಾದ ಸಮುದಾಯದ ಬಡ ವರ್ಗಗಳಿಗೆ ಉದ್ದೇಶಿಸಿರುವ ಮನೆಗಳ ವ್ಯವಸ್ಥಾಪನೆ, ನಿರ್ವಹಣೆ, ನಿಯಂತ್ರಣ ಮತ್ತು ಬಳಕೆಯನ್ನು ನಿಯಂತ್ರಿಸುವುದಕ್ಕಾಗಿ;

(8) ಕಟ್ಟಡಗಳಿಗೆ ಪ್ರವೇಶಿಸಲು ಸೂಕ್ತ ಮಾರ್ಗಗಳನ್ನು ನಿರ್ವಹಿಸುವುದು ಮತ್ತು ಅದಕ್ಕೆ ಸಂಬಂಧಿಸಿದಂತೆ ಒತ್ತುವರಿಯನ್ನು ತಡೆಗಟ್ಟುವುದಕ್ಕಾಗಿ;

(9) ನೈರ್ಮಲ್ಯವನ್ನು ನಿಯಂತ್ರಿಸಲು, ಹೆಗ್ಗಣಗಳ ನಾಶ ಹಾಗೂ ಸೊಳ್ಳೆಗಳು, ನೊಣಗಳು ಮತ್ತು ಇತರೆ ಕ್ರಿಮಿಕೀಟಗಳ ಪ್ರತಿಯಾಗಿ ತಡೆಗಟ್ಟುವ ಮತ್ತು ಪರಿಹಾರ ಕ್ರಮಗಳನ್ನು ತೆಗೆದುಕೊಳ್ಳುವುದಕ್ಕಾಗಿ;

(10) ಜನನಗಳ ಮತ್ತು ಮರಣಗಳ ಸಂಪೂರ್ಣ ಮತ್ತು ನಿಖರವಾದ ನೋಂದಣಿಗೆ ಅನುಕೂಲತೆ ಮತ್ತು ಸುರಕ್ಷತೆಯನ್ನು ಒದಗಿಸುವುದಕ್ಕಾಗಿ;

(11) ಪಾಲಿಕೆಯ ಸ್ವತ್ತುಗಳ ಸಂರಕ್ಷಣೆಗಾಗಿ;

(12) ನಗರದಲ್ಲಿ ಜಾತ್ರೆಗಳು ಮತ್ತು ಕೈಗಾರಿಕಾ ಪ್ರದರ್ಶನಗಳನ್ನು ನಡೆಸುವುದನ್ನು ನಿಯಂತ್ರಿಸುವುದಕ್ಕಾಗಿ;

(13) ಮನುಷ್ಯನಿಗೆ ಪ್ರಾಣಿಗಳ ಮುಖೇನ ಹರಡಿದ ಯಾವುದೇ ರೋಗದ ಸಂದರ್ಭದಲ್ಲಿ ತೆಗೆದುಕೊಳ್ಳಬೇಕಾದ ಕ್ರಮಗಳನ್ನು ನಿಯಂತ್ರಿಸುವುದಕ್ಕಾಗಿ ಮತ್ತು ಅಂತಹ ಕ್ರಮಗಳನ್ನು ತೆಗೆದುಕೊಳ್ಳಲು ಅನುಕೂಲವಾಗುವಂತಹ ಮಾಹಿತಿಯನ್ನು ಒದಗಿಸುವುದಕ್ಕಾಗಿ;

(14) ಮುಕ್ತವಾಗಿ ಗಾಳಿ ಪರಿಚಲಿಸಲು ಮತ್ತು ಕಟ್ಟಡಗಳಲ್ಲಿ ಸಮರ್ಪಕ ವಾಯುಸಂಚಾರಕ್ಕಾಗಿ ಸಾಕಷ್ಟು ಮುಕ್ತ ಸ್ಥಳದ ನಿರ್ವಹಣೆ ಮಾಡುವುದಕ್ಕಾಗಿ;

(15) ಸಾರ್ವಜನಿಕ ಮತ್ತು ಖಾಸಗಿ ಗಾಡಿ ನಿಲ್ದಾಣಗಳ ನಿಯಂತ್ರಣ ಮತ್ತು ಮೇಲ್ವಿಚಾರಣೆಗಾಗಿ, ಅವುಗಳ ಬಳಕೆಯನ್ನು ನಿಯಂತ್ರಿಸುವುದಕ್ಕಾಗಿ ಮತ್ತು ಅದಕ್ಕೆ ಶುಲ್ಕವನ್ನು ವಿಧಿಸುವುದಕ್ಕಾಗಿ;

(16) ಆಹಾರ ಟ್ರಕ್‌ಗಳ ನಿಯಂತ್ರಣಕ್ಕಾಗಿ ಮತ್ತು ಪರವಾನಗಿ ನೀಡುವುದಕ್ಕಾಗಿ.

(17) ಹಾಲು ಕೊಡುವ ಹಸುಗಳನ್ನು ತಪಾಸಣೆ ಮಾಡಲು ಮತ್ತು ಹೈನುಗಾರ ಅಥವಾ ಹಾಲು ಮಾರುವವನ ವ್ಯಾಪಾರವನ್ನು ಅನುಸರಿಸುವ ವ್ಯಕ್ತಿಗಳ ಉದ್ಯೋಗದ ಸ್ಥಳದಲ್ಲಿ ಗಾಳಿ ವ್ಯವಸ್ಥೆ, ದೀಪದ ವ್ಯವಸ್ಥೆ, ಚರಂಡಿಯನ್ನು ಸ್ವಚ್ಛಗೊಳಿಸುವುದು ಮತ್ತು ಡೈರಿಗಳು ಮತ್ತು ಜಾನುವಾರು ಕೊಟ್ಟಿಗೆಗಳಲ್ಲಿ ನೀರು ಸರಬರಾಜನ್ನು ನಿಯಂತ್ರಿಸುವುದಕ್ಕಾಗಿ;

(18) ಹಾಲಿನ ಮಳಿಗೆಗಳಲ್ಲಿ ಮತ್ತು ಹಾಲಿನ ಅಂಗಡಿಗಳಲ್ಲಿ ಮತ್ತು ಹಾಲನ್ನು ಶೇಖರಿಸಲು ಅಥವಾ ಅಳತೆ ಮಾಡಲು ಅಥವಾ ಯಾವುದೇ ಹಾಲಿನ ಉತ್ಪನ್ನವನ್ನು ತಯಾರಿಸಲು ಹಾಲಿನ ವ್ಯಾಪಾರಿಗಳು ಅಥವಾ ಬೀದಿ ವ್ಯಾಪಾರಿಗಳು ಬಳಸುವ ಪಾತ್ರೆಗಳು ಮತ್ತು ಮನೆ ಬಳಕೆಯ ಪಾತ್ರೆಗಳಲ್ಲಿ ಸ್ವಚ್ಛತೆಯನ್ನು ಕಾಪಾಡಿಕೊಳ್ಳುವಂತೆ ಒತ್ತಾಯಪಡಿಸುವುದಕ್ಕಾಗಿ ಮತ್ತು ಹಾಲಿನ ವ್ಯಾಪಾರದಲ್ಲಿ ತೊಡಗಿರುವ ಉದ್ಯೋಗಸ್ಥ ವ್ಯಕ್ತಿಗಳಲ್ಲಿ ಸ್ವಚ್ಛತೆಯನ್ನು ಜಾರಿಗೊಳಿಸುವುದಕ್ಕಾಗಿ;

(19) ವಾಸ್ತುಶಿಲ್ಪಿಗಳು, ಇಂಜಿನಿಯರುಗಳು, ಕಟ್ಟಡ ವಿನ್ಯಾಸಕಾರರು ಮತ್ತು ಕೊಳಾಯಿಗಾರರ ವಿದ್ಯಾರ್ಹತೆಗಳು ಮತ್ತು ಅನುಭವವನ್ನು ನಿಯಮಿಸುವುದಕ್ಕಾಗಿ;

(20) ಸಾರ್ವಜನಿಕ ಬೀದಿಗಳ ಹಾಗೂ ಅದನ್ನು ಅಥವಾ ಅದರ ಭಾಗವನ್ನು ಬಳಸುವುದನ್ನು ಅಥವಾ ಮುಚ್ಚುವುದನ್ನು ನಿಯಂತ್ರಿಸುವುದಕ್ಕಾಗಿ;

(21) ಆಪ್ಟಿಕಲ್ ಫೈಬರ್ ಕೇಬಲ್‌ಗಳನ್ನು ಒಳಗೊಂಡಂತೆ ಯಾವುದೇ ಕೇಬಲ್ ಅಳವಡಿಸುವ ಮತ್ತು ಅದರ ಪರತ್ತುಗಳನ್ನು ವಿಧಿಸುವ ಮತ್ತು ಅಂಥ ಶುಲ್ಕ ವಿಧಿಸುವುದನ್ನು ನಿಯಂತ್ರಿಸುವುದಕ್ಕಾಗಿ;

(22) ಪಾಲಿಕೆಯ ಅಡಿಯಲ್ಲಿ ಬರುವ ಉಪವನಗಳು, ಉದ್ಯಾನವನಗಳು ಮತ್ತಿತರ ಸ್ಥಳಗಳ ಬಳಕೆಯನ್ನು ನಿಯಂತ್ರಿಸುವುದಕ್ಕಾಗಿ;

(23) ಹೋಟೇಲುಗಳು, ವಸತಿಗೃಹಗಳು, ಖಾನಾವಳಿಗಳು, ಚಿತ್ರಮಂದಿರಗಳು, ಜಾತ್ರಾ ಸ್ಥಳಗಳು, ಕಲ್ಯಾಣ ಮಂಟಪಗಳು, ವಿಶ್ರಾಂತಿ ಗೃಹಗಳು, ರೆಸ್ಟೋರೆಂಟ್‌ಗಳು, ಭೋಜನ ಗೃಹಗಳು, ಕೆಫೆಗಳು, ಉಪಹಾರ ಕೊಠಡಿಗಳು, ಕಾಫಿ ಗೃಹಗಳು ಮತ್ತು ಯಾವುದೇ ಆಹಾರ ಅಥವಾ ಪಾನೀಯ ಸೇವನೆಗಾಗಿ ಸಾರ್ವಜನಿಕರು ಬಳಸುವ ಯಾವುದೇ ಸ್ಥಳಗಳು ಅಥವಾ ಯಾವುದೇ ಆಹಾರ ಮತ್ತು ಪಾನೀಯ ಮಾರುವ ಯಾವುದೇ ಜಾಗಗಳಿಗೆ ಪರವಾನಗಿ ನೀಡುವುದನ್ನು ನಿಯಂತ್ರಿಸುವುದಕ್ಕಾಗಿ;

(24) ಕೈಗಾರಿಕೆಗಳು, ವಾಣಿಜ್ಯ ಸಂಸ್ಥೆಗಳ ಮತ್ತು ನಿಗಮಿತ ಕಚೇರಿಗಳಿಗೆ ಪರವಾನಗಿ ನೀಡುವುದನ್ನು ನಿಯಂತ್ರಿಸುವುದಕ್ಕಾಗಿ;

(25) ಪಾವತಿಸುವ ಅತಿಥಿಗಳ ನಿವಾಸ ಮತ್ತು ಸೇವಾ ಗೃಹ ಸಮುಚ್ಚಯಗಳಿಗೆ ಪರವಾನಗಿ ನೀಡುವುದನ್ನು ನಿಯಂತ್ರಿಸುವುದಕ್ಕಾಗಿ;

(26) ಪಾಲಿದಾರಿಕೆ ಕಛೇರಿ ಮತ್ತು ವಾಸಿಸುವ ಸ್ಥಳಗಳಿಗೆ ಪರವಾನಗಿ ನೀಡುವುದನ್ನು ನಿಯಂತ್ರಿಸುವುದಕ್ಕಾಗಿ;

(27) ಆಸ್ಪತ್ರೆಗಳು ಮತ್ತು ನರ್ಸಿಂಗ್ ಹೋಮ್‌ಗಳಿಗೆ ಪರವಾನಗಿ ನೀಡುವುದನ್ನು ನಿಯಂತ್ರಿಸುವುದಕ್ಕಾಗಿ;

(28) ಕಾರ್ಖಾನೆಗಳು ಮತ್ತು ಯಾವುದೇ ಉದ್ದೇಶಗಳಿಗಾಗಿ ಹಾಗೂ ಅಲ್ಲಿ ಕೈಗೊಳ್ಳುವ ಯಾವುದೇ ಮಾರಾಟ ಅಥವಾ ಉತ್ಪಾದನೆಗಾಗಿ ಬಳಸುವ ಸ್ಥಳಗಳ ನೈರ್ಮಲ್ಯವನ್ನು ನಿಯಂತ್ರಿಸುವುದಕ್ಕಾಗಿ ಮತ್ತು ನಿರ್ವಹಿಸುವುದಕ್ಕಾಗಿ;

(29) (ಎ) ಮೃತದೇಹಗಳನ್ನು ಸುಡಲು ಶವಸಂಸ್ಕಾರ ಮತ್ತು ಶವಗಳನ್ನು ಸುಡುವುದನ್ನು ನಿಯಂತ್ರಿಸುವುದಕ್ಕಾಗಿ;

(ಬಿ) ಪಾಲಿಕೆಯು ನಿರ್ವಹಿಸುವಂಥ ರುದ್ರಭೂಮಿ ಮತ್ತು ಶವವನ್ನು ಸುಡುವ ಮೈದಾನಗಳು ಮತ್ತು ಸ್ಮಶಾನಗಳನ್ನು ಬಳಸಲು ಶುಲ್ಕಗಳನ್ನು ವಿಧಿಸುವುದಕ್ಕಾಗಿ;

(ಸಿ) ಮರಣ ಮತ್ತು ಮರಣಕ್ಕೆ ಕಾರಣವಾಗುವ ವಾಸ್ತವವನ್ನು ತಿಳಿಯುವುದಕ್ಕಾಗಿ;

(30) (ಎ) ಸಾರ್ವಜನಿಕ ಮತ್ತು ಖಾಸಗಿ ಮಾರುಕಟ್ಟೆಗಳು ಮತ್ತು ಅಂಗಡಿಗಳನ್ನು ಹಾಗೂ ಅದರಲ್ಲಿನ ಇತರ ಜಾಗಗಳನ್ನು ಪರಿಶೀಲಿಸುವುದಕ್ಕಾಗಿ;

(ಬಿ) ಅವುಗಳ ಬಳಕೆಯ ನಿಯಂತ್ರಣಕ್ಕಾಗಿ ಮತ್ತು ಅವುಗಳ ನೈರ್ಮಲ್ಯ ಪರಿಸ್ಥಿತಿಯನ್ನು ನಿಯಂತ್ರಿಸುವುದಕ್ಕಾಗಿ;

(31) (ಎ) ಕಸಾಯಿಖಾನೆಗಳು ಮತ್ತು ಮೃತ ಪ್ರಾಣಿಗಳ ಚರ್ಮವನ್ನು ಸುಲಿಯಲು ಮತ್ತು ಕತ್ತರಿಸಲು ಉಪಯೋಗಿಸುವ ಸ್ಥಳಗಳನ್ನು ನಿಯಂತ್ರಿಸುವುದಕ್ಕಾಗಿ ಹಾಗೂ ಮೇಲ್ವಿಚಾರಣೆ ಮಾಡುವುದಕ್ಕಾಗಿ;

(ಬಿ) ಪ್ರಾಣಿಗಳನ್ನು ಕೊಲ್ಲುವ ವಿಧಾನಗಳನ್ನು ನಿಯಂತ್ರಿಸುವುದಕ್ಕಾಗಿ ಮತ್ತು ಮೇಲ್ವಿಚಾರಣೆ ಮಾಡುವುದಕ್ಕಾಗಿ;

(ಸಿ) ನಗರದಲ್ಲಿ ಅಥವಾ ನಗರದ ಹೊರಗೆ ಪಾಲಿಕೆಯು ಒದಗಿಸಿದ ಅಥವಾ ಪರವಾನಗಿ ನೀಡಿರುವ ಕಸಾಯಿಖಾನೆಯಲ್ಲಿ ವ್ಯವಹಾರವನ್ನು ನಡೆಸುತ್ತಿರುವ ಮಾಂಸದ ವ್ಯಾಪಾರಿಗಳನ್ನು ನಿಯಂತ್ರಿಸುವುದು ಮತ್ತು ಮೇಲ್ವಿಚಾರಣೆ ಮಾಡುವುದಕ್ಕಾಗಿ;

(ಡಿ) ಮಾರುಕಟ್ಟೆಗಳು ಮತ್ತು ಕಸಾಯಿಖಾನೆಗಳ ನೈರ್ಮಲ್ಯ ಪರಿಸ್ಥಿತಿಯನ್ನು ನಿಯಂತ್ರಿಸುವುದು ಮತ್ತು ವಿನಿಯಮಿಸುವುದು ಹಾಗೂ ಅದರಲ್ಲಿನ ಕ್ರೂರ ಚಲನವಲನಗಳನ್ನು ತಡೆಗಟ್ಟುವುದು.

(32) ಮನುಷ್ಯರ ಅಥವಾ ಪ್ರಾಣಿಗಳಿಂದ ಬರುವ ಅಪಾಯಕಾರಿ ಕಾಯಿಲೆಗಳನ್ನು ತಡೆಗಟ್ಟುವುದಕ್ಕಾಗಿ;

(33) ಕಡ್ಡಾಯ ಲಸಿಕೆಯನ್ನು ಜಾರಿಗೊಳಿಸುವುದಕ್ಕಾಗಿ;

(34) ಬೆಂಕಿ ಹೊತ್ತಿಕೊಳ್ಳುವುದನ್ನು ತಡೆಗಟ್ಟುವುದಕ್ಕಾಗಿ;

(35) ಜಾಹೀರಾತುಗಳನ್ನು ನಿಷೇಧಿಸುವುದಕ್ಕಾಗಿ ಮತ್ತು ನಿಯಂತ್ರಿಸುವುದಕ್ಕಾಗಿ;

(36) ವಿವಾಹಗಳ ನೋಂದಣಿಗಾಗಿ;

319. ಸರ್ಕಾರದ ಮೂಲಕ ಉಪವಿಧಿಗಳ ಮಂಜೂರಾತಿ.- ಸರ್ಕಾರದಿಂದ ಮಂಜೂರಾದ ಹೊರತು ಮತ್ತು ಮಂಜೂರಾಗುವವರೆಗೆ ಈ ಅಧಿನಿಯಮದ ಅಡಿಯಲ್ಲಿ ಪಾಲಿಕೆಯು ರಚಿಸಿದ ಯಾವುದೇ ಉಪವಿಧಿಯು ಸಿಂಧುತ್ವವನ್ನು ಹೊಂದಿರತಕ್ಕದ್ದಲ್ಲ;

ಪರಂತು, ಒಂದು ತಿಂಗಳೊಳಗೆ ಮಂಜೂರಾತಿಯನ್ನು ನೀಡದಿದ್ದರೆ, ಉಪವಿಧಿಗಳಿಗೆ ಮಂಜೂರಾತಿ ನೀಡಲಾಗಿದೆಎಂದು ಭಾವಿಸತಕ್ಕದ್ದು.

320. ಉಪವಿಧಿಗಳನ್ನು ರಚಿಸುವುದಕ್ಕೆ ಮುಂಚಿನ ಪರತ್ತುಗಳು.- ಈ ಅಧಿನಿಯಮದ ಅಡಿಯಲ್ಲಿ ಉಪವಿಧಿಗಳನ್ನು ರಚಿಸುವಅಧಿಕಾರವು ಮುಂದಿನ ಪರತ್ತುಗಳಿಗೆ ಒಳಪಟ್ಟಿರುವುದು,-

(1) ಪ್ರಸ್ತಾವಿತ ಉಪವಿಧಿಯ ಕರಡನ್ನು ಸರ್ಕಾರಿ ರಾಜ್ಯಪತ್ರದಲ್ಲಿ ಮತ್ತು ಸ್ಥಳೀಯ ವೃತ್ತಪತ್ರಿಕೆಗಳಲ್ಲಿ ಪ್ರಕಟಿಸಬೇಕು;

(2) ಕರಡನ್ನು, ಸರ್ಕಾರಿ ರಾಜ್ಯಪತ್ರದಲ್ಲಿ ಅದರ ಪ್ರಕಟಣೆಯ ದಿನಾಂಕದಿಂದ ಮೂವತ್ತು ದಿನಗಳ ಅವಧಿ ಮುಕ್ತಾಯವಾಗುವವರೆಗೆ ಅಥವಾ ಪಾಲಿಕೆಯು ಗೊತ್ತುಪಡಿಸಬಹುದಾದಂಥ ದೀರ್ಘಾವಧಿಯು ಮುಕ್ತಾಯವಾಗುವವರೆಗೆ ಮತ್ತೆ ಮುಂದುವರಿಸತಕ್ಕದ್ದಲ್ಲ;

(3) ಕನಿಷ್ಠಪಕ್ಷ ಮೂವತ್ತು ದಿನಗಳವರೆಗೆ ಅಂಥ ಅವಧಿಯಲ್ಲಿ, ಕರಡಿನ ಮುದ್ರಿತ ಪ್ರತಿಯನ್ನು, ಸಾರ್ವಜನಿಕ ಪರಿಶೀಲನೆಗಾಗಿ ಪಾಲಿಕೆಯ ಕಚೇರಿಯಲ್ಲಿಡತಕ್ಕದ್ದು ಮತ್ತು ಉಚಿತವಾಗಿ ಯಾವುದೇ ಯುಕ್ತ ಸಮಯದಲ್ಲಿಅದನ್ನು ಪರಿಶೀಲಿಸಲು ಎಲ್ಲಾ ವ್ಯಕ್ತಿಗಳಿಗೆ ಅನುಮತಿಸಬೇಕು;

321. ಉಪವಿಧಿಗಳ ಬದಲಾಗಿ ನಿಯಮಗಳನ್ನು ರಚಿಸಲು ಸರ್ಕಾರದ ಅಧಿಕಾರ.- (1) 318ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ವಿಷಯಗಳಿಗೆ ಸಂಬಂಧಿಸಿದಂತೆ, ಪಾಲಿಕೆಯು, ಯಾವುವೇ ಉಪವಿಧಿಗಳನ್ನು ರಚಿಸಲು ವಿಫಲವಾದರೆ ಅಥವಾ ಅದು ರಚಿಸಿದ ಉಪವಿಧಿಗಳು ಸಮರ್ಪಕವಾಗಿಲ್ಲವೆಂದು ಅಭಿಪ್ರಾಯ ಪಟ್ಟರೆ, ಸರ್ಕಾರವು, ಅದು ಸೂಕ್ತವೆಂದು ಭಾವಿಸಬಹುದಾದ ಮಟ್ಟಿಗೆ ಅಂಥ ವಿಷಯಗಳಿಗೆ ಉಪಬಂಧ ಕಲ್ಪಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ಈ ಪ್ರಕರಣದ ಅಡಿಯಲ್ಲಿ ರಚಿಸಿದ ನಿಯಮಗಳನ್ನು, ಪಾಲಿಕೆಯು ರಚಿಸಿದ ಯಾವುದೇ ಉಪವಿಧಿಗೆ ಸೇರಿಸಬಹುದು, ಮಾರ್ಪಾಟು ಮಾಡಬಹುದು ಅಥವಾ ರದ್ದುಮಾಡಬಹುದು.

(3) ಈ ಪ್ರಕರಣದ ಅಡಿಯಲ್ಲಿ, ಯಾವುದೇ ನಿಯಮವನ್ನು ರಚಿಸುವ ಮುಂಚೆ, ಸರ್ಕಾರವು, ಅವುಗಳನ್ನು ರಚಿಸುವುದಕ್ಕೆ ಕಾರಣವನ್ನು ತೋರಿಸುವ ಅವಕಾಶವನ್ನು ಪಾಲಿಕೆಗೆ ನೀಡತಕ್ಕದ್ದು.

322. ನಿಯಮಗಳು, ವಿನಿಯಮಗಳು ಮತ್ತು ಉಪವಿಧಿಗಳ ಪ್ರಕಟಣೆ.- (1) ಈ ಅಧಿನಿಯಮದ ಅಡಿಯಲ್ಲಿ ಯಾವುದೇ ನಿಯಮ ಅಥವಾ ಉಪವಿಧಿಯನ್ನು ರಚಿಸಿದಾಗ, ಅಂಥ ನಿಯಮ ಅಥವಾ ಉಪವಿಧಿಯನ್ನು, ಇಂಗ್ಲಿಷ್ ಮತ್ತು ಕನ್ನಡ ಭಾಷೆಯಲ್ಲಿ ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸತಕ್ಕದ್ದು.

(2) ಉಪವಿಧಿಯು, ಮೇಲೆ ಹೇಳಿದಂತೆ ಅದನ್ನು ಪ್ರಕಟಿಸಿದ ತರುವಾಯ ಮೂರು ತಿಂಗಳಲ್ಲಿ ಕಾರ್ಯರೂಪಕ್ಕೆ ಬರತಕ್ಕದ್ದು.

(3) ಮುಖ್ಯ ಆಯುಕ್ತರು, ಜಾರಿಯಲ್ಲಿರುವ ಎಲ್ಲಾ ನಿಯಮಗಳು ಮತ್ತು ಉಪವಿಧಿಗಳನ್ನು ಸದರಿ ಭಾಷೆಗಳಲ್ಲಿ ಮುದ್ರಿತವಾಗುವಂತೆ ಮಾಡತಕ್ಕದ್ದು, ಮತ್ತು ಅದರ ಮುದ್ರಿತ ಪ್ರತಿಗಳನ್ನು ನಿಗದಿಪಡಿಸಿದ ಬೆಲೆಯನ್ನು ಸಂದಾಯ ಮಾಡಿದ ಮೇಲೆ ಯಾರೇ ಅರ್ಜಿದಾರನಿಗೆ ಮಾರಾಟವಾಗುವಂತೆ ಮಾಡತಕ್ಕದ್ದು.

(4) ಮುಖ್ಯ ಆಯುಕ್ತರು, ನಿಯಮಗಳ ಮತ್ತು ಉಪವಿಧಿಗಳ ಪ್ರತಿಗಳು ಮಾರಾಟಕ್ಕಿವೆ ಎಂದು ಸ್ಥಳೀಯ ವೃತ್ತ ಪತ್ರಿಕೆಗಳಲ್ಲಿ ಜಾಹೀರಾತು ನೀಡತಕ್ಕದ್ದು ಮತ್ತು ಅವುಗಳನ್ನು ಪಡೆಯಬಹುದಾದ ಸ್ಥಳ ಮತ್ತು ಯಾವ ವ್ಯಕ್ತಿಯಿಂದ ಮತ್ತು ಎಷ್ಟು ಬೆಲೆಯಲ್ಲಿ ಪಡೆಯಬಹುದು ಎಂಬುದನ್ನು ನಿರ್ದಿಷ್ಟಪಡಿಸತಕ್ಕದ್ದು.

(5) ಈ ಅಧಿನಿಯಮದ ಅಡಿಯಲ್ಲಿ ರಚಿಸಿದ ವಿನಿಯಮಗಳನ್ನು, ಪಾಲಿಕೆಯು ನಿರ್ಧರಿಸಬಹುದಾದಂಥ ರೀತಿಯಲ್ಲಿ ಪ್ರಕಟಿಸತಕ್ಕದ್ದು.

323. ನಿಯಮಗಳು, ಉಪವಿಧಿಗಳು ಮತ್ತು ವಿನಿಯಮಗಳ ಪ್ರದರ್ಶನ.- (1) ಉಪವಿಧಿಗಳು ಮತ್ತು ನಿಯಮಗಳು ಮತ್ತು ವಿನಿಯಮಗಳ ಮುದ್ರಿತ ಪ್ರತಿಗಳನ್ನು, ಪಾಲಿಕೆಯ ಕಚೇರಿಯ ಯಾವುದೇ ಎದ್ದು ಕಾಣುವ ಭಾಗದಲ್ಲಿ ನೇತುಹಾಕ ತಕ್ಕದ್ದು.

(2) ಪಾಲಿಕೆಯ ಯಾವೊಬ್ಬ ಅಧಿಕಾರಿ ಅಥವಾ ನೌಕರ, ಹಾಗೆ ಪ್ರದರ್ಶಿಸಲಾದ ಪ್ರತಿಗಳನ್ನು ಯಾವುದೇ ಸೂಕ್ತ ಸಮಯದಲ್ಲಿ ಪರಿಶೀಲಿಸುವುದರಿಂದ ಯಾರೇ ವ್ಯಕ್ತಿಯನ್ನು ಪ್ರತಿಬಂಧಿಸತಕ್ಕದ್ದಲ್ಲ.

(3) ಯಾರೇ ವ್ಯಕ್ತಿ, ಕಾನೂನುಬದ್ಧ ಅಧಿಕಾರವಿಲ್ಲದೆ, ಮೇಲೆ ಪ್ರದರ್ಶಿಸಲಾದ ಯಾವುದೇ ಪ್ರತಿಗಳನ್ನು ಅಥವಾ ಪ್ರತಿಗಳನ್ನು ಅಂಟಿಸಲಾಗಿರುವ ಯಾವುದೇ ಫಲಕವನ್ನು ಹಾಳು ಮಾಡತಕ್ಕದ್ದಲ್ಲ, ಕೆಡವತಕ್ಕದ್ದಲ್ಲ, ಹಾನಿ ಮಾಡತಕ್ಕದ್ದಲ್ಲ ಅಥವಾ ವಿರೂಪಗೊಳಿಸತಕ್ಕದ್ದಲ್ಲ.

324. ಅಪರಾಧಗಳ ಸಂಜ್ಞೇಯತೆ.- ಈ ಅಧಿನಿಯಮದ ವಿರುದ್ಧ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮದ, ಉಪವಿಧಿಯ, ವಿನಿಯಮದ ಅಥವಾ ಆದೇಶದ ವಿರುದ್ಧ ನಗರದೊಳಗೆಯಾಗಲಿ ಅಥವಾ ಹೊರಗೆಯಾಗಲಿ ಮಾಡಿದ ಎಲ್ಲ ಅಪರಾಧಗಳು ನಗರದಲ್ಲಿ ಅಧಿಕಾರ ವ್ಯಾಪ್ತಿ ಹೊಂದಿರುವ ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟರಿಂದ ಸಂಜ್ಞೇಯವಾಗಿರತಕ್ಕದ್ದು ಮತ್ತು ಅಂಥ ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟರು, ಪಾಲಿಕೆಯ ದರವನ್ನು ಅಥವಾ ಇತರ ತೆರಿಗೆಯನ್ನು ಸಂದಾಯ ಮಾಡಲು ಅವರು ಹೊಣೆಗಾರರಾಗಿರುವ ಅಥವಾ ಅವರು ವಿಧಿಸಿದ ಯಾವುದೇ ಜುಲ್ಮಾನೆಯನ್ನು ಪಾಲಿಕೆಯ ನಿಧಿಯ ಲೆಕ್ಕಕ್ಕೆ ಸಂದಾಯ ಮಾಡಲಾಗುವುದೋ ಆ ನಿಧಿಯಿಂದ ಅವರು ಪ್ರಯೋಜನ ಪಡೆಯುತ್ತಿರುವ ಕಾರಣ ಮಾತ್ರದಿಂದಲೇ ಅವರು ಅಂಥ ಅಪರಾಧದ ಅಥವಾ ಈ ಮೂಲಕ ನಿರಸನಗೊಳಿಸಿದ ಅಧಿನಿಯಮಿತಿಯ ವಿರುದ್ಧದ ಯಾವುದೇ ಅಪರಾಧದ ಸಂಜ್ಞೇಯತೆಯನ್ನು ತೆಗೆದುಕೊಳ್ಳಲು ಅಸಮರ್ಥರಾಗಿರುವುದಾಗಿ ಭಾವಿಸತಕ್ಕದ್ದಲ್ಲ.

325. ಪಾಲಿಕೆಯ ಭದ್ರತಾದಳ.- (1) ಪಾಲಿಕೆಯ ಭದ್ರತಾದಳವೆಂದು ಕರೆಯಲಾಗುವ ಒಂದು ದಳವನ್ನು,-

(i) ಪಾಲಿಕೆಯ ಒಡೆತನದಲ್ಲಿರುವ ಸ್ಥತ್ತಿನ ಉತ್ತಮ ಸಂರಕ್ಷಣೆಗಾಗಿ ಮತ್ತು ಭದ್ರತೆಗಾಗಿ;

(ii) ಆದಾಯದ ಸೋರಿಕೆಗೆ ಅಥವಾ ಪಾಲಿಕೆಗೆ ಸಂದಾಯವಾಗಬೇಕಾದ ಯಾವುದೇ ತೆರಿಗೆಗೆ ಸಂಬಂಧಪಟ್ಟ ಯಾವುದೇ ವಿಷಯವನ್ನು ಪತ್ತೆಹಚ್ಚುವಾಗ ಮತ್ತು ಅದರ ಬಗ್ಗೆ ತನಿಖೆ ಮಾಡುವಾಗ ಪಾಲಿಕೆಯ ಅಧಿಕಾರಿಗಳಿಗೆ ನೆರವಾಗುವುದಕ್ಕಾಗಿ;

(iii) ಈ ಅಧಿನಿಯಮದ ಅಥವಾ ಅದರ ಅಡಿಯಲ್ಲಿ ರಚಿಸಿದ ಯಾವುದೇ ನಿಯಮದ, ಉಪವಿಧಿಯ ಅಥವಾ ವಿನಿಯಮದ ಅಥವಾ ಆದೇಶದ ಮೇರೆಗೆ ಯಾರೇ ವ್ಯಕ್ತಿಯು ಯಾವುದೇ ಅಪರಾಧವನ್ನು ಮಾಡುವುದಕ್ಕೆ ಯಾವುದೇ ಸಂಚು ಮಾಡುತ್ತಿರುವುದರ ಬಗ್ಗೆ ಅಥವಾ ಆ ಅಪರಾಧವನ್ನು ಮಾಡಿರುವುದರ ಬಗ್ಗೆ ಯಾವುದೇ ಮಾಹಿತಿಯನ್ನು ಪರಿಣಾಮಕಾರಿಯಾಗಿ ತಿಳಿಸುವುದಕ್ಕಾಗಿ ಮತ್ತು ಪಡೆಯುವುದಕ್ಕಾಗಿ

- ರಚಿಸತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು.

(2) ಪಾಲಿಕೆಯ ಭದ್ರತಾದಳವು, ಪಾಲಿಕೆಯು ನಿರ್ಧರಿಸಬಹುದಾದಂಥ ಸಂಖ್ಯೆಯ ಮೇಲ್ವಿಚಾರಣಾ ಅಧಿಕಾರಿಗಳನ್ನು ಮತ್ತು ಸಿಬಂಬದಿಯನ್ನು ಒಳಗೊಂಡಿರತಕ್ಕದ್ದು ಮತ್ತು ನಿಯಮಿಸಬಹುದಾದಂಥ ನಿಯಮಗಳಿಗೆ ಅನುಸಾರವಾಗಿ ಮುಖ್ಯ ಆಯುಕ್ತರು ಅವರನ್ನು ನೇಮಕಮಾಡತಕ್ಕದ್ದು.

(3) ಮುಖ್ಯ ಆಯುಕ್ತರು, ಪಾಲಿಕೆಯ ಭದ್ರತಾದಳದ ಮೇಲೆ ಅಧೀಕ್ಷಣೆ ಮತ್ತು ನಿಯಂತ್ರಣ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಭದ್ರತಾದಳದ ಸಿಬಂಬದಿಯ ನೇಮಕಾತಿ, ಸೇವಾ ಷರತ್ತುಗಳು, ನಡತೆ ಮತ್ತು ಶಿಸ್ತುಪಾಲನೆಗೆ ಸಂಬಂಧಿಸಿದ ವಿಷಯಗಳು ನಿಯಮಿಸಬಹುದಾದಂಥ ನಿಯಮಗಳಿಗೆ ಒಳಪಟ್ಟಿರತಕ್ಕದ್ದು.

ಅಧ್ಯಾಯ XXIV
ದಂಡಗಳು

326. ಅಧಿನಿಯಮದ ಉಲಂಘನೆಗಾಗಿ ದಂಡ.- ಈ ಅಧಿನಿಯಮದ ಯಾವುವೇ ಉಪಬಂಧಗಳನ್ನು ಉಲಂಘಿಸಿದ ಯಾರೇ ವ್ಯಕ್ತಿಯು ಒಂದು ವರ್ಷದ ವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಮತ್ತು ಎರಡು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

327. ನಿಯಮಗಳ ಉಲಂಘನೆಗಾಗಿ ದಂಡ.- ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಯಾವುವೇ ಉಪಬಂಧಗಳನ್ನು ಉಲಂಘಿಸಿದ ಯಾರೇ ವ್ಯಕ್ತಿಯು ಎರಡು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಆರು ತಿಂಗಳವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

328. ವಿನಿಯಮಗಳ ಉಲಂಘನೆಗಾಗಿ ದಂಡ.- ಈ ಅಧಿನಿಯಮದ ಮೇರೆಗೆ ರಚಿಸಿದ ವಿನಿಯಮಗಳ ಯಾವುವೇ ಉಪಬಂಧಗಳನ್ನು ಉಲಂಘಿಸಿದ ಯಾರೇ ವ್ಯಕ್ತಿಯು ಎರಡು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

329. ಉಪವಿಧಿಗಳ ಉಲಂಘನೆಗಾಗಿ ದಂಡ.- ಈ ಅಧಿನಿಯಮದ ಮೇರೆಗೆ ರಚಿಸಿದ ಉಪವಿಧಿಗಳ ಯಾವುವೇ ಉಪಬಂಧಗಳನ್ನು ಉಲಂಘಿಸಿದ ಯಾರೇ ವ್ಯಕ್ತಿಯು ಎರಡು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

330. ಪಾಲಿಕೆಯ ಸ್ವತ್ತಿನ ಅನಧಿಕೃತ ಬಳಕೆಗೆ ದಂಡನೆ.- ಯಾವೊಬ್ಬನು, ಪಾಲಿಕೆಯ ಯಾವುದೇ ಸ್ವತ್ತನ್ನು ಅಪ್ರಾಮಾಣಿಕವಾಗಿ ದುರುಪಯೋಗಪಡಿಸಿಕೊಂಡರೆ ಅಥವಾ ತನ್ನ ಸಂ್ವತ ಬಳಕೆಗೆ ಪರಿವರ್ತಿಸಿಕೊಂಡರೆ ಅಥವಾ ಅಂಥ ಸ್ವತ್ತನ್ನು ಅನುಚಿತ ಅಥವಾ ಅನಧಿಕೃತ ಬಳಕೆಗೆ ತೊಡಗಿಸಿದರೆ, ಅವನು, ಅಪರಾಧ ನಿರ್ಣಯವಾದ ಮೇಲೆ ಮೂರು ತಿಂಗಳವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಐವತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

331. ಸಾರ್ವಜನಿಕ ಬೀದಿಯಲ್ಲಿ ಅಪಾಯಕರವಾದ ಸ್ಥಿತಿಯಲ್ಲಿ ವಾಹನವನ್ನು ಮತ್ತು ಪ್ರಾಣಿಯನ್ನು ಬಿಟ್ಟಿರುವುದಕ್ಕಾಗಿ ದಂಡನೆ.- (1) ವಾಹನದ ಅಥವಾ ಪ್ರಾಣಿಯ ಜವಬ್ದಾರಿಯನ್ನು ಹೊಂದಿರುವ ಯಾರೇ ವ್ಯಕ್ತಿಯು, ಯಾವುದೇ ಸಾರ್ವಜನಿಕ ಬೀದಿಯಲ್ಲಿ ಅಥವಾ ಸಾರ್ವಜನಿಕ ಸ್ಥಳದಲ್ಲಿ ಸಾರ್ವಜನಿಕ ಬೀದಿಯ ಇತರೆ ಬಳಕೆದಾರರಿಗೆ ಅಪಾಯ, ಅಡ್ಡಿ ಅಥವಾ ಅನುಚಿತ ಅನಾನುಕೂಲ ಅಥವಾ ಉಪದ್ರವವನ್ನು ಉಂಟುಮಾಡುವ ಅಥವಾ ಉಂಟುಮಾಡುವ ಸಂಭವವಿರುವಂಥ ಸ್ಥಿತಿಯಲ್ಲಿ ಅಥವಾ ಅಂಥ ಪರಿಸ್ಥಿತಿಯಲ್ಲಿ ಅಥವಾ ಸಂದರ್ಭಗಳಲ್ಲಿ ವಾಹನವು ಅಥವಾ ಪ್ರಾಣಿಯು ನಿಲ್ಲಲು ಕಾರಣನಾಗತಕ್ಕದ್ದಲ್ಲ ಅಥವಾ ಅದಕ್ಕೆ ಅವಕಾಶ ಕೊಡತಕ್ಕದ್ದಲ್ಲ ಮತ್ತು ವಾಹನದ ಅಥವಾ ಪ್ರಾಣಿಯ ಜವಾಬ್ದಾರಿಯನ್ನು ಹೊಂದಿರುವ ಯಾರೇ ವ್ಯಕ್ತಿಯು ಯಾವುದೇ ವಾಹನವು ಅಥವಾ ಪ್ರಾಣಿಯು ಸರಿಯಾದ ನಿಯಂತ್ರಣದಲ್ಲಿದ್ದ ಹೊರತು ಅದನ್ನು ಸಾರ್ವಜನಿಕ ಬೀದಿಯಲ್ಲಿ ಅಥವಾ ಸಾರ್ವಜನಿಕ ಸ್ಥಳದಲ್ಲಿ ನಿಲ್ಲಲು ಅವಕಾಶ ಕೊಡತಕ್ಕದ್ದಲ್ಲ.

(2) (1)ನೇ ಉಪ-ಪ್ರಕರಣವನ್ನು ಉಲಂಘಿಸುವ ಯಾವೊಬ್ಬನು, ಅಪರಾಧ ನಿರ್ಣಯವಾದ ಮೇಲೆ ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

332. ಅಪರಾಧದ ರಾಜಿ.- ಈ ಅಧಿನಿಯಮದ 143, 286, 290ನೇ ಪ್ರಕರಣಗಳ ಅಡಿಯಲ್ಲಿ ದಂಡನೀಯವಾದ ಯಾವುದೇ ಅಪರಾಧವನ್ನು ಎಸಗಿರುವ ಅಥವಾ ಎಸಗಿನಿರುವನೆಂದು ಯುಕ್ತವಾಗಿ ಸಂದೇಹಿಸಲ್ಪಟ್ಟ ಯಾವೊಬ್ಬ ವ್ಯಕ್ತಿಯಿಂದ, ಮುಖ್ಯ ಆಯುಕ್ತರು ಪ್ರಾಧಿಕೃತಗೊಳಿಸಿದ ಗ್ರೂಪ್-ಬಿ ದರ್ಜೆಗೆ ಕಡಿಮೆಯಲ್ಲದ ಯಾವೊಬ್ಬ ಅಧಿಕಾರಿಯು, ಅಪರಾಧವನ್ನು ಎಸಗಿರುವಂಥ ಅಥವಾ ಅಪರಾಧ ಎಸಗಿರುವನೆಂದು ಯುಕ್ತವಾಗಿ ಸಂದೇಹಿಸಲ್ಪಟ್ಟಿರುವ ಅಪರಾಧಕ್ಕೆ ರಾಜಿ ರೂಪದಲ್ಲಿ ಈ ಅಧಿನಿಯಮದ ಅಡಿಯಲ್ಲಿ ನಿರ್ದಿಷ್ಟಪಡಿಸಲಾದಂಥ ಮೊಬಲಗು ಅಥವಾ ನಿಯಮಿಸಬಹುದಾದಂಥ ಯಾವುದೇ ಹಣದ ಮೊಬಲಗನ್ನು ಸ್ವೀಕರಿಸಬಹುದು ಮತ್ತು ಪ್ರಾಧಿಕೃತಗೊಳಿಸಿದ ಅಧಿಕಾರಿಗೆ ಅಂಥ ಮೊಬಲಗನ್ನು ಸಂದಾಯ ಮಾಡಿದ ನಂತರ ಅಂಥ ವ್ಯಕ್ತಿಯು ಅಭಿರಕ್ಷೆಯಲ್ಲಿದ್ದರೆ ಆತನನ್ನು ಬಿಡುಗಡೆ ಮಾಡತಕ್ಕದ್ದು ಮತ್ತು ಅದೇ ಕೃತ್ಯದ ಸಂಬಂಧದಲ್ಲಿ ಅಂಥ ವ್ಯಕ್ತಿಯ ವಿರುದ್ಧ ಹೆಚ್ಚಿನ ವ್ಯವಹರಣೆಗಳನ್ನು ಕೈಗೊಳ್ಳತಕ್ಕದ್ದಲ್ಲ.

333. ಕೆಲವು ಉಪವಿಧಿಗಳಿಗೆ ಪೂರ್ವಾನ್ವಯ ಪರಿಣಾಮವನ್ನು ಕೊಡಲು ಅಧಿಕಾರ ಮತ್ತು ಉಪವಿಧಿಗಳ ಉಲಂಘನೆಗಾಗಿ ದಂಡನೆಗಳು.- (1) ಕಟ್ಟಡಗಳಿಗೆ ಮತ್ತು ಕಟ್ಟಡಗಳಿಗೆ ಸಂಬಂಧಿಸಿದಂತೆ ಶೌಚಗೃಹ, ಭೂ-ಶೌಚಗೃಹಗಳು, ಕಕ್ಕಸುಗಳು, ಬೂದಿಗುಂಡಿಗಳು, ಘನತ್ಯಾಜ್ಯ ನಿರ್ವಹಣೆ ಮತ್ತು ರೊಚ್ಚುಗುಂಡಿಗಳ ಚರಂಡಿ ವ್ಯವಸ್ಥೆ ಮಟ್ಟಕ್ಕೆ ನೀರು ಸರಬರಾಜು ಮಾಡುವುದರ ಬಗ್ಗೆ ಮತ್ತು ನೀರು ಹರಿಸಿ ತೊಳೆಯುವುದಕ್ಕಾಗಿ ಶೌಚಗೃಹಗಳಿಗೆ ಸಾಕಷ್ಟು ನೀರು ಸರಬರಾಜು ಇಟ್ಟುಕೊಂಡು ಬರುವುದಕ್ಕೆ ಸಂಬಂಧಿಸಿದಂತೆ ಈ ಅಧಿನಿಯಮದ ಅಡಿಯಲ್ಲಿ ಉಪವಿಧಿಗಳನ್ನು ರಚಿಸುವುದಕ್ಕೆ ಮುಂಚೆ, ನಿರ್ಮಿಸಿದ ಕಟ್ಟಡಗಳಿಗೆ, ಪರಿಣಾಮಕಾರಿ ಆಗುವಂತೆ, ಉಪವಿಧಿಗಳನ್ನು ರಚಿಸಬಹುದು.

(2) 318ನೇ ಪ್ರಕರಣ ಮತ್ತು ಈ ಪ್ರಕರಣದ ಅಡಿಯಲ್ಲಿ ಯಾವುದೇ ಉಪವಿಧಿಯನ್ನು ರಚಿಸುವಾಗ, ಪಾಲಿಕೆಯು, ಅದರ ಉಲಂಘನೆಗಾಗಿ ಈ ಮುಂದಿನವುಗಳನ್ನು ಉಪಬಂಧಿಸಬಹುದು.-

(ಎ) ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಮತ್ತು ಮುಂದುವರಿಯುತ್ತಿರುವ ಉಲಂಘನೆ ಸಂದರ್ಭದಲ್ಲಿ, ಮೊದಲನೆಯ ಉಲಂಘನೆಗಾಗಿ ಅಪರಾಧ

ನಿರ್ಣಯವಾದ ತರುವಾಯ ಉಲಂಘನೆ ಮುಂದುವರೆಯುವ ಅವಧಿಯಲ್ಲಿ ಪ್ರತಿ ದಿನಕ್ಕೆ ಮೂರು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ; ದಂಡಿತನಾಗತಕ್ಕದ್ದು; ಅಥವಾ

(ಬಿ) ಅಂಥ ಉಲಂಘನೆಯನ್ನು ಮುಂದುವರಿಸದಿರಲು ಮುಖ್ಯ ಆಯುಕ್ತರಿಂದ ನೋಟೀಸನ್ನು ಸ್ವೀಕರಿಸಿದ ತರುವಾಯ ಉಲಂಘನೆಯು ಮುಂದುವರಿಯುವ ಅವಧಿಯಲ್ಲಿ ಪ್ರತಿ ದಿನಕ್ಕೆ ಎರಡು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯವಾಗತಕ್ಕದ್ದು.

ಅಧ್ಯಾಯ XXV
ಸಂಕೀರ್ಣ

334. ಸರ್ಕಾರಕ್ಕೆ, ಅಧಿಕಾರಿಗಳಿಗೆ, ಪಾಲಿಕೆ ಪ್ರಾಧಿಕಾರಗಳಿಗೆ ಮತ್ತು ನೌಕರರಿಗೆ ರಕ್ಷಣೆ.- ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮದ, ಉಪವಿಧಿಯ, ವಿನಿಯಮದ ಅಥವಾ ಆದೇಶದ ಮೇರೆಗೆ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯಕ್ಕೆ ಸಂಬಂಧಿಸಿದಂತೆ ಸರ್ಕಾರದ ಅಥವಾ ಯಾವುದೇ ಪಾಲಿಕೆಯ ಪ್ರಾಧಿಕಾರದ ಅಥವಾ ಅಧಿಕಾರಿಯ ಅಥವಾ ನೌಕರನ ವಿರುದ್ಧ ಅಥವಾ ಸರ್ಕಾರದ ಅಥವಾ ಯಾವುದೇ ಪಾಲಿಕೆಯ ಪ್ರಾಧಿಕಾರಿಯ ಅಥವಾ ಅಧಿಕಾರಿಯ ಅಥವಾ ನೌಕರನ ನಿರ್ದೇಶನದ ಮೇರೆಗೆ ಕಾರ್ಯನಿರ್ವಹಿಸುತ್ತಿರುವ ಯಾರೇ ವ್ಯಕ್ತಿಯ ವಿರುದ್ಧ ಯಾವುದೇ ದಾವೆಯನ್ನು, ಪ್ರಾಸಿಕ್ಯೂಷನನ್ನು ಅಥವಾ ಇತರ ಕಾನೂನು ವ್ಯವಹರಣೆಗಳನ್ನು ಹೂಡಲು ಅವಕಾಶವಿರಕ್ಕದ್ದಲ್ಲ.

335. ಮೇಯರ್, ಉಪ-ಮೇಯರ್, ಮುಂತಾದವರ ಪ್ರಾಸಿಕ್ಯೂಷನ್‌ಗೆ ಮಂಜೂರಾತಿ.- ಮೇಯರ್ ಅಥವಾ ಉಪಮೇಯರ್ ಅಥವಾ ಯಾರೇ ಕೌನ್ಸಿಲರು ಅಥವಾ ಮುಖ್ಯ ಆಯುಕ್ತರು ಅಥವಾ ಪ್ರತಿನಿಯೋಜನೆಯ ಮೇಲೆ ಪಾಲಿಕೆಯಲ್ಲಿ ಕೆಲಸ ಮಾಡುತ್ತಿರುವ ಸರ್ಕಾರದ ಯಾರೇ ಅಧಿಕಾರಿಯು ತನ್ನ ಹುದ್ದೆಯ ಕರ್ತವ್ಯವನ್ನು ನಿರ್ವಹಿಸುತ್ತಿರುವಾಗ ಅಥವಾ ನಿರ್ವಹಿಸುತ್ತಿರುವನೆಂದು ತಾತ್ಪರ್ಯವಾಗುವಾಗ ಅವನು ಯಾವುದೇ ಅಪರಾಧವನ್ನು ಮಾಡಿರುವುದಾಗಿ ಆರೋಪಿತನಾಗಿದ್ದರೆ ಮ್ಯಾಜಿಸ್ಟ್ರೇಟರು ಸರ್ಕಾರದ ಪೂರ್ವ ಮಂಜೂರಾತಿಯ ಹೊರತು, ಅಂಥ ಅಪರಾಧದ ಸಂಜ್ಞೇಯತೆಯನ್ನು ತೆಗೆದುಕೊಳ್ಳತಕ್ಕದ್ದಲ್ಲ.

336. ನಿರ್ಧರಣೆ, ಇತ್ಯಾದಿಯನ್ನು ಆಕ್ಷೇಪಿಸತಕ್ಕದ್ದಲ್ಲ.- (1) ಈ ಅಧಿನಿಯಮದ ಅಧಿಕಾರದ ಮೇರೆಗೆ ಮಾಡಲಾದ ಯಾವುದೇ ನಿರ್ಧರಣೆಯನ್ನು ಅಥವಾ ತಗಾದೆಯನ್ನು ಮತ್ತು ವಿಧಿಸಲಾದ ಯಾವುದೇ ಚಾರ್ಜನ್ನು,-

(ಎ) ಯಾರೇ ವ್ಯಕ್ತಿಯ ಹೆಸರು, ನಿವಾಸ, ವ್ಯವಹಾರ ಅಥವಾ ಉದ್ಯೋಗದ ಸ್ಥಳಕ್ಕೆ ಸಂಬಂಧಿಸಿದಂತೆ; ಅಥವಾ

(ಬಿ) ಯಾವುದೇ ಸ್ವತ್ತಿನ ಅಥವಾ ವಸ್ತುವಿನ ವರ್ಣನೆಯಲ್ಲಿ; ಅಥವಾ

(ಸಿ) ನಿರ್ಧರಿಸಿದ, ತಗಾದೆ ಮಾಡಿದ ಅಥವಾ ವಿಧಿಸಿದ ಮೊಬಲಗಿಗೆ ಸಂಬಂಧಿಸಿದಂತೆ

- ಯಾವುದೇ ಲಿಪಿಕ ಪ್ರಮಾದದ ಕಾರಣದಿಂದಾಗಿ ಅಥವಾ ಯಾವುದೇ ತಪ್ಪಿನ ಕಾರಣದಿಂದಾಗಿ ಆಕ್ಷೇಪಿಸತಕ್ಕದ್ದಲ್ಲ ಅಥವಾ ಅದರ ಮೇಲೆ ಪರಿಣಾಮ ಉಂಟಾಗತಕ್ಕದ್ದಲ್ಲ:

ಪರಂತು, ಈ ಅಧಿನಿಯಮದ ಉಪಬಂಧಗಳನ್ನು ಸಾರತಃ ಮತ್ತು ಕಾರ್ಯತಃ ಪಾಲಿಸಿರಬೇಕು ಮತ್ತು ಈ ಅಧಿನಿಯಮದ ಮೇರೆಗೆ ಯಾವುದೇ ವ್ಯವಹರಣೆಗಳನ್ನು ಅದರ ರೂಪದಲ್ಲಿಯ ದೋಷ ಮಾತ್ರದಿಂದಲೇ ಯಾವುದೇ ನ್ಯಾಯಾಲಯವು ರದ್ದುಗೊಳಿಸತಕ್ಕದ್ದಲ್ಲ ಅಥವಾ ತಳ್ಳಿಹಾಕತಕ್ಕದ್ದಲ್ಲ.

(2) ಈ ಅಧಿನಿಯಮದ ಅಧಿಕಾರದ ಮೇರೆಗೆ ಸಂಗ್ರಹಿಸಲಾದ ಹಣದ ಯಾವುದೇ ಮೊತ್ತವನ್ನು ವಸೂಲು ಮಾಡಲು ಅಥವಾ ಸದರಿ ಅಧಿಕಾರದ ಮೇರೆಗೆ ಮಾಡಲಾದ ಯಾವುದೇ ನಿರ್ಧರಣೆಯ ಅಥವಾ ಹಣದ ಸಂಗ್ರಹಣೆಯ ಕಾರಣದಿಂದಾಗಿ ಉಂಟಾದ ಹಾನಿಗೆ ಸಂಬಂಧಿಸಿದಂತೆ ಹಾನಿ ಪರಿಹಾರಗಳನ್ನು ವಸೂಲು ಮಾಡಲು ಯಾವುದೇ ನ್ಯಾಯಾಲಯದಲ್ಲಿ ಯಾವುದೇ ದಾವೆಯನ್ನು ಹೂಡತಕ್ಕದ್ದಲ್ಲ:

ಪರಂತು, ಈ ಅಧಿನಿಯಮದ ಉಪಬಂಧಗಳನ್ನು ಸಾರತಃ ಮತ್ತು ಕಾರ್ಯತಃ ಪಾಲಿಸಿರಬೇಕು.

(3) ಈ ಅಧಿನಿಯಮದ ಮೇರೆಗಿನ ಯಾವುದೇ ಜಪ್ತಿ ಅಥವಾ ಮಾರಾಟವನ್ನು, ಈ ಅಧಿನಿಯಮದ ಉಪಬಂಧಗಳನ್ನು, ನಿಯಮಗಳನ್ನು ಮತ್ತು ಉಪವಿಧಿಗಳನ್ನು ಸಾರತಃ ಮತ್ತು ಕಾರ್ಯತಃ ಪಾಲಿಸಿದ್ದರೆ, ಬಿಲ್ಲಿನಲ್ಲಿ, ನೋಟೀಸಿನಲ್ಲಿ, ಅನುಸೂಚಿಯಲ್ಲಿ, ನಮೂನೆಯಲ್ಲಿ, ಸಮನುಗಳಲ್ಲಿ, ತಗಾದೆ ನೋಟೀಸಿನಲ್ಲಿ, ಜಪ್ತಿ ವಾರಂಟಿನಲ್ಲಿ, ವಿವರಣ ಪಟ್ಟಿಯಲ್ಲಿ ಅಥವಾ ಅದಕ್ಕೆ ಸಂಬಂಧಪಟ್ಟ ಇತರ ವ್ಯವಹರಣೆಯಲ್ಲಿ ಯಾವುದೇ ಪ್ರಮಾದ, ದೋಷ ಇರುವ ಕಾರಣದಿಂದಾಗಿ ಕಾನೂನುಬಾಹಿರವೆಂದು ಭಾವಿಸತಕ್ಕದ್ದಲ್ಲ ಅಥವಾ ಅವುಗಳನ್ನು ತಯಾರಿಸುವ ಯಾರೇ ವ್ಯಕ್ತಿಯನ್ನು ಉಲಂಘನೆಕಾರನೆಂದು ಭಾವಿಸತಕ್ಕದ್ದಲ್ಲ:

ಪರಂತು, ಯಾವುದೇ ಅಕ್ರಮತೆಯಿಂದ ಬಾಧಿತನಾದ ಪ್ರತಿಯೊಬ್ಬ ವ್ಯಕ್ತಿಯು ಅವನು ಅನುಭವಿಸಿದ ಯಾವುದೇ ವಿಶೇಷ ಹಾನಿಗಾಗಿ ಪರಿಹಾರವನ್ನು ವಸೂಲಮಾಡಬಹುದು.

337. ಪೊಲೀಸು ಅಧಿಕಾರಿಗಳ ಕರ್ತವ್ಯಗಳು.- ಪ್ರತಿಯೊಬ್ಬ ಪೊಲೀಸು ಅಧಿಕಾರಿಯ ಕರ್ತವ್ಯವು,-

(ಎ) ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮದ, ಉಪವಿಧಿಯ, ಅಥವಾ ವಿನಿಯಮಗಳ ಮೇರೆಗಿನ ಯಾವುದೇ ಅಪರಾಧವನ್ನು ಮಾಡುವುದಕ್ಕೆ ಸಂಚು ಮಾಡಿರುವುದರ ಬಗ್ಗೆ ಅಥವಾ ಆ ಅಪರಾಧವನ್ನು ಮಾಡಿರುವುದರ ಬಗ್ಗೆ ತಾನು ಸ್ವೀಕರಿಸುವಂಥ ಯಾವುದೇ ಮಾಹಿತಿಯನ್ನು ವಿಳಂಬ ಮಾಡದೆ ಪಾಲಿಕೆಯ ಯುಕ್ತ ಅಧಿಕಾರಿಗೆ ತಿಳಿಸುವುದು;

(ಬಿ) ಈ ಅಧಿನಿಯಮದ ಅಥವಾ ಅಂಥ ಯಾವುದೇ ನಿಯಮದ, ಉಪವಿಧಿಯ ಅಥವಾ ವಿನಿಯಮದ ಮೇರೆಗೆ ಆಯುಕ್ತರಲ್ಲಿ ಅಥವಾ ಪಾಲಿಕೆಯ ಅಂಥ ಅಧಿಕಾರಿಯಲ್ಲಿ ಅಥವಾ ನೌಕರನಲ್ಲಿ ಅಥವಾ ವ್ಯಕ್ತಿಯಲ್ಲಿ ನಿಹಿತವಾದ ಯಾವುದೇ ಅಧಿಕಾರವನ್ನು ಕಾನೂನುಸಮ್ಮತವಾಗಿ ಚಲಾಯಿಸುವುದಕ್ಕಾಗಿ, ತಮ್ಮ ನೆರವನ್ನು ಯುಕ್ತವಾಗಿ ಕೋರುವ ಮುಖ್ಯ ಆಯುಕ್ತರಿಗೆ ಅಥವಾ ಮುಖ್ಯ ಆಯುಕ್ತರು ಯಾರಿಗೆ ಅಧಿಕಾರಗಳನ್ನು ಕಾನೂನುಬದ್ಧವಾಗಿ ಪ್ರತ್ಯಾಯೋಜಿಸಿರುವರೋ ಆ ಯಾರೇ ಪಾಲಿಕೆಯ ಅಧಿಕಾರಿಗೆ ಅಥವಾ ನೌಕರನಿಗೆ ಅಥವಾ ಯಾರೇ ವ್ಯಕ್ತಿಗೆ ನೆರವಾಗುವುದು ಆಗಿರತಕ್ಕದ್ದು ಮತ್ತು ಅಂಥ ಎಲ್ಲ ಉದ್ದೇಶಗಳಿಗಾಗಿ, ತಮ್ಮ ಸಾಮಾನ್ಯ ಪೊಲೀಸು ಕರ್ತವ್ಯಗಳನ್ನು ಚಲಾಯಿಸುವಾಗ ಅವರು ಯಾವ ಅಧಿಕಾರಗಳನ್ನು ಹೊಂದಿರುತ್ತಾರೋ ಅದೇ ಅಧಿಕಾರಗಳನ್ನು ಹೊಂದಿರತಕ್ಕದ್ದು.

338. ವ್ಯಕ್ತಿಗಳನ್ನು ದಸ್ತಗಿರಿ ಮಾಡಲು ಪೊಲೀಸು ಅಧಿಕಾರಿಯ ಅಧಿಕಾರ.- (1) ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮದ, ಉಪವಿಧಿಯ ಅಥವಾ ವಿನಿಯಮದ ಯಾವುದೇ ಉಪಬಂಧದ ವಿರುದ್ಧ ಯಾರೇ ವ್ಯಕ್ತಿಯು ಅಪರಾಧ ಮಾಡುವುದನ್ನು ಯಾರೇ ಪೊಲೀಸು ಅಧಿಕಾರಿಯು ನೋಡಿದರೆ ತಮಗೆ ಅಂಥ ವ್ಯಕ್ತಿಯ ಹೆಸರು ಮತ್ತು ವಿಳಾಸ ಗೊತ್ತಿರದಿದ್ದರೆ ಮತ್ತು ಆ ಬಗ್ಗೆ ಕೇಳಿದ ಮೇಲೆ ಸದರಿ ವ್ಯಕ್ತಿಯು ತನ್ನ ಹೆಸರನ್ನು ಮತ್ತು ವಿಳಾಸವನ್ನು ಕೊಡಲು ನಿರಾಕರಿಸಿದ್ದರೆ ಅಥವಾ ಅಂಥ ಅಧಿಕಾರಿಯು ಸುಳ್ಳೆಂದು ನಂಬಲು ಕಾರಣವಿರುವಂಥ ಹೆಸರು ಮತ್ತು ವಿಳಾಸವನ್ನು ಅವನು ಕೊಟ್ಟರೆ ಅವರು ಅಂಥ ವ್ಯಕ್ತಿಯನ್ನು ದಸ್ತಗಿರಿ ಮಾಡತಕ್ಕದ್ದು.

(2) ಉಪಪ್ರಕರಣ (1)ರ ಮೇರೆಗೆ ದಸ್ತಗಿರಿ ಮಾಡಿದ ಯಾರೇ ವ್ಯಕ್ತಿಯನ್ನು,-

(ಎ) ಅವನ ನಿಜವಾದ ಹೆಸರು ಮತ್ತು ವಿಳಾಸವನ್ನು ಖಚಿತಪಡಿಸಿಕೊಂಡ ತರುವಾಯ; ಅಥವಾ

(ಬಿ) ದಸ್ತಗಿರಿ ಮಾಡಿದ ವೇಳೆಯಿಂದ ಇಪ್ಪತ್ನಾಲ್ಕು ಗಂಟೆಗೆ ಮೀರದಂತೆ, ಮ್ಯಾಜಿಸ್ಟ್ರೇಟರ ಮುಂದೆ ಅವನನ್ನು ಹಾಜರುಪಡಿಸಲು ಅವಶ್ಯವಾದುದಕ್ಕಿಂತ ಯಾವುದೇ ಹೆಚ್ಚಿನ ಕಾಲ ಮ್ಯಾಜಿಸ್ಟ್ರೇಟರ ಆದೇಶವಿಲ್ಲದೆಯೇ ಅಭಿರಕ್ಷೆಯಲ್ಲಿ ತಡೆಹಿಡಿದಿಟ್ಟುಕೊಳ್ಳತಕ್ಕದ್ದಲ್ಲ.

339. ಪಾಲಿಕೆಯ ನೌಕರರು ಪೊಲೀಸು ಅಧಿಕಾರಿಯ ಅಧಿಕಾರಗಳನ್ನು ಚಲಾಯಿಸುವುದು.- ಸರ್ಕಾರವು, ಈ ಅಧಿನಿಯಮದ ಉದ್ದೇಶಗಳಿಗಾಗಿ ಪೊಲೀಸು ಅಧಿಕಾರಿಯ ಅಧಿಕಾರಗಳನ್ನು ಚಲಾಯಿಸಲು ಪಾಲಿಕೆಯ ಯಾರೇ ಅಧಿಕಾರಿಗೆ ಅಥವಾ ನೌಕರನಿಗೆ ಅಥವಾ ಪಾಲಿಕೆಯ ಅಧಿಕಾರಿಗಳ ಅಥವಾ ನೌಕರರ ಯಾವುದೇ ವರ್ಗಕ್ಕೆ ಅಧಿಕಾರ ನೀಡಬಹುದು.

340. ಪಾಲಿಕೆ, ಸ್ಥಾಯೀ ಸಮಿತಿ, ಮೇಯರ್, ಮೊದಲಾದವರ ವ್ಯವಹರಣೆಗಳಿಗೆ ಅಡ್ಡಿ ಮಾಡುವುದಕ್ಕೆ ನಿಷೇಧ.- ಪಾಲಿಕೆಯು ಅಥವಾ ಯಾವುದೇ ಸ್ಥಾಯೀ ಸಮಿತಿಯು, ಮೇಯರ್ ಅಥವಾ ಉಪಮೇಯರ್ ಮತ್ತು ಕೌನ್ಸಿಲರ್ನು, ಮುಖ್ಯ ಆಯುಕ್ತರು ಅಥವಾ ಪಾಲಿಕೆಯಿಂದ ನಿಯೋಜಿತನಾದ ಯಾರೇ ವ್ಯಕ್ತಿಯು ಅಥವಾ ಪಾಲಿಕೆಯ ಪರವಾಗಿ ಮುಖ್ಯ ಆಯುಕ್ತರು ಯಾವ ವ್ಯಕ್ತಿಯ ಜೊತೆಗೆ ಕರಾರನ್ನು ಮಾಡಿಕೊಂಡಿರುವರೋ ಆ ಯಾರೇ ವ್ಯಕ್ತಿಯು ತಮ್ಮ ಕರ್ತವ್ಯವನ್ನು ಅಥವಾ ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮದ, ಉಪವಿಧಿಯ, ವಿನಿಮಯದ ಅಥವಾ ಆದೇಶದ ಬಲದಿಂದಾಗಿ ಅಥವಾ ಅದರ ಪರಿಣಾಮವಾಗಿ ಯಾವ ಕಾರ್ಯವನ್ನು ಮಾಡಲು ಅವರಿಗೆ ಅಧಿಕಾರ ನೀಡಲಾಗಿದೆಯೋ ಅಥವಾ ಅವರನ್ನು ಅಗತ್ಯಪಡಿಸಲಾಗಿದೆಯೋ ಆ ಕಾರ್ಯವನ್ನು ನೆರವೇರಿಸುವಾಗ ಅವರ ಯಾವುದೇ ವ್ಯವಹರಣೆಗಳಿಗೆ ಯಾರೇ ವ್ಯಕ್ತಿಯು ಅಡ್ಡಿ ಉಂಟುಮಾಡತಕ್ಕದ್ದಲ್ಲ.

341. ಗುರುತನ್ನು ತೆಗೆದುಹಾಕುವುದಕ್ಕೆ ನಿಷೇಧ.- ಯಾರೇ ವ್ಯಕ್ತಿಯು ಈ ಅಧಿನಿಯಮದಿಂದ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮ, ಉಪವಿಧಿ, ವಿನಿಯಮ ಅಥವಾ ಆದೇಶದಿಂದ ಅಧಿಕೃತಗೊಳಿಸಿದ ಯಾವುದೇ ಕೆಲಸದ ನಿರ್ವಹಣೆಗೆ ಪ್ರಾಸಂಗಿಕವಾದ ಯಾವುದೇ ಮಟ್ಟವನ್ನು ಅಥವಾ ದಿಕ್ಕನ್ನು ಸೂಚಿಸುವ ಉದ್ದೇಶಕ್ಕಾಗಿ ನಿಲ್ಲಿಸಿರುವ ಯಾವುದೇ ಗುರುತನ್ನು ತೆಗೆದುಹಾಕತಕ್ಕದ್ದಲ್ಲ.

342. ನಿಧಿಯ ನಷ್ಟ, ಪೋಲು ಅಥವಾ ದುರ್ವಿನಿಯೋಗಕ್ಕಾಗಿ ಮುಖ್ಯ ಆಯುಕ್ತರು, ವಲಯ ಆಯುಕ್ತರು ಮತ್ತು ಕೌನ್ಸಿಲರನ ಹೊಣೆಗಾರಿಕೆ, ಇತ್ಯಾದಿ.- (1) ಮುಖ್ಯ ಆಯುಕ್ತರು, ವಲಯ ಆಯುಕ್ತರು ಮತ್ತು ಪ್ರತಿಯೊಬ್ಬ ಕೌನ್ಸಿಲರನು, ಪಾಲಿಕೆಯ ಒಡೆತನದಲ್ಲಿರುವ ಅಥವಾ ಅದರಲ್ಲಿ ನಿಹಿತವಾದ ಯಾವುದೇ ಹಣದ ಅಥವಾ ಇತರ ಸ್ವತ್ತಿನ ನಷ್ಟ, ಪೋಲು ಅಥವಾ ದುರ್ವಿನಿಯೋಗಕ್ಕಾಗಿ, ಅಂಥ ನಷ್ಟ, ಪೋಲು ಅಥವಾ ದುರ್ವಿನಿಯೋಗವು ಅವರ ಬುದ್ಧಿಪೂರ್ವಕ ನಿರ್ಲಕ್ಷ್ಯ ಅಥವಾ ದುರ್ವರ್ತನೆಯ ನೇರ ಪರಿಣಾಮವಾಗಿದ್ದರೆ ಹೊಣೆಗಾರರಾಗಿರತಕ್ಕದ್ದು ಮತ್ತು ಸರ್ಕಾರದ ಪೂರ್ವ ಮಂಜೂರಾತಿ ಪಡೆದು ಪಾಲಿಕೆಯು ಅವರ ವಿರುದ್ಧ ನಷ್ಟ ಪರಿಹಾರಕ್ಕಾಗಿ ದಾವೆಯನ್ನು ಹೂಡತಕ್ಕದ್ದು.

(2) ಅಂಥ ಪ್ರತಿಯೊಂದು ದಾವೆಯನ್ನು ವ್ಯಾಜ್ಯಕಾರಣವು ಉದ್ಭವಿಸಿದ ದಿನಾಂಕದ ತರುವಾಯ ಮೂರು ವರ್ಷಗಳ ಒಳಗಾಗಿ ಪ್ರಾರಂಭಿಸತಕ್ಕದ್ದು.

343. ನೋಟೀಸನ್ನು ತೆಗೆದುಹಾಕುವುದಕ್ಕೆ ಅಥವಾ ಅಳಿಸಿ ಹಾಕುವುದಕ್ಕೆ ನಿಷೇಧ.- ಯಾರೇ ವ್ಯಕ್ತಿಯು ಪಾಲಿಕೆಯ ಸ್ಥಾಯೀ ಸಮಿತಿಯ ಅಥವಾ ಆಯುಕ್ತರ ಆದೇಶಗಳ ಮೂಲಕ ಅಥವಾ ಮೇರೆಗೆ ಪ್ರದರ್ಶಿಸಿದ ಯಾವುದೇ ನೋಟೀಸನ್ನು ಆ ಬಗ್ಗೆ ಅಧಿಕಾರವಿಲ್ಲದೆ ತೆಗೆದುಹಾಕತಕ್ಕದ್ದಲ್ಲ, ನಾಶಪಡಿಸತಕ್ಕದ್ದಲ್ಲ, ವಿರೂಪಗೊಳಿಸತಕ್ಕದ್ದಲ್ಲ ಅಥವಾ ಅನ್ಯಥಾ ಅಳಿಸಿಹಾಕತಕ್ಕದ್ದಲ್ಲ.

344. ಸಾರ್ವಜನಿಕ ಸ್ಥಳದ ಅಥವಾ ಸಾಮಗ್ರಿಗಳ ಸಂಬಂಧದಲ್ಲಿ ಅನಧಿಕೃತ ವ್ಯವಹಾರಗಳಿಗೆ ನಿಷೇಧ.- ಯಾರೇ ವ್ಯಕ್ತಿಯು, ಆ ಬಗ್ಗೆ ಅಧಿಕಾರವಿಲ್ಲದೆ ಪಾಲಿಕೆಯಲ್ಲಿ ನಿಹಿತವಾದ ಭೂಮಿಯಿಂದ ಅಥವಾ ಜಲಮಾರ್ಗಗಳಿಂದ (ಖಾಸಗಿ ಸ್ವತ್ತಾಗಿರದ) ಅಥವಾ ಅವುಗಳಲ್ಲಿ ಅಥವಾ ಅವುಗಳ ಮೇಲೆ ಇರುವ ಮಣ್ಣನ್ನು, ಮರಳನ್ನು, ಅಥವಾ ಇತರ ಸಾಮಗ್ರಿಯನ್ನು ತೆಗೆಯತಕ್ಕದ್ದಲ್ಲ ಅಥವಾ ಯಾವುದೇ ವಸ್ತುಗಳನ್ನು ಶೇಖರಿಸತಕ್ಕದ್ದಲ್ಲ ಅಥವಾ ಯಾವುದೇ ಒತ್ತುವರಿಯನ್ನು ಮಾಡತಕ್ಕದ್ದಲ್ಲ ಅಥವಾ ಅವುಗಳಿಗೆ ಯಾವುದೇ ರೀತಿಯಲ್ಲಿ ಅಡಚಣೆ ಉಂಟುಮಾಡತಕ್ಕದ್ದಲ್ಲ.

345. ನೋಟೀಸುಗಳ ಮತ್ತು ಅನುಮತಿಗಳ ನಮೂನೆ.- ಈ ಅಧಿನಿಯಮದ ಉಪಬಂಧಗಳ ಮೇರೆಗೆ ಸಂದರ್ಭಾನುಸಾರ ಕೊಟ್ಟ, ಹೊರಡಿಸಿದ ಅಥವಾ ಮಂಜೂರು ಮಾಡಿದ ಎಲ್ಲಾ ನೋಟೀಸುಗಳು ಮತ್ತು ಅನುಮತಿಗಳು ಲಿಖಿತ ಅಥವಾ ಇ-ಅರ್ಜಿ/ಆನ್‌ಲೈನ್ ನಲ್ಲಿರತಕ್ಕದ್ದು.

346. ಪಾಲಿಕೆ ಪ್ರಾಧಿಕಾರಗಳ ಅಥವಾ ಪಾಲಿಕೆಯ ಅಧಿಕಾರಿಗಳ ಸಮ್ಮತಿಯ ರುಜುವಾತು.- ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮದ, ಉಪವಿಧಿಯ ಅಥವಾ ವಿನಿಯಮದ ಮೇರೆಗೆ ಯಾವುದೇ ಕಾರ್ಯವನ್ನು ಮಾಡುವುದು ಅಥವಾ ಮಾಡುವುದನ್ನು ಬಿಟ್ಟುಬಿಡುವುದು ಅಥವಾ ಯಾವುದೇ ಕಾರ್ಯದ ಸಿಂಧುತ್ವವು,-

(ಎ) ಪಾಲಿಕೆಯ ಸ್ಥಾಯೀ ಸಮಿತಿಯ ಅಥವಾ ಮುಖ್ಯ ಆಯುಕ್ತರ; ಅಥವಾ

(ಬಿ) ಪಾಲಿಕೆಯ ಯಾರೇ ಅಧಿಕಾರಿಯ

- ಅನುಮೋದನೆ, ಮಂಜೂರಾತಿ, ಸಮ್ಮತಿ, ಸಹಮತಿ, ಘೋಷಣೆ, ಅಭಿಪ್ರಾಯವನ್ನು ಅಥವಾ ಅವರಿಗೆ ಮನವರಿಕೆಯಾಗುವುದನ್ನು ಅವಲಂಬಿಸಿರುವಾಗ ಅಂಥ ಅನುಮೋದನೆ, ಮಂಜೂರಾತಿ, ಸಮ್ಮತಿ, ಸಹಮತಿ, ಘೋಷಣೆ, ಅಭಿಪ್ರಾಯವನ್ನು ಅಥವಾ ಅವರಿಗೆ ಮನವರಿಕೆಯಾಗಿರುವುದನ್ನು ತಿಳಿಸುವುದೆಂದು ಅಥವಾ ನಿರೂಪಿಸುವುದೆಂದು, ತಾತ್ಪರ್ಯವಾಗುವ (ಎ)ನ ಸಂದರ್ಭದಲ್ಲಿ ಮುಖ್ಯ ಆಯುಕ್ತರು ರುಜುಮಾಡಿದ ಮತ್ತು (ಬಿ)ನ ಸಂದರ್ಭದಲ್ಲಿ ಸದರಿ ಪಾಲಿಕೆಯ ಅಧಿಕಾರಿಯು ರುಜುಮಾಡಿದ ಲಿಖಿತದ ದಸ್ತಾವೇಜು, ಅದರ ಸಾಕಷ್ಟು ಪುರಾವೆ ಆಗಿರತಕ್ಕದ್ದು.

347. ದಸ್ತಾವೇಜುಗಳ ಮೇಲೆ ರುಜು.- (1) ಯಾವ ಲೈಸೆನ್ಸು, ಅನುಮತಿ, ನೋಟೀಸು, ಬಿಲ್ಲು, ಅನುಸೂಚಿ, ಸಮನುಗಳು, ವಾರಂಟು ಅಥವಾ ಇತರ ದಸ್ತಾವೇಜು ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮದ, ಉಪವಿಧಿಯ ಅಥವಾ ವಿನಿಯಮದ ಮೂಲಕ ಮುಖ್ಯ ಆಯುಕ್ತರ ಅಥವಾ ಪಾಲಿಕೆಯ ಯಾರೇ ಅಧಿಕಾರಿಯ ರುಜುವನ್ನು ಹೊಂದಿರಬೇಕೆಂದು ಅಗತ್ಯಪಡಿಸಲಾಗಿದೆಯೋ ಆ ಯಾವುದೇ ಲೈಸೆನ್ಸು, ಅನುಮತಿ, ನೋಟೀಸು, ಬಿಲ್ಲು, ಅನುಸೂಚಿ, ಸಮನುಗಳು, ವಾರಂಟು ಅಥವಾ ಇತರ ದಸ್ತಾವೇಜಿನ ಮೇಲೆ ಸಂದರ್ಭಾನುಸಾರ ಆಯುಕ್ತರ ಅಥವಾ ಅಂಥ ಪಾಲಿಕೆಯ ಅಧಿಕಾರಿಯ ಹಸ್ತಾಕ್ಷರ ಮುದ್ರೆಯನ್ನು ಒತ್ತಿದ್ದರೆ ಅದಕ್ಕೆ ಸರಿಯಾಗಿ ರುಜುಮಾಡಲಾಗಿದೆಯೆಂದು ಭಾವಿಸತಕ್ಕದ್ದು.

(2) ಉಪಪ್ರಕರಣ (1)ರಲ್ಲಿ ಇರುವುದು ಯಾವುದೂ ಪಾಲಿಕೆಯ ನಿಧಿಯ ಬಗ್ಗೆ ಬರೆದ ಚೆಕ್ಕಿಗೆ ಅಥವಾ ಯಾವುದೇ ಕರಾರು ಪತ್ರಕ್ಕೆ ಅನ್ವಯವಾಗುವುದೆಂದು ಭಾವಿಸತಕ್ಕದ್ದಲ್ಲ.

348. ಅಧಿಸೂಚನೆಯ ಪ್ರಕಟಣೆ.- ಅನ್ಯಥಾ ಉಪಬಂಧಿಸಿದ ಹೊರತು, ಈ ಅಧಿನಿಯಮದ ಮೇರೆಗಿನ ಪ್ರತಿಯೊಂದು ಅಧಿಸೂಚನೆಯನ್ನು ಸರ್ಕಾರಿ ರಾಜ್ಯಪತ್ರದಲ್ಲಿ, ಇಂಗ್ಲೀಷಿನಲ್ಲಿ ಮತ್ತು ಕನ್ನಡದಲ್ಲಿ ಪ್ರಕಟಿಸತಕ್ಕದ್ದು.

349. ಆದೇಶದ, ನೋಟೀಸಿನ ಅಥವಾ ಇತರ ದಸ್ತಾವೇಜುಗಳ ಪ್ರಕಟಣೆ.- ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮದ, ಉಪವಿಧಿಯ ಅಥವಾ ವಿನಿಯಮದ ಮೇರೆಗೆ ಪ್ರಕಟಿಸಬೇಕೆಂದು ನಿರ್ದೇಶಿಸಿರುವ ಪ್ರತಿಯೊಂದು ಆದೇಶವನ್ನು, ನೋಟೀಸನ್ನು ಅಥವಾ ಇತರ ದಸ್ತಾವೇಜುಗಳನ್ನು ಸಂದರ್ಭಾನುಸಾರ ಈ ಅಧಿನಿಯಮದ ಮೂಲಕ ಅಥವಾ ಪಾಲಿಕೆಯು ಅಥವಾ ಸ್ಥಾಯೀ ಸಮಿತಿಯು ಬೇರೆ ವಿಧಾನವನ್ನು ನಿಯಮಿಸಿದ ಹೊರತು, ಕನ್ನಡಕ್ಕೆ ಭಾಷಾಂತರಿಸತಕ್ಕದ್ದು ಮತ್ತು ಪಾಲಿಕೆಯ ಕಛೇರಿಯಲ್ಲಿ ಇಡತಕ್ಕದ್ದು ಮತ್ತು ಅದರ ಪ್ರತಿಗಳನ್ನು ಇಂಗ್ಲಿಷ್‌ನಲ್ಲಿ ಮತ್ತು ಕನ್ನಡದಲ್ಲಿ ಅಂಥ ಕಛೇರಿಯಲ್ಲಿ ಮತ್ತು ಸಂದರ್ಭಾನುಸಾರ ಪಾಲಿಕೆಯು ಅಥವಾ ಸ್ಥಾಯೀ ಸಮಿತಿಯು ನಿರ್ದೇಶಿಸಬಹುದಾದಂಥ ಇತರ ಸ್ಥಳಗಳಲ್ಲಿ ಎದ್ದು ಕಾಣುವ ಹಾಗೆ ಅಂಟಿಸತಕ್ಕದ್ದು; ಮತ್ತು ಅಂಥ ಪ್ರತಿಗಳನ್ನು ಹಾಗೆ ಅಂಟಿಸಲಾಗಿದೆ ಮತ್ತು ಮೂಲ ಪ್ರತಿಗಳು ಪಾಲಿಕೆಯ ಕಛೇರಿಯಲ್ಲಿ ಪರಿಶೀಲನೆಗಾಗಿ ಇವೆ ಎಂದು ಸಂಬಂಧಿಸಿದ ಪ್ರದೇಶದಲ್ಲಿ

ಡಂಗುರವನ್ನು ಹೊಡೆಸುವ ಮೂಲಕ ಅಥವಾ ಸ್ಥಳೀಯ ವೃತ್ತಪತ್ರಿಕೆಗಳಲ್ಲಿ ಜಾಹೀರಾತಿನ ಮೂಲಕ ಸಾರ್ವಜನಿಕ ಉದ್ಘೋಷಣೆಯನ್ನು ಮಾಡತಕ್ಕದ್ದು.

350. ವೃತ್ತಪತ್ರಿಕೆಗಳಲ್ಲಿ ಪ್ರಕಟಣೆ.- ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮದ, ಉಪವಿಧಿಯ ಅಥವಾ ವಿನಿಯಮದ ಮೂಲಕ ನೋಟೀಸನ್ನು ಸ್ಥಳೀಯ ವೃತ್ತಪತ್ರಿಕೆಗಳಲ್ಲಿ ಜಾಹೀರಾತಿನ ಮೂಲಕ ಕೊಡತಕ್ಕದ್ದು ಅಥವಾ ಅಧಿಸೂಚನೆಯನ್ನು ಅಥವಾ ಯಾವುದೇ ಮಾಹಿತಿಯನ್ನು ವೃತ್ತ ಪತ್ರಿಕೆಗಳಲ್ಲಿ ಪ್ರಕಟಿಸತಕ್ಕದ್ದು ಎಂದು ಉಪಬಂಧಿಸಿದಾಗಲೆಲ್ಲಾ ಅಂಥ ನೋಟೀಸನ್ನು, ಅಧಿಸೂಚನೆಯನ್ನು ಅಥವಾ ಮಾಹಿತಿಯನ್ನು ನಗರದಲ್ಲಿ ಪ್ರಕಟವಾಗುವ ಕನಿಷ್ಠ ಪಕ್ಷ ಒಂದು ಇಂಗ್ಲೀಷ್ ಮತ್ತು ಒಂದು ಕನ್ನಡ ವೃತ್ತಪತ್ರಿಕೆಯಲ್ಲಿ ಪ್ರಕಟಿಸತಕ್ಕದ್ದು.

351. ನಿಷೇಧದ ಅಥವಾ ಸ್ಥಳಗಳನ್ನು ಪ್ರತ್ಯೇಕವಾಗಿ ಇಡುವ ಬಗ್ಗೆ ನೋಟೀಸು.- ಈ ಅಧಿನಿಯಮದ ಮೂಲಕ ಅಧಿಕೃತವಾದ ಯಾವುದೇ ಉದ್ದೇಶಕ್ಕಾಗಿ ಪಾಲಿಕೆಯು, ಸ್ಥಾಯೀ ಸಮಿತಿಯು ಅಥವಾ ಮುಖ್ಯ ಆಯುಕ್ತರು ಯಾವುದೇ ಸ್ಥಳವನ್ನು ಪ್ರತ್ಯೇಕವಾಗಿ ಇರಿಸಿದಾಗಲೆಲ್ಲಾ ಅಥವಾ ಯಾವುದೇ ಸ್ಥಳದಲ್ಲಿ ಯಾವುದೇ ಕಾರ್ಯ ಮಾಡುವುದನ್ನು ನಿಷೇಧಿಸಿದಾಗಲೆಲ್ಲಾ ಆಯುಕ್ತರು ತತ್‌ಕ್ಷಣವೇ ನೋಟೀಸನ್ನು ಇಂಗ್ಲಿಷ್‌ನಲ್ಲಿ ಮತ್ತು ಕನ್ನಡದಲ್ಲಿ ಅಂಥ ಸ್ಥಳದಲ್ಲಿ ಅಥವಾ ಅದರ ಸಮೀಪದಲ್ಲಿ ಹಾಕಿಸತಕ್ಕದ್ದು. ಅಂಥ ಸ್ಥಳವನ್ನು ಯಾವ ಉದ್ದೇಶಕ್ಕಾಗಿ ಪ್ರತ್ಯೇಕವಾಗಿ ಇರಿಸಲಾಗಿದೆಯೋ ಆ ಉದ್ದೇಶವನ್ನು ಅಥವಾ ಯಾವ ಕಾರ್ಯವನ್ನು ಅಂಥ ಸ್ಥಳದಲ್ಲಿ ನಿಷೇಧಿಸಲಾಗಿದೆಯೋ ಆ ಕಾರ್ಯವನ್ನು ಅಂಥ ನೋಟೀಸಿನಲ್ಲಿ ನಿರ್ದಿಷ್ಟಪಡಿಸತಕ್ಕದ್ದು.

352. ದಸ್ತಾವೇಜುಗಳ ಜಾರಿಯ ವಿಧಾನ.- (1) ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮದ, ಉಪವಿಧಿಯ, ವಿನಿಯಮದ ಅಥವಾ ಆದೇಶದ ಮೂಲಕ ಯಾವುದೇ ನೋಟೀಸನ್ನು ಅಥವಾ ಇತರ ದಸ್ತಾವೇಜನ್ನು ಯಾರೇ ವ್ಯಕ್ತಿಗೆ ಜಾರಿಮಾಡಲು ಅಥವಾ ಕಳುಹಿಸಲು ಅಗತ್ಯಪಡಿಸಿದಾಗ,-

(ಎ) ಅಂಥ ವ್ಯಕ್ತಿಗೆ ಸದರಿ ದಸ್ತಾವೇಜನ್ನು ಕೊಡುವ ಅಥವಾ ನೀಡುವ ಮೂಲಕ; ಅಥವಾ

(ಬಿ) ಇ -ಮೇಲ್ ಮೂಲಕ ಅಥವಾ ವಿದ್ಯುನ್ಮಾನ ಸಾಧನಗಳ ಮುಖಾಂತರ; ಅಥವಾ

(ಸಿ) ಅಂಥ ವ್ಯಕ್ತಿಯು ಸಿಗದಿದ್ದರೆ, ಅಂಥ ದಸ್ತಾವೇಜನ್ನು ಕೊನೆಯದಾಗಿ ತಿಳಿದುಬಂದ ಅವನ ವಾಸಸ್ಥಳದಲ್ಲಿ ಅಥವಾ ಅವನು ವ್ಯವಹಾರ ನಡೆಸುತ್ತಿದ್ದ ಸ್ಥಳದಲ್ಲಿ ಇಟ್ಟುಬಿಡುವ ಮೂಲಕ ಅಥವಾ ಅದನ್ನು ಅವನ ಏಜೆಂಟ್, ಗುಮಾಸ್ತ, ಅಥವಾ ಸೇವಕ ಅಥವಾ ಅವನ ಕುಟುಂಬದ ಯಾರೇ ವಯಸ್ಕ ಸದಸ್ಯನಿಗೆ ಕೊಡುವ ಅಥವಾ ನೀಡುವ ಮೂಲಕ; ಅಥವಾ

(ಡಿ) ಅಂಥ ವ್ಯಕ್ತಿಯು ಆ ನಗರದಲ್ಲಿ ವಾಸವಾಗಿಲ್ಲದಿದ್ದರೆ ಮತ್ತು ಬೇರೆ ಕಡೆಯಲ್ಲಿನ ಅವನ ವಿಳಾಸವು ಆಯುಕ್ತರಿಗೆ ತಿಳಿದಿದ್ದರೆ ಅದನ್ನು ಅವನಿಗೆ ನೋಂದಾಯಿತ ಅಂಚೆಯ ಮೂಲಕ ಕಳುಹಿಸುವ ಮೂಲಕ; ಅಥವಾ

(ಇ) ಮೇಲೆ ಹೇಳಿದ ಯಾವುದೇ ವಿಧಾನಗಳಿಂದ ಜಾರಿ ಮಾಡಲಾಗದಿದ್ದಾಗ ಅದನ್ನು ಅಂಥ ವಾಸದ ಅಥವಾ ವ್ಯವಹಾರದ ಸ್ಥಳದ ಯಾವುದೇ ಎದ್ದುಕಾಣುವ ಭಾಗದಲ್ಲಿ ಅಂಟಿಸುವ ಮೂಲಕ

- ಅದನ್ನು ಜಾರಿ ಮಾಡಬಹುದು ಅಥವಾ ಕಳುಹಿಸಿಕೊಡಬಹುದು.

(2) ಆ ವ್ಯಕ್ತಿಯು, ಯಾವುದೇ ಕಟ್ಟಡದ ಅಥವಾ ಭೂಮಿಯ ಮಾಲೀಕನಾಗಿರುವಾಗ ಅಥವಾ ಅಧಿಭೋಗದಾರನಾಗಿರುವಾಗ, ದಸ್ತಾವೇಜಿನಲ್ಲಿ ಮಾಲೀಕನನ್ನು ಅಥವಾ ಅಧಿಭೋಗದಾರನನ್ನು ಹೆಸರಿಸುವುದು ಅವಶ್ಯವಾಗಿರತಕ್ಕದ್ದಲ್ಲ ಮತ್ತು ಜಂಟಿ ಮಾಲೀಕರ ಮತ್ತು ಅಧಿಭೋಗದಾರರ ಸಂದರ್ಭದಲ್ಲಿ, ಅಂಥ ಮಾಲೀಕರ ಅಥವಾ ಅಧಿಭೋಗದಾರರ ಪೈಕಿ ಒಬ್ಬನಿಗೆ ಅದನ್ನು ಜಾರಿ ಮಾಡಿದರೆ ಅಥವಾ ಕಳುಹಿಸಿದರೆ ಸಾಕು.

(3) ಈ ಅಧಿನಿಯಮದ ಮೇರೆಗೆ ಜಾರಿ ಮಾಡಿದ ಅಥವಾ ಕಳುಹಿಸಿದ ಯಾವುದೇ ಬಿಲ್ಲು, ನೋಟೀಸು, ನಮೂನೆ ಅಥವಾ ಇತರ ದಸ್ತಾವೇಜಿನಲ್ಲಿ ಯಾವುದೇ ತೆರಿಗೆಯನ್ನು ಅಥವಾ ಇತರ ಮೊಬಲಗನ್ನು ಸಂದಾಯ ಮಾಡಲು ಅಥವಾ ಯಾವುದೇ ಕಾಮಗಾರಿಯನ್ನು ನಿರ್ವಹಿಸಲು ಅಥವಾ ಯಾವುದನ್ನಾದರೂ ಒದಗಿಸಲು ಅವಧಿಯನ್ನು ನಿಗದಿಪಡಿಸಿದಾಗಲೆಲ್ಲಾ, ಅಂಥ ಅವಧಿಯನ್ನು ಈ ಅಧಿನಿಯಮದಲ್ಲಿ ಅದಕ್ಕೆ ತದ್ವಿರುದ್ಧವಾದ ಸ್ಪಷ್ಟ ಉಪಬಂಧ ಇಲ್ಲದಿರುವಲ್ಲಿ ಅಂಥ ಜಾರಿಯ ಅಥವಾ ನೋಂದಾಯಿತ ಅಂಚೆಯ ಮೂಲಕ ಕಳುಹಿಸಿದ ದಿನಾಂಕದಿಂದ ಲೆಕ್ಕ ಹಾಕತಕ್ಕದ್ದು.

353. ವಿಧಿಸಬಹುದಾದ ಮೊತ್ತವನ್ನು ಅಧಿಭೋಗದಾರನು ಮಾಲೀಕರಿಂದ ವಸೂಲು ಮಾಡುವುದು.- ಯಾವುದೇ ಕಟ್ಟಡದ ಅಥವಾ ಭೂಮಿಯ ಅಧಿಭೋಗದಾರನು, ಈ ಅಧಿನಿಯಮದ ಮೇರೆಗೆ ಯಾವ ಹಣ ಸಂದಾಯ ಮಾಡಲು ಆ ಕಟ್ಟಡದ ಅಥವಾ ಭೂಮಿಯ ಮಾಲೀಕನು ಹೊಣೆಗಾರನಾಗಿರುವನೋ ಆದರೆ ಅಧಿಭೋಗದಾರನು ಹೊಣೆಗಾರನಾಗಿಲ್ಲವೋ ಆ ಯಾವುದೇ ಹಣ ಸಂದಾಯವನ್ನು ಅಧಿಭೋಗದಾರನು ಆ ಮಾಲೀಕನ ಪರವಾಗಿ ಮಾಡಿದರೆ, ಅಂಥ ಅಧಿಭೋಗದಾರನು ಅದನ್ನು ಮಾಲೀಕನಿಂದ ವಸೂಲ್ಮಾಡಲು

ಹಕ್ಕುಳ್ಳವನಾಗಿರತಕ್ಕದ್ದು ಮತ್ತು ಆಗ ಅಥವಾ ಆ ತರುವಾಯ ಅಧಿಭೋಗದಾರನು ಮಾಲೀಕನಿಗೆ ಕೊಡಬೇಕಾದ ಬಾಡಿಗೆಯಿಂದ ಅದನ್ನು ಮುರಿದುಕೊಳ್ಳಬಹುದು.

354. ಅಧಿಭೋಗದಾರನಿಂದ ಮಾಲೀಕನಿಗೆ ಅಡ್ಡಿ.- (1) ಯಾವುದೇ ಕಟ್ಟಡದ ಅಥವಾ ಭೂಮಿಯ ಅಧಿಭೋಗದಾರನು, ಆ ಕಟ್ಟಡಕ್ಕೆ ಅಥವಾ ಭೂಮಿಗೆ ಸಂಬಂಧಿಸಿದಂತೆ ಈ ಅಧಿನಿಯಮದ ಯಾವುದೇ ಉಪಬಂಧವನ್ನು ಕಾರ್ಯಗತಗೊಳಿಸಲು ಮಾಲೀಕನನ್ನು ಅಡ್ಡಿಪಡಿಸಿದರೆ, ಮುಖ್ಯ ಆಯುಕ್ತರು ಆದೇಶದ ಮೂಲಕ ಸದರಿ ಅಧಿಭೋಗದಾರನನ್ನು ಅಂಥ ಆದೇಶವನ್ನು ಜಾರಿಗೊಳಿಸಿದ ದಿನಾಂಕದಿಂದ ಎಂಟು ದಿನಗಳ ಒಳಗಾಗಿ ಅವಶ್ಯವಾಗಬಹುದಾದಂಥ ಎಲ್ಲಾ ಕೆಲಸಗಳನ್ನು ನಿರ್ವಹಿಸಲು ಮಾಲೀಕನಿಗೆ ಅವಕಾಶ ಮಾಡಿಕೊಡುವಂತೆ ಅಗತ್ಯಪಡಿಸಬಹುದು.

(2) ಅಂಥ ಮಾಲೀಕನನ್ನು, ಮೇಲೆ ಹೇಳಿದಂತೆ, ಯಾವ ಅವಧಿಗೆ ಅವನನ್ನು ಅಡ್ಡಿಪಡಿಸಲಾಯಿತೋ ಆ ಅವಧಿಗೆ ಅಂಥ ಕೆಲಸಗಳನ್ನು ನಿರ್ವಹಿಸಲು ತಪ್ಪಿದ ಕಾರಣದಿಂದಾಗಿ ಅವನು ಅನ್ಯಥಾ ಗುರಿಯಾಗಬಹುದಾಗಿದಂಥ ಯಾವುದೇ ಜುಲ್ಮಾನೆಯಿಂದ ಅಥವಾ ದಂಡನೆಯಿಂದ ವಿನಾಯಿತಿ ಗೊಳಿಸತಕ್ಕದ್ದು.

355. ಮಾಲೀಕನು ತಪ್ಪಿದಲ್ಲಿ ಅಧಿಭೋಗದಾರನಿಂದ ಕೆಲಸದ ನಿರ್ವಹಣೆ.- ಯಾವುದೇ ಕಟ್ಟಡದ ಅಥವಾ ಭೂಮಿಯ ಮಾಲೀಕನು, ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮದ, ಉಪವಿಧಿಯ, ವಿನಿಯಮದ ಅಥವಾ ಆದೇಶದ ಉಪಬಂಧಗಳ ಮೇರೆಗೆ ಯಾವ ಕೆಲಸವನ್ನು ನಿರ್ವಹಿಸಲು ಅವನನ್ನು ಅಗತ್ಯಪಡಿಸಲಾಗಿದೆಯೋ ಆ ಯಾವುದೇ ಕೆಲಸವನ್ನು ನಿರ್ವಹಿಸಲು ತಪ್ಪಿದರೆ, ಅಂಥ ಕಟ್ಟಡದ ಅಥವಾ ಭೂಮಿಯ ಅಧಿಭೋಗದಾರನು, ಮುಖ್ಯ ಆಯುಕ್ತರ ಅನುಮೋದನೆಯೊಂದಿಗೆ ಸದರಿ ಕೆಲಸವನ್ನು ನಿರ್ವಹಿಸಬಹುದು ಮತ್ತು ಅದನ್ನು ನಿರ್ವಹಿಸುವಾಗ ವಹಿಸಿದ ಯುಕ್ತ ವೆಚ್ಚಗಳನ್ನು ಮಾಲೀಕನಿಂದ ವಸೂಲು ಮಾಡಲು ಹಕ್ಕುಳ್ಳವನಾಗಿರತಕ್ಕದ್ದು ಮತ್ತು ಅದರ ಮೊಬಲಗನ್ನು ಅದರ ಮಾಲೀಕನಿಗೆ ತಾನು ಆಗ ಅಥವಾ ಆ ತರುವಾಯ ಕೊಡಬೇಕಾಗಿರುವ ಬಾಡಿಗೆಯಿಂದ ಮುರಿದುಕೊಳ್ಳಬಹುದು.

356. ಆದೇಶವನ್ನು ಪಾಲಿಸಲು ಕಾಲಾವಕಾಶ ಮತ್ತು ತಪ್ಪಿದರೆ ಅದನ್ನು ಜಾರಿಗೊಳಿಸಲು ಅಧಿಕಾರ.- (1) ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮದ, ಉಪವಿಧಿಯ ಅಥವಾ ವಿನಿಯಮದ ಮೇರೆಗೆ ಹೊರಡಿಸಿದ ಯಾವುದೇ ನೋಟೀಸಿನ, ನೀಡಿದ ಕಡ್ಡಾಯ ಸೂಚನೆಯ ಅಥವಾ ಆದೇಶದ ಮೂಲಕ ಯಾರೇ ವ್ಯಕ್ತಿಯನ್ನು ಯಾವುದೇ ಕೆಲಸವನ್ನು ನಿವರ್ಹಿಸುವಂತೆ ಅಥವಾ ಯಾವುದೇ ಕ್ರಮಗಳನ್ನು ಕೈಗೊಳ್ಳುವಂತೆ ಅಥವಾ ಯಾವುದೇ ಕಾರ್ಯವನ್ನು ಮಾಡುವಂತೆ ಅಗತ್ಯಪಡಿಸಿದಾಗಲೆಲ್ಲಾ, ಯಾವ ಕಾಲದೊಳಗಾಗಿ ಆ ಕೆಲಸವನ್ನು ನಿರ್ವಹಿಸಬೇಕೋ, ಆ ಕ್ರಮಗಳನ್ನು ಕೈಗೊಳ್ಳಬೇಕೋ ಅಥವಾ ಆ ಕಾರ್ಯವನ್ನು ಮಾಡಬೇಕೋ, ಆ ಯುಕ್ತ ಕಾಲಾವಧಿಯನ್ನು ಅಂಥ ನೋಟೀಸಿನಲ್ಲಿ ಕಡ್ಡಾಯ ಸೂಚನೆಯಲ್ಲಿ ಅಥವಾ ಆದೇಶದಲ್ಲಿ ತಿಳಿಸತಕ್ಕದ್ದು.

(2) ಅಂಥ ನೋಟೀಸನ್ನು, ಕಡ್ಡಾಯ ಸೂಚನೆಯನ್ನು ಅಥವಾ ಆದೇಶವನ್ನು ಹಾಗೆ ತಿಳಿಸಿರುವಂಥ ಕಾಲದೊಳಗೆ ಪಾಲಿಸದಿದ್ದರೆ ಆಗ ಹಾಗೆ ತಪ್ಪಿದ್ದಕ್ಕಾಗಿ ಜುಲ್ಮಾನೆ ವಿಧಿಸುವುದಕ್ಕೆ ಅವಕಾಶ ಕಲ್ಪಿಸಿರಲಿ ಅಥವಾ ಅವಕಾಶ ಕಲ್ಪಿಸದಿರಲಿ ಮತ್ತು ಹಾಗೆ ತಪ್ಪಿದ್ದಕ್ಕಾಗಿ ಹಾಗೆ ತಪ್ಪಿದ ವ್ಯಕ್ತಿಯು ಶಿಕ್ಷೆಗೆ ಗುರಿಯಾಗಲಿ ಅಥವಾ ಗುರಿಯಾಗದಿರಲಿ ಅಥವಾ ಹಾಗೆ ತಪ್ಪಿದ್ದಕ್ಕಾಗಿ ಅವನನ್ನು ಪ್ರಾಸಿಕ್ಯೂಟ್ ಮಾಡಿರಲಿ ಅಥವಾ ಅವನಿಗೆ ಯಾವುದೇ ಶಿಕ್ಷೆಯನ್ನು ವಿಧಿಸಿರಲಿ, ಮುಖ್ಯ ಆಯುಕ್ತರು, ಅಂಥ ಕೆಲಸವನ್ನು ಅವನಿಂದ ಮಾಡಿಸತಕ್ಕದ್ದು ಅಥವಾ ಮೇಲೆ ಹೇಳಿದಂತೆ ಆ ನೋಟೀಸನ್ನು, ಕಡ್ಡಾಯ ಸೂಚನೆಯನ್ನು ಅಥವಾ ಆದೇಶವನ್ನು ವಿದ್ಯುಕ್ತವಾಗಿ ಜಾರಿಗೊಳಿಸುವುದಕ್ಕಾಗಿ ಅವಶ್ಯವೆಂದು ತಾವು ಅಭಿಪ್ರಾಯಪಡುವಂಥ ಯಾವುದೇ ಕ್ರಮವನ್ನು ಕೈಗೊಳ್ಳಬಹುದು ಅಥವಾ ಯಾವುದೇ ಕಾರ್ಯವನ್ನು ಮಾಡಬಹುದು.

(3) ಅಂಥ ನೋಟೀಸನ್ನು ಪಾಲಿಸಲು ತಪ್ಪಿದುದಕ್ಕಾಗಿ, ಈ ಅಧಿನಿಯಮದಲ್ಲಿ ವಿಶೇಷವಾಗಿ ಯಾವುದೇ ದಂಡನೆಯನ್ನು ಉಪಬಂಧಿಸಿರದಿದ್ದರೆ ಸದರಿ ವ್ಯಕ್ತಿಯು ಅಪರಾಧ ನಿರ್ಣಯವಾದ ಮೇಲೆ ಅಂಥ ಅಪರಾಧಕ್ಕಾಗಿ ಐದು ಸಾವಿರ ರೂಪಾಯಿಗಳವರೆಗೆ ಮೀರದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

357. ವೆಚ್ಚಗಳ ಸಂದಾಯವನ್ನು ಕಂತುಗಳಲ್ಲಿ ಸ್ವೀಕರಿಸುವುದಕ್ಕೆ ಒಪ್ಪಲು ಮುಖ್ಯ ಆಯುಕ್ತರ ಅಧಿಕಾರ.- 315ನೇ ಪ್ರಕರಣದ ಮೇರೆಗೆ ಉಪಬಂಧಿಸಿದ ರೀತಿಯಲ್ಲಿ ಮೇಲೆ ಹೇಳಿದಂಥ ಯಾವುದೇ ವೆಚ್ಚಗಳನ್ನು ವಸೂಲಿ ಮಾಡುವುದಕ್ಕೆ ಬದಲಾಗಿ, ಮುಖ್ಯ ಆಯುಕ್ತರು, ತಾವು ಸೂಕ್ತವೆಂದು ಭಾವಿಸಿದರೆ ಮತ್ತು ಸ್ಥಾಯೀ ಸಮಿತಿಯ ಅನುಮೋದನೆ ಪಡೆದು ಆ ಮೊಬಲಗನ್ನು ಐದು ವರ್ಷಗಳಿಗೆ ಮೀರದ ಅವಧಿಯೊಳಗೆ, ಪ್ರತಿ ವರ್ಷಕ್ಕೆ ಶೇಕಡ ಒಂಬತ್ತರ ದರದಲ್ಲಿ ಅದರ ಮೇಲಿನ ಬಡ್ಡಿಯೊಂದಿಗೆ ಬಾಕಿಯಿರುವ ಪೂರ್ಣ ಮೊಬಲಗು ಸಂದಾಯವಾಗುವುದನ್ನು ಸುನಿಶ್ಚಿತಪಡಿಸಿಕೊಳ್ಳುವ ಹಾಗೆ ಅಂಥ ಮೊಬಲಗುಗಳ ಕಂತುಗಳಲ್ಲಿ ಮತ್ತು ಅಂಥ ಕಾಲಾಂತರಗಳಲ್ಲಿ ಅದನ್ನು ಸಂದಾಯ ಮಾಡುವ ಬಗ್ಗೆ ಅದರ ಸಂದಾಯಕ್ಕೆ ಹೊಣೆಗಾರನಾದ ವ್ಯಕ್ತಿಯಿಂದ ಒಂದು ಒಪಂ್ಪದ ಪತ್ರವನ್ನು ಪಡೆದುಕೊಳ್ಳಬಹುದು.

358. ಕೆಲವು ಕಾಮಗಾರಿಗಳ ಮೇಲಿನ ವೆಚ್ಚಗಳನ್ನು ಮೇಲ್ಪಾಟು ವೆಚ್ಚಗಳೆಂದು ಘೋಷಿಸಲು ಅಧಿಕಾರ.- ವಸೂಲಿ ಮಾಡಬೇಕಾದ ವೆಚ್ಚಗಳನ್ನು,-

(ಎ) 222ನೇ ಪ್ರಕರಣದ (1)ನೇ ಉಪಪ್ರಕರಣದ (ಬಿ) ಖಂಡ, 225ನೇ ಪ್ರಕರಣ, 256ನೇ ಪ್ರಕರಣ ಅಥವಾ 282ನೇ ಪ್ರಕರಣದಲ್ಲಿ; ಅಥವಾ

(ಬಿ) ಈ ಅಧಿನಿಯಮದ ಮೇರೆಗೆ ರಚಿಸಿದ ಯಾವ ನಿಯಮದಲ್ಲಿ ಈ ಪ್ರಕರಣವನ್ನು ಅಂಥ ವೆಚ್ಚಗಳಿಗೆ ಅನ್ವಯವಾಗುವಂತೆ ಮಾಡಲಾಗಿದೆಯೋ ಆ ನಿಯಮದಲ್ಲಿ

- ತಿಳಿಸಿದ ಯಾವುದೇ ಕೆಲಸಕ್ಕೆ ಸಂಬಂಧಿಸಿದಂತೆ ವಹಿಸಿದ್ದರೆ ಅಥವಾ ವಹಿಸಬೇಕಾಗಿದ್ದರೆ, ಮುಖ್ಯ ಆಯುಕ್ತರು, ತಾವು ಸೂಕ್ತವೆಂದು ಭಾವಿಸಿದರೆ ಮತ್ತು ಸ್ಥಾಯೀ ಸಮಿತಿಯ ಅನುಮೋದನೆ ಪಡೆದು ಅಂಥ ವೆಚ್ಚಗಳನ್ನು ಮೇಲ್ಪಾಟು ವೆಚ್ಚಗಳೆಂದು ಘೋಷಿಸಬಹುದು.

359. ಮೇಲ್ಪಾಟು ವೆಚ್ಚಗಳನ್ನು ಯಾರು ಸಂದಾಯ ಮಾಡಬೇಕು.- (1) ಯಾವ ಆವರಣಗಳ ಸಂಬಂಧದಲ್ಲಿ ಅಥವಾ ಯಾವ ಆವರಣಗಳ ಪ್ರಯೋಜನಕ್ಕಾಗಿ ಮೇಲ್ಪಾಟು ವೆಚ್ಚಗಳನ್ನು ಮಾಡಲಾಗಿದೆಯೋ ಆ ಆವರಣಗಳ ಮೇಲೆ ಆ ವೆಚ್ಚಗಳು ಋಣಭಾರವಾಗಿರತಕ್ಕದ್ದು ಮತ್ತು ಮುಖ್ಯ ಆಯುಕ್ತರು ಪ್ರತಿಯೊಂದು ಸಂದರ್ಭದಲ್ಲಿ ನಿರ್ಧರಿಸಬಹುದಾದಂತೆ ಐದು ವರ್ಷಗಳಿಗೆ ಮೀರದಂಥ ಅವಧಿಯೊಳಗೆ ಅಂಥ ವೆಚ್ಚಗಳನ್ನು ಅವುಗಳ ಮೇಲಿನ ಬಡ್ಡಿಯೊಂದಿಗೆ ತೀರಿಸಲು ಸಾಕಾಗುವಂಥ ಮೊಬಲಗುಗಳ ಕಂತುಗಳಲ್ಲಿ ಮತ್ತು ಅಂಥ ಅಂತರಗಳಲ್ಲಿ, ಅವು ವಸೂಲಿ ಮಾಡುವಂಥವು ಆಗಿರತಕ್ಕದ್ದು.

(2) ಸದರಿ ಕಂತುಗಳು, ಯಾವ ಆವರಣಗಳ ಮೇಲೆ ವೆಚ್ಚಗಳ ಋಣಭಾರ ಹೊರಿಸಲಾಗಿದೆಯೋ ಆ ಯಾವುವೇ ಆವರಣಗಳ ಮಾಲೀಕನು ಅಥವಾ ಅಧಿಭೋಗದಾರನು ಸಂದಾಯ ಮಾಡುವಂಥವುಗಳು ಆಗಿರತಕ್ಕದ್ದು:

ಪರಂತು, ಯಾವುದೇ ಅಂಥ ಕಂತನ್ನು ಅಧಿಭೋಗದಾರನು ಸಂದಾಯ ಮಾಡಿದಾಗ ಅವನು ಮಾಲೀಕನಿಗೆ ಸಂದಾಯ ಮಾಡಬೇಕಾದ ಬಾಡಿಗೆಯಿಂದ ಆ ಕಂತಿನ ಮೊಬಲಗನ್ನು ಮುರಿದುಕೊಳ್ಳಲು ಅಥವಾ ಮಾಲೀಕನಿಂದ ಅದನ್ನು ವಸೂಲಿ ಮಾಡಲು ಅವನು ಹಕ್ಕುಳ್ಳವನಾಗಿರತಕ್ಕದ್ದು.

360. ಮೇಲ್ಪಾಟು ವೆಚ್ಚಗಳಿಗೆ ಸಂಬಂಧಿಸಿದ ಋಣಭಾರದ ವಿಮೋಚನೆ.- ಯಾವುದೇ ಮೇಲ್ಪಾಟು ವೆಚ್ಚಗಳ ಸಂದಾಯದ ಅವಧಿಯು ಮುಕ್ತಾಯವಾಗುವುದಕ್ಕೆ ಮುಂಚೆ, ಯಾವುದೇ ಕಾಲದಲ್ಲಿ ಯಾವ ಆವರಣಗಳ ಮೇಲೆ ವೆಚ್ಚಗಳ ಋಣಭಾರ ಹೊರಿಸಲಾಗಿದೆಯೋ, ಆ ಆವರಣದ ಮಾಲೀಕನು ಅಥವಾ ಅಧಿಭೋಗದಾರನು, ಸದರಿ ವೆಚ್ಚಗಳಲ್ಲಿ ಇನ್ನೂ ಸಂದಾಯ ಮಾಡಬೇಕಾಗಿರುವಂಥ ಭಾಗವನ್ನು ಆಯುಕ್ತರಿಗೆ ಸಂದಾಯ ಮಾಡುವ ಮೂಲಕ ಅಂಥ ಋಣಭಾರದಿಂದ ವಿಮೋಚನೆ ಹೊಂದಬಹುದು.

361. ಪಾಲಿಕೆಯ ಅಧಿಕಾರಿಗಳು, ಏಜಂಟರುಗಳು ಮತ್ತು ಉಪ-ಏಜಂಟರುಗಳಿಗೆ "ಲೋಕನೌಕರ" ಪದದ ಅನ್ವಯಿಸುವಿಕೆ.- ಪ್ರತಿಯೊಬ್ಬ ಕೌನ್ಸಿಲರ್‌ನನ್ನು, ಅಧಿಕಾರಿಯನ್ನು ಅಥವಾ ನೌಕರನನ್ನು, ಪಾಲಿಕೆಯ ಯಾವುದೇ ತೆರಿಗೆಯನ್ನು, ಫೀಜನ್ನು, ಅಥವಾ ಪಾಲಿಕೆಗೆ ಬಾಕಿ ಇರುವ ಇತರ ಮೊತ್ತವನ್ನು ಸಂಗ್ರಹಿಸುವುದಕ್ಕಾಗಿ ಇರುವ ಪ್ರತಿಯೊಬ್ಬ ಕಂಟ್ರಾಕ್ಟರನನ್ನು ಅಥವಾ ಏಜೆಂಟನನ್ನು ಮತ್ತು ಅಂಥ ತೆರಿಗೆಯನ್ನು, ಫೀಜನ್ನು ಅಥವಾ ಮೊತ್ತವನ್ನು ಸಂಗ್ರಹಿಸುವುದಕ್ಕಾಗಿ ಅಂಥ ಯಾರೇ ಕಂಟ್ರಾಕ್ಟರ್‌ನಿಂದ ಅಥವಾ ಏಜೆಂಟನಿಂದ ನಿಯೋಜಿತನಾದ ಪ್ರತಿಯೊಬ್ಬ ವ್ಯಕ್ತಿಯನ್ನು ಭಾರತ ದಂಡ ಸಂಹಿತೆಯ 21ನೇ ಪ್ರಕರಣದ ಅರ್ಥವ್ಯಾಪ್ತಿಯಲ್ಲಿ ಲೋಕನೌಕರ ಎಂದು ಭಾವಿಸತಕ್ಕದ್ದು.

362. ಕಂಪೆನಿಗಳಿಂದ ಅಪರಾಧಗಳು.- (1) ಈ ಅಧಿನಿಯಮದ ಮೇರೆಗೆ ಯಾವುದೇ ಅಪರಾಧವನ್ನು ಕಂಪನಿಯು ಮಾಡಿರುವಲ್ಲಿ, ಆ ಅಪರಾಧ ನಡೆದ ಕಾಲದಲ್ಲಿ ಕಂಪೆನಿಯ ಪ್ರಭಾರದಲ್ಲಿದ್ದ ಮತ್ತು ಆ ಕಂಪನಿಯ ವ್ಯವಹಾರವನ್ನು ನಡೆಸುವುದಕ್ಕಾಗಿ ಕಂಪನಿಗೆ ಜವಾಬ್ದಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯನ್ನು ಹಾಗೂ ಕಂಪೆನಿಯನ್ನು ಅಪರಾಧದ ತ್ಪಪಿತಸ್ಥ ಎಂದು ಭಾವಿಸತಕ್ಕದ್ದು ಮತ್ತು ತನ್ನ ವಿರುದ್ಧದ ವ್ಯವಹರಣೆಗೆ ಗುರಿಯಾಗತಕ್ಕದ್ದು ಮತ್ತು ತದನುಸಾರವಾಗಿ ದಂಡಿತನಾಗತಕ್ಕದ್ದು:

ಪರಂತು, ಈ ಉಪ-ಪ್ರಕರಣದಲ್ಲಿ ಒಳಗೊಂಡಿರುವುದು ಯಾವುದು ಅಪರಾಧವು ತನಗೆ ತಿಳಿಯದೆಯೇ ನಡೆಯಿತೆಂದು ಅಥವಾ ಅಂಥ ಅಪರಾಧ ನಡೆಯುವುದನ್ನು ತಡೆಗಟ್ಟಲು ಯುಕ್ತವಾದ ಎಲ್ಲ ಜಾಗರೂಕತೆಯನ್ನು ತಾನು ವಹಿಸಿದ್ದೆನೆಂದು ಅಂಥ ಯಾರೇ ವ್ಯಕ್ತಿಯು ರುಜುವಾತುಪಡಿಸಿದರೆ ಅವನನ್ನು ಈ ಅಧಿನಿಯಮದಲ್ಲಿ ಉಪಬಂಧಿಸಿದ ಯಾವುದೇ ದಂಡನೆಗೆ ಗುರಿಪಡಿಸತಕ್ಕದ್ದಲ್ಲ.

(2) ಉಪ-ಪ್ರಕರಣ (1) ರಲ್ಲಿ ಏನೇ ಒಳಗೊಂಡಿದ್ದರೂ, ಈ ಅಧಿನಿಯಮದ ಮೇರೆಗೆ ಅಪರಾಧವನ್ನು ಕಂಪೆನಿಯು ಮಾಡಿರುವಲ್ಲಿ ಮತ್ತು ಆ ಅಪರಾಧವನ್ನು ಕಂಪೆನಿಯ ಯಾರೇ ನಿರ್ದೇಶಕರ, ವ್ಯವಸ್ಥಾಪಕರ, ಕಾರ್ಯದರ್ಶಿಯ ಅಥವಾ ಇತರ ಅಧಿಕಾರಿಯ ಸಮ್ಮತಿಯಿಂದ ಇಲ್ಲವೇ ಪರೋಕ್ಷ ಸಮ್ಮತಿಯಿಂದ ನಡೆಯಿತೆಂದು ರುಜುವಾತಾದಲ್ಲಿ ಅಥವಾ ಅವರ ಯಾವುದೇ ನಿರ್ಲಕ್ಷ್ಯತೆಯಿಂದಾಗಿ ನಡೆಯಿತೆಂದು ಆರೋಪಿಸಬಹುದಾಗಿರುವಲ್ಲಿ ಅಂಥ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯನ್ನೂ ಸಹ ಆ ಅಪರಾಧದ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ಅವರು ತಮ್ಮ ವಿರುದ್ಧದ ವ್ಯವಹರಣೆಗೆ ಗುರಿಯಾಗತಕ್ಕದ್ದು ಮತ್ತು ತದನುಸಾರವಾಗಿ ದಂಡಿತರಾಗತಕ್ಕದ್ದು.

ವಿವರಣೆ.- ಈ ಪ್ರಕರಣದ ಉದ್ದೇಶಕ್ಕಾಗಿ,-

(ಎ) `ಕಂಪನಿ' ಎಂದರೆ ನಿಗಮಿತ ನಿಕಾಯ ಮತ್ತು ಅದು ಒಂದು ಫರ್ಮ್, ಸೊಸೈಟಿ ಮತ್ತು ವ್ಯಕ್ತಿಗಳ ಸಂಘವನ್ನು ಒಳಗೊಳ್ಳುತ್ತದೆ;

(ಬಿ) ಫರ್ಮಿಗೆ ಸಂಬಂಧಿಸಿದಂತೆ `ನಿರ್ದೇಶಕ' ಎಂದರೆ ಆ ಫರ್ಮ್‌ನ ಪಾಲುದಾರ.

363. ಧ್ವಜದ ಅಧಿಕೃತ ಪ್ರದರ್ಶನ.- (1) ಯಾರೇ ವ್ಯಕ್ತಿಯು ರಾಷ್ಟ್ರಧ್ವಜವನ್ನು ಅಥವಾ ಸರ್ಕಾರವು ಅನುಮೋದಿಸಿದ ಧ್ವಜವನ್ನು ಹೊರತುಪಡಿಸಿ ಯಾವುದೇ ಇತರ ಧ್ವಜವನ್ನು ಪಾಲಿಕೆಯ ಕಚೇರಿಯ ಮೇಲೆ ಹಾರಿಸತಕ್ಕದ್ದಲ್ಲ.

(2) ಉಪಪ್ರಕರಣ (1)ನ್ನು ಉಲಂಘಿಸುವ ಯಾವೊಬ್ಬನು, ಮೂರು ತಿಂಗಳವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ಮತ್ತು ಉಲಂಘನೆಯು ಮುಂದುವರೆದ ಸಂದರ್ಭದಲ್ಲಿ, ಉಲಂಘನೆಯು ಮುಂದುವರೆದ ಪ್ರತಿಯೊಂದು ದಿನಕ್ಕೆ ಐದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಹೆಚ್ಚಿನ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

364. ಸವಾಲು ಕೂಗುವುದಕ್ಕೆ ನಿಷೇಧ.- (1) ಈ ಅಧಿನಿಯಮದ ಮೇರೆಗೆ ಪಾಲಿಕೆಯಿಂದ ಅಥವಾ ಅದರ ಪರವಾಗಿ ಚರ ಅಥವಾ ಸ್ಥಿರ ಸ್ವತ್ತಿನ ಮಾರಾಟಕ್ಕೆ ಸಂಬಂಧಿಸಿದಂತೆ ಯಾವುದೇ ಕರ್ತವ್ಯವನ್ನು ನೆರವೇರಿಸಬೇಕಾಗಿರುವ ಪಾಲಿಕೆಯ ಯಾರೇ ನೌಕರನು ಅಥವಾ ಅಧಿಕಾರಿಯು ಅಂಥ ಮಾರಾಟದಲ್ಲಿ ಮಾರಾಟ ಮಾಡಿದ ಯಾವುದೇ ಸ್ವತ್ತಿಗಾಗಿ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಸವಾಲು ಕೂಗತಕ್ಕದ್ದಲ್ಲ ಅಥವಾ ಅದರಲ್ಲಿ ಹಿತಾಸಕ್ತಿಯನ್ನು ಆರ್ಜಿಸತಕ್ಕದ್ದಲ್ಲ.

(2) (1)ನೇ ಉಪ-ಪ್ರಕರಣ ಉಪಬಂಧಗಳನ್ನು ಉಲಂಘಿಸುವ ಯಾರೇ ವ್ಯಕ್ತಿಯು ಐದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು ಮತ್ತು ಸೇವೆಯಿಂದ ವಜಾ ಆಗುವುದಕ್ಕೂ ಸಹ ಗುರಿಯಾಗತಕ್ಕದ್ದು.

365. ಪಾಲಿಕೆಯ ಪ್ರದೇಶದೊಳಗೆ ಪಂಚಾಯಿತಿ ಪ್ರದೇಶವನ್ನು ವಿಲೀನಗೊಳಿಸುವುದರ ಪರಿಣಾಮ.- ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಅಡಿಯಲ್ಲಿ ಒಂದು ಅಥವಾ ಹೆಚ್ಚು ಕಂದಾಯ ಗ್ರಾಮಗಳನ್ನು ಒಳಗೊಂಡ ಯಾವ ಸ್ಥಳೀಯ ಪ್ರದೇಶಕ್ಕೆ ಸಂಬಂಧಿಸಿದಂತೆ ಒಂದು ಪಂಚಾಯಿತಿ ಪ್ರದೇಶವನ್ನು ರಚಿಸಲಾಗಿದೆಯೋ ಆ ಯಾವುದೇ ಸ್ಥಳೀಯ ಪ್ರದೇಶವನ್ನು 4ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗಿನ ಅಧಿಸೂಚನೆಯ ಬಲದಿಂದಾಗಿ ಪಾಲಿಕೆ ಪ್ರದೇಶದೊಳಗೆ ಸೇರಿಸಲಾಗಿದ್ದರೆ ಆಗ ಈ ಅಧಿನಿಯಮದಲ್ಲಿ ಅಥವಾ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರಲ್ಲಿ ಏನೇ ಒಳಗೊಂಡಿದ್ದರೂ, ಆದರೆ ಈ ಅಧಿನಿಯಮದ 4ನೇ ಪ್ರಕರಣದ ಉಪಬಂಧಗಳಿಗೆ ಒಳಪಟ್ಟು ಅಂಥ ಪ್ರದೇಶವನ್ನು ಯಾವ ದಿನಾಂಕದಂದು ಪಾಲಿಕೆ ಪ್ರದೇಶದೊಳಗೆ ಸೇರಿಸಲಾಗಿದೆಯೋ ಆ ದಿನಾಂಕದಿಂದ ಜಾರಿಗೆ ಬರುವಂತೆ ಈ ಕೆಳಕಂಡ ಪರಿಣಾಮಗಳು ಉಂಟಾಗತಕ್ಕದ್ದು ಎಂದರೆ:-

(ಎ) ಅಂಥ ಸ್ಥಳೀಯ ಪ್ರದೇಶದ ಗ್ರಾಮ ಪಂಚಾಯತಿಯು (ಇದರಲ್ಲಿ ಇನ್ನು ಮುಂದೆ ಪಂಚಾಯಿತಿ ಎಂದು ಉಲ್ಲೇಖಿಸಲಾಗಿದೆ) ಅಸ್ತಿತ್ವದಲ್ಲಿರುವುದು ನಿಂತುಹೋಗತಕ್ಕದ್ದು ಮತ್ತು ಅಂಥ ಪ್ರದೇಶವು ಯಾವ ತಾಲ್ಲೂಕು ಪಂಚಾಯತಿಯ ಮತ್ತು ಜಿಲ್ಲಾ ಪಂಚಾಯತಿಯ ಅಧಿಕಾರ ವ್ಯಾಪ್ತಿಯೊಳಗೆ ಇದೆಯೋ ಆ ತಾಲ್ಲೂಕು ಪಂಚಾಯಿತಿಯು ಮತ್ತು ಆ ಜಿಲ್ಲಾ ಪಂಚಾಯತಿಯು ಅಂಥ ಪ್ರದೇಶದ ಮೇಲೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವುದು ನಿಂತುಹೋಗತಕ್ಕದ್ದು;

(ಬಿ) ಗ್ರಾಮ ಪಂಚಾಯತಿಯ ನಿಧಿಯಲ್ಲಿ ವೆಚ್ಚ ಮಾಡದೆ ಉಳಿದಿರುವ ಶಿಲ್ಕು ಮತ್ತು ಪಂಚಾಯಿತಿಗೆ ಸೇರಿದ ಸ್ವತ್ತು (ದರಗಳ, ತೆರಿಗೆಗಳ ಮತ್ತು ಫೀಜುಗಳ ಬಾಕಿಗಳೂ ಸೇರಿದಂತೆ) ಮತ್ತು ಅಂಥ ಅಧಿಸೂಚನೆಗೆ ಮುಂಚೆ ಪಂಚಾಯಿತಿಯಲ್ಲಿ ನಿಹಿತವಾಗಿದ್ದ ಎಲ್ಲ ಹಕ್ಕುಗಳು ಮತ್ತು ಅಧಿಕಾರಗಳು, ಅವುಗಳಿಗೆ ಸಂಬಂಧಿಸಿದಂತೆ ಎಲ್ಲ ಋಣಭಾರಗಳಿಗೆ ಮತ್ತು ಹೊಣೆಗಾರಿಕೆಗಳಿಗೆ ಒಳಪಟ್ಟು ಪಾಲಿಕೆ ಪ್ರದೇಶದ ಪಾಲಿಕೆಯಲ್ಲಿ (ಇದರಲ್ಲಿ ಇನ್ನು ಮುಂದೆ ಪಾಲಿಕೆ ಎಂದು ಉಲ್ಲೇಖಿಸಲಾಗಿದೆ) ನಿಹಿತವಾಗತಕ್ಕದ್ದು;

(ಸಿ) ಸದರಿ ಸ್ಥಳೀಯ ಪ್ರದೇಶಕ್ಕೆ ಸಂಬಂಧಪಟ್ಟಂತೆ ಸದರಿ ದಿನಾಂಕದ ನಿಕಟ ಪೂರ್ವದಲ್ಲಿ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಮೇರೆಗೆ ಮಾಡಿದ, ಹೊರಡಿಸಿದ, ವಿಧಿಸಿದ ಅಥವಾ ಮಂಜೂರು ಮಾಡಿದ ಯಾವುದೇ ನೇಮಕ, ಅಧಿಸೂಚನೆ, ನೋಟೀಸು, ತೆರಿಗೆ, ಆದೇಶ, ಯೋಜನೆ, ಲೈಸೆನ್ಸು, ಅನುಮತಿ, ನಿಯಮ, ಉಪವಿಧಿ ಅಥವಾ ನಮೂನೆಯು ಜಾರಿಯಲ್ಲಿರುವುದು ಮುಂದುವರಿಯತಕ್ಕದ್ದು ಮತ್ತು ಈ ಅಧಿನಿಯಮದ ಮೇರೆಗೆ ಮಾಡಿದ, ಹೊರಡಿಸಿದ, ವಿಧಿಸಿದ ಅಥವಾ ಮಂಜೂರ್ಮಾಡಿದ ಯಾವುದೇ ನೇಮಕದ, ಅಧಿಸೂಚನೆ, ನೋಟೀಸು, ತೆರಿಗೆ, ಆದೇಶ, ಯೋಜನೆ, ಲೈಸೆನ್ಸು, ಅನುಮತಿ, ನಿಯಮ, ಉಪವಿಧಿ ಅಥವಾ ನಮೂನೆಯ ಮೂಲಕ ಅದನ್ನು ರದ್ದುಗೊಳಿಸುವವರೆಗೆ ಅಥವಾ ಮಾರ್ಪಾಡು ಮಾಡುವವರೆಗೆ ಈ ಅಧಿನಿಯಮದ ಮೇರೆಗೆ

ಮಾಡಲಾಗಿದೆ, ಹೊರಡಿಸಲಾಗಿದೆ, ವಿಧಿಸಲಾಗಿದೆ ಅಥವಾ ಮಂಜೂರು ಮಾಡಲಾಗಿದೆ ಎಂದು ಭಾವಿಸತಕ್ಕದ್ದು;

(ಡಿ) ಸದರಿ ದಿನಾಂಕದ ನಿಕಟಪೂರ್ವದಲ್ಲಿ ಸದರಿ ಸ್ಥಳೀಯ ಪ್ರದೇಶಕ್ಕೆ ಸಂಬಂಧಪಟಂ್ಟತೆ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಮೇರೆಗೆ ಮಾಡಿದ ಅಥವಾ ಅಧಿಪ್ರಮಾಣೀಕರಿಸಿದ ಎಲ್ಲ ಬಜೆಟ್ ಅಂದಾಜುಗಳು, ನಿರ್ಧರಣೆಗಳು, ನಿರ್ಧರಣಾ ಪಟ್ಟಿಗಳು, ಮೌಲ್ಯಮಾಪನಗಳು ಅಥವಾ ಅಳತೆಗಳನ್ನು ಈ ಅಧಿನಿಯಮದ ಮೇರೆಗೆ ಮಾಡಲಾಗಿದೆ ಅಥವಾ ಅಧಿಪ್ರಮಾಣೀಕರಿಸಲಾಗಿದೆಯೆಂದು ಭಾವಿಸತಕ್ಕದ್ದು;

(ಇ) ಸದರಿ ದಿನಾಂಕದ ನಿಕಟಪೂರ್ವದಲ್ಲಿ ಪಂಚಾಯಿತಿಯು ಅಥವಾ ಅದರ ಪರವಾಗಿ ವಹಿಸಿದ ಮತ್ತು ಸದರಿ ದಿನಾಂಕದಂದು ಚಾಲ್ತಿಯಲ್ಲಿದ್ದ ಎಲ್ಲ ಋಣಗಳನ್ನು ಮತ್ತು ಬಾಧ್ಯತೆಗಳನ್ನು ಮತ್ತು ಸದರಿ ದಿನಾಂಕಕ್ಕೆ ನಿಕಟಪೂರ್ವದಲ್ಲಿ ಪಂಚಾಯಿತಿಯು ಅಥವಾ ಅದರ ಪರವಾಗಿ ಮಾಡಿಕೊಂಡ ಮತ್ತು ಸದರಿ ದಿನಾಂಕದಂದು ಚಾಲ್ತಿಯಲ್ಲಿದ್ದ ಎಲ್ಲ ಕರಾರುಗಳನ್ನು ಈ ಅಧಿನಿಯಮದ ಮೂಲಕ ಪಾಲಿಕೆಗೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಪಾಲಿಕೆಯು ವಹಿಸಿದೆ ಎಂದು ಮತ್ತು ಮಾಡಿಕೊಂಡಿದೆ ಎಂದು ಭಾವಿಸತಕ್ಕದ್ದು;

(ಎಫ್) ಸದರಿ ದಿನಾಂಕದ ನಿಕಟಪೂರ್ವದಲ್ಲಿ ಪಂಚಾಯಿತಿಯಲ್ಲಿ ನಿಯೋಜಿತರಾಗಿದ್ದ ಎಲ್ಲ ಅಧಿಕಾರಿಗಳು ಮತ್ತು ನೌಕರರು, ಈ ಅಧಿನಿಯಮದ ಮೇರೆಗೆ ಪಾಲಿಕೆಯ ಅಧಿಕಾರಿಗಳು ಮತ್ತು ನೌಕರರು ಆಗತಕ್ಕದ್ದು ಮತ್ತು ಈ ಅಧಿನಿಯಮದ ಉಪಬಂಧಕ್ಕೆ ಅನುಸಾರವಾಗಿ ಬೇರೆ ಏರ್ಪಾಟನ್ನು ಮಾಡುವವರೆಗೆ ಸದರಿ ದಿನಾಂಕದ ನಿಕಟಪೂರ್ವದಲ್ಲಿ ಅವರು ಯಾವ ಸಂಬಳಕ್ಕೆ ಮತ್ತು ಭತ್ಯಗಳಿಗೆ ಹಕ್ಕುಳ್ಳವರಾಗಿದ್ದರೋ ಆ ಸಂಬಳವನ್ನು ಮತ್ತು ಭತ್ಯೆಗಳನ್ನು ಪಡೆಯತಕ್ಕದ್ದು ಮತ್ತು ಯಾವ ಸೇವಾ ಷರತ್ತುಗಳಿಗೆ ಅವರು ಒಳಪಟ್ಟಿದ್ದರೋ ಆ ಷರತ್ತುಗಳಿಗೆ ಒಳಪಟ್ಟಿರತಕ್ಕದ್ದು:

ಪರಂತು, ಪಾಲಿಕೆಯ ಅಧೀನದಲ್ಲಿನ ಸೇವೆಯ ಅಗತ್ಯತೆಗಳಿಗೆ ಯಾವ ಅಧಿಕಾರಿಯ ಅಥವಾ ನೌಕರನ ಸೇವೆಯು ಅವಶ್ಯವಿಲ್ಲವೆಂದು ಅಥವಾ ಸೂಕ್ತವಾಗಿಲ್ಲವೆಂದು ಪಾಲಿಕೆಯು ಅಭಿಪ್ರಾಯಪಡುವುದೋ ಅಂಥ ಯಾರೇ ಅಧಿಕಾರಿಗೆ ಅಥವಾ ನೌಕರನಿಗೆ, ಅವನ ನಿಯೋಜನೆಯ ನಿಬಂಧನೆಗಳು ಕೊಡಲು ಅಗತ್ಯಪಡಿಸಿದಂಥ ನೋಟೀಸನ್ನು ಕೊಟ್ಟ ತರುವಾಯ, ಸರ್ಕಾರದ ಪೂರ್ವ ಮಂಜೂರಾತಿಗೆ ಒಳಪಟ್ಟು, ಆ ಯಾರೇ ಅಧಿಕಾರಿಯ ಅಥವಾ ನೌಕರನ ಸೇವೆಯನ್ನು ಮುಂದುವರಿಸದಿರುವುದು ಪಾಲಿಕೆಗೆ ಸಕ್ಷಮವಾದುದಾಗಿರತಕ್ಕದ್ದು ಮತ್ತು ಯಾವ ಅಧಿಕಾರಿಯ ಅಥವಾ ನೌಕರನ ಸೇವೆಯನ್ನು ಬಿಟ್ಟುಬಿಡಲಾಗಿದೆಯೋ ಆ ಪ್ರತಿಯೊಬ್ಬ ಅಧಿಕಾರಿಯು ಅಥವಾ ನೌಕರನು ಅವನು ಯಾವ ಪಂಚಾಯಿತಿಯಲ್ಲಿ ನಿಯೋಜಿತನಾಗಿದ್ದನೋ ಆ ಪಂಚಾಯಿತಿಯು ಅಸ್ತಿತ್ವದಲ್ಲಿರುವುದು ನಿಂತುಹೋಗದಿದ್ದರೆ ಹೇಗೋ ಹಾಗೆ ಸೇವೆಯಿಂದ ಅಸಿಂಧುಗೊಳಿಸಿದಾಗ ತೆಗೆದುಕೊಳ್ಳಲು ಅಥವಾ ಪಡೆಯಲು ಅವನು ಹಕ್ಕುಳ್ಳವನಾಗಬಹುದಾಗಿದ್ದ ರಜೆ, ಪಿಂಚಣಿ, ಭವಿಷ್ಯನಿಧಿ ಮತ್ತು ಉಪದಾನಕ್ಕೆ ಹಕ್ಕುಳ್ಳವನಾಗಿರತಕ್ಕದ್ದು;

(ಜಿ) ಸದರಿ ದಿನಾಂಕದಂದು ಪಂಚಾಯಿತಿಯ ಮುಂದೆ ಇತ್ಯರ್ಥದಲ್ಲಿದ್ದ ಎಲ್ಲ ವ್ಯವಹರಣೆಗಳು ಪಾಲಿಕೆಗೆ ವರ್ಗಾವಣೆಯಾಗಿವೆ ಎಂದು ಭಾವಿಸತಕ್ಕದ್ದು ಮತ್ತು ಅವುಗಳನ್ನು ಪಾಲಿಕೆಯಲ್ಲಿ ಮುಂದುವರಿಸತಕ್ಕದ್ದು;

(ಹೆಚ್) ಯಾವುದೇ ಪ್ರಾಧಿಕಾರದ ಮುಂದೆ ಇತ್ಯರ್ಥದಲ್ಲಿರುವ ಎಲ್ಲ ಅಪೀಲುಗಳನ್ನು ಕಾರ್ಯಸಾಧ್ಯವಾಗಬಹುದಾದಪ್ಪುಮಟ್ಟಿಗೆ ಅವುಗಳನ್ನು ದಾಖಲು ಮಾಡಿದಾಗ, ಸದರಿ ಸ್ಥಳೀಯ ಪ್ರದೇಶವು ದೊಡ್ಡ ನಗರ ಪ್ರದೇಶದಲ್ಲಿ ಒಳಗೊಂಡಿದ್ದರೆ ಹೇಗೋ ಹಾಗೆ ವಿಲೆ ಮಾಡತಕ್ಕದ್ದು;

(ಐ) ಸದರಿ ದಿನಾಂಕದಂದು ಇತ್ಯರ್ಥದಲ್ಲಿದ್ದ, ಪಂಚಾಯಿತಿಯು ಅಥವಾ ಅದರ ಪರವಾಗಿ ಹೂಡಿದ್ದ ಎಲ್ಲಾ ಪ್ರಾಸಿಕ್ಯೂಷನ್‌ಗಳನ್ನು ಮತ್ತು ಪಂಚಾಯಿತಿಯು ಅಥವಾ ಪಂಚಾಯತಿಯ ಯಾರೇ ಅಧಿಕಾರಿಯು ಹೂಡಿದ ಅಥವಾ ಪಂಚಾಯತಿಯ ಅಥವಾ ಅದರ ಯಾರೇ ಅಧಿಕಾರಿಯ ವಿರುದ್ದ ಹೂಡಿದ್ದ ಎಲ್ಲ ದಾವೆಗಳನ್ನು ಅಥವಾ ಇತರ ಕಾನೂನು ವ್ಯವಹರಣೆಗಳನ್ನು, ಅಂಥ ಪ್ರಾಸಿಕ್ಯೂಷನ್‌ಗಳನ್ನು, ದಾವೆಗಳನ್ನು ಅಥವಾ ವ್ಯವಹರಣೆಗಳನ್ನು ಹೂಡಿದಾಗ ಸದರಿ ಸ್ಥಳೀಯ ಪ್ರದೇಶವು ಪಾಲಿಕೆ ಪ್ರದೇಶದಲ್ಲಿ ಒಳಗೊಂಡಿದ್ದರೆ ಹೇಗೋ ಹಾಗೆ ಪಾಲಿಕೆಯು ಮುಂದುವರೆಸತಕ್ಕದ್ದು ಅಥವಾ ಅದರ ವಿರುದ್ದ ಮುಂದುವರಿಸತಕ್ಕದ್ದು;

(ಜೆ) ಪಾಲಿಕೆಯಲ್ಲಿ ನಿಹಿತವಾಗಿರುವ, ದರಗಳ, ತೆರಿಗೆಗಳ ಮತ್ತು ಫೀಜುಗಳ ಎಲ್ಲ ಬಾಕಿಗಳು ಈ ಅಧಿನಿಯಮದ ಮೇರೆಗೆ ಅಂಥ ದರಗಳನ್ನು ಮತ್ತು ಫೀಜುಗಳನ್ನು ವಿಧಿಸಲಾಗದಿದ್ದಾಗ್ಯೂ ಈ ಅಧಿನಿಯಮದ ಮೇರೆಗೆ ವಸೂಲಿ ಮಾಡಬಹುದಾದ ತೆರಿಗೆಯ ರೀತಿಯಲ್ಲಿಯೇ ವಸೂಲಿ ಮಾಡುವಂಥವುಗಳು ಆಗಿರತಕ್ಕದ್ದು.

(ಕೆ) ಈ ಅಧಿನಿಯಮದ ಉಪಬಂಧಗಳಿಗನುಸಾರವಾಗಿ ಪಾಲಿಕೆಯು ಪುನಾರಚನೆಯಾಗುವವರೆಗೆ ಈ ಅಧಿನಿಯಮದಲ್ಲಿ ತದ್ವಿರುದ್ಧವಾದುದು ಏನೇ ಒಳಗೊಂಡಿದ್ದರೂ ಪಾಲಿಕೆ ಪ್ರದೇಶದಲ್ಲಿ ಸೇರಿಸಿದ ಸ್ಥಳೀಯ ಪ್ರದೇಶದ ಸಾಮಾನ್ಯ ನಿವಾಸಿಗಳಾಗಿರುವ, ಸರ್ಕಾರದಿಂದ ನಾಮನಿರ್ದೇಶಿತರಾಗಿರುವ ಅಷ್ಟು ಸಂಖ್ಯೆಯ ವ್ಯಕ್ತಿಗಳು ಪಾಲಿಕೆಯ ಹೆಚ್ಚುವರಿ ಕೌನ್ಸಿಲರುಗಳಾಗಿರತಕ್ಕದ್ದು.

366. ತೊಂದರೆಗಳ ನಿವಾರಣೆ.- ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವಾಗ ಯಾವುದೇ ತೊಂದರೆ ಉದ್ಭವಿಸಿದರೆ, ಸರ್ಕಾರವು ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸಿದ ಆದೇಶದ ಮೂಲಕ, ಆ ಸಂದರ್ಭವು ಅಗತ್ಯಪಡಿಸಬಹುದಾದಂತೆ, ತೊಂದರೆಯನ್ನು ನಿವಾರಿಸಲು ತನಗೆ ಅವಶ್ಯವೆಂದು ಕಂಡುಬರುವ ಯಾವುದೇ ಕಾರ್ಯವನ್ನು ಮಾಡಬಹುದು.

367. ಮಹಾನಗರ ಯೋಜನಾ ಸಮಿತಿ.- (1) ಸರ್ಕಾರವು ಬೆಂಗಳೂರು ಮಹಾನಗರ ಪ್ರದೇಶಕ್ಕಾಗಿ ಅಂಥ ಇಡೀ ಪ್ರದೇಶಕ್ಕೆ ಅಭಿವೃದ್ಧಿ ಯೋಜನೆಯ ಕರಡನ್ನು ಸಿದ್ಧಪಡಿಸುವುದಕ್ಕಾಗಿ ಒಂದು ಮಹಾನಗರ ಯೋಜನಾ ಸಮಿತಿಯನ್ನು ರಚಿಸತಕ್ಕದ್ದು.

ವಿವರಣೆ.- ಈ ಪ್ರಕರಣದ ಉದ್ದೇಶಕ್ಕಾಗಿ "ಬೆಂಗಳೂರು ಮಹಾನಗರ ಪ್ರದೇಶ" ಎಂದರೆ ಭಾರತದ ಸಂವಿಧಾನದ 243ಪಿ ಅನುಚ್ಛೇದದ (ಸಿ) ಖಂಡದ ಅಡಿಯಲ್ಲಿ ಮಹಾನಗರ ಪ್ರದೇಶವೆಂದು ರಾಜ್ಯಪಾಲರು ನಿರ್ದಿಷ್ಟಪಡಿಸಿದ ಪ್ರದೇಶ.

(2) ಮಹಾ ನಗರ ಯೋಜನಾ ಸಮಿತಿಯು ಮೂವತ್ತು ವ್ಯಕ್ತಿಗಳನ್ನು ಹೊಂದಿರತಕ್ಕದ್ದು, ಅವರಲ್ಲಿ,-

(ಎ) ಸರ್ಕಾರವು ನಿರ್ದಿಷ್ಟಪಡಿಸಬಹುದಾದಂತೆ, ಸಮಿತಿ ಸದಸ್ಯರಲ್ಲಿ ಮೂರನೇ ಎರಡು ಭಾಗಕ್ಕಿಂತ ಕಡಿಮೆ ಇಲ್ಲದಷ್ಟು ಸಂಖ್ಯೆಯ ವ್ಯಕ್ತಿಗಳು ಪಾಲಿಕೆಗಳ ಮತ್ತು ಮುನ್ಸಿಪಲ್ ಕೌನ್ಸಿಲ್‌ಗಳ ಮತ್ತು ಪಟ್ಟಣ ಪಂಚಾಯತಿಗಳ ಚುನಾಯಿತ ಸದಸ್ಯರಿಂದ ಮತ್ತು ಮಹಾನಗರ ಪ್ರದೇಶದಲ್ಲಿನ ಜಿಲ್ಲಾ ಪಂಚಾಯಿತಿಗಳ, ತಾಲ್ಲೂಕು ಪಂಚಾಯಿತಿಗಳ ಮತ್ತು ಗ್ರಾಮಪಂಚಾಯತಿಗಳ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಮತ್ತು ಅವರುಗಳೆಲ್ಲರ ಪೈಕಿಯಿಂದ ನಗರದ ಮತ್ತು ಇತರ ಮುನ್ಸಿಪಲ್ ಪ್ರದೇಶದ ಮತ್ತು ಜಿಲ್ಲಾ ಪಂಚಾಯತಿಯ, ತಾಲ್ಲೂಕು ಪಂಚಾಯತಿಯ ಮತ್ತು ಗ್ರಾಮಪಂಚಾಯತಿಯ ಅಧಿಕಾರ ವ್ಯಾಪ್ತಿಯಲ್ಲಿರುವ ಪ್ರದೇಶಗಳ ಜನಸಂಖ್ಯೆಯ ನಡುವಿನ ಅನುಪಾತದ ಪ್ರಮಾಣಕ್ಕೆ ಅನುಸಾರವಾಗಿ ನಿಯಮಿಸಿದ ರೀತಿಯಲ್ಲಿ ಚುನಾಯಿತರಾಗತಕ್ಕದ್ದು.

(ಬಿ) (i) ರಾಜ್ಯ ಸರ್ಕಾರವು ನಿರ್ಧರಿಸಬಹುದಾದಷ್ಟು ಸಂಖ್ಯೆಯ ಮತ್ತು ಭಾರತ ಸರ್ಕಾರವು ಅಥವಾ ಸಂದರ್ಭಾನುಸಾರ ರಾಜ್ಯ ಸರ್ಕಾರವು ನಾಮನಿರ್ದೇಶನ ಮಾಡಿದ ಭಾರತ ಸರ್ಕಾರದ ಮತ್ತು ರಾಜ್ಯ ಸರ್ಕಾರದ ಪ್ರತಿನಿಧಿಗಳು;

(ii) ಸಮಿತಿಗೆ ವಹಿಸಿದ ಪ್ರಕಾರ್ಯಗಳನ್ನು ನೆರವೇರಿಸಲು ಅಗತ್ಯವೆಂದು ಭಾವಿಸಬಹುದಾದಷ್ಟು ಸಂಖ್ಯೆಯ, ರಾಜ್ಯ ಸರ್ಕಾರವು ನಾಮನಿರ್ದೇಶನ ಮಾಡಿದ ಸಂಘಗಳ ಮತ್ತು ಸಂಸ್ಥೆಗಳ ಪ್ರತಿನಿಧಿಗಳು

- ಇರತಕ್ಕದ್ದು;

(3) ಮಹಾನಗರ ಪ್ರದೇಶದಲ್ಲಿ ಯಾರ ಚುನಾವಣಾ ಕ್ಷೇತ್ರಗಳು ಇರುವವೋ ಆ ಲೋಕಸಭೆಯ ಮತ್ತು ರಾಜ್ಯ ವಿಧಾನಸಭೆಯ ಎಲ್ಲಾ ಸದಸ್ಯರು ಮತ್ತು ಅಂಥ ಪ್ರದೇಶದಲ್ಲಿ ಮತದಾರರಾಗಿ ನೋಂದಾಯಿಸಲ್ಪಟ್ಟಿರುವ ರಾಜ್ಯಸಭೆಯ ಮತ್ತು ರಾಜ್ಯ ವಿಧಾನಪರಿಷತ್ತಿನ ಸದಸ್ಯರು ಸಮಿತಿಯ ಖಾಯಂ ಆಹ್ವಾನಿತರಾಗಿರತಕ್ಕದ್ದು.

(4) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆಯುಕ್ತರು ಸಮಿತಿಯ ಕಾರ್ಯದರ್ಶಿಯಾಗಿರತಕ್ಕದ್ದು.

(5) ಮಹಾನಗರ ಯೋಜನಾ ಸಮಿತಿಯ ಅಧ್ಯಕ್ಷರನ್ನು ನಿಯಮಿಸಬಹುದಾದಂಥ ರೀತಿಯಲ್ಲಿ ಆಯ್ಕೆ ಮಾಡತಕ್ಕದ್ದು.

(6) ಮಹಾನಗರ ಯೋಜನಾ ಸಮಿತಿಯು, ಇಡೀ ಬೆಂಗಳೂರು ಮಹಾನಗರ ಪ್ರದೇಶಕ್ಕೆ ಅಭಿವೃದ್ಧಿ ಯೋಜನೆಯ ಕರಡನ್ನು ಸಿದ್ಧಪಡಿಸತಕ್ಕದ್ದು.

(7) ಅಭಿವೃದ್ಧಿ ಯೋಜನೆಯ ಕರಡನ್ನು ಸಿದ್ಧಪಡಿಸುವಾಗ ಮಹಾನಗರ ಯೋಜನಾ ಸಮಿತಿಯು,-

(ಎ) (i) ಮಹಾನಗರ ಪ್ರದೇಶದಲ್ಲಿನ ಸ್ಥಳೀಯ ಪ್ರಾಧಿಕಾರಗಳು ಸಿದ್ಧಪಡಿಸಿದ ಯೋಜನೆಗಳನ್ನು;

(ii) ಆ ಪ್ರದೇಶದ ಸಮನ್ವಯ ಪ್ರಾದೇಶಿಕ ಯೋಜನೆ, ನೀರು ಮತ್ತು ಇತರ ಭೌತಿಕ ಹಾಗೂ ಪ್ರಾಕೃತಿಕ ಸಂಪನ್ಮೂಲಗಳ ಹಂಚಿಕೆ, ಮೂಲಭೂತ ಸೌಲಭ್ಯಗಳ ಸಮಗ್ರ ಅಭಿವೃದ್ಧಿ ಮತ್ತು ಪರಿಸರ ಸಂರಕ್ಷಣೆಯೂ ಒಳಗೊಂಡಂತೆ ಸ್ಥಳೀಯ ಪ್ರಾಧಿಕಾರಗಳ ನಡುವಣ ಸಮಾನ ಹಿತಾಸಕ್ತಿಯ ವಿಷಯಗಳನ್ನು;

(iii) ಭಾರತ ಸರ್ಕಾರವು ಮತ್ತು ರಾಜ್ಯ ಸರ್ಕಾರವು ಗೊತ್ತುಪಡಿಸಿದ ಸಮಗ್ರ ಉದ್ದೇಶಗಳನ್ನು ಮತ್ತು ಆದ್ಯತೆಗಳನ್ನು;

(iv) ಭಾರತ ಸರ್ಕಾರದ ಮತ್ತು ರಾಜ್ಯ ಸರ್ಕಾರದ ಏಜೆನ್ಸಿಗಳು ಮಹಾನಗರ ಪ್ರದೇಶದಲ್ಲಿ ಹೂಡುವ ಸಂಭವವಿರುವ ಬಂಡವಾಳಗಳ ವ್ಯಾಪ್ತಿ ಮತ್ತು ಸ್ವರೂಪವನ್ನು ಮತ್ತು ಲಭ್ಯವಿರುವ ಹಣಕಾಸು ಅಥವಾ ಇತರ ಸಂಪನ್ಮೂಲಗಳನ್ನು

- ಗಣನೆಗೆ ತೆಗೆದುಕೊಳ್ಳತಕ್ಕದ್ದು.

(ಬಿ) ರಾಜ್ಯಪಾಲರು ಆದೇಶದ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಸಂಸ್ಥೆಗಳು ಮತ್ತು ಸಂಘಟನೆಗಳೊಂದಿಗೆ ಸಮಾಲೋಚಿಸತಕ್ಕದ್ದು;

(8) ಮಹಾನಗರ ಯೋಜನಾ ಸಮಿತಿಯ ಅಧ್ಯಕ್ಷರು ಅಂಥ ಸಮಿತಿಯು ಶಿಫಾರಸ್ಸು ಮಾಡಿದಂತಹ ಅಭಿವೃದ್ಧಿ ಯೋಜನೆಯನ್ನು ರಾಜ್ಯ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

368. ಕುಂದು ಕೊರತೆ ನಿವಾರಣಾ ಪ್ರಾಧಿಕಾರ.- (1) ಸರ್ಕಾರವು, ಸರ್ಕಾರಿ ರಾಜ್ಯ ಪತ್ರದಲ್ಲಿ ಅಧಿಸೂಚನೆಯ ಮೂಲಕ ಪಾಲಿಕೆಗಾಗಿ, ನಿವೃತ್ತ ಜಿಲ್ಲಾ ನ್ಯಾಯಾಧೀಶ ಅಥವಾ ವಿಶೇಷ ಡೆಪ್ಯೂಟಿ ಕಮೀಷನರ್ ದರ್ಜೆಗೆ ಕಡಿಮೆಯಿಲ್ಲದ ದರ್ಜೆಯ ನಿವೃತ್ತ ಅಧಿಕಾರಿಯನ್ನು ಒಳಗೊಂಡ ಕುಂದು ಕೊರತೆ ನಿವಾರಣಾ ಪ್ರಾಧಿಕಾರವನ್ನು ಸ್ಥಾಪಿಸತಕ್ಕದ್ದು.

(2) ರಾಜ್ಯ ಸರ್ಕಾರವು ಕುಂದುಕೊರತೆ ನಿವಾರಣಾ ಪ್ರಾಧಿಕಾರಿಗೆ ಅವಶ್ಯಕ ಸಿಬಂಬ್ಬಿಯನ್ನು ಒದಗಿಸತಕ್ಕದ್ದು.

(3) ಕುಂದು ಕೊರತೆ ನಿವಾರಣಾ ಪ್ರಾಧಿಕಾರದ ಕಛೇರಿಯು ವಾರದ ಎಲ್ಲಾ ಕೆಲಸದ ದಿನಗಳಂದು ಪಾಲಿಕೆಯ ವ್ಯವಹಾರ ವೇಳೆಗಳಲ್ಲಿ ತೆರೆದಿರತಕ್ಕದ್ದು.

(4) ಕುಂದು ಕೊರತೆ ನಿವಾರಣಾ ಪ್ರಾಧಿಕಾರದ ಸಂಬಳ ಮತ್ತು ಇತರ ಭತ್ಯೆಗಳು, ಆತನ ನಿವೃತ್ತಿ ಮುಂಚೆ ಅತನು ಅರ್ಹನಾದುದಕ್ಕೆ ನಿವೃತ್ತಿ ವೇತನವನ್ನು ಕಳೆದು, ಆಗಿರತಕ್ಕದ್ದು.

(5) ಕುಂದು ಕೊರತೆ ನಿವಾರಣಾ ಪ್ರಾಧಿಕಾರವು, ನಿಯಮಿಸಬಹುದಾದ ಅಂಥ ಅವಧಿಯೊಳಗೆ ಬಾಧಿತ ನಾಗರಿಕರಿಗೆ ಕುಂದು ಕೊರತೆ ನಿವಾರಣಾ ಪ್ರಾಧಿಕಾರದ ನಿರ್ಧಾರವನ್ನು ತಿಳಿಸತಕ್ಕದ್ದು.

(6) ಕುಂದು ಕೊರತೆ ನಿವಾರಣಾ ಪ್ರಾಧಿಕಾರವು, ಕುಂದು ಕೊರತೆ ನಿವಾರಣಾ ಪ್ರಾಧಿಕಾರಿಯ ನಿರ್ಧಾರವನ್ನು ತಿಳಿಸುವುದಕ್ಕಾಗಿ ನಿಯಮಿಸಲಾದ ಅವಧಿಯ ಮುಕ್ತಾಯವಾದ ತರುವಾಯ ತಕ್ಷಣವೇ, ದೂರುದಾರರ ವಿವರಗಳು ದೂರಿನ ಸ್ವರೂಪ ಮತ್ತು ಪರಿಹಾರ ನೀಡದಿರುವುದಕ್ಕೆ ಕಾರಣಗಳೊಂದಿಗೆ ಪರಿಹಾರ ನೀಡದ ಪ್ರತಿಯೊಂದು ದೂರನ್ನು ಅವಶ್ಯಕ ಕ್ರಮಕ್ಕಾಗಿ ಮುಖ್ಯ ಆಯುಕ್ತರಿಗೆ ವರದಿ ಮಾಡತಕ್ಕದ್ದು.

(7) ಕುಂದು ಕೊರತೆ ನಿವಾರಣಾ ಪ್ರಾಧಿಕಾರವು, ಯಾವುದೇ ದೂರನ್ನು ನಿರ್ಧರಿಸುವ ಸಮಯದಲ್ಲಿ ಸಂಬಂಧಪಟ್ಟ ಅಧಿಕಾರಿ ಅಥವಾ ಅಧಿಕಾರಿಗಳ ಅಥವಾ ಯಾವುದೇ ಇತರ ವ್ಯಕ್ತಿಯು, ಯಾವುದೇ ಯುಕ್ತ ಕಾರಣವಿಲ್ಲದೆ, ಈ ಅಧಿನಿಯಮದ ಅಡಿಯಲ್ಲಿ ಆತನು ನಿರ್ವಹಿಸಬೇಕಾದ ಆತನ ಕರ್ತವ್ಯಗಳನ್ನು ಬೇಕಾಗಿಯೇ ಕಡೆಗಣಿಸಿರುವನು ಅಥವಾ ನಿರಾಕರಿಸಿರುವನೆಂದು ಅಥವಾ ವಿಫಲನಾಗಿರುವನು ಅಥವಾ ನಿಗದಿತ ಸಮಯದೊಳಗೆ ನೀಡಬೇಕಾದ ಸೇವೆಯನ್ನು ವಿಸ್ತರಿಸುವುದಕ್ಕೆ ದುರ್ಭಾವನೆಯಿಂದ ಅಲ್ಲಗಳೆದಿದ್ದಾನೆಂದು ಅಭಿಪ್ರಾಯಪಟ್ಟಲ್ಲಿ, ಅಂಥ ಅಧಿಕಾರಿಯನ್ನು ಅಥವಾ ವ್ಯಕ್ತಿಯನ್ನು ಕುಂದು ಕೊರತೆ ಪರಿಹಾರವಾಗುವವರೆಗೆ ಪ್ರತಿ ದಿನಕ್ಕೆ ಎರಡು ನೂರ ಐವತ್ತು ರೂಪಾಯಿಗಳ ದಂಡಕ್ಕೆ ಒಳಪಡಿಸತಕ್ಕದ್ದು. ಆದಾಗ್ಯೂ ಅಂಥ ದಂಡದ ಒಟ್ಟು ಮೊತ್ತವು ಇಪ್ಪತ್ತೈದು ಸಾವಿರ ರೂಪಾಯಿಗಳನ್ನು ಮೀರತಕ್ಕದ್ದಲ್ಲ. ಕುಂದುಕೊರತೆ ಪ್ರಾಧಿಕಾರವು ದಂಡದ ಸ್ಥಾನದಲ್ಲಿ ಸಂಬಂಧಪಟ್ಟ ಅಧಿಕಾರಿ ಅಥವಾ ವ್ಯಕ್ತಿಯ ವಿರುದ್ಧ ಸೇವಾ ನಿಯಮಗಳ ಅಥವಾ ಆತನಿಗೆ ಅನ್ವಯವಾಗುವ ಸಂಬಂಧಿಸಿದ ಕಾನೂನಿನ ಅಡಿಯಲ್ಲಿ ಶಿಸ್ತಿನ ಕ್ರಮವನ್ನು ತೆಗೆದುಕೊಳ್ಳುವಂತೆ ಶಿಫಾರಸು ಮಾಡಬಹುದು:

ಪರಂತು, ಸಂಬಂಧಪಟ್ಟ ಅಧಿಕಾರಿ ಅಥವಾ ವ್ಯಕ್ತಿಗೆ ಆತನ ಮೇಲೆ ಯಾವುದೇ ದಂಡವನ್ನು ವಿಧಿಸುವ ಪೂರ್ವದಲ್ಲಿ ತನ್ನ ಅಹವಾಲನ್ನು ಹೇಳಿಕೊಳ್ಳಲು ಯುಕ್ತ ಅವಕಾಶವನ್ನು ನೀಡತಕ್ಕದ್ದು:

ಮತ್ತೂ ಪರಂತು, ಆತನು ಯುಕ್ತವಾಗಿ ಮತ್ತು ಶ್ರದ್ಧಾಪೂರ್ವಕವಾಗಿ (diligently) ಹಾಗೇ ಮಾಡಿದ್ದಾನೆಂದು ರುಜುವಾತು ಪಡಿಸುವ ಹೊಣೆಯು ನೀಡಬೇಕಾದ ಸೇವೆಯನ್ನು ನೀಡಲು ನಿರಾಕರಣೆ ಮಾಡಿರುವ ಅಧಿಕಾರಿ ಅಥವಾ ವ್ಯಕ್ತಿಯದ್ದಾಗಿರತಕ್ಕದ್ದು.

ವಿವರಣೆ: ಈ ಪ್ರಕರಣದ ಉದ್ದೇಶಕ್ಕಾಗಿ:-

(ಎ) "ಬಾಧಿತ ವ್ಯಕ್ತಿ" ಎಂದರೆ ಈ ಅಧಿನಿಯಮದ ಅಥವಾ ಯಾವುದೇ ಇತರ ಕಾನೂನಿನ ಅಡಿಯಲ್ಲಿ ಆತನು ಅನುಭವಿಸಬೇಕಾದ ಸೇವೆಯನ್ನು ನೀಡುವಲ್ಲಿ ಪಾಲಿಕೆಯು ಯಾವುದನ್ನಾದರೂ ಮಾಡಬೇಕಾದ್ದರಿಂದ ಅಥವಾ ಬಿಟ್ಟು ಬಿಡುವುದರಿಂದ ಬಾಧಿತನಾದ ಒಬ್ಬ ನಾಗರಿಕ ಮತ್ತು ಪಾಲಿಕೆಯ ಮೂಲಕ ಸರ್ಕಾರವು ನೀಡುವ ಯಾವುದೇ ಸ್ಕೀಮಿನ ಪ್ರಯೋಜನವನ್ನು ಕೋರುವ ವ್ಯಕ್ತಿಯನ್ನು ಒಳಗೊಳ್ಳುತ್ತದೆ ;

(ಬಿ) "ಕುಂದು ಕೊರತೆ" ಎಂದರೆ :-

(i) ಆರೋಗ್ಯ ನಿರ್ವಹಣೆ ;

(ii) ರಸ್ತೆ ನಿರ್ವಹಣೆ ;

(iii) ಬೀದಿ ದೀಪಗಳ ನಿರ್ವಹಣೆ ;

(iv) ಯಾವುದೇ ಸ್ಕೀಮ್ ಅಥವಾ ಯೋಜನೆಯ ಫಲಾನುಭವಿಗಳನ್ನು ಗುರುತಿಸುವುದು;

(v) ಯಾವುದೇ ಸ್ಕೀಮಿನ ಅಥವಾ ಯೋಜನೆಯ ಪ್ರಯೋಜನದ ಹಂಚಿಕೆ;

(vi) ನೈರ್ಮಲೀಕರಣ ನಿರ್ವಹಣೆ ;

(vii) ಯಾವುದೇ ದಸ್ತಾವೇಜುಗಳು ಅಥವಾ ಪ್ರಮಾಣಪತ್ರವನ್ನು ಮಂಜೂರು ಮಾಡುವುದು ಅಥವಾ ಹೊರಡಿಸುವುದು

(viii) ನಿಯಮಿಸಬಹುದಾದ ಯಾವುದೇ ಇತರ ವಿಷಯ,

- ಇವುಗಳ ಸಂಬಂಧದಲ್ಲಿ ಪಾಲಿಕೆಯು ತೆಗೆದುಕೊಳ್ಳುವ ಕ್ರಮವನ್ನು ಮಾಡುವುದರಿಂದ ಅಥವಾ ಬಿಟ್ಟುಬಿಡುವುದರ ಕುರಿತು ಬಾಧಿತ ನಾಗರಿಕನು ನೀಡುವ ಯಾವುದೇ ದೂರನ್ನು ಇದು ಒಳಗೊಳ್ಳುತ್ತದೆ.

369. ಕುಂದು ಕೊರತೆ ನಿವಾರಣಾ ಪ್ರಾಧಿಕಾರದ ಅಧಿಕಾರಗಳು ಮತ್ತು ಪ್ರಕಾರ್ಯಗಳು.- (1) ಕುಂದು ಕೊರತೆ ನಿವಾರಣಾ ಪ್ರಾಧಿಕಾರವು ;-

(ಎ) ಬಾಧಿತ ವ್ಯಕ್ತಿಯ ಕುಂದು ಕೊರತೆಯನ್ನು ಪರಿಹರಿಸುವುದಕ್ಕೆ ಆತನು ಅವಶ್ಯವೆಂದು ಭಾವಿಸುವ ಯಾವುದೇ ದಸ್ತಾವೇಜನ್ನು ಕೇಳಬಹುದು ಮತ್ತು ಪರಿಶೀಲಿಸಬಹುದು.

(ಬಿ) ಕುಂದು ಕೊರತೆ ನಿವಾರಣಾ ಪ್ರಾಧಿಕಾರವು, ಈ ಅಧಿನಿಯಮದ ಅಡಿಯಲ್ಲಿ ಪ್ರಕಾರ್ಯಗಳನ್ನು ನಿರ್ವಹಿಸುವ ಉದ್ದೇಶಗಳಾಗಿ, ಈ ಮುಂದಿನ ವಿಷಯಗಳ ಸಂಬಂಧದಲ್ಲಿ ಸಿವಿಲ್ ಪ್ರಕ್ರಿಯಾ ಸಂಹಿತೆ 1908ರ, ಅಡಿಯಲ್ಲಿ ಸಿವಿಲ್ ನ್ಯಾಯಾಲಯದಲ್ಲಿ ನಿಹಿತವಾದಂಥದೇ ಅಧಿಕಾರಗಳನ್ನು ಹೊಂದಿರತಕ್ಕದ್ದು, ಎಂದರೆ:-

(i) ಯಾವುದೇ ವ್ಯಕ್ತಿಯ ಹಾಜರಾತಿಯನ್ನು ಸಮನು ಮಾಡುವುದು ಮತ್ತು ಒತ್ತಾಯಪಡಿಸುವುದು ಹಾಗೂ ಪ್ರಮಾಣದ ಮೇಲೆ ಆತನನ್ನು ಪರೀಕ್ಷಿಸುವುದು;

(ii) ಸಾಕ್ಷ್ಯವಾಗಿ ನೀಡುವ ಯಾವುದೇ ದಸ್ತಾವೇಜು ಅಥವಾ ಇತರ ಭೌತಿಕ ವಸ್ತುವನ್ನು ಹುಡುಕುವುದು ಮತ್ತು ಒದಗಿಸುವುದು;

(iii) ಅಫಿಡವಿಟ್ಟುಗಳ ಮೇಲೆ ಸಾಕ್ಷ್ಯವನ್ನು ಸ್ವೀಕರಿಸುವುದು;

(iv) ಯಾವುದೇ ಸಾರ್ವಜನಿಕ ದಾಖಲೆಗಳನ್ನು ಅಗತ್ಯಪಡಿಸುವುದು;

(v) ಸಾಕ್ಷಿಗಳ ಪರೀಕ್ಷೆಗಾಗಿ ಕಮೀಷನ್ ಗಳನ್ನು ಹೊರಡಿಸುವುದು;

(vi) ತನ್ನ ನಿರ್ಧಾರಗಳು, ನಿರ್ದೇಶನಗಳು ಮತ್ತು ಆದೇಶಗಳನ್ನು ಪುನರಾವಲೋಕಿಸುವುದು;

(vii) ನಿಯಮಿಸಬಹುದಾದ ಅಂಥ ಇತರ ವಿಷಯ.

(2) ಕುಂದು ಕೊರತೆ ನಿವಾರಣಾ ಪ್ರಾಧಿಕಾರವು ಅರೆ ನ್ಯಾಯಿಕ ಪ್ರಾಧಿಕಾರವಾಗಿದ್ದು ತನ್ನ ಮುಂದಿರುವ ವಿಷಯಗಳನ್ನು ಕ್ಷಿಪ್ರವಾಗಿ ವಿಲೇ ಮಾಡತಕ್ಕದ್ದು.

(3) ಒಂದು ಕಛೇರಿ ಅಥವಾ ಅಧಿಕಾರಿ ಅಥವಾ ಸಿಬಂಬ್ಬದಿಯ ನ್ಯೂನತೆ ನಿರ್ಲಕ್ಷ್ಯ ಅಥವಾ ದುಷ್ಕೃತ್ಯದ ಪರಿಣಾಮವಾಗಿ ಆಗಿರುವ ಕುಂದು ಕೊರತೆಯನ್ನು ಅಥವಾ ನಿರ್ದಿಷ್ಟ ಆಕ್ರಮಗಳು ಅಥವಾ ಫಲಾನುಭವಕ್ಕೆ ಪರಿಣಾಮ ಉಂಟು ಮಾಡುವ ಭೌತಿಕ ಪ್ರಯೋಜನ ಅಥವಾ ಬೇಧ-ಭಾವವನ್ನು ಸೂಚಿಸುವ ನಿರ್ದಿಷ್ಟ ಪ್ರಕರಣವನ್ನು ಹೊರತುಪಡಿಸಿ ಬಾಧಿತ ನಾಗರಿಕನ ಯಾವುದೇ ದೂರನ್ನು ಕುಂದು ಕೊರತೆ ನಿವಾರಣಾ ಪ್ರಾಧಿಕಾರವು ಪುರಸ್ಕರಿಸತಕ್ಕದ್ದಲ್ಲ

(4) ಕುಂದು ಕೊರತೆ ನಿವಾರಣಾ ಪ್ರಾಧಿಕಾರವು ಈ ಮುಂದಿನದನ್ನು ಖಚಿತಪಡಿಸಿಕೊಳ್ಳತಕ್ಕದ್ದು, ಎಂದರೆ:-

(ಎ) ದೂರನ್ನು ಸ್ವೀಕರಿಸಿದ ದಿನಾಂಕದಿಂದ ತೊಂಬತ್ತು ದಿನಗಳು ಮೀರದ ಸಮಯದ ಚೌಕಟ್ಟಿನಲ್ಲಿ ತೊಂದರೆಯನ್ನು ಪರಿಹರಿಸಲಾಗಿದೆ; ಅಥವಾ

(ಬಿ) ತೊಂದರೆಯು ಆಗಿರುವ ಕಾರಣವನ್ನು ಗುರುತಿಸುವುದು ಮತ್ತು ತಪ್ಪಿತಸ್ಥ ಅಧಿಕಾರಿ ಅಥವಾ ವ್ಯಕ್ತಿಗಳಿಗೆ ಜವಾಬ್ದಾರಿಯನ್ನು ಹೊರಿಸುವುದು ಮತ್ತು (ಎ) ಖಂಡದಲ್ಲಿ ನಿರ್ದಿಷ್ಟಪಡಿಸಿದ ಅವಧಿಯ ತರುವಾಯ ಒಂದು ತಿಂಗಳೊಳಗೆ ಕುಂದುಕೊರತೆಯನ್ನು ಸಮಾಧಾನಕರವಾಗಿ ಪರಿಹರಿಸಲಾಗಿದೆ; ಅಥವಾ

(ಸಿ) ಅಧಿಕಾರಿ ಅಥವಾ ವ್ಯಕ್ತಿಯ ಅಸಮರ್ಥತೆ, ನಿರ್ಲಕ್ಷ್ಯ ಅಥವಾ ದುಷ್ಕೃತ್ಯದ ಪರಿಣಾಮವಾಗಿ ತೊಂದರೆಯಾಗಿದ್ದಲ್ಲಿ ಕ್ರಮವನ್ನು ನಡತೆ ನಿಯಮಗಳು ಮತ್ತು ಇಲಾಖಾ ಪ್ರಕ್ರಿಯೆಗಳ ಅನುಸಾರವಾಗಿ ನಡೆಸಲಾಗಿದೆ; ಅಥವಾ

(ಡಿ) ಸರಕುಗಳ ಮತ್ತು ಸೇವೆಗಳನ್ನು ನೀಡಲು ಜವಾಬ್ದಾರನಾದ ವ್ಯಕ್ತಿಯು ಬೇಕಾಗಿಯೇ ಸರಕು ಅಥವಾ ಸೇವೆಯನ್ನು ಒದಗಿಸಲು ಉದ್ದೇಶಪೂರ್ವಕವಾಗಿ ನಿರ್ಲಕ್ಷಿಸಿರುವ ಅಥವಾ ಭ್ರಷ್ಟಾಚಾರ ಪ್ರತಿಬಂಧಕ ಅಧಿನಿಯಮ, 1988 ರ ಅಡಿಯಲ್ಲಿ ಪ್ರಕರಣದ ಮೇಲ್ನೋಟದಲ್ಲೇ ಆಧಾರಗಳು ಇದ್ದಾಗ ಆ ಮಟ್ಟಿಗೆ ವಿಧಿಸಬೇಕಾದ ದಂಡದ ಶಿಫಾರಸ್ಸಿನೊಂದಿಗೆ,

(i) ಸಮೂಹ 'ಬಿ' ಅಧಿಕಾರಿವರೆಗೆ ಮುಖ್ಯ ಆಯುಕ್ತರಿಗೆ;

(ii) ಸಮೂಹ 'ಎ' ಮತ್ತು ಮೇಲ್ಪಟ್ಟ ಅಧಿಕಾರಿಗೆ ಸಂಬಂಧಿಸಿದಂತೆ ಸರ್ಕಾರದ ಪ್ರಧಾನ ಕಾರ್ಯದರ್ಶಿ ಅಥವಾ ಸಂದರ್ಭಾನುಸಾರವಾಗಿ ಸರ್ಕಾರದ ಕಾರ್ಯದರ್ಶಿಗೆ -ಆತನು ಅವಲೋಕನೆಯನ್ನು ಮಾಡುವುದು.

(5) ಕುಂದು ಕೊರತೆ ನಿವಾರಣಾ ಪ್ರಾಧಿಕಾರವು ತನ್ನ ಕರ್ತವ್ಯಗಳ ಕ್ರಮಬದ್ಧ ನಿರ್ವಹಣೆಗಾಗಿ ಅಗತ್ಯವಾದ ಯಾವುದೇ ಇತರ ಅಧಿಕಾರಿಯ ನೆರವನ್ನು ಕೋರಬಹುದು ಅಥವಾ ಬಾಧಿತ ನಾಗರಿಕನು ಮಾಡಿದ ದೂರಿನ ಪರಿಹಾರಕ್ಕೆ ಕ್ರಮ ಕೈಗೊಳ್ಳುವಂತೆ ಯಾವುದೇ ಇತರ ಅಧಿಕಾರಿಗೆ ನಿರ್ದೇಶಿಸಬಹುದು.

(6) (5)ನೇ ಉಪಪ್ರಕರಣದ ಅಡಿಯಲ್ಲಿ ನೆರವನ್ನು ಕೋರಲಾದ ಯಾವೊಬ್ಬ ಅಧಿಕಾರಿಯು ಕುಂದುಕೊರತೆ ನಿವಾರಣಾ ಪ್ರಾಧಿಕಾರಕ್ಕೆ ಎಲ್ಲಾ ನೆರವನ್ನು ನೀಡತಕದ್ದು.

370. ಅಪೀಲು.- (1) ಕುಂದು ಕೊರತೆ ನಿವಾರಣಾ ಪ್ರಾಧಿಕಾರದ ನಿರ್ಧಾರದಿಂದ ಬಾಧಿತನಾದ ಅಥವಾ ಆತನು ದಾಖಲ್ಮಾಡಿದ ದೂರಿನ ಸಂಬಂಧದಲ್ಲಿ ತೆಗೆದುಕೊಂಡ ಕ್ರಮದ ವರದಿಯನ್ನು ಸ್ವೀಕರಿಸಿದ ಯಾವೊಬ್ಬ ವ್ಯಕ್ತಿಯು, ಅಂಥ ತೀರ್ಮಾನದ ಸ್ವೀಕೃತಿಯ ಮುಕ್ತಾಯದಿಂದ ಮೂವತ್ತು ದಿನಗಳ ಒಳಗಾಗಿ ಕರ್ನಾಟಕ ಅಪೀಲು ನ್ಯಾಯಮಂಡಳಿಗೆ ಅಪೀಲನ್ನು ಸಲ್ಲಿಸಬಹುದು ಮತ್ತು ಅಂಥ ಅಪೀಲು ಪ್ರಾಧಿಕಾರದ ತೀರ್ಮಾನವು ಅಂತಿಮವಾಗಿರತಕ್ಕದ್ದು,

ಪರಂತು ಅಪೀಲು ಪ್ರಾಧಿಕಾರವು, ಒಂದು ವೇಳೆ ದೂರುದಾರನು ಸಮಯದೊಳಗೆ ಅಪೀಲನ್ನು ದಾಖಲು ಮಾಡದೇ ಇರಲು ಸಾಕಷ್ಟು ಕಾರಣಗಳು ದೂರುದಾರರನ್ನು ನಿರ್ಬಂಧಿಸಿದೆ ಎಂದು ಮನಗಂಡರೆ, ಮೂವತ್ತು ದಿನಗಳ ತರುವಾಯವೂ ಅಪೀಲನ್ನು ಸ್ವೀಕರಿಸಬಹುದು

(2) ಪ್ರತಿಯೊಂದು ಅಪೀಲನ್ನು ಅಂಥ ಅಪೀಲನ್ನು ಸ್ವೀಕರಿಸಿದ ದಿನಾಂಕದಿಂದ ತೊಂಬತ್ತು ದಿನಗಳೊಳಗೆ ವಿಲೆ ಮಾಡತಕ್ಕದ್ದು.

(3) ಅಪೀಲು ಪ್ರಾಧಿಕಾರವು, ತಾನು ತೆಗೆದುಕೊಂಡ ತೀರ್ಮಾನಗಳ ದಿನಾಂಕದಿಂದ ಹದಿನೈದು ಕೆಲಸದ ದಿನಗಳ ಅವಧಿಯೊಳಗೆ ಸಂಬಂಧಪಟ್ಟ ಪಕ್ಷಕಾರರಿಗೆ ತೀರ್ಮಾನಗಳ ಪ್ರತಿಯನ್ನು ತಲುಪಿಸುವ ವ್ಯವಸ್ಥೆ ಮಾಡತಕ್ಕದ್ದು.

371. ಕುಂದು ಕೊರತೆ ನಿವಾರಣಾ ಪ್ರಾಧಿಕಾರಿಯ ಪದಾವಧಿ.- ಕುಂದು ಕೊರತೆ ನಿವಾರಣಾಪ್ರಾಧಿಕಾರಿಯು ಆತನು ಪದವನ್ನು ವಹಿಸಿಕೊಂಡ ದಿನಾಂಕದಿಂದ ಐದು ವರ್ಷಗಳ ಅವಧಿಗಾಗಿ ಅಥವಾ ಆತನಿಗೆ ಅರವತ್ತೈದು ವರ್ಷಗಳಾಗುವವರೆಗೂ ಇದರಲ್ಲಿ ಯಾವುದು ಮೊದಲೊ ಅಲ್ಲಿಯವರೆಗೆ ಪದವನ್ನು ಹೊಂದತಕ್ಕದ್ದು ಮತ್ತು ಮರು ನೇಮಕಕ್ಕಾಗಿ ಅರ್ಹನಾಗತಕ್ಕದ್ದಲ್ಲ

372. ರಾಜೀನಾಮೆ ಮತ್ತು ತೆಗೆದುಹಾಕುವುದು.- (1) ಕುಂದು ಕೊರತೆ ನಿವಾರಣಾ ಪ್ರಾಧಿಕಾರಿಯು ರಾಜ್ಯ ಸರ್ಕಾರಕ್ಕೆ ಸ್ವಹಸ್ತದಿಂದ ಲಿಖಿತದಲ್ಲಿನ ನೋಟೀಸನ್ನು ಸಲ್ಲಿಸುವ ಮೂಲಕ ತನ್ನ ಪದಕ್ಕೆ ರಾಜೀನಾಮೆ ನೀಡಬಹುದು.

(2) (1)ನೇ ಉಪ ಪ್ರಕರಣದಲ್ಲಿ ಏನೇ ಇದ್ದರೂ, ಸರ್ಕಾರವು ಆದೇಶದ ಮೂಲಕ, ಕುಂದು ಕೊರತೆ ನಿವಾರಣಾ ಪ್ರಾಧಿಕಾರಿಯನ್ನು –

(ಎ) ಆತನು ಅವಿಮುಕ್ತ ದಿವಾಳಿಯಾಗಿದ್ದಲ್ಲಿ,; ಅಥವಾ

(ಬಿ) ನೈತಿಕ ಅಧಃಪತನವನ್ನು ಒಳಗೊಂಡಿದೆ ಎಂದು ಸರ್ಕಾರವು ಅಭಿಪ್ರಾಯಪಡುವ ಅಪರಾಧದಲ್ಲಿ ಅಪರಾಧ ನಿರ್ಣೀತನಾಗಿದ್ದಲ್ಲಿ,; ಅಥವಾ

(ಸಿ) ಆತನು ತನ್ನ ಪದಾವಧಿಯಲ್ಲಿ ಆತನ ಪದದ ಕರ್ತವ್ಯಗಳ ಹೊರತಾಗಿ ಯಾವುದೇ ಸಂಬಳ ಪಡೆಯುವ ಉದ್ಯೋಗದಲ್ಲಿ ತೊಡಗಿರುವನೆಂದು; ಅಥವಾ

(ಡಿ) ಮಾನಸಿಕ ಅಥವಾ ದೈಹಿಕ ಅಸಮರ್ಥತೆಯ ಕಾರಣವಾಗಿ ಪದದಲ್ಲಿ ಮುಂದುವರೆಯಲು ಅರ್ಹನಲ್ಲವೆಂದು ಸರ್ಕಾರವು ಅಭಿಪ್ರಾಯಪಟ್ಟಲ್ಲಿ,; ಅಥವಾ

(ಇ) ಕುಂದು ಕೊರತೆ ನಿವಾರಣಾ ಪ್ರಾಧಿಕಾರಿಯಾಗಿ ಆತನ ಪ್ರಕಾರ್ಯಗಳಿಗೆ ಪೂರ್ವಾಗ್ರಹವಾಗಿ ಪರಿಣಾಮವುಂಟು ಮಾಡುವ ಅಂಥ ಹಣಕಾಸು ಅಥವಾ ಇತರೆ ಹಿತಾಸಕ್ತಿಯನ್ನು ಹೊಂದಿದ್ದಲ್ಲಿ,

- ಆತನನ್ನು ತೆಗೆದು ಹಾಕಬಹುದು.

373. ಕುಂದು ಕೊರತೆ ನಿವಾರಣಾ ಪ್ರಾಧಿಕಾರದ ಪ್ರಕ್ರಿಯೆಗಳು:- (1) ದೂರನ್ನು ದಾಖಲ್ಮಾಡುವ ಪ್ರಕ್ರಿಯೆ ಮತ್ತು ವಿಧಾನವು ಮತ್ತು ಅಂಥ ದೂರಿನ ಜೊತೆ ಇರಬೇಕಾದ ಫೀಜುಗಳು ನಿಯಮಿಸಬಹುದಾದಂತೆ ಇರತಕ್ಕದ್ದು.

(2) ಕುಂದು ಕೊರತೆ ನಿವಾರಣಾ ಪ್ರಾಧಿಕಾರದ ಮುಂದೆ ವ್ಯವಹರಣೆಗಳನ್ನು ನಡೆಸುವ ವಿಧಾನ ಮತ್ತು ಪ್ರಕ್ರಿಯೆಯು ನಿಯಮಿಸಬಹುದಾದಂತೆ ಇರತಕ್ಕದ್ದು.

374. ತನಿಖೆಗೆ ಒಳಪಡದ ವಿಷಯಗಳು.- ಕುಂದುಕೊರತೆ ನಿವಾರಣಾಪ್ರಾಧಿಕಾರವು,-

(i) ಕರ್ನಾಟಕ ಲೋಕಾಯುಕ್ತ ಅಧಿನಿಯಮ, 1984ರ (1985ರ ಕರ್ನಾಟಕ ಅಧಿನಿಯಮ 4) ಉಪಬಂಧಗಳ ಅಡಿಯಲ್ಲಿ ಲೋಕಾಯುಕ್ತ ಅಥವಾ ಉಪ ಲೋಕಾಯುಕ್ತರು ತನಿಖೆ ನಡೆಸುತ್ತಿರುವ; ಅಥವಾ

(ii) ಕೇಂದ್ರ ಅಧಿನಿಯಮ ಅಥವಾ ರಾಜ್ಯ ಅಧಿನಿಯಮಗಳ ಯಾವುದೇ ಉಪಬಂಧಗಳ ಅಡಿಯಲ್ಲಿ ಸಕ್ಷಮ ಪ್ರಾಧಿಕಾರವು ತನಿಖೆ ನಡೆಸುತ್ತಿರುವ,-ವಿಷಯಗಳಲ್ಲಿ ತನಿಖೆ ನಡೆಸತಕ್ಕದ್ದಲ್ಲ.

375. ತಾತ್ಕಾಲಿಕ ಉಪಬಂಧಗಳು.- (1) ಕರ್ನಾಟಕ ನಗರ ಪಾಲಿಕೆಗಳ ಅಧಿನಿಯಮ, 1976ರ (1977ರ ಕರ್ನಾಟಕ ಅಧಿನಿಯಮ 14) ಮತ್ತು ಅದರ ಅಡಿಯಲ್ಲಿ ರಚಿಸಿದ ನಿಯಮಗಳ ಅಡಿಯಲ್ಲಿ ಮಾಡಿದ ಅಥವಾ ಹೊರಡಿಸಿದ ಯಾವುದೇ ನಿಯಮ, ಅಧಿಸೂಚನೆ, ಆದೇಶ ಅಥವಾ ನೇಮಕಾತಿ ಅಥವಾ ಈ ಅಧಿನಿಯಮವನ್ನು ಅಧಿನಿಯಮಿಸುವುದಕ್ಕೆ ಸಂಬಂಧಿಸಿದ ಯಾವುದೇ ವಿಷಯಗಳನ್ನು ಉಪಬಂಧಿಸಿದ ಅಥವಾ ಸಂಬಂಧಿಸಿದ ವಿಷಯಗಳು ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗದಿರುವಷ್ಟರಮಟ್ಟಿಗೆ, ಈ ಅಧಿನಿಯಮದ ಅಡಿಯಲ್ಲಿ ಮಾಡಿದ ನಿಯಮಗಳು ಅಧಿಸೂಚನೆ, ಆದೇಶ ಅಥವಾ ನೇಮಕಾತಿಯ ಅಡಿಯಲ್ಲಿ ಮಾಡಿದ ಯಾವುದೇ ಕಾರ್ಯ ಅಥವಾ ತೆಗೆದುಕೊಂಡ ಯಾವುದೇ ಕ್ರಮದ ಮೂಲಕ ರದ್ದುಪಡಿಸಿದ ಹೊರತು ಅಥವಾ ರದ್ದುಪಡಿಸುವವರೆಗೆ ಜಾರಿಯಲ್ಲಿ ಮುಂದುವರೆಯತಕ್ಕದ್ದು ಹಾಗೂ ಈ ಅಧಿನಿಯಮದ ಸಂವಾದಿ ಉಪಬಂಧಗಳ ಮೇರೆಗೆ ಅವುಗಳನ್ನು ಮಾಡಿದ್ದರೆ ಅಥವಾ ಹೊರಡಿಸಿದ್ದರೆ ಅಥವಾ ನೇಮಕ ಮಾಡಿದ್ದರೆ ಹೇಗೋ ಹಾಗೆ ಪರಿಣಾಮಕಾರಿ ಆಗಿರತಕ್ಕದ್ದು.

(2) ಕರ್ನಾಟಕ ನಗರ ಪಾಲಿಕೆಗಳ ಅಧಿನಿಯಮ, 1976 (1977ರ ಕರ್ನಾಟಕ ಅಧಿನಿಯಮ 14)ರ ಉಪಬಂಧಗಳ ಅಡಿಯಲ್ಲಿ ಆಡಳಿತಾಧಿಕಾರಿಯನ್ನಾಗಲಿ ಅಥವಾ ಒಬ್ಬ ವ್ಯಕ್ತಿಯನ್ನಾಗಲಿ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಲು ಮತ್ತು ಕರ್ತವ್ಯಗಳನ್ನು ನಿರ್ವಹಿಸಲು ನೇಮಕ ಮಾಡಿದ್ದಲ್ಲಿ, ಆಗ ಅಂತ ಆಡಳಿತಾಧಿಕಾರಿ ಅಥವಾ ವ್ಯಕ್ತಿಯನ್ನು ಒಂದು ವರ್ಷಗಳಿಗಿಂತ ಹೆಚ್ಚಿನ ಅವಧಿಗೆ ಮೀರದಂತೆ 127ನೇ ಪ್ರಕರಣದ ಅಡಿಯಲ್ಲಿ ನೇಮಕ ಮಾಡಿದ ಆಡಳಿತಾಧಿಕಾರಿಯೆಂದು ಭಾವಿಸತಕ್ಕದ್ದು.

(3) ಈ ಅಧಿನಿಯಮದ ಪ್ರಾರಂಭಕ್ಕೆ ಮೊದಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಉದ್ಯೋಗದಲ್ಲಿರುವ ಎಲ್ಲ ಅಧಿಕಾರಿಗಳು ಮತ್ತು ನೌಕರರು, ಈ ಅಧಿನಿಯಮದ ಅಡಿಯಲ್ಲಿ ಪಾಲಿಕೆಯ ಅಧಿಕಾರಿಗಳು ಮತ್ತು ನೌಕರರಾಗಿರತಕ್ಕದ್ದು. ಮತ್ತು ಈ ಅಧಿನಿಯಮದ ಉಪಬಂಧಗಳಿಗನುಸಾರವಾಗಿ ಇತರ ಉಪಬಂಧವನ್ನು ಮಾಡುವವರೆಗೆ, ಅಂಥ ದಿನಾಂಕಕ್ಕೆ ಮೊದಲು ತಕ್ಷಣ ಅವರು ಹಕ್ಕನ್ನು ಹೊಂದಿರುವ ಸಂಬಳಗಳು ಮತ್ತು ವೇತನಗಳನ್ನು ಸ್ವೀಕರಿಸತಕ್ಕದ್ದು ಹಾಗೂ ಸೇವಾ ಷರತ್ತುಗಳಿಗೆ ಒಳಪಡತಕ್ಕದ್ದು;

ಪರಂತು, ಸರ್ಕಾರದ ಪೂರ್ವ ಮಂಜೂರಾತಿಗೆ ಒಳಪಟ್ಟು ಪಾಲಿಕೆಯು ತನ್ನ ಅಭಿಪ್ರಾಯದಲ್ಲಿ ಅದರ ಅಡಿಯಲ್ಲಿ ಸೇವೆಯ ಅಗತ್ಯತೆಗಳಿಗಾಗಿ ಯಾವುದೇ ಅಧಿಕಾರಿಯ ಅಥವಾ ನೌಕರರ ಸೇವೆಯು ಅವಶ್ಯಕ ಹಾಗೂ ಸೂಕ್ತವಲ್ಲವೆಂದು ಕಂಡುಬಂದರೆ, ಅಂಥ ಅಧಿಕಾರಿ ಅಥವಾ ನೌಕರನನ್ನು ಆತನ ಉದ್ಯೋಗದ ನಿಬಂಧನೆಗಳ ಮೂಲಕ ನೀಡಬೇಕೆಂದು ಅಗತ್ಯಪಡಿಸುವ ಅಂಥ ನೋಟಿಸನ್ನು ನೀಡಿ ಆತನ ಸೇವೆಯನ್ನು ಮುಂದುವರೆಸತಕ್ಕದ್ದಲ್ಲ ಹಾಗೂ ಸೇವೆಯಿಂದ ಹಾಗೆ ಬಿಡುಗಡೆಗೊಂಡ ಪ್ರತಿಯೊಬ್ಬ ಅಧಿಕಾರಿ ಅಥವಾ ನೌಕರನು, ಯಾವ ಪಾಲಿಕೆಯಲ್ಲಿ ಆತನು ಉದ್ಯೋಗದಲ್ಲಿದ್ದನೋ ಅದು ಅಸ್ತಿತ್ವದಲ್ಲಿ ನಿಂತುಹೋಗಿರುವ ಹಾಗೆ, ಸೇವೆಯಲ್ಲಿ ಅಸಿಂಧುವಾಗಿ ತೆಗೆದುಕೊಳ್ಳುವ ಅಂಥ ರಜೆ, ಪಿಂಚಣಿ, ಭವಿಷ್ಯನಿಧಿ ಮತ್ತು ಉಪದಾನವನ್ನು ತೆಗೆದುಕೊಳ್ಳಲು ಅಥವಾ ಸ್ವೀಕರಿಸಲು ಹಕ್ಕುಳ್ಳವನಾಗಿದ್ದನೋ ಹಾಗೆಯೇ ಅದನ್ನು ಪಡೆಯಲು ಹಕ್ಕುಳ್ಳವನಾಗಿರತಕ್ಕದ್ದು.

(4) ಕರ್ನಾಟಕ ನಗರ ಪಾಲಿಕೆಗಳ ಅಧಿನಿಯಮ, 1976 (1977ರ ಕರ್ನಾಟಕ ಅಧಿನಿಯಮ 14)ರ ಅಡಿಯಲ್ಲಿ ರಚನೆಯಾದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಎಲ್ಲಾ ಆಸ್ತಿಗಳು ಮತ್ತು ಹೊಣೆಗಾರಿಕೆಗಳು ಈ ಅಧಿನಿಯಮದ ಅಡಿಯಲ್ಲಿ ರಚನೆಯಾದ ಪಾಲಿಕೆಗೆ ವರ್ಗಾವಣೆಗೊಳ್ಳತಕ್ಕದ್ದು.

376. ನಿರಸನ ಮತ್ತು ಉಳಿಸುವಿಕೆಗಳು.- ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಸಂಬಂಧಿಸಿದಂತೆ ಕರ್ನಾಟಕ ನಗರಪಾಲಿಕೆಗಳ ಅಧಿನಿಯಮ, 1976 ರ (1977ರ ಕರ್ನಾಟಕ ಅಧಿನಿಯಮ 14) ಉಪಬಂಧಗಳನ್ನು ಈ ಮೂಲಕ ನಿರಸನಗೊಳಿಸಲಾಗಿದೆ:

ಪರಂತು, ಅಂಥ ನಿರಸನವು,-

(ಎ) ಸದರಿ ಅಧಿನಿಯಮದ ಅಡಿಯಲ್ಲಿ ಮಾಡಿದ ಅಥವಾ ಕೈಗೊಂಡ ಯಾವುದೇ ಕಾರ್ಯಕ್ಕೆ; ಅಥವಾ

(ಬಿ) ಸದರಿ ಅಧಿನಿಯಮದ ಪೂರ್ವ ಕಾರ್ಯಾಚರಣೆ ಅಥವಾ ಅದರಡಿಯಲ್ಲಿ ಯುಕ್ತವಾಗಿ ಮಾಡಿದ ಅಥವಾ ಬಾಧಿತವಾದ ಯಾವುದೂ; ಅಥವಾ

(ಸಿ) ಸದರಿ ಅಧಿನಿಯಮದ ಮೇರೆಗೆ ಆರ್ಜಿಸಿದ, ಪ್ರಾಪ್ತವಾದ ಅಥವಾ ವಹಿಸಿದ ಯಾವುದೇ ಹಕ್ಕಿಗೆ, ವಿಶೇಷಾಧಿಕಾರಕ್ಕೆ, ಬಾಧ್ಯತೆಗೆ ಅಥವಾ ಹೊಣೆಗಾರಿಕೆಗೆ; ಅಥವಾ

(ಡಿ) ಸದರಿ ಅಧಿನಿಯಮದ ಅಡಿಯಲ್ಲಿ ಮಾಡಿದ ಯಾವುದೇ ಅಪರಾಧಕ್ಕೆ ಸಂಬಂಧಿಸಿದಂತೆ ಯಾವುದೇ ದಂಡ ಅಥವಾ ದಂಡನೆಗೆ,

- ಬಾಧಕವನ್ನು ಉಂಟುಮಾಡತಕ್ಕದಲ್ಲ

ಮತ್ತೂ ಪರಂತು, ಕರ್ನಾಟಕ ಸಾಮಾನ್ಯ ಖಂಡಗಳ ಅಧಿನಿಯಮ 1899ರ (1899ರ ಕರ್ನಾಟಕ ಅಧಿನಿಯಮ III) 6ನೇ ಪ್ರಕರಣದ ಉಪಬಂಧಗಳು ಸದರಿ ಅಧಿನಿಯಮದ ನಿರಸನದ ಸಂಬಂಧದಲ್ಲಿ ಅನ್ವಯವಾಗತಕ್ಕದ್ದು.

ಅದೂ ಅಲ್ಲದೆ, ಸದರಿ ಅಧಿನಿಯಮಿತ ಅಡಿಯಲ್ಲಿ (ಮಾಡಿದ ಯಾವುದೇ ನೇಮಕಾತಿ ಅಥವಾ ಪ್ರತಿನಿಯೋಜನೆ ವಿಧಿಸಿದ ತೆರಿಗೆ, ಸುಂಕ, ಶುಲ್ಕ ಅಥವಾ ಉಪಕರ ಅಥವಾ ಹೊರಡಿಸಿದ ಅಧಿಸೂಚನೆ, ಆದೇಶ, ಲಿಖಿತ ಪತ್ರ ಅಥವಾ ನಿರ್ದೇಶನ ಅಥವಾ ರಚಿಸಿದ ನಿಯಮ, ವಿನಿಯಮ, ನಮೂನೆ, ಉಪವಿಧಿ, ಅಥವಾ ಸ್ಕೀಮ್

ಅಥವಾ ಪಡೆದುಕೊಂಡ ಪ್ರಮಾಣ ಪತ್ರ ಅಥವಾ ಮಂಜೂರು ಮಾಡಿದ ಅನುಮತಿ ಅಥವಾ ಪರವಾನಗಿ ಅಥವಾ ಜಾರಿಗೊಳಿಸಿದ ನೋಂದಣಿಯೂ ಸೇರಿದಂತೆ) ಮಾಡಿದ ಯಾವುದೇ ಕಾರ್ಯ ಅಥವಾ ತೆಗೆದುಕೊಂಡ ಯಾವುದೇ ಕ್ರಮವು ಹಿಂದಿನ ಉಪಬಂಧಗಳಿಗೆ ಒಳಪಟ್ಟು, ಈ ಅಧಿನಿಯಮದ ಸಂವಾದಿ ಉಪಬಂಧಗಳ ಅಡಿಯಲ್ಲಿ ಮಾಡಿದ್ದೆಂದು ಅಥವಾ ತೆಗೆದುಕೊಂಡಿದ್ದೆಂದು ಭಾವಿಸತಕ್ಕದ್ದು ಮತ್ತು ಈ ಅಧಿನಿಯಮದ ಅಡಿಯಲ್ಲಿ ಮಾಡಿದ ಯಾವುದೇ ಕಾರ್ಯವು ಅಥವಾ ತೆಗೆದುಕೊಂಡ ಯಾವುದೇ ಕ್ರಮವು ರದ್ದಾದ ಹೊರತು ಮತ್ತು ರದ್ದಾಗುವವರೆಗೆ ತದನುಸಾರವಾಗಿ ಜಾರಿಯಲ್ಲಿ ಮುಂದುವರೆಯತಕ್ಕದ್ದು :

ಅದೂ ಅಲ್ಲದೆ, ಹಿಂದಿನ ಪರಂತುಕಗಳಲ್ಲಿ ಏನೇ ಒಳಗೊಂಡಿದ್ದರೂ ಈ ಅಧಿನಿಯಮದ ಅಡಿಯಲ್ಲಿ ಅನುಮತಿಸಲಾದ ಗರಿಷ್ಠ ದರಕ್ಕಿಂತ ಹೆಚ್ಚಿನ ದರದಲ್ಲಿ ಸದರಿ ಅಧಿನಿಯಮಗಳ ಅಡಿಯಲ್ಲಿ ಸ್ಥಿರ ಸ್ವತ್ತುಗಳ ವರ್ಗಾವಣೆಗಳ ಮೇಲೆ ಸುಂಕವನ್ನು ಹೊರತುಪಡಿಸಿ ಯಾವುದೇ ತೆರಿಗೆ, ಸುಂಕ, ಶುಲ್ಕ ಅಥವಾ ಉಪಕರವನ್ನು ವಿಧಿಸಲಾಗಿದ್ದಲ್ಲಿ, ಅಂಥ ತೆರಿಗೆ, ಸುಂಕ, ಶುಲ್ಕ, ಅಥವಾ ಉಪಕರವನ್ನು ಈ ಅಧಿನಿಯಮದ ಅಡಿಯಲ್ಲಿ ಏನೇ ಮಾಡಿದ್ದರೂ ಅಥವಾ ಯಾವುದೇ ಕ್ರಮವನ್ನು ಕೈಗೊಂಡಿದ್ದರೂ ಆ ಮೂಲಕ ರದ್ದಾಗುವವರೆಗೆ ಅಥವಾ ರದ್ದಾಗುವ ಹೊರತು ಅಂಥ ಹೆಚ್ಚಿನ ದರದಲ್ಲಿ ವಿಧಿಸುವುದು ಮತ್ತು ಸಂಗ್ರಹಿಸುವುದು ಮುಂದುವರೆಯಬಹುದು.

(2) ಉಪ-ಪ್ರಕರಣ (1)ರಲ್ಲಿ ಏನೇ ಒಳಗೊಂಡಿದ್ದರೂ ಸದರಿ ಅಧಿನಿಯಮದ ಅಡಿಯಲ್ಲಿ ವಿಧಿಸಲಾದ ಯಾವುದೇ ತೆರಿಗೆ, ಸುಂಕ, ಶುಲ್ಕ ಅಥವಾ ಉಪಕರವು ಏನೇ ಒಳಗೊಂಡಿದ್ದರೂ ಅಂಥ ವಿಧಿಸುವಿಕೆ ಮತ್ತು ವಸೂಲಿಯೂ ನಿರಸಗೊಳ್ಳುವುದಕ್ಕೆ ಸಂಬಂಧಿಸಿದಂತೆ ಅಂಥ ಅಧಿನಿಯಮಿತಿಗಳು, ನಿಯಮಗಳು, ಉಪವಿಧಿಗಳು, ಆದೇಶಗಳು ಮತ್ತು ಅದರ ಅಡಿಯಲ್ಲಿ ಮಾಡಲಾದ ಅಥವಾ ಹೊರಡಿಸಲಾದ ಅಧಿಸೂಚನೆಗಳ ಉಪಬಂಧಗಳಲ್ಲಿ ಹೇಗೋ ಹಾಗೆ ವಿಧಿಸುವುದು ಮತ್ತು ವಸೂಲು ಮಾಡುವುದು ಮುಂದುವರೆಯತಕ್ಕದ್ದು.

ಮೊದಲನೇ ಅನುಸೂಚಿ

(107ನೇ ಪ್ರಕರಣವನ್ನು ನೋಡಿ)

(ಎ) ಪ್ರಮುಖ ಕರ್ತವ್ಯಗಳು:

(i) ಪಟ್ಟಣ ಯೋಜನೆ ಸಿದ್ಧಪಡಿಸುವುದೂ ಸೇರಿದಂತೆ ನಗರ ಯೋಜನೆ ಸಿದ್ಧಪಡಿಸುವುದು;

(ii) ಒತ್ತುವರಿ ಮತ್ತು ಭೂಮಿ ನಿರ್ಮಾಣ ಮಾಡುವುದರಿಂದ ಸಾರ್ವಜನಿಕ ಭೂಮಿಯ ಸಂರಕ್ಷಣೆಯೂ ಸೇರಿದಂತೆ ಭೂ-ಬಳಕೆಯ ನಿಯಂತ್ರಣಗೊಳಿಸುವುದು;

(iii) ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಗಾಗಿ ಯೋಜನೆ ಸಿದ್ಧಪಡಿಸುವುದು;

(iv) ಪಾದಚಾರಿಗಳಿಗಾಗಿ, ಪಾದಚಾರಿ ಮಾರ್ಗ ಮತ್ತು ರಸ್ತೆದಾಟುವಿಕೆ ಸೌಲಭ್ಯಗಳೂ ಸೇರಿದಂತೆ ರಸ್ತೆಗಳ ಸೇತುವೆಗಳನ್ನು ನಿರ್ಮಿಸುವುದು;

(v) ಗೃಹಬಳಕೆಗೆ, ಕೈಗಾರಿಕೆಗೆ ಮತ್ತು ವಾಣಿಜ್ಯೋದ್ಯಮ ಉದ್ದೇಶಗಳಿಗಾಗಿ ನೀರು ಸರಬರಾಜು ಮಾಡುವುದು;

(vi) ಮಳೆ ನೀರಿನ ಚರಂಡಿಗಳು, ಒಳಚರಂಡಿ ನೀರು ಹರಿಯುವ ಗಲ್ಲಿಗಳ ನಿರ್ಮಾಣ ಮಾಡುವುದು ಮತ್ತು ಘನ ಹಾಗೂ ದ್ರವತ್ಯಾಜ್ಯ ನಿರ್ವಹಣೆಯೂ ಸೇರಿದಂತೆ, ಸಾರ್ವಜನಿಕ ಆರೋಗ್ಯ, ನೈರ್ಮಲ್ಯವನ್ನುಕಾಪಾಡುವುದು;

(vii) ಅಗ್ನಿಶಾಮಕ ಸೇವೆಗಳನ್ನು ಒದಗಿಸುವುದು;

(viii) ನಗರ ಅರಣ್ಯ ಬೆಳೆಸುವಿಕೆ, ಪರಿಸರ ಸಂರಕ್ಷಣೆ ಮಾಡುವುದು, ಜೀವಿ ಪರಿಸರ ಅಂಶಗಳನ್ನು ಉತ್ತೇಜಿಸುವುದು ಮತ್ತು ಪರಿಸರಾತ್ಮಕ ಆರೋಗ್ಯದ ಶುಚಿತ್ವ ನಿರ್ವಹಣೆ ಮಾಡುವುದು;

(ix) ದೈಹಿಕ ಮತ್ತು ಮಾನಸಿಕ ಅಂಗವಿಕಲತೆಯುಳ್ಳ ವ್ಯಕ್ತಿಗಳ ಹಿತಾಸಕ್ತಿಗಳನ್ನು ಕಾಪಾಡುವುದು;

(x) ಮೂಲಭೂತ ಸೌಲಭ್ಯಗಳನ್ನು ಒದಗಿಸುವುದೂ ಸೇರಿದಂತೆ ಕೊಳಚೆ ಪ್ರದೇಶದ ಸುಧಾರಣೆ ಮಾಡುವುದು ಮತ್ತು ಅದನ್ನು ಮೇಲ್ದರ್ಜೆಗೇರಿಸುವುದು;

(xi) ನಗರ ಬಡತನ ಕಡಿಮೆ ಮಾಡುವುದು;

(xii) ಉದ್ಯಾನವನಗಳು, ತೋಟಗಳು, ಆಟದ ಮೈದಾನಗಳು, ಸಾರ್ವಜನಿಕ ಮಾರುಕಟ್ಟೆಗಳು, ಪ್ರಯಾಣಿಕರುಗಳಿಗಾಗಿ ಸ್ನಾನದ ಮತ್ತು ಬಟ್ಟೆ ತೊಳೆಯುವ ಘಟ್ಟಗಳು, ಕಾಯುವ ಶೆಡ್‌ಗಳಂಥ ನಗರ ಮೂಲಭೂತ ಸೌಲಭ್ಯಗಳು ಮತ್ತು ಸೌಕರ್ಯಗಳ ನಿರ್ಮಾಣಕ್ಕೆ ಅವಕಾಶ ಕಲ್ಪಿಸುವುದು ಮತ್ತು ನಿರ್ವಹಣೆ ಮಾಡುವುದು;

(xiii) ಸಾಂಸ್ಕೃತಿಕ, ಶೈಕ್ಷಣಿಕ ಮತ್ತು ಕಲಾತ್ಮಕ ಶೈಲಿ ಅಂಶಗಳನ್ನು ಉತ್ತೇಜಿಸುವುದು;

(xiv) ಸ್ಮಶಾನ ಮತ್ತು ಸುಡುವ ಭೂಮಿಗಳು, ಚಿತಾಗಾರಗಳು, ಚಿತಾಗಾರ ಭೂಮಿಗಳು ಮತ್ತು ವಿದ್ಯುತ್ ಚಿತಾಗಾರಗಳನ್ನು ಸ್ಥಾಪಿಸುವುದು ಮತ್ತು ನಿರ್ವಹಿಸುವುದು;

(xv) ಜಾನುವಾರು ದೊಡ್ಡಿಗಳ ನಿರ್ಮಾಣ ಮಾಡುವುದು, ಪ್ರಾಣಿಗಳ ಹಿಂಸೆಯ ನಿಯಂತ್ರಣ ಮಾಡುವುದು;

(xvi) ಜನನಗಳು, ಮರಣಗಳು ಮತ್ತು ವಿವಾಹಗಳ ನೋಂದಣಿಯೂ ಒಳಗೊಂಡಂತೆ ಅವುಗಳ ಮುಖ್ಯವಾದ ಅಂಕಿ ಅಂಶಗಳನ್ನು ಸಂಗ್ರಹಿಸುವುದು ಮತ್ತು ಇಂದೀಕರಿಸುವುದು;

(xvii) ಬೀದಿ ದೀಪ, ವಾಹನ ನಿಲುಗಡೆಯ ಸ್ಥಳಗಳು, ಬಸ್ ನಿಲ್ದಾಣಗಳು ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಶೌಚಾಲಯ ಸೌಲಭ್ಯಗಳಂತಹ ಸಾರ್ವಜನಿಕ ಅನುಕೂಲತೆಗಳೂ ಸೇರಿದಂತೆ ಸಾರ್ವಜನಿಕ ಸೌಕರ್ಯಗಳನ್ನು ಕಲ್ಪಿಸುವುದು ಮತ್ತು ನಿರ್ವಹಿಸುವುದು;

(xviii) ಕಸಾಯಿ ಖಾನೆಗಳನ್ನು ಮತ್ತು ಚರ್ಮ ಹದಾಗಾರಗಳನ್ನು ಮತ್ತು ಮಾಂಸ, ಮೀನು ಹಾಗೂ ಇತರೆಯವುಗಳೊಂದಿಗೆ ಇತರೆ ಹಾಳಾಗಬಹುದಾದ ಆಹಾರ ಪದಾರ್ಥಗಳ ಮಾರಾಟವನ್ನು ನಿಯಂತ್ರಿಸುವುದು.

(ಬಿ) ಸಾಮಾನ್ಯಕರ್ತವ್ಯಗಳು.-

(i) ಎಲ್ಲ ಅಭಿವೃದ್ಧಿ ಚಟುವಟಿಕೆಗಳಲ್ಲಿ ಸ್ವಯಂಸೇವಕ ಕಾರ್ಯಕರ್ತರನ್ನು ಸಂಘಟಿಸುವುದು ಮತ್ತು ಅವರುಗಳ ಸಾಮುದಾಯಿಕ ಪಾಲ್ಗೊಳ್ಳುವಿಕೆಯನ್ನು ಉತ್ತೇಜಿಸುವುದು;

(ii) ಮಿತವ್ಯಯಕ್ಕಾಗಿ ಅಭಿಯಾನವನ್ನು ನಡೆಸುವುದು;

(iii) ವರದಕ್ಷಿಣೆ, ಕೌಟುಂಬಿಕ ಹಿಂಸೆ, ಮಕ್ಕಳ ದುರುಪಯೋಗ, ಜಾತೀವಾದ, ಹಾಮೋಫೋಬಿಯಾ ಮತ್ತು ಅನ್ಯದ್ವೇಷಪೂರ್ಣ ಭೀತಿಯಂತಹ ಸಾಮಾಜಿಕ ಕೆಟ್ಟ ಪದ್ಧತಿಗಳ ವಿರುದ್ಧ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವುದು;

(iv) ದುರ್ಬಲ ವರ್ಗಗಳ ಜನರ ನಡುವೆ ಕಾನೂನು ಅರಿವಿನ ಅಭಿಯಾನಗಳನ್ನು ನಡೆಸುವುದು, ಆರ್ಥಿಕ ಅಪರಾಧಗಳ ವಿರುದ್ಧ, ಪೌರ ಕರ್ತವ್ಯಗಳನ್ನು ಪಾಲಿಸುವುದಕ್ಕೆ ಅಭಿಯಾನ ನಡೆಸುವುದು ಮತ್ತು ಕೋಮುಸೌಹಾರ್ದವನ್ನು ಉತ್ತೇಜಿಸುವುದು;

(v) ನೈಸರ್ಗಿಕ ವಿಪತ್ತುಗಳ ಸಂದರ್ಭದಲ್ಲಿ ಪರಿಹಾರ ಕಾರ್ಯಗಳನ್ನು ಕೈಗೊಳ್ಳುವುದು ಮತ್ತು ಆಸ್ಪತ್ರೆಗಳು, ಔಷಧಾಲಯಗಳು, ಅನಾಥಾಲಯಗಳು, ರಕ್ಷಣಾ ಗೃಹಗಳು, ಪ್ರಸೂತಿ ಗೃಹಗಳು ಮತ್ತು ಶಿಶು ಕಲ್ಯಾಣ ಕೇಂದ್ರಗಳು ಮುಂತಾದಂಥ ಪರಿಹಾರ ಕೇಂದ್ರಗಳ ನಿರ್ವಹಣೆ ಮಾಡುವುದು;

(vi) ನಗದು ಅಥವಾ ವಸ್ತುವಿನ ರೂಪದಲ್ಲಿ ಸ್ಥಳೀಯ ಸಂಪನ್ಮೂಲಗಳನ್ನು ಸಂಗ್ರಹಣೆ ಮಾಡುವುದು;

(vii) ಬಡವರನ್ನು ಪ್ರಮುಖವಾಗಿಟ್ಟುಕೊಂಡು ನಿವಾಸಿ ಕ್ಷೇಮಾಭಿವೃದ್ಧಿ ಸಂಘಗಳನ್ನು, ನೆರೆಹೊರೆಯ ಗುಂಪುಗಳು ಮತ್ತು ಸಮುದಾಯಗಳನ್ನು ಮತ್ತು ಸ್ವ-ಸಹಾಯ ಗುಂಪುಗಳನ್ನು ಸಂಘಟಿಸುವುದು ಮತ್ತು ಅವುಗಳನ್ನು ಉತ್ತೇಜಿಸುವುದು;

(viii) ಸಾರ್ವಜನಿಕ ಹಿತಾಸಕ್ತಿಯುಳ್ಳ ಮಾಹಿತಿಯನ್ನು ಪ್ರಕಟಗೊಳಿಸುವುದು ಮತ್ತು ಪ್ರಸಾರ ಮಾಡುವುದು;

(ix) ಸಾರ್ವಜನಿಕ ಸ್ವತ್ತುಗಳ ನಿರ್ವಹಣೆ ಮಾಡುವುದು;

(x) ಅಪಾಯಕಾರಿಯಾದ ಮತ್ತು ದುರ್ವಾಸನೆ ಬೀರುವ ಅಸಹ್ಯ ಕೈಗಾರಿಕೆಗಳಿಗೆ ಲೈಸನ್ಸು ನೀಡುವುದು;

(xi) ಸಾಕು ಪ್ರಾಣಿಗಳನ್ನು ಸಾಕುವುದಕ್ಕೆ ಲೈಸನ್ಸನ್ನು ನೀಡುವುದು;

(xii) ಜಲಮೂಲಗಳ ಸಂರಕ್ಷಣೆ ಮತ್ತು ಪರಿರಕ್ಷಣೆ ಮಾಡುವುದು;

(xiii) ಐತಿಹಾಸಿಕ ಮತ್ತು ಸಾಂಸ್ಕೃತಿಕ ಮಹತ್ವವುಳ್ಳ ಸ್ಥಳಗಳ ಮತ್ತು ಕಟ್ಟಡಗಳ ಸಂರಕ್ಷಣೆ ಮತ್ತು ಪರಿರಕ್ಷಣೆ ಮಾಡುವುದು;

(xiv) ಇಂಧನ ಸಾಮರ್ಥ್ಯವನ್ನು ಉತ್ತೇಜಿಸುವುದು ಮತ್ತು ಹವಾಮಾನ ಬದಲಾವಣೆಯ ಬಗ್ಗೆ ಜಾಗೃತಿ ಮೂಡಿಸುವುದು;

(xv) ಪಾಲಿಕೆಯ ಕೆಲಸದಲ್ಲಿ ಮಾಹಿತಿ ತಂತ್ರಜ್ಞಾನ ಪರಿಚಯ ಮತ್ತು ಇ-ಆಡಳಿತವನ್ನು ಉತ್ತೇಜಿಸುವುದು;

ಸಿ. ವಲಯವಾರು ಕರ್ತವ್ಯಗಳು.-

(i) ಪಟ್ಟಣಯೋಜನೆ ಸಿದ್ಧಪಡಿಸುವುದೂ ಸೇರಿದಂತೆ ನಗರಯೋಜನೆ ಸಿದ್ಧಪಡಿಸುವುದು:

(ಎ) ಮಾನವ ವಾಸಸ್ಥಾನಕ್ಕಾಗಿ ಹೊಸ ಪ್ರದೇಶಗಳ ಯೋಜಿತ ಅಭಿವೃದ್ಧಿ, ನಿರ್ಧರಿಸಿರುವ ಮಿತಿಗಳಲ್ಲಿ ಗಡಿಗುರುತುಗಳನ್ನು ನಿರ್ಮಿಸುವುದು ಅಥವಾ ಅಂಥ ಮಿತಿಗಳಲ್ಲಿ ಯಾವುದೇ ಮಾರ್ಪಾಟು ಮಾಡುವುದು;

(ಬಿ) ನೀರಿನ ಬಣ್ಣದ ಕಾರಂಜಿಗಳನ್ನು ಸ್ಥಾಪಿಸುವ, ಮನರಂಜನಾ ಪ್ರದೇಶಗಳಿಗೆ ಅವಕಾಶ ಕಲ್ಪಿಸುವ, ನದಿ ದಂಡೆಗಳನ್ನು ಅಭಿವೃದ್ಧಿಪಡಿಸುವ ಮತ್ತು ಭೂಭಾಗವನ್ನು ಅಂದಚೆಂದಗೊಳಿಸುವ ಮೂಲಕ ಪಾಲಿಕೆ ಪ್ರದೇಶವನ್ನು ಸೌಂದರ್ಯೀಕರಣಗೊಳಿಸುವುದಕ್ಕೆ ಕ್ರಮಗಳನ್ನು ಕೈಗೊಳ್ಳುವುದು;

(ಸಿ) ಜಿಲ್ಲೆ ಅಥವಾ ವಲಯ ಅಭಿವೃದ್ಧಿ ನಕ್ಷೆಯೊಂದಿಗೆ ಪಾಲಿಕೆ ಪ್ರದೇಶದ ಅಭಿವೃದ್ಧಿ ನಕ್ಷೆಗಳು ಮತ್ತು ಯೋಜನೆಗಳನ್ನು ಸಂಯೋಜನೆಗೊಳಿಸುವುದು;

(ಡಿ) ಪಾಲಿಕೆ ವ್ಯಾಪ್ತಿಯಲ್ಲಿನ ಯುಕ್ತ ನಕ್ಷೆಗಳನ್ನು, ಭೂಮಿಗಳ ದತ್ತಾಂಶವನ್ನು ಮತ್ತು ದಾಖಲೆಗಳನ್ನು ಮತ್ತು ಕಾಲಕಾಲಕ್ಕೆ ಅಂಥ ಜಮೀನುಗಳ ಉಪಯುಕ್ತತೆಯನ್ನು ಸಿದ್ಧಪಡಿಸುವುದು ಮತ್ತು ಅದನ್ನು ರಕ್ಷಿಸಿ ಇಟ್ಟುಕೊಳ್ಳುವುದು;

(ii) ಪರಿಸರ ಮತ್ತು ಸಾಮಾಜಿಕ ಅರಣ್ಯ:

(ಎ) ಪರಿಸರ ಜಾಗೃತಿಗಾಗಿ ಆಭಿಯಾನಗಳನ್ನು ನಡೆಸುವುದು;

(ಬಿ) ಪರಿಸರ ಜಾಗೃತಿಯನ್ನು ಹೆಚ್ಚಿಸುವುದು, ಸಸಿಗಳನ್ನು ನೆಟ್ಟು ಮರಗಳನ್ನು ಬೆಳೆಸುವುದು ಮುಂತಾದ ಸ್ಥಳೀಯ ಪರಿಸರಾತ್ಮಕ ಕ್ರಮವನ್ನುಉತ್ತೇಜಿಸುವುದು;

(ಸಿ) ಬಂಜರು ಭೂಮಿಗಳನ್ನು ಪುನರ್ ಲಾಭ ಯೋಗ್ಯಗೊಳಿಸುವುದು, ಸಾಮಾಜಿಕ ಅರಣ್ಯವನ್ನು ಅಭಿವೃದ್ಧಿಗೊಳಿಸುವುದು ಮತ್ತು ತೆರೆದ ಸ್ಥಳಗಳನ್ನು ನಿರ್ವಹಣೆ ಮಾಡುವುದು;

(ಡಿ) ಸಸ್ಯತೋಟಗಳ ಸ್ಥಾಪನೆ ಮತ್ತು ಅವುಗಳ ನಿರ್ವಹಣೆ ಮಾಡುವುದು, ಹಸಿರು ಗಿಡಮರಗಳನ್ನು ಬೆಳೆಸುವುದನ್ನು ಉತ್ತೇಜಿಸುವುದು;

(iii) ಸಣ್ಣಪ್ರಮಾಣದ ಕೈಗಾರಿಕೆಗಳು:

(ಎ) ಕರಕುಶಲ ವಸ್ತುಗಳ ಪ್ರಚಾರ ಮಾಡುವುದು

(ಬಿ) ಕೈಗಾರಿಕಾ ವಲಯದಲ್ಲಿ ಸ್ವಯಂಉದ್ಯೋಗ ಯೋಜನೆಗಳನ್ನು ರೂಪಿಸುವುದು ಮತ್ತು ಕಾರ್ಯಗತಗೊಳಿಸುವುದು;

(ಸಿ) ವಾಣಿಜ್ಯೋದ್ಯಮಗಳ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದು.

(iv) ವಸತಿ:

(ಎ) ವಸತಿ ರಹಿತರನ್ನು ಗುರುತಿಸುವುದು, ವಸತಿ ನಿವೇಶನಗಳು ಮತ್ತು ವಸತಿಗಳನ್ನು ಒದಗಿಸುವುದು, ಆಶ್ರಯ, ಪುನರುಜ್ಜೀವನ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವಂತೆ ಮಾಡುವುದು

(ಬಿ) ವಸತಿಗಾಗಿಅಗತ್ಯವಾದ ನಿಧಿಯನ್ನು ಸಜ್ಜುಗೊಳಿಸಿ ಚಲಾವಣೆಗೆತರುವುದು;

(v) ಶಿಕ್ಷಣ ಮತ್ತು ಸಂಸ್ಕೃತಿ:

(ಎ) ಪೂರ್ವ-ಪ್ರಾಥಮಿಕ, ಪ್ರಾಥಮಿಕ, ಪ್ರೌಢ ಶಿಕ್ಷಣ ಮತ್ತು ತಾಂತ್ರಿಕ ಶಾಲೆಗಳು, ವೃತ್ತಿಪರ ತರಬೇತಿ ಕೇಂದ್ರಗಳನ್ನು ನಡೆಸುವುದು ಮತ್ತು ಸಾಕ್ಷರತಾ ಕಾರ್ಯಕ್ರಮಗಳನ್ನು ಕಾರ್ಯಗತಗೊಳಿಸುವುದು;

(ಬಿ) ಪೌರ ಶಿಕ್ಷಣ, ವಯಸ್ಕರ ಶಿಕ್ಷಣ, ಸಾಮಾಜಿಕ ಶಿಕ್ಷಣ ಮತ್ತುಅನೌಪಚಾರಿಕ ಶಿಕ್ಷಣವನ್ನು ಉತ್ತೇಜಿಸುವುದು;

(ಸಿ) ಸಂಗೀತ, ದೈಹಿಕ ಶಿಕ್ಷಣ, ಕ್ರೀಡೆಗಳು ಮತ್ತು ರಂಗಮಂದಿರಗಳು ಮತ್ತು ಅವುಗಳ ಮೂಲಸೌಕರ್ಯ ಸೇರಿದಂತೆ ಸಾಂಸ್ಕೃತಿಕ ಕಾರ್ಯಚಟುವಟಿಕೆಗಳನ್ನು ಪ್ರಚಾರ ಮಾಡುವುದು;

(ಡಿ) ನಗರಜೀವನದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನಗಳನ್ನು ಅಭಿವೃದ್ಧಿಪಡಿಸುವುದು;

